ಕರ್ನಾಟಕ ಸರ್ಕಾರ

ಭಾರತದ ಇತಿಹಾಸ

(ಕರ್ನಾಟಕದ ವಿಶೇಷ ಉಲ್ಲೇಖದೊಂದಿಗೆ)

ದ್ವಿತೀಯ ಪಿ.ಯು.ಸಿ.
ಪಠ್ಯಪುಸ್ತಕ

ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, ಬೆಂಗಳೂರು – 560 012
www.pue.kar.nic.in

ಮುನ್ನುಡಿ

ಪದವಿ ಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಇವರು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗಾಗಿ ಪಠ್ಯ ಪುಸ್ತಕವನ್ನು ರಚಿಸುವ ಕಾರ್ಯವನ್ನು ಇತಿಹಾಸ ಪಠ್ಯಪುಸ್ತಕ ಸಮಿತಿಗೆ ವಹಿಸಿತು. ಪಠ್ಯ ಪುಸ್ತಕವನ್ನು ರಚಿಸುವಾಗ ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರಗಳನ್ನು ಇಲಾಖೆ ನೀಡಿತ್ತು. ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಪರಿಶೀಲನಾ ಸಮಿತಿ ಯಥೋಚಿತ ಸೇರ್ಪಡೆ, ತೆಗೆದುಹಾಕಬೇಕಾದ ಅಂಶಗಳು ಮತ್ತು ತಿದ್ದುಪಡಿಗಳನ್ನು ತಿಳಿಸುವುದರ ಮೂಲಕ ನೆರವಾಗಿದೆ. ಇಲಾಖೆಯ ಆದೇಶದ ಮೇರೆಗೆ ಎನ್.ಸಿ.ಇ.ಆರ್.ಟಿ. ಹಾಗೂ ನೆರೆರಾಜ್ಯಗಳ ಪಠ್ಯಕ್ರಮಗಳನ್ನು ಪರಿಗಣಿಸಿ, ಸಮಿತಿಯು ಪಠ್ಯಕ್ರಮವನ್ನು ತಯಾರಿಸಿದೆ. ವಿದ್ಯಾರ್ಥಿಯ ಹಿಂದಿನ ಜ್ಞಾನವನ್ನೂ ಗಣನೆಗೆ ತೆಗೆದುಕೊಳ್ಳಲಾಗಿದೆ.

ಹಿಂದಿನ ವರ್ಷದಂತೆಯೇ ಈ ವರ್ಷವೂ ಸಾಕಷ್ಟು ಪರ್ಯಾಲೋಚನೆಗಳು ಹಾಗೂ ಚರ್ಚೆಗಳ ನಂತರ ಸಮಿತಿಯು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಕರ್ನಾಟಕ ಇತಿಹಾಸದ ವಿಶೇಷ ಉಲ್ಲೇಖದೊಂದಿಗೆ ಭಾರತದ ಇತಿಹಾಸವನ್ನು ಪಠ್ಯ ವಿಷಯವನ್ನಾಗಿಡಲು ನಿರ್ಧರಿಸಿತು. ಪಠ್ಯಕ್ರಮವು ಶಿಲಾಯುಗದಿಂದ ಆರಂಭವಾಗಿ ಭಾರತದ ಸ್ವಾತಂತ್ರ್ಯ ಹಾಗೂ ವಿಭಜನೆಯವರೆಗೆ ಹಾಗೂ ಕರ್ನಾಟಕದ ಏಕೀಕರಣದವರೆಗೆ ವಿಸ್ತರಿಸಿದೆ.

ಹಿಂದಿನ ವರ್ಷಗಳಲ್ಲಿ ಭಾರತದ ಇತಿಹಾಸ ಹಾಗೂ ಕರ್ನಾಟಕದ ಇತಿಹಾಸವನ್ನು ಬೇರೆಬೇರೆಯಾಗಿ 180 ಘಂಟೆಗಳ ಅವಧಿಯಲ್ಲಿ ಅಭ್ಯಸಿಸಲಾಗುತ್ತಿತ್ತು ಆದರೆ ಇವೆರಡನ್ನೂ ಒಗ್ಗೂಡಿಸಿ 120 ಘಂಟೆಗಳ ಪರಿಮಿತಿಯೊಳಗೆ ತರುವ ಮಹತ್ತರ ಜವಾಬ್ದಾರಿ ಸಮಿತಿಗಿತ್ತು. ಹಾಗಾಗಿ ಕೆಲವು ಅಧ್ಯಾಯಗಳು ಈಗ ಕೆಲವು ಪ್ರಮುಖ ಅಧ್ಯಾಯಗಳ ಭಾಗಗಳಾಗಿವೆ.

ಪ್ರಥಮ ವರ್ಷದ ಪಠ್ಯಪುಸ್ತಕದಲ್ಲಿದ್ದಂತೆಯೇ ಬಾಕ್ಸ್ ಮಾಹಿತಿ, ಚಿತ್ರಗಳು, ಚಟುವಟಿಕೆಗಳನ್ನು ಈ ಪಠ್ಯಪುಸ್ತಕದಲ್ಲಿಯೂ ನೀಡಲಾಗಿದೆ. ವಿಷಯವಸ್ತು ಪರಿಚಿತವಿರುವುದರಿಂದ ಶಬ್ದಾರ್ಥಕೋಶವನ್ನು ನೀಡಿಲ್ಲ. ಸಾಶಪೂ ಮತ್ತು ಸಾಶದ ಬಳಕೆ ಮುಂದುವರೆದಿದೆ.

ಪಠ್ಯಪುಸ್ತಕದ ಕೊನೆಯಲ್ಲಿ ಮೂರು ನೀಲನಕ್ಷೆಗಳು ಹಾಗೂ ಮೂರು ಮಾದರಿ ಪ್ರಶ್ನೆಪತ್ರಿಕೆಗಳನ್ನು ಕೆಲವೊಂದು ಸೂಚನೆಗಳೊಂದಿಗೆ ನೀಡಲಾಗಿದೆ.

ಸಂಶಯಗಳಿದ್ದಲ್ಲಿ ಉಪನ್ಯಾಸಕರು, ಹಾಗೂ ವಿದ್ಯಾರ್ಥಿಗಳು ಇಂಗ್ಲೀಷ್ ಮತ್ತು ಕನ್ನಡ ಅವತರಿಣಿಕೆಗಳೆರಡನ್ನೂ ನೋಡಬೇಕೆಂದು ಸಮಿತಿ ಸಲಹೆ ನೀಡುತ್ತದೆ.

ಸಮಿತಿಯು ಅನೇಕ ಸಭೆಗಳನ್ನು ನಡೆಸಿ, ಅನೇಕ ವಿಷಯ ತಜ್ಞರನ್ನು ಭೇಟಿಯಾಗಿ, ಪುಸ್ತಕವನ್ನು ತಯಾರಿಸುವಲ್ಲಿ ಗರಿಷ್ಠ ಪ್ರಯತ್ನ ಮಾಡಿದೆ. ಪುಸ್ತಕವು, ಅದರ ಉದ್ದೇಶವನ್ನು ಈಡೇರಿಸುವುದೆಂದೂ ಓದುಗರೆಲ್ಲರಿಗೂ ಉಪಯುಕ್ತವಾಗುವುದೆಂದು ಭಾವಿಸುತ್ತೇನೆ.

ಡಾ॥ ಎ. ಹೆಚ್. ಗಾಯತ್ರಿದೇವಿ .....✍

ಅಧ್ಯಕ್ಷರು

ಕೃತಜ್ಞತೆಗಳು

ಪಠ್ಯಪುಸ್ತಕ ತಯಾರಿಕೆಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಾಯ ಮಾಡಿರುವ ಎಲ್ಲರಿಗೂ ಇತಿಹಾಸ ಪಠ್ಯರಚನಾ ಸಮಿತಿ ಅಭಾರಿಯಾಗಿದೆ. ಸಮಿತಿಯ ಸದಸ್ಯರು ಪಠ್ಯ ರಚನೆಯಲ್ಲಿ ವಿವಿಧ ಗ್ರಂಥಾಲಯಗಳಿಂದ ವಿವಿಧ ಭಾರತೀಯ ಹಾಗೂ ವಿದೇಶಿ ಬರಹಗಾರರ ಪುಸ್ತಕಗಳಿಂದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅಲ್ಲದೇ ಅಂತರ್ಜಾಲದ ವಿವಿಧ ವೆಬ್‌ಸೈಟ್‌ಗಳಿಂದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅನೇಕ ವಿಷಯ ತಜ್ಞರನ್ನು ಸಂಪರ್ಕಿಸಿ ಅವರ ಸೇವೆಯನ್ನು ಉಪಯೋಗಿಸಿಕೊಳ್ಳಲಾಯಿತು.

ಬೆಂಗಳೂರಿನ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, 13ನೇ ಅಡ್ಡರಸ್ತೆ, ಮಲ್ಲೇಶ್ವರಂ, ಹೊನ್ನಾಳಿಯ ಎ.ಪಿ. ಎಂ.ಸಿ. ಯಾರ್ಡ್, ಕವಿಶೈಲದ ತಾವಳ್ಳಿ, ಕೊಕ್ಕೋಡುವಿನ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಹಾಗೂ ಶಿವಮೊಗ್ಗಾಗಳಲ್ಲಿ ಸಮಿತಿಯ ಸಭೆಗಳನ್ನು ನಡೆಸಲು ಸ್ಥಳಾವಕಾಶ ಮಾಡಿಕೊಡಲಾಗಿತ್ತು. ಶ್ರೀಮತಿ ಎನ್. ಸಿ. ಶೋಭ, ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, 13ನೇ ಅಡ್ಡರಸ್ತೆ, ಮಲ್ಲೇಶ್ವರಂ ಇವರು ಸಭೆಗಳಿಗೆ ಸ್ಥಳಾವಕಾಶ ಮಾಡಿಕೊಟ್ಟಿದ್ದಲ್ಲದೇ ಸ್ವಯಂ ಪ್ರೇರಿತರಾಗಿ ತಿದ್ದುಪಡಿಗಳನ್ನು ಮಾಡಲು ಸಹಾಯ ಮಾಡಿರುತ್ತಾರೆ. ಮುಖಪುಟ ಮತ್ತು ಭೂಪಟಗಳನ್ನು ಶ್ರೀ ಎಸ್. ಸಂತೋಷ್ ಕುಮಾರ್ ರವರು ಅಂದವಾಗಿ ವಿನ್ಯಾಸಗೊಳಿಸಿದ್ದಾರೆ. ಶ್ರೀ. ನಾಗರಾಜ್ ಎನ್. ಮಾಲೀಕರು, ಮಲ್ಟಿ ಆಪ್ಶನ್ಸ್, 31, ಪೊಲೀಸ್ ಸ್ಟೇಷನ್ ರಸ್ತೆ, ಬಸವನಗುಡಿ, ಬೆಂಗಳೂರು –4 ರವರು ಒಳಪುಟಗಳ ವಿನ್ಯಾಸವನ್ನು ಮಾಡಿದ್ದಾರೆ. ಸಮಿತಿಯು ಈ ಎಲ್ಲರ ಸಹಾಯವನ್ನು ಸ್ಮರಿಸುತ್ತಾ ಹೃದಯಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ದ್ವಿತೀಯ ಪಿ.ಯು.ಸಿ. ಪಠ್ಯಪುಸ್ತಕವನ್ನು ಹೊರತರುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಪದವಿಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಸಮಿತಿಯು ಅಭಾರಿಯಾಗಿದೆ.

ದ್ವಿತೀಯ ಪಿ.ಯು.ಸಿ. ಇತಿಹಾಸ ಪಠ್ಯ ಪುಸ್ತಕ ಅಭಿವೃದ್ಧಿ ಸಮಿತಿ

ಕ್ರ.ಸಂ	ಹೆಸರು ಮತ್ತು ವಿಳಾಸ	ಹುದ್ದೆ
1.	**ಡಾ॥ ಗಾಯತ್ರಿ ದೇವಿ ಎ. ಎಚ್,** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, 13ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.	ಅಧ್ಯಕ್ಷರು
2.	**ಶ್ರೀ. ಹಾಲೇಶಪ್ಪ ಕೆ.ಜಿ.,** ಉಪನ್ಯಾಸಕರು, ಶ್ರೀ ಮುರಳಿ ಪದವಿ ಪೂರ್ವ ಕಾಲೇಜು, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ಸಂಚಾಲಕರು
3.	**ಶ್ರೀ. ಶ್ಯಾಮ ಪ್ರಸಾದ್ ಕೆ,** ಉಪನ್ಯಾಸಕರು, ಇಸ್ಲಾಮಿಯಾ ಸಂ.ಪ.ಪೂರ್ವ ಕಾಲೇಜು, ಬೆಳಗಾವಿ.	ಸದಸ್ಯರು
4.	**ಶ್ರೀ. ಶ್ರೀಕಾಂತ್ ವೈ ಶಾನವಾಡ,** ಉಪನ್ಯಾಸಕರು, ಬೆನನ್ ಸ್ಮಿಥ್ ಪದವಿ ಪೂರ್ವ ಕಾಲೇಜು, ಬೆಳಗಾವಿ	ಸದಸ್ಯರು
5.	**ಶ್ರೀ. ಶಿರಗಾಂವಕರ್ ಎನ್. ವಿ.** ಉಪನ್ಯಾಸಕರು, ಆರ್ ಡಿ ಸಂ.ಪ. ಪೂರ್ವ ಕಾಲೇಜು, ಚಿಕ್ಕೋಡಿ, ಬೆಳಗಾವಿ ಜಿಲ್ಲೆ.	ಸದಸ್ಯರು
6.	**ಶ್ರೀ. ಶುಭಕರ ಎಚ್ ವಿ,** ಉಪನ್ಯಾಸಕರು, ನ್ಯಾಷನಲ್ ಪ.ಪೂ.ಕಾಲೇಜು, ಬಿ. ಆರ್ ಪ್ರಾಜೆಕ್ಟ್, ಭದ್ರಾವತಿ(ತಾ) ಶಿವಮೊಗ್ಗ–ಜಿಲ್ಲೆ	ಸದಸ್ಯರು
7.	**ಶ್ರೀ. ದಯಾನಂದ ಜೆ ಎಸ್,** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಸವನಹಳ್ಳಿ, ಚಿಕ್ಕಮಗಳೂರು.	ಸದಸ್ಯರು
8.	**ಡಾ. ದುರುಗಪ್ಪ ಮಾಲಿ ಕನಕಪ್ಪನವರ್,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕನಕಗಿರಿ, ಗಂಗಾವತಿ ತಾ. ಕೊಪ್ಪಳ ಜಿಲ್ಲೆ.	ಸದಸ್ಯರು
9.	**ಡಾ॥ ರಮೇಶ್ ಸಿ. ಎಸ್,** ಉಪನ್ಯಾಸಕರು, ಇಂದಿರಾ ಪ ಪೂ ಕಾಲೇಜು, ಉಪ್ಪಾರಹಳ್ಳಿ, ತುಮಕೂರು.	ಸದಸ್ಯರು
10.	**ಶ್ರೀಮತಿ.ಎಸ್.ಹೆಚ್.ಪಾಟೀಲ,** ಉಪನ್ಯಾಸಕರು, ಬಸವೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು, ಬಾಗಲಕೋಟೆ	ಸದಸ್ಯರು
11.	**ಶ್ರೀ.ಹೆಚ್.ಎಸ್.ಬಿರಾದಾರ್,** ಪ್ರಾಂಶುಪಾಲರು, ಎಸ್.ಜಿ.ಎಂ..ಸಂಯುಕ್ತ ಪದವಿಪೂರ್ವ ಕಾಲೇಜು ಗರಗ, ಧಾರವಾಡ ಜಿಲ್ಲೆ	ಸದಸ್ಯರು
12.	**ಡಾ॥ ಡಿ.ಆರ್. ನಿಡೋಣಿ,** ಉಪನ್ಯಾಸಕರು, ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು, ಬಿಜಾಪುರ	ಸದಸ್ಯರು

ಪಠ್ಯಕ್ರಮ ಮತ್ತು ಪಠ್ಯ ಪುಸ್ತಕ ಪರಿಶೀಲನಾ ಸಮಿತಿ

ಕ್ರ.ಸಂ.	ಹೆಸರು ಮತ್ತು ವಿಳಾಸ	ಹುದ್ದೆ
1	**ಶ್ರೀ. ಎಸ್.ಜಿ. ಭಟ್,** ಪ್ರಾಂಶುಪಾಲರು, ಶ್ರೀ ಸುಬ್ರಹ್ಮಣ್ಯ ಸಂಯುಕ್ತ ಪ.ಪೂ. ಕಾಲೇಜು, ಕವಲಕ್ಕಿ, ಹೊನ್ನಾವರ ತಾ॥ ಉತ್ತರ ಕನ್ನಡ ಜಿಲ್ಲೆ.	ಸದಸ್ಯರು
2	**ಶ್ರೀ. ಆರ್.ಬಿ. ಸಂಭಾ,** ಪ್ರಾಂಶುಪಾಲರು, ಸರ್ಕಾರಿ ಸ್ವತಂತ್ರ ಪ.ಪೂ. ಕಾಲೇಜು, ಜಿಲಾನಾಬಾದ್, ಗುಲ್ಬರ್ಗ.	ಸದಸ್ಯರು
3	**ಶ್ರೀ. ಸಿ.ಜಿ. ಮಠಪತಿ,** ಉಪನ್ಯಾಸಕರು, ಸರ್ಕಾರಿ ಸರದಾರ್ಸ್ ಪ.ಪೂ. ಕಾಲೇಜು, ಬೆಳಗಾವಿ.	ಸದಸ್ಯರು

ಭಾರತದ ಇತಿಹಾಸ

ಒಟ್ಟು ಬೋಧನಾ ಅವಧಿಗಳು – 120 ಗಂಟೆಗಳು

ಅಧ್ಯಾಯಗಳು	ಪಠ್ಯ ಕ್ರಮ	ಬೋಧನಾ ಅವಧಿ	ಪುಟ ಸಂಖ್ಯೆ
1	**ಪೀಠಿಕೆ:** ಭಾರತದ ಇತಿಹಾಸದ ಮೇಲೆ ಭೂಗೋಳದ ಪ್ರಭಾವ– ಭಾರತದ ಇತಿಹಾಸದ ಮೂಲಾಧಾರಗಳು.	5	1-14
2	**ಶಿಲಾಯುಗ ಮತ್ತು ಲೋಹಗಳ ಯುಗ –** (ಇತಿಹಾಸ ಪೂರ್ವಕಾಲ)	2	15-18
3	**ಸಿಂಧೂ ನಾಗರಿಕತೆ,** ಉತ್ಖನನಗಳು– ಪ್ರಮುಖ ಲಕ್ಷಣಗಳು – ಸಿಂಧೂ ನಾಗರಿಕತೆಯ ಅಂತ್ಯ	4	19-26
4	**ಪ್ರಾಚೀನ ಯುಗ**	36	
	4.1 ವೈದಿಕ ಸಂಸ್ಕೃತಿ–ಮೂಲ– ಪ್ರಮುಖ ಲಕ್ಷಣಗಳು	4	27–31
	4.2 ಹೊಸ ಧರ್ಮಗಳ ಉದಯ– ಜೈನಧರ್ಮ ಮತ್ತು ಬೌದ್ಧ ಧರ್ಮ	4	32–39
	4.3 ಮೌರ್ಯರು – ಚಂದ್ರಗುಪ್ತ ಮೌರ್ಯ – ಕೌಟಿಲ್ಯ – ಅಶೋಕ – ಕೊಡುಗೆಗಳು – ಶಾತವಾಹನರು	4	40–50
	4.4 ಕುಶಾನರು – ಕಾನಿಷ್ಕ – ಗಾಂಧಾರ ಕಲೆ	2	51-54
	4.5 ಗುಪ್ತರು – ಸಮುದ್ರಗುಪ್ತ – ಸುವರ್ಣಯುಗ	4	55-62
	4.6 ಚೋಳರು – ಒಂದನೇ ರಾಜರಾಜಚೋಳ – ಒಂದನೇ ರಾಜೇಂದ್ರ ಚೋಳ – ಆಡಳಿತ ಪದ್ಧತಿ	4	63-68
	4.7 ವರ್ಧನರು ಮತ್ತು ಆರಂಭಿಕ ಚಾಲುಕ್ಯರು– ಪಲ್ಲವರು – ಚಾಲುಕ್ಯರ ಸಾಂಸ್ಕೃತಿಕ ಕೊಡುಗೆಗಳು	6	69-82
	4.8 ರಾಷ್ಟ್ರಕೂಟರು – ಧ್ರುವ, 3ನೇ ಗೋವಿಂದ – ಅಮೋಘ ವರ್ಷ – ಸಾಂಸ್ಕೃತಿಕ ಕೊಡುಗೆಗಳು	3	83-90
	4.9 ನಂತರದ ಚಾಲುಕ್ಯರು ಮತ್ತು ಹೊಯ್ಸಳರು – ಸಾಂಸ್ಕೃತಿಕ ಕೊಡುಗೆಗಳು	5	91-97

ಅಧ್ಯಾಯಗಳು	ಪಠ್ಯವಸ್ತು	ಬೋಧನಾ ಅವಧಿ	ಪುಟ ಸಂಖ್ಯೆ
5	**ಮಧ್ಯಕಾಲೀನ ಯುಗ:**	25	
	5.1 ದೆಹಲಿ ಸುಲ್ತಾನರು – ಅಲ್ಲಾವುದ್ದೀನ್ ಖಿಲ್ಜಿ – ಮಹಮದ್ ಬಿನ್ ತೊಘಲಕ್ – ದೆಹಲಿ ಸುಲ್ತಾನರ ಕೊಡುಗೆಗಳು	6	98-111
	5.2 ಮೊಘಲರು – ಅಕ್ಬರ್ ಮಹಾಶಯ – ಮೊಘಲರ ಕೊಡುಗೆಗಳು	6	112-122
	5.3 ಮರಾಠರ ಏಳಿಗೆ – ಶಿವಾಜಿ	2	123-127
	5.4 ವಿಜಯ ನಗರ ಸಾಮ್ರಾಜ್ಯ – ಕೃಷ್ಣದೇವರಾಯ –ಸಾಂಸ್ಕೃತಿಕ ಕೊಡುಗೆಗಳು–ವಿದೇಶೀಯರ ಬರವಣಿಗೆಗಳು –ವಿಜಯನಗರ ಸಾಮ್ರಾಜ್ಯದ ವಿಘಟನೆ.	7	128-144
	5.5 ಬಹಮನಿ ಮತ್ತು ಆದಿಲ್ ಷಾಹಿ ಸುಲ್ತಾನರು – ಸಾಂಸ್ಕೃತಿಕ ಕೊಡುಗೆಗಳು	4	145-149
6	**ಮಧ್ಯಕಾಲೀನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿ –** ಆಚಾರ್ಯತ್ರಯರು–ಬಸವೇಶ್ವರ–ಭಕ್ತಿ ಚಳುವಳಿ–ಸೂಫಿ ಪಂಥ	7	150-159
7	**ಆಧುನಿಕ ಯುಗ**	36	
	7.1 ಯೂರೋಪಿಯನ್ನರ ಆಗಮನ – ಭಾರತದಲ್ಲಿ ಬ್ರಿಟಿಷರ ಅಧಿಪತ್ಯದ ಸ್ಥಾಪನೆ	09	160-169
	7.2 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ	3	170-175
	7.3 ಆರ್ಥಿಕತೆ ಮತ್ತು ಶಿಕ್ಷಣದ ಮೇಲೆ ಬ್ರಿಟಿಷ್ ಆಡಳಿತದ ಪ್ರಭಾವ	3	176-179
	7.4 ಸಾಮಾಜಿಕ – ಧಾರ್ಮಿಕ ಸುಧಾರಣಾ ಚಳುವಳಿ	4	180-184
	7.5 ಮೈಸೂರು – ಒಂದು ಮಾದರಿ ರಾಜ್ಯ	3	185-189
	7.6 ಭಾರತೀಯ ರಾಷ್ಟ್ರೀಯ ಚಳುವಳಿ – ಕರ್ನಾಟಕದ ಪಾತ್ರ	11	190-209
	7.7 ಕರ್ನಾಟಕದಲ್ಲಿ ಏಕೀಕರಣ ಚಳುವಳಿ	3	210-214
8	**ಭೂಪಟ ಕಾರ್ಯ** – ಪ್ರಮುಖ ಐತಿಹಾಸಿಕ ಸ್ಥಳಗಳು	5	215-219
	ಪ್ರಶ್ನೆ ಪತ್ರಿಕೆ ನೀಲ ನಕ್ಷೆ, ಮಾದರಿ ಪ್ರಶ್ನೆ ಪತ್ರಿಕೆಗಳು		220-232

ಅಧ್ಯಾಯ – 1

ಪೀಠಿಕೆ

ಭಾರತ ಉಪಖಂಡದ ಇತಿಹಾಸವು ಅನೇಕ ಸಂದರ್ಭಗಳಲ್ಲಿ ಆಧುನಿಕ ರಾಷ್ಟ್ರಗಳಾದ ಆಫ್ಘಾನಿಸ್ತಾನ, ಪಾಕಿಸ್ತಾನ, ನೇಪಾಳ, ಭೂತಾನ, ಮಯನ್ಮಾರ್, ಬಾಂಗ್ಲಾದೇಶ, ಚೀನಾ ಮತ್ತು ಶ್ರೀಲಂಕಾಗಳನ್ನು ಒಳಗೊಂಡಿದೆ. ವಿಷ್ಣುಪುರಾಣದ ಈ ಕೆಳಗಿನ ಶ್ಲೋಕವು ಭಾರತ ಉಪಖಂಡದ ವಿಸ್ತೀರ್ಣದ ನಿಖರ ವಿವರಣೆಯನ್ನು ನೀಡುತ್ತದೆ.

"ಉತ್ತರಂ ಯತ್ಸಮುದ್ರಸ್ಯ ಹಿಮಾದ್ರಿಶ್ಚೈವ ದಕ್ಷಿಣಂ
ವರ್ಷಂ ತದ್ಭಾರತಂ ನಾಮಾಃ ಭಾರತಿಯತ್ರ ಸಂತತಿ"

ಅರ್ಥ: ಸಮುದ್ರದಿಂದ ಉತ್ತರಕ್ಕೆ ಮತ್ತು ಹಿಮಾಲಯದಿಂದ ದಕ್ಷಿಣಕ್ಕಿರುವ ದೇಶವೇ ಭಾರತ. ಇಲ್ಲಿ ವಾಸಿಸುವ ಜನರು ಭರತನ ವಂಶಸ್ಥರು.

ಈ ಉಪಖಂಡವು ಭರತವರ್ಷ, ಭರತಖಂಡ, ಭಾರತ, ಜಂಬೂದ್ವೀಪ, ಹಿಂದೂಸ್ಥಾನ ಮತ್ತು ಇಂಡಿಯಾ ಎಂಬ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟಿದೆ. ಉಪಖಂಡದ ಉತ್ತರ ಭಾಗವನ್ನು ಆರ್ಯಾವರ್ತ–ಆರ್ಯರ ನಾಡು ಎಂತಲೂ ದಕ್ಷಿಣ ಭಾಗವನ್ನು ದಕ್ಷಿಣಾಪಥ– ದಕ್ಷಿಣದಲ್ಲಿರುವ ನಾಡು ಎಂತಲೂ ಕರೆಯುತ್ತಾರೆ. ಮಹಾಭಾರತದಲ್ಲಿ ಉಲ್ಲೇಖಿಸಿರುವಂತೆ ದುಷ್ಯಂತ ಹಾಗೂ ಶಕುಂತಲೆಯರ ಮಗನಾದ ಭರತನಿಂದಾಗಿ ಭರತಖಂಡ, ಭರತವರ್ಷ ಹಾಗೂ ಭಾರತ ಎಂಬ ಹೆಸರು ಬಂದಿದೆ. ಹಿಂದೂ, ಬೌದ್ಧ ಹಾಗೂ ಜೈನ ಪರಂಪರೆಗಳ ಪ್ರಕಾರ ಇದನ್ನು ಜಂಬೂದ್ವೀಪವೆಂದೂ ಗುರುತಿಸಲಾಗಿದೆ. ಹಿಮಾಲಯದ ದಕ್ಷಿಣಕ್ಕಿರುವ ಭೂಮಿಯು ಸ್ವತಂತ್ರ ದ್ವೀಪ ಖಂಡವಾಗಿತ್ತೆಂದೂ, ಇದು ಸಪ್ತಖಂಡಗಳಲ್ಲಿ ಒಂದಾಗಿತ್ತೆಂದೂ ಅವರು ಉಲ್ಲೇಖಿಸಿದ್ದಾರೆ. ಇದರ ಆಕಾರವು ಜಂಬೂ (ನೇರಳೆ) ಹಣ್ಣನ್ನು ಹೋಲುವುದರಿಂದ ಇದಕ್ಕೆ ಜಂಬೂದ್ವೀಪವೆಂಬ ಹೆಸರಿದೆ.

'ಇಂಡಿಯಾ' ಎಂಬ ಪದವು 'ಇಂಡೋಸ್' ಎಂಬ ಗ್ರೀಕ್ ಪದದಿಂದ ಬಂದಿದೆ. ಉಪಖಂಡದ ಪ್ರಮುಖ ನದಿಯಾದ ಸಿಂಧೂ ನದಿಗೆ ಈ ಪದವನ್ನು ಬಳಸಲಾಗಿದೆ. ಇಂಡಿಯಾ ಎಂಬ ಪದವು ದಕ್ಷಿಣ ಭಾರತವನ್ನೂ ಒಳಗೊಂಡಿದೆ ಎಂಬುದು ಗಮನಿಸಬೇಕಾದ ಅಂಶ. 'ಹಿಂದೂಸ್ಥಾನ' ಎಂಬ ಹೆಸರು ಮಧ್ಯಯುಗದಲ್ಲಿ ವ್ಯಾಪಕವಾಗಿ ಬಳಕೆಗೆ ಬಂದಿತು. ಪರ್ಷಿಯನ್ನರು ಸಿಂಧೂ ನದಿಯನ್ನು ಹಿಂದೂ ನದಿಯೆಂದೂ, ಅದರ ಭೂಪ್ರದೇಶವನ್ನು ಹಿಂದೂಸ್ಥಾನವೆಂದೂ ಕರೆದರು. ಇದರ ಸಂಕ್ಷಿಪ್ತ ರೂಪವೇ 'ಹಿಂದ್' ಆಗಿದ್ದು, ಆಧುನಿಕ ಭಾರತೀಯ ಗಣರಾಜ್ಯವನ್ನು ಪ್ರತಿನಿಧಿಸುತ್ತದೆ.

ಭಾರತದ ಇತಿಹಾಸದ ಮೇಲೆ ಭೂಗೋಳದ ಪ್ರಭಾವ.


ಭಾರತದ ಭೌಗೋಳಿಕ ಲಕ್ಷಣಗಳಾದ ಹಿಮಾಲಯ ಪರ್ವತಗಳು, ಉತ್ತರದ ಬಯಲುಗಳು, ಮರುಭೂಮಿ, ಪರ್ವತಗಳು (ವಿಂಧ್ಯ, ಅರಾವಳಿ, ಸಹ್ಯಾದ್ರಿ, ಮುಂತಾದ), ದಕ್ಷಿಣ ಪ್ರಸ್ಥಭೂಮಿ ಮತ್ತು ಕರಾವಳಿ ತೀರಗಳು ಭಾರತದ ಸಂಸ್ಕೃತಿ ಹಾಗೂ ವಿವಿಧ ರಾಜಕೀಯ ಘಟಕಗಳನ್ನು ರೂಪಿಸಿವೆ ಮತ್ತು ಸಂಸ್ಕೃತಿಗಳ ಬೆಳವಣಿಗೆಗೆ ಸಹಾಯಕವಾಗಿವೆ.

ಹಿಮಾಲಯ ಪರ್ವತವು ಭಾರತವನ್ನು ಏಷ್ಯಾದ ಇನ್ನುಳಿದ ಭಾಗಗಳಿಂದ ಪ್ರತ್ಯೇಕಿಸಿದೆ. ಅದು ಭಾರತಕ್ಕೆ ನೈಸರ್ಗಿಕ ತಡೆಗೋಡೆ ನಿರ್ಮಿಸಿ ಭಾರತವನ್ನು ಉತ್ತರದ ಆಕ್ರಮಣಕಾರರು ಹಾಗೂ ಶೀತಮಾರುತಗಳಿಂದ ರಕ್ಷಿಸಿದೆ. ಇದು ಸದಾಕಾಲ ಹರಿಯುವ ನದಿಗಳಿಗೆ ಜನ್ಮ ನೀಡಿದೆ. ಈ ನದಿಗಳು ಉತ್ತರದ ಅತ್ಯಂತ ಫಲವತ್ತಾದ ಬಯಲುಗಳನ್ನು ನಿರ್ಮಿಸಿವೆ. ಈ ಬಯಲುಗಳು ನಾಗರಿಕತೆ ಮತ್ತು ಸಾಮ್ರಾಜ್ಯಗಳ ತೊಟ್ಟಿಲುಗಳಾಗಿದ್ದವು. ಫಲವತ್ತಾದ ಭೂಮಿಯಿಂದ ದೊರಕಿದ ಸಮೃದ್ಧಿ ಮತ್ತು ಸಿರಿವಂತಿಕೆಯು ಮೂಲಭೂತ ಅವಶ್ಯಕತೆಗಳ ಲಭ್ಯತೆಯನ್ನು ನಿಶ್ಚಿತಪಡಿಸಿತು. ಇದು ಮಾನವನ ಭೌತಿಕ, ಆಧ್ಯಾತ್ಮಿಕ ಮತ್ತು ತತ್ವಜ್ಞಾನದ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು. ಈ ಪ್ರದೇಶದಲ್ಲಿಯೇ ಮಹಾನ್ ನಾಗರಿಕತೆಗಳಾದ ಸಿಂಧೂ ಮತ್ತು ವೈದಿಕ ಸಂಸ್ಕೃತಿಗಳು ಬೆಳೆದವು. ಉತ್ತರದ ಕಣಿವೆಗಳಾದ ಖೈಬರ್, ಬೋಲಾನ್, ಮುಂತಾದವು ಭಾರತೀಯರಿಗೆ ಪಾಶ್ಚಿಮಾತ್ಯರೊಂದಿಗೆ ವಾಣಿಜ್ಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸಲು ಸಹಾಯ ಮಾಡಿದ್ದಲ್ಲದೆ ಭಾರತವನ್ನು ಪಾಶ್ಚಿಮಾತ್ಯರ ನಿರಂತರ ದಾಳಿಗಳಿಗೆ ಒಡ್ಡಿದವು.

ಪಶ್ಚಿಮದ ಮರುಭೂಮಿ ಮತ್ತು ದಕ್ಷಿಣ ಪ್ರಸ್ಥಭೂಮಿಯ ದಟ್ಟ ಕಾಡುಗಳು ಜನರನ್ನು ಕಠಿಣ ಪರಿಶ್ರಮಿ ಹಾಗೂ ಯುದ್ಧಪ್ರಿಯರನ್ನಾಗಿ ಪರಿವರ್ತಿಸಿದವು. ದಕ್ಷಿಣಕ್ಕಿರುವ ಸಮುದ್ರಗಳು ಒಂದು ಕಾಲದಲ್ಲಿ ತಡೆಬೇಲಿಗಳಾಗಿದ್ದವು. ಆದರೆ ನಂತರದಲ್ಲಿ ಅವು ಜಗತ್ತಿನ ಇತರ ಭಾಗಗಳೊಂದಿಗೆ ಸಂಪರ್ಕ ಬೆಳೆಸಲು ಸಾಧನಗಳಾದವು. ಉಪಖಂಡದಲ್ಲಿರುವ ಭೌಗೋಳಿಕ ಭಿನ್ನತೆ ಹಾಗೂ ವೈವಿಧ್ಯಪೂರ್ಣ ವಲಯಗಳು ಮತ್ತು ದ್ರಾವಿಡ, ಆಲ್ಪಾಯಿನ್, ಮಂಗೋಲಾಯಿಡ್ ಮುಂತಾದ ಕುಲಗಳು, ವಿವಿಧ ಜನಾಂಗಗಳು ಅಸ್ತಿತ್ವದಲ್ಲಿರುವುದರಿಂದ ವಿವಿಧ ಭಾಷೆ ಮತ್ತು ಸಂಸ್ಕೃತಿಗಳ ಬೆಳೆವಣಿಗೆಗೆ ಮೊದಲಾಯಿತು.

ಉತ್ತರ ಮತ್ತು ದಕ್ಷಿಣದ ನದಿ ಬಯಲುಗಳು ಅತೀ ಪುರಾತನ ಕಾಲದಿಂದ ಈ ದೇಶವನ್ನು ಕೃಷಿ ಪ್ರಧಾನ ದೇಶವನ್ನಾಗಿಸಿವೆ. ಅನೇಕ ರಾಜವಂಶಗಳ ಏಳು–ಬೀಳಿಗೆ ಮತ್ತು ಧಾರ್ಮಿಕ, ಸಾಂಸ್ಕೃತಿಕ ಹಾಗು ವಾಣಿಜ್ಯ ಕೇಂದ್ರಗಳ ಬೆಳವಣಿಗೆಯ ಮೇಲೆ ಪ್ರಭಾವ ಬೀರಿವೆ. ಇಲ್ಲಿ ಅನೇಕ ವಿಧದ ಖನಿಜಗಳು ಹಾಗೂ ಬಂಡೆಗಳು ವಿಫುಲವಾಗಿ ಲಭ್ಯವಿವೆ. ಮರಳುಗಲ್ಲು, ಗ್ರಾನೈಟ್ ಮತ್ತು ಅಮೃತಶಿಲೆಯಂತಹ ಬಂಡೆಗಳು ಮತ್ತು ಶಿಲೆಗಳ ಲಭ್ಯತೆಯು, ಅರಮನೆಗಳು, ದುರ್ಗಗಳು, ಕೋಟೆ ಮುಂತಾದ ವಾಸ್ತುಶಿಲ್ಪಗಳ ಬೆಳವಣಿಗೆಗೆ ಸಹಾಯ ಮಾಡಿದ್ದಲ್ಲದೆ, ಮೂರ್ತಿಕಲೆಯ ನಿರ್ಮಾಣಕ್ಕೂ ಸಹಕರಿಸಿವೆ. ಬೆಟ್ಟಗಳಲ್ಲಿರುವ ಬೃಹತ್ ಶಿಲೆಗಳು ಗುಹಾಂತರ ದೇವಾಲಯಗಳ ಬೆಳವಣಿಗೆಗೂ ಸಹಾಯ ಮಾಡಿದವು. ವಿಫುಲ ಮಳೆ ಮತ್ತು ಅನುಕೂಲಕರ ಹವಾಮಾನವು ಸಂಪದ್ಭರಿತ ಮತ್ತು ವೈವಿಧ್ಯಪೂರ್ಣ ಸಸ್ಯ ಮತ್ತು ಪ್ರಾಣಿವರ್ಗದ ಬೆಳವಣಿಗೆಗೆ ಕಾರಣವಾಯಿತು. ಹಿಮಾಲಯ ಪರ್ವತಗಳು, ಮರುಭೂಮಿಗಳು ಮತ್ತು ಗುಡ್ಡುಗಾಡು ಪ್ರದೇಶಗಳನ್ನು ಹೊರತುಪಡಿಸಿದರೆ ಇಡೀ ಭಾರತವು ಉಷ್ಣ ವಲಯದಲ್ಲಿ ಬರುತ್ತದೆ. ಇಲ್ಲಿನ ವಾತಾವರಣವು ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದೆ.

ಭೌಗೋಳಿಕ ಭಾರತ


AFGHANISTAN
K2
Himalayas
CHINA
INDUS
JHELUM
CHENAB
RAVI
SUTLEJ
Nanda Devi
PAKISTAN
NEW DELHI
Ganges
YAMUNA
Aravalli
Kangchenjunga
BRAHMAPUTRA
Caro Khasi
Vindhyas
Satpuras
NARMADA
MAHANADI
Kolkata (Calcutta)
BURMA
TAPATI
Deccan Plateau
Mumbai (Bombay)
GODAVARI
Western Ghats
Eastern Ghats
Arabian Sea
Bay of Bengal
9000
6000
4000
2000
1000
250
50
0
m
Lakshadweep Islands
Nilgiris
KAVERI
Cardamom Hills
N
W
E
S
Andaman Islands
Port Blair
Nicobar Islands
SRI LANKA
km
0
500
MALDIVES
IND

ಭಾರತೀಯ ಇತಿಹಾಸದ ವಿಶಿಷ್ಟ ಲಕ್ಷಣಗಳು

ಭಾರತವು ವಿಸ್ತೀರ್ಣದಲ್ಲಿ ಜಗತ್ತಿನ ಏಳನೆಯ ಬೃಹತ್ ರಾಷ್ಟ್ರವಾಗಿದ್ದು, ಜನಸಂಖ್ಯೆಯಲ್ಲಿ ಎರಡನೆಯ ದೊಡ್ಡ ರಾಷ್ಟ್ರವಾಗಿದೆ. ಹೆರೊಡೋಟಸ್‌ನೂ ಸಹ ಭಾರತವನ್ನು ಅತ್ಯಂತ ಜನಸಂಖ್ಯೆಯುಳ್ಳ ಪ್ರದೇಶವೆಂದು ಉಲ್ಲೇಖಿಸಿದ್ದಾನೆ. ಭಾರತದ ಇತಿಹಾಸದ ವಿಶಿಷ್ಟ ಲಕ್ಷಣಗಳು ಇಂತಿವೆ.

1. ನಾಗರಿಕತೆ ಮತ್ತು ಸಂಸ್ಕೃತಿಗಳ ನಿರಂತರತೆ.

ಭಾರತೀಯ ಇತಿಹಾಸವು ವಿಶ್ವದ ಆರಂಭಿಕ ಇತಿಹಾಸಗಳಲ್ಲಿ ಒಂದಾಗಿದೆ. ಇದು ಚೀನಾದ ಹಾಗೆ ಸುಮಾರು ನಾಲ್ಕು ಸಾವಿರ ವರ್ಷಗಳ ನಿರಂತರ ಇತಿಹಾಸ, ನಾಗರಿಕತೆ ಮತ್ತು ಸಂಸ್ಕೃತಿಯನ್ನು ಹೊಂದಿದೆ.

2. ಸ್ತರಬದ್ಧ ವಿಕಾಸ.

ಭಾರತದ ನಾಗರಿಕತೆಯು ವಿವಿಧ ಹಂತ ಮತ್ತು ಸ್ತರಗಳಲ್ಲಿ ಅವಶ್ಯಕ ಮಾರ್ಪಾಡುಗಳೊಂದಿಗೆ ಅಭಿವೃದ್ಧಿ ಹೊಂದಿದೆ. ಸಿಂಧೂ ನಾಗರಿಕತೆಯಿಂದ ವೈದಿಕ ನಾಗರಿಕತೆಗೆ, ವೇದ ಸಂಸ್ಕೃತಿಯಿಂದ ಇಸ್ಲಾಂ ಮತ್ತು ಕ್ರಿಶ್ಚಿಯನ್ ಪ್ರಭಾವದವರೆಗಿನ ಘಟನಾವಳಿಗಳು ಒಂದನ್ನೊಂದು ಜೋಡಿಸುವ ಕೊಂಡಿಗಳಾಗಿದ್ದನ್ನು ಕಾಣುತ್ತೇವೆ.

3. ವಿದೇಶಿ ದಾಳಿಗಳು

ಭಾರತ, ಅದರಲ್ಲೂ ವಿಶೇಷವಾಗಿ ಉತ್ತರ ಭಾರತ ಮೇಲಿಂದಮೇಲೆ ವಿದೇಶಿಯರ ದಾಳಿ ಮತ್ತು ಪ್ರಭಾವಕ್ಕೆ ಒಳಪಟ್ಟಿದೆ. ಗ್ರೀಕರು, ಪರ್ಷಿಯನ್ನರು, ಹೂಣರು, ಶಕರು, ಅರಬ್ಬರು, ಟರ್ಕರು, ಕುಶಾನರು, ಆಫ್‌ಘನ್ನರು ಮುಂತಾದವರು ಒಳನುಸುಳುವುದರೊಂದಿಗೆ ಭಾರತದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದಾರೆ. ಈ ಆಕ್ರಮಣಕಾರರು ಭಾರತೀಯ ಸಂಸ್ಕೃತಿಗೆ ಕೊಡುಗೆ ನೀಡುವುದರೊಂದಿಗೆ ಅದರ ಭಾಗವಾಗಿದ್ದಾರೆ. ಇಂಗ್ಲೀಷರು ಇದಕ್ಕೆ ಹೊರತಾಗಿದ್ದಾರೆ. ಅವರು ದೀರ್ಘಕಾಲ ಆಳಿದರೂ ಭಾರತದ ಸಂಸ್ಕೃತಿಯ ಭಾಗವಾಗಲಿಲ್ಲ. ದಕ್ಷಿಣ ಭಾರತವು ಇಂತಹ ದಾಳಿಗಳಿಗೆ ಒಳಪಡದೆ ತನ್ನದೇ ಆದ ವಿಭಿನ್ನ ಸಂಸ್ಕೃತಿಯನ್ನು ಬೆಳೆಸಿಕೊಂಡಿದೆ.

4. ಪ್ರಬಲ ಮತ್ತು ಸಹಿಷ್ಣುತಾಭಾವದ ಹಿಂದೂ ಧರ್ಮ.

ಭಾರತವು ಹಿಂದೂ, ಜೈನ, ಬೌದ್ಧ, ಸಿಖ್, ಮುಸ್ಲಿಂ, ಕ್ರೈಸ್ತ್, ಪಾರಸೀ ಹಾಗು ವಿವಿಧ ಬುಡಕಟ್ಟು ಧರ್ಮ ಮತ್ತು ಆಚರಣೆಗಳ ತವರಾಗಿದೆ. ಭಾರತೀಯರು 'ವಸುದೈವಕ ಕುಟುಂಬಕಂ' ಹಾಗೂ 'ಸರ್ವೇ ಜನಾಃ ಸುಖಿನೋಭವಂತು', ಎಂಬ ತತ್ವದಲ್ಲಿ ನಂಬಿಕೆ ಹೊಂದಿದ್ದಾರೆ. ಇದರರ್ಥ ವಿಶ್ವವೇ ಒಂದು ಕುಟುಂಬ, ಸಮಸ್ತ ಜನರಿಗೂ ಸುಖವಾಗಲಿ ಎಂಬುದಾಗಿದೆ.

5. ಜಗತ್ತಿಗೆ ಕೊಡುಗೆಗಳು.

ಭಾರತೀಯರು ಜಗತ್ತಿನ ಸಾಹಿತ್ಯ, ತತ್ವಜ್ಞಾನ, ಸಂಗೀತ, ನೃತ್ಯ, ವಾಸ್ತುಶಿಲ್ಪ, ಮೂರ್ತಿಕಲೆ, ವಿಜ್ಞಾನ, ಯೋಗ, ವೈದ್ಯಕೀಯ, ಗಣಿತ, ಖಗೋಳಶಾಸ್ತ್ರ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ. ವಾಸ್ತುಶಿಲ್ಪದ ಮತ್ತು ಸಾಂಸ್ಕೃತಿಕ ಸ್ಮಾರಕಗಳಾದ ಕೋಟೆಗಳು, ಗಿರಿದುರ್ಗಗಳು, ಅರಮನೆಗಳು, ದೇವಾಲಯಗಳು, ಸಮಾಧಿಗಳು ಮತ್ತು ಗುಹೆಗಳು ಭಾರತೀಯ ಕಲಾಶ್ರೇಷ್ಠತೆಯ ಕುರುಹುಗಳಾಗಿವೆ.

ವಿಶ್ವಸಂಸ್ಥೆಯು ರಾಜಸ್ಥಾನದ ಗಿರಿದುರ್ಗಗಳು, ಖಜುರಾಹೋ, ಕೋನಾರ್ಕ್, ತಾಜ್‌ಮಹಲ್, ಜಂತರ್–ಮಂತರ್, ಗಯಾ, ಸಾಂಚಿ, ಅಜಂತಾ, ಎಲ್ಲೋರಾ, ಹಂಪಿ, ಐಹೊಳೆ, ಪಟ್ಟದಕಲ್ಲು, ಮಧುರೈ, ಕಂಚಿ, ಮಹಾಬಲಿಪುರಂ, ಗೋವಾದ ಚರ್ಚ್‌ಗಳು, ಮುಂತಾದ ಮೂವತ್ತಕ್ಕೂ ಹೆಚ್ಚು ಐತಿಹಾಸಿಕ ತಾಣಗಳನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಿದೆ.

ಯೋಗ ಮತ್ತು ಆಯುರ್ವೇದಗಳು ವಿಶ್ವದ ಮಾನವರ ದೈಹಿಕ ಮತ್ತು ಮಾನಸಿಕ ಆರೋಗ್ಯದ ರಕ್ಷಣೆಗೆ ಭಾರತೀಯರ ವಿಶೇಷ ಕೊಡುಗೆಗಳಾಗಿವೆ. ಚರಕ, ಸುಶ್ರುತ, ಹಾಗೂ ಪತಂಜಲಿಯವರ ಕೊಡುಗೆಗಳು ಉಲ್ಲೇಖನೀಯವಾಗಿವೆ. ಹಿಂದೂಸ್ತಾನಿ ಮತ್ತು ಕರ್ನಾಟಿಕ್ ಸಂಗೀತ, ಭರತನಾಟ್ಯ, ಕಥಕ್, ಕೂಚುಪುಡಿ, ಮೋಹಿನಿಅಟ್ಟಂ ಮುಂತಾದ ನೃತ್ಯಪ್ರಕಾರಗಳು ಭಾರತೀಯರ ಕಲಾತ್ಮಕ ಕೊಡುಗೆಗಳಾಗಿವೆ. ಭಾರತೀಯ ಗಣಿತಜ್ಞರ ಮಹಾನ್ ಕೊಡುಗೆಗಳಾದ ಸೊನ್ನೆ ಹಾಗೂ ದಶಮಾಂಶ ಪದ್ಧತಿಯ ಪರಿಕಲ್ಪನೆಗಳು ಜಗತ್ತಿನ ಗಣಿತ ಲೋಕವನ್ನು ಶ್ರೀಮಂತಗೊಳಿಸಿವೆ. ಇಂದಿನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಕತ್ತಲೆ ಯುಗದಲ್ಲಿರುವಾಗ ಭಾರತವು ಬೌದ್ಧಿಕ ಮತ್ತು ಅಧ್ಯಾತ್ಮಿಕ ವೈಭವದ ಉತ್ತುಂಗದಲ್ಲಿತ್ತು. ನಳಂದಾ, ತಕ್ಷಶಿಲಾ, ಉಜ್ಜಯನಿ, ಪ್ರಯಾಗ, ವಿಕ್ರಮಶಿಲಾ, ಕಾಶಿ, ಕಾಂಚಿ ಮುಂತಾದೆಡೆಗಳಲ್ಲಿದ್ದ ವಿಶ್ವವಿದ್ಯಾಲಯಗಳು ವಿಶ್ವದ ವಿವಿಧ ದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು.

6. ವಿದೇಶಿಯರ ಆಕರ್ಷಣೆಯ ಕೇಂದ್ರವಾಗಿ ಭಾರತ.

ಭಾರತದ ಫಲವತ್ತಾದ ಭೂಮಿ ಮತ್ತು ಅಗಾಧ ಸಂಪತ್ತು ವಿದೇಶಿ ಆಕ್ರಮಣಕಾರರನ್ನು ಆಕರ್ಷಿಸಿತು. ಗ್ರೀಕರು, ಪರ್ಷಿಯನ್ನರು, ಆಫ್‌ಘನ್ನರು, ಮಂಗೋಲರು, ಯುರೋಪಿಯನ್ನರು ಮುಂತಾದವರು ಭಾರತದ ಮೇಲೆ ದಾಳಿಮಾಡಿದರು. ನಿಸರ್ಗ ಸೌಂದರ್ಯದ ತಾಣಗಳಾದ ಗಿರಿಧಾಮಗಳು, ಹಿಮಾಲಯ, ಕಾಶ್ಮೀರದ ಕಣಿವೆಗಳು, ಕೇರಳದ ರಾಷ್ಟ್ರೀಯ ಉದ್ಯಾನಗಳು, ಕಡಲತೀರಗಳು ಮತ್ತು ಐತಿಹಾಸಿಕ ಸ್ಮಾರಕಗಳು ವಿಶ್ವದಾದ್ಯಂತದ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

7. ವಿವಿಧತೆಯಲ್ಲಿ ಏಕತೆ.

ಭಾರತವು ಭೌಗೋಳಿಕ ವೈವಿಧ್ಯತೆಯೊಂದಿಗೆ ಮಾನವ ಚಟುವಟಿಕೆಯ ಪ್ರತಿಯೊಂದು ರಂಗದಲ್ಲಿಯೂ ವೈವಿಧ್ಯತೆಯನ್ನು ಹೊಂದಿದೆ.

ಅ. ಭೌಗೋಳಿಕ ವೈವಿಧ್ಯತೆ:

ಭಾರತವು ವೈವಿಧ್ಯಮಯ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಅತ್ಯಂತ ತಂಪಾದ ಸೀಯಾಚಿನ್, ರಾಜಸ್ಥಾನದ ಉಷ್ಣ ಮರುಭೂಮಿಗಳು, ಹಿಮಚ್ಛಾದಿತ ಹಿಮಾಲಯ ಪರ್ವತಗಳು, ನಿತ್ಯಹರಿದ್ವರ್ಣ ಕಾಡುಗಳು, ವಿಶಾಲ ಬಯಲುಗಳು, ಪ್ರಸ್ಥಭೂಮಿಗಳು, ಕಡಲ ತೀರಗಳು ಮುಂತಾದವುಗಳು ವೈವಿಧ್ಯಮಯವಾದ ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಎಡೆಮಾಡಿಕೊಟ್ಟಿವೆ.

ಬ. ಜನಾಂಗೀಯ ಹಾಗೂ ಭಾಷಾ ವೈವಿಧ್ಯತೆ :

ಭಾರತದಲ್ಲಿ ಜನಾಂಗೀಯ ವೈವಿಧ್ಯತೆಯೂ ಕಂಡುಬರುತ್ತದೆ. ದ್ರಾವಿಡ, ನೀಗ್ರೋ, ಮಂಗೋಲಿಯನ್, ಆಲ್ಪಾಯಿನ್ ಮುಂತಾದ ಕುಲಗಳು ಈ ದೇಶದಲ್ಲಿ ವಾಸಿಸುತ್ತಿವೆ. ಭಾಷಾ ವೈವಿಧ್ಯತೆಯು ಭಾರತೀಯ ಇತಿಹಾಸದ ವಿಶಿಷ್ಟ ಗುಣಲಕ್ಷಣಗಳಲ್ಲಿ ಒಂದಾಗಿದೆ. ಭಾರತದಲ್ಲಿ 1600 ಕ್ಕಿಂತ ಹೆಚ್ಚು ಭಾಷೆಗಳು ಹಾಗೂ ಆಡುಭಾಷೆಗಳು ಬಳಕೆಯಲ್ಲಿವೆ.

ಕ. ಸಾಮಾಜಿಕ ಮತ್ತು ಧಾರ್ಮಿಕ ವೈವಿಧ್ಯತೆ :

ಭಾರತವು ಧರ್ಮಗಳ, ಜಾತಿಗಳ, ಪಂಥಗಳ, ನಂಬಿಕೆಗಳ, ಪದ್ಧತಿಗಳ, ಭಾಷೆಗಳ, ಜನಾಂಗೀಯ ಪ್ರಭೇದಗಳ ಮತ್ತು ಸಾಮಾಜಿಕ ವ್ಯವಸ್ಥೆಗಳ ವಸ್ತುಸಂಗ್ರಹಾಲಯವೆಂದು ಪರಿಗಣಿಸಲ್ಪಟ್ಟಿದೆ. ಭಾರತವು ಆಹಾರ ಮತ್ತು ಉಡುಗೆ ತೊಡುಗೆಗಳಲ್ಲಿಯೂ ವೈವಿಧ್ಯತೆಯನ್ನು ಹೊಂದಿದೆ. ಭಾರತವು ಮಾತೃ ಮತ್ತು ಪಿತೃಪ್ರಧಾನ ಕುಟುಂಬ ವ್ಯವಸ್ಥೆಗಳೆರಡನ್ನೂ ಹೊಂದಿದೆ. ಏಕಪತ್ನಿತ್ವ, ಬಹುಪತ್ನಿತ್ವ ಮತ್ತು ಬಹುಪತಿತ್ವದಂತಹ ಪದ್ಧತಿಗಳೂ ರೂಢಿಯಲ್ಲಿವೆ. ನಾಲ್ಕು ಮಹಾನ್ ಧರ್ಮಗಳಾದ ಹಿಂದೂ, ಜೈನ, ಬೌದ್ಧ ಮತ್ತು ಸಿಖ್ ಧರ್ಮಗಳು ಈ ನಾಡಿನಲ್ಲಿ ಉದಯಿಸಿವೆ. ಜಗತ್ತಿನ ಇತರ ಪ್ರಮುಖ ಧರ್ಮಗಳಾದ ಕ್ರೈಸ್ತ, ಇಸ್ಲಾಂ, ಯಹೂದಿ, ಪಾರಸಿ ಮತ್ತು ಇವುಗಳ ಒಳಪಂಗಡಗಳು ಇಲ್ಲಿ ಸಾಮರಸ್ಯದೊಂದಿಗೆ ಸಹಬಾಳ್ವೆ ನಡೆಸುತ್ತಿವೆ.

ಡ. ಆರ್ಥಿಕ ವೈವಿಧ್ಯತೆ:

ಇತಿಹಾಸದುದ್ದಕ್ಕೂ ಭಾರತದಲ್ಲಿ ಆರ್ಥಿಕ ಅಸಮಾನತೆಯನ್ನು ಕಾಣುತ್ತೇವೆ. ಇಲ್ಲಿ ಸಂಪನ್ಮೂಲಗಳು ಅಸಮಾನವಾಗಿ ಹಂಚಿಕೆಯಾಗಿವೆ. ಒಂದೆಡೆ ತುಂಬಾ ಶ್ರೀಮಂತರಿದ್ದರೆ ಇನ್ನೊಂದೆಡೆ ತೀರಾ ಬಡವರಿದ್ದಾರೆ. ಕೆಲವು ಪ್ರದೇಶಗಳು ಮತ್ತು ಸ್ಥಳಗಳು ಅತ್ಯಂತ ಅಭಿವೃದ್ಧಿ ಹೊಂದಿದ್ದರೆ ಇನ್ನು ಕೆಲವು ಪ್ರದೇಶಗಳು ಹಿಂದುಳಿದಿವೆ. ಭಾರತದ ನಗರ ಭಾಗಗಳು ಸಾಕಷ್ಟು ಅಭಿವೃದ್ಧಿ ಹೊಂದಿದ್ದು, ಇವುಗಳನ್ನು ಜಗತ್ತಿನ ಯಾವುದೇ ಅಭಿವೃದ್ಧಿ ಹೊಂದಿದ ನಗರಕ್ಕೆ ಹೋಲಿಸಬಹುದಾಗಿದೆ. ಆದರೆ, ತುಲನಾತ್ಮಕವಾಗಿ ಗ್ರಾಮೀಣ ಭಾರತವು ಹಿಂದುಳಿದಿದೆ.

ಈ ಎಲ್ಲಾ ವೈವಿಧ್ಯತೆಗಳ ಹೊರತಾಗಿಯೂ ನಮ್ಮಲ್ಲಿರುವ ಅನೇಕ ಏಕೀಕರಿಸುವ ಶಕ್ತಿಗಳು ಭಾರತದ ಏಕತೆಯನ್ನು ಜೀವಂತವಾಗಿಟ್ಟಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

1. ಭೌಗೋಳಿಕ ಏಕತೆ: ಉತ್ತರಕ್ಕೆ ಹಿಮಾಲಯ ಮತ್ತು ದಕ್ಷಿಣಕ್ಕೆ ಸಾಗರಗಳು ಭಾರತವನ್ನು ಜಗತ್ತಿನ ಇತರ ಪ್ರದೇಶಗಳಿಂದ ಪ್ರತ್ಯೇಕಿಸಿವೆ ಮತ್ತು ಒಂದು ಪ್ರತ್ಯೇಕ ಭೌಗೋಳಿಕ ಭಾಗವಾಗಿಸಿವೆ.

2. ಆಡಳಿತಾತ್ಮಕ ಏಕತೆ: ಭಾರತದ ಪ್ರಾಚೀನ ಆಡಳಿತ ವ್ಯವಸ್ಥೆಗಳು ಬಹುತೇಕ ಸಮಾನ ಮತ್ತು ಏಕರೂಪದ್ದಾಗಿದ್ದವು. ಇವು ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಹೊರಹೊಮ್ಮಿವೆ. ಆಳುವವರು ಮತ್ತು ಆಡಳಿತಗಾರರು ಮತ್ತು ಅಧಿಕಾರಿಗಳು ರಾಜಕೀಯ ಏಕತೆಯನ್ನು ತರಲು ಪ್ರಯತ್ನಿಸಿದ್ದಾರೆ. ಮೌರ್ಯರು, ಗುಪ್ತರು, ರಾಷ್ಟ್ರಕೂಟರು, ಕುಶಾನರು, ವರ್ಧನರು, ಚಾಲುಕ್ಯರು, ಮೊಘಲರು, ಮರಾಠರು, ಮುಂತಾದವರು ತಮ್ಮ ರಾಜ್ಯದ ಪ್ರದೇಶಗಳನ್ನು ವಿಸ್ತರಿಸಿ ರಾಜಕೀಯ ಏಕತೆಯನ್ನು ತರಲು ಪ್ರಯತ್ನಿಸಿದ್ದಾರೆ.

3. ಏಕ ರೂಪದ ಶಿಕ್ಷಣ ಮತ್ತು ಸಾಹಿತ್ಯ: ಪ್ರಾಚೀನ ಭಾರತದಲ್ಲಿ ಏಕ ರೂಪದ ಶಿಕ್ಷಣ ಮತ್ತು ಸಾಹಿತ್ಯವಿತ್ತು. ಸಂಸ್ಕೃತ ಭಾಷೆ ಮತ್ತು ವೈದಿಕ ಸಾಹಿತ್ಯ, ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆಗಳು ಭಾರತೀಯರಲ್ಲಿ ಏಕತೆಯ ಭಾವವನ್ನು ತುಂಬಿವೆ. ದೀರ್ಘ ಕಾಲದವರೆಗೆ ಸಂಸ್ಕೃತವು ವಿವಿಧ ಭಾಷೆಗಳ ಮಧ್ಯದಲ್ಲಿನ ಸಂಪರ್ಕದ ಭಾಷೆಯಾಗಿದ್ದು ಪ್ರಾದೇಶಿಕ ಭಾಷೆಗಳನ್ನು ಪ್ರಭಾವಿಸಿತು. ಪಾಲಿ ಮತ್ತು ಪ್ರಾಕೃತ ಭಾಷೆಗಳು ಜನಸಾಮಾನ್ಯರ ಭಾಷೆಗಳಾಗಿದ್ದವು. ಮಧ್ಯಕಾಲೀನ ಭಾರತದಲ್ಲಿ ಪರ್ಷಿಯನ್ ಭಾಷೆಯು ಪ್ರಮುಖ ಪಾತ್ರವಹಿಸಿತು. ನಂತರ ಬ್ರಿಟಿಷರ ಆಡಳಿತಾವಧಿಯಲ್ಲಿ ಇಂಗ್ಲೀಷ್ ಭಾಷೆಯು ಸಂಪರ್ಕದ ಭಾಷೆಯಾಯಿತು. ಸ್ವಾತಂತ್ರ್ಯಾ ನಂತರ ಹಿಂದಿಯು ಆ ಪಾತ್ರವನ್ನು ನಿರ್ವಹಿಸುತ್ತಿದೆ. ಮುಸ್ಲಿಂ ಮತ್ತು ಬ್ರಿಟಿಷರ ಆಡಳಿತ ಅವಧಿಯಲ್ಲಿ ಸಮ್ಮಿಶ್ರ ಸಂಸ್ಕೃತಿಯೊಂದು ವಿಕಸಿಸಿತು. ಆದ್ದರಿಂದ ಭಾರತೀಯರು ಸಹನೆ ಮತ್ತು ಸಹಬಾಳ್ವೆಯ ಸತ್ವವನ್ನು ಬೆಳಿಸಿಕೊಂಡಿದ್ದಾರೆ.

4. ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳು: ಭಾರತವು ಅನೇಕ ಧರ್ಮಗಳು, ಜಾತಿಗಳು, ಪಂಥ ಮತ್ತು ಪಂಗಡಗಳನ್ನು ಹೊಂದಿದ್ದರೂ ಜನರು ಸೌಹಾರ್ದಯುತ ಜೀವನವನ್ನು ನಡೆಸುತ್ತಿದ್ದಾರೆ. ಅವರು ಪರಸ್ಪರರ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳಲ್ಲಿ ಭಾಗವಹಿಸುತ್ತಾರೆ ಮತ್ತು ಸಹಭೋಜನವನ್ನು ಮಾಡುತ್ತಾರೆ. ಇದು ಏಕತೆಯನ್ನು ಮೂಡಿಸಿದೆ.

5. ಇತ್ತೀಚಿನ ಬದಲಾವಣೆಗಳು: ನಮ್ಮ ಸಂವಿಧಾನ ಮತ್ತು ಸರ್ಕಾರದ ನೀತಿ, ಇಂದಿನ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ, ಜಾಗತೀಕರಣದ ಪರಿಣಾಮಗಳು, ಮುಂತಾದವು ಧರ್ಮ ಹಾಗು ಜಾತಿಗಳ ವ್ಯತ್ಯಾಸಗಳನ್ನು ಕಡಿಮೆ ಮಾಡಿವೆ. ಆಹಾರ ವಿಧಾನ, ಉಡುಗೆ–ತೊಡುಗೆ, ಸಂಪ್ರದಾಯಗಳು, ಪದ್ಧತಿಗಳು, ಮುಂತಾದವುಗಳು ಒಬ್ಬರಿಂದೊಬ್ಬರಿಗೆ ಬಹಳಷ್ಟು ಭಿನ್ನವಾಗಿಲ್ಲ. ಇದು ಸಹ ಜನರಲ್ಲಿ ಏಕತೆಯನ್ನು ಮೂಡಿಸಿದೆ.

ಕರ್ನಾಟಕ ಇತಿಹಾಸಕ್ಕೆ ಪೀಠಿಕೆ.

ಕರ್ನಾಟಕವು ದಕ್ಷಿಣ ಭಾರತದ ಒಂದು ರಾಜ್ಯವಾಗಿದೆ. ಇಲ್ಲಿ ಕನ್ನಡ ಮಾತನಾಡುವ ಜನರು ಬಹುಸಂಖ್ಯಾತರಾಗಿದ್ದಾರೆ. ಇದು ಉತ್ತರದಲ್ಲಿ ಮಹಾರಾಷ್ಟ್ರ ಮತ್ತು ಗೋವಾ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶಗಳಿಂದ ಸುತ್ತುವರೆಯಲ್ಪಟ್ಟಿದೆ. ಶ್ರೀವಿಜಯನು ಬರೆದ ಕವಿರಾಜಮಾರ್ಗದಲ್ಲಿ ಕರ್ನಾಟಕವು ದಕ್ಷಿಣದಲ್ಲಿ ಕಾವೇರಿ ನದಿಯಿಂದ ಉತ್ತರದಲ್ಲಿ ಗೋದಾವರಿವರೆಗೂ ವಿಸ್ತರಿಸಿದ್ದುದರ ಉಲ್ಲೇಖವಿದೆ.

ಉಗಮ ಮತ್ತು ಪ್ರಾಚೀನತೆ.

ಇತಿಹಾಸಕಾರರು 'ಕರ್ನಾಟಕ' ಶಬ್ದದ ಉತ್ಪತ್ತಿ ಬಗ್ಗೆ ವಿಭಿನ್ನ ಸಿದ್ಧಾಂತಗಳನ್ನು ನೀಡಿದ್ದಾರೆ. ಅವರಲ್ಲಿ ಕೆಲವರು ನಾಡಿಗೆ ಈ ಭೂಮಿಯಿಂದ ಹೆಸರು ಬಂತೆಂದು ವಾದಿಸಿದರೆ ಇನ್ನು ಕೆಲವರು ಜನಾಂಗ ಅಥವಾ ಕುಲದಿಂದ ಬಂದಿತೆಂದು ವಾದಿಸುತ್ತಾರೆ. ಇನ್ನು ಕೆಲವರು ನಾಡಿನಿಂದಲೇ ಜನರಿಗೆ ಈ ಹೆಸರು ಬಂತೆಂಬ ವಾದ ಮಂಡಿಸುತ್ತಾರೆ. ಕರ್ನಾಟಕ ಎಂಬ ಶಬ್ದವು ಮಹಾಭಾರತದ ಭೀಷ್ಮಪರ್ವ ಮತ್ತು ಸಭಾಪರ್ವದಲ್ಲಿ ಮೊಟ್ಟಮೊದಲು ಉಲ್ಲೇಖಿಸಲ್ಪಟ್ಟಿದೆ. ತಮಿಳು ಗ್ರಂಥವಾದ 'ಶಿಲಪ್ಪಾದಿಗಾರಂ'ದಲ್ಲಿ ಇಲ್ಲಿನ ಜನರನ್ನು 'ಕರುನಾಡರ್' ಎಂದು ಉಲ್ಲೇಖಿಸಲಾಗಿದೆ. ವೆಲ್ವಿಕುಡಿ ತಾಮ್ರಪಟದಲ್ಲಿ 'ಕರುನಾಡಗನ್' ಎಂಬ ಹೆಸರಿನ ಪ್ರಸ್ತಾಪವಿದೆ.

ತಮಿಳು ಗ್ರಂಥಗಳಲ್ಲಿ ಲಭ್ಯವಾಗಿರುವ ಕರ್ನಾಡ, ಕರುನಾಡು, ಕಮ್ಮಿತ್ತುನಾಡು ಮುಂತಾದವುಗಳನ್ನು ಇತಿಹಾಸಕಾರರು ವಿವಿಧ ರೀತಿಯಿಂದ ಅರ್ಥೈಸಿದ್ದಾರೆ.

ಶಂ. ಬಾ. ಜೋಶಿಯವರ ಪ್ರಕಾರ ಕರ್ನಾಟಕ ಎಂಬ ಸಂಸ್ಕೃತ ರೂಪವು ಕನ್ನ + ನಾಡು=ಕನ್ನಾಡು ಎಂಬ ಪದದಿಂದ ಬಂದಿದ್ದು, ಕನ್ನ ಎಂಬ ಜನಾಂಗದ ನಾಡು ಅಥವಾ ಭೂಮಿಯೇ ಕನ್ನಾಡು.

ಡಾ. ದ. ರಾ. ಬೇಂದ್ರೆಯವರ ಪ್ರಕಾರ ಕನ್ನರು ಮತ್ತು ನಾಟರು ಎಂಬ ಎರಡು ಜನಾಂಗಗಳ ಹೆಸರು ಕೂಡಿ ಕನ್ನಾಟರ್ ಎಂದಾಗಿ ಅದರ ಸಂಸ್ಕೃತ ರೂಪವೇ ಕರ್ನಾಟಕವಾಯಿತು

ಕರ್ನಾಡು = ಕರಿ+ನಾಡು ಅಂದರೆ ಕಪ್ಪು ಮಣ್ಣಿನ ನಾಡು ಎಂದು ಅರ್ಥೈಸಲಾಗಿದೆ. ಕರುನಾಡು ಎಂದರೆ ಕರು + ನಾಡು, ಕರು ಎಂದರೆ ಎತ್ತರದ ನಾಡು ಅಥವಾ

ಭೂಮಿ. ಕೆಲವು ವಿದ್ವಾಂಸರು 'ಕಮ್ಮಿತ್ತುನಾಡು' ಅಂದರೆ ಸುವಾಸನೆಯುಕ್ತವಾದ ನಾಡು (ಶ್ರೀಗಂಧ) ಎಂದೂ ನಂಬಿದ್ದಾರೆ.

ಕರುನಾಡು ಎಂಬುದು ಭೂಮಿಯ ಹೆಸರಾಗಿಯೂ ಕರುನಾಡರ್ ಎಂಬುದು ಜನರ ಹೆಸರಾಗಿಯೂ ಬಳಕೆಯಾಗಿದ್ದು, ಸಾಮಾನ್ಯವಾಗಿ ಒಪ್ಪಿದ ವಿಚಾರವಾಗಿದೆ. ಆದರೆ ಇಂದಿನ ಮಟ್ಟಿಗೆ ಹೇಳಬೇಕೆಂದರೆ ಕನ್ನಡ ಎಂಬುದು ನಾಡು, ಜನ ಮತ್ತು ಭಾಷೆ ಎಲ್ಲವನ್ನು ಒಳಗೊಂಡಿದೆ. ಅವೆಲ್ಲಕ್ಕೂ ಪರ್ಯಾಯವಾಗಿ ನಿಂತಿದೆ – ಕರ್ನಾಟಕ, ಕನ್ನಡಿಗ ಮತ್ತು ಕನ್ನಡ.

ಕರ್ನಾಟಕದ ವ್ಯಾಪ್ತಿಯು ಅದನ್ನಾಳಿದ ರಾಜರ ಸಾಮರ್ಥ್ಯವನ್ನವಲಂಬಿಸಿ ವಿಶಾಲವೂ ಮತ್ತು ಸಂಕುಚಿತವೂ ಆದದ್ದಿದೆ. ಕಡಲತೀರಗಳು, ಪಶ್ಚಿಮ ಘಟ್ಟಗಳು (ಸಹ್ಯಾದ್ರಿ), ಮಲೆನಾಡು ಹಾಗು ಉತ್ತರ ಮತ್ತು ದಕ್ಷಿಣದ ಬಯಲುಗಳು ಕರ್ನಾಟಕದ ಭೌಗೋಳಿಕ ಲಕ್ಷಣಗಳಾಗಿವೆ. ಇವು ಇತಿಹಾಸವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಈ ಪ್ರದೇಶವನ್ನು ಆಳಿದ ಪ್ರಮುಖ ರಾಜಮನೆತನಗಳಾದ ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು, ಮುಂತಾದವರು ವಿಶೇಷವಾಗಿ ಕರ್ನಾಟಕ ಮತ್ತು ಸಾಮಾನ್ಯವಾಗಿ ಭಾರತದ ಇತಿಹಾಸವನ್ನು ರೂಪಿಸಿದ್ದಾರೆ. ಅವರು ಆಡಳಿತ, ಕಲೆ, ವಾಸ್ತುಶಿಲ್ಪ, ಶಿಕ್ಷಣ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ಶ್ರೀಮಂತ ಕೊಡುಗೆಗಳನ್ನು ನೀಡಿದ್ದಾರೆ.

ಕರ್ನಾಟಕವು ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿಯೂ ಮಹತ್ವದ ಪಾತ್ರ ವಹಿಸಿದೆ. ಇಲ್ಲಿ ಬ್ರಿಟಿಷ್ ವಿರೋಧಿ ಸಶಸ್ತ್ರ ಬಂಡಾಯಗಳು ನಡೆದಿವೆ. ಕನ್ನಡಿಗರು ಮಹಾತ್ಮ ಗಾಂಧೀಜಿಯವರನ್ನು ಮತ್ತು ರಾಷ್ಟ್ರೀಯ ಚಳವಳಿಯನ್ನು ಬೆಂಬಲಿಸಿದರು. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯು ಭಾರತೀಯ ಪರಂಪರೆಯ ಸಮಾನ ಮತ್ತು ಅವಿಭಾಜ್ಯ ಭಾಗವಾಗಿದೆ. ಕನ್ನಡ ಭಾಷೆಯು ಭಾರತದ ನಾಲ್ಕು ಶಾಸ್ತ್ರೀಯ ಭಾಷೆಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದ್ದು ಕನ್ನಡಿಗರಿಗೆಲ್ಲ ಹೆಮ್ಮೆಯ ವಿಷಯವಾಗಿದೆ.

ಭಾರತದ ಇತಿಹಾಸದ ಮೂಲಾಧಾರಗಳು

ಇತಿಹಾಸವು ಗತಕಾಲದ ಘಟನೆಗಳ ಮತ್ತು ಮಾನವನ ಸಾಧನೆಗಳ ಕಾಲಘಟ್ಟಗಳಲ್ಲಿನ ದಾಖಲೆಯಾಗಿದೆ. ಆದರೆ ಈ ಘಟನೆಗಳನ್ನು ಅಥವಾ ಸಾಧನೆಗಳನ್ನು ಪುನರಾವರ್ತಿಸುವುದಾಗಲಿ, ಪುನರ್‌ನಿರ್ಮಿಸುವುದಾಗಲಿ ಸಾಧ್ಯವಿಲ್ಲ. ಇತಿಹಾಸಕಾರರು ಲಭ್ಯ ಮೂಲಾಧಾರಗಳ ಸಹಾಯದಿಂದ ಗತವನ್ನು ಪುನರ್‌ರಚಿಸುವ ಪ್ರಯತ್ನ ಮಾಡುತ್ತಾರೆ. ಆದ್ದರಿಂದ 'ಮೂಲಾಧಾರಗಳಿಲ್ಲದೆ ಇತಿಹಾಸವಿಲ್ಲ'. ಮೂಲಾಧಾರಗಳ ಅನ್ವೇಷಣೆ, ಸಂಗ್ರಹ ಮತ್ತು ಅರ್ಥೈಸುವಿಕೆಯು ಇತಿಹಾಸಕಾರರ ಮುಂದಿರುವ ದೊಡ್ಡ ಸವಾಲುಗಳಾಗಿವೆ. ಮೂಲಾಧಾರಗಳಿಲ್ಲದೆ ಹೋದಲ್ಲಿ ಐತಿಹಾಸಿಕ ಘಟನೆಗಳು ಬರೀ ಊಹೆಗಳಾಗುತ್ತವೆ ಅಥವಾ ಕಾಲ್ಪನಿಕ ಕಥೆಗಳಾಗುತ್ತವೆ. ಭಾರತ ಮತ್ತು ಕರ್ನಾಟಕ ಇತಿಹಾಸಗಳ ಅಧ್ಯಯನಕ್ಕೆ ವಿವಿಧ ಮೂಲಾಧಾರಗಳು ಲಭ್ಯವಿವೆ. ಆದಾಗ್ಯೂ ಭಾರತೀಯರಲ್ಲಿ ಐತಿಹಾಸಿಕ ಪ್ರಜ್ಞೆಯ ಕೊರತೆ ಇರುವುದು ಸ್ವೀಕೃತ ಸತ್ಯವಾಗಿದೆ. ಭಾರತದ ಪ್ರಾಚೀನ ಭಾಷೆಗಳಾದ ಸಂಸ್ಕೃತ, ಪಾಲಿ, ಪ್ರಾಕೃತ ಮತ್ತು ಅನೇಕ ಪ್ರಾದೇಶಿಕ ಭಾಷೆಗಳ ಮತ್ತು ಖರೋಷ್ಠಿ ಹಾಗೂ ಬ್ರಾಹ್ಮಿ ಮುಂತಾದ ಲಿಪಿಗಳ ಪರಿಪೂರ್ಣ ಜ್ಞಾನವಿಲ್ಲದೆ ಭಾರತೀಯ ಇತಿಹಾಸವನ್ನು ರಚಿಸುವುದು ಇತಿಹಾಸಕಾರರಿಗೆ ತುಂಬಾ ಕಠಿಣವಾಗುತ್ತದೆ. ಭಾರತದ ಪರಂಪರೆ ಮತ್ತು ಸಂಸ್ಕೃತಿಯ ಆಳವಾದ ಜ್ಞಾನವೂ ಅವಶ್ಯಕವಾಗಿರುತ್ತದೆ.

ಇತಿಹಾಸದ ರಚನೆಗೆ ಲಭ್ಯ ಮೂಲಾಧಾರಗಳನ್ನು ಅವಲಂಬಿಸಿ ಇತಿಹಾಸವನ್ನು ಇತಿಹಾಸ ಪೂರ್ವಕಾಲ ಮತ್ತು ಇತಿಹಾಸ ಕಾಲವೆಂದು ವರ್ಗೀಕರಿಸುತ್ತೇವೆ. ಲಿಖಿತ ಮೂಲಾಧಾರಗಳು ಲಭ್ಯವಿಲ್ಲದ ಕಾಲವನ್ನು

ಇತಿಹಾಸ ಪೂರ್ವಕಾಲವೆಂದೂ ಮತ್ತು ಲಿಖಿತ ಮೂಲಾಧಾರಗಳು ಲಭ್ಯವಿರುವ ಕಾಲವನ್ನು ಇತಿಹಾಸ ಕಾಲವೆಂದೂ ಗುರುತಿಸುತ್ತೇವೆ.

ಇತಿಹಾಸದ ಮೂಲಾಧಾರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:
1. ಪ್ರಾಕ್ತನ ಅಥವಾ ಪುರಾತತ್ವ ಮೂಲಾಧಾರಗಳು ಮತ್ತು 2. ಸಾಹಿತ್ಯಾಧಾರಗಳು

1. ಪ್ರಾಕ್ತನ ಅಥವಾ ಪುರಾತತ್ವ ಮೂಲಾಧಾರಗಳು

ಪ್ರಾಕ್ತನ ಅಥವಾ ಪುರಾತತ್ವ ಮೂಲಾಧಾರಗಳು ಪ್ರಾಚೀನ ಮಾನವರ ಜೀವನ ಮತ್ತು ಚಟುವಟಿಕೆಗಳ ಅವಶೇಷಗಳಾಗಿವೆ. ಇವು ಉತ್ಖನನದ ಮೂಲಕ ದೊರೆತ ಮಾನವ ನಿರ್ಮಿತ ವಸ್ತುಗಳನ್ನು ಮತ್ತು ಆರಂಭಿಕ ಕಾಲದ ಶಿಲಾ ಸಾಧನಗಳನ್ನು ಒಳಗೊಂಡಿವೆ. ಲಿಖಿತ ಮೂಲಾಧಾರಗಳಿಲ್ಲದ ಸಂದರ್ಭಗಳಲ್ಲಿ ಇವು ಏಕಮಾತ್ರ ಆಧಾರಗಳಾಗುತ್ತವೆ. ಇನ್ನೂ ಅನೇಕ ಸಂದರ್ಭಗಳಲ್ಲಿ ಅವು ಲಿಖಿತ ದಾಖಲೆಗಳನ್ನು ಪ್ರಮಾಣೀಕರಿಸುತ್ತವೆ. ನಾಣ್ಯಗಳು, ಮುದ್ರೆಗಳು, ಆಭರಣಗಳು, ಸಲಕರಣೆಗಳು, ಶಾಸನಗಳು, ಕಟ್ಟಡಗಳ ಅವಶೇಷಗಳು, ಮಡಕೆಗಳು, ಗೃಹೋಪಯೋಗಿ ವಸ್ತುಗಳು, ಜೇಡಿಮಣ್ಣಿನ ಮೂರ್ತಿಗಳು, ಪಳಿಯುಳಿಕೆಗಳು, ಆಯುಧಗಳು, ಚಿತ್ರಗಳು, ಮುಂತಾದವುಗಳು ಪ್ರಮುಖ ಪುರಾತತ್ವ ಮೂಲಾಧಾರಗಳಾಗಿವೆ. ಇವು ಇತಿಹಾಸದ ಪುನರ್ ರಚನೆಗೆ ಅಮೂಲ್ಯ ಮತ್ತು ಉಪಯುಕ್ತ ಮಾಹಿತಿಯನ್ನು ನೀಡುತ್ತವೆ.

ಅ) ಉತ್ಖನನಗಳು:

ಮೂಲಾಧಾರಗಳನ್ನು ಹೆಕ್ಕಿ ತೆಗೆಯಲು ಕೈಗೊಳ್ಳುವ ವೈಜ್ಞಾನಿಕ ಭೂ ಅಗೆತವನ್ನು ಉತ್ಖನನ ಎಂದು ಕರೆಯುತ್ತೇವೆ. ಭಾರತದ ಇತಿಹಾಸಪೂರ್ವಕಾಲವನ್ನು ಉತ್ಖನನಗಳ ಆಧಾರದಿಂದಲೇ ಬರೆಯಲಾಗಿದೆ. ಸಿಂಧೂ ನಾಗರಿಕತೆಯ ಅಧ್ಯಯನಕ್ಕೆ ಇವು ಏಕಮಾತ್ರ ಆಧಾರಗಳಾಗಿವೆ. ಚಂದ್ರಗಿರಿ, ತಿರುನೆಲ್ವೇಲಿ, ಮಧುರೈ, ಅರ್ಕಮೇಡು ಮುಂತಾದ ಕಡೆಗಳಲ್ಲಿ ಕೈಗೊಂಡ ಉತ್ಖನನಗಳು ಶಿಲಾಯುಗ ಸಂಸ್ಕೃತಿಯ ಬಗ್ಗೆ ಮಾಹಿತಿ ನೀಡುತ್ತವೆ. ಅಂಕುರವಾಟ್ (ಕಾಂಬೋಡಿಯಾ), ಬೋರೋಬುದುರ್ (ಜಾವಾ), ತಕ್ಷಶಿಲಾ, ಗಯಾ, ಪಾಟಲಿಪುತ್ರ, ಹಂಪಿ ಮುಂತಾದೆಡೆಗಳಲ್ಲಿ ಕೈಗೊಂಡ ಉತ್ಖನನಗಳು ಅಂದಿನಕಾಲದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಚಾರಗಳ ಕುರಿತು ಮಾಹಿತಿ ನೀಡುತ್ತವೆ. ಉತ್ಖನನ ಸಂದರ್ಭದಲ್ಲಿ ದೊರೆತ ಪುರಾತತ್ವ ಪಳಿಯುಳಿಕೆಗಳನ್ನು ಕಾರ್ಬನ್ 14 ಮತ್ತು ಪೋಟ್ಯಾಷಿಯಂ ವಿಧಾನಗಳಿಂದ ವೈಜ್ಞಾನಿಕ ಪರೀಕ್ಷೆಗೊಳಪಡಿಸಿ ಅವುಗಳ ಕಾಲ ಮತ್ತು ಪ್ರಾಚೀನತೆಯನ್ನು ನಿರ್ಧರಿಸಲಾಗುತ್ತದೆ.

ಬ) ಸ್ಮಾರಕಗಳು:

ಇವು ಐತಿಹಾಸಿಕ ಮಹತ್ವದ ನಿವೇಶನಗಳು ಮತ್ತು ರಚನೆಗಳಾಗಿವೆ. ಕೋಟೆಗಳು, ಅರಮನೆಗಳು, ಗುಹೆಗಳು, ಗುಡಿಗಳು, ಬಸದಿಗಳು, ಮೂರ್ತಿಗಳು, ಸ್ತೂಪಗಳು, ಮುಂತಾದವು ಸ್ಮಾರಕಗಳ ಉದಾಹರಣೆಗಳಾಗಿವೆ. ಅಜಂತಾ, ಎಲ್ಲೋರಾ, ಖಜುರಾಹೋದಲ್ಲಿನ ಗುಹೆಗಳು, ಕೋನಾರ್ಕ್, ಬೇಲೂರು, ಹಳೇಬೀಡು, ಹಂಪಿ ಮುಂತಾದ ಸ್ಥಳಗಳಲ್ಲಿನ ಗುಡಿಗಳು, ವಿವಿಧ ಸ್ಥಳಗಳಲ್ಲಿ ದೊರೆತಿರುವ ಬುದ್ಧ, ಗೊಮ್ಮಟೇಶನ ಮೂರ್ತಿ ಮುಂತಾದವುಗಳು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತವೆ.

ಕ) ನಾಣ್ಯಗಳು:

ನಾಣ್ಯಗಳ ಅಧ್ಯಯನವು ನಾಣ್ಯಶಾಸ್ತ್ರವಾಗಿದೆ. ನಾಣ್ಯಗಳು ಕಾಲ, ರಾಜವಂಶ, ಆರ್ಥಿಕ ಸ್ಥಿತಿ, ಧರ್ಮ, ಲಿಪಿ ಮತ್ತು ಭಾಷೆಗಳನ್ನು ತಿಳಿಯಲು ಸಹಾಯ ಮಾಡುತ್ತವೆ. ಅಲ್ಲದೇ ಅಂದಿನ ಜನರ ಲೋಹವಿದ್ಯೆ, ಕಲಾಕೌಶಲ್ಯ, ಬಿರುದುಗಳು, ವ್ಯಾಪಾರ ಸಂಬಂಧಗಳು, ರಾಜ್ಯದ ಮೇರೆಗಳ ಬಗ್ಗೆಯೂ ಮಾಹಿತಿ ನೀಡುತ್ತವೆ. ಗುಪ್ತ, ಶಾತವಾಹನ, ಯಾದವ, ವಿಜಯನಗರ, ಮುಂತಾದ ರಾಜವಂಶಗಳ ನಾಣ್ಯಗಳು ಉಲ್ಲೇಖನೀಯವಾಗಿವೆ. ಒಂದು ದೇಶದಲ್ಲಿ ದೊರೆಯುವ ಇನ್ನೊಂದು ದೇಶಗಳ ನಾಣ್ಯಗಳು ಆ ಎರಡು ದೇಶಗಳ ನಡುವಿನ ವಾಣಿಜ್ಯ ಸಂಬಂಧವನ್ನು ತಿಳಿಸುತ್ತವೆ. ಭಾರತದ ನಾಣ್ಯಗಳು ಚಿನ್ನ, ಬೆಳ್ಳಿ, ತಾಮ್ರ, ಮುಂತಾದ ಲೋಹಗಳಿಂದ ತಯಾರಿಸಿದವುಗಳಾಗಿವೆ.

ಡ) ವರ್ಣಚಿತ್ರಗಳು:

ವಿವಿಧ ಕಾಲಗಳ ವರ್ಣಚಿತ್ರಗಳು ನಮಗೆ ಅಂದಿನ ಕಾಲದ ಸಾಮಾಜಿಕ, ಸಾಂಸ್ಕೃತಿಕ, ಮತ್ತು ಧಾರ್ಮಿಕ ವಿಷಯಗಳನ್ನು ಕಣ್ಣಿಗೆ ಕಟ್ಟುವಂತೆ ತಿಳಿಸುತ್ತವೆ. ಉದಾಹರಣೆಗೆ ಅಜಂತಾ ಗುಹೆಗಳಲ್ಲಿರುವ ಚಿತ್ರಗಳು ಆಳುವ ವರ್ಗ, ನೃತ್ಯ, ಉಡುಗೆಗಳು, ಸಾರ್ವಜನಿಕ ಮನರಂಜನಾ ಸಮಾವೇಶ, ಕೇಶಾಲಂಕಾರ, ಉತ್ಸವಗಳು, ಮುಂತಾದವುಗಳನ್ನು ತೋರ್ಪಡಿಸುತ್ತವೆ. ಕೆಲವು ಸಂದರ್ಭಗಳಲ್ಲಿ ಅವು ಐತಿಹಾಸಿಕ ಘಟನೆಗಳನ್ನು ನಿರೂಪಿಸಿತ್ತವೆ. ಉದಾಹರಣೆಗೆ ಅಜಂತಾ ಗುಹೆಯಲ್ಲಿ ಎರಡನೇ ಪುಲಿಕೇಶಿಯು ಎರಡನೇ ಖುಸ್ರೋವಿನ ದೂತನನ್ನು ಸ್ವಾಗತಿಸುವ ಚಿತ್ರವಿದೆ.

ಇ) ಶಾಸನಗಳು:

ಶಾಸನಗಳು ಇತಿಹಾಸ ರಚನೆಯಲ್ಲಿ ಅತ್ಯಂತ ಮೌಲ್ಯಯುತ, ನಂಬಲರ್ಹ, ಪ್ರಮಾಣಬದ್ಧ, ಮತ್ತು ನೇರ ಆಧಾರಗಳಾಗಿವೆ. ಅವು ಸಾಮಾನ್ಯವಾಗಿ ಸಮಕಾಲೀನವಾಗಿದ್ದು, ಘಟನೆಗಳಿಗೆ ನೇರ ಸಂಬಂಧ ಹೊಂದಿರುವುದರಿಂದ ಹೆಚ್ಚು ನಂಬಲರ್ಹವಾಗಿವೆ. ಶಾಸನಗಳನ್ನು ಶಿಲೆಗಳು, ಬಂಡೆಗಳು, ಗೋಡೆಗಳು, ಮಣ್ಣಿನಮುದ್ರಿಕೆಗಳು, ಕಬ್ಬಿಣ ಕಂಬಗಳ ಮೇಲೆ ಮತ್ತು ಕೆಲವನ್ನು ತಾಮ್ರಪಟಗಳ ಮೇಲೆ ಕೆತ್ತಲಾಗಿದೆ. ಭಾರತದಲ್ಲಿ ಈವರೆಗೆ 75,000 ಕ್ಕಿಂತಲೂ ಹೆಚ್ಚಿನ ಶಾಸನಗಳು ಲಭ್ಯವಾಗಿವೆ. ಅವು ಸಂಸ್ಕೃತ, ಪಾಲಿ, ಪ್ರಾಕೃತ, ತಮಿಳು, ತೆಲಗು, ಕನ್ನಡ, ಮುಂತಾದ ಭಾಷೆಗಳಲ್ಲಿ ಬರೆಯಲ್ಪಟ್ಟಿವೆ. ಅವು ವಿವಿಧ ಘಟನೆಗಳು, ಮಾರಾಟ ಪತ್ರಾದೇಶಗಳು, ದಾನಪತ್ರ, ಕಾಲಾನುಕ್ರಮ, ರಾಜರ ದಿಗ್ವಿಜಯ, ಮುಂತಾದವುಗಳನ್ನು ಕುರಿತಾದ ವಿವರಗಳನ್ನು ಹೊಂದಿರುತ್ತವೆ. ಶಾಸನಗಳ ಅಧ್ಯಯನವನ್ನು **'ಶಾಸನಶಾಸ್ತ್ರ'** ಎನ್ನುತ್ತಾರೆ.

ಸಿಂಧೂ ನಾಗರಿಕತೆಯ ಮುದ್ರಿಕೆಗಳ ಮೇಲಿರುವ ಲಿಪಿಯನ್ನು ಸರ್ವಸಮ್ಮತವಾಗುವಂತೆ ಇನ್ನೂ ಓದಲಾಗಿಲ್ಲ. ಆದ್ದರಿಂದ ಅಶೋಕನ ಶಾಸನಗಳನ್ನು ಪ್ರಾಚೀನತಮವೆಂದು ಪರಿಗಣಿಸಲಾಗಿದೆ. ಅವು ಧಾರ್ಮಿಕ ಲಕ್ಷಣ ಹೊಂದಿದ್ದು, ಅಂದಿನಕಾಲದ ಆಡಳಿತ ಮತ್ತು ಪ್ರಚಲಿತವಿದ್ದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಅಮೂಲ್ಯ ಮಾಹಿತಿಯನ್ನು ಕೊಡುತ್ತವೆ. ಒರಿಸ್ಸಾ ರಾಜ್ಯದ ಹಥಿಗುಂಫಾದಲ್ಲಿರುವ ಖಾರವೇಲ ರಾಜನ ಶಿಲಾಶಾಸನವು ಖಾರವೇಲನ ದಿಗ್ವಿಜಯಗಳ ಬಗ್ಗೆ ವಿವರ ನೀಡುತ್ತದೆ. ಹರಿಸೇನನಿಂದ ರಚಿತವಾದ ಅಲಹಾಬಾದ್ ಸ್ತಂಭ ಶಾಸನವು ಸಮುದ್ರಗುಪ್ತನ ಸಾಧನೆಗಳ ವಿವರಗಳನ್ನು ನೀಡುತ್ತದೆ. ರವಿಕೀರ್ತಿ ರಚಿಸಿದ ಐಹೊಳೆ ಶಾಸನ ಮತ್ತು ಕಾಕುತ್ಸವರ್ಮನ ಹಲ್ಮಿಡಿ ಶಾಸನಗಳು ಕರ್ನಾಟಕ ಇತಿಹಾಸದಲ್ಲಿ ತಮ್ಮದೇ ಆದ ಮಹತ್ವ ಹೊಂದಿವೆ.

2. ಸಾಹಿತ್ಯಾಧಾರಗಳು:

ಮರದ ತೊಗಟೆ, ತಾಳೆಎಲೆ, ಮತ್ತು ಕಾಲಾಂತರದಲ್ಲಿ ಕಾಗದದ ಮೇಲೆ ಬರೆದ ಹಳೆಯಕಾಲದ ದಾಖಲೆಗಳು ಅಥವಾ ಗ್ರಂಥಗಳನ್ನು ಸಾಹಿತ್ಯಾಧಾರಗಳೆಂದು ಕರೆಯುತ್ತೇವೆ.

ಸಾಹಿತ್ಯಾಧಾರಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸುತ್ತಾರೆ–ದೇಶೀಯ ಸಾಹಿತ್ಯ ಮತ್ತು ವಿದೇಶೀಯ ಬರವಣಿಗೆಗಳು

ಅ) ದೇಶೀಯ ಸಾಹಿತ್ಯ:

ದೇಶೀಯ ಲೇಖಕರು, ಬರಹಗಾರರು ಬರೆದ ಬರವಣಿಗೆ ಅಥವಾ ಗ್ರಂಥಗಳನ್ನು ದೇಶೀಯ ಸಾಹಿತ್ಯವೆಂದು ಕರೆಯುತ್ತೇವೆ. ಇದು ಧಾರ್ಮಿಕ ಹಾಗೂ ಲೌಕಿಕ ಸಾಹಿತ್ಯಗಳೆರಡನ್ನೂ ಒಳಗೊಂಡಿದೆ. ಇವು ವಿವಿಧ ಭಾರತೀಯ ಭಾಷೆಗಳಲ್ಲಿ ಕಂಡು ಬರುತ್ತವೆ. ವೈದಿಕ ಋಷಿಗಳು, ಜೈನ – ಬೌದ್ಧ ಸನ್ಯಾಸಿಗಳು ರಚಿಸಿದ ಧಾರ್ಮಿಕ ಸಾಹಿತ್ಯವು ಇತಿಹಾಸದ ಪ್ರಮುಖ ಮೂಲಾಧಾರಗಳಲ್ಲಿ ಒಂದಾಗಿದೆ. ವೈದಿಕ ಅಥವಾ ಬ್ರಾಹ್ಮಣ ಸಾಹಿತ್ಯವು – ವೇದಗಳು, ಬ್ರಾಹ್ಮಣಕಗಳು, ಅರಣ್ಯಕಗಳು, ಪುರಾಣಗಳು, ಮಹಾಕಾವ್ಯಗಳು, ಮುಂತಾದವುಗಳನ್ನು ಒಳಗೊಂಡಿವೆ. ಇವು ನಮಗೆ ಆರ್ಯರ ಸಮಾಜ, ಧರ್ಮ, ಆಧ್ಯಾತ್ಮ ಮತ್ತು ತತ್ವಜ್ಞಾನದ ಬಗ್ಗೆ ತಿಳುವಳಿಕೆ ನೀಡುತ್ತವೆ. ಬೌದ್ಧ ಸನ್ಯಾಸಿಗಳು ಪಾಲಿ ಭಾಷೆಯಲ್ಲಿ ಶ್ರೀಮಂತ ಸಾಹಿತ್ಯವನ್ನು ಅಭಿವೃದ್ಧಿಪಡಿಸಿದ್ದಾರೆ. ಮಹಾಜನಪದಗಳು, ಹಲವಾರು ನಗರಗಳು ಮತ್ತು ಮೌರ್ಯ ರಾಜರ ಬಗ್ಗೆ ಬೌದ್ಧ ತ್ರಿಪಿಟಕಗಳು ಮಾಹಿತಿಯನ್ನು ನೀಡುತ್ತವೆ. ಜೈನ ಮುನಿಗಳು ಕೂಡ ಪ್ರಾಕೃತ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ವಿಶೇಷವಾಗಿ ಕನ್ನಡದಲ್ಲಿ ಸಂಪದ್ಭರಿತ ಸಾಹಿತ್ಯವನ್ನು ರಚಿಸಿದ್ದಾರೆ. 'ಅಂಗ' ಮತ್ತು 'ಉಪಾಂಗ'ಗಳು ಜೈನ ಧರ್ಮದ ಧಾರ್ಮಿಕ ಗ್ರಂಥಗಳಾಗಿವೆ. ಜೈನ ವಿದ್ವಾಂಸರಾದ ಪ್ರಭುನಂದಿ, ವಿದ್ಯಾನಂದಿ, ಗುಣಭದ್ರ, ಅಜಿತಸೇನಾಚಾರ್ಯ, ಪೂಜ್ಯಪಾದ, ಮುಂತಾದವರು ತಮ್ಮ ಬರವಣಿಗೆಯಲ್ಲಿ ಸಾಮಾಜಿಕ, ರಾಜಕೀಯ ವಿಚಾರಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

ವಿಶಾಲ ಧಾರ್ಮಿಕ ಸಾಹಿತ್ಯವಲ್ಲದೆ ಜೀವನಚರಿತ್ರೆ, ನಾಟಕಗಳು, ಇತಿಹಾಸ, ರಾಜಕೀಯ, ವಿಜ್ಞಾನ, ಗಣಿತ, ಆಯುರ್ವೇದ, ಯೋಗ ಮುಂತಾದ ಲೌಕಿಕ ಸಾಹಿತ್ಯವನ್ನೂ ಭಾರತೀಯರು ರಚಿಸಿದ್ದಾರೆ. ಇವು ಆಗಿನ ಸಮಾಜದ ವಿವಿಧ ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತವೆ. ಅಶ್ವಘೋಷನ ಬುದ್ಧಚರಿತ, ಬಾಣಭಟ್ಟನ ಹರ್ಷಚರಿತ, ಚಾಂದ್‌ಬರ್ದಾಯಿ ಬರೆದ ಪೃಥ್ವೀರಾಜರಾಸೊ, ಬಿಲ್ಹಣನ ವಿಕ್ರಮಾಂಕದೇವಚರಿತ, ಕಲ್ಹಣನ ರಾಜತರಂಗಿಣಿ, ಕಾಳಿದಾಸನ ರಘುವಂಶ ಮತ್ತು ಮಾಳವಿಕಾಗ್ನಿಮಿತ್ರ, ವಿಶಾಖದತ್ತನ ಮುದ್ರಾರಾಕ್ಷಸ, ಕೌಟಿಲ್ಯನ ಅರ್ಥಶಾಸ್ತ್ರ, ಪಾಣಿನಿಯ ಮಹಾಭಾಷ್ಯ, ಪತಂಜಲಿಯ ಅಷ್ಟಾಂಗಯೋಗ ಮುಂತಾದವು ಅವರ ಕಾಲದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ವಿಜ್ಞಾನ ಮತ್ತು ಗಣಿತದ ಕೃತಿಗಳಾದ ಆರ್ಯಭಟನ ಸೂರ್ಯಸಿದ್ಧಾಂತ ಮತ್ತು ರೋಮಕಸಿದ್ಧಾಂತ, ಚರಕನ ಚರಕಸಂಹಿತೆ, ಸುಶ್ರುತನ ಸುಶ್ರುತಸಂಹಿತೆ ಮುಂತಾದವೂ ಕೂಡ ಗತಕಾಲದ ಪುನರ್ ರಚನೆಗೆ ಮಾಹಿತಿಯನ್ನು ಒದಗಿಸುತ್ತವೆ.

ಬ) ವಿದೇಶೀಯರ ಬರವಣಿಗೆಗಳು:

ಭಾರತದ ಫಲವತ್ತಾದ ಭೂಮಿ, ಸಂಪತ್ತು, ಬೌದ್ಧಿಕ ಮತ್ತು ತತ್ವಜ್ಞಾನದ ಸಾಧನೆಗಳು, ಅನೇಕ ವಿದೇಶಿ ವ್ಯಾಪಾರಿಗಳನ್ನು, ವಿದ್ಯಾರ್ಥಿಗಳನ್ನು, ಯಾತ್ರಿಕರನ್ನು, ತತ್ವಜ್ಞಾನಿಗಳನ್ನು ಮತ್ತು ಆಕ್ರಮಣಕಾರರನ್ನು ಆಕರ್ಷಿಸಿತು.

ಅವರಲ್ಲಿ ಅನೇಕರು ಭಾರತದ ಬಗ್ಗೆ ಅನೇಕ ದಾಖಲೆ, ಅನುಭವ ಹಾಗೂ ಅಭಿಪ್ರಾಯಗಳನ್ನು ಬಿಟ್ಟು ಹೋಗಿದ್ದಾರೆ. ಇಂತಹ ಉಲ್ಲೇಖಗಳು ತಮ್ಮದೇ ಆದ ಗುಣದೋಷಗಳನ್ನು ಹೊಂದಿವೆ. ಅವು ಪ್ರಾಥಮಿಕ ಆಧಾರಗಳಾಗಿದ್ದು, ಪ್ರಥಮ ಮಾಹಿತಿದಾರರ ವಿವರಗಳಾಗಿವೆ. ಇವು ಮಹತ್ವದ ಘಟನಾವಳಿಗಳ ನಡುವೆ ಇರುವ ಕಂದಕವನ್ನು ತುಂಬಲು ಸಹಾಯ ಮಾಡುತ್ತವೆ. ಆದರೆ ಕಡಿಮೆ ಅವಧಿಗೆ ವಾಸವಾಗಿದ್ದ ವಿದೇಶಿ ಯಾತ್ರಿಕರು ಮತ್ತು ವಿದ್ವಾಂಸರಿಗೆ ಭಾರತೀಯ ಸಂಸ್ಕೃತಿ ಮತ್ತು ರಾಜಕೀಯದ ಸಂಕೀರ್ಣತೆಗಳನ್ನು ತಿಳಿದುಕೊಳ್ಳುವುದು ಬಹಳ ಕಠಿಣವಾಗಿತ್ತು. ಗ್ರೀಕ್ ರಾಯಭಾರಿ ಮೆಗಾಸ್ತನಿಸ್‌ನು ತನ್ನ ಇಂಡಿಕಾ ಎಂಬ ಗ್ರಂಥದಲ್ಲಿ ಮೌರ್ಯರ ಕಾಲದ ದಕ್ಷಿಣ ಮತ್ತು ಉತ್ತರ ಭಾರತದ ಬಗ್ಗೆ ಅಮೂಲ್ಯ ಮಾಹಿತಿಯನ್ನು ನೀಡಿದ್ದಾನೆ. ಇನ್ನೊಬ್ಬ ಗ್ರೀಕ್ ಇತಿಹಾಸಕಾರನಾದ ಟಾಲೆಮಿಯು ತನ್ನ 'ಜಿಯಾಗ್ರಫಿ' ಎಂಬ ಗ್ರಂಥದಲ್ಲಿ ಪ್ರಾಚೀನ ಭಾರತದ ವಾಣಿಜ್ಯ ಸಂಬಂಧಗಳ ವಿವರ ನೀಡುತ್ತಾನೆ. ಅನಾಮಿಕ ಗ್ರೀಕ್ ಲೇಖಕನ 'ದಿ ಪೆರಿಪ್ಲಸ್ ಆಫ್ ಎರಿತ್ರಿಯನ್ ಸೀ' ಎಂಬ ಗ್ರಂಥವು ಭಾರತದ ಕಡಲು ತೀರದ ನಗರಗಳು, ರಾಜರು ಮತ್ತು ಉತ್ಪಾದನೆಗಳನ್ನು ಉಲ್ಲೇಖಿಸುತ್ತದೆ. ಪ್ಲಿನಿ ಎಂಬ ರೋಮನ್ ಇತಿಹಾಸಕಾರನ 'ನ್ಯಾಚುರಲ್ ಹಿಸ್ಟೋರಿಯಾ' ಎಂಬ ಗ್ರಂಥವು ಭಾರತ–ರೋಮ್‌ಗಳ ಸಂಬಂಧ ಮತ್ತು ಅಂದಿನ ಭಾರತದ ರಾಜಕೀಯ ಸ್ಥಿತಿಯ ಕುರಿತು ತಿಳಿಸುತ್ತದೆ.

ಚೀನಾದ ಯಾತ್ರಿಕತ್ರಯರಾದ ಫಾಹಿಯಾನ್, ಹ್ಯುಯೆನ್–ತ್ಸಾಂಗ್ ಮತ್ತು ಇತ್ಸಿಂಗ್‌ರು ಬಹಳಷ್ಟು ಉಪಯುಕ್ತ ಮಾಹಿತಿಗಳನ್ನು ಒದಗಿಸಿದ್ದಾರೆ. ಸಾ.ಶ.5ನೇ ಶತಮಾನದ ಆರಂಭದಲ್ಲಿ ಭೇಟಿ ಕೊಟ್ಟ ಫಾಹೀಯಾನ್‌ನು ಭಾರತದ ಅನೇಕ ನಗರಗಳ ಬಗ್ಗೆ ಮತ್ತು ಅಶೋಕನ ಅರಮನೆಯ ಬಗ್ಗೆ ಕಣ್ಣಿಗೆ ಕಟ್ಟುವಂತಹ ವಿವರಣೆಯನ್ನು ನೀಡಿದ್ದಾನೆ. ಅವನು ಗುಪ್ತರ ಆಡಳಿತದ ಬಗ್ಗೆಯೂ ಮಾಹಿತಿ ನೀಡಿದ್ದಾನೆ. ಹ್ಯುಯೆನ್ ತ್ಸಾಂಗ್‌ನು ಸಾ.ಶ 7ನೇ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ್ದನು ಮತ್ತು ಸುಮಾರು ಹದಿನೆಂಟು ವರ್ಷಗಳ ಕಾಲ ವ್ಯಾಪಕ ಪ್ರವಾಸ ಕೈಗೊಂಡನು. ಇವನು ತನ್ನ ಗ್ರಂಥವಾದ 'ಸಿಯುಕಿ' ಯಲ್ಲಿ ಅಮೂಲ್ಯ ಮಾಹಿತಿಯನ್ನು ನೀಡಿದ್ದಾನೆ. ಇವನು ಹರ್ಷವರ್ಧನ ಮತ್ತು ಇಮ್ಮಡಿ ಪುಲಕೇಶಿಯರ ಆಸ್ಥಾನಗಳಿಗೆ ಭೇಟಿ ನೀಡಿದ್ದನು. ಅಂದಿನ ಕಾಲದ ಧರ್ಮ, ಶಿಕ್ಷಣ, ಸಮಾಜ ಮತ್ತು ಆಡಳಿತದ ಬಗ್ಗೆ ಉಜ್ವಲವಾದ ಚಿತ್ರಣ ನೀಡಿದ್ದಾನೆ. ನರ್ಮದಾ ಯುದ್ಧ ಮತ್ತು ಹರ್ಷವರ್ಧನನ ಸೋಲಿನ ಬಗ್ಗೆಯೂ ದಾಖಲಿಸಿದ್ದಾನೆ. ಇತ್ಸಿಂಗ್‌ನು ಸಾ ಶ ಏಳನೇ ಶತಮಾನದ ಕೊನೆಯ ದಶಕದಲ್ಲಿ ಭಾರತಕ್ಕೆ ಭೇಟಿ ನೀಡಿದ್ದನು. ಈತ ಭಾರತದ ವ್ಯಾಪಕ ಪ್ರವಾಸ ಕೈಗೊಂಡು ಇಲ್ಲಿನ ನಗರಗಳಾದ ರಾಜಗೃಹ, ಕಾಶಿ ಮತ್ತು ನಳಂದ ಕುರಿತು ಮಾಹಿತಿ ನೀಡಿದ್ದಾನೆ.

ಮುಸ್ಲಿಂ ಬರಹಗಾರರು ಮತ್ತು ಇತಿಹಾಸಕಾರರೂ ಸಹ ಅಮೂಲ್ಯ ಮಾಹಿತಿಯನ್ನು ಕೊಟ್ಟಿದ್ದಾರೆ. ಫಿರದೋಷಿಯ 'ಶಹನಾಮಾ', ಬಾಬರ್‌ನ 'ಬಾಬರ್‌ನಾಮಾ', ಜಹಂಗೀರನ 'ಜಹಂಗೀರ್‌ನಾಮಾ', ಅಬುಲ್ ಫಜಲ್‌ನ 'ಅಕ್ಬರ್ ನಾಮಾ', ಮುಂತಾದವು ಪ್ರಮುಖ ಬರಹಗಳಾಗಿವೆ. ಅರಬ್ ಪ್ರವಾಸಿಗರಾದ ಸುಲೈಮಾನ್, ಆಲ್ಬರುನಿ, ಮತ್ತು ಇಬ್ನಬತೂತರೂ ಭಾರತದ ಇತಿಹಾಸದ ಬಗ್ಗೆ ದಾಖಲೆ ಬಿಟ್ಟು ಹೋಗಿದ್ದಾರೆ. ಇಟಲಿಯ ನಿಕೋಲೋ ಕಾಂಟಿ, ಪರ್ಷಿಯಾದ ಅಬ್ದುಲ್ ರಜಾಕ್, ಪೋರ್ಚುಗಲ್‌ನ ಬಾರ್ಬೋಸಾ ಮತ್ತು ಡೋಮಿಂಗೋ ಪೇಸ್, ರಷ್ಯಾದ ನಿಕಿಟಿನ್ ಮುಂತಾದವರು ವಿಜಯನಗರ ಮತ್ತು ಬಹಮನಿಗಳ ಇತಿಹಾಸದ ಬಗ್ಗೆ ಸಾಕಷ್ಟು ಮಾಹಿತಿ ನೀಡಿದ್ದಾರೆ.

ಚಟುವಟಿಕೆ

ಭಾರತದ ವಿವಿಧ ಹೆಸರುಗಳ ಮೂಲದ ಬಗೆಗಿನ ಪೌರಾಣಿಕ ಉಲ್ಲೇಖಗಳನ್ನು ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. 'ಇಂಡಿಯಾ' ಎಂಬ ಪದವು ಯಾವ ಭಾಷೆಯಿಂದ ಬಂದಿದೆ?
2. ಪ್ರಾಚೀನ ಕರ್ನಾಟಕದ ಮೇರೆ ಉಲ್ಲೇಖಿಸುವ ಗ್ರಂಥವನ್ನು ಹೆಸರಿಸಿ.
3. ನಾಣ್ಯಶಾಸ್ತ್ರ ಎಂದರೇನು?
4. ಉತ್ಖನನ ಎಂದರೇನು?
5. ಬುದ್ಧಚರಿತ'ವನ್ನು ಬರೆದವರು ಯಾರು?
6. ಪ್ಲಿನಿಯ ಪ್ರಸಿದ್ಧ ಗ್ರಂಥ ಯಾವುದು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ಪದ ಅಥವಾ ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತವನ್ನು ಪಶ್ಚಿಮದೊಂದಿಗೆ ಸಂಪರ್ಕಿಸುವ ಯಾವುದಾದರು ಎರಡು ಕಣಿವೆಗಳನ್ನು ಹೆಸರಿಸಿ.
2. ವಿಷ್ಣುಪುರಾಣದ ಪ್ರಕಾರ ಭಾರತದ ವ್ಯಾಪ್ತಿ ಏನು?
3. ಭಾರತದ ಯಾವುದಾದರು ಎರಡು ಹೆಸರುಗಳನ್ನು ತಿಳಿಸಿರಿ.
4. ಭಾರತದ ಯಾವುದಾದರೂ ಎರಡು ನೈಸರ್ಗಿಕ ಲಕ್ಷಣಗಳನ್ನು ತಿಳಿಸಿ.
5. ಭಾರತದ ಯಾವುದಾದರೂ ಎರಡು ಪರ್ವತಗಳನ್ನು ಹೆಸರಿಸಿ.
6. ಭಾರತದಲ್ಲಿ ಉದಯಿಸಿರುವ ಯಾವುದಾದರೂ ಎರಡು ಪ್ರಮುಖ ಧರ್ಮಗಳನ್ನು ತಿಳಿಸಿ.
7. ವಿಶ್ವಪರಂಪರೆ ಪಟ್ಟಿಯಲ್ಲಿರುವ ಭಾರತದ ಯಾವುದಾದರು ಎರಡು ಐತಿಹಾಸಿಕ ತಾಣಗಳನ್ನು ತಿಳಿಸಿ.
8. ಪ್ರಾಚೀನ ಭಾರತದ ಯಾವುದಾದರೂ ಎರಡು ವಿಶ್ವವಿದ್ಯಾಲಯಗಳನ್ನು ಹೆಸರಿಸಿ
9. ಕವಿರಾಜಮಾರ್ಗದ ಪ್ರಕಾರ ಕರ್ನಾಟಕದ ವಿಸ್ತಾರವೇನು?
10. ಕರ್ನಾಟಕವನ್ನು ಆಳಿದ ಯಾವುದಾದರೂ ಎರಡು ಪ್ರಮುಖ ರಾಜಮನೆತನಗಳನ್ನು ಹೆಸರಿಸಿ.
11. ಕರ್ನಾಟಕದ ಯಾವುದಾದರೂ ಎರಡು ಭೌಗೋಳಿಕ ಲಕ್ಷಣಗಳನ್ನು ಬರೆಯಿರಿ.
12. ಆಧಾರವಿಲ್ಲದೆ ಇತಿಹಾಸವಿಲ್ಲ. ಏಕೆ?
13. ಇತಿಹಾಸ ಮತ್ತು ಇತಿಹಾಸ ಪೂರ್ವಕಾಲಗಳ ನಡುವಿನ ವ್ಯತ್ಯಾಸವೇನು?
14. ಇತಿಹಾಸ ರಚನೆಯಲ್ಲಿ ನಾಣ್ಯಗಳಿಂದಾಗುವ ಯಾವುದಾದರು ಎರಡು ಉಪಯೋಗಗಳನ್ನು ತಿಳಿಸಿ.
15. ಇತಿಹಾಸ ರಚನೆಯಲ್ಲಿ ಶಿಲಾಶಾಸನಗಳು ಅತ್ಯಂತ ನಂಬಲಾರ್ಹ ಆಧಾರಗಳಾಗಿರುವುದೇಕೆ?

16. ಪ್ರಾಕ್ತನ ಅಥವಾ ಪುರಾತತ್ವ ಆಧಾರಗಳು ಎಂದರೇನು?
17. ಸಾಹಿತ್ಯಾಧಾರದ ಎರಡು ಪ್ರಮುಖ ಪ್ರಕಾರಗಳನ್ನು ತಿಳಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದ ಇತಿಹಾಸದ ಮೇಲೆ ಭೂಗೋಳದ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಭಾರತ ಇತಿಹಾಸದ ವಿಶಿಷ್ಟ ಲಕ್ಷಣಗಳನ್ನು ವಿವರಿಸಿ
3. 'ವೈವಿಧ್ಯತೆಯಲ್ಲಿ ಏಕತೆ'–ಭಾರತದ ಪ್ರಮುಖ ಲಕ್ಷಣ. ವಿವರಿಸಿ.
4. ಭಾರತ ಇತಿಹಾಸ ರಚನೆಗೆ ವಿದೇಶಿ ಬರಹಗಾರರ ಕೊಡುಗೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
5. ಭಾರತದ ಇತಿಹಾಸ ರಚನೆಗೆ ಪ್ರಾಕ್ತನ ಆಧಾರಗಳ ಮಹತ್ವವನ್ನು ಕುರಿತು ಬರೆಯಿರಿ.

❋ ❋ ❋ ❋

ಅಧ್ಯಾಯ – 2

ಶಿಲಾಯುಗ ಮತ್ತು ಲೋಹಗಳ ಯುಗ (ಇತಿಹಾಸ ಪೂರ್ವ ಕಾಲ)

ಭಾರತದಲ್ಲಿ ಅತಿ ಪುರಾತನ ಕಾಲದಿಂದ ಮಾನವರು ವಾಸಿಸುತ್ತಿದ್ದಾರೆ. ಅವರು ಉಪಯೋಗಿಸಿದ ಒರಟು ಸಲಕರಣೆಗಳ ಆಧಾರದಿಂದಲೇ ಅವರ ಇತಿಹಾಸವನ್ನು ರಚಿಸುತ್ತೇವೆ. ಇದು ಇತಿಹಾಸ ಪೂರ್ವ ಕಾಲವೆಂದು ಗುರುತಿಸಲ್ಪಡುತ್ತದೆ. ಭಾರತವು ಮಾನವರ ಆರಂಭಿಕ ವಾಸಸ್ಥಾನಗಳಲ್ಲಿ ಒಂದಾಗಿದೆ. ಆದರೆ ಭಾರತದ ಮೊದಲ ಮಾನವನ ಉಗಮದ ನಿಶ್ಚಿತ ತಾಣದ ಬಗ್ಗೆ ಇತಿಹಾಸಕಾರರಲ್ಲಿ ಏಕಾಭಿಪ್ರಾಯವಿಲ್ಲ. ಕೆಲವು ಇತಿಹಾಸಕಾರರು ಹಿಮಾಲಯದ ಸಿವಾಲಿಕ್ ಗುಡ್ಡಗಳೇ ಮಾನವನು ವಾಸಿಸಿದ ಪ್ರಥಮ ತಾಣಗಳೆಂತಲೂ ಮತ್ತು ಕೆಲವರು ದಕ್ಷಿಣ ಭಾರತದ ದಂಡಕಾರಣ್ಯ (ಕರ್ನಾಟಕದ ಭಾಗ) ಇವರ ವಾಸಸ್ಥಾನವೆಂದು ನಂಬುತ್ತಾರೆ.

ಭಾರತದಲ್ಲಿ ಅಸ್ತಿತ್ವದಲ್ಲಿರುವ ನಿಗ್ರೋ, ಮಂಗೋಲಿಯನ್, ದ್ರವಿಡಿಯನ್, ಆಲ್ಪಾಯಿನ್, ಮುಂತಾದ ವಿವಿಧ ಜನಾಂಗಗಳು ಮಾನವನ ಉಗಮದ ವಿಷಯವನ್ನು ಜಟಿಲಗೊಳಿಸುತ್ತವೆ. ಭಾರತದ ಇಂದಿನ ಜನಸಂಖ್ಯೆಯು ಹಲವು ಜನಾಂಗಗಳ ಮಿಶ್ರಣದ ಫಲವಾಗಿದೆ. ದಕ್ಷಿಣ ಭಾರತವೇ ಮಾನವನ ಮೊದಲ ವಾಸಸ್ಥಾನ ಎಂಬುದು ಸ್ವೀಕೃತ ವಿಚಾರವಾಗಿದೆ. ಸುಮಾರು 1,50,000 ವರ್ಷಗಳ ಹಿಂದೆ ಮಾನವ ಈ ಭೂಮಿಯ ಮೇಲೆ ನಡೆದಾಡಿದ ಎಂದು ನಂಬಲಾಗಿದೆ.

ಶಿಲಾಯುಧಗಳು ಮತ್ತು ಲೋಹಗಳ ಬಳಕೆಯನ್ನವಲಂಬಿಸಿದ ಇತಿಹಾಸಪೂರ್ವ ಕಾಲವನ್ನು ಆರು ಯುಗಗಳಲ್ಲಿ ವಿಂಗಡಿಸಲಾಗಿದೆ. ಅವು 1. ಹಳೆಯ ಶಿಲಾಯುಗ 2. ಮಧ್ಯ ಶಿಲಾಯುಗ 3. ನವ ಶಿಲಾಯುಗ 4. ತಾಮ್ರದ ಯುಗ 5. ಕಂಚಿನ ಯುಗ ಮತ್ತು 6. ಕಬ್ಬಿಣ ಯುಗ. ಇತಿಹಾಸಕಾರರಲ್ಲಿ ಈ ಯುಗಗಳ ನಿಶ್ಚಿತ ಸಮಯ ಅಥವಾ ಅವಧಿಯ ಬಗ್ಗೆಯೂ ಭಿನ್ನಾಭಿಪ್ರಾಯಗಳಿವೆ.

ಹಳೆಯ ಶಿಲಾಯುಗ:

ಇದನ್ನು ಇಂಗ್ಲೀಷ್‌ನಲ್ಲಿ ಪ್ಯಾಲಿಯೋಲಿಥಿಕ್ ಏಜ್ ಎಂದು ಕರೆಯುತ್ತಾರೆ. ಪ್ಯಾಲಿಯೋಲಿಥಿಕ್ ಎಂಬ ಪದವು ಗ್ರೀಕ್ ಪದಗಳಾದ **'ಪ್ಯಾಲಿಯೋ'** (ಹಳೆಯ) ಮತ್ತು **'ಲಿಥಿಕ್'** (ಶಿಲೆ) ಎಂಬ ಪದಗಳಿಂದ ಹುಟ್ಟಿದೆ. ಇದನ್ನು ಹಳೆಯ ಶಿಲಾಯುಗ ಎಂದು ಕರೆಯಲಾಗಿದೆ. ಈ ಯುಗವು ಸಾ.ಶ.ಪೂ 40,000 ದಿಂದ 10,000 ವರೆಗಿತ್ತು. ಈ ಕಾಲದ ಮಾನವ ಒರಟು ಮತ್ತು ಅಲಂಕರಿಸದ ಕಲ್ಲುಗಳನ್ನು ಕಟ್ಟಿಗೆ ಅಥವಾ ಎಲುಬಿನ ಹಿಡಿಕೆ ಬಳಸಿ ಉಪಯೋಗಿಸುತ್ತಿದ್ದನು. ಈ ಕಾಲದ ಜನರು **'ಕ್ವಾರ್ಟ್‌ಜೈಟ್'** ಎಂಬ ಅತ್ಯಂತ ಗಡುಸಾದ ಕಲ್ಲನ್ನು ಬಳಸುತ್ತಿದ್ದುದರಿಂದ ಇವರನ್ನು 'ಕ್ವಾರ್ಟ್‌ಜೈಟ್‌ಮೆನ್' ಎಂದು ಕರೆಯುತ್ತಾರೆ. ಇವರಿಗೆ ಬೆಂಕಿ, ಮಡಕೆ, ಮತ್ತು ಕೃಷಿಯ ಪರಿಕಲ್ಪನೆ ಇರಲಿಲ್ಲ. ಇವರು ಬಹುತೇಕ ಬೇಟೆಯಾಡಿಯೇ ಬದುಕುತ್ತಿದ್ದರು.

ಇವರು ನಿಗ್ರೋ ಜನಾಂಗಕ್ಕೆ ಸೇರಿದವರಾಗಿದ್ದರೆಂದು ನಂಬಲಾಗಿದೆ. ಇವರ ಎತ್ತರ ಕಡಿಮೆ ಇದ್ದು, ಕಪ್ಪು ಚರ್ಮ, ಒರಟು ಕೂದಲು ಮತ್ತು ಚಪ್ಪಟೆ ಮೂಗನ್ನು ಹೊಂದಿದ್ದರು.

ಈಗಿನ ಪಾಕಿಸ್ತಾನದ ಸೋಹನ್ ನದಿ ಕಣಿವೆ, ನರ್ಮದಾ, ತುಂಗಭದ್ರಾ ಕಣಿವೆಗಳು, ಮಧ್ಯಪ್ರದೇಶದ ಭೂಪಾಲ ಮತ್ತು ಛೋಟಾನಾಗ್ಪುರ ಪ್ರದೇಶಗಳು, ತಮಿಳುನಾಡಿನ ತಿರುನೆಲ್‌ವೇಲಿ, ಆಂಧ್ರಪ್ರದೇಶದ ಕರ್ನೂಲ್, ಉತ್ತರಪ್ರದೇಶದ ಬೇಲಾನ ಗುಹೆಗಳು, ಕರ್ನಾಟಕದ ಬೆಳಗಾವಿ ಜಿಲ್ಲೆಯ ಘಟಪ್ರಭಾ ಕಣಿವೆ, ರಾಯಚೂರು ಜಿಲ್ಲೆಯ ಲಿಂಗಸಗೂರುಗಳು ಭಾರತದಲ್ಲಿಯ ಹಳೆಯ ಶಿಲಾಯುಗದ ತಾಣಗಳಾಗಿವೆ.

2 ಮಧ್ಯ ಶಿಲಾಯುಗ:

ಗ್ರೀಕ್ ಭಾಷೆಯಲ್ಲಿ **'ಮೆಸೋ'** ಎಂದರೆ ಮಧ್ಯ, **'ಲಿಥಿಕ್'** ಎಂದರೆ ಶಿಲೆ. ಮೆಸೋಲಿಥಿಕ್ ಏಜ್ ಎಂದರೆ ಮಧ್ಯ ಶಿಲಾಯುಗ ಎಂದಾಗುತ್ತದೆ. ಈ ಯುಗವು ಹಳೆ ಮತ್ತು ಹೊಸ ಶಿಲಾಯುಗದ ಮಧ್ಯದಲ್ಲಿ ಬರುತ್ತದೆ. ನಮಗೆ ಈ ಯುಗದ ಅವಧಿ ಮತ್ತು ಸಮಯದ ಬಗ್ಗೆ ಖಚಿತ ಮಾಹಿತಿ ಇಲ್ಲ. ಆದರೂ ಸಾಮಾನ್ಯವಾಗಿ ಸಾ.ಶ.ಪೂ 10,000 ದಿಂದ 8000ದ ಮಧ್ಯದಲ್ಲಿ ಇತ್ತೆಂದು ಒಪ್ಪಲಾಗಿದೆ. ಹಳೆಯ ಶಿಲಾಯುಗಕ್ಕೆ ಹೋಲಿಸಿದರೆ ಈ ಅವಧಿಯ ಸಲಕರಣೆಗಳು ಚಿಕ್ಕವಾಗಿದ್ದವು. ಅವು ಸಾಮಾನ್ಯವಾಗಿ ಅರ್ಧ ಅಂಗುಲದಿಂದ ಒಂದು ಅಂಗುಲದಷ್ಟಾಗಿದ್ದವು. ಮಾನವರು ವಿಶಿಷ್ಠ ಆಕಾರ ಹೊಂದಿದ, ನುಣುಪಾದ, ಮತ್ತು ರಂಧ್ರವುಳ್ಳ ಆಯುಧಗಳನ್ನು ತಯಾರಿಸುತ್ತಿದ್ದರು. ಮಧ್ಯ ಶಿಲಾಯುಗದ ಮಾನವನು ಬೇಟೆಗಾರನು, ಸಂಗ್ರಾಹಕನು ಮತ್ತು ಮೀನುಗಾರನು ಆಗಿದ್ದನು. ಅವನಿಗೆ ಬೆಂಕಿಯ ಉಪಯೋಗವೂ ತಿಳಿದಿತ್ತು. ಮಡಕೆಗಳ ತಯಾರಿಕೆಯನ್ನು ಕಲಿತನು, ಪ್ರಾಣಿ ಸಾಕಲು ಪ್ರಾರಂಭಿಸಿದನು ಮತ್ತು ಸತ್ತವರನ್ನು ಹೂಳುತ್ತಿದ್ದನು. ರಾಜಾಸ್ಥಾನದ ಅಜ್ಮೀರ, ಗುಜರಾತಿನ ಸಬರಮತಿ, ಮಹಾರಾಷ್ಟ್ರದ ಅಹಮದ್‌ನಗರ, ಕರ್ನಾಟಕದ ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ಮತ್ತು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಭಾರತದಲ್ಲಿ ಮಧ್ಯಶಿಲಾಯುಗದ ಪ್ರಮುಖ ತಾಣಗಳಾಗಿವೆ.

3. ಹೊಸ ಶಿಲಾಯುಗ:

'ನಿಯೋಲಿಥಿಕ್' ಎಂಬ ಶಬ್ದವು **'ನಿಯೋ'** ಎಂದರೆ ಹೊಸ ಮತ್ತು **'ಲಿಥಿಕ್'** ಎಂದರೆ ಶಿಲೆ ಎಂಬ ಗ್ರೀಕ್ ಪದಗಳಿಂದ ಬಂದಿದೆ. ಆದ್ದರಿಂದ ನಿಯೋಲಿಥಿಕ್ ಎಂದರೆ ಹೊಸ ಶಿಲಾಯುಗ ಎಂದರ್ಥ. ಸಾಮಾನ್ಯವಾಗಿ ಇದು ಸಾ.ಶ.ಪೂ 8000 ದಿಂದ 4000ದ ವರೆಗಿತ್ತೆಂದು ನಂಬಲಾಗಿದೆ. ಈ ಯುಗದ ಮಾನವ ಕ್ವಾರ್ಟ್ಜ್‌ಜೈಟ್ ಕಲ್ಲಿನೊಂದಿಗೆ ಬೇರೆ ಬೇರೆ ಕಲ್ಲುಗಳನ್ನು ಬಳಸಿದ. ಆಯುಧಗಳನ್ನು ಕೆತ್ತಿ, ಮಸೆದು, ಸಂದುಗೆರೆ ಹೊಡೆದು, ನುಣುಪುಗೊಳಿಸಲಾಗುತ್ತಿತ್ತು. ಅವುಗಳು ಉಪಯೋಗಕ್ಕೆ ತಕ್ಕಂತೆ ಬೇರೆ ಬೇರೆ ಆಕಾರ ಹೊಂದಿದ್ದವು.

ಈ ಯುಗದ ಮಾನವ ಉಳುಮೆಯನ್ನು ಕಲಿತ. ಆಕಳು, ಕುರಿ, ಮೇಕೆ ಮುಂತಾದ ವಿವಿಧ ಪ್ರಾಣಿಗಳನ್ನು ಸಾಕಲು ಪ್ರಾರಂಭಿಸಿದ. ಈ ಕಾಲದ ಮಾನವರು ಗುಹೆಗಳಲ್ಲಿ ವಾಸಿಸುತ್ತಿದ್ದು, ಅವುಗಳನ್ನು ಚಿತ್ರಗಳಿಂದ ಮತ್ತು ಕೆತ್ತನೆಗಳಿಂದ ಶೃಂಗರಿಸುತ್ತಿದ್ದರು. ಬೇಟೆಯ ಮತ್ತು ನೃತ್ಯದ ದೃಶ್ಯಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಇವರು ತಮ್ಮ ಮಡಕೆಗಳನ್ನು ಅಲಂಕರಿಸುತ್ತಿದ್ದರು ಮತ್ತು ಸಮುದ್ರದಲ್ಲಿ ತೇಲುವ ದೋಣಿಗಳನ್ನು ನಿರ್ಮಿಸುತ್ತಿದ್ದರು. ಅವರಿಗೆ ನೇಕಾರಿಕೆ ತಿಳಿದಿತ್ತು. ಉಣ್ಣೆ ಮತ್ತು ಹತ್ತಿಯನ್ನು ಬಳಸಿ ಬಟ್ಟೆಗಳನ್ನು ಉತ್ಪಾದಿಸಿ ಬಳಸುತ್ತಿದ್ದರು.

ಹಣ್ಣುಗಳು, ತರಕಾರಿಗಳು, ಗೆಣಸು, ಪ್ರಾಣಿಗಳ ಮಾಂಸ, ಮೀನು, ಹೈನು, ಮುಂತಾದವು ಅವರ ಆಹಾರಗಳಾಗಿದ್ದವು. ಅಡುಗೆ ಮಾಡುವುದು ಅವರಿಗೆ ತಿಳಿದಿತ್ತು. ಇವರು ಉಂಗುರ, ಬಳೆಗಳು, ತೋಳ್ಬಂದಿಗಳು, ಮಣಿಗಳು, ಮುಂತಾದ ಆಭರಣಗಳನ್ನು ಬಳಸುತ್ತಿದ್ದರು.

ದೇಶದ ವಿವಿಧ ಭಾಗಗಳಲ್ಲಿನ ನವಶಿಲಾಯುಗದ ಮಾನವರ ಜೀವನ ಶೈಲಿಯು ಭೌಗೋಳಿಕ ಸ್ಥಿತಿಗಳನ್ನು ಆಧರಿಸಿ ಭಿನ್ನತೆಯಿಂದ ಕೂಡಿತ್ತು. ಇವರು ಪೂರ್ವಜರನ್ನು ಮತ್ತು ಆತ್ಮಗಳನ್ನು ಪೂಜಿಸುತ್ತಿದ್ದರು. ಸತ್ತವರನ್ನು ಸುಟ್ಟು ಬೂದಿಯನ್ನು ಸಂರಕ್ಷಿಸಿಡುತ್ತಿದ್ದರು. ನರ ಬಲಿ ಪದ್ಧತಿಯು ಆಚರಣೆಯಲ್ಲಿತ್ತು. ಉತ್ಖನನಗಳ ಸಂದರ್ಭದಲ್ಲಿ ಮಾನವರ ಅನೇಕ ತಲೆಬುರಡೆಗಳು ಪತ್ತೆಯಾಗಿವೆ.

ಕರ್ನಾಟಕದ ಮಸ್ಕಿ, ರಾಯಚೂರು ದೋ–ಆಬ್, ಬಳ್ಳಾರಿ ಮತ್ತು ಕಾವೇರಿ ಕಣಿವೆ ಪ್ರದೇಶಗಳು, ತಮಿಳುನಾಡಿನ ತಿರುನಲ್‌ವೇಲಿ ಮತ್ತು ಸೇಲಂ, ಆಂಧ್ರಪ್ರದೇಶದ ಕರ್ನೂಲ್ ಮತ್ತು ಹೈದರಾಬಾದ್, ಗುಜರಾತಿನ ಕಾಥೇವಾರ, ಪಾಕಿಸ್ತಾನದ ಸಿಂಧ್ ಮತ್ತು ಬಲೂಚಿಸ್ತಾನ ಮುಂತಾದೆಡೆಗಳಲ್ಲಿ ನವಶಿಲಾಯುಗದ ತಾಣಗಳು ದೊರೆತಿವೆ.

ಲೋಹ ಯುಗ:

ಶಿಲಾಯುಗದಿಂದ ಲೋಹಯುಗದೆಡೆಗಿನ ಪರಿವರ್ತನೆಯು ನಿಧಾನ ಪ್ರಕ್ರಿಯೆಯಾಗಿತ್ತು. ಲೋಹದ ಮತ್ತು ಕಲ್ಲಿನ ಉಪಕರಣಗಳು ಜೊತೆಜೊತೆಯಾಗಿಯೇ ಬಳಸಲ್ಪಟ್ಟವು. ಆದರೆ ಲೋಹಗಳ ಬಳಕೆಗೆ ಸಂಬಂಧಿಸಿದಂತೆ ಭಾರತದ ವಿಭಿನ್ನ ಭಾಗಗಳಲ್ಲಿ ಏಕರೂಪತೆ ಇರಲಿಲ್ಲ. ಹೊಸ ಶಿಲಾಯುಗವನ್ನು ಉತ್ತರ ಭಾರತದಲ್ಲಿ ತಾಮ್ರಯುಗವು ಅನುಸರಿಸಿದರೆ, ದಕ್ಷಿಣ ಭಾರತದಲ್ಲಿ ಕಬ್ಬಿಣ ಯುಗವು ಅನುಸರಿಸಿತು. ಲೋಹ ಯುಗವನ್ನು ತಾಮ್ರ ಯುಗ, ಕಂಚಿನ ಯುಗ ಮತ್ತು ಕಬ್ಬಿಣ ಯುಗಗಳೆಂದು ವರ್ಗೀಕರಿಸಲಾಗಿದೆ.

ತಾಮ್ರ ಯುಗ:

ಮೊಟ್ಟಮೊದಲು ಉಪಯೋಗಿಸಿದ ಲೋಹ ಬಂಗಾರವಾಗಿದೆ. ಅದು ವಿರಳವೂ, ಮೆದುವೂ ಮತ್ತು ಹೊಳಪುಳ್ಳದ್ದು ಆಗಿರುವುದರಿಂದ ಆಭರಣಗಳಿಗಾಗಿ ಮಾತ್ರ ಬಳಸಲ್ಪಡುತ್ತಿತ್ತು. ಆದರೆ ತಾಮ್ರದ ಅನ್ವೇಷಣೆಯು ಮಾನವನ ನಾಗರಿಕತೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರುವುದರೊಂದಿಗೆ ಹೊಸ ಯುಗವೊಂದರ ಉದಯವಾಯಿತು. ತಾಮ್ರವನ್ನು ವಿವಿಧ ಸಲಕರಣೆಗಳಾದ ಭರ್ಚಿ, ಖಡ್ಗ, ಕೊಡಲಿ, ಭಲ್ಲೆ, ಮುಂತಾದವುಗಳನ್ನು ತಯಾರಿಸಲು ಬಳಸಲಾಗುತ್ತಿತ್ತು. ಈ ಉಪಕರಣಗಳನ್ನು ಕೃಷಿ, ಮೀನುಗಾರಿಕೆ, ಯುದ್ಧ ಮತ್ತು ಬೇಟೆಯಾಡಲು ಬಳಸುತ್ತಿದ್ದರು. ತಾಮ್ರ ಯುಗವು ಹರಪ್ಪ ನಾಗರಿಕತೆಯೊಂದಿಗೆ ಸಹ ಸಂಬಂಧ ಹೊಂದುತ್ತದೆ.

ಕಬ್ಬಣ ಯುಗ:

ಈ ಸಮಯಕ್ಕೆ ಕೃಷಿ ಉದ್ಯೋಗವು ಬೇಟೆ ಮತ್ತು ಪ್ರಾಣಿ ಸಾಕಣೆಯಂತಹ ಉದ್ಯೋಗಗಳನ್ನು ಹಿಂದಿಕ್ಕಿತು. ಮನುಷ್ಯ ಒಂದೇ ಸ್ಥಳದಲ್ಲಿ ವಾಸಿಸಲು ಪ್ರಾರಂಭಿಸಿದ. ಭಾರತದಲ್ಲಿ ಹಲವು ಕಂಚಿನ ಉಪಕರಣಗಳು ಮತ್ತು ವಸ್ತುಗಳು ಶೋಧಿಸಲ್ಪಟ್ಟಿವೆಯಾದರೂ ಭಾರತ ಇತಿಹಾಸದಲ್ಲಿ ಕಂಚಿನ ಯುಗವೆಂಬುದು ಇಲ್ಲ. ತಾಮ್ರ

ಯುಗ ಮತ್ತು ಕಬ್ಬಿಣ ಯುಗದೊಂದಿಗೆ ನಾವು ಭಾರತದ ಇತಿಹಾಸ ಕಾಲದ ಪರಿಧಿಗೆ ಪ್ರವೇಶಿಸುತ್ತೇವೆ. ದಕ್ಷಿಣ ಭಾರತದಲ್ಲಿ ಕಬ್ಬಿಣವನ್ನು ವ್ಯಾಪಕವಾಗಿ ಬಳಸಲಾಗುತ್ತಿತ್ತು.

ಚಟುವಟಿಕೆ

ಕರ್ನಾಟಕದಲ್ಲಿನ ಶಿಲಾಯುಗದ ಹಲವಾರು ತಾಣಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ

1. ಹಳೆಯ ಶಿಲಾಯುಗದ ಮಾನವ ಬಳಸಿದ ಕಲ್ಲಿನ ಪ್ರಕಾರವನ್ನು ಹೆಸರಿಸಿ.
2. ಉತ್ತರ ಭಾರತದಲ್ಲಿ ಮಾನವನು ಉಪಯೋಗಿಸಿದ ಮೊದಲ ಲೋಹ ಯಾವುದು?.
3. ದಕ್ಷಿಣ ಭಾರತದಲ್ಲಿ ಮಾನವನು ಉಪಯೋಗಿಸಿದ ಮೊದಲ ಲೋಹ ಯಾವುದು?.

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ 2ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಪ್ಯಾಲಿಯೋಲಿಥಿಕ್ ಪದದ ಅರ್ಥವೇನು?
2. ಹಳೆಯ ಶಿಲಾಯುಗದ ಯಾವುದಾದರೂ ಎರಡು ತಾಣಗಳನ್ನು ತಿಳಿಸಿ.
3. ಮಧ್ಯಶಿಲಾಯುಗದ ಯಾವುದಾದರು ಎರಡು ತಾಣಗಳನ್ನು ತಿಳಿಸಿ.
4. ನಿಯೋಲಿಥಿಕ್ ಪದದ ಅರ್ಥವೇನು?
5. ಹೊಸಶಿಲಾಯುಗದ ಯಾವುದಾದರೂ ಎರಡು ತಾಣಗಳನ್ನು ಹೆಸರಿಸಿ.

* * * *


ಅಧ್ಯಾಯ – 3

ಸಿಂಧೂ ನಾಗರಿಕತೆ

ಸಿಂಧೂ ನಾಗರಿಕತೆ ಪ್ರಪಂಚದ ಪ್ರಾಚೀನ ನಾಗರಿಕತೆಗಳಲ್ಲಿ ಒಂದಾಗಿದೆ. ಇದು ಈಜಿಪ್ತ್, ಮೆಸಪೊಟೇಮಿಯಾ ಮತ್ತು ಚೀನಾ ನಾಗರಿಕತೆಗಳ ಸಮಕಾಲೀನ ನಾಗರಿಕತೆಯಾಗಿದೆ. 1856 ರಲ್ಲಿ ಸಿಂಧ್‌ನಲ್ಲಿ ರೈಲು ಮಾರ್ಗ ಹಾಕುವಾಗ ಕೆಲವು ಮುದ್ರೆಗಳು ಮತ್ತು ಸುಟ್ಟ ಇಟ್ಟಿಗೆಗಳು ಪತ್ತೆಯಾದವು. ಪುನಃ 1862 ರಲ್ಲಿ ಜನರಲ್ ಕನ್ನಿಂಗ್ ಹ್ಯಾಮ್ ಮತ್ತೆ ಕೆಲವು ಮುದ್ರೆಗಳನ್ನು ಕಂಡುಹಿಡಿದನು. 1904 ರಲ್ಲಿ ಲಾರ್ಡ್ ಕರ್ಜನ್ ಭಾರತೀಯ ಪುರಾತತ್ವ ಇಲಾಖೆ ಸ್ಥಾಪಿಸಿದನು. 1920ರ ದಶಕದಲ್ಲಿ ಪುರಾತತ್ವ ಇಲಾಖೆಯ ಆಗಿನ ಮಹಾನಿರ್ದೇಶಕರಾದ ಸರ್ ಜಾನ್ ಮಾರ್ಷಲ್ ಮತ್ತು ಅವರ ಸಹೋದ್ಯೋಗಿಗಳು ಹೊಸದೊಂದು ನಾಗರಿಕತೆಯನ್ನು ಕಂಡುಹಿಡಿದರು. ಇದೇ 'ಸಿಂಧೂ ನಾಗರಿಕತೆ'ಯಾಗಿದೆ. 1921 ರಲ್ಲಿ ಡಾ॥ ಆರ್.ಬಿ ದಯಾರಾಮ್ ಸಹಾನಿಯವರು ಈಗಿನ ಪಾಕಿಸ್ತಾನದಲ್ಲಿರುವ ಪಶ್ಚಿಮ ಪಂಜಾಬಿನ ಮಾಂಟೆಗೊಮರಿ ಜಿಲ್ಲೆಯಲ್ಲಿ ಹರಪ್ಪಾ ನಿವೇಶನವನ್ನು ಕಂಡುಹಿಡಿದರು. ಇದು ರಾವಿ ನದಿ ತೀರದಲ್ಲಿದೆ. 1922 ರಲ್ಲಿ ಡಾ॥ ಆರ್ ಡಿ ಬ್ಯಾನರ್ಜಿ ಸಿಂಧ್ ಪ್ರಾಂತ್ಯದ ಲಾರ್ಕಾನ್ ಜಿಲ್ಲೆಯಲ್ಲಿ ಉತ್ಖನನ ಕೈಗೊಂಡು ಮಹೆಂಜೊದಾರೋವನ್ನು ಕಂಡುಹಿಡಿದರು. ಸಿಂಧೀ ಭಾಷೆಯಲ್ಲಿ ಮಹೆಂಜೊದಾರೋ ಅಂದರೆ 'ಮಡಿದವರ ದಿಬ್ಬ'. ಕಳೆದ ಶತಮಾನದಲ್ಲಿ ಹಲವಾರು ನಿವೇಶನಗಳಲ್ಲಿ ಉತ್ಖನನಗಳು ನಡೆದು, ಸಿಂಧೂ ನಾಗರಿಕತೆ ಬಗ್ಗೆ ಬಹಳಷ್ಟು ಮಾಹಿತಿ ಬಹಿರಂಗವಾಗಿದೆ. ಉಪಖಂಡದ ವಿಭಜನೆಯಿಂದಾಗಿ ಅನೇಕ ನಿವೇಶನಗಳು ಈಗ ಪಾಕಿಸ್ತಾನದಲ್ಲಿವೆ.

ಪ್ರಮುಖ ನಿವೇಶನಗಳು

ಶೋಧನೆಯಾದ ಸ್ಥಳ	ದೇಶ /ರಾಜ್ಯ	ಪ್ರಾಕ್ತನ ತಜ್ಞರ ಹೆಸರು
1. ರೂಪಾರ್	ಪಂಜಾಬ್	ವೈ. ಡಿ. ಶರ್ಮಾ
2. ಲೋಥಾಲ್	ಕ್ಯಾಂಬೆ– ಗುಜರಾತ್	ಡಾ॥ ಎಸ್. ಆರ್. ರಾವ್
3. ಕಾಲಿಬಂಗನ್	ರಾಜಸ್ತಾನ	ಬಿ. ಕೆ. ಥಾಪರ್
4. ದೋಲವಿರಾ	ಕಚ್ –ಗುಜರಾತ್	ಡಾ॥ ಆರ್. ಎಸ್. ಬಿಸ್ತ್
5. ಚಾನ್ಹುದಾರೋ	ಸಿಂಧ್ (ಪಾಕಿಸ್ತಾನ)	ಎನ್. ಜಿ. ಮುಜುಮ್‌ದಾರ
6. ಆಲಂಗೀರ್‌ಪುರ	ಉತ್ತರ ಪ್ರದೇಶ	ವೈ. ಡಿ. ಶರ್ಮಾ
7. ಸುರ್ ಕೋಟಡಾ	ಗುಜರಾತ್	ಜೆ. ಪಿ. ಜೋಷಿ
8. ರಂಗ್‌ಪುರ	ಗುಜರಾತ್	ಎನ್. ಜಿ. ಮುಜುಮ್‌ದಾರ
9. ಕೋಟ್‌ಡಿಜಿ	ಪಾಕಿಸ್ತಾನ	ಎಫ್. ಎ. ಖಾನ್
10. ಬನವಲಿ	ಹರಿಯಾಣ	ಆರ್. ಎನ್. ಬಿಸ್ತ್


ಸಿಂಧೂ ನಾಗರಿಕತೆಯ ನೆಲೆಗಳು
ಮೊಹೆಂಜೋದಾರೋ
ಹರಪ್ಪ
ರೂಪಾರ್
ಅಲಂಗೀರ್‌ಪುರ್
ಬನವಾಲಿ
ಕಾಲಿಬಂಗನ್
ಕೋಟ್‌ದಿಜಿ
ಚಾನ್ಹುದಾರೋ
ಧೊಲವೀರ
ಲೋಥಾಲ್
ನಾಗೇಶ್ವರ
ರಂಗ್‌ಪುರ
ಬಂಗಾಳ ಕೊಲ್ಲಿ
ಅರಬ್ಬಿ ಸಮುದ್ರ
ಹಿಂದೂ ಮಹಾಸಾಗರ
ಉ
ಪ
ಪೂ
ದ

ಸಿಂಧೂ ನಾಗರಿಕತೆಯ ಹಂತ ಮತ್ತು ಸುಮೇರಿಯನ್ ನಾಗರೀಕತೆಯ ಮುದ್ರೆಗಳ ನಡುವಿನ ಹೋಲಿಕೆಯಿಂದಾಗಿ ಸರ್ ಜಾನ್ ಮಾರ್ಷಲ್ ಮತ್ತು ಡಾ॥ ಮ್ಯಾಕೆರಂತಹ ವಿದ್ವಾಂಸರು ಸಿಂಧೂ ನಾಗರಿಕತೆ ಸಾ.ಶ.ಪೂ.3000 ಕ್ಕೆ ಸೇರಿದೆ ಎಂದು ಅಭಿಪ್ರಾಯ ಪಡುತ್ತಾರೆ. ಸಿಂಧೂ ನಾಗರಿಕತೆಯ ವಿಸ್ತೀರ್ಣ ಪಶ್ಚಿಮದಲ್ಲಿ ಪಂಜಾಬಿನಿಂದ(ಇಂದಿನ ಪಾಕಿಸ್ತಾನ) ಪೂರ್ವದಲ್ಲಿ ಉತ್ತರ ಪ್ರದೇಶದವರೆಗೂ ಮತ್ತು ಉತ್ತರದಲ್ಲಿ ಜಮ್ಮುವಿನಿಂದ ದಕ್ಷಿಣದಲ್ಲಿ ನರ್ಮದಾ ನದಿವರೆಗೆ ಚಾಚಿತ್ತು. ಈ ನಾಗರಿಕತೆಯ ಜನರ ಜನಾಂಗದ ಬಗ್ಗೆ ಇತಿಹಾಸಕಾರರು ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅಸ್ಥಿಪಂಜರ ಮತ್ತು ತಲೆಬುರಡೆ ಆಧಾರದ ಮೇಲೆ, ಸಿಂಧೂ ಜನರು ಪ್ರೋಟೋ–ಅಸ್ಟ್ರಾಲೈಡ್, ಮೆಡಿಟರೇನಿಯನ್, ಮಂಗೋಲಿಯನ್ ಮತ್ತು ಅಲ್ಪಾಯಿನ್ಸ್ ಕುಲಕ್ಕೆ ಸೇರಿದವರೆಂದು ನಂಬಲಾಗಿದೆ.

ಪ್ರಮುಖ ಲಕ್ಷಣಗಳು.

ನಗರಯೋಜನೆ.

ನಗರ ಯೋಜನೆಯು ಸಿಂಧೂ ನಾಗರಿಕತೆಯ ವಿಶಿಷ್ಠ ಲಕ್ಷಣವಾಗಿದೆ. ಅವರ ನಗರ ಯೋಜನೆಯು ಅವರು ಅತ್ಯಂತ ಉಚ್ಚ ನಾಗರಿಕ ಮತ್ತು ಅಭಿವೃದ್ಧಿ ಹೊಂದಿದ ಜೀವನವನ್ನು ನಡೆಸುತ್ತಿದ್ದರೆಂಬುದನ್ನು ಸಾಬೀತುಪಡಿಸುತ್ತದೆ. ಸಿಂಧೂ ಜನರು ವೈಜ್ಞಾನಿಕ ಒಳಚರಂಡಿ ವ್ಯವಸ್ಥೆಯನ್ನೊಳಗೊಂಡ ಯೋಜನಾ ಬದ್ಧ ನಗರಗಳನ್ನು ನಿರ್ಮಿಸಿದವರಲ್ಲಿ ಮೊದಲಿಗರು. ಸಿಂಧೂ ನಗರಗಳನ್ನು ಏಕರೂಪದ ಯೋಜನೆಗಳ ಮೇಲೆ ನಿರ್ಮಿಸಲಾಗಿದೆ. ನಗರ ಯೋಜನೆ ಸ್ವರೂಪ ಆಶ್ಚರ್ಯಕರವಾಗಿದೆ. ಕೆಲವು ನಗರಗಳು ಪಶ್ಚಿಮಕ್ಕೆ ಎತ್ತರದ ಪೀಠದ ಮೇಲೆ ನಿರ್ಮಿತ ಪುರದುರ್ಗ ಹೊಂದಿದ್ದು, ಪೂರ್ವಕ್ಕೆ ಜನವಸತಿ ಪ್ರದೇಶವಿದೆ. ಅವೆರಡರ ಸುತ್ತಲೂ ಇಟ್ಟಿಗೆಗಳ ಬೃಹತ್ ಗೋಡೆಯಿದೆ. ಪುರದುರ್ಗವಿಲ್ಲದ ನಗರಗಳು ಎತ್ತರದ ದಿಣ್ಣೆಗಳ ಮೇಲೆ ಕಂಡು ಬಂದಿವೆ.

ಬೀದಿಗಳು.

ಬೀದಿಗಳು ನೇರವಾಗಿದ್ದು, ಒಂದನ್ನೊಂದು ಲಂಬವಾಗಿ ವಿಭಜಿಸಿವೆ. ಅವು 13 ರಿಂದ 34 ಅಡಿ ಅಗಲವಾಗಿವೆ ಮತ್ತು ಸಾಲಾಗಿವೆ. ನಗರದ ರಸ್ತೆಗಳು ಮತ್ತು ಬೀದಿಗಳು ನಗರವನ್ನು ಆಯತಾಕಾರದ ಬಡಾವಣೆಗಳಾಗಿ ವಿಂಗಡಿಸಿವೆ. ಪ್ರಾಕ್ತನ ತಜ್ಞರು ನಿರ್ದಿಷ್ಟ ಅಂತರಗಳಲ್ಲಿ ದೀಪದ ಕಂಬಗಳನ್ನು ಪತ್ತೆ ಹಚ್ಚಿದ್ದಾರೆ. ಇದು ಬೀದಿ ದೀಪಗಳು ಇದ್ದವೆಂದು ಸೂಚಿಸುತ್ತದೆ. ರಸ್ತೆಯ ಬದಿಯಲ್ಲಿ ಕಸದ ತೊಟ್ಟಿಗಳನ್ನೂ ಇಡಲಾಗಿತ್ತು. ಇವುಗಳು ಒಂದು ಉತ್ತಮ ನಗರಾಡಳಿತವಿತ್ತೆಂಬುದನ್ನು ಸಾಬೀತುಪಡಿಸುತ್ತವೆ.

ಒಳಚರಂಡಿ ವ್ಯವಸ್ಥೆ.

ನಗರಗಳಿಗೆ ಒದಗಿಸಲ್ಪಟ್ಟ ಅತ್ಯುತ್ತಮ ಮುಚ್ಚಿದ ಒಳಚರಂಡಿ ವ್ಯವಸ್ಥೆಯು ಈ ನಾಗರಿಕತೆಯ ಅಸಾಧಾರಣ ಲಕ್ಷಣಗಳಲ್ಲಿ ಒಂದಾಗಿದೆ. ಪ್ರತಿ ಮನೆಗೆ ತನ್ನದೇ ಆದ ಒಳಚರಂಡಿ ಮತ್ತು ಇಂಗು ಗುಂಡಿ ಇದ್ದು, ಅವುಗಳನ್ನು ಸಾರ್ವಜನಿಕ ಒಳಚರಂಡಿಗೆ ಸಂಪರ್ಕಿಸಲಾಗಿತ್ತು. ಇಟ್ಟಿಗೆಯಿಂದ ಮಾಡಿದ ಕಾಲುವೆಗಳು ಪ್ರತಿ ರಸ್ತೆಯುದ್ದಕ್ಕೂ ಸಾಗಿದ್ದವು. ಅವುಗಳನ್ನು ಮುಚ್ಚಿದ್ದು ಅಲ್ಲಲ್ಲಿ ಸ್ವಚ್ಛಗೊಳಿಸುವ ಮತ್ತು ಮುಕ್ತಗೊಳಿಸುವ ಸಲುವಾಗಿ ಮಾನವರಿಳಿಯಲು ರಂಧ್ರಗಳಿದ್ದವು. ಹೆಚ್ಚುವರಿ ನೀರನ್ನು ಕೊಂಡೊಯ್ಯಲು ನಗರದ ಹೊರವಲಯದಲ್ಲಿ ಕಲ್ಲಿನಿಂದ ಮುಚ್ಚಿದ ದೊಡ್ಡ ಇಟ್ಟಿಗೆಯ ಕಾಲುವೆಗಳನ್ನು ನಿರ್ಮಿಸಲಾಗಿತ್ತು. ಹೀಗೆ ಸಿಂಧೂ ಜನರು ಪರಿಪೂರ್ಣ ಒಳಚರಂಡಿ ವ್ಯವಸ್ಥೆ ಹೊಂದಿದ್ದರು. ಬೇರೆ ಯಾವುದೇ ಸಮಕಾಲೀನ ನಾಗರಿಕತೆಯು ಸ್ವಚ್ಛತೆಗೆ ಅಷ್ಟೊಂದು ಗಮನ ಹರಿಸಿರಲಿಲ್ಲ.

ಸ್ನಾನದ ಕೊಳ.



ಸ್ನಾನದ ಕೊಳ

ಸ್ನಾನದ ಕೊಳ ಮಹೆಂಜೊದಾರೋವಿನ ಅದ್ಭುತ ಲಕ್ಷಣಗಳಲ್ಲಿ ಒಂದು. ಇದು ವಿಶಾಲವಾದ ಚೌಕಾಕಾರದ ಪ್ರಾಂಗಣ ಹೊಂದಿದೆ. ಮಧ್ಯಭಾಗದಲ್ಲಿ ಒಂದು ಈಜು ಕೊಳವಿದ್ದು ನಾಲ್ಕೂ ದಿಕ್ಕುಗಳಲ್ಲಿ ಮೊಗಸಾಲೆ ಹಾಗೂ ಕೋಣೆಗಳನ್ನು ಹೊಂದಿದೆ. ಇಲ್ಲಿರುವ ಕೆಲವು ಕೋಣೆಗಳಲ್ಲಿ ಬಿಸಿನೀರಿನ ಸ್ನಾನಕ್ಕೆ ವ್ಯವಸ್ಥೆಗಳಿದ್ದವು. ಇದರ ಮಧ್ಯದಲ್ಲಿ 39 ಅಡಿ ಉದ್ದ, 23 ಅಡಿ ಅಗಲ ಮತ್ತು 8 ಅಡಿ ಆಳದ ವಿಶಾಲವಾದ ಈಜುಗೊಳವಿದೆ. ಇದರ ಇಬ್ಬದಿಗಳಲ್ಲಿ ಮೆಟ್ಟಿಲುಗಳ ಸಾಲುಗಳಿದ್ದು, ಪಕ್ಕದ ಕೋಣೆಯೊಂದರಲ್ಲಿರುವ ಬಾವಿಯಿಂದ ನೀರು ಪೂರೈಸಲಾಗುತ್ತಿತ್ತು. ನೀರನ್ನು ಹೊರಹಾಕಲು ಆರು ಅಡಿಗಳಿಗಿಂತ ಹೆಚ್ಚಿನ ಆಳದ ಕಲ್ಲಿನ ಹೊದಿಕೆ ಇರುವ ಒಂದು ದೊಡ್ಡ ಚರಂಡಿಯಿತ್ತು. ಈ ಮಹಾಸ್ನಾನಕೊಳಕ್ಕೆ 8 ಅಡಿ ದಪ್ಪನಾದ ಹೊರಗೋಡೆಗಳಿದ್ದವು. ಈ ಸದೃಢ ನಿರ್ಮಾಣ 5000 ವರ್ಷಗಳಿಂದ ನಿಸರ್ಗದ ಹೊಡೆತವನ್ನು ಯಶಸ್ವಿಯಾಗಿ ಎದುರಿಸಿ ನಿಂತಿದೆ.

ಉಗ್ರಾಣಗಳು.

ಮಹೆಂಜೊದಾರೋವಿನ ಅತ್ಯಂತ ದೊಡ್ಡ ಕಟ್ಟಡವೆಂದರೆ ಉಗ್ರಾಣ. ಅದು 45.71 ಮೀ ಉದ್ದ ಮತ್ತು 15.23 ಮೀ ಅಗಲವಿದೆ. ಹರಪ್ಪಾದಲ್ಲಿ ಇಟ್ಟಿಗೆಗಳಿಂದ ನಿರ್ಮಿಸಿದ ವೇದಿಕೆಯ ಸಾಲುಗಳಿದ್ದು, ಇವು ತಲಾ ಆರು ಕಣಜಗಳ ಎರಡು ಸಾಲುಗಳಿಗೆ ಅಡಿಪಾಯವನ್ನು ನಿರ್ಮಿಸಿವೆ. ಕಾಲಿಬಂಗನ್‌ನ ದಕ್ಷಿಣ ಭಾಗದಲ್ಲಿಯೂ ಸಹ ಇಟ್ಟಿಗೆಯಿಂದ ನಿರ್ಮಿಸಿರುವ ವೇದಿಕೆಗಳು ದೊರೆತಿವೆ. ಈ ಉಗ್ರಾಣಗಳಲ್ಲಿ ಧಾನ್ಯಗಳನ್ನು ಸುರಕ್ಷಿತವಾಗಿಡುತ್ತಿದ್ದರು, ಪ್ರಾಯಶ: ಇವು ಕಂದಾಯ ಸಂಗ್ರಹಣೆ ಇಲ್ಲವೆ ತುರ್ತು ಪರಿಸ್ಥಿತಿಗಳಲ್ಲಿ ಬಳಕೆಗಾಗಿದ್ದವು.

ಕಟ್ಟಡಗಳು.

ಸಿಂಧೂ ಜನರು ರಸ್ತೆಗಳ ಬದಿಯಲ್ಲಿ ಮನೆ ಮತ್ತು ಇತರ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅವರು ಸುಟ್ಟ ಇಟ್ಟಿಗೆಗಳಿಂದ, ಮೇಲ್ಛಾವಣಿ ಹೊಂದಿದ ಮನೆಗಳನ್ನು ನಿರ್ಮಿಸಿದ್ದಾರೆ. ಪ್ರತಿ ಮನೆಯು ಎರಡು ಅಥವಾ ಹೆಚ್ಚು ಕೋಣೆಗಳನ್ನು ಹೊಂದಿದ್ದವು. ಒಂದಕ್ಕಿಂತ ಹೆಚ್ಚು ಮಹಡಿಯ ಮನೆಗಳೂ ಅಲ್ಲಿದ್ದವು. ಒಳಾಂಗಣದ ಸುತ್ತಲೂ ಕಂಬಗಳುಳ್ಳ ಹಜಾರ, ಸ್ನಾನ ಗೃಹಗಳು, ಕಲ್ಲಿನ ನೆಲಹಾಸು, ಅಡುಗೆ ಕೋಣೆ, ಬಾವಿ, ಮುಂತಾದವುಗಳನ್ನೊಳಗೊಂಡಂತೆ ಮನೆಗಳನ್ನು ವಿನ್ಯಾಸಗೊಳಿಸಲಾಗಿತ್ತು. ವಸತಿ ಗೃಹಗಳಲ್ಲದೆ ವಿಶಾಲವಾದ

ಕಟ್ಟಡಗಳು ಕಂಡು ಬಂದಿವೆ. ಇಂತಹ ಕಟ್ಟಡ ಒಂದು 80 ಅಡಿ ಉದ್ದ ಮತ್ತು 80 ಅಡಿ ಅಗಲದ ಅಳತೆಯ ದೊಡ್ಡ ಹಜಾರವನ್ನು ಹೊಂದಿದ್ದು, ಇದು ಒಂದು ಅರಮನೆ ಅಥವಾ ದೇವಸ್ಥಾನ ಅಥವಾ ಬೃಹತ್ ಸಭಾಂಗಣವಾಗಿರಬಹುದು. ಕಾರ್ಮಿಕರ ವಸತಿ ಗೃಹಗಳೂ ದೊರೆತಿವೆ. ಅಲ್ಲಿ ಅತ್ಯುತ್ತಮ ನೀರು ಸರಬರಾಜು ವ್ಯವಸ್ಥೆಯಿತ್ತು. ರಸ್ತೆ ಬದಿಗೆ ಸಾರ್ವಜನಿಕ ಬಾವಿಗಳಿದ್ದವು. ಪ್ರತಿಯೊಂದು ದೊಡ್ಡ ಮನೆಯೂ ತನ್ನದೇ ಆದ ಬಾವಿ ಹೊಂದಿತ್ತು. ಅಲ್ಲದೆ ಲೋಥಾಲ್‌ನಲ್ಲಿ ಒಂದು ಹಡಗು ಕಟ್ಟೆಯನ್ನು ನಿರ್ಮಿಸಿದ್ದರು.

ರಾಜಕೀಯ ಸ್ಥಿತಿ.

ಯಾವುದೇ ಲಿಖಿತ ದಾಖಲೆ ಇಲ್ಲದಿರುವುದರಿಂದ ಆ ಕಾಲದಲ್ಲಿ ಯಾವ ರೀತಿಯ ಆಡಳಿತವಿತ್ತೆಂದು ನಿಖರವಾಗಿ ಹೇಳುವುದು ಕಷ್ಟಕರವಾಗಿದೆ. ದೋಷರಹಿತ ಮತ್ತು ವ್ಯವಸ್ಥಿತ ನಗರಯೋಜನೆ ಆಧಾರದ ಮೇಲೆ ಏಕರೂಪ ಮತ್ತು ಕಠಿಣ ಕಾಯ್ದೆಗಳುಳ್ಳ ಪ್ರಬಲ ಆಡಳಿತ ಅಸ್ತಿತ್ವದಲ್ಲಿತ್ತೆಂದು ಇತಿಹಾಸಕಾರರು ಊಹಿಸಿದ್ದಾರೆ. ನಗರ ಯೋಜನೆ, ಒಳಚರಂಡಿ, ನೀರು ಸರಬರಾಜು ಮತ್ತು ರಸ್ತೆಗಳ ನಿರ್ವಹಣೆಗಳಲ್ಲಿ ಏಕರೂಪತೆ ಇತ್ತು. ಡಾ॥ ಎಸ್. ಆರ್. ರಾವ್‌ರವರು ಕೆಲವು ಮುದ್ರೆಗಳ ಮೇಲಿನ ಲಿಪಿಯನ್ನು ಬೇಧಿಸಿರುವುದಾಗಿ ಹೇಳಿದ್ದು, ಅಂದಿನ ನಗರಗಳು ವಿವಿಧ ಶ್ರೇಣಿಯ ಆಡಳಿತಗಾರರನ್ನು ಹೊಂದಿದ್ದವೆಂದು ಅಭಿಪ್ರಾಯಪಡುತ್ತಾರೆ. ಇದು ಸುಸ್ಥಾಪಿತ ಆಡಳಿತ ವ್ಯವಸ್ಥೆಯೊಂದರ ಅಸ್ತಿತ್ವವನ್ನು ಸಾಬೀತುಪಡಿಸುತ್ತದೆ.

ಸಾಮಾಜಿಕ ಸ್ಥಿತಿ.

ಉತ್ಖನನಗಳ ಸಹಾಯದಿಂದ ಕೆಲವು ಇತಿಹಾಸಕಾರರು ಸಮಾಜದಲ್ಲಿ ವೃತ್ತಿ ಆಧಾರಿತವಾದ ನಾಲ್ಕು ವರ್ಗಗಳಿದ್ದವೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಪ್ರಾಯಶ: ಅವು ಪಂಡಿತವರ್ಗ, ಯೋಧರು, ವ್ಯಾಪಾರಿಗಳು ಮತ್ತು ಶ್ರಮಿಕರುಗಳಾಗಿದ್ದವು. ಪಂಡಿತ ವರ್ಗದಲ್ಲಿ ಪುರೋಹಿತರು, ಜ್ಯೋತಿಷಿಗಳು ಮತ್ತು ವೈದ್ಯರು ಸೇರಿದ್ದರು.

ಗೋದಿ ಅವರ ಪ್ರಮುಖ ಆಹಾರ ಧಾನ್ಯವಾಗಿತ್ತು. ಬಾರ್ಲಿ, ಅಕ್ಕಿ, ಹಣ್ಣುಗಳು, ತರಕಾರಿ, ಖರ್ಜೂರ, ಹಾಲು ಮುಂತಾದವುಗಳನ್ನು ಬಳಸುತ್ತಿದ್ದರು. ಮೀನು, ಮಾಂಸ, ಹಂದಿಯ ಮಾಂಸ, ಕೋಳಿ, ಆಮೆ ಮಾಂಸ ಮುಂತಾದವುಗಳನ್ನೂ ಉಪಯೋಗಿಸುತ್ತಿದ್ದರು.

ಹತ್ತಿ ಮತ್ತು ಉಣ್ಣೆ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರು. ಅವರ ಉಡುಪು ಸರಳವಾಗಿತ್ತು. ಪುರುಷರು ಮತ್ತು ಮಹಿಳೆಯರು ಮೇಲು ಉಡುಗೆ (ಶಾಲ್) ಮತ್ತು ಕೆಳ ಉಡುಗೆ (ಧೋತಿ) ಧರಿಸುತ್ತಿದ್ದರು. ಸಿಂಧೂ ಮಹಿಳೆಯರು ಆಭರಣ ಪ್ರಿಯರಾಗಿದ್ದರು. ಸ್ತ್ರೀ–ಪುರುಷರಿಬ್ಬರೂ ಆಭರಣ ಧರಿಸುತ್ತಿದ್ದರು. ನಡುಪಟ್ಟಿ, ನತ್ತು, ಕಿವಿಯೋಲೆ ಮತ್ತು ಕಾಲುಗೆಜ್ಜೆಗಳನ್ನು ಮಹಿಳೆಯರು ಮಾತ್ರ ಧರಿಸುತ್ತಿದ್ದರು. ಆಭರಣಗಳ ಆಕಾರ ಮತ್ತು ವಿನ್ಯಾಸ ವೈವಿಧ್ಯ ಪೂರ್ಣವಾಗಿತ್ತು. ಚಿನ್ನ, ಬೆಳ್ಳಿ ಮತ್ತು ಅಮೂಲ್ಯ ರತ್ನಗಳಿಂದ ಆಭರಣ ತಯಾರಿಸುತ್ತಿದ್ದರು. ಮಹಿಳೆಯರಿಗೆ ವಿವಿಧ ರೀತಿಯ ಕೇಶಾಲಂಕಾರ ಕಲೆಯೂ ಗೊತ್ತಿತ್ತು ಮತ್ತು ಅವರು ದಂತದ ಬಾಚಣಿಕೆ ಮತ್ತು ಕಂಚಿನ ಕನ್ನಡಿಗಳನ್ನು ಉಪಯೋಗಿಸುತ್ತಿದ್ದರು. ದಂತ, ಲೋಹ, ಮಡಕೆ ಮತ್ತು ಕಲ್ಲಿನಿಂದ ಮಾಡಿದ ಸೌಂದರ್ಯ ಪ್ರಸಾದನಗಳ ಹೂಜಿಗಳು ಹರಪ್ಪಾದಲ್ಲಿ ಪತ್ತೆಯಾಗಿವೆ. ಮುಖ ಮತ್ತು ತುಟಿಗೆ ಬಣ್ಣ ಮತ್ತು ಕಣ್ಣಿಗೆ ಕಾಡಿಗೆಗಳನ್ನೂ ಉಪಯೋಗಿಸುತ್ತಿದ್ದರು.

ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳಲ್ಲಿ ಜನರಿಗೆ ಹೆಚ್ಚು ಒಲವಿತ್ತು. ಪಗಡೆ, ಬೇಟೆಯಾಡುವುದು, ಹೋರಿ ಕಾಳಗ, ಕೋಳಿ ಕಾಳಗ, ಮೀನು ಹಿಡಿಯುವುದು, ಜೇಡಿ ಮಣ್ಣಿನ ಮಾದರಿ ತಯಾರಿಕೆ ಮತ್ತು ಚದುರಂಗ ಮನರಂಜನಾ ವಿಧಾನಗಳಾಗಿದ್ದವು. ಅವರಿಗೆ ನೃತ್ಯ ಮತ್ತು ಸಂಗೀತ ಕಲೆಯೂ ಗೊತ್ತಿತ್ತು.

ಕುಂಬಾರನ ಚಕ್ರದಿಂದ ಮಾಡಿದ ಬಹು ವೈವಿಧ್ಯಮಯ ಮಣ್ಣಿನ ಪಾತ್ರೆಗಳು ಪತ್ತೆಯಾಗಿವೆ. ಅವುಗಳು ಹೊಳಪಿನ ಇಲ್ಲವೆ ಬಣ್ಣದಲ್ಲಿ ಚಿತ್ರಿಸಲ್ಪಟ್ಟವುಗಳಾಗಿವೆ. ತಾಮ್ರ, ಕಂಚು, ಬೆಳ್ಳಿ ಮತ್ತು ಪಿಂಗಾಣಿ ಪಾತ್ರೆಗಳೂ ಉಪಯೋಗದಲ್ಲಿದ್ದವು. ಮಕ್ಕಳ ಆಟಿಕೆಗಳಾದ ಜೇಡಿಮಣ್ಣಿನ ಪಕ್ಷಿಗಳು, ಪ್ರಾಣಿಗಳು, ಪುರುಷರು, ಸ್ತ್ರೀಯರು, ಗಾಲಿ ಬಂಡಿಗಳು ಮತ್ತು ಕುರ್ಚಿಗಳ ಮಾದರಿಗಳು ಸಾಮಾನ್ಯವಾಗಿದ್ದವು. ತಾಮ್ರ ಮತ್ತು ಕಂಚಿನಿಂದ ಮಾಡಿದ ಆಯುಧಗಳಾದ ಕೊಡಲಿ, ಭರ್ಜಿ, ಕಠಾರಿ, ಗದೆ, ಕವಣೆ, ಬಿಲ್ಲು ಮತ್ತು ಬಾಣಗಳು ಕಂಡುಬಂದಿವೆ.

ಇವರು ಶವಸಂಸ್ಕಾರವನ್ನು ದಹನ ಇಲ್ಲವೆ ಹೂಳುವ ಪದ್ಧತಿಗಳ ಮೂಲಕ ನಡೆಸುತ್ತಿದ್ದರು. ಮಾನವರ ಮೂಳೆಗಳು ಮತ್ತು ಬೂದಿಗಳು ತುಂಬಿದ ಅನೇಕ ಚಿತಾಭಸ್ಮದ ಮಡಕೆಗಳು ಪತ್ತೆಯಾಗಿವೆ ಮತ್ತು ಹರಪ್ಪಾದಲ್ಲಿ ಒಂದು ವಿಶಾಲವಾದ ಸ್ಮಶಾನವು ದೊರೆತಿದೆ.

ಆರ್ಥಿಕ ಸ್ಥಿತಿ.

ಕೃಷಿ ಪ್ರಮುಖ ಕಸುಬಾಗಿತ್ತು. ಅದರೊಂದಿಗೆ ಪಶುಪಾಲನೆ ಮತ್ತು ಹೈನುಗಾರಿಕೆ ಇತ್ತು. ಅವರಿಗೆ ನೀರಾವರಿ ಕಲೆಯೂ ಗೊತ್ತಿತ್ತು. ಗೋದಿ, ಬಾರ್ಲಿ, ಬಟಾಣಿ, ಎಳ್ಳು ಮತ್ತು ಹತ್ತಿಯನ್ನು ವಿಫುಲವಾಗಿ ಬೆಳೆಯುತ್ತಿದ್ದರು. ಉತ್ತಮ ತಳಿಯ ಜಾನುವಾರುಗಳನ್ನು ಹಾಲು ಮತ್ತು ಮಾಂಸಕ್ಕಾಗಿ ಸಾಕುತ್ತಿದ್ದರು. ಹಸು, ಎಮ್ಮೆ ಹೋರಿ, ಕುರಿ, ಆಡು, ನಾಯಿ, ಹಂದಿ, ಆನೆ, ಒಂಟೆ, ಕೋಳಿ ಮತ್ತು ಪಕ್ಷಿಗಳನ್ನು ಸಾಕುತ್ತಿದ್ದರು.

ಸಿಂಧೂ ನಾಗರಿಕತೆ ಕಾಲದಲ್ಲಿ ನೂಲುವುದು, ನೇಯುವುದು, ಬಣ್ಣ ಹಾಕುವುದು, ಕುಂಬಾರಿಕೆ, ಮರಗೆಲಸ, ಲೋಹ ಕೈಗಾರಿಕೆ, ಮುಂತಾದ ಕುಶಲಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು.

ಸಿಂಧೂ ಜನರಿಗೆ ತೂಕ ಮತ್ತು ಅಳತೆಗಳು ಗೊತ್ತಿದ್ದವು. ಮಹೆಂಜೊದಾರೋದಲ್ಲಿ ಒಂದು ಕಪ್ಪೆ ಚಿಪ್ಪಿನ ಹಾಗೂ ಹರಪ್ಪಾದಲ್ಲಿ ಒಂದು ಕಂಚಿನ ತಕ್ಕಡಿ ಪತ್ತೆಯಾಗಿವೆ. ಅವರಿಗೆ ದಶಮಾಂಶ ಪದ್ಧತಿಯ ಜ್ಞಾನವಿತ್ತು. ಸಿಂಧೂ ಜನರು ಆಂತರಿಕ ಮತ್ತು ಬಾಹ್ಯ ವ್ಯಾಪಾರ ಅಭಿವೃದ್ಧಿಪಡಿಸಿದ್ದರು. ಹರಪ್ಪಾ, ಲೋಥಾಲ್, ಕಾಲಿಬಂಗನ್, ರೂಪಾರ್, ಸುರ್ಕೊಟಡಾ ಮತ್ತು ಚಾನ್ಹುದಾರೋಗಳು ಪ್ರಮುಖ ವ್ಯಾಪಾರಿ ಕೇಂದ್ರಗಳಾಗಿದ್ದವು. ವಸ್ತು ವಿನಿಯಮ ಪದ್ಧತಿ ಮೂಲಕ ವ್ಯಾಪಾರಿ ಚಟುವಟಿಕೆ ನಡೆಯುತ್ತಿತ್ತು. ಸಿಂಧೂ ಮುದ್ರೆಗಳು, ಕಲಾ ಅಚ್ಚುಗಳು ಮತ್ತು ಅವರ ಸಾಮಾನುಗಳು ಪಶ್ಚಿಮ ಏಷ್ಯಾ, ಈಜಿಪ್ತ್ ಮತ್ತು ಮೆಸಪೊಟೇಮಿಯಾಗಳಲ್ಲಿ ಪತ್ತೆಯಾಗಿವೆ. ಬಾಹ್ಯ ವ್ಯಾಪಾರವನ್ನು ಸಿಂಧೂ ಜನರು ಹಡಗುಗಳ ಮುಖಾಂತರ ಕೈಗೊಳ್ಳುತ್ತಿದ್ದರೆಂಬುದನ್ನು ಗುಜರಾತಿನ ಲೋಥಾಲ್‌ನಲ್ಲಿರುವ ಹಡಗುಕಟ್ಟೆಯಿಂದ ತಿಳಿದುಬರುತ್ತದೆ. ದಕ್ಷಿಣ ಭಾರತ, ರಾಜಸ್ಥಾನ್, ಗುಜರಾತ್ ಮುಂತಾದವುಗಳೊಂದಿಗೆ ಆಂತರಿಕ ವ್ಯಾಪಾರ ಸಂಪರ್ಕ ಹೊಂದಿದ್ದರು. ದಂತ, ಚಿನ್ನ, ಮುತ್ತು, ಮರದದಿಮ್ಮಿ ಮತ್ತು ಇತರ ವಸ್ತುಗಳನ್ನು ರಫ್ತು ಮಾಡುತ್ತಿದ್ದರು. ಅಮೂಲ್ಯ ಹರಳುಗಳು, ತಾಮ್ರ ಮತ್ತು ತವರ ಆಮದು ಮಾಡಿಕೊಳ್ಳುತ್ತಿದ್ದರು. ಎತ್ತಿನ ಬಂಡಿ, ಕತ್ತೆ, ಆನೆ ಮತ್ತು ಒಂಟೆಗಳನ್ನು ರಸ್ತೆ ಸಾರಿಗೆಗಾಗಿ ಉಪಯೋಗಿಸುತ್ತಿದ್ದರು.

ಧಾರ್ಮಿಕ ಸ್ಥಿತಿ.

ಮುದ್ರೆಗಳು, ಜೇಡಿಮಣ್ಣಿನ ಚಿಕ್ಕ ಪ್ರತಿಮೆಗಳು, ಕಲ್ಲಿನ ಪ್ರತಿಮೆಗಳು ಸಿಂಧೂ ಜನರ ಧಾರ್ಮಿಕ ಜೀವನವನ್ನು ವಿವರಿಸುತ್ತವೆ. ಮಾತೃ ದೇವತೆ ಅವರ ಪ್ರಧಾನ ದೇವತೆ ಆಗಿತ್ತು. ಶಿವನನ್ನು ಪಶುಪತಿ ಮತ್ತು ಲಿಂಗ ರೂಪದಲ್ಲಿ ಪೂಜಿಸುತ್ತಿದ್ದರು. ಅವರು ಗಿಡಗಳು, ಪಕ್ಷಿಗಳು, ಪ್ರಾಣಿಗಳು, ಹಾವುಗಳನ್ನೂ ಪೂಜಿಸುತ್ತಿದ್ದರು ಮತ್ತು ಭೂತಗಳ ಬಗ್ಗೆ ಹೆದರುತ್ತಿದ್ದರು.

ಕಲೆ ಮತ್ತು ಮೂರ್ತಿಶಿಲ್ಪ.

ಸಿಂಧೂ ಜನರು ಸೌಂದರ್ಯಾಭಿರುಚಿ ಬೆಳೆಸಿಕೊಂಡಿದ್ದರು. ಮುದ್ರೆಗಳು, ಚಿಕ್ಕ ಪ್ರತಿಮೆಗಳು, ತಾಯಿತಗಳು, ಮಡಕೆ ಮತ್ತು ನೃತ್ಯದ ಭಂಗಿಯ ಬಾಲಿಕೆಯ ಕಂಚಿನ ಮೂರ್ತಿ, ಗಡ್ಡದ ಮನುಷ್ಯನ ಮೂರ್ತಿ, ಪಶುಪತಿಯ ಚಿತ್ರಗಳು, ಮಡಕೆ ಮೇಲಿನ ಆಕರ್ಷಕ ವಿನ್ಯಾಸ, ಜೇಡಿಮಣ್ಣಿನ ಆಟಿಗೆಗಳು ಮತ್ತು ಆಭರಣಗಳು ಅವರ ಕಲಾ ಕೌಶಲ್ಯಕ್ಕೆ ಉದಾಹರಣೆಗಳಾಗಿವೆ.



ನೃತ್ಯ ಭಂಗಿಯ ಬಾಲಿಕೆ



ಗಡ್ಡದ ಮನುಷ್ಯ

ಮುದ್ರೆಗಳು ಮತ್ತು ಅಪಿಗಳು.

ಜೇಡಿಮಣ್ಣು, ದಂತ, ಕಲ್ಲಿನಿಂದ ಮಾಡಿದ 3000 ಕ್ಕೂ ಅಧಿಕ ಮುದ್ರೆಗಳು ದೊರೆತಿವೆ. ಅವುಗಳಲ್ಲಿ ಅನೇಕ ಮುದ್ರೆಗಳು ಚೌಕಾಕಾರ ಇಲ್ಲವೆ ಆಯತಾಕಾರದ್ದಾಗಿದ್ದು, ಗಾತ್ರದಲ್ಲಿ ಚಿಕ್ಕದಾಗಿವೆ. ಬಹಳಷ್ಟು ಮುದ್ರೆಗಳ ಮೇಲೆ ಹೋರಿ, ಏಕಶೃಂಗಿ, ಆನೆ, ಜಿಂಕೆ, ಮಾನವ ಮತ್ತು ಇತರೆ ಚಿತ್ರಗಳನ್ನು ಕೊರೆಯಲಾಗಿದೆ. ಎಲ್ಲ ಮುದ್ರೆಗಳ ಮೇಲೆ ಚಿತ್ರಬರಹವಿದ್ದು, ಅವುಗಳನ್ನು ಇನ್ನೂ ಎಲ್ಲರೂ ಒಪ್ಪುವಂತೆ ಓದಲಾಗಿಲ್ಲ. ಆದರೆ ಬರವಣಿಗೆಯ ದಿಶೆ ಬಲದಿಂದ ಎಡಕ್ಕೆ ಇದ್ದಿರಬಹುದೆಂದು ತಿಳಿಯಲಾಗಿದೆ. ಕೆಲವು ಪ್ರಕರಣಗಳಲ್ಲಿ ಮೊದಲ ಸಾಲು ಬಲದಿಂದ ಎಡಕ್ಕೆ ಮತ್ತು ಎರಡನೇ ಸಾಲು ಎಡದಿಂದ ಬಲಕ್ಕೆ ಇರುವುದು ಕಂಡುಬಂದಿದೆ.

ಸಿಂಧೂ ನಾಗರಿಕತೆಯ ಅಂತ್ಯ.

ಇತಿಹಾಸಕಾರರು ಇದರ ಅವನತಿ ಮತ್ತು ಅಂತ್ಯಕ್ಕೆ ಹಲವಾರು ಕಾರಣಗಳನ್ನು ಕೊಟ್ಟಿದ್ದಾರೆ. ನದಿಗಳು ತಮ್ಮ ಹರಿವಿನ ಪಥವನ್ನು ಬದಲಾಯಿಸಿದ್ದರಿಂದ ನಗರಗಳು ಹಾಳಾಗಿದ್ದಿರಬಹುದು. ನದಿಗಳು ನಗರಗಳಿಂದ ದೂರ ಹರಿದು ಭೂಮಿಯನ್ನು ಬರಡಾಗಿಸಿರಬಹುದು. ಸತತ ಪ್ರವಾಹಗಳು, ಮಣ್ಣಿನ ಸವೆತ, ಜನಜೀವನದ ವಿನಾಶಕ್ಕೆ ಕಾರಣವಾಗಿರಬಹುದು. ಭೂಮಿಯು ಅತಿಯಾದ ಬಳಕೆಯಿಂದ ಬರಡಾಗಿರಬಹುದು. ಸಾಂಕ್ರಾಮಿಕ ರೋಗಗಳ ಹರಡುವಿಕೆಯೂ ಜನಸಂಖ್ಯೆಯನ್ನು ತೊಡೆದು ಹಾಕಿರಬಹುದು. ಮಳೆಯ ಕೊರತೆಯು ಈ ಪ್ರದೇಶವನ್ನು ಮರಭೂಮಿಯಾಗಿಸಿರಬಹುದು. ಸಿಂಧೂ ನಾಗರಿಕತೆಯ ಸಂಪತ್ತು ಅನಾಗರಿಕ ದಾಳಿಕೋರರನ್ನು ಆಕರ್ಷಿಸಿರಬಹುದು ಮತ್ತು ಜನರು ಅವರ ಖಡ್ಗಗಳಿಗೆ ಬಲಿಯಾಗಿರಬಹುದು.

ಸಿಂಧೂ ನಾಗರಿಕತೆಯ ಅವನತಿಯು ಒಮ್ಮಿಂದೊಮ್ಮೆಲೆ ಆಗದೇ ಕ್ರಮೇಣವಾಗಿ ಆಯಿತೆಂದೂ, ದೊಡ್ಡ ಪ್ರಮಾಣದ ಅರಣ್ಯನಾಶದಿಂದಾಗಿ ಪದೇ ಪದೇ ಪ್ರವಾಹಗಳುಂಟಾಗಿ, ಪರಿಸರ ಅಸಮತೋಲನಕ್ಕೆ ಕಾರಣವಾಗಿರಬಹುದೆಂದೂ ಇತ್ತೀಚಿನ ಸಂಶೋಧನೆಗಳು ತೋರಿಸಿಕೊಟ್ಟಿವೆ. ಆರ್ಯರ ದಾಳಿಯೂ ಸಹ ಸಂಭವನೀಯ ಕಾರಣಗಳಲ್ಲಿ ಒಂದಾಗಿದೆ.

ಚಟುವಟಿಕೆ

ಸಿಂಧೂ ನಾಗರಿಕತೆಯನ್ನು ಪ್ರಪಂಚದ ಇತರ ನಾಗರಿಕತೆಗಳೊಂದಿಗೆ ಹೋಲಿಕೆ ಮಾಡಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಭಾರತೀಯ ಪುರಾತತ್ವ ಇಲಾಖೆಯನ್ನು ಯಾವ ವರ್ಷ ಸ್ಥಾಪಿಸಲಾಯಿತು?
2. ಮೊಹೆಂಜೊದಾರೋ ಪದದ ಅರ್ಥವೇನು?
3. ಸಿಂಧೂ ನಾಗರಿಕತೆಯ ಸ್ನಾನ ಗೃಹ ಎಲ್ಲಿದೆ?
4. ಸಿಂಧೂ ನಾಗರಿಕತೆಯ ಹಡಗು ಕಟ್ಟೆ ಎಲ್ಲಿ ಪತ್ತೆಯಾಗಿದೆ ?
5. ಸಿಂಧೂ ಜನರ ಪ್ರಧಾನ ದೇವತೆಯನ್ನು ತಿಳಿಸಿ.

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ 2ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಹರಪ್ಪಾ ಮತ್ತು ಮೊಹೆಂಜೊದಾರೋಗಳನ್ನು ಯಾರು ಕಂಡು ಹಿಡಿದರು ?
2. ಸಿಂಧೂ ನಾಗರಿಕತೆಯಲ್ಲಿ ಪತ್ತೆಯಾದ ಯಾವುದಾದರು ಎರಡು ನಗರಗಳನ್ನು ಹೆಸರಿಸಿ.
3. ಸಿಂಧೂ ಜನರ ಶವ ಸಂಸ್ಕಾರ ಪದ್ಧತಿಗಳನ್ನು ತಿಳಿಸಿ.
4. ಸಿಂಧೂ ಜನರ ಯಾವುದಾದರು ಎರಡು ಆಮದುಗಳನ್ನು ತಿಳಿಸಿ.
5. ಸಿಂಧೂ ಜನರ ಯಾವುದಾದರು ಎರಡು ರಫ್ತುಗಳನ್ನು ತಿಳಿಸಿ.
6. ಸಿಂಧೂ ನಾಗರಿಕತೆಯ ಅಂತ್ಯಕ್ಕೆ ಕಾರಣವಾದ ಯಾವುದಾದರು ಎರಡು ಕಾರಣಗಳನ್ನು ತಿಳಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಸಿಂಧೂ ನಾಗರಿಕತೆಯ ನಗರ ಯೋಜನೆಯನ್ನು ವಿವರಿಸಿ.
2. ಸಿಂಧೂ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ತಿಳಿಸಿರಿ.

IV. ಈ ಕೆಳಗಿನ ಪ್ರಶ್ನೆಗೆ 30–40 ವಾಕ್ಯಗಳಲ್ಲಿ ಉತ್ತರಿಸಿ.

1. ಸಿಂಧೂ ನಾಗರಿಕತೆಯ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

* * * *

ಅಧ್ಯಾಯ 4

ಪ್ರಾಚೀನ ಯುಗ

ಅಧ್ಯಾಯ – 4.1

ವೈದಿಕ ಸಂಸ್ಕೃತಿ

ಭಾರತದ ಉಪಖಂಡದಲ್ಲಿ ಸಿಂಧೂ ನಾಗರಿಕತೆಯ ನಂತರ ಆರ್ಯರು ಒಂದು ವಿಭಿನ್ನ ಸಂಸ್ಕೃತಿಯನ್ನು ಬೆಳೆಸಿದರು. ಸಾ.ಶ.ಪೂ. 2000ದ ಆಸುಪಾಸಿನಲ್ಲಿ ವಾಯುವ್ಯ ದಿಕ್ಕಿನಿಂದ ಅವರು ಭಾರತಕ್ಕೆ ಬಂದಿರಬಹುದೆಂದು ನಂಬಲಾಗಿದೆ. ಆರಂಭಿಕ ಆರ್ಯರು ಯಾವುದೇ ಪುರಾತತ್ವ ಮೂಲಾಧಾರಗಳನ್ನು ಬಿಟ್ಟು ಹೋಗಿಲ್ಲ. ಆದರೆ ಅವರು ಕೊಟ್ಟಿರುವ ಶ್ರೀಮಂತ ವೈದಿಕ ಸಾಹಿತ್ಯ ಅವರ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತದೆ. ವೇದಗಳು ಆರ್ಯರ ಮಹಾನ್ ಕೊಡುಗೆಗಳಾಗಿವೆ. ಆದ್ದರಿಂದ ಈ ಸಂಸ್ಕೃತಿಯನ್ನು ವೈದಿಕ ಸಂಸ್ಕೃತಿ ಎಂದು ಕರೆಯಲಾಗಿದೆ.

ಮೂಲ.

ಆರ್ಯರ ಮೂಲಸ್ಥಳದ ಬಗ್ಗೆ ಒಮ್ಮತಾಭಿಪ್ರಾಯವಿಲ್ಲ. ಆರ್ಯರು ಮೂಲತಃ ಮಧ್ಯ ಏಷಿಯಾದ ಕ್ಯಾಸ್ಪಿಯನ್ ಸಮುದ್ರ ಪ್ರದೇಶದ ಹಳ್ಳಿಗಾಡಿನ ಅಲೆಮಾರಿ ದನಗಾಹಿಗಳಾಗಿದ್ದರೆಂದು ನಂಬಲಾಗಿದೆ. ಅವರು ಹುಲ್ಲುಗಾವಲು ಹುಡುಕಿಕೊಂಡು ವಲಸೆ ಹೊರಟು ಭಾರತದ ಉಪಖಂಡವನ್ನು ಪ್ರವೇಶಿಸಿದರು. ಇಲ್ಲಿನ ಸ್ಥಳೀಯರಿಂದ ಪ್ರಬಲ ವಿರೋಧ ಎದುರಿಸಿದರು ಮತ್ತು ಅವರನ್ನು ದಾಸ್ಯುಗಳೆಂದು ಕರೆದರು. ಆದಾಗ್ಯೂ ಅವರ ಪ್ರತಿರೋಧವನ್ನು ಎದುರಿಸಿ ಸಿಂಧೂ ನದಿಯ ತೀರದಲ್ಲಿ (ಸಪ್ತಸಿಂಧೂ ಪ್ರದೇಶ) ನೆಲೆಸಿದರು. ಉತ್ತರ ಭಾರತದ ಬಹುಭಾಗವನ್ನಾವರಿಸಿದ ಆರ್ಯಾವರ್ತವನ್ನು (ಆರ್ಯರ ನಾಡು) ಇವರು ಆಕ್ರಮಿಸಿಕೊಂಡಿದ್ದರಿಂದ ಸೋತ ದ್ರಾವಿಡರು ದಕ್ಷಿಣಕ್ಕೆ ವಲಸೆ ಹೋದರು.

ಸಪ್ತಸಿಂಧೂ : ಏಳು ನದಿಗಳ ಪ್ರದೇಶ

1. ಝೀಲಂ 2.ಚೀನಾಬ್ 3. ಬಿಯಾಸ್ 4. ರಾವಿ 5. ಸಟ್ಲೇಜ್ 6. ಸರಸ್ವತಿ 7. ದ್ರಿಷದ್ವತಿ

ಆರ್ಯರ ಮೂಲದ ಬಗೆಗಿನ ವಿದ್ವಾಂಸರ ಅಭಿಪ್ರಾಯಗಳು:

ಇತಿಹಾಸಕಾರರು	ಮೂಲ ಸ್ಥಳ
1. ಸ್ವಾಮಿ ದಯಾನಂದ ಸರಸ್ವತಿ	ಟಿಬೆಟ್
2. ಬಾಲಗಂಗಾಧರ ತಿಲಕ್	ಉತ್ತರ ಧ್ರುವ
3. ಮ್ಯಾಕ್ಸ್‌ಮುಲ್ಲರ್	ಮಧ್ಯ ಏಷಿಯಾ
4. ಪ್ರೊಫೆಸರ್ ಮ್ಯಾಕ್‌ಡೊನೆಲ್	ಆಗ್ನೇಯ ಏಷಿಯಾ
5. ಡಾ॥ ಎ.ಸಿ. ದಾಸ್	ಪಂಜಾಬ್
6. ರಾಜಬಲಿ ಪಾಂಡೆ	ಮಧ್ಯಭಾರತ
7. ಪಂಡಿತ್ ಲಕ್ಷ್ಮೀಧರ ಶಾಸ್ತ್ರಿ	ಹಿಮಾಲಯದ ತಪ್ಪಲು ಪ್ರದೇಶ
8. ಎಲ್.ಡಿ. ಕಾಲಾ	ಕಾಶ್ಮೀರ

ಆರ್ಯ ಅಂದರೆ ಕುಲೀನ ಅಥವಾ ಒಡೆಯ ಅಥವಾ ಕೃಷಿ ಅವಲಂಬಿತ ವ್ಯಕ್ತಿ ಎಂದರ್ಥ. ಆರ್ಯರು ದ್ರಾವಿಡರಿಗಿಂತ ಸಾಕಷ್ಟು ಭಿನ್ನವಾಗಿದ್ದರು. ಅವರು ಶುಭ್ರವರ್ಣದ ಸದೃಢ ಮೈಕಟ್ಟಿನವರಾಗಿದ್ದರು. ವೈದಿಕ ಸಂಸ್ಕೃತಿಯನ್ನು ಅಭ್ಯಸಿಸಲು ಆರ್ಯರ ಪವಿತ್ರ ಗ್ರಂಥಗಳಾದ ವೇದಗಳು ಪ್ರಮುಖ ಮೂಲಾಧಾರಗಳಾಗಿವೆ. 'ವೇದ' ಶಬ್ದವನ್ನು ಸಂಸ್ಕೃತ ಮೂಲದ 'ವಿದ್' ಎಂಬುದರಿಂದ ಪಡೆಯಲಾಗಿದೆ. 'ವಿದ್' ಎಂದರೆ ಜ್ಞಾನ ಎಂದರ್ಥ. ಅವರು ನಾಲ್ಕು ವೇದಗಳನ್ನು ರಚಿಸಿದರು. ಅವುಗಳೆಂದರೆ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ. ಋಗ್ವೇದವನ್ನು ಮೊದಲು ರಚಿಸಲಾಯಿತು. ಈ ಅವಧಿಯನ್ನು ಪೂರ್ವವೇದಕಾಲ ಅಥವಾ ಋಗ್ವೇದದ ಕಾಲವೆಂದು ಕರೆಯಲಾಗಿದೆ. ಉಳಿದ ಮೂರು ವೇದಗಳಾದ ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದಗಳು ಆನಂತರ ರಚನೆಯಾದವು. ಇದನ್ನು ಉತ್ತರ ವೇದ ಕಾಲವೆಂದು ಕರೆಯಲಾಗಿದೆ.

ಪ್ರಮುಖ ಲಕ್ಷಣಗಳು.

ರಾಜಕೀಯ ಸ್ಥಿತಿ

ಆರ್ಯರ ಬುಡಕಟ್ಟುಗಳು ಕ್ರಮೇಣವಾಗಿ ಭಾರತದಲ್ಲಿ ನೆಲೆಸಿದವು. ಬುಡಕಟ್ಟುಗಳನ್ನು 'ಜನ'ಗಳು ಎಂದು ಕರೆಯಲಾಗುತ್ತಿತ್ತು. ಬುಡಕಟ್ಟಿನ ಮುಖ್ಯಸ್ಥನನ್ನು 'ರಾಜನ್' ಎಂದು ಕರೆಯುತ್ತಿದ್ದರು. ಜಾನುವಾರುಗಳು ಮತ್ತು ಪ್ರದೇಶಗಳಿಗಾಗಿ ಬುಡಕಟ್ಟುಗಳು ಪರಸ್ಪರ ಸಂಘರ್ಷದಲ್ಲಿ ತೊಡಗಿದ್ದವು. ಪುರೋಹಿತ, ಸಂಗ್ರಹತ್ರಿ, ಸೇನಾಪತಿ, ವಿಸ್ಪತಿಗಳು ಮತ್ತು ಗ್ರಾಮಣಿಗಳು ಅರಸನಿಗೆ ಆಡಳಿತದಲ್ಲಿ ಸಹಾಯಕರಾಗಿದ್ದರು. ಗ್ರಾಮ ಆಡಳಿತದ ಅತ್ಯಂತ ಸಣ್ಣ ಘಟಕವಾಗಿತ್ತು. ಗ್ರಾಮಣಿಯು ಗ್ರಾಮದ ಮುಖ್ಯಸ್ಥನಾಗಿದ್ದನು ಮತ್ತು ವಿಸ್ಪತಿಯು ಕೆಲವು ಗ್ರಾಮಗಳ ಗುಂಪಿನ ಉಸ್ತುವಾರಿ ಹೊಂದಿದ್ದನು. ರಾಜನ ಪ್ರಾಥಮಿಕ ಕರ್ತವ್ಯವು ಬುಡಕಟ್ಟಿನ ರಕ್ಷಣೆ ಮಾಡುವುದಾಗಿತ್ತು ಮತ್ತು ಇದಕ್ಕಾಗಿ ಅವನು ಜನರಿಂದ ಕಾಣಿಕೆಗಳನ್ನು ಪಡೆಯುತ್ತಿದ್ದನು. ಸಭಾ (ಹಿರಿಯರ ಗುಂಪು) ಮತ್ತು ಸಮಿತಿ (ಪರಿಣಿತರ ಗುಂಪು)ಗಳು ಸಹ ರಾಜನಿಗೆ ಆಡಳಿತದಲ್ಲಿ ಸಹಾಯಕವಾಗಿದ್ದವು.

ಉತ್ತರ ವೇದ ಕಾಲದಲ್ಲಿ 'ಜನ'ಗಳು ಪ್ರಬಲವಾಗಿ ರಾಜ್ಯಗಳಾಗಿ ಪರಿವರ್ತನೆಗೊಂಡವು. ರಾಜ್ಯಗಳು ಪ್ರಾಂತ್ಯಗಳಾಗಿ ವಿಭಜಿಸಲ್ಪಟ್ಟವು ಮತ್ತು ಪ್ರಾಂತ್ಯಗಳು 'ಗೋಪ'ಗಳು, 'ವಿಷಯ'ಗಳು ಹಾಗೂ 'ಗ್ರಾಮ'ಗಳಾಗಿ ಉಪವಿಂಗಡಣೆಗೊಂಡವು. ರಾಜಪ್ರಭುತ್ವವು ವಂಶಪಾರಂಪರ್ಯವಾಯಿತು. ಕುರು, ಪಾಂಚಾಲ, ಕಾಶಿ, ವಿದೇಹ, ವಿದರ್ಭ ಮುಂತಾದವು ಪ್ರಮುಖ ರಾಜ್ಯಗಳಾಗಿದ್ದವು. ಸಾಮ್ರಾಜ್ಯಶಾಹಿತ್ವದ ಪರಿಣಾಮವಾಗಿ ಅರಸರಲ್ಲಿ ಶ್ರೇಣೀಕ್ರಮ ಅಸ್ತಿತ್ವಕ್ಕೆ ಬಂದಿತು. ಉದಾಹರಣೆಗೆ – ರಾಜ, ಮಹಾರಾಜ, ರಾಜಾಧಿರಾಜ, ಏಕರಾಟ, ವಿರಾಟ, ಸಾಮ್ರಾಟ, ಚಕ್ರವರ್ತಿ ಮುಂತಾದವು. ರಾಜಕೀಯ ಸಾರ್ವಭೌಮತ್ವದ ಸ್ಥಾಪನೆಗಾಗಿ ಅರಸರು ರಾಜಸೂಯ, ಅಶ್ವಮೇಧ ಮತ್ತು ವಾಜಪೇಯ ಯಾಗಗಳನ್ನು ಮಾಡತೊಡಗಿದರು. ರಾಜನ ಅಧಿಕಾರವು ಹೆಚ್ಚಾಗಿ ಜನರ ರಕ್ಷಣೆಯ ಜೊತೆಗೆ ಆಡಳಿತಾತ್ಮಕ ಕರ್ತವ್ಯಗಳನ್ನು ನಿರ್ವಹಿಸುವುದಾಗಿತ್ತು. ಮಂತ್ರಿಮಂಡಲ ಮತ್ತು ಅನೇಕ ಅಧಿಕಾರಿಗಳು ರಾಜನಿಗೆ ಸಹಾಯ ಸಲ್ಲಿಸುತ್ತಿದ್ದರು. ಸಭಾ ಮತ್ತು ಸಮಿತಿಗಳ ಅಸ್ತಿತ್ವ ಮುಂದುವರೆಯಿತು.

ಸೈನ್ಯವು ವ್ಯವಸ್ಥಿತವಾಗಿ ಸಂಘಟಿಸಲ್ಪಟ್ಟಿತ್ತು ಮತ್ತು ಅದು ಕಾಲ್ದಳ, ಗಜದಳ ಮತ್ತು ಅಶ್ವದಳಗಳನ್ನೊಳಗೊಂಡಿತ್ತು. ನೌಕಾದಳದ ಬಳಕೆ ಮಿತವಾಗಿತ್ತು. ಯುದ್ಧವು ಉತ್ತರ ವೇದ ಕಾಲದಲ್ಲಿ ಜಟಿಲಗೊಂಡಿತು. ಪೂರ್ವವೇದಕಾಲದ ಸರಳ ಯುದ್ಧೋಪಕರಣಗಳ ಬದಲಾಗಿ, ಉತ್ತರ ವೇದಕಾಲದಲ್ಲಿ ಸುಧಾರಿತ ಬಿಲ್ಲುಗಳು, ಬಾಣಗಳು, ಖಡ್ಗಗಳು, ಭರ್ಚಿಗಳು, ಗದೆಗಳು, ಕೊಡಲಿಗಳು ಮುಂತಾದ ಯುದ್ಧೋಪಕರಣಗಳು ಬಳಕೆಗೆ ಬಂದವು. ಶಿರಸ್ತ್ರಾಣಗಳು ಮತ್ತು ಕವಚಗಳು ರಕ್ಷಣೆಗಾಗಿ ಉಪಯೋಗಿಸಲ್ಪಟ್ಟವು. ಯುದ್ಧದಲ್ಲಿ ಜಯಗಳಿಸುವುದು ಪ್ರಮುಖವಾಯಿತು ಮತ್ತು ಇದಕ್ಕಾಗಿ ಮೋಸದ ಮಾರ್ಗವನ್ನು ಅನುಸರಿಸಲಾರಂಭಿಸಿದರು.

ಸಾಮಾಜಿಕ ಸ್ಥಿತಿ.

ಅವಿಭಕ್ತ ಕುಟುಂಬ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಆರ್ಯಸಮಾಜವು ಪಿತೃಪ್ರಧಾನವಾಗಿತ್ತು. ಕುಟುಂಬದ ಹಿರಿಯ ಪುರುಷ ಸದಸ್ಯ ಮುಖ್ಯಸ್ಥನಾಗಿದ್ದು, ಅವನನ್ನು 'ಕುಲಪತಿ' ಅಥವಾ 'ಗೃಹಪತಿ' ಎಂದು ಕರೆಯಲಾಗಿತ್ತು. ಏಕಪತ್ನಿತ್ವ ರೂಢಿಯಲ್ಲಿತ್ತು. ಬಹುಪತ್ನಿತ್ವ ರಾಜವಂಶಕ್ಕೆ ಸೀಮಿತವಾಗಿತ್ತು. ವಿಧವಾ ಪುನರ್‌ವಿವಾಹ ಅಸ್ತಿತ್ವದಲ್ಲಿತ್ತು. ಮಹಿಳೆಯರಿಗೆ ಉನ್ನತ ಸ್ಥಾನವಿತ್ತು ಮತ್ತು ಅವರು ಪುರುಷರೊಂದಿಗೆ ಸಮಾನ ಹಕ್ಕುಗಳನ್ನು ಹೊಂದಿದ್ದರು. ಮಹಿಳಾ ವಿದ್ವಾಂಸರಾದ ವಿಶ್ವವರಾ, ಘೋಷಾ, ಅಪಾಲಾ ಮುಂತಾದವರು ಶ್ಲೋಕಗಳನ್ನು ರಚಿಸಿದ್ದರು. ಸಾಮಾಜಿಕ ವರ್ಗೀಕರಣಗಳಾದ ಚತುರ್‌ವರ್ಣಗಳು ವೃತ್ತಿ ಆಧಾರಿತವಾಗಿದ್ದವು. ಅವುಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ. ವೃತ್ತಿಗಳನ್ನು ಬದಲಾಯಿಸುವುದರೊಂದಿಗೆ ಜನರು ವರ್ಣಗಳನ್ನೂ ಬದಲಾಯಿಸಬಹುದಾಗಿತ್ತು. ಹೀಗೆ ವರ್ಣಗಳಲ್ಲಿ ಚಲನಶೀಲತೆ ಇತ್ತು.

ಉತ್ತರ ವೇದಕಾಲದಲ್ಲಿ ಬಹುಪತ್ನಿತ್ವ ಮತ್ತು ಬಹುಪತಿತ್ವ ಅಸ್ತಿತ್ವಕ್ಕೆ ಬಂದವು. ಮಹಿಳೆಯರ ಸ್ಥಾನ ಕ್ಷೀಣಿಸಿತು. ಮಹಿಳೆಯರು ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳುವುದು ಮುಂದುವರೆಯಿತು. ಉನ್ನತ ವರ್ಗದ ಮಹಿಳೆಯರು ಮಾತ್ರ ಉಚ್ಚಶಿಕ್ಷಣ ಪಡೆಯುತ್ತಿದ್ದರು. ಆದರೆ ಮಹಿಳೆ ಈಗ ತಂದೆ ಅಥವಾ ಗಂಡ ಅಥವಾ ಮಗನ ರಕ್ಷಣೆಯಲ್ಲಿರಬೇಕಾಯಿತು. ವರ್ಣಗಳು ಅನೇಕ ಜಾತಿಗಳಾಗಿ ಪರಿವರ್ತನೆಗೊಂಡವು. ಜಾತಿಪದ್ಧತಿ ಅನುವಂಶಿಕವಾಯಿತು. ವೈಶ್ಯರು ಮತ್ತು ಶೂದ್ರರಿಗೆ ಹೋಲಿಸಿದರೆ ಬ್ರಾಹ್ಮಣರು ಮತ್ತು ಕ್ಷತ್ರಿಯರು ಉನ್ನತ ಸ್ಥಾನ–ಮಾನ ಅನುಭವಿಸುತ್ತಿದ್ದರು. ವ್ಯಕ್ತಿಯೊಬ್ಬನ ಜೀವನವನ್ನು ನಾಲ್ಕು ಹಂತಗಳಾಗಿ ವಿಂಗಡಿಸಲಾಯಿತು. ಇವುಗಳನ್ನು ಆಶ್ರಮಗಳೆಂದು ಕರೆಯುತ್ತಾರೆ. ಅವುಗಳೆಂದರೆ, ಬ್ರಹ್ಮಚರ್ಯ (ಶಿಕ್ಷಣದ ಅವಧಿ), ಗೃಹಸ್ಥ (ವೈವಾಹಿಕ ಜೀವನ), ವಾನಪ್ರಸ್ಥ (ಧ್ಯಾನಕ್ಕಾಗಿ ಕಾಡಿಗೆ ತೆರಳುವುದು) ಮತ್ತು ಸನ್ಯಾಸ (ವೈರಾಗ್ಯ) ಎಂಬುದಾಗಿತ್ತು.

ಗೋದಿ, ಅಕ್ಕಿ, ಬಾರ್ಲಿ, ತರಕಾರಿ, ಹಣ್ಣುಗಳು, ಹಾಲು ಮತ್ತು ಹೈನು ಜನರ ಆಹಾರ ಪದಾರ್ಥಗಳಾಗಿದ್ದವು. ಮೀನು ಮತ್ತು ಮಾಂಸಗಳನ್ನೂ ಉಪಯೋಗಿಸುತ್ತಿದ್ದರು. ಧಾರ್ಮಿಕ ಮತ್ತು ಹಬ್ಬದ ಸಂದರ್ಭದಲ್ಲಿ ಸೋಮ ಮತ್ತು ಸುರವೆಂಬ ಮಾದಕ ಪೇಯಗಳನ್ನು ಸೇವಿಸುತ್ತಿದ್ದರು.

ಆರ್ಯರು ಹತ್ತಿ ಮತ್ತು ಉಣ್ಣೆಯಿಂದ ತಯಾರಿಸಿದ ಉಡುಪುಗಳನ್ನು ಧರಿಸುತ್ತಿದ್ದರು. ಅವರ ಉಡುಪು ವಸ್ತ್ರ–ಆದಿವಸ್ತ್ರ ಮತ್ತು ನಿವಿ ಒಳಗೊಂಡಿತ್ತು. ಚಿನ್ನ, ಬೆಳ್ಳಿ ಮತ್ತು ಹೂವುಗಳಿಂದ ತಯಾರಿಸಿದ ಆಭರಣಗಳನ್ನು ಸ್ತ್ರೀ ಮತ್ತು ಪುರುಷರಿಬ್ಬರೂ ಧರಿಸುತ್ತಿದ್ದರು. ಕಂಠಹಾರ, ಕಿವಿಯೋಲೆ, ಉಂಗುರ, ಕೈಕಡಗ, ಕಾಲಂದುಗೆ, ಬಳೆ, ತೋಳಬಂದಿ ಮುಂತಾದವುಗಳನ್ನು ಧರಿಸುತ್ತಿದ್ದರು. ಸ್ತ್ರೀಯರು ವಿವಿಧ ಶೈಲಿಗಳಲ್ಲಿ ಜಡೆಗಳನ್ನು ಹೆಣೆದುಕೊಳ್ಳುತ್ತಿದ್ದರು.

ಜೂಜಾಡುವುದು, ರಥ ಓಡಿಸುವ ಸ್ಪರ್ಧೆ, ಕುದುರೆ ಓಡಿಸುವ ಸ್ಪರ್ಧೆ, ಸಂಗೀತ, ನೃತ್ಯ ಮುಂತಾದುವುಗಳು ಅವರ ವಿವಿಧ ರೀತಿಯ ಮನರಂಜನೆಗಳಾಗಿದ್ದವು. ನಗಾರಿ, ದುಂದುಭಿ, ವೀಣೆ, ಮತ್ತು ಕೊಳಲು ಆ ಕಾಲದ ಪ್ರಮುಖ ಸಂಗೀತ ವಾದ್ಯಗಳಾಗಿದ್ದವು.

ಆರ್ಥಿಕ ಸ್ಥಿತಿ.

ಋಗ್ವೇದದ ಕಾಲದಲ್ಲಿ ಆರ್ಯರು ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ಕೃಷಿ ಅವರ ಪ್ರಮುಖ ಕಸುಬಾಗಿತ್ತು. ಪಶುಪಾಲನೆ ಇನ್ನೊಂದು ಪ್ರಮುಖ ಉದ್ಯೋಗವಾಗಿತ್ತು. ಉಳುಮೆ ಭೂಮಿಯನ್ನು 'ಕ್ಷೇತ್ರ'ವೆಂದು ಕರೆಯುತ್ತಿದ್ದರು. ಮರಗೆಲಸ, ಕುಂಬಾರಿಕೆ, ನೇಕಾರಿಕೆ, ಮುಂತಾದ ಸರಳ ವೃತ್ತಿಗಳು ಅಸ್ತಿತ್ವದಲ್ಲಿದ್ದವು. ವ್ಯಾಪಾರವು ಅಲ್ಪ ಪ್ರಮಾಣದಲ್ಲಿ ನಡೆಯುತಿತ್ತು. ಜಾನುವಾರುಗಳನ್ನು ಸಂಪತ್ತೆಂದು ಪರಿಗಣಿಸಲಾಗಿತ್ತು. ವಸ್ತುವಿನಿಮಯ ಪದ್ಧತಿ ರೂಢಿಯಲ್ಲಿತ್ತು.

ಉತ್ತರ ವೇದಕಾಲದಲ್ಲಿ ಅನೇಕ ಹಳ್ಳಿಗಳು ನಗರಗಳಾಗಿ ಮಾರ್ಪಟ್ಟವು. ಉದಾಹರಣೆಗೆ – ಹಸ್ತಿನಾಪುರ, ಇಂದ್ರಪ್ರಸ್ತ, ಕೌಸಂಬಿ ಮುಂತಾದವುಗಳು. ಕೃಷಿ ಪ್ರಮುಖ ಉದ್ಯೋಗವಾಗಿ ಮುಂದುವರೆಯಿತು. ಪಶುಪಾಲನೆ, ವ್ಯಾಪಾರ ಮತ್ತಿತರ ವೃತ್ತಿಗಳು ಮುಂದುವರಿದವು. ವ್ಯಾಪಾರ ಮತ್ತು ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆಯಿತು. ಆಂತರಿಕ ಮತ್ತು ಸಮುದ್ರವ್ಯಾಪಾರಗಳೆರಡೂ ಕಂಡುಬರುತ್ತವೆ. ಹತ್ತಿ, ರೇಷ್ಮೆ ಮುಂತಾದವು ಅವರ ವ್ಯಾಪಾರದ ಮುಖ್ಯ ವಸ್ತುಗಳಾಗಿದ್ದವು. ವಸ್ತು ವಿನಿಮಯ ಪದ್ಧತಿ ಮುಂದುವರೆಯಿತು ಮತ್ತು ನಿಷ್ಕ (ಒಂದು ಚಿನ್ನದ ತುಣುಕು) ಕೂಡಾ ಬಳಕೆಯಲ್ಲಿತ್ತು.

ಧಾರ್ಮಿಕ ಸ್ಥಿತಿ.

ವೈದಿಕ ಧರ್ಮವು ಸನಾತನ ಧರ್ಮ, ಹಿಂದೂಧರ್ಮ ಮತ್ತು ಬ್ರಾಹ್ಮಣ ಧರ್ಮ ಎಂದೂ ಸಹ ಹೆಸರಾಗಿದೆ. ಇದು ಜಗತ್ತಿನ ಅತ್ಯಂತ ಪುರಾತನ ಧರ್ಮಗಳಲ್ಲಿ ಒಂದಾಗಿದ್ದು, ಇಂದಿಗೂ ಆಚರಣೆಯಲ್ಲಿದೆ. ಪೂರ್ವ ವೇದ ಕಾಲದ ಆರ್ಯರು ಪ್ರಕೃತಿಯನ್ನು ಆರಾಧಿಸುತ್ತಿದ್ದರು. ಅವರಿಗೆ ಅನೇಕ ದೇವರುಗಳಲ್ಲಿ ನಂಬಿಕೆಯಿತ್ತು. ಅವರು ಇಂದ್ರ, ವರುಣ, ಅಗ್ನಿ, ವಾಯು, ಸೂರ್ಯ, ಪೃಥ್ವಿ, ಸೋಮ ಮುಂತಾದ ದೇವತೆಗಳನ್ನು ಪೂಜಿಸುತ್ತಿದ್ದರು. ಆದ್ದರಿಂದ ಅವರು ಬಹುದೇವತಾ ಆರಾಧಕರಾಗಿದ್ದರು. ಮೂರ್ತಿ ಪೂಜೆ ಇರಲಿಲ್ಲ. ಪೂಜಾ ವಿಧಾನ ಸರಳವಾಗಿತ್ತು. ಅವರು ಶ್ಲೋಕಗಳನ್ನು ರಚಿಸಿ ದೇವತೆಗಳನ್ನು ಆರಾಧಿಸುತ್ತಿದ್ದರು. ಸರಳ ವಿಧಿ ವಿಧಾನಗಳು ಮತ್ತು ಯಜ್ಞ–ಯಾಗಾದಿಗಳು (ಬಲಿ ಅರ್ಪಣೆ) ರೂಢಿಯಲ್ಲಿದ್ದವು.

ಉತ್ತರ ವೇದಕಾಲದಲ್ಲಿ ಧರ್ಮಾಚರಣೆ ಸಂಕೀರ್ಣ ಮತ್ತು ಕಠಿಣವಾಯಿತು. ದೇವತೆಗಳ ಸಂಖ್ಯೆ ಬಹುಪಟ್ಟು ಹೆಚ್ಚಿತು ಮತ್ತು ದೇವತೆಗಳಿಗೆ ವಿವಿಧ ಆಕಾರ ಮತ್ತು ಗುಣಗಳನ್ನು ಕೊಡಲಾಯಿತು. ಮೂರ್ತಿಪೂಜೆ ಅಸ್ತಿತ್ವಕ್ಕೆ ಬಂದಿತು. ದೇವತೆಗಳನ್ನು ಶ್ರೇಣೀಕರಿಸಲಾಯಿತು. ಹೊಸ ದೇವತೆಗಳಾದ ಬ್ರಹ್ಮ, ವಿಷ್ಣು, ಮಹೇಶ್ವರ, ಗಣೇಶ, ಕಾರ್ತಿಕೇಯ, ಪಾರ್ವತಿ, ಲಕ್ಷ್ಮಿ, ಕಾಳಿ, ದುರ್ಗಾ ಮುಂತಾದವರು ಅಸ್ತಿತ್ವಕ್ಕೆ ಬಂದರು. ಆಕಳನ್ನು ಪವಿತ್ರವೆಂದು ಪರಿಗಣಿಸಲಾಗಿತ್ತು ಮತ್ತು ಅದರ ಹತ್ಯೆಯನ್ನು ನಿಷೇಧಿಸಲಾಯಿತು. ವಿಸ್ತೃತವಾದ ವಿಧಿವಿಧಾನಗಳು ಮತ್ತು ಮಂತ್ರಗಳ ಬಳಕೆ ಪೂಜಾ ವಿಧಾನವನ್ನು ಸಂಕೀರ್ಣಗೊಳಿಸಿತು. ಯಜ್ಞ ಮತ್ತು ಯಾಗಾದಿಗಳ ಆಚರಣೆಯೂ ವಿಸ್ತೃತವಾದವು. ಆದ್ದರಿಂದ ವೈದಿಕ ಧರ್ಮದ ಆಚರಣೆ ದುಬಾರಿಯಾಯಿತು. ಕ್ಷುದ್ರಪೂಜೆ, ವಾಮಾಚಾರ ಮತ್ತು ಮಾಟಮಂತ್ರಗಳು ರೂಢಿಗೆ ಬಂದವು.

ವರ್ಣಗಳು, ಆಶ್ರಮಗಳು ಮತ್ತು ಪುರುಷಾರ್ಥಗಳು (ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ) ವೈದಿಕ ಧರ್ಮದ ಅವಿಭಾಜ್ಯ ಅಂಗಳಾಗಿವೆ. ಹಿಂದೂಗಳ ಸಂಪೂರ್ಣ ಜೀವನವು ಸಂಸ್ಕಾರಗಳಿಂದ ಮಾರ್ಗದರ್ಶಿಸಲ್ಪಟ್ಟಿದೆ. ವೈದಿಕ ಧರ್ಮವು ಹುಟ್ಟು–ಸಾವು–ಪುನರ್ಜನ್ಮ ಚಕ್ರದಲ್ಲಿ ಮತ್ತು ಆತ್ಮದ ಪರಕಾಯ ಪ್ರವೇಶದ ಪರಿಕಲ್ಪನೆಯಲ್ಲೂ ನಂಬಿಕೆ ಹೊಂದಿದೆ. ಆತ್ಮದ ಉದ್ದೇಶವು ದೇವರನ್ನು ಸೇರುವುದಾಗಿದ್ದು, ಅದನ್ನು 'ಮೋಕ್ಷ' ಎಂದು ಕರೆಯಲಾಗಿದೆ. ಮೋಕ್ಷ ಸಾಧನೆಗಾಗಿ ಭಕ್ತಿ, ಜ್ಞಾನ, ಕರ್ಮ ಮತ್ತು ಯೋಗ ಮಾರ್ಗಗಳಂತಹ ಪಥಗಳನ್ನು ಸೂಚಿಸಲಾಗಿದೆ. ಹಿಂದೂಗಳ ಪವಿತ್ರ ಗ್ರಂಥಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಅದರಲ್ಲಿ ಪ್ರಮುಖವಾದವುಗಳೆಂದರೆ ವೇದಗಳು, ಉಪನಿಷತ್ತುಗಳು, ಪುರಾಣಗಳು, ಸ್ಮೃತಿಗಳು ಮುಂತಾದವು. ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿದೆ.

ಶಿಕ್ಷಣ ಮತ್ತು ವಿಜ್ಞಾನ.

ಗುರುಕುಲ, ಪಾಠಶಾಲೆ, ಅಗ್ರಹಾರ ಮತ್ತು ಘಟಿಕಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ದೇವಾಲಯಗಳೂ ಕೂಡ ಶಿಕ್ಷಣಕೇಂದ್ರಗಳಾಗಿದ್ದವು. ಉನ್ನತ ಶಿಕ್ಷಣವನ್ನು ಕಂಚಿ ಮತ್ತು ತಕ್ಷಶಿಲಾಗಳಂತಹ ವಿಶ್ವವಿದ್ಯಾಲಯಗಳಲ್ಲಿ ಒದಗಿಸಲಾಗುತ್ತಿತ್ತು. ಶಿಕ್ಷಣವು ಉಪನಯನ ಸಮಾರಂಭದೊಂದಿಗೆ ಪ್ರಾರಂಭವಾಗುತ್ತಿತ್ತು. ಗುರುವಿನ ಸ್ಥಾನ

ಉನ್ನತವಾಗಿತ್ತು. ಸ್ತ್ರೀ–ಪುರುಷರಿಬ್ಬರೂ ಶಿಕ್ಷಣ ಪಡೆಯುತ್ತಿದ್ದರು. ಗಾರ್ಗಿ, ಮೈತ್ರೇಯಿ, ಶಾಶ್ವತಿ, ಲೋಪಮುದ್ರಾ ಮುಂತಾದವರು ಪ್ರಮುಖ ಮಹಿಳಾ ವಿದ್ವಾಂಸರಾಗಿದ್ದರು. ವೇದಗಳು, ಪುರಾಣಗಳು, ತತ್ವಶಾಸ್ತ್ರ, ಗಣಿತ, ಖಗೋಳಶಾಸ್ತ್ರ, ಜೋತಿಷ್ಯಶಾಸ್ತ್ರ, ಔಷಧಶಾಸ್ತ್ರ, ತರ್ಕಶಾಸ್ತ್ರ ಮುಂತಾದವು ಪ್ರಮುಖ ಬೋಧನಾ ವಿಷಯಗಳಾಗಿದ್ದವು. ಸಂಸ್ಕೃತ ಬೋಧನಾ ಮಾಧ್ಯಮವಾಗಿತ್ತು. ಆರ್ಯರು ಗಣಿತ, ರೇಖಾಗಣಿತ, ಔಷಧಶಾಸ್ತ್ರ ಮತ್ತು ಲೋಹಶಾಸ್ತ್ರಗಳಲ್ಲಿ ಹೆಚ್ಚಿನ ಪ್ರಗತಿ ಹೊಂದಿದ್ದರು. ಸೂರ್ಯ ಮತ್ತು ಚಂದ್ರ, ಚಂದ್ರ ಮತ್ತು ಭೂಮಿ ಹಾಗೂ ಸೂರ್ಯ ಮತ್ತು ಭೂಮಿಗಳ ನಡುವಿನ ಅಂತರದ ಲೆಕ್ಕಾಚಾರ ಅವರಿಗೆ ತಿಳಿದಿತ್ತು. ಗ್ರಹಣಗಳು ಮತ್ತು ಧೂಮಕೇತುಗಳ ಸಂಭವಿಸುವಿಕೆಯ ಜ್ಞಾನವೂ ಅವರಿಗಿತ್ತು. ಔಷಧಶಾಸ್ತ್ರದಲ್ಲಿಯೂ ಹೆಚ್ಚಿನ ಪ್ರಗತಿ ಸಾಧಿಸಿದ್ದರು. ಗಿಡಮೂಲಿಕೆಗಳು, ಗೆಡ್ಡೆಗಳು, ಎಲೆಗಳು, ತೈಲ, ಲವಣಗಳು ಮತ್ತು ಮಣ್ಣನ್ನು ಉಪಯೋಗಿಸಿ ರೋಗಗಳನ್ನು ಗುಣಪಡಿಸಲಾಗುತ್ತಿತ್ತು. ಅವರು ಚಂದ್ರಮಾನ ಪಂಚಾಂಗವನ್ನು ಅನುಸರಿಸುತ್ತಿದ್ದರು.

ಚಟುವಟಿಕೆ

ವೈದಿಕ ಸಂಸ್ಕೃತಿ ಮತ್ತು ಸಿಂಧೂ ನಾಗರಿಕತೆಯ ನಡುವಿನ ವ್ಯತ್ಯಾಸಗಳನ್ನು ವಿಶ್ಲೇಷಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. 'ಆರ್ಯ' ಪದದ ಅರ್ಥವೇನು?
2. ಯಾವ ಶಬ್ದದಿಂದ 'ವೇದ' ಎನ್ನುವ ಶಬ್ದವನ್ನು ಪಡೆಯಲಾಗಿದೆ?
3. 'ವೇದ' ಎಂದರೇನು ?
4. ಪ್ರಥಮ ವೇದವನ್ನು ಹೆಸರಿಸಿ.
5. ವೇದಗಳ ಕಾಲದಲ್ಲಿ ಕುಟುಂಬದ ಯಜಮಾನ ಯಾರಾಗಿದ್ದರು?
6. ಆರ್ಯರ ಪ್ರಮುಖ ಕಸುಬು ಏನಾಗಿತ್ತು?
7. ಕ್ಷೇತ್ರ' ಎಂದರೇನು?
8. ಆರ್ಯರು ಯಾವುದನ್ನು ಸಂಪತ್ತೆಂದು ಪರಿಗಣಿಸಿದ್ದರು?
9. ಮಗುವನ್ನು ಶಾಲೆಗೆ ಕಳುಹಿಸಲು ಮಾಡುತ್ತಿದ್ದ ಸಮಾರಂಭ ಯಾವುದು ?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಯಾವುದಾದರು ಎರಡು ವೇದಗಳನ್ನು ಹೆಸರಿಸಿ.
2. ವೈದಿಕ ಕಾಲದಲ್ಲಿ ರಾಜನಿಗೆ ಯಾವ ಎರಡು ರಾಜಕೀಯ ಸಂಸ್ಥೆಗಳು ಸಹಾಯ ಮಾಡುತ್ತಿದ್ದವು?
3. ಯಾವುದಾದರು ಎರಡು ವರ್ಣಗಳನ್ನು ಹೆಸರಿಸಿ.
4. ಆರ್ಯರ ಯಾವುದಾದರು ಎರಡು ಆಶ್ರಮಗಳನ್ನು ಹೆಸರಿಸಿ.
5. ವೈದಿಕ ಜನರ ಯಾವುದಾದರು ಎರಡು ಮನರಂಜನೆಗಳನ್ನು ತಿಳಿಸಿ.
6. ವೈದಿಕ ಕಾಲದ ಯಾರಾದರೂ ಇಬ್ಬರು ಮಹಿಳಾ ವಿದ್ವಾಂಸರನ್ನು ಹೆಸರಿಸಿ.

III.ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಆರ್ಯರ ರಾಜಕೀಯ ಸ್ಥಿತಿಯ ಬಗ್ಗೆ ವಿವರಣೆ ನೀಡಿ.
2. ಆರ್ಯರ ಸಾಮಾಜಿಕ ಸ್ಥಿತಿಯನ್ನು ವಿವರಿಸಿ.
3. ಆರ್ಯರ ಧಾರ್ಮಿಕ ಸ್ಥಿತಿಯನ್ನು ವಿವರಿಸಿ.
4. ವೈದಿಕ ಕಾಲದ ಶಿಕ್ಷಣ ಮತ್ತು ವಿಜ್ಞಾನ ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

❋ ❋ ❋ ❋

ಅಧ್ಯಾಯ–4.2

ಹೊಸ ಧರ್ಮಗಳ ಉದಯ

ಸಾಶಪೂ 6ನೇ ಶತಮಾನದಲ್ಲಿ, ಭಾರತ, ಸಮಾಜದಲ್ಲಿದ್ದ ಧಾರ್ಮಿಕ ಮತ್ತು ಸಾಮಾಜಿಕ ಶೋಷಣೆಯ ವಿರುದ್ಧ ಪ್ರತಿಭಟನೆಯನ್ನು ಕಂಡಿತು. ಜಾತಿಪದ್ಧತಿ, ಅನ್ಯಾಯ ಮತ್ತು ಕಠಿಣವಾದ ಆಚರಣೆಗಳ ವಿರುದ್ಧ ಒಂದು ಚಳುವಳಿ ನಡೆಯಿತು. ಸರಳ ಧರ್ಮ ಮತ್ತು ಅಧ್ಯಾತ್ಮಿಕ ಕ್ರಮವು ಅಂದಿನ ಕಾಲದ ಅಗತ್ಯವಾಗಿದ್ದು, ಇದನ್ನು ಮಹಾವೀರ ಮತ್ತು ಬುದ್ಧ ಬಹುಮಟ್ಟಿಗೆ ಈಡೇರಿಸಿದರು.

ಹೊಸ ಧರ್ಮಗಳ ಉದಯಕ್ಕೆ ಕಾರಣವಾದ ಅಂಶಗಳು

ಎ) **ವೈದಿಕ ಧರ್ಮದಲ್ಲಿನ ಗೊಂದಲಗಳು:** ಆರಂಭದಲ್ಲಿ ವೈದಿಕ ಧರ್ಮ ಯಾವುದೇ ಜಟಿಲತೆಗಳಿಲ್ಲದೆ ಸರಳವಾಗಿತ್ತು. ನಂತರ ಪುರೋಹಿತರ ಪ್ರಭಾವದಿಂದಾಗಿ ಬಹಳಷ್ಟು ಕಠೋರತೆಗಳು ಧರ್ಮದೊಳಗೆ ನುಸುಳಿದವು. ಜನರು ಅಸಂತುಷ್ಟರಾದರು ಮತ್ತು ಬದಲಾವಣೆಯನ್ನು ಬಯಸಿದ್ದ ಅವರು ಅದನ್ನು ಹೊಸ ಧರ್ಮಗಳಲ್ಲಿ ಕಂಡುಕೊಂಡರು.

ಬಿ) **ಪುರೋಹಿತ ವರ್ಗದ ಪರಮಾಧಿಕಾರ:** ಬ್ರಾಹ್ಮಣರು ಇತರ ಜಾತಿಗಳ ಮೇಲೆ ಪರಮಾಧಿಕಾರ ಸ್ಥಾಪಿಸಿದರು. ಜನರಿಗೆ ಪುರೋಹಿತರಿಲ್ಲದೆ ಯಜ್ಞಗಳನ್ನು ಮಾಡುವುದು ಅಸಾಧ್ಯವಾಗಿತ್ತು. ಬ್ರಾಹ್ಮಣರು ಅನೇಕ ವಿಶೇಷ ಸೌಲಭ್ಯಗಳನ್ನು ಅನುಭವಿಸುತ್ತಿದ್ದರು ಮತ್ತು ತಮ್ಮನ್ನು ಎಲ್ಲರಿಗಿಂತ ಶ್ರೇಷ್ಠರೆಂದು ತಿಳಿದಿದ್ದರು.

ಸಿ) **ಪ್ರಾಣಿಬಲಿ:** ಪ್ರಾಣಿ ಬಲಿ, ಶಾಸ್ತ್ರ ವಿಧಿಗಳ ಒಂದು ಭಾಗವಾಗಿತ್ತು ಮತ್ತು ಇವುಗಳ ಆಚರಣೆ ದುಬಾರಿಯಾಯಿತು. ಹೀಗಾಗಿ ಜನರು ಅಸ್ತಿತ್ವದಲ್ಲಿದ್ದ ಧರ್ಮದಲ್ಲಿನ ನಂಬಿಕೆ ಕಳೆದುಕೊಂಡರು. ಋಗ್ವೇದದ ಕಾಲದ ಧಾರ್ಮಿಕವಿಧಿ ಮತ್ತು ಧರ್ಮಾಚರಣೆ ಉತ್ತರ ವೇದ ಕಾಲದಲ್ಲಿ ಸಂಕೀರ್ಣವಾದವು. ಲೌಕಿಕ ಪ್ರಾಪ್ತಿಗಳಾದ, ಮಕ್ಕಳನ್ನು ಪಡೆಯಲು, ಯುದ್ಧದಲ್ಲಿ ಜಯಗಳಿಸಲು, ರೋಗ ಗುಣಪಡಿಸಲು ಮತ್ತು ಮುಕ್ತಿಯನ್ನು ಪಡೆಯಲು ಯಾಗ ಮತ್ತು ಶಾಸ್ತ್ರೋಕ್ತ ವಿಧಿಗಳನ್ನು ಮಾಡಲು ಸಲಹೆ ಮಾಡುತ್ತಿದ್ದರು. ವಿಚಾರವಾದಿಗಳು ಅವುಗಳನ್ನು ವ್ಯರ್ಥ ಎಂದು ಭಾವಿಸಿದರು.

ಡಿ) **ಮಂತ್ರಗಳ ಪಠಣ:** (ಸಂಸ್ಕೃತ ಶ್ಲೋಕಗಳು)– ಸಂಸ್ಕೃತದಲ್ಲಿದ್ದ ವೈದಿಕ ಸಾಹಿತ್ಯದ ಮೇಲೆ ಪುರೋಹಿತರ ಪ್ರಭುತ್ವವಿತ್ತು. ಜನಸಾಮಾನ್ಯರಿಗೆ ಅವುಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ. ಸ್ಪಷ್ಟ ತಿಳುವಳಿಕೆಯ ಕೊರತೆಯಿಂದ ಜನರು ಮಂತ್ರ ಪಠಣೆಯಲ್ಲಿ ನಂಬಿಕೆ ಕಳೆದುಕೊಂಡರು.

ಇ) **ಜಾತಿ ಪದ್ಧತಿ:** ಸಾಮಾಜಿಕ ವ್ಯವಸ್ಥೆ ಜಟಿಲವಾಗಿತ್ತು. ಬೇರೆ ಬೇರೆ ಜಾತಿಗಳ ಮಧ್ಯೆ ಬೇಧಭಾವವಿತ್ತು. ಬ್ರಾಹ್ಮಣರು ಉನ್ನತ ಸ್ಥಾನವನ್ನು ಹೊಂದಿದ್ದರು. ಸಮಾಜದಲ್ಲಿನ ಅಸಮಾನತೆಯಿಂದಾಗಿ, ಜನರು ಅತೃಪ್ತರಾಗಿದ್ದರು. ಶೂದ್ರರು ಹೇಳಿಕೊಳ್ಳಲಾಗದ ಸಂಕಷ್ಟಗಳಿಗೆ ಗುರಿಯಾದರು.

ಎಫ್) **ಮಹಾನ್ ವ್ಯಕ್ತಿಗಳ ಜನನ:** ಜನರು ಅಸಂತುಷ್ಠರು ಮತ್ತು ಅತೃಪ್ತರಾಗಿದ್ದಾಗ ಮಹಾವೀರ ಮತ್ತು ಗೌತಮ ಬುದ್ಧನಂತಹ ಇಬ್ಬರು ಮಹಾನ್ ವ್ಯಕ್ತಿಗಳು ಜನಿಸಿದರು. ಅವರು ಸರಳವಾದ ತತ್ವಗಳನ್ನು

ಜನರಾಡುವ ಭಾಷೆಯಲ್ಲಿ ಬೋಧಿಸಿದರು. ಹೊಸ ಧರ್ಮಗಳು ಬೋಧಿಸಿದ ಸರಳ ಮುಕ್ತಿ ಮಾರ್ಗದಿಂದಾಗಿ ಸಾಮಾನ್ಯರು ಹೊಸ ಧರ್ಮಗಳತ್ತ ಆಕರ್ಷಿಸಲ್ಪಟ್ಟರು.



ಸ್ವಸ್ತಿಕ್ ಚಿಹ್ನೆ

ಜೈನಧರ್ಮ

ಜೈನ ಧರ್ಮವು ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಈ ಧರ್ಮದಲ್ಲಿ 24 ತೀರ್ಥಂಕರರಿದ್ದಾರೆಂದು ಮತ್ತು ಮೊದಲ ತೀರ್ಥಂಕರನಾದ ವೃಷಭನಾಥನು ಜೈನ ಧರ್ಮವನ್ನು ಸ್ಥಾಪಿಸಿದನೆಂದು ಜೈನರು ನಂಬುತ್ತಾರೆ. 23ನೇ ತೀರ್ಥಂಕರ ಪಾರ್ಶ್ವನಾಥ ಮತ್ತು 24ನೇ ತೀರ್ಥಂಕರ ಮಹಾವೀರರಾಗಿರುತ್ತಾರೆ. 'ಸ್ವಸ್ತಿಕ್' ಜೈನ ಧರ್ಮದ ಪವಿತ್ರ ಚಿಹ್ನೆಯಾಗಿದೆ.

ಪಾರ್ಶ್ವನಾಥ 30ನೇ ವಯಸ್ಸಿಗೆ ಪರಮ ಜ್ಞಾನ ಪಡೆದುಕೊಂಡನು. ಅವನು ನಾಲ್ಕು ಮಹಾನ್ ತತ್ವಗಳನ್ನು ಬೋಧಿಸಿದನು. ಅವುಗಳೆಂದರೆ:

1. ಅಹಿಂಸೆ
2. ಸತ್ಯ.
3. ಆಸ್ತೇಯ– ಕಳ್ಳತನಮಾಡದಿರುವುದು.
4. ಅಪರಿಗ್ರಹ– ಅವಶ್ಯಕತೆಗಿಂತ ಹೆಚ್ಚಿನ ಸಂಪತ್ತನ್ನು ಹೊಂದದಿರುವುದು.

ಈ ಬೋಧನೆಗಳು ಜೈನ ಧರ್ಮದ ಮೂಲಭೂತ ತತ್ವಗಳಾಗಿವೆ.

ವರ್ಧಮಾನ ಮಹಾವೀರ (ಸಾಶಪೂ 599–527)

ಆರಂಭಿಕ ಜೀವನ

ವರ್ಧಮಾನನು ವೈಶಾಲಿ ಸಮೀಪದ ಕುಂದಗ್ರಾಮದಲ್ಲಿ ಸಾ.ಶ.ಪೂ 599ರಲ್ಲಿ ಜನಿಸಿದನು. ಅವನ ತಂದೆ ರಾಜ ಸಿದ್ಧಾರ್ಥ ಮತ್ತು ತಾಯಿ ರಾಣಿ ತ್ರಿಶಾಲದೇವಿ. ಸಿದ್ಧಾರ್ಥನು ಕ್ಷತ್ರಿಯಕುಲವೊಂದರ ಮುಖ್ಯಸ್ಥನಾಗಿದ್ದನು. ವರ್ಧಮಾನ 18ನೇ ವಯಸ್ಸಿನಲ್ಲಿ ರಾಜಕುಮಾರಿ ಯಶೋಧಳನ್ನು ವಿವಾಹವಾದನು. ಅವನಿಗೆ ಅನೊಜ್ಜ ಅಥವಾ ಪ್ರಿಯದರ್ಶಿನಿ ಎಂಬ ಮಗಳಿದ್ದಳು. ತನ್ನ ತಂದೆ ತಾಯಿಯರ ಆಕಸ್ಮಿಕ ಮರಣದಿಂದ ವರ್ಧಮಾನ ಉಡುಪನ್ನೂ ಸೇರಿದಂತೆ ಪ್ರಾಪಂಚಿಕ ಸುಖಭೋಗಗಳನ್ನು ತ್ಯಜಿಸಿದನು. ಅವನು ಸನ್ಯಾಸಿಯಾಗಿ ಜೀವನದ ಸತ್ಯವನ್ನರಸುತ್ತಾ ಸಂಚಾರ ಹೊರಟನು. ಅವನು 13 ವರ್ಷಗಳ ಕಾಲ ಸ್ವದೇಹ ದಂಡನೆ ಮತ್ತು ಆಳವಾದ ಧ್ಯಾನ ಮಾಡುತ್ತಾ ಜೀವನ ನಡೆಸಿದನು. ವೈಶಾಖದ ಹತ್ತನೇ ದಿನ ಬಿಹಾರದ ಜೃಂಭಿಕಾ ಗ್ರಾಮದಲ್ಲಿ ವರ್ಧಮಾನನಿಗೆ ಜ್ಞಾನೋದಯವಾಯಿತು. ಅವನು 'ಕೈವಲ್ಯ' ಎಂಬ ಅತ್ಯುನ್ನತ ಆಧ್ಯಾತ್ಮಿಕ ಜ್ಞಾನವನ್ನು ಪಡೆದನು ಮತ್ತು 'ಕೇವಲಿನ್' (ಸರ್ವಜ್ಞ) ಅಥವಾ 'ಜಿನ' (ಇಂದ್ರಿಯ ನಿಗ್ರಹಿಸಿದವನು) ನಾದನು. ತದನಂತರ ವರ್ಧಮಾನ ಮಹಾವೀರನೆಂದು ಕರೆಯಲ್ಪಟ್ಟನು. ಮುಂದಿನ 30 ವರ್ಷಗಳ ಕಾಲ ಕೋಸಲ, ಮಗಧ, ವಿದೇಹ ಮತ್ತು ಅಂಗಗಳಲ್ಲಿ ಜೈನಧರ್ಮದ ತತ್ವಗಳನ್ನು ಬೋಧಿಸುತ್ತಾ ಪ್ರವಾಸ ಕೈಗೊಂಡನು. ತನ್ನ 72ನೇ ವಯಸ್ಸಿನಲ್ಲಿ ದಕ್ಷಿಣ ಬಿಹಾರದ ರಾಜಗೃಹ ಸಮೀಪದ ಪಾವಾ ಎಂಬಲ್ಲಿ ಸಾಶಪೂ 527ರಲ್ಲಿ ನಿರ್ವಾಣಹೊಂದಿದನು.

ಮಹಾವೀರನು ಗೌತಮ ಬುದ್ಧನ ಸಮಾಕಾಲೀನನಾಗಿದ್ದನು. ಆದರೆ ಅವರಿಬ್ಬರು ಪರಸ್ಪರ ಒಬ್ಬರನ್ನೊಬ್ಬರು

ಯಾವಾಗಲೂ ಭೇಟಿಯಾಗಲಿಲ್ಲ. ಪುರುಷ ಮತ್ತು ಮಹಿಳೆಯರಿಬ್ಬರಿಗೂ ಮುಕ್ತವಾಗಿದ್ದ ಧಾರ್ಮಿಕ ವ್ಯವಸ್ಥೆಯೊಂದನ್ನು ಸ್ಥಾಪಿಸಿದನು. ಇವನು ಪಾರ್ಶ್ವನಾಥನ ತತ್ವಗಳನ್ನು ಜೈನ ಧರ್ಮದ ಮೂಲ ಎಂದು ಸ್ವೀಕರಿಸಿದನು.

ಮಹಾವೀರನ ಬೋಧನೆಗಳು

ಮಹಾವೀರ ಮೋಕ್ಷ ಸಾಧನೆಗಾಗಿ ಪಂಚಶೀಲ ತತ್ವಗಳನ್ನು ಮತ್ತು ತ್ರಿರತ್ನಗಳನ್ನು ಬೋಧಿಸಿದನು.

ಪಂಚಶೀಲ ತತ್ವಗಳು.

1) ಸತ್ಯ
2) ಅಹಿಂಸೆ
3) ಆಸ್ತೇಯ – ಕಳ್ಳತನ ಮಾಡದಿರುವುದು.
4) ಅಪರಿಗ್ರಹ– ಅವಶ್ಯಕತೆಗಿಂತ ಹೆಚ್ಚಿನ ಸಂಪತ್ತನ್ನು ಹೊಂದದಿರುವುದು.
5) ಬ್ರಹ್ಮಚರ್ಯ–ಪಾವಿತ್ರ್ಯತೆ.

ತ್ರಿರತ್ನಗಳು.

1. ಸಮ್ಯಕ್ ಜ್ಞಾನ
2. ಸಮ್ಯಕ್ ನಂಬಿಕೆ
3. ಸಮ್ಯಕ್ ನಡತೆ

ಮಹಾವೀರನಿಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇರಲಿಲ್ಲ. ಆದರೆ ಆತ್ಮದ ಅಸ್ತಿತ್ವದಲ್ಲಿ ನಂಬಿಕೆ ಇಟ್ಟಿದ್ದನು. ಇವನು ಜಾತಿಪದ್ಧತಿ ಮತ್ತು ಪ್ರಾಣಿಬಲಿಗಳನ್ನು ಖಂಡಿಸಿದನು. ಇವನು ಅಹಿಂಸೆಗೆ ಹೆಚ್ಚು ಒತ್ತು ಕೊಟ್ಟನು ಮತ್ತು ಪ್ರಾಣಿ–ಪಕ್ಷಿ, ಗಿಡ–ಮರ, ಕಲ್ಲು–ಮಣ್ಣು, ನೀರು–ಬೆಂಕಿ, ಮುಂತಾದವು ಸಹ ಜೀವ ಹೊಂದಿರುವುದರಿಂದ ಯಾವುದೇ ಜೀವಾತ್ಮಗಳಿಗೆ ಹಿಂಸೆ ನೀಡಬಾರದೆಂದು ಪ್ರತಿಪಾದಿಸಿದನು. ಇವನು ನಿರ್ವಾಣಕ್ಕಾಗಿ ಅಥವಾ ಮೋಕ್ಷ ಸಾಧನೆಗಾಗಿ ಸನ್ಯಾಸತ್ವ ಮತ್ತು ಕಠಿಣ ತಪಸ್ಸನ್ನು ಪ್ರತಿಪಾದಿಸಿದನು. ಇವನಿಗೆ ಗಣಾಧರರೆಂಬ ಹನ್ನೊಂದು ಜನ ಶಿಷ್ಯರಿದ್ದರು.

ಜೈನ ಧರ್ಮದ ಪ್ರಸಾರ:

ಆರಂಭದಲ್ಲಿ ಜೈನಧರ್ಮವು ಕೋಸಲ, ಮಗಧ, ವಿದೇಹ ಮತ್ತು ಅಂಗ ರಾಜ್ಯಗಳಿಗೆ ಸೀಮಿತವಾಗಿತ್ತು. ಅಜಾತಶತ್ರು, ಬಿಂಬಿಸಾರ, ಚಂದ್ರಗುಪ್ತ ಮೌರ್ಯ, ಮುಂತಾದ ರಾಜರು ನೀಡಿದ ಪ್ರೋತ್ಸಾಹದಿಂದಾಗಿ ಭಾರತದಾದ್ಯಂತ ಪ್ರಸಾರವಾಯಿತು. ಚಂದ್ರಗುಪ್ತಮೌರ್ಯನ ಕೊನೆಯ ಕಾಲದಲ್ಲಿ, ಉತ್ತರಭಾರತದಲ್ಲಿ ಕ್ಷಾಮ ಉಂಟಾಯಿತು. ಚಂದ್ರಗುಪ್ತಮೌರ್ಯನು ಭದ್ರಬಾಹುವಿನ ಜೊತೆ ಶ್ರವಣಬೆಳಗೊಳಕ್ಕೆ ವಲಸೆ ಬಂದನು. ಅವನು ಚಂದ್ರಗಿರಿ ಬೆಟ್ಟದ ಮೇಲೆ ನೆಲೆಸಿ ಸಲ್ಲೇಖನ ವ್ರತವನ್ನಾಚರಿಸಿ ಸಾವನ್ನಪ್ಪಿದನು. ನಂತರ ಕದಂಬರು, ಗಂಗರು, ಚಾಲುಕ್ಯರು ಮತ್ತು ರಾಷ್ಟ್ರಕೂಟರು ಜೈನಧರ್ಮಕ್ಕೆ ಆಶ್ರಯ ನೀಡಿದರು. ಆದ್ದರಿಂದ ಭಾರತದ ಇತರ ಭಾಗಗಳಾದ ಕರ್ನಾಟಕ, ಗುಜರಾತ್ ಮತ್ತು ರಾಜಸ್ಥಾನಗಳಲ್ಲೂ ಜೈನಧರ್ಮ ಪ್ರಸಾರವಾಯಿತು.

ಜೈನ ಸಭೆಗಳು:

ಎರಡು ಜೈನ ಸಭೆಗಳನ್ನು ಸಂಘಟಿಸಲಾಗಿತ್ತು

1) ಮೊದಲ ಸಭೆ ಸಾಶಪೂ 300ರಲ್ಲಿ ಪಾಟಲಿಪುತ್ರದಲ್ಲಿ ಜರುಗಿತು. ಜೈನಧರ್ಮದ ಪವಿತ್ರ ಗ್ರಂಥಗಳನ್ನು ಸಂಗ್ರಹಿಸಿ, ಜ್ಞಾನವನ್ನು ಪುನರುಜ್ಜೀವನಗೊಳಿಸುವುದು ಇದರ ಉದ್ದೇಶವಾಗಿತ್ತು.

2) ಎರಡನೆಯ ಸಭೆ ಸಾಶ 512 ಸುಮಾರಿನಲ್ಲಿ ಗುಜರಾತಿನ ವಲ್ಲಭಿಯಲ್ಲಿ ಜರುಗಿತು. ಇಲ್ಲಿ ಜೈನ ಧರ್ಮದ ಪವಿತ್ರ ಗ್ರಂಥಗಳನ್ನು ಸಂಗ್ರಹಿಸಿ, ಅವುಗಳನ್ನು ಕ್ರಮಬದ್ಧವಾಗಿ ಬರೆಯಲಾಯಿತು.

ಜೈನಧರ್ಮದ ಪಂಗಡಗಳು.

ಜೈನಧರ್ಮದ ಅನುಯಾಯಿಗಳಲ್ಲಿನ ಭಿನ್ನಾಭಿಪ್ರಾಯಗಳಿಂದಾಗಿ ಜೈನಧರ್ಮ ಇಬ್ಭಾಗವಾಯಿತು.

1) ಶ್ವೇತಾಂಬರರು– ಪಾರ್ಶ್ವನಾಥನ ಅನುಯಾಯಿಗಳಾದ ಇವರು ಬಿಳಿಯ ವಸ್ತ್ರಧಾರಿಗಳು.

2) ದಿಗಂಬರರು– ಮಹಾವೀರನ ಅನುಯಾಯಿಗಳಾದ ಇವರು ನಿರ್ವಸ್ತ್ರಧಾರಿಗಳು.

ಜೈನ ಸಾಹಿತ್ಯ: ಆಗಮ ಸಿದ್ಧಾಂತ ಜೈನರ ಪವಿತ್ರ ಗ್ರಂಥ. ಇದರಲ್ಲಿ 45 ರಿಂದ 50 ಸಂಪುಟಗಳಿವೆ. ಮಹಾವೀರನ ಮೂಲ ತತ್ವಗಳನ್ನೊಳಗೊಂಡ ಸಿದ್ಧಾಂತ 'ಪೂರ್ವ'ಗಳನ್ನು 14 ಗ್ರಂಥಗಳಲ್ಲಿ ಸಂಗ್ರಹಿಸಲಾಗಿದೆ. ಶ್ವೇತಾಂಬರ ಮತ್ತು ದಿಗಂಬರರಿಬ್ಬರೂ 12 'ಅಂಗ'ಗಳನ್ನು ಮೊದಲ ಮತ್ತು ಪ್ರಧಾನ ಧಾರ್ಮಿಕ ಗ್ರಂಥಗಳೆಂದು ಒಪ್ಪಿಕೊಂಡಿದ್ದಾರೆ. ಜೈನ ಪಂಡಿತರು ಧಾರ್ಮಿಕ ಮತ್ತು ಲೌಕಿಕ ಕೃತಿಗಳನ್ನು ಬರೆದಿದ್ದಾರೆ. ಅವರು ಕನ್ನಡ ಸಾಹಿತ್ಯವನ್ನೂ ಶ್ರೀಮಂತಗೊಳಿಸಿದ್ದಾರೆ.

ಕಲೆ ಮತ್ತು ವಾಸ್ತುಶಿಲ್ಪಕ್ಕೆ ಜೈನ ಧರ್ಮದ ಕೊಡುಗೆ.

ಕಲೆ ಮತ್ತು ವಾಸ್ತುಶಿಲ್ಪ ಬೆಳವಣಿಗೆಗೆ ಜೈನ ಧರ್ಮ ಸಹಾಯಕವಾಯಿತು. ಜೈನರು ಗುಹಾಲಯಗಳನ್ನು ಸನ್ಯಾಸಿಗಳ ವಾಸಕ್ಕಾಗಿ ನಿರ್ಮಿಸಿದರು (ಭಿಕ್ಷುಗೃಹಗಳು). ಅವರ ಕೆಲವು ಪ್ರಮುಖ ಕೊಡುಗೆಗಳೆಂದರೆ:

1) ಉದಯಗಿರಿಯ ಹುಲಿಯ ಗುಹೆ

2) ಎಲ್ಲೋರಾದ ಇಂದ್ರಸಭಾ ಗುಹೆ.

3) ಒರಿಸ್ಸಾದ ಹಥಿಗುಂಪಾ ಗುಹೆ, ಮುಂತಾದವು.

ಶ್ರವಣಬೆಳಗೊಳದ ಜಗದ್ವಿಖ್ಯಾತ ಗೊಮ್ಮಟೇಶ್ವರ ವಿಗ್ರಹ ಮತ್ತು ಮೂಡಬಿದ್ರೆಯ ಸಹಸ್ರ ಕಂಬಗಳ ಬಸದಿ ಕರ್ನಾಟಕದಲ್ಲಿನ ಗಮನಾರ್ಹ ಸ್ಮಾರಕಗಳಾಗಿವೆ.

ಬೌದ್ಧಧರ್ಮ

ಗೌತಮ ಬುದ್ಧ: (ಸಾ.ಶ.ಪೂ 563 ರಿಂದ 483)

ಬೌದ್ಧಧರ್ಮದ ಸ್ಥಾಪಕ ಗೌತಮಬುದ್ಧ. ಅವನು ಸಾಶಪೂ. 563ರಲ್ಲಿ ಲುಂಬಿನಿವನ (ಈಗಿನ ನೇಪಾಳದಲ್ಲಿದೆ) ದಲ್ಲಿ ಜನಿಸಿದನು. ಈತನ ಮೊದಲ ಹೆಸರು ಸಿದ್ಧಾರ್ಥ. ರಾಜ ಶುದ್ಧೋಧನ ಮತ್ತು ರಾಣಿ ಮಾಯಾದೇವಿ ಅವನ ತಂದೆ ತಾಯಿಯರು. ಶುದ್ಧೋಧನ ಕಪಿಲವಸ್ತುವಿನ ಶಾಕ್ಯಕುಲದ ಮುಖಂಡನಾಗಿದ್ದನು. ಸಿದ್ಧಾರ್ಥ ಏಳು ದಿನಗಳ ಮಗುವಾಗಿದ್ದಾಗ ಮಾಯಾದೇವಿ ಮರಣಹೊಂದಿದಳು. ಆದ್ದರಿಂದ ಅವನ ಚಿಕ್ಕಮ್ಮ ಮಹಾಪ್ರಜಾಪತಿ ಗೌತಮಿ ಅವನನ್ನು ಪೋಷಿಸಿದಳು.

ಸಿದ್ಧಾರ್ಥನನ್ನು ಅತ್ಯಂತ ಸುಖಭೋಗದಲ್ಲಿ ಬೆಳೆಸಲಾಯಿತು. ಅವನ 16ನೇ ವಯಸ್ಸಿಗೆ ಯಶೋಧರಾಳೊಂದಿಗೆ ವಿವಾಹ ಮಾಡಲಾಯಿತು. ಅವರಿಗೆ ಜನಿಸಿದ ಗಂಡು ಮಗುವಿಗೆ ರಾಹುಲ ಎಂದು ಹೆಸರಿಸಲಾಯಿತು. ಜಾತಕ ಕಥೆಗಳ ಪ್ರಕಾರ ಒಂದು ಸಂಜೆ ಸಿದ್ಧಾರ್ಥನು ಅರಮನೆಯಿಂದ ಆಚೆ ಹೋದಾಗ ಒಬ್ಬ ವೃದ್ಧ, ಒಬ್ಬ ರೋಗಿ, ಒಂದು ಶವಯಾತ್ರೆ ಮತ್ತು ಒಬ್ಬ ಸನ್ಯಾಸಿಯನ್ನು ಕಂಡನು. ಮೊದಲ ಮೂರು ದೃಶ್ಯಗಳಲ್ಲಿ ಸಿದ್ಧಾರ್ಥ ಕೇವಲ ದುಃಖ ಮತ್ತು ನೋವನ್ನು ಕಂಡರೆ ನಾಲ್ಕನೇ ದೃಶ್ಯದಲ್ಲಿ ಸಂತೋಷವನ್ನು ಅಂದರೆ ಪ್ರಾಪಂಚಿಕ ಜೀವನ ತ್ಯಜಿಸಿದ ಒಬ್ಬ ಸನ್ಯಾಸಿಯನ್ನು ಕಂಡನು. ಈ ನಾಲ್ಕು ದೃಶ್ಯಗಳು ಸಿದ್ಧಾರ್ಥನ ಮೇಲೆ ಗಾಢವಾದ ಪರಿಣಾಮ ಬೀರಿದವು. ಆದ್ದರಿಂದ ಸಿದ್ಧಾರ್ಥ ಪ್ರಾಪಂಚಿಕ ಜೀವನ ತ್ಯಜಿಸಲು ನಿರ್ಧರಿಸಿದನು. ಇವನು ದುಃಖಕ್ಕೆ ಮೂಲಕಾರಣ ಕಂಡು ಹಿಡಿಯಲು ಹೆಂಡತಿ, ಮಗು, ತಂದೆ–ತಾಯಿಯರು ಮತ್ತು ರಾಜ್ಯವನ್ನು ತ್ಯಾಗ ಮಾಡಿದನು. ಈ ಘಟನೆಯನ್ನು **'ಮಹಾಪರಿತ್ಯಾಗ'** ವೆಂದು ಕರೆಯಲಾಗಿದೆ.

ಸಿದ್ಧಾರ್ಥನು ಅಲೆಮಾರಿ ಸನ್ಯಾಸಿ ಜೀವನ ನಡೆಸಿದನು. ಆಸೆಯಿಂದ ದೂರವಿದ್ದು, ಕೇವಲ ತಪಸ್ಸಿನಿಂದ ಜ್ಞಾನೋದಯ ಸಾಧ್ಯವಿಲ್ಲವೆಂದು ಅರಿತನು. ಮೂವತ್ತೈದನೇ ವಯಸ್ಸಿನಲ್ಲಿ ಗಯಾದ ಅರಳಿ ಮರವೊಂದರ ಕೆಳಗೆ ಜ್ಞಾನೋದಯವಾಯಿತು. ಅಂದಿನಿಂದ ಬುದ್ಧನೆಂದು ಹೆಸರಾದನು. ಬುದ್ಧನೆಂದರೆ ಜ್ಞಾನ ಪಡೆದವನು ಎಂದರ್ಥ. ಬುದ್ಧನಿಗೆ **'ತಥಾಗತ'** ನೆಂದು ಕರೆಯಲಾಯಿತು. ತಥಾಗತನೆಂದರೆ ಸತ್ಯವನ್ನು ಅರಿತವನು ಎಂದರ್ಥ. ಅವನು ಸ್ಥಾಪಿಸಿದ ಧರ್ಮವು ಬೌದ್ಧಧರ್ಮವೆಂದು ಕರೆಯಲ್ಪಟ್ಟಿತು.


ಧರ್ಮಚಕ್ರ

ಬುದ್ಧ ತನ್ನ ಉಳಿದ ಜೀವನವನ್ನು ಜನ ಕಲ್ಯಾಣಕ್ಕಾಗಿ ಸಮರ್ಪಿಸಿದನು. ಬನಾರಸ್ ಸಮೀಪದ ಸಾರಾನಾಥದ ಜಿಂಕೆ ವನಕ್ಕೆ ತೆರಳಿ ಅಲ್ಲಿ ತನ್ನ ಪ್ರಥಮ ಪ್ರವಚನ ನೀಡಿದನು. ಇದನ್ನು ಧರ್ಮಚಕ್ರ ಪ್ರವರ್ತನ ಅಥವಾ ಧರ್ಮಚಕ್ರದ ತಿರುಗುವಿಕೆ ಎಂದು ಕರೆಯಲಾಗಿದೆ. ಧರ್ಮಚಕ್ರ ಬೌದ್ಧ ಧರ್ಮದ ಚಿಹ್ನೆಯಾಗಿದೆ. ನಲವತ್ತೈದು ವರ್ಷಗಳ ಕಾಲ ಗೌತಮಬುದ್ಧ ತನ್ನ ಸಿದ್ಧಾಂತ ಬೋಧಿಸುತ್ತ ಸಂಚರಿಸಿದನು. ಆತನ ವ್ಯಕ್ತಿತ್ವ ಮತ್ತು ಸರಳತೆ ಜನರನ್ನು ಬೌದ್ಧಧರ್ಮದತ್ತ ಸೆಳೆಯಿತು. ಬುದ್ಧ ತನ್ನ 80ನೇ ವಯಸ್ಸಿನಲ್ಲಿ ಉತ್ತರಪ್ರದೇಶದ ಕುಶೀನಗರದಲ್ಲಿ ಪರಿನಿರ್ವಾಣ ಹೊಂದಿದನು. ಎಡ್ವಿನ್ ಅರ್ನಾಲ್ಡ್ ಬುದ್ಧನನ್ನು 'ಏಷಿಯಾದ ಬೆಳಕು' ಎಂದು ಕರೆದಿದ್ದಾನೆ. ಒಂದು ಆಸಕ್ತಿಕರ ವಿಷಯವೆಂದರೆ, ಬುದ್ಧನ ಜನನ, ಜ್ಞಾನೋದಯ ಮತ್ತು ಮರಣ (ನಿರ್ವಾಣ) ಪೌರ್ಣಿಮೆಯಂದೇ ಸಂಭವಿಸಿದವು. ಅವನ ಜನ್ಮ ದಿನವು ಬುದ್ಧಪೌರ್ಣಿಮೆ ಎಂದು ಪ್ರಸಿದ್ಧಿಯಾಗಿದೆ.

ಬುದ್ಧನ ಬೋಧನೆಗಳು.

ಬುದ್ಧನು ತನ್ನ ಅನುಯಾಯಿಗಳಿಗೆ ನಾಲ್ಕು ಮೂಲತತ್ವಗಳಾದ ಸತ್ಯ, ಅಹಿಂಸೆ (ನೋವು ಮಾಡದಿರುವುದು), ಆಸ್ತೇಯ (ಕಳ್ಳತನಮಾಡದಿರುವುದು) ಮತ್ತು ಬ್ರಹ್ಮಚರ್ಯೆ (ಪಾವಿತ್ರ್ಯತೆ) ಬೋಧಿಸಿದನು. ಅಲ್ಲದೆ ನಾಲ್ಕು ಆರ್ಯ ಸತ್ಯಗಳನ್ನು ಬೋಧಿಸಿದನು. ಅವುಗಳೆಂದರೆ 1. ಪ್ರಾಪಂಚಿಕ ಜೀವನವು ದುಃಖಮಯವಾಗಿದೆ.

2. ಆಸೆಯೇ ದುಃಖಕ್ಕೆ ಮೂಲ ಕಾರಣ. 3. ಆಸೆಯನ್ನು ನಿಗ್ರಹಿಸುವುದರಿಂದ ಪುನರ್ ಜನ್ಮವನ್ನು ಕೊನೆಗಾಣಿಸ ಬಹುದು. 4. ಆಸೆಯನ್ನು ಕೊನೆಗಾಣಿಸಲು ಅಷ್ಟಾಂಗಮಾರ್ಗವನ್ನು ಅನುಸರಿಸಬೇಕು. ಅಷ್ಟಾಂಗ ಮಾರ್ಗಗಳೆಂದರೆ 1. ಒಳ್ಳೆಯ ನಂಬಿಕೆ 2. ಒಳ್ಳೆಯ ಆಲೋಚನೆ 3. ಒಳ್ಳೆಯ ಮಾತು 4. ಒಳ್ಳೆಯ ನಡತೆ 5. ಒಳ್ಳೆಯ ಪ್ರಯತ್ನ 6. ಒಳ್ಳೆಯ ಧ್ಯಾನ 7. ಒಳ್ಳೆಯ ಜೀವನೋಪಾಯ 8. ಒಳ್ಳೆಯ ಮನಸ್ಥಿತಿ.

ಬುದ್ಧನು ನಡತೆಗೆ ಮಹತ್ವ ಕೊಟ್ಟನೇ ವಿನಃ ಧರ್ಮಾಚರಣೆ ಮತ್ತು ಬಲಿಗಳಿಗಲ್ಲ. ಅವನು ಜಾತಿಪದ್ಧತಿ ವಿರೋಧಿಸಿ, ಸಮಾನತೆಯನ್ನು ಪ್ರತಿಪಾದಿಸಿದನು. ಅಹಿಂಸೆಗೆ ಮಹತ್ವ ನೀಡಿದನು. ಅವನು ದೇವರ ಕುರಿತು ಏನನ್ನೂ ಹೇಳಲಿಲ್ಲ. ಬುದ್ಧ ತನ್ನ ಸಂಘಕ್ಕೆ ಎಲ್ಲಾ ಜಾತಿಯ ಪುರುಷರು ಮತ್ತು ಸ್ತ್ರೀಯರಿಗೆ ಪ್ರವೇಶ ನೀಡಿದನು.

ಬೌದ್ಧಧರ್ಮ ಪ್ರಸಾರ.

ಬೌದ್ಧಧರ್ಮವು ಭಾರತದ ಉದ್ದಗಲಕ್ಕೂ ಪಸರಿಸಿತು. ಇದು ಭಾರತದ ಗಡಿದಾಟಿ ಚೀನಾ, ಟಿಬೇಟ್, ಮ್ಯಾನ್ಮಾರ್, ಸಿಲೋನ್, ಮಧ್ಯ ಏಷಿಯಾ, ಮತ್ತು ಆಗ್ನೇಯ ಏಷಿಯಾಗಳಿಗೂ ಹರಡಿತು.

ಪ್ರಸಾರಕ್ಕೆ ಕಾರಣಗಳು.

1. ಸರಳ ಬೋಧನೆಗಳು: ಬೌದ್ಧಧರ್ಮದ ಬೋಧನೆಗಳು ಸರಳ ಮತ್ತು ಸುಲಭವಾಗಿ ಅನುಸರಿಸುವಂತಹವುಗಳಾಗಿದ್ದವು. ಆದ್ದರಿಂದ ಜನರು ಅದನ್ನು ಒಪ್ಪಿಕೊಂಡರು.
2. ದೇಶೀಯ ಭಾಷೆ: ಬುದ್ಧನು ಸಾಮಾನ್ಯ ಜನರ ಭಾಷೆಗಳಾದ ಪಾಲಿ ಮತ್ತು ಪ್ರಾಕೃತದಲ್ಲಿ ಬೋಧಿಸಿದ್ದರಿಂದ ಜನರು ಸುಲಭವಾಗಿ ಅರ್ಥಮಾಡಿಕೊಂಡು ಹಲವರು ಬೌದ್ಧಧರ್ಮವನ್ನು ಸ್ವೀಕರಿಸಿದರು.
3. ಸಮಾನತೆಯ ತತ್ವಗಳು: ಜಾತಿಪದ್ಧತಿ ವಿರೋಧಿಸಿದ ಬುದ್ಧನು ಸಾಮಾಜಿಕ ಮತ್ತು ಲಿಂಗ ಸಮಾನತೆಯನ್ನು ಬೋಧಿಸಿದನು.
4. ಬುದ್ಧನ ವ್ಯಕ್ತಿತ್ವ: ಬುದ್ಧ ಒಬ್ಬ ಆಕರ್ಷಕ ವ್ಯಕ್ತಿತ್ವವುಳ್ಳವನಾಗಿದ್ದನು. ನೀತಿಕಥೆ ಮತ್ತು ಉಪಕಥೆಗಳನ್ನೊಳಗೊಂಡ ಅವನ ಬೋಧನೆ ಪರಿಣಾಮಕಾರಿಯಾಗಿತ್ತು. ಪ್ರೀತಿ, ಕರುಣೆ ಮತ್ತು ಸಹಾನುಭೂತಿ ಈ ಧರ್ಮವನ್ನು ಜನಪ್ರಿಯಗೊಳಿಸಿತು.
5. ಬೌದ್ಧ ಸಂಘಗಳ ಪಾತ್ರ : ಬೌದ್ಧ ಸನ್ಯಾಸಿಗಳು ಮತ್ತು ಸನ್ಯಾಸಿನಿಯರು ದೂರದ ದೇಶಗಳಿಗೆ ದೀರ್ಘ ಮತ್ತು ಪ್ರಯಾಸಕರ ಪ್ರಯಾಣಮಾಡಿ ಬುದ್ಧನ ಸಂದೇಶ ಹರಡುವಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದರು. ಸಂಘಗಳು ಬೌದ್ಧಧರ್ಮ ಬೋಧನೆಯ ಕೇಂದ್ರಗಳಾದವು.
6. ರಾಜಾಶ್ರಯ : ಮಹಾನ್ ಸಾಮ್ರಾಟರಾದ ಅಶೋಕ, ಕಾನಿಷ್ಕ ಮತ್ತು ಹರ್ಷವರ್ಧನ ಬೌದ್ಧಧರ್ಮಕ್ಕೆ ರಾಜಾಶ್ರಯ ನೀಡಿ, ಬುದ್ಧನ ಬೋಧನೆಗಳನ್ನು ಜನಪ್ರಿಯಗೊಳಿಸಿದರು.

ಬೌದ್ಧಧರ್ಮ ಸಮ್ಮೇಳನಗಳು.

1. ಒಂದನೇ ಬೌದ್ಧ ಸಮ್ಮೇಳನವು ಸುಮಾರು ಸಾಶಪೂ. 483 ರಲ್ಲಿ ರಾಜಗೃಹದಲ್ಲಿ ಜರುಗಿತು. ಇದು ಬುದ್ಧನ ಹೇಳಿಕೆಗಳನ್ನು ಸಂಗ್ರಹಿಸಿತು.
2. ಎರಡನೇ ಬೌದ್ಧ ಸಮ್ಮೇಳನವು ಸಾಶಪೂ. 383 ರಲ್ಲಿ ವೈಶಾಲಿಯಲ್ಲಿ ಜರುಗಿತು. ಇದು ಬೌದ್ಧ ಸನ್ಯಾಸಿಗಳ ನಡುವಿನ ಭಿನ್ನಾಭಿಪ್ರಾಯ ತೊಡೆದು ಹಾಕಲು ಪ್ರಯತ್ನಿಸಿತು.

3. ಮೂರನೇ ಬೌದ್ಧ ಸಮ್ಮೇಳನ ಸಾಶಪೂ. 250 ರಲ್ಲಿ ಪಾಟಲೀಪುತ್ರದಲ್ಲಿ ಜರುಗಿತು.
4. ನಾಲ್ಕನೇ ಬೌದ್ಧ ಸಮ್ಮೇಳನವು ಕುಂಡಲವನದಲ್ಲಿ (ಕಾಶ್ಮೀರ) ಸಾಶ. 102 ರಲ್ಲಿ ಜರುಗಿತು. ಅದು ಬೌದ್ಧ ಸನ್ಯಾಸಿಗಳ ನಡುವಿನ ಭಿನ್ನಾಭಿಪ್ರಾಯವನ್ನು ತೊಡೆದು ಹಾಕಲು ಪ್ರಯತ್ನಿಸಿತು. ಆದರೆ ಬೌದ್ಧಧರ್ಮವೇ ಹೀನಾಯನ ಮತ್ತು ಮಹಾಯಾನಗಳೆಂಬ ಎರಡು ಪಂಗಡಗಳಾಗಿ ವಿಭಜನೆಯಾಯಿತು.

ಸಾಹಿತ್ಯ.

ಬುದ್ಧನ ಬೋಧನೆಗಳನ್ನು ತ್ರಿಪಿಟಕಗಳಲ್ಲಿ (ಮೂರು ಬುಟ್ಟಿ) ಸಂಗ್ರಹಿಸಲಾಗಿದೆ. ಅವುಗಳೆಂದರೆ,

1. ವಿನಯ ಪಿಟಕ. 2. ಸುತ್ತ ಪಿಟಕ. 3. ಅಭಿದಮ್ಮ ಪಿಟಕ. ಇವು ಬೌದ್ಧಧರ್ಮದ ಬಹುಮುಖ್ಯ ಪವಿತ್ರ ಗ್ರಂಥಗಳು.

ಕೊಡುಗೆಗಳು :

ಬೌದ್ಧಧರ್ಮವು ಕಲೆ ಮತ್ತು ವಾಸ್ತುಶಿಲ್ಪ ಬೆಳವಣಿಗೆಗೂ ಕೊಡುಗೆ ನೀಡಿದೆ. ಬುದ್ಧನ ಅನುಯಾಯಿಗಳು ವಿವಿಧ ಸ್ಥಳಗಳಲ್ಲಿ ಸ್ತೂಪಗಳು, ವಿಹಾರಗಳು ಮತ್ತು ಚೈತ್ಯಾಲಯಗಳನ್ನು ನಿರ್ಮಿಸಿದರು. ಅಮರಾವತಿ, ನಾಗಾರ್ಜುನಕೊಂಡ ಮತ್ತು ಅಜಂತಾಗಳಲ್ಲಿನ ಬುದ್ಧನ ವಿಗ್ರಹಗಳು ಪ್ರಸಿದ್ಧವಾಗಿವೆ. ಸಾಂಚಿ, ಅಮರಾವತಿ, ನಾಗಾರ್ಜುನಕೊಂಡ ಮುಂತಾದ ಕಡೆಗಳಲ್ಲಿನ ಸ್ತೂಪಗಳು ಪ್ರಸಿದ್ಧವಾಗಿವೆ. ವಿಹಾರಗಳು ಮತ್ತು ಚೈತ್ಯಾಲಯಗಳನ್ನು ಕನ್ಹೇರಿ, ಕಾರ್ಲೆ ಮತ್ತು ನಾಸಿಕ್‌ಗಳಲ್ಲಿ ಕಾಣಬಹುದು. ಗಾಂಧಾರ ಕಲೆಯೂ ಬೆಳೆಯಿತು.

ಚಟುವಟಿಕೆ

ಬೌದ್ಧ ಮತ್ತು ಜೈನ ಧರ್ಮಗಳ ಪಂಥಗಳನ್ನು ಹೋಲಿಕೆ ಮಾಡಿ

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಜೈನ ಧರ್ಮವನ್ನು ಯಾರು ಸ್ಥಾಪಿಸಿದವರು?
2. 23ನೇ ತೀರ್ಥಂಕರರು ಯಾರಾಗಿದ್ದರು?
3. ವರ್ಧಮಾನ ಎಲ್ಲಿ ಜನಿಸಿದನು?
4. ವರ್ಧಮಾನನು ಎಲ್ಲಿ ಜ್ಞಾನೋದಯವನ್ನು ಪಡೆದನು ?
5. ಮಹಾವೀರನು ಎಲ್ಲಿ ನಿರ್ವಾಣ ಹೊಂದಿದನು?
6. ಬೌದ್ಧ ಧರ್ಮವನ್ನು ಯಾರು ಸ್ಥಾಪಿಸಿದರು ?
7. ಬುದ್ಧ ಎಲ್ಲಿ ಜನಿಸಿದನು ?
8. ಬುದ್ಧನ ಮೊದಲ ಹೆಸರೇನು?
9. 'ಬುದ್ಧ' ಪದದ ಅರ್ಥವೇನು?
10. ಸಿದ್ಧಾರ್ಥನು ಯಾವ ಸ್ಥಳದಲ್ಲಿ ಜ್ಞಾನೋದಯವನ್ನು ಹೊಂದಿದನು?
11. ಬುದ್ಧ ತನ್ನ ಮೊದಲ ಪ್ರವಚನವನ್ನು ಎಲ್ಲಿ ನೀಡಿದನು?
12. ಬುದ್ಧ ಎಲ್ಲಿ ನಿರ್ವಾಣ ಹೊಂದಿದನು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ವರ್ಧಮಾನನ ತಂದೆ ತಾಯಿ ಯಾರು ?
2. ವರ್ಧಮಾನನ ತ್ರಿರತ್ನಗಳಲ್ಲಿ ಯಾವುದಾದರು ಎರಡನ್ನು ತಿಳಿಸಿ.
3. ಜೈನ ಸಭೆಗಳು ಎಲ್ಲಿ ಜರುಗಿದವು?
4. ಜೈನ ಧರ್ಮದ ಪಂಗಡಗಳಾವುವು?
5. ಬುದ್ಧನ ತಂದೆ ತಾಯಿ ಯಾರು?
6. ಬುದ್ಧ ಬೋಧಿಸಿದ ಆರ್ಯ ಸತ್ಯಗಳಲ್ಲಿ ಯಾವುದಾದರು ಎರಡನ್ನು ತಿಳಿಸಿ.
7. ಬೌದ್ಧ ಧರ್ಮಕ್ಕೆ ರಾಜಾಶ್ರಯ ನೀಡಿದ ಯಾರಾದರು ಇಬ್ಬರು ಅರಸರನ್ನು ಹೆಸರಿಸಿ.
8. ತ್ರಿಪಿಟಕಗಳಲ್ಲಿ ಯಾವುದಾದರು ಎರಡನ್ನು ತಿಳಿಸಿ.
9. ಬೌದ್ಧ ಧರ್ಮದ ಪಂಥಗಳನ್ನು ಹೆಸರಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಹೊಸ ಧರ್ಮಗಳ ಉದಯಕ್ಕೆ ಕಾರಣವಾದ ಅಂಶಗಳಾವವು ?
2. ಮಹಾವೀರನ ಜೀವನ ಮತ್ತು ಬೋಧನೆಗಳನ್ನು ಕುರಿತು ಚರ್ಚಿಸಿ.

IV. ಈ ಕೆಳಗಿನ ಪ್ರಶ್ನೆಗೆ 30–40 ವಾಕ್ಯಗಳಲ್ಲಿ ಉತ್ತರಿಸಿ.

1. ಬುದ್ಧನ ಜೀವನ ಮತ್ತು ಬೋಧನೆಗಳನ್ನು ಚಿತ್ರಿಸಿ.

❊ ❊ ❊ ❊

ಅಧ್ಯಾಯ 4.3

ಮೌರ್ಯರು (ಸಾಶಪೂ 324–180)

ಮೌರ್ಯ ಸಾಮ್ರಾಜ್ಯವು ಭಾರತದ ಮೊದಲ ಮಹಾನ್ ಸಾಮ್ರಾಜ್ಯವಾಗಿದೆ. ಅವರ ಅಧಿಕಾರದ ಅವಧಿಯಲ್ಲಿ ಅನೇಕ ಸಣ್ಣಪುಟ್ಟ ಸಂಸ್ಥಾನಗಳನ್ನು ಒಟ್ಟುಗೂಡಿಸಿ, ಏಕಚಕ್ರಾಧಿಪತ್ಯದಡಿಯಲ್ಲಿ ತರಲಾಯಿತು. ಮೊದಲ ಬಾರಿಗೆ ಭಾರತ ರಾಜಕೀಯ ಐಕ್ಯತೆಯನ್ನು ಸಾಧಿಸಿತು. ಮೌರ್ಯರು ಭಾರತದ ವಾಯುವ್ಯ ಭಾಗವನ್ನು ವಿದೇಶೀಯರ ಆಳ್ವಿಕೆಯಿಂದ ಮುಕ್ತಗೊಳಿಸಿದ್ದಲ್ಲದೆ ಹಲವಾರು ಶತಮಾನಗಳ ಕಾಲ ಮುಂದುವರೆದ ಏಕರೂಪದ ಆಡಳಿತ ಜಾರಿಗೆ ತಂದರು. ಚಂದ್ರಗುಪ್ತ ಮೌರ್ಯ ಈ ವಂಶದ ಸ್ಥಾಪಕ. ಪಾಟಲೀಪುತ್ರ (ಇಂದಿನ ಪಾಟ್ನಾ) ಅವರ ರಾಜಧಾನಿಯಾಗಿತ್ತು. ಧರ್ಮಚಕ್ರ ಅವರ ರಾಜ ಲಾಂಛನವಾಗಿತ್ತು.

ಮೂಲ.

ಚಂದ್ರಗುಪ್ತಮೌರ್ಯನ ಮೂಲಕ್ಕೆ ಸಂಬಂಧಿಸಿದಂತೆ ಅನೇಕ ಸಿದ್ಧಾಂತಗಳಿವೆ.

1. ವಿಶಾಖಿದತ್ತನ ಮುದ್ರಾರಾಕ್ಷಸ ಚಂದ್ರಗುಪ್ತಮೌರ್ಯನನ್ನು ಮಯೂರ ಸುತನೆಂದು ಕರೆದಿದೆ.
2. ಜೈನ ಸಾಹಿತ್ಯವು ಅವನು ನವಿಲುಗಳನ್ನು ಸಾಕುವ ಅಥವಾ ಮಯೂರ ಪೋಷಕ ಪಂಗಡಕ್ಕೆ ಸೇರಿದವನು ಎಂದು ಹೇಳುತ್ತದೆ.
3. 'ಮೌರ್ಯ' ಎಂಬ ಪದವು ಮಗಧ ಸಾಮ್ರಾಜ್ಯದ ನಂದರಾಜನ ಉಪಪತ್ನಿ ಎನ್ನಲಾದ 'ಮುರಾ' ಎಂಬುವವಳಿಂದ ಉತ್ಪತ್ತಿಯಾಗಿದೆ.
4. ಬೌದ್ಧ ಸಾಹಿತ್ಯ ಮಹಾವಂಶದ ಪ್ರಕಾರ, ಅವನು ಪಿಪ್ಪಲವನವನ್ನು ಆಳುತ್ತಿದ್ದ 'ಮೋರಿಯಾ' ಎಂಬ ಕ್ಷತ್ರಿಯ ಕುಲಕ್ಕೆ ಸೇರಿದವನು. ಅನೇಕ ಇತಿಹಾಸಕಾರರು ಈ ಅಭಿಪ್ರಾಯವನ್ನು ಒಪ್ಪಿದ್ದಾರೆ.

ಆಧಾರಗಳು:

ಮೌರ್ಯರ ಇತಿಹಾಸವನ್ನು ತಿಳಿಯಲು ನಮಗೆ ಸಹಾಯವಾಗಿರುವ ಪ್ರಮುಖ ಆಧಾರಗಳೆಂದರೆ,

1. ಕೌಟಿಲ್ಯನ ಅರ್ಥಶಾಸ್ತ್ರ
2. ಮೆಗಾಸ್ಥನೀಸನ ಇಂಡಿಕಾ

ಹದಿನಾರು ಮಹಾಜನಪದಗಳು
(ಅವುಗಳಲ್ಲಿ ಹಲವು ಗಣರಾಜ್ಯಗಳಾಗಿದ್ದವು)

	ಜನಪದಗಳು	ರಾಜಧಾನಿಗಳು
1	ಅಂಗ	ಚಂಪ
2	ಮಗಧ	ರಾಜಗೃಹ, ಪಾಟಲೀಪುತ್ರ
3	ಕಾಶಿ	ವಾರಣಾಸಿ
4	ಕೋಸಲ	ಸಾಕೇತ
5	ವಜ್ಜಿ	ವಜ್ಜಿ
6	ಮಲ್ಲ	ಕುಶೀನಗರ
7	ಚೇದಿ	ತಿಸ್‌ವತಿರತಿ
8	ವತ್ಸ	ಕೌಸಾಂಭಿ
9	ಕುರು	ಇಂದ್ರಪ್ರಸ್ಥ
10	ಪಾಂಚಾಲ	ಕಂಪಿಲ
11	ಮತ್ಸ್ಯ	ವಿರಾಟನಗರ
12	ಸುರಸೇನ	ಮಥುರಾ
13	ಅಸ್ಮಾಕ	ಪೊಟನಾ
14	ಅವಂತಿ	ಉಜ್ಜಯಿನಿ
15	ಗಾಂಧಾರ	ತಕ್ಷಶಿಲ
16	ಕಾಂಬೋಜ	ರಾಜಪುರ

3. ವಿಶಾಖದತ್ತನ ಮುದ್ರಾರಾಕ್ಷಸ
4. ಅಶೋಕನ ಶಾಸನಗಳು
5. ಸ್ಮಾರಕಗಳು
6. ಸಿಲೋನಿನ ಕೃತಿಗಳಾದ ದೀಪವಂಶ ಮತ್ತು ಮಹಾವಂಶ

ಚಂದ್ರಗುಪ್ತ ಮೌರ್ಯ–ಸಾಶಪೂ 324–300.

ಇವನು ಮೌರ್ಯ ಸಾಮ್ರಾಜ್ಯದ ಸ್ಥಾಪಕ. ಆದಾಗ್ಯೂ ಚಂದ್ರಗುಪ್ತಮೌರ್ಯನ ಬಗೆಗೆ ತಿಳಿದಿರುವ ಸಂಗತಿ ತುಂಬಾ ಕಡಿಮೆ. ತಂದೆಯನ್ನು ಕಳೆದುಕೊಂಡಿದ್ದ ಚಂದ್ರಗುಪ್ತಮೌರ್ಯನನ್ನು ತಕ್ಷಶಿಲೆಯ ಬ್ರಾಹ್ಮಣನಾದ ಚಾಣಕ್ಯನು ಕರೆದೊಯ್ದು ಅಗತ್ಯ ಶಿಕ್ಷಣವನ್ನು ನೀಡಿದನು. ಮೌರ್ಯಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಆತನು ಚಂದ್ರಗುಪ್ತಮೌರ್ಯನಿಗೆ ಸಹಾಯ ಮಾಡಿದನು.

ಪಂಜಾಬ್ ಮತ್ತು ಮಗಧಗಳ ದಿಗ್ವಿಜಯ.

ಚಾಣಕ್ಯನ ಮಾರ್ಗದರ್ಶನದಡಿಯಲ್ಲಿ ಚಂದ್ರಗುಪ್ತನು ಒಂದು ಬಲಿಷ್ಠ ಸೈನ್ಯವನ್ನು ಕಟ್ಟಿದನು. ಅವನು ಪಂಜಾಬಿನ ಸಣ್ಣ ರಾಜರುಗಳನ್ನು ಸೋಲಿಸಿ ಅದನ್ನು ವಶಪಡಿಸಿಕೊಂಡನು. ಆನಂತರ ಮಗಧ ಸಾಮ್ರಾಜ್ಯದ ಮೇಲೆ ದಾಳಿ ಮಾಡಿದನು. ನಂದರ ಕೊನೆಯ ದೊರೆ ಧನನಂದನನ್ನು ಕೊಂದು ಆತನ ಕ್ರೂರ ಆಡಳಿತವನ್ನು ಕೊನೆಗಾಣಿಸಿ, ಮೌರ್ಯ ಸಾಮ್ರಾಜ್ಯಕ್ಕೆ ಅಡಿಪಾಯ ಹಾಕಿದನು.

ಸೆಲ್ಯುಕಸ್‌ನೊಂದಿಗೆ ಯುದ್ಧ.

ಅಲೆಗ್ಸಾಂಡರನು ಭಾರತದ ವಾಯುವ್ಯ ಭಾಗಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿ, ಅವುಗಳನ್ನು ಆಳಲು ತನ್ನ ಪ್ರತಿನಿಧಿಗಳನ್ನು ನೇಮಿಸಿದ್ದನು. ಚಂದ್ರಗುಪ್ತಮೌರ್ಯನು ಅವರನ್ನು ಸೋಲಿಸಿ, ಅವರ ಪ್ರದೇಶಗಳನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದನು. ಅಲೆಗ್ಸಾಂಡರನ ಮರಣಾನಂತರ ಮಧ್ಯ ಏಷ್ಯಾದಲ್ಲಿಯ ಗ್ರೀಕ್ ಸಾಮ್ರಾಜ್ಯಕ್ಕೆ ಸೆಲ್ಯುಕಸ್ ಅಧಿಪತಿಯಾದನು. ಸಾ.ಶ.ಪೂ. 305ರಲ್ಲಿ ಅಲೆಗ್ಸಾಂಡರ್ ಹೊಂದಿದ್ದ ಭಾರತೀಯ ಪ್ರದೇಶಗಳನ್ನು ಪುನ: ವಶಪಡಿಸಿಕೊಳ್ಳಲು ಸಿಂಧೂ ನದಿಯನ್ನು ದಾಟಿ ಬಂದನು. ಚಂದ್ರಗುಪ್ತಮೌರ್ಯ ಅವನನ್ನು ಸೋಲಿಸಿದನು. ಆದ್ದರಿಂದ ಸೆಲ್ಯುಕಸ್ ಚಂದ್ರಗುಪ್ತನೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಬೇಕಾಯಿತು. ಅದರಂತೆ, ಅವನು ಕಾಬೂಲ್, ಆಫ್ಘಾನಿಸ್ಥಾನ, ಕಾಂದಹಾರ ಮತ್ತು ಬಲೂಚಿಸ್ಥಾನಗಳನ್ನೊಳಗೊಂಡ ವಿಸ್ತಾರವಾದ ಪ್ರದೇಶವನ್ನು ಚಂದ್ರಗುಪ್ತಮೌರ್ಯನಿಗೆ ನೀಡಿದನು. ಚಂದ್ರಗುಪ್ತಮೌರ್ಯನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟನು. ಇದಕ್ಕೆ ಪ್ರತಿಯಾಗಿ ಚಂದ್ರಗುಪ್ತಮೌರ್ಯನು ಯುದ್ಧ ತರಬೇತಿ ಹೊಂದಿದ್ದ 500 ಆನೆಗಳನ್ನು ಅವನಿಗೆ ಬಳುವಳಿಯಾಗಿ ನೀಡಿದನು. ಸೆಲ್ಯುಕಸ್‌ನು ಮೌರ್ಯರೊಂದಿಗೆ ಸ್ನೇಹ ಸಂಬಂಧವನ್ನು ಹೊಂದಿದ್ದಲ್ಲದೇ ಮೆಗಾಸ್ಥನೀಸನನ್ನು ಪಾಟಲೀಪುತ್ರಕ್ಕೆ ರಾಯಭಾರಿಯಾಗಿ ಕಳುಹಿಸಿದ್ದನು.

ಚಂದ್ರಗುಪ್ತಮೌರ್ಯನು ಇನ್ನೂ ಅನೇಕ ಸೇನಾ ದಿಗ್ವಿಜಯಗಳನ್ನು ಕೈಗೊಂಡು ಒಂದು ಬೃಹತ್ ಸಾಮ್ರಾಜ್ಯ ಸ್ಥಾಪಿಸಿದನೆಂದು ಹೇಳಲಾಗಿದೆ. ಆದರೆ, ಆ ಎಲ್ಲಾ ದಿಗ್ವಿಜಯಗಳ ಬಗ್ಗೆ ನಾವು ಸ್ಪಷ್ಟ ಚಿತ್ರಣ ಹೊಂದಿಲ್ಲ. ಅದೇ ರೀತಿಯಾಗಿ ಆತನ ಸಾಮ್ರಾಜ್ಯದ ಎಲ್ಲೆಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ.

ಜೈನ ಸಂಪ್ರದಾಯದ ಪ್ರಕಾರ, ಚಂದ್ರಗುಪ್ತನು ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಸಿಂಹಾಸನವನ್ನು ತ್ಯಜಿಸಿ, ಜೈನವಿದ್ವಾಂಸ ಭದ್ರಬಾಹುವಿನ ಪ್ರಭಾವದಿಂದ ಜೈನಧರ್ಮವನ್ನು ಸ್ವೀಕರಿಸಿದನು. ತನ್ನ ಕೊನೆಯ ದಿನಗಳನ್ನು ಕರ್ನಾಟಕದ ಶ್ರವಣಬೆಳಗೊಳದಲ್ಲಿ ಕಳೆದನು ಮತ್ತು ಸಾಶಪೂ 300ರಲ್ಲಿ 'ಸಲ್ಲೇಖನ'ವನ್ನು ಆಚರಿಸಿ ಪ್ರಾಣತ್ಯಾಗ ಮಾಡಿದನು. ಆತನು ನೆಲೆಸಿದ್ದ ಬೆಟ್ಟವು 'ಚಂದ್ರಗಿರಿ'ಯೆಂದು, ಆತನಿಂದ ನಿರ್ಮಿಸಲ್ಪಟ್ಟ ದೇವಾಲಯವು 'ಚಂದ್ರಗುಪ್ತ ಬಸದಿ'ಯೆಂದು ಹೆಸರಾಗಿದೆ.

ಕೌಟಿಲ್ಯ (ಚಾಣಕ್ಯ).

ಕೌಟಿಲ್ಯನು ಪ್ರಾಚೀನ ಭಾರತದ ಒಬ್ಬ ಹೆಸರಾಂತ ರಾಜನೀತಿ ನಿಪುಣ. ಆತನು ಚಾಣಕ್ಯ ಮತ್ತು ವಿಷ್ಣುಗುಪ್ತ ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದನು. ನಂದರನ್ನು ಪದಚ್ಯುತಿಗೊಳಿಸುವಲ್ಲಿ ಮತ್ತು ಮೌರ್ಯ ಸಾಮ್ರಾಜ್ಯದ ಸ್ಥಾಪನೆಯಲ್ಲಿ ಇವನು ಪ್ರಮುಖ ಪಾತ್ರ ವಹಿಸಿದ್ದಾನೆ. ಸುವ್ಯವಸ್ಥಿತವಾದ ಆಡಳಿತ ವ್ಯವಸ್ಥೆಯ ರಚನೆಗೆ ಬಹುಮುಖ್ಯವಾಗಿ ಕಾರಣನಾಗಿದ್ದಾನೆ. ಕೌಟಿಲ್ಯನು ಅರ್ಥಶಾಸ್ತ್ರವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಮೈಸೂರಿನ ಓರಿಯಂಟಲ್ ರಿಸರ್ಚ್ ಸಂಸ್ಥೆಯ ಗ್ರಂಥಪಾಲಕರಾಗಿದ್ದ ಡಾ: ಶಾಮಾಶಾಸ್ತ್ರಿಯವರು 1905ರಲ್ಲಿ ಈ ಗ್ರಂಥವನ್ನು ಸಂಶೋಧಿಸಿ ಅದರ ಇಂಗ್ಲೀಷ್ ಭಾಷಾಂತರವನ್ನು 1909ರಲ್ಲಿ ಪ್ರಕಟಿಸಿದರು. ಇದರಲ್ಲಿಯ ವಿಷಯಗಳನ್ನು ಮೂರು ಪ್ರಮುಖ ಭಾಗಗಳಾಗಿ ವಿಂಗಡಿಸಬಹುದಾಗಿದೆ.

1. ಮೊದಲ ಭಾಗವು ರಾಜ, ಆತನ ಸಲಹಾ ಸಮಿತಿ ಮತ್ತು ಸರಕಾರವನ್ನು ಕುರಿತು ತಿಳಿಸುತ್ತದೆ.
2. ಎರಡನೆಯ ಭಾಗವು ನಾಗರಿಕ ಮತ್ತು ಅಪರಾಧಿ ಕಾನೂನುಗಳನ್ನು ಕುರಿತದ್ದಾಗಿದೆ.
3. ಮೂರನೆಯ ಭಾಗವು ಅಂತರ ರಾಜ್ಯ ಕಾನೂನು, ರಾಯಭಾರನೀತಿ ಮತ್ತು ಯುದ್ಧದ ಬಗೆಗೆ ತಿಳಿಸುತ್ತದೆ.

ಅರ್ಥಶಾಸ್ತ್ರವು ರಾಜ್ಯದ ಪ್ರಮುಖವಾದ ಏಳು ಅಂಗಗಳ (ಸಪ್ತಾಂಗ) ಬಗ್ಗೆ ತಿಳಿಸುತ್ತದೆ. ಅವುಗಳು –ರಾಜ (ರಾಜಪ್ರಭುತ್ವ), ಮಂತ್ರಿ (ಸಲಹಾ ಸಮಿತಿ) ಜನಪದ (ಜನಸಂಖ್ಯೆ ಮತ್ತು ಭೂಪ್ರದೇಶ), ದುರ್ಗ (ಕೋಟೆ), ಕೋಶ (ಖಜಾನೆ), ಬಲ (ಸೇನೆ) ಮತ್ತು ಮಿತ್ರ (ಮಿತ್ರರಾಜ್ಯ).

ಬಿಂದುಸಾರ.

ಚಂದ್ರಗುಪ್ತಮೌರ್ಯನ ಉತ್ತರಾಧಿಕಾರಿ ಅವನ ಮಗ ಬಿಂದುಸಾರ. ಅವನು ಸಾಶಪೂ 300 ರಿಂದ 273ರವರೆಗೆ ಆಳಿದನು. ಬಿಂದುಸಾರನ ಬಗ್ಗೆ ಹೆಚ್ಚು ತಿಳಿದಿಲ್ಲ. ಬಿಂದುಸಾರನ ನಂತರ ಅವನ ಪುತ್ರ ಅಶೋಕ ರಾಜನಾದನು.

ಅಶೋಕ ಮಹಾಶಯ (ಸಾಶಪೂ 273–232)

ಅಶೋಕನು ಮೌರ್ಯರಲ್ಲಿ ಶ್ರೇಷ್ಠ ಅರಸನಾಗಿದ್ದಾನೆ ಮತ್ತು ಪ್ರಪಂಚದ ಅರಸರುಗಳಲ್ಲಿಯೇ ಒಬ್ಬ ಹೆಸರುವಾಸಿಯಾದ ಚಕ್ರವರ್ತಿಯಾಗಿದ್ದಾನೆ. ಶಾಸನಗಳಲ್ಲಿ ಅವನನ್ನು 'ದೇವನಾಂಪ್ರಿಯ' ಮತ್ತು 'ಪ್ರಿಯದರ್ಶಿ' ಎಂದು ಹೆಸರಿಸಲಾಗಿದೆ. ಅವುಗಳು ಆತನ ಶ್ರೇಷ್ಠ ವ್ಯಕ್ತಿತ್ವವನ್ನು ಸೂಚಿಸುತ್ತವೆ.

ಅಶೋಕನು ಸಾಶಪೂ 273 ರಲ್ಲಿ ಅಧಿಕಾರಕ್ಕೆ ಬಂದನಾದರೂ ಆತನ ಕಿರೀಟ ಧಾರಣ ಮಹೋತ್ಸವವು ಸಾಶಪೂ 269ರಲ್ಲಿ ನಡೆಯಿತು. ಸಾಶಪೂ 273–269 ರವರೆಗಿನ ಇತಿಹಾಸ ಸ್ಪಷ್ಟವಾಗಿಲ್ಲ. ಈ ಅವಧಿಯಲ್ಲಿ ಅಶೋಕ ಮತ್ತು ಆತನ ನೂರು ಜನ ಸಹೋದರರ ನಡುವೆ ಅಧಿಕಾರಕ್ಕಾಗಿ ಹೋರಾಟ ನಡೆದಿದೆ ಎಂದು ಇತಿಹಾಸಕರರು ನಂಬುತ್ತಾರೆ.

ಕಳಿಂಗ ಯುದ್ಧ– ಸಾಶಪೂ 261

ಅಶೋಕನ ಅಧಿಕಾರಾವಧಿಯಲ್ಲಿ ಕಳಿಂಗವು ಒಂದು ಶಕ್ತಿಶಾಲಿಯಾದ ರಾಜ್ಯವಾಗಿತ್ತು. ಅಶೋಕನು ತನ್ನ ಸಾರ್ವಭೌಮತ್ವವನ್ನು ಕಳಿಂಗದ ಮೇಲೆ ವಿಸ್ತರಿಸಲು ಅಪೇಕ್ಷಿಸಿದನು. ಆದ್ದರಿಂದ ಆತನು ಕಳಿಂಗದ ಮೇಲೆ ದಾಳಿ ಮಾಡಿದನು. ಅವರ ನಡುವೆ ಭೀಕರ ಕದನ ನಡೆಯಿತು. ಹದಿಮೂರನೇ ಶಿಲಾಶಾಸನ ಅಶೋಕನ ಕಳಿಂಗದ ದಿಗ್ವಿಜಯ ಮತ್ತು ಅದರ ಪರಿಣಾಮಗಳನ್ನು ಕುರಿತಾದ ವಿವರಗಳನ್ನು ನೀಡುತ್ತದೆ.

ಕಳಿಂಗಯುದ್ಧದಲ್ಲಿ 1,00,000 ಜನ ಪ್ರಾಣ ತೆತ್ತರು ಮತ್ತು 1,50,000 ಸೈನಿಕರು ಯುದ್ಧಖೈದಿಗಳಾದರು ಎಂದು ಇದು ಹೇಳುತ್ತದೆ. ರಕ್ತಪಾತವನ್ನು ಕಂಡ ಅಶೋಕನು ತುಂಬಾ ದು:ಖಿತಪ್ತನಾದನು. ಭವಿಷ್ಯದಲ್ಲಿ ಯುದ್ಧ ಮಾಡಬಾರದೆಂದು ತೀರ್ಮಾನಿಸಿದುದರಿಂದ ಇದೇ ಆತನ ಕೊನೆಯ ಯುದ್ಧವಾಯಿತು. ಯುದ್ಧದ ಪರಿಣಾಮವಾಗಿ ಅಶೋಕನು ತನ್ನ ವಿದೇಶಾಂಗನೀತಿಯನ್ನು ಬದಲಾಯಿಸಿದನು. ದಿಗ್ವಿಜಯಗಳ (ಸೈನಿಕ ವಿಜಯ) ಬದಲಾಗಿ 'ಧರ್ಮವಿಜಯ' (ಜನರ ಹೃದಯ ಗೆಲ್ಲುವುದು) ದ ನೀತಿಯನ್ನು ತನ್ನದಾಗಿಸಿಕೊಂಡನು. ಹೀಗೆ ಕಳಿಂಗ ಯುದ್ಧವು ಅಶೋಕನ ಜೀವನದಲ್ಲಿ ಒಂದು ಮಹತ್ವವಾದ ತಿರುವನ್ನುಂಟುಮಾಡಿತು. ಉಪಗುಪ್ತನೆಂಬ ಬೌದ್ಧ ಸನ್ಯಾಸಿಯ ಪ್ರಭಾವದಿಂದ ಆತನು ಬೌದ್ಧಧರ್ಮವನ್ನು ಸ್ವೀಕರಿಸಿದನು.

ಅಶೋಕನ ಸಾಮ್ರಾಜ್ಯವು ಉತ್ತರದಲ್ಲಿ ಕಾಶ್ಮೀರ ಮತ್ತು ಆಫ್ಘಾನಿಸ್ಥಾನದ ಪ್ರದೇಶಗಳಿಂದ, ದಕ್ಷಿಣದಲ್ಲಿ ಕರ್ನಾಟಕ (ಸುವರ್ಣಗಿರಿ) ವರೆಗೆ, ಪೂರ್ವದಲ್ಲಿ ಬಂಗಾಳದಿಂದ ಪಶ್ಚಿಮದಲ್ಲಿ ಸಿಂಧ್ ಮತ್ತು ಬಲೂಚಿಸ್ಥಾನಗಳವರೆಗೆ ಹಬ್ಬಿತ್ತು.

ಅಶೋಕನ ಶಿಲಾಶಾಸನಗಳು

ಅಶೋಕನು ಶಿಲಾಶಾಸನಗಳನ್ನು ಹೊರಡಿಸಿದ ಭಾರತದ ಮೊದಲ ಸಾಮ್ರಾಟ. ಅವುಗಳು ಸಾಮ್ರಾಜ್ಯದ ಉದ್ದಗಲಕ್ಕೂ ದೊರಕಿವೆ. ಶಿಲಾಶಾಸನಗಳು ಮೌರ್ಯರ ಧರ್ಮ, ಸಮಾಜ ಮತ್ತು ಆಡಳಿತದ ಮೇಲೆ ಬೆಳಕು ಚೆಲ್ಲುವುದರೊಂದಿಗೆ, ಆತನ ಆದರ್ಶಗಳ ಮತ್ತು ಮನೋಭಾವವನ್ನು ಅರಿಯಲು ಸಹಾಯ ಮಾಡುತ್ತವೆ. ಶಿಲಾಶಾಸನಗಳಲ್ಲಿಯ ಭಾಷೆಯು ಪ್ರಾಕೃತ, ಪಾಳಿ ಮತ್ತು ಗ್ರೀಕ್ ಆಗಿದ್ದು, ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಯನ್ನು ಬಳಸಲಾಗಿದೆ. ದೀರ್ಘಾವಧಿಯವರೆಗೆ ಒಗಟಾಗಿದ್ದ ಬ್ರಾಹ್ಮಿಲಿಪಿಯನ್ನು 1831ರಲ್ಲಿ ಜೇಮ್ಸ್ ಪ್ರಿನ್ಸೆಪ್ ಸಂಶೋಧಿಸಿ ಬೆಳಕಿಗೆ ತಂದನು. ಶಿಲಾಶಾಸನಗಳನ್ನು ಪ್ರಧಾನ ಶಿಲಾಶಾಸನಗಳು, ಕಿರಿಯ ಶಿಲಾಶಾಸನಗಳು, ಸ್ತಂಭಶಾಸನಗಳು ಮತ್ತು ಗುಹಾಶಾಸನಗಳೆಂದು ವರ್ಗೀಕರಿಸಲಾಗಿದೆ.

ಕರ್ನಾಟಕದಲ್ಲಿನ ಶಿಲಾಶಾಸನಗಳು

ಕರ್ನಾಟಕದಲ್ಲಿ ಅಶೋಕನ ಅನೇಕ ಶಿಲಾಶಾಸನಗಳು ಸಂಶೋಧಿಸಲ್ಪಟ್ಟಿವೆ. ಅವುಗಳು ದೊರಕಿರುವ ಸ್ಥಳಗಳೆಂದರೆ,

1. ರಾಯಚೂರು ಜಿಲ್ಲೆಯ ಮಸ್ಕಿ.
2. ಕೊಪ್ಪಳ ಜಿಲ್ಲೆಯ ಗವಿಮಠ ಮತ್ತು ಪಾಲ್ಕಿಗುಂಡ.
3. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರ.
4. ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದಯಗೊಳ್ಳಂ.
5. ಕಲಬುರಗಿ ಜಿಲ್ಲೆಯ ಸನ್ನತಿ.

ಶಿಲಾಶಾಸನಗಳು ರಾಜನನ್ನು 'ದೇವನಾಂಪ್ರಿಯ' ಅಥವಾ 'ಪ್ರಿಯದರ್ಶಿ' ಎಂದು ಉಲ್ಲೇಖಿಸಿದ್ದರಿಂದ ಇತಿಹಾಸಕಾರರಲ್ಲಿ ಶಾಸನಗಳನ್ನು ಹೊರಡಿಸಿದ ರಾಜ ಯಾರು ಎಂಬುದರ ಕುರಿತಾಗಿ ಅನುಮಾನಗಳು ತಲೆದೋರಿತ್ತು. ಮಸ್ಕಿ ಹಾಗೂ ಕಲ್ಕತ್ತ ಶಾಸನಗಳು ರಾಜನನ್ನು 'ದೇವನಾಂಪ್ರಿಯ ಅಶೋಕಸ' ಎಂದು ಉಲ್ಲೇಖಿಸಿವೆ. ಇದರಿಂದಾಗಿ ದೇವನಾಂಪ್ರಿಯ ಅಥವಾ ಪ್ರಿಯದರ್ಶಿರಾಜ ಅಶೋಕನಲ್ಲದೇ ಬೇರಾರು ಅಲ್ಲ ಎಂದು ದೃಢಪಟ್ಟಿತು.

ಧರ್ಮ: ಅಶೋಕನು ಧರ್ಮಕ್ಕೆ ಶ್ರೇಷ್ಠ ಕೊಡುಗೆ ನೀಡಿದ್ದಾನೆ. ಅವನ ಪ್ರಕಾರ ಧರ್ಮನಿಷ್ಠೆಯು ಈ ಕೆಳಕಂಡ ಗುಣಗಳನ್ನು ಹೊಂದಿರಬೇಕು.


ಅಶೋಕನ ಕಾಲದ
ಮೌರ್ಯಸಾಮ್ರಾಜ್ಯ
ತಕ್ಷಶಿಲ
ಪಾಟಲಿಪುತ್ರ
ಉಜ್ಜಯಿನಿ
ಗಿರ್‌ನಾರ್
ಸಾರನಾಥ
ಸಾಂಚಿ
ತೋಸಾಲಿ
ಕಳಿಂಗ
ಮಸ್ಕಿ
ಸುವರ್ಣಗಿರಿ
ಅರಬ್ಬಿ
ಸಮುದ್ರ
ಬಂಗಾಳ ಕೊಲ್ಲಿ
ಸಿಲೋನ್
ಹಿಂದೂ ಮಹಾಸಾಗರ
ಸಾಮ್ರಾಜ್ಯ ವಿಸ್ತಾರ
ಉ
ಪ
ಪೂ
ದ

1. ತಂದೆ ತಾಯಿಗಳಿಗೆ ವಿಧೇಯರಾಗಿರಬೇಕು ಮತ್ತು ಗುರುಗಳಿಗೆ ಗೌರವ ತೋರಬೇಕು.
2. ಪ್ರತಿಯೊಬ್ಬರು ಸತ್ಯವನ್ನು ನುಡಿಯಬೇಕು.
3. ಸೇವಕರು, ಕಿರಿಯರು ಮತ್ತು ಅವಲಂಬಿತರನ್ನು ಪ್ರೀತಿಯಿಂದ ಕಾಣಬೇಕು.
4. ಮಾನವರು ಮತ್ತು ಪ್ರಾಣಿಗಳಿಗೆ ಹಿಂಸೆ ನೀಡಬಾರದು.
5. ಪ್ರತಿಯೊಬ್ಬನು ಕೋಪ, ಕ್ರೌರ್ಯ ಮತ್ತು ದುಂದುವೆಚ್ಚಗಳನ್ನು ನಿಗ್ರಹಿಸಬೇಕು.

ಬೌದ್ಧ ಧರ್ಮದ ಹರಡುವಿಕೆಗೆ ತೆಗೆದುಕೊಂಡ ಕ್ರಮಗಳು.

ಭಾರತದಲ್ಲಿ ಮಾತ್ರವಲ್ಲದೇ ಭಾರತದ ಹೊರಗೂ ಬೌದ್ಧಧರ್ಮದ ಪ್ರಸಾರಕ್ಕೆ ಅಶೋಕ ಕಾರಣನಾಗಿದ್ದಾನೆ. ಬೌದ್ಧಧರ್ಮದ ಪ್ರಸಾರಕ್ಕೆ ಅನೇಕ ಕ್ರಮಗಳನ್ನು ಅವನು ಕೈಗೊಂಡನು. ಅವುಗಳಾವುವೆಂದರೆ,

1. ಬೌದ್ಧಧರ್ಮದ ಪವಿತ್ರ ಕ್ಷೇತ್ರಗಳಾದ ಲುಂಬಿನಿವನ, ಕಪಿಲವಸ್ತು, ಗಯಾ, ಸಾರನಾಥ ಮತ್ತು ಕುಶೀನಗರವನ್ನು ಸಂದರ್ಶಿಸಿದನು ಮತ್ತು ಧರ್ಮಗೋಷ್ಠಿಗಳನ್ನು ಏರ್ಪಡಿಸಿದನು.
2. ಸಾಮ್ರಾಜ್ಯದಾದ್ಯಂತ ಅನೇಕ ವಿಹಾರಗಳನ್ನು ನಿರ್ಮಿಸಿದನು ಮತ್ತು ಅವುಗಳ ದತ್ತಿಗಾಗಿ ಹೆಚ್ಚಿನ ಪ್ರಮಾಣದ ಹಣವನ್ನು ವ್ಯಯಿಸಿದನು.
3. ಬುದ್ಧನ ತತ್ವಗಳನ್ನು ಪ್ರಸಾರ ಮಾಡಲು ಸಾಮ್ರಾಜ್ಯದಾದ್ಯಂತ ಅವುಗಳನ್ನು ಬಂಡೆಗಳು, ಸ್ತಂಭಗಳು ಮತ್ತು ಗುಹೆಗಳ ಗೋಡೆಗಳ ಮೇಲೆ ಕೆತ್ತಿಸಿದನು.
4. ಜನರಲ್ಲಿ ಧರ್ಮ ಪ್ರಚಾರಕ್ಕಾಗಿ ಧರ್ಮಮಹಾಮಾತ್ರರು, ಯುಕ್ತರು ಮತ್ತು ರಜ್ಜುಕರು ಎಂಬ ಅಧಿಕಾರಿಗಳನ್ನು ನೇಮಿಸಿದನು. ಹಾಗೂ ಮಹಿಳೆಯರ ರಕ್ಷಣೆ ಮತ್ತು ಧರ್ಮ ಜಾಗೃತಿಗಾಗಿ ಸ್ತ್ರೀ ಅಧ್ಯಕ್ಷ ಮಹಾಮಾತ್ರರು ಎಂಬ ಅಧಿಕಾರಿಗಳನ್ನು ನೇಮಿಸಿದನು.
5. ಬೌದ್ಧ ಭಿಕ್ಷುಗಳ ನಡುವಣ ಆಂತರಿಕ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಲು ಸಾಶಪೂ 250ರಲ್ಲಿ ಪಾಟಲೀಪುತ್ರದಲ್ಲಿ 3ನೇ ಬೌದ್ಧಸಮ್ಮೇಳನ ಸಂಘಟಿಸಿದನು.
6. ಅಶೋಕನು ಬೌದ್ಧಧರ್ಮವನ್ನು ಹರಡಲು ಆಫ್ಘಾನಿಸ್ಥಾನ, ಬರ್ಮಾ, ಶ್ರೀಲಂಕಾ ಮತ್ತು ಯೂರೋಪಿಗೆ ನಿಯೋಗಗಳನ್ನು ಕಳುಹಿಸಿದನು. ಶಾಂತಿಸೂಚಕವಾಗಿ ಬೋಧಿಗಿಡದೊಂದಿಗೆ ತನ್ನ ಮಗ ಮಹೇಂದ್ರ ಮತ್ತು ಮಗಳು ಸಂಘಮಿತ್ರೆಯನ್ನು ಶ್ರೀಲಂಕಾಕ್ಕೆ ಕಳಹಿಸಿದನು.
7. ಅವನು ಅನೇಕ ಕಲ್ಯಾಣಕಾರಕ ಚಟುವಟಿಕೆಗಳನ್ನು ಕೈಗೊಂಡನು. ಅವನು ಬಾವಿಗಳನ್ನು ತೋಡಿಸಿದನು, ವಿಶ್ರಾಂತಿಗೃಹಗಳನ್ನು ಕಟ್ಟಿಸಿದನು, ರಸ್ತೆಯ ಬದಿಗಳಲ್ಲಿ ಫಲನೀಡುವ ಮರಗಳನ್ನು ನೆಡೆಸಿದನು. ಮಾನವ ಮತ್ತು ಪ್ರಾಣಿಗಳಿಗಾಗಿ ಆಸ್ಪತ್ರೆಗಳನ್ನು ನಿರ್ಮಿಸಿದನು ಹಾಗೂ ಶಾಲೆಗಳನ್ನು ಸ್ಥಾಪಿಸಿದನು, ಬಡಜನರು ಮತ್ತು ದೈಹಿಕವಾಗಿ ಅಶಕ್ತರಾದವರಿಗೆ ಊಟದ ವ್ಯವಸ್ಥೆ ಮಾಡಿದನು. ಇವನು ತನ್ನ ಪ್ರಜೆಗಳಿಗೆ ತಂದೆಯಂತೆ ಇದ್ದನು. 'ಸೇವೆ ಮತ್ತು ತ್ಯಾಗ' ಆತನ ಗುರಿಯಾಗಿತ್ತು.

ಅಶೋಕನು ಭಾರತದಲ್ಲಿ ಒಂದು ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಪ್ರಪಂಚದ ಇತಿಹಾಸದಲ್ಲಿ ವಿಜಯದ ನಂತರವೂ ಯುದ್ಧವನ್ನು ತ್ಯಜಿಸಿದ ಏಕೈಕ ಅರಸನಾಗಿದ್ದಾನೆ. ಕಳಿಂಗ ಯುದ್ಧದ ಪರಿಣಾಮಗಳಿಂದ ತಲ್ಲಣಗೊಂಡ ಅಶೋಕನು ದಿಗ್ವಿಜಯಗಳನ್ನು ತ್ಯಜಿಸಿ ಧರ್ಮ ವಿಜಯವನ್ನು ಅಳವಡಿಸಿಕೊಂಡು ತನ್ನ ಸಂಪೂರ್ಣ ಜೀವನವನ್ನು ಜನರ ಶಾಂತಿ ಹಾಗು ಕಲ್ಯಾಣಕ್ಕಾಗಿ ವಿನಿಯೋಗಿಸಿದನು. "ಹತ್ತಾರು ಸಾವಿರ

ರಾಜ, ಮಹಾರಾಜ, ಸಾಮ್ರಾಟರ ಹೆಸರುಗಳು ತುಂಬಿರುವ ಇತಿಹಾಸವೆಂಬ ದಿಗಂತದಲ್ಲಿ ಅಶೋಕನೊಬ್ಬನೇ ಧ್ರುವತಾರೆಯಂತೆ ಜಾಜ್ವಲ್ಯಮಾನವಾಗಿ ಬೆಳಗುತ್ತಿದ್ದಾನೆ" ಎಂದು ಹೆಚ್.ಜಿ. ವೆಲ್ಸ್‌ರವರು ಹೇಳಿದ್ದಾರೆ.

ಕೊಡುಗೆಗಳು

1. ಮೌರ್ಯರ ಆಡಳಿತ: ಮೌರ್ಯರು ಒಂದು ಸಮರ್ಥವಾದ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದ್ದರು. ಸಾಮ್ರಾಜ್ಯದಾದ್ಯಂತ ಏಕರೂಪದ ಆಡಳಿತ ಪದ್ಧತಿಯನ್ನು ಸ್ಥಾಪಿಸಿದವರಲ್ಲಿ ಮೌರ್ಯರು ಮೊದಲಿಗರು. ಅರ್ಥಶಾಸ್ತ್ರವು ಮೌರ್ಯರ ಆಡಳಿತದಲ್ಲಿ ಪ್ರಮುಖವಾದ ಪಾತ್ರವಹಿಸಿದೆ.

ಕೇಂದ್ರ ಸರ್ಕಾರ.

ರಾಜ: ರಾಜನೇ ರಾಜ್ಯದ ಮುಖ್ಯಸ್ಥನಾಗಿದ್ದನು. ರಾಜನು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಸೈನ್ಯಾಧಿಕಾರದ ಪ್ರಮುಖ ಮೂಲವಾಗಿದ್ದನು. ರಾಜನು ಧರ್ಮದ ಪರಿಮಿತಿಗೊಳಪಟ್ಟಿದ್ದನು. ಪ್ರಜೆಗಳ ಯೋಗಕ್ಷೇಮಕ್ಕಾಗಿ ಕಾರ್ಯ ನಿರ್ವಹಿಸುವುದೇ ರಾಜನ ಪ್ರಮುಖ ಕರ್ತವ್ಯವಾಗಿತ್ತು.

ಮಂತ್ರಿಪರಿಷತ್ತು: ರಾಜನಿಗೆ ಆಡಳಿತದಲ್ಲಿ ಸಹಾಯ ಮಾಡಲು 'ಮಂತ್ರಿಪರಿಷತ್ತು' ಎಂದು ಕರೆಯಲ್ಪಡುತ್ತಿದ್ದ ಸಲಹಾ ಸಮಿತಿಯಿತ್ತು. ಅರ್ಹತೆ ಮತ್ತು ಸಾಮರ್ಥ್ಯವನ್ನು ಪರಿಗಣಿಸಿ ರಾಜನು ಮಂತ್ರಿಗಳನ್ನು ನೇಮಿಸುತ್ತಿದ್ದನು. ಮಂತ್ರಿಗಳ ಸಂಖ್ಯೆಯು 4 ರಿಂದ 12 ರವರೆಗೆ ಬದಲಾಗುತ್ತಿತ್ತು. ಪ್ರತಿಯೊಬ್ಬ ಮಂತ್ರಿಯು ಒಂದು ಅಥವಾ ಹೆಚ್ಚು ಇಲಾಖೆಗಳ ಉಸ್ತುವಾರಿ ವಹಿಸುತ್ತಿದ್ದನು. ಮಂತ್ರಿಪರಿಷತ್ತಿನಲ್ಲಿ ಎಲ್ಲಾ ವಿಷಯಗಳು ಪರಿಗಣಿಸಲ್ಪಟ್ಟು ಚರ್ಚಿಸಲಾಗುತ್ತಿದ್ದವು. ಮಂತ್ರಿಪರಿಷತ್ತಿನ ಸಲಹೆಯನ್ನು ರಾಜನು ಉಪೇಕ್ಷಿಸಬಹುದಾಗಿತ್ತು.

ಸಚಿವಾಲಯ: ಕೇಂದ್ರಸರ್ಕಾರದ ಆಡಳಿತದ ವಿಷಯಗಳನ್ನು 30 ಇಲಾಖೆಗಳಲ್ಲಿ ವಿಭಾಗಿಸಲಾಗಿತ್ತು. ಪ್ರತಿಯೊಂದಕ್ಕೂ ಒಬ್ಬೊಬ್ಬ ಮೇಲ್ವಿಚಾರಕನಿರುತ್ತಿದ್ದನು. ನೀರಾವರಿ, ಮಾರುಕಟ್ಟೆ, ಶಿಕ್ಷಣ, ಬರ ಪರಿಹಾರ ಇತ್ಯಾದಿ ರಾಜ್ಯದ ಕಾರ್ಯಗಳನ್ನು ಅವು ನಿರ್ವಹಿಸುತ್ತಿದ್ದವು.

ನ್ಯಾಯಾಂಗ ಆಡಳಿತ: ಮೌರ್ಯ ಸಾಮ್ರಾಜ್ಯದಲ್ಲಿ ರಾಜನೇ ಮೇಲ್ಮನವಿಯ ಅತ್ಯುಚ್ಚ ನ್ಯಾಯಾಲಯವಾಗಿದ್ದನು. ಮೌರ್ಯ ಸಾಮ್ರಾಜ್ಯದಲ್ಲಿ ನಾಗರಿಕ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ 'ಧರ್ಮಸ್ಥೇಯ' ಹಾಗೂ ಅಪರಾಧಿ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ 'ಕಂಟಕಶೋಧನ' ಎಂಬ ಎರಡು ಬಗೆಯ ನ್ಯಾಯಾಲಯಗಳಿದ್ದವು. ಈ ನ್ಯಾಯಾಲಯಗಳು ಎಲ್ಲಾ ಪಟ್ಟಣ ಮತ್ತು ನಗರಗಳಲ್ಲಿದ್ದವು. ಗ್ರಾಮ ಸಮಿತಿಗಳು ಮತ್ತು ಅವುಗಳ ಮುಖ್ಯಸ್ಥರು ತಮ್ಮ ಪ್ರದೇಶಗಳಲ್ಲಿಯ ನ್ಯಾಯ ನಿರ್ಣಯಕ್ಕೆ ಜವಾಬ್ದಾರರಾಗಿರುತ್ತಿದ್ದರು. ಶಿಕ್ಷೆಗಳು ತುಂಬಾ ಕಠಿಣವಾಗಿದ್ದು ಅವುಗಳಲ್ಲಿ ತಲೆ ಹಾಗೂ ಕೈಕಾಲು ಕತ್ತರಿಸುವುದು ಸೇರಿತ್ತೆಂದು ಮೆಗಾಸ್ಥನೀಸ್ ಉಲ್ಲೇಖಿಸಿದ್ದಾನೆ.

ಕಂದಾಯದ ಆಡಳಿತ: ಭೂಕಂದಾಯ ರಾಜ್ಯಾದಾಯದ ಪ್ರಮುಖ ಮೂಲವಾಗಿತ್ತು. ಉತ್ಪನ್ನದ 1/6 ಭಾಗವನ್ನು ತೆರಿಗೆಯಾಗಿ ನಿಗದಿಪಡಿಸಲಾಗಿತ್ತು. ಕಂದಾಯವನ್ನು ಹಣ ಅಥವಾ ವಸ್ತು ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಇವುಗಳು ಸ್ಥಳೀಯ ಅಧಿಕಾರಿಗಳಿಂದ ಸಂಗ್ರಹಿಸಲ್ಪಡುತ್ತಿದ್ದವು. ವೃತ್ತಿಗಳು, ಮನೆಗಳು, ಹಸು, ಸಾಕುಪ್ರಾಣಿಗಳು, ಅರಣ್ಯೋತ್ಪನ್ನಗಳ ಮೇಲಿನ ತೆರಿಗೆ, ಮಾರಾಟ ತೆರಿಗೆ ಇತ್ಯಾದಿ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು.

ಪ್ರಾಂತೀಯ ಸರ್ಕಾರ: ಮೌರ್ಯ ಸಾಮ್ರಾಜ್ಯವು ಐದು ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟಿತ್ತು ಮತ್ತು ಅವುಗಳ ರಾಜಧಾನಿಗಳು ಗಿರ್‌ನಾರ್, ತಕ್ಷಶಿಲ, ಉಜ್ಜಯಿನಿ, ತೋಸಾಲಿ ಮತ್ತು ಸುವರ್ಣಗಿರಿಗಳಲ್ಲಿದ್ದವು. ಪ್ರತಿಯೊಂದು

ಪ್ರಾಂತ್ಯವು ರಾಜಮನೆತನಕ್ಕೆ ಸೇರಿದ ಅಥವಾ ರಾಜನ ಸಂಬಂಧಿಕರಲ್ಲೊಬ್ಬನಾಗಿದ್ದ ರಾಜ್ಯಪಾಲನ ಅಧೀನದಲ್ಲಿರುತ್ತಿತ್ತು. ಪ್ರಾಂತ್ಯಗಳನ್ನು ಪುನ: ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟು ಅವುಗಳು 'ಸ್ಥಾನಿಕ'ರಿಂದ ಆಳಲ್ಪಡುತ್ತಿದ್ದವು. 'ಗ್ರಾಮಿಕ' ಹಳ್ಳಿಯ ಮುಖ್ಯಸ್ಥನಾಗಿರುತ್ತಿದ್ದನು. ಹತ್ತು ಹಳ್ಳಿಗಳ ಮುಖ್ಯಸ್ಥನನ್ನು 'ಗೋಪ' ಎಂದು ಕರೆಯುತ್ತಿದ್ದರು. ಅಶೋಕನು ಕೇಂದ್ರ ಮತ್ತು ಪ್ರಾಂತ್ಯಗಳೆರಡರಲ್ಲೂ ಧರ್ಮಮಹಾಮಾತ್ರರನ್ನು ನೇಮಿಸಿದ್ದನು.

ನಗರಾಡಳಿತ: ಗ್ರೀಕ್ ರಾಯಭಾರಿ ಮೆಗಾಸ್ಥನೀಸನು ಪಾಟಲೀಪುತ್ರದ ಆಡಳಿತವನ್ನು ಸುದೀರ್ಘವಾಗಿ ವಿವರಿಸಿದ್ದಾನೆ. ನಗರಾಡಳಿತವನ್ನು ತಲಾ ಐವರು ಸದಸ್ಯರ ಆರು ಮಂಡಳಿಗಳ ಒಟ್ಟು 30 ಮಂದಿ ಅಧಿಕಾರಿಗಳ ಸಮಿತಿಯ ನಿರ್ವಹಣೆಗೆ ವಹಿಸಲಾಗಿತ್ತು. ಆ ಸಮಿತಿಗಳು ರಸ್ತೆಗಳು, ಮಾರುಕಟ್ಟೆಗಳು, ಆಸ್ಪತ್ರೆಗಳು, ದೇವಾಲಯಗಳು, ಶಾಲೆಗಳು, ನೀರು ಸರಬರಾಜು ಮುಂತಾದವನ್ನು ನೋಡಿಕೊಳ್ಳುತ್ತಿದ್ದವು.

ಸೈನ್ಯಾಡಳಿತ: ಚಂದ್ರಗುಪ್ತನ ಸೇನಾ ಆಡಳಿತವು ತುಂಬಾ ದಕ್ಷವೂ ಮತ್ತು ವ್ಯವಸ್ಥಿತವೂ ಆಗಿತ್ತು. ಯುದ್ಧಗಳ ಸಂದರ್ಭದಲ್ಲಿ ಸ್ವತ: ರಾಜನೇ ಸೇನೆಯನ್ನು ಮುನ್ನಡೆಸುತ್ತಿದ್ದನು. ಚಂದ್ರಗುಪ್ತನ ಸೈನ್ಯವು 6,00,000 ಕಾಲ್ದಳ, 30,000 ಅಶ್ವದಳ ಮತ್ತು 9,000 ಆನೆಗಳನ್ನು ಹೊಂದಿತ್ತು. ಯುದ್ಧ ಇಲಾಖೆಯು ಐದು ಸದಸ್ಯರನ್ನೊಳಗೊಂಡ ಆರು ಮಂಡಳಿಗಳಿಂದ ನಿರ್ವಹಿಸಲ್ಪಡುತ್ತಿತ್ತು. ಅವುಗಳೆಂದರೆ– 1. ನೌಕಾದಳ, 2. ಸಾರಿಗೆ, 3. ಕಾಲ್ದಳ, 4. ಅಶ್ವದಳ, 5. ರಥದಳ ಮತ್ತು 6. ಗಜದಳ.

2. ಕಲೆ ಮತ್ತು ವಾಸ್ತುಶಿಲ್ಪ:

ಮೌರ್ಯರು ಅನೇಕ ಕಟ್ಟಡಗಳು, ಅರಮನೆಗಳು ಮತ್ತು ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಅಶೋಕನಿಗಿಂತ ಮುಂಚೆ ಕಟ್ಟಡಗಳನ್ನು ಮರಗಳಿಂದ ಕಟ್ಟಲಾಗುತ್ತಿತ್ತು. ಅಶೋಕನು ಮರ ಮತ್ತು ಇಟ್ಟಿಗೆಯ ಬಳಕೆಯನ್ನು ಬಿಟ್ಟು ಕಲ್ಲುಗಳನ್ನು ಬಳಸಲು ಆರಂಭಿಸಿದನು.



ಸಾಂಚಿ ಸ್ತೂಪ

ಸ್ತೂಪಗಳು: ಬುದ್ಧನ ಗೌರವಾರ್ಥ ಅಥವಾ ಆತನ ಅವಶೇಷಗಳ ಮೇಲೆ ಇಟ್ಟಿಗೆ ಅಥವಾ ಕಲ್ಲಿನಿಂದ ನಿರ್ಮಿಸಲಾದ ಗುಮ್ಮಟಗಳೇ ಸ್ತೂಪಗಳು. ಅಶೋಕನು ತನ್ನ ಸಾಮ್ರಾಜ್ಯದಾದ್ಯಂತ 84,000 ಸ್ತೂಪಗಳನ್ನು ನಿರ್ಮಿಸಿದ್ದನೆಂದು ನಂಬಲಾಗಿದೆ. ಅವೆಲ್ಲವೂ ಕಾಲಕ್ರಮೇಣ ಅಳಿದುಹೋಗಿವೆ. ಇಲ್ಲಿಯವರೆಗೂ ಉಳಿದಿರುವ ಏಕೈಕ ಸ್ತೂಪ ಮಧ್ಯಪ್ರದೇಶದ ಸಾಂಚಿಯಲ್ಲಿದೆ. ಇದು ಅತ್ಯಂತ ದೊಡ್ಡ ಸ್ತೂಪವಾಗಿದೆ.

ಅರಮನೆಗಳು: ಪಾಟಲೀಪುತ್ರದ ಚಂದ್ರಗುಪ್ತಮೌರ್ಯನ ಅರಮನೆಯು ತುಂಬಾ ಪ್ರಸಿದ್ಧವಾಗಿತ್ತು. ಭಾರತಕ್ಕೆ ಬಂದಿದ್ದ ಚೀನೀಯಾತ್ರಿಕ ಫಾಹಿಯಾನ್ ಅರಮನೆಯ **ಅಡಿಪಾಯದ** ಬಗೆಗೆ ಮನೋಜ್ಞ ವಿವರಣೆ ನೀಡಿದ್ದಾನೆ. ಇದು ದೇವರಿಂದ ನಿರ್ಮಾಣವಾಗಿದೆಯೆಂದು ಉದ್ಗರಿಸಿದ್ದಾನೆ.

ಗುಹಾಲಯಗಳು: ಬೌದ್ಧಸನ್ಯಾಸಿಗಳ ಧ್ಯಾನಕ್ಕಾಗಿ ಅಶೋಕ ಮತ್ತು ಅವನ ಮೊಮ್ಮಗ ದಶರಥ ಗುಹಾಲಯಗಳನ್ನು ನಿರ್ಮಿಸಿದರು. ಗಯಾ ಸಮೀಪದ ಬರಾಬರ್ ಪರ್ವತಗಳಲ್ಲಿನ ಹಾಗೂ ನಾಗಾರ್ಜುನ ಬೆಟ್ಟಗಳಲ್ಲಿನ ಗುಹೆಗಳು ಈ ಕಾಲಕ್ಕೆ ಸೇರಿದವುಗಳಾಗಿವೆ.

ಸ್ತಂಭಗಳು: ಅಶೋಕನ ಅಧಿಕಾರಾವಧಿಯಲ್ಲಿ ವಿವಿಧ ವಿನ್ಯಾಸಗಳ ಶಿಲಾಸ್ತಂಭಗಳು ನಿರ್ಮಾಣವಾದವು. ಅಶೋಕನು 30ಕ್ಕಿಂತ ಹೆಚ್ಚು ಸ್ತಂಭಗಳನ್ನು ನಿರ್ಮಿಸಿದನೆಂದು ನಂಬಲಾಗಿದೆ. ಪ್ರತಿಯೊಂದು ಶಿಲಾಸ್ತಂಭವು 50 ಟನ್ ತೂಕ ಹೊಂದಿದೆ ಮತ್ತು 30 ಅಡಿ ಎತ್ತರ ಇದೆ. ಅವುಗಳಲ್ಲೆಲ್ಲಾ ತುಂಬಾ ಪ್ರಮುಖವಾದುದು ಸಾರನಾಥ ಸ್ತಂಭವಾಗಿದೆ. ಇದು ಅಧೋಮುಖವಾಗಿ ರೂಪಿಸಲ್ಪಟ್ಟಿರುವ ಕಮಲ, ಧರ್ಮಚಕ್ರ ಮತ್ತು ಪೀಠದ ಮೇಲೆ ಬೆನ್ನಿಗೆ ಬೆನ್ನು ಕೊಟ್ಟು ನಿಂತಿರುವ ನಾಲ್ಕು ಸಿಂಹಗಳ ಚಿತ್ರಗಳನ್ನು ಹೊಂದಿದೆ. ಸಾರನಾಥ ಸ್ತಂಭದ ಶಿರೋಭಾಗವು ಭಾರತದ ರಾಷ್ಟ್ರಲಾಂಛನವಾಗಿದೆ.

ಶಾತವಾಹನರು

ಮೌರ್ಯರ ಪತನಾನಂತರ ಅವರ ಸಾಮಂತರಾಗಿದ್ದ ಶಾತವಾಹನರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಅವರ ಸಾಮ್ರಾಜ್ಯವು ಸುಮಾರು 400 ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. ಶಾತವಾಹನ ರಾಜ್ಯದ ಸ್ಥಾಪನೆಯ ನಿಖರವಾದ ದಿನಾಂಕವನ್ನು ತಿಳಿಯುವುದು ತುಂಬಾ ಕಷ್ಟಕರವಾಗಿದೆ.

ಸಿಮುಖ ಈ ವಂಶದ ಸ್ಥಾಪಕ. ಪ್ರತಿಷ್ಠಾನ (ಮಹಾರಾಷ್ಟ್ರದ ಆಧುನಿಕ ಪೈತಾನ್) ಶಾತವಾಹನರ ರಾಜಧಾನಿಯಾಗಿತ್ತು. ಶಾತವಾಹನರ ಪ್ರಮುಖ ಅರಸುಗಳೆಂದರೆ, ಹಾಲ, ಗೌತಮಿ ಪುತ್ರ ಶಾತಕರ್ಣಿ, ವಸಿಷ್ಠಿಪುತ್ರಪುಳಮಾಯಿ ಮತ್ತು ಯಜ್ಞಶ್ರೀ. ಹಾಲ ಶಾತವಾಹನ ವಂಶದ ಹದಿನೇಳನೇ ದೊರೆ. ಇವನೇ ಸ್ವತ: ವಿದ್ವಾಂಸನಾಗಿದ್ದು, ಪ್ರಾಕೃತ ಭಾಷೆಯಲ್ಲಿ 'ಗಾಥಸಪ್ತಸತಿ' ಎಂಬ ಕೃತಿಯನ್ನು ರಚಿಸಿದ್ದಾನೆ.

ಗೌತಮಿಪುತ್ರ ಶಾತಕರ್ಣಿ–ಸಾಶ 106–130

ಹಾಲನ ಅಶಕ್ತ ಉತ್ತರಾಧಿಕಾರಿಗಳಿಂದಾಗಿ ಶಾತವಾಹನರ ಅಧಿಕಾರಕ್ಕೆ ತೀವ್ರ ಹಿನ್ನಡೆಯಾಗಿತ್ತು. ಗೌತಮಿಪುತ್ರ ಶಾತಕರ್ಣಿಯು ಶಾತವಾಹನರ ಅಧಿಕಾರ ಮತ್ತು ಪ್ರತಿಷ್ಠೆಯನ್ನು ಪುನರ್‌ಸ್ಥಾಪಿಸಿದನು. ಈತನನ್ನು ಶಕ–ಯವನ–ಪಹ್ಲವರ ನಿರ್ಮೂಲಕನೆಂದು ವಿವರಿಸಲಾಗಿದೆ. ಅವನು ಶಕರ ದೊರೆ ನಹಪಾಣಾನನ್ನು ಸೋಲಿಸಿದನು ಮತ್ತು ನಹಪಾಣಾನನ ಬೆಳ್ಳಿಯ ನಾಣ್ಯಗಳನ್ನು ತನ್ನ ರಾಜಮುದ್ರೆಯೊಂದಿಗೆ ಪುನರ್ ಮುದ್ರಿಸಿದನು. ಈತನ ಸಾಧನೆಗಳನ್ನು ಅವನ ತಾಯಿ ಗೌತಮಿಬಾಲಶ್ರೀ ನಾಸಿಕ್ ಗುಹಾಶಾಸನದಲ್ಲಿ ದಾಖಲಿಸಿದ್ದಾಳೆ. ಗೌತಮಿಪುತ್ರ ಶಾತಕರ್ಣಿಯು ಅಶ್ವಮೇಧ ಯಾಗವನ್ನು ನಡೆಸಿದನೆಂದು ಗೌತಮಿಬಾಲಶ್ರೀಯು ಹೇಳಿಕೊಂಡಿದ್ದಾಳೆ. 'ತ್ರೈಸಮುದ್ರ ತೋಯಪೀತವಾಹನ' ಮತ್ತು 'ಶಕ–ಯವನ–ಪಹ್ಲವ ನಿಸೂಧನ' ಅವನ ಪ್ರಮುಖ ಬಿರುದುಗಳು.

ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ಶಾತವಾಹನರ ಕೊಡುಗೆ ಅಪಾರವಾದುದು. ಅವರು ಅನೇಕ ಬೌದ್ಧ ಸ್ತೂಪಗಳು, ವಿಹಾರಗಳು ಮತ್ತು ಚೈತ್ಯಗಳನ್ನು ನಿರ್ಮಿಸಿದ್ದಾರೆ. ಇವುಗಳು ಅಮರಾವತಿ, ನಾಗಾರ್ಜುನಕೊಂಡ, ಕಾರ್ಲೆ, ನಾಸಿಕ್, ಕನ್ಹೇರಿ ಮುಂತಾದ ಕಡೆಗಳಲ್ಲಿವೆ.

ಚಟುವಟಿಕೆ

ಅಶೋಕನ ಸಾಮ್ರಾಜ್ಯದ ವಿಸ್ತಾರವನ್ನು ಭಾರತದ ಭೂಪಟದಲ್ಲಿ ಗುರ್ತಿಸಿ – ಅಶೋಕನ ಶಾಸನಗಳು ದೊರೆತಿರುವ ಸ್ಥಳಗಳನ್ನು ನಮೂದಿಸಿ.

ಪ್ರಶ್ನೆಗಳು:

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಮೌರ್ಯ ವಂಶವನ್ನು ಸ್ಥಾಪಿಸಿದವರು ಯಾರು?
2. ಮೌರ್ಯರ ರಾಜಧಾನಿಯನ್ನು ಹೆಸರಿಸಿ.
3. ಮೌರ್ಯರ ರಾಜಲಾಂಛನ ಯಾವುದು?
4. ಮುದ್ರಾರಾಕ್ಷಸವನ್ನು ಯಾರು ಬರೆದರು?
5. ಅರ್ಥಶಾಸ್ತ್ರವನ್ನು ಯಾರು ಬರೆದರು?
6. ಇಂಡಿಕಾವನ್ನು ಯಾರು ಬರೆದರು?
7. ಚಂದ್ರಗುಪ್ತನಿಗೆ ಮೌರ್ಯಸಾಮ್ರಾಜ್ಯ ಸ್ಥಾಪಿಸುವಲ್ಲಿ ನೆರವಾದವರು ಯಾರು?
8. ಚಂದ್ರಗುಪ್ತಮೌರ್ಯನಿಂದ ಸೋಲಿಸಲ್ಪಟ್ಟ ನಂದರ ದೊರೆ ಯಾರು?
9. ಚಂದ್ರಗುಪ್ತಮೌರ್ಯನ ಆಸ್ಥಾನಕ್ಕೆ ಮೆಗಾಸ್ಥನೀಸನನ್ನು ರಾಯಭಾರಿಯಾಗಿ ಕಳುಹಿಸಿದವರು ಯಾರು?
10. ಚಂದ್ರಗುಪ್ತಮೌರ್ಯನಿಂದ ಸೋಲಿಸಲ್ಪಟ್ಟ ಗ್ರೀಕ್ ದೊರೆಯನ್ನು ಹೆಸರಿಸಿ.
11. ಜೈನಧರ್ಮವನ್ನು ಅನುಸರಿಸಿದ ಮೌರ್ಯ ಅರಸನನ್ನು ಹೆಸರಿಸಿ.
12. ಚಂದ್ರಗುಪ್ತಮೌರ್ಯ ತನ್ನ ಕೊನೆಯ ದಿನಗಳನ್ನು ಎಲ್ಲಿ ಕಳೆದನು?
13. ಮೌರ್ಯ ಸಂತತಿಯ ಶ್ರೇಷ್ಠ ದೊರೆ ಯಾರು?
14. ಅಶೋಕನ ಯಾವ ಶಾಸನವು ಕಳಿಂಗ ಯುದ್ಧದ ಬಗ್ಗೆ ತಿಳಿಸುತ್ತದೆ?
15. ಬೌದ್ಧಧರ್ಮ ಸ್ವೀಕರಿಸಿದ ಮೌರ್ಯ ಸಾಮ್ರಾಟನನ್ನು ಹೆಸರಿಸಿ.
16. 3ನೇ ಬೌದ್ಧ ಮಹಾಸಮ್ಮೇಳನ ಎಲ್ಲಿ ನಡೆಯಿತು?
17. ಅಶೋಕನಿಂದ ನಿರ್ಮಿಸಲ್ಪಟ್ಟ ಅತಿ ದೊಡ್ಡ ಸ್ತೂಪ ಯಾವುದು?
18. ಭಾರತದ ರಾಷ್ಟ್ರ ಲಾಂಛನ ಯಾವುದು?
19. ಶಾತವಾಹನ ಸಂತತಿಯ ಸ್ಥಾಪಕ ಯಾರು?
20. ಶಾತವಾಹನರ ರಾಜಧಾನಿ ಯಾವುದು?
21. ಗಾಥಾಸಪ್ತಸತಿಯನ್ನು ಯಾರು ಬರೆದರು?
22. ಗೌತಮಿ ಬಾಲಶ್ರೀಯು ಹೊರಡಿಸಿದ ಶಾಸನ ಯಾವುದು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಮೌರ್ಯಸಂತತಿಯ ಇತಿಹಾಸ ತಿಳಿಯಲು ಸಹಾಯಕವಾಗಿರುವ ಯಾವುದಾದರು ಎರಡು ಆಧಾರಗಳನ್ನು ಹೆಸರಿಸಿ.

2. ಕರ್ನಾಟಕದಲ್ಲಿ ಅಶೋಕನ ಶಾಸನಗಳು ದೊರಕಿರುವ ಯಾವುದಾದರು ಎರಡು ಸ್ಥಳಗಳನ್ನು ಹೆಸರಿಸಿ.
3. ಮೌರ್ಯರ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಎರಡು ಬಗೆಯ ನ್ಯಾಯಾಲಯಗಳಾವುವು?
4. ಮಸ್ಕಿ ಶಾಸನದ ಪ್ರಾಮುಖ್ಯತೆಯೇನು?
5. ಮೆಗಾಸ್ಥನೀಸ್ ಯಾರು? ಅವನ ಕೃತಿಯನ್ನು ಹೆಸರಿಸಿ.
6. ಕೌಟಿಲ್ಯ ಯಾರು? ಅವನ ಪ್ರಸಿದ್ಧ ಕೃತಿ ಯಾವುದು?
7. ಧರ್ಮಮಹಾಮಾತ್ರರನ್ನು ನೇಮಿಸಿದ ಅರಸ ಯಾರು? ಅವರ ಕರ್ತವ್ಯ ಏನಾಗಿತ್ತು?
8. ಶಾತವಾಹನರ ಯಾರಾದರೂ ಇಬ್ಬರು ಪ್ರಮುಖ ದೊರೆಗಳನ್ನು ಹೆಸರಿಸಿ.
9. ಶಾತವಾಹನರ ಯಾವುದಾದರು ಎರಡು ವಾಸ್ತುಶಿಲ್ಪದ ಕೇಂದ್ರಗಳನ್ನು ಹೆಸರಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಚಂದ್ರಗುಪ್ತಮೌರ್ಯನ ಸಾಧನೆಗಳ ಬಗ್ಗೆ ಬರೆಯಿರಿ.
2. ಬೌದ್ಧಧರ್ಮದ ಪ್ರಸಾರಕ್ಕೆ ಅಶೋಕನು ಕೈಗೊಂಡ ಕ್ರಮಗಳಾವುವು?
3. ಮೌರ್ಯರ ಆಡಳಿತವನ್ನು ವಿವರಿಸಿ.
4. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಮೌರ್ಯರ ಕೊಡುಗೆಗಳನ್ನು ವಿವರಿಸಿ.

IV. ಈ ಕೆಳಗಿನ ಪ್ರಶ್ನೆಗೆ 30– 40 ವಾಕ್ಯಗಳಲ್ಲಿ ಉತ್ತರಿಸಿ.

1. ಅಶೋಕನ ಜೀವನ ಹಾಗೂ ಸಾಧನೆಗಳನ್ನು ವಿವರಿಸಿ.

❊ ❊ ❊ ❊

ಅಧ್ಯಾಯ–4.4

ಕುಶಾನರು

ಮೂಲತ: ಕುಶಾನರು 'ಯೂ–ಚೀ' ಎಂಬ ಹೆಸರಿನ ಅಲೆಮಾರಿ ಜನಾಂಗಕ್ಕೆ ಸೇರಿದವರು ಮತ್ತು ಅವರು ಚೀನಾದಲ್ಲಿ ವಾಸವಾಗಿದ್ದರು. ಹೂಣರಂತಹ ಪ್ರಬಲ ಬುಡಕಟ್ಟುಗಳು ಈ ಜನಾಂಗವನ್ನು ಅವರ ತಾಯ್ನಾಡಿನಿಂದ ಹೊರದಬ್ಬಿದವು. ಕುಶಾನರು ಬ್ಯಾಕ್ಟ್ರೀಯಾವನ್ನು ಆಕ್ರಮಿಸಿದರು ಮತ್ತು ಕಾಬೂಲ್ ಕಣಿವೆಗೆ ಸಾಗಿದರು ಮತ್ತು ಗಾಂಧಾರವನ್ನು ವಶಪಡಿಸಿಕೊಂಡರು. ಸಾಶ 40ರ ಹೊತ್ತಿಗೆ ಅವರು ಶಕ, ಗ್ರೀಕ್ ಮತ್ತು ಇತರರನ್ನು ಸ್ಥಳಾಂತರಿಸಿ ಸಿಂಧೂ ಮತ್ತು ಗಂಗಾನದಿ ಬಯಲು ಪ್ರದೇಶದ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸಿದರು. ಕುಶಾನರ ಅವಧಿ ಕೇವಲ ರಾಜಕೀಯ ಐಕ್ಯತೆಯ ಶಕೆಯಾಗಿರದೇ, ಭಾರತದ ಸಾಂಸ್ಕೃತಿಕ ಬೆಳವಣಿಗೆಯ ಇತಿಹಾಸದಲ್ಲಿ ಒಂದು ಹೊಸ ಯುಗಕ್ಕೆ ನಾಂದಿ ಹಾಡಿತು.

ರಾಜಕೀಯ ಇತಿಹಾಸ:

ಕುಶಾನರ ಮೊದಲ ದೊರೆ ಕುಜುಲ ಕ್ಯಾಡ್‌ಫೈಸೆಸ್ ಅಥವಾ ಮೊದಲನೇ ಕ್ಯಾಡ್‌ಫೈಸೆಸ್. ಎರಡನೇ ಕ್ಯಾಡ್‌ಫೈಸೆಸ್ ಅಥವಾ ವೆಮಾಕ್ಯಾಡ್‌ಫೈಸೆಸ್ ಇವನ ಉತ್ತರಾಧಿಕಾರಿ. ಕಾನಿಷ್ಕ ಕುಶಾನ ವಂಶದ 3ನೇ ಅರಸ.

ಕಾನಿಷ್ಕ:

ಕಾನಿಷ್ಕನು ಕುಶಾನರ ಅತ್ಯಂತ ಶ್ರೇಷ್ಠ ದೊರೆ. ಆತನ ಪ್ರಾರಂಭಿಕ ಜೀವನದ ಬಗೆಗೆ ನಮಗೆ ನಿರ್ದಿಷ್ಟ ಮಾಹಿತಿ ಲಭ್ಯವಿಲ್ಲ. ಹಾಗೆಯೇ ಕಾನಿಷ್ಕನ ಸಿಂಹಾಸನಾರೋಹಣದ ದಿನಾಂಕದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಡಾ॥ ವಿ.ಎ. ಸ್ಮಿತ್‌ರವರು– ಕಾನಿಷ್ಕನು ಸಾಶ 120ರಲ್ಲಿ ಸಿಂಹಾಸನಕ್ಕೆ ಬಂದನೆಂದು ಅಭಿಪ್ರಾಯಪಡುತ್ತಾರೆ. ಇನ್ನೊಂದು ವಿದ್ವಾಂಸರ ಪರಂಪರೆ (ರ‍್ಯಾಪ್ಸನ್ ಮತ್ತು ಥಾಮಸ್) ಕಾನಿಷ್ಕನನ್ನು 'ಶಕಯುಗ'ದ ಸ್ಥಾಪಕನೆಂದು ಬಿಂಬಿಸುತ್ತದೆ ಮತ್ತು ಆತನ ಸಿಂಹಾಸನಾರೋಹಣವನ್ನು ಸಾಶ 78 ಎಂದು ತಿಳಿಸುತ್ತದೆ. ಪುರುಷಪುರ ಅವನ ರಾಜಧಾನಿಯಾಗಿತ್ತು(ಪಾಕಿಸ್ತಾನದ ಇಂದಿನ ಪೆಷಾವರ್).

ದಿಗ್ವಿಜಯಗಳು:

ಕಾನಿಷ್ಕನು ಒಬ್ಬ ಮಹಾನ್ ಯೋಧನಾಗಿದ್ದು ಅಧಿಕಾರಕ್ಕೆ ಬಂದ ನಂತರ ತನ್ನ ಸಾಮ್ರಾಜ್ಯದ ಎಲ್ಲೆಗಳನ್ನು ಎಲ್ಲಾ ದಿಕ್ಕುಗಳಲ್ಲಿ ತ್ವರಿತವಾಗಿ ವಿಸ್ತರಿಸಿದನು. ಆತನ ಸಾಮ್ರಾಜ್ಯವು ಬ್ಯಾಕ್ಟ್ರೀಯ, ಪರ್ಷಿಯ, ಆಫ್ಘಾನಿಸ್ಥಾನ, ಪಂಜಾಬ್ ಮತ್ತು ಸಿಂಧ್‌ನ ವಿಸ್ತಾರವಾದ ಪ್ರದೇಶವನ್ನು ಹೊಂದಿತ್ತು. ಕಾನಿಷ್ಕ ದಿಗ್ವಿಜಯಗಳ ಮೂಲಕ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು.

ಕಾಶ್ಮೀರ: ಕಾನಿಷ್ಕನು ಕಾಶ್ಮೀರವನ್ನು ಗೆದ್ದುಕೊಂಡನು. ಅಲ್ಲಿ ಅನೇಕ ಸ್ಮಾರಕಗಳನ್ನು ಕಟ್ಟಿಸಿದನು. 'ಕಾನಿಸ್‌ಪುರ' ಎಂಬ ಪಟ್ಟಣಕ್ಕೆ ಅಡಿಪಾಯ ಹಾಕಿದನು. ಇದು 'ಕಾನಿಷ್ಕಪುರ' ಎಂದೂ ಹೆಸರಾಗಿತ್ತು. ಇಂದು ಇದು ಶ್ರೀನಗರ ಎಂದು ಹೆಸರಾಗಿದೆ.

ಮಗಧ: ಕಾನಿಷ್ಕನು ಮಗಧದ ಮೇಲೆ ದಾಳಿ ಮಾಡಿ ಅದನ್ನು ಆಕ್ರಮಿಸಿಕೊಂಡನೆಂದು ಹೇಳಲಾಗಿದೆ. ಆದರೆ, ಕೆಲವು ವಿದ್ವಾಂಸರು ಮಗಧದ ಕೆಲವು ಭಾಗಗಳನ್ನು ಮಾತ್ರ ಆಕ್ರಮಿಸಿದನೆಂದು ಅಭಿಪ್ರಾಯಪಡುತ್ತಾರೆ.

ಶಕ–ಸತ್ರಪರೊಡನೆ ಯುದ್ಧ: ಉತ್ತರಭಾರತದಲ್ಲಿ ಇನ್ನೂ ಶಕ ಸತ್ರಪರು ಪ್ರಬಲರಾಗಿದ್ದರು. ಕಾನಿಷ್ಕನು ಪಂಜಾಬ್ ಮತ್ತು ಮಥುರಾಗಳ ಶಕ ಸತ್ರಪರ ಮೇಲೆ ಸರಣಿ ಯುದ್ಧಗಳನ್ನು ಮಾಡಿದನು ಮತ್ತು ಅಂತಿಮವಾಗಿ ತನ್ನ ಪ್ರಭುತ್ವ ಸ್ಥಾಪಿಸಿದನು.

ಚೀನಾದ ಮೇಲೆ ಯುದ್ಧ: ಉತ್ತರಭಾರತದ ದಂಡಯಾತ್ರೆಯ ನಂತರ ಕಾನಿಷ್ಕ ತನ್ನ ಗಮನವನ್ನು ಚೀನಾದತ್ತ ಹರಿಸಿದನು. ಎರಡನೇ ಕ್ಯಾಡ್‌ಫೈಸೆಸ್‌ನು ಚೀನಾದ ಸೇನಾನಿ ಪಾನ್–ಚೌ ನಿಂದ ತೀವ್ರ ಸೋಲು ಅನುಭವಿಸಿದ್ದನು ಮತ್ತು ಇದರ ಪರಿಣಾಮವಾಗಿ ಕುಶಾನರು ಚೀನಾದ ಅರಸನಿಗೆ ವಾರ್ಷಿಕ ಕಪ್ಪಕಾಣಿಕೆ ನೀಡಬೇಕಾಗಿತ್ತು. ಕಾನಿಷ್ಕ ಕಪ್ಪಕಾಣಿಕೆಯನ್ನು ನಿಲ್ಲಿಸಿ ಚೀನಾದ ಮೇಲೆ ದಾಳಿ ಮಾಡಿದನು. ಆದರೆ, ಚೀನಾದ ಸೇನಾನಿ ಪಾನ್–ಚೌ ಇವನನ್ನು ಸೋಲಿಸಿದನು. ಇದು ಕಾನಿಷ್ಕನ ರಾಜಕೀಯ ಮಹಾತ್ವಾಕಾಂಕ್ಷೆಗಳಿಗೆ ಕೆಲಕಾಲ ಹಿನ್ನಡೆಯನ್ನುಂಟುಮಾಡಿತು. ಆದಾಗ್ಯೂ ಸಿದ್ಧತೆ ಮಾಡಿಕೊಂಡ ನಂತರ ಕಾನಿಷ್ಕನು ಇನ್ನೊಂದು ಬಾರಿ ಚೀನಾದ ಮೇಲೆ ದಾಳಿ ಮಾಡಿದನು. ಈ ಮೊದಲೇ ಚೀನಾದ ಶ್ರೇಷ್ಠ ಸೇನಾನಿ ಪಾನ್–ಚೌ ಮರಣ ಹೊಂದಿದ್ದನು ಮತ್ತು ಆತನ ಮಗ ಪಾನ್ ಚಿಯಾಂಗ್ ಸೇನಾನಿಯಾಗಿದ್ದನು. ಕಾನಿಷ್ಕನು ಚೀನಾದ ಪಡೆಗಳ ಮೇಲೆ ವಿಜಯ ದಾಖಲಿಸಿ, ಚೀನಾದ ಮೂರು ಪ್ರಾಂತ್ಯಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಈ ಮೂರು ಪ್ರಾಂತ್ಯಗಳೆಂದರೆ– ಕಾಷ್‌ಗರ್, ಯಾರ್‌ಖಂಡ್ ಮತ್ತು ಕೋಥಾನ್. ಕಾನಿಷ್ಕ ಭಾರತೀಯ ಉಪಖಂಡದ ಹೊರಗೆ ಭೂಪ್ರದೇಶಗಳನ್ನು ಹೊಂದಿದ ಮೊದಲ ಭಾರತೀಯ ಅರಸನಾಗಿದ್ದಾನೆ.

ಕಾನಿಷ್ಕನ ಸಾಮ್ರಾಜ್ಯದ ಎಲ್ಲೆಗಳು ಉತ್ತರದಲ್ಲಿ ಕಾಷ್‌ಗರ್‌ವರೆಗೆ ಹಬ್ಬಿದ್ದರೆ, ದಕ್ಷಿಣದಲ್ಲಿ ಸಿಂಧ್, ಪೂರ್ವದಲ್ಲಿ ಬನಾರಸ್ ಹಾಗೂ ಪಶ್ಚಿಮದಲ್ಲಿ ಆಫ್ಘಾನಿಸ್ಥಾನದವರಗೆ ಹಬ್ಬಿತ್ತು.

ಧರ್ಮ: ಯೂ–ಚೀ ಪಂಗಡಕ್ಕೆ ಸೇರಿದವರಾಗಿದ್ದ ಕುಶಾನರು, ಬುಡಕಟ್ಟು ಧರ್ಮದ ಸಂಪ್ರದಾಯ ಗಳನ್ನು ಅನುಸರಿಸುತ್ತಿದ್ದರು. ಭಾರತದಲ್ಲಿ ನೆಲೆಸಿದ ನಂತರ ಅವರು ಭಾರತೀಯ ಸಂಸ್ಕೃತಿ ಮತ್ತು ಹಿಂದೂಧರ್ಮವನ್ನು ಅನುಸರಿಸಿದರು. ಅವರು ಆರಂಭದಲ್ಲಿ ಸೂರ್ಯದೇವನ ಜೊತೆಗೆ ಇತರ ದೇವರುಗಳನ್ನು ಆರಾಧಿಸುತ್ತಿದ್ದರು. ಕುಜುಲ ಮತ್ತು ವೆಮಾಕ್ಯಾಡ್‌ಪೀಸೆಸ್‌ರವರು ಹಿಂದೂಧರ್ಮದ ಅನುಯಾಯಿಗಳಾಗಿದ್ದರು.

ಕಾನಿಷ್ಕನು ಕೂಡಾ ಹಿಂದೂಧರ್ಮದ ಅನುಯಾಯಿಯಗಿದ್ದನು. ಆತನ ಆರಂಭಿಕ ನಾಣ್ಯಗಳು ಪರ್ಷಿಯನ್, ಗ್ರೀಕ್ ಮತ್ತು ಹಿಂದೂ ದೇವತೆಗಳ ಚಿತ್ರಗಳನ್ನು ಹೊಂದಿವೆ. ಕಾಲಾನಂತರದಲ್ಲಿ ಅವನು ಅಶ್ವಘೋಷನ ಪ್ರಭಾವದಿಂದ ಬೌದ್ಧಧರ್ಮವನ್ನು ಸ್ವೀಕರಿಸಿದನು. ನಂತರ ಅವನು ಅಶೋಕನ ರೀತಿಯಲ್ಲಿ ಬೌದ್ಧಧರ್ಮದ ಪ್ರಚಾರಕ್ಕಾಗಿ ಅನೇಕ ಕ್ರಮಗಳನ್ನು ಕೈಗೊಂಡನು ಮತ್ತು ಆತನ ಪ್ರಯತ್ನದಿಂದ ಬೌದ್ಧಧರ್ಮ ಚೀನಾ, ಟಿಬೆಟ್, ಜಪಾನ್ ಮತ್ತು ಮಧ್ಯ ಏಷ್ಯಾದ ರಾಷ್ಟ್ರಗಳಿಗೆ ಹರಡಿತು. ಬೌದ್ಧಧರ್ಮದ ಪ್ರಚಾರಕ್ಕಾಗಿ ಕಾನಿಷ್ಕನು ತೆಗೆದುಕೊಂಡ ಕ್ರಮಗಳೆಂದರೆ:

1. ಬೌದ್ಧಧರ್ಮಕ್ಕೆ ರಾಜಾಶ್ರಯವನ್ನು ನೀಡಲಾಯಿತು ಮತ್ತು ಇದನ್ನು ಬೌದ್ಧಭಿಕ್ಷುಗಳಿಗೆ ವಿಸ್ತರಿಸಲಾಯಿತು.
2. ವಿಹಾರಗಳು ಮತ್ತು ಮಠಗಳನ್ನು ಭಿಕ್ಷುಗಳ ಉಪಯೋಗಕ್ಕಾಗಿ ಕಟ್ಟಲಾಯಿತು.
3. ಬೌದ್ಧಧರ್ಮದ ಪ್ರಸಾರಕ್ಕಾಗಿ ಅನೇಕ ನಿಯೋಗಗಳನ್ನು ಜಪಾನ್, ಟಿಬೆಟ್ ಮತ್ತು ಮಧ್ಯಏಷ್ಯಾದ ರಾಷ್ಟ್ರಗಳಿಗೆ ಕಳುಹಿಸಲಾಯಿತು.

4. ಸಾ.ಶ. 102ರಲ್ಲಿ ಇವನು ಕಾಶ್ಮೀರದ ಕುಂಡಲವನದಲ್ಲಿ 4ನೇ ಬೌದ್ಧಮಹಾಸಮ್ಮೇಳನ ವನ್ನು ಏರ್ಪಡಿಸಿದನು. ಇದರ ಅಧ್ಯಕ್ಷತೆಯನ್ನು ವಸುಮಿತ್ರನು ವಹಿಸಿದ್ದನು. ಅಂದು ಬೌದ್ಧಧರ್ಮದಲ್ಲಿ ತಲೆದೋರಿದ ವಿವಾದಗಳನ್ನು ಪರಿಹರಿಸುವುದೇ ಇದರ ಪ್ರಮುಖ ಉದ್ದೇಶವಾಗಿತ್ತು. ಪವಿತ್ರ ಗ್ರಂಥಗಳಾದ ಪಿಟಕಗಳ ಮೇಲೆ ವಿಮರ್ಶೆಯನ್ನು ಸಿದ್ಧಪಡಿಸಲಾಯಿತು. ನಂತರ ಇವುಗಳನ್ನು 'ಮಹಾವಿಭಾಷ' ಎಂದು ಕರೆಯಲ್ಪಡುವ ಪುಸ್ತಕರೂಪಕ್ಕೆ ತರಲಾಯಿತು. ಇದು ಬೌದ್ಧತತ್ವಶಾಸ್ತ್ರದ ಪ್ರಮಾಣಬದ್ಧ ಗ್ರಂಥಗಳಲ್ಲಿ ಒಂದಾಗಿದೆ.

ಗಾಂಧಾರ ಕಲೆ.

ಕಾನಿಷ್ಕನು ಮಹಾನ್ ಕಲಾಪೋಷಕನಾಗಿದ್ದನು. ಆತನ ಪ್ರಮುಖ ಕಟ್ಟಡಗಳು ಮತ್ತು ನಿರ್ಮಾಣಗಳು ಹೆಚ್ಚಾಗಿ ಗಾಂಧಾರ, ಮಥುರಾ, ಕಾನಿಷ್ಕಪುರ ಮತ್ತು ತಕ್ಷಶಿಲಗಳಲ್ಲಿ ಕಂಡುಬಂದಿವೆ. ಕುಶಾನರ ಅವಧಿಯು ಗಾಂಧಾರ ಕಲೆಯ ಅಥವಾ ಗ್ರೀಕೋ–ಬೌದ್ಧಶೈಲಿಯ ಬೆಳವಣಿಗೆಗೆ ಪ್ರಾಮುಖ್ಯತೆ ಪಡೆದಿದೆ. ಭಾರತೀಯ ಮತ್ತು ಗ್ರೀಕ್ ಸಂಸ್ಕೃತಿಗಳ ಮಧ್ಯೆ ಮುಕ್ತ ಸಂಪರ್ಕದಿಂದಾಗಿ 'ಗಾಂಧಾರ ಕಲಾ ಪರಂಪರೆ' (Gandhara School of Art) ಎಂಬ ಹೊಸ ಕಲಾ ಪರಂಪರೆಯು ಉಗಮಿಸಿತು. ಇದು ಭಾರತ ಮತ್ತು ಗ್ರೀಕ್ ಕಲಾಶೈಲಿಗಳ ಸಮ್ಮಿಶ್ರಣವನ್ನು ಪ್ರತಿನಿಧಿಸುತ್ತದೆ. ಈ ಕಲಾಶೈಲಿಯು ಗಾಂಧಾರ ಪ್ರದೇಶದಲ್ಲಿ ಉಗಮಿಸಿದ್ದರಿಂದ ಇದನ್ನು 'ಗಾಂಧಾರ ಕಲೆ' ಎಂದು ಕರೆಯಲಾಗಿದೆ. ಈ ಪ್ರದೇಶವು ಪ್ರಸ್ತುತ ಆಫ್ಘಾನಿಸ್ಥಾನದಲ್ಲಿದೆ.

ಗಾಂಧಾರ ಕಲಾಶೈಲಿಯ ಪ್ರಮುಖ ಲಕ್ಷಣಗಳು:

1. ಈ ಕಲಾಶೈಲಿಯಲ್ಲಿ ಆಳೆತ್ತರದ ಗೌತಮ ಬುದ್ಧನ ವಿಗ್ರಹಗಳನ್ನು ಕೆತ್ತಲಾಗಿದೆ. ಅಲ್ಲಿಯವರೆಗೆ ಬುದ್ಧನ ಅಸ್ತಿತ್ವವನ್ನು ಕಮಲ, ಛತ್ರಿ ಮುಂತಾದ ಚಿಹ್ನೆಗಳ ರೂಪದಲ್ಲಿ ತೋರಿಸಲಾಗುತ್ತಿತ್ತು.
2. ವಿಗ್ರಹಗಳನ್ನು ಕೆತ್ತುವಾಗ ದೇಹ ವಿನ್ಯಾಸದ ಅನುಪಾತದೊಂದಿಗೆ ಸ್ನಾಯುಗಳು, ಮೀಸೆ ಮುಂತಾದವುಗಳಿಗೆ ಹೆಚ್ಚಿನ ಗಮನ ಹರಿಸಿ ಸ್ವಾಭಾವಿಕ ಜೋಡಣೆಯೊಂದಿಗೆ ಮೂಡಿಸಲಾಗಿದೆ.
3. ಕಲಾಕೌಶಲ್ಯದಿಂದ ಕೂಡಿದ ಈ ಕಲೆಯ ನಮೂನೆಗಳಲ್ಲಿ ಬಟ್ಟೆಯ ಮಡಿಕೆಗಳು ಮತ್ತು ನೆರಿಗೆಗಳನ್ನು ತುಂಬಾ ಸೂಕ್ಷ್ಮವಾಗಿ ಮತ್ತು ಕಲಾತ್ಮಕವಾಗಿ ಪ್ರದರ್ಶಿಸಲಾಗಿದೆ.
4. ವಿಗ್ರಹಗಳ ಮೇಲಿರುವ ಆಭರಣಗಳ ಮೇಲಿನ ಕೆತ್ತನೆಗೆ ಹೆಚ್ಚಿನ ಆಸಕ್ತಿ ತೋರಿಸಲಾಗಿದ್ದು, ಅವುಗಳ ಭೌತಿಕ ಸೌಂದರ್ಯವನ್ನು ವೃದ್ಧಿಸಿದೆ.
5. ವಿಗ್ರಹಗಳಿಗೆ ಮೆರುಗು ನೀಡುವುದು (Polish) ಈ ಕಲೆಯ ಪ್ರಮುಖ ಲಕ್ಷಣವಾಗಿದೆ.
6. ಬಹುತೇಕ ಈ ನಮೂನೆಗಳನ್ನು ಕಲ್ಲು, ಅರಲುಗಚ್ಚು (Terracotta) ಮತ್ತು ಜೇಡಿಮಣ್ಣಿನಿಂದ ತಯಾರಿಸಲಾಗಿದೆ.
7. ಈ ವಿಗ್ರಹಗಳಲ್ಲಿ ಬಳಸಲಾಗಿರುವ ತಾಂತ್ರಿಕತೆ ಗ್ರೀಕ್ ಶೈಲಿಯದ್ದಾದರೆ, ಅದರ ಆದರ್ಶ, ಸ್ಫೂರ್ತಿ ಮತ್ತು ವ್ಯಕ್ತಿತ್ವ ಎಲ್ಲವೂ ಭಾರತೀಯವಾದುದಾಗಿದೆ.

ಡಾ. ಆರ್.ಸಿ. ಮಜುಮ್‌ದಾರ್ ಹೇಳುವಂತೆ – "ಗಾಂಧಾರ ಕಲಾಕಾರನು ಗ್ರೀಕ್ ಕರಕುಶಲತೆ ಹಾಗೂ ಭಾರತೀಯ ಹೃದಯವನ್ನು ಹೊಂದಿದ್ದನು". ಈ ಕಾರಣದಿಂದ ಈ ಕಲೆಯಲ್ಲಿ ನಿರ್ಮಿತವಾದ ವಿಗ್ರಹಗಳು ಮತ್ತು ಪ್ರತಿಮೆಗಳಲ್ಲಿ ಬುದ್ಧನನ್ನು ಗ್ರೀಕ್ ದೇವತೆ ಅಪೊಲೊನನ್ನು ಹೋಲುವಂತೆ ಕೆತ್ತುವ ಪ್ರಯತ್ನ ಮಾಡಲಾಗಿದೆ.

ಚಟುವಟಿಕೆ

ಮಥುರಾ, ಗ್ರೀಕ್ ಮತ್ತು ರೋಮನ್ ಕಲಾ ಶೈಲಿಗಳನ್ನು ಗಾಂಧಾರ ಕಲೆಯೊಂದಿಗೆ ಹೋಲಿಕೆ ಮಾಡಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಕುಶಾನರ ಮೂಲ ಸ್ಥಳ ಯಾವುದು?
2. ಕುಶಾನರ ಮೊದಲ ಅರಸ ಯಾರು?
3. ಕುಶಾನರ ಪ್ರಸಿದ್ಧ ದೊರೆ ಯಾರು?
4. ಕಾನಿಷ್ಕನನ್ನು ಸೋಲಿಸಿದ ಚೀನೀ ಸೇನಾನಿಯನ್ನು ಹೆಸರಿಸಿ
5. ಕಾನಿಷ್ಕನ ರಾಜಧಾನಿ ಯಾವುದು?
6. ಕಾನಿಷ್ಕನು ಬೌದ್ಧಧರ್ಮ ಸ್ವೀಕರಿಸಲು ಪ್ರಭಾವ ಬೀರಿದವರು ಯಾರು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ನಾಲ್ಕನೇ ಬೌದ್ಧಮಹಾಸಮ್ಮೇಳನವನ್ನು ಏಕೆ ನಡೆಸಲಾಯಿತು? ಯಾವಾಗ?
2. ಬೌದ್ಧ ಧರ್ಮದ ಪ್ರಸಾರಕ್ಕಾಗಿ ಕಾನಿಷ್ಕನ ಯಾವುದಾದರು ಎರಡು ಕ್ರಮಗಳನ್ನು ಬರೆಯಿರಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಕಾನಿಷ್ಕನ ಸಾಧನೆಗಳನ್ನು ವಿವರಿಸಿ.
2. ಗಾಂಧಾರ ಕಲಾಶೈಲಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.

* * * *

ಅಧ್ಯಾಯ – 4.5

ಗುಪ್ತರು (ಸಾಶ 300–600)

ಮೌರ್ಯರ ಪತನಾನಂತರ ಉತ್ತರಭಾರತದಲ್ಲಿ ಸುಮಾರು ಒಂದು ಶತಮಾನದವರೆಗೆ ಯಾವುದೇ ಬಲಿಷ್ಠ ರಾಜಕೀಯ ಶಕ್ತಿ ಇರಲಿಲ್ಲ. ಸಂಪೂರ್ಣ ಉತ್ತರಭಾರತ ಸಣ್ಣಪುಟ್ಟ ಸಂಸ್ಥಾನಗಳಾಗಿ ವಿಭಾಗಿಸ್ಪಟ್ಟಿತು. ವಾಕಟಕ, ನಾಗಾ, ಮೌಖರಿ ಮತ್ತು ಗುಪ್ತರಂತಹ ಕೆಲವು ರಾಜಪ್ರಭುತ್ವಗಳಿದ್ದವು. ಲಿಚ್ಛವಿಗಳು, ಯೌಧೇಯರು ಮಾಳ್ವರು, ಮುಂತಾದ ಕೆಲವು ಗಣರಾಜ್ಯಗಳೂ ಇದ್ದವು. ಸಾಶ 300ರಲ್ಲಿ ಗುಪ್ತರು ಒಂದು ಪ್ರಬಲ ಸಾಮ್ರಾಜ್ಯವಾಗಿ ಹೊರಹೊಮ್ಮುವವರೆಗೆ ಅವುಗಳು ತಮ್ಮ ತಮ್ಮಲ್ಲಿಯೇ ಕಚ್ಚಾಟದಲ್ಲಿ ತೊಡಗಿದ್ದವು. ಗುಪ್ತರು ಶಕ್ತಿಶಾಲಿಯಾದ ಅರಸರಾಗಿದ್ದರು. ಅವರು ಭಾರತದ ವಿಸ್ತಾರವಾದ ಪ್ರದೇಶದಲ್ಲಿ ಆಳ್ವಿಕೆ ನಡೆಸಿ, ಮೌರ್ಯರ ಪತನಾನಂತರ ಎರಡನೇ ಬಾರಿಗೆ ರಾಜಕೀಯ ಐಕ್ಯತೆ ಸಾಧಿಸಿದರು. ಧರ್ಮ, ಸಾಹಿತ್ಯ, ವಿಜ್ಞಾನ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿಯಾಯಿತು. ಭಾರತದ ಇತಿಹಾಸದಲ್ಲಿ ಗುಪ್ತರ ಯುಗವನ್ನು 'ಸುವರ್ಣಯುಗ'ವೆಂದು ಕರೆಯಲಾಗಿದೆ.

ಮೂಲಾಧಾರಗಳು:

ಗುಪ್ತರ ಇತಿಹಾಸವನ್ನು ಅಭ್ಯಸಿಸಲು ಸಹಾಯಕವಾಗುವ ಕೆಲವು ಪ್ರಮುಖ ಮೂಲಾಧಾರಗಳೆಂದರೆ,

1. ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನ.
2. ಕಾಳಿದಾಸನ ಕೃತಿಗಳು.
3. ವಿಶಾಖದತ್ತನ ಮುದ್ರಾರಾಕ್ಷಸ ಮತ್ತು ದೇವಿಚಂದ್ರಗುಪ್ತಂ
4. ರಾಜಶೇಖರನ ಕಾವ್ಯಮೀಮಾಂಸೆ.
5. ಫಾಹಿಯಾನ್ ಮತ್ತು ಇತ್ಸಿಂಗರ ಬರವಣಿಗೆಗಳು.


ರಾಜಕೀಯ ಇತಿಹಾಸ.

ಶ್ರೀಗುಪ್ತನು ಈ ವಂಶದ ಸ್ಥಾಪಕ. ಈತನ ಮಗನೇ ಘಟೋತ್ಕಚ ಗುಪ್ತ. ಸಾ.ಶ 320ರಲ್ಲಿ ಮೊದಲನೇ ಚಂದ್ರಗುಪ್ತನ ಸಿಂಹಾಸನಾರೋಹಣದೊಂದಿಗೆ 'ಗುಪ್ತಶಕೆ' ಆರಂಭವಾಯಿತು. ಇವನು ಸಾಶ 320ರಿಂದ 335ರವರೆಗೆ ಆಳ್ವಿಕೆ ನಡೆಸಿದನು. ಇವನು ಗುಪ್ತ ಸಂತತಿಯ ಮೊದಲ ಪ್ರಮುಖ ದೊರೆ. ಪಾಟಲೀಪುತ್ರವು ಅವನ ರಾಜಧಾನಿಯಾಗಿತ್ತು. ಲಿಚ್ಛವಿ ಕುಲಕ್ಕೆ ಸೇರಿದ ಕುಮಾರದೇವಿಯನ್ನು ಮದುವೆಯಾಗಿ ತನ್ನ ಸ್ಥಾನವನ್ನು ಬಲಪಡಿಸಿಕೊಂಡನು. ಈತನ ನಂತರ ಇವನ ಮಗ ಸಮುದ್ರಗುಪ್ತ ಅಧಿಕಾರಕ್ಕೆ ಬಂದನು.

ಸಮುದ್ರಗುಪ್ತ–ಸಾಶ 335 ರಿಂದ 375.

ಸಮುದ್ರಗುಪ್ತನು ಗುಪ್ತ ಸಂತತಿಯ ಶ್ರೇಷ್ಠ ದೊರೆ. ಇವನು 40 ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಇವನು ಒಬ್ಬ ಮಹಾತ್ವಾಕಾಂಕ್ಷಿ ಅರಸನಾಗಿದ್ದು ಚಕ್ರವರ್ತಿಯಾಗಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದನು.

ದಿಗ್ವಿಜಯಗಳು: ಸಮುದ್ರಗುಪ್ತನು ತನ್ನ ಸೈನಿಕ ದಿಗ್ವಿಜಯಗಳಿಗೆ ಹೆಸರಾಗಿದ್ದಾನೆ. ಅವನು ವಿಸ್ತಾರವಾದ ಸಾಮ್ರಾಜ್ಯ ಸ್ಥಾಪಿಸಲು ಅನೇಕ ಯುದ್ಧಗಳನ್ನು ಕೈಗೊಳ್ಳಬೇಕಾಯಿತು. ಆದ್ದರಿಂದ ಅವನು ವಿಸ್ತರಣಾ ಮತ್ತು ಆಕ್ರಮಣಕಾರಿ ನೀತಿಯನ್ನು ಅನುಸರಿಸಿದನು.


ಸಮುದ್ರಗುಪ್ತನ ಕಾಲದ
ಗುಪ್ತ ಸಾಮ್ರಾಜ್ಯ
ಗಾಂಧಾರ
ಶ್ರೀನಗರ
ಕಾಮರೂಪ
ಪಾಟಲಿಪುತ್ರ
ಅಲಹಾಬಾದ್
ಸಮತಟ
ಉಜ್ಜಯಿನಿ
ವಾಕಟಕ
ವೆಂಗಿ
ದೇವರಾಷ್ಟ್ರ
ಬಂಗಾಳ ಕೊಲ್ಲಿ
ಅರಬ್ಬಿ
ಸಮುದ್ರ
ಕಂಚಿ
ಪಾಲಕ್ಕಾಡ್
ಶ್ರೀಲಂಕಾ
ಸಾಮ್ರಾಜ್ಯ ವಿಸ್ತಾರ
ಸಮುದ್ರಗುಪ್ತನ ದಕ್ಷಿಣದ
ದಿಗ್ವಿಜಯಗಳ ಮಾರ್ಗ
ಹಿಂದೂ ಮಹಾಸಾಗರ
ಉ
ಪ
ಪೂ
ದ

ಅಲಹಬಾದ್ ಸ್ತಂಭಶಾಸನವು ಸಮುದ್ರಗುಪ್ತನ ದಿಗ್ವಿಜಯ ಮತ್ತು ಗುಣಗಳನ್ನು ಕುರಿತು ನಂಬಲರ್ಹ ಮಾಹಿತಿಯನ್ನು ನೀಡುತ್ತದೆ. ಸಮುದ್ರಗುಪ್ತನ ದಂಡನಾಯಕ ಮತ್ತು ಆಸ್ಥಾನ ಕವಿ ಹರಿಸೇನನು ಈ ಶಾಸನದ ರಚನಾಕಾರ. ಸಮುದ್ರಗುಪ್ತನ ದಿಗ್ವಿಜಯಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

1. ಉತ್ತರಭಾರತದ ದಂಡಯಾತ್ರೆ.
2. ಅರಣ್ಯರಾಜ್ಯಗಳ ಆಕ್ರಮಣ.
3. ದಕ್ಷಿಣಭಾರತದ ದಂಡಯಾತ್ರೆ.
4. ಗಡಿರಾಜ್ಯಗಳ ಆಕ್ರಮಣ.

1. ಉತ್ತರ ಭಾರತದ ದಂಡಯಾತ್ರೆ.

ಆತನು ಅಧಿಕಾರದ ಆರಂಭದ ವರ್ಷಗಳನ್ನು 'ಆರ್ಯಾವರ್ತ' ಎಂದು ಕರೆಯಲ್ಪಡುತ್ತಿದ್ದ ಗಂಗಾನದಿ ಬಯಲಿನ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ವಿನಿಯೋಗಿಸಿದನು. ಅಲಹಾಬಾದ್ ಸ್ತಂಭಶಾಸನದ ಪ್ರಕಾರ ಆತನು ತನ್ನ ಉತ್ತರದ ದಿಗ್ವಿಜಯಗಳಲ್ಲಿ 9 ಜನ ಅರಸರನ್ನು ಸೋಲಿಸಿದನು ಮತ್ತು ಅವುಗಳನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದನು. ಅವನು ಇದನ್ನು 'ದಿಗ್ವಿಜಯ' ಎಂದು ಕರೆದನು. ಸಮುದ್ರಗುಪ್ತನಿಂದ ಸೋಲಿಸಲ್ಪಟ್ಟ ಆರ್ಯಾವರ್ತದ ಒಂಬತ್ತು ಜನ ಅರಸರೆಂದರೆ– ನಂದಿನ್, ಬಾಲವರ್ಮ, ಚಂದ್ರವರ್ಮನ್, ನಾಗದತ್ತ, ನಾಗಸೇನ, ಗಣಪತಿನಾಗ, ಅಚ್ಯುತ, ಮಾತಿಲ ಮತ್ತು ರುದ್ರದೇವ.

2. ಅರಣ್ಯರಾಜ್ಯಗಳ ಆಕ್ರಮಣ: ವಿಂಧ್ಯಪರ್ವತ (ಮಧ್ಯಭಾರತ)ದ ಅರಣ್ಯರಾಜ್ಯಗಳಾದ ಜಬ್ಬಲ್‌ಪುರ, ರೇವಾ, ನಾಗಪುರ ಮತ್ತು ಬಾಘೇಲ್‌ಖಂಡಗಳನ್ನು ಸಮುದ್ರಗುಪ್ತನು ಆಕ್ರಮಿಸಿಕೊಂಡನು.

3.ದಕ್ಷಿಣಭಾರತದ ದಂಡಯಾತ್ರೆ: ಉತ್ತರದ ರಾಜ್ಯಗಳ ಮೇಲೆ ತನ್ನ ಪ್ರಭುತ್ವವನ್ನು ಸಂಪೂರ್ಣವಾಗಿ ಸ್ಥಾಪಿಸಿ ತನ್ನ ಗಮನವನ್ನು ದಕ್ಷಿಣದ ಕಡೆಗೆ ಹರಿಸಿ ದಂಡಯಾತ್ರೆಯನ್ನು ಆರಂಭಿಸಿದನು. ಅವನ ಸೈನ್ಯ ಸುಮಾರು 3,000 ಮೈಲಿಗಳನ್ನು ಕ್ರಮಿಸಿತು. ಸಮುದ್ರಗುಪ್ತನು ದಕ್ಷಿಣಭಾರತದ 12 ರಾಜರನ್ನು ಸೋಲಿಸಿದನು. ಆದರೆ, ಆ ರಾಜರುಗಳನ್ನು ಅವರ ಸ್ಥಾನದಲ್ಲಿಯೇ ಪುನರ್‌ನೇಮಿಸಿದನು. ಈ ಅರಸರು ಅವನ ಸಾಮಂತರಾದರು ಹಾಗೂ ಕಪ್ಪಕಾಣಿಕೆ ಕೊಡಲೊಪ್ಪಿದರು. ಇದನ್ನು ಅವನು 'ಧರ್ಮವಿಜಯ' ಎಂದು ಕರೆದನು.

ಸಮುದ್ರಗುಪ್ತನಿಂದ ಸೋಲಿಸಲ್ಪಟ್ಟ ದಕ್ಷಿಣಭಾರತದ 12 ರಾಜರುಗಳು

1. ಕೋಸಲದ ಮಹೇಂದ್ರ	2. ಮಹಾಕಾಂತರದ ವ್ಯಾಘ್ರರಾಜ
3. ಕೌರಾಲದ ಮಂಟರಾಜ	4. ಪಿಸ್ತಪುರದ ಮಹೇಂದ್ರ
5. ಕೊಟ್ಟೂರದ ಸ್ವಾಮಿದತ್ತ	6. ಯರಾಂಡಪಲ್ಲಿಯ ದಮನ
7. ಕಂಚಿಯ ವಿಷ್ಣುಗೋಪ	8. ವೆಂಗಿಯ ಹಸ್ತಿವರ್ಮನ್
9. ಅವಮುಕ್ತದ ನೀಲರಾಜ	10. ಫಲಕ್ಕಾಡದ ಉಗ್ರಸೇನ
11. ದೇವರಾಷ್ಟ್ರದ ಕುಬೇರ	12. ಕುಸ್ತಲಾಪುರದ ಧನಂಜಯ

4. ಗಡಿರಾಜ್ಯಗಳ ಮೇಲಿನ ಆಕ್ರಮಣ:

ಸಮುದ್ರಗುಪ್ತನಿಂದ ಆಕ್ರಮಿಸಲ್ಪಟ್ಟ ಗಡಿರಾಜ್ಯಗಳೆಂದರೆ – ಅಸ್ಸಾಮಿನ ಕಾಮರೂಪ, ಬಂಗಾಳದ ಸಮತಟ, ಪಂಜಾಬಿನ ಕರ್ತ್ರಿಪುರ ಮತ್ತು ರೋಹಿಲ್‌ಖಂಡ.

ಈ ದಿಗ್ವಿಜಯಗಳ ನಂತರ ಸಮುದ್ರಗುಪ್ತನು ತನ್ನ ವಿಜಯದ ಸ್ಮರಣಾರ್ಥ 'ಅಶ್ವಮೇಧಯಾಗ'ವನ್ನು ಆಚರಿಸಿದನು. ಆತನು 'ಅಶ್ವಮೇಧಪರಾಕ್ರಮ' ಎಂಬ ಬಿರುದನ್ನು ಧರಿಸಿದನು. ಕುದುರೆಗಳ ಚಿತ್ರಗಳುಳ್ಳ ಬಂಗಾರದ ನಾಣ್ಯಗಳನ್ನು ಹೊರಡಿಸಿದನು. ಆತನು ಹೊರಡಿಸಿದ ಎಂಟು ಪ್ರಕಾರದ ಚಿನ್ನದ ನಾಣ್ಯಗಳಲ್ಲಿ ಇದು ಒಂದಾಗಿದೆ.



ಸಮುದ್ರಗುಪ್ತನ ನಾಣ್ಯಗಳು

ಆತನ ಸಾಮ್ರಾಜ್ಯವು ಉತ್ತರದಲ್ಲಿ ಕಾಶ್ಮೀರದಿಂದ, ದಕ್ಷಿಣದಲ್ಲಿ ತಮಿಳುನಾಡಿನವರೆಗೆ, ಪೂರ್ವದಲ್ಲಿ ಬಂಗಾಳದಿಂದ ಪಶ್ಚಿಮದಲ್ಲಿ ಪಂಜಾಬಿನವರೆಗೆ ಹಬ್ಬಿತ್ತು. ಸಮುದ್ರಗುಪ್ತನು ಕೇವಲ ದಿಗ್ವಿಜಯಿ ಮಾತ್ರವಾಗಿರದೇ, ಅವನೊಬ್ಬ ಸಂಗೀತಗಾರ, ಕವಿ, ವಿದ್ವಾಂಸ ಮತ್ತು ಸಾಹಿತ್ಯಪೋಷಕನಾಗಿದ್ದನು. ಅವನು 'ಕವಿರಾಜ' ಎಂಬ ಬಿರುದು ಹೊಂದಿದ್ದನು. ಹರಿಸೇನನನು ಒಬ್ಬ ಶ್ರೇಷ್ಠ ವಿದ್ವಾಂಸ ಹಾಗೂ ಅವನ ಆಸ್ಥಾನಕವಿಯಾಗಿದ್ದನು.

ಎರಡನೇ ಚಂದ್ರಗುಪ್ತ–ಸಾಶ 375–415.

ಸಮುದ್ರಗುಪ್ತನ ಮರಣಾನಂತರ ಎರಡನೇ ಚಂದ್ರಗುಪ್ತನು ಸಿಂಹಾಸನವನ್ನೇರಿದನು. ಶಕದೊರೆ ರುದ್ರಸೇನನನ್ನು ಸೋಲಿಸಿ ಆತನ ಸಾಮ್ರಾಜ್ಯವನ್ನು ವಶಪಡಿಸಿಕೊಂಡದ್ದು ಎರಡನೇ ಚಂದ್ರಗುಪ್ತನ ಗಮನಾರ್ಹವಾದ ಸಾಧನೆಯಾಗಿದೆ. ನಾಗಾ ಮತ್ತು ವಾಕಟಕರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುವುದರ ಮುಖಾಂತರ ತನ್ನ ಸಾಮ್ರಾಜ್ಯದ ಶಕ್ತಿಯನ್ನು ಹೆಚ್ಚಿಸಿಕೊಂಡನು. ಇವನು 'ವಿಕ್ರಮಾದಿತ್ಯ'ಎಂದೂ ಹೆಸರಾಗಿದ್ದನು. ಇವನು ವಿದ್ವಾಂಸರು ಮತ್ತು ಕವಿಗಳ ಮಹಾಪೋಷಕನಾಗಿದ್ದನು. ಒಂಬತ್ತು ಪ್ರಸಿದ್ಧ ವಿದ್ವಾಂಸರು (ನವರತ್ನಗಳು) ಇವನ ಆಸ್ಥಾನವನ್ನು ಅಲಂಕರಿಸಿದ್ದರು. ಇವನ ಅಧಿಕಾರಾವಧಿಯಲ್ಲಿ ಉಜ್ಜಯಿನಿ ಎರಡನೇ ರಾಜಧಾನಿಯಾಯಿತು.

ಫಾಹಿಯಾನನ ಭೇಟಿ–ಸಾಶ 399–414.

ಫಾಹಿಯಾನನು ಒಬ್ಬ ಚೀನೀ ಯಾತ್ರಿಕ. ಎರಡನೇ ಚಂದ್ರಗುಪ್ತನ ಆಳ್ವಿಕೆಯಲ್ಲಿ ಅವನು ಭಾರತಕ್ಕೆ ಭೇಟಿ ನೀಡಿದ್ದನು. ಬೌದ್ಧಧರ್ಮಕ್ಕೆ ಜನ್ಮ ನೀಡಿದ ಭಾರತದಲ್ಲಿ ಬೌದ್ಧಧರ್ಮದ ತತ್ವಗಳನ್ನು ಅಧ್ಯಯನ ಮಾಡುವ ಸಲುವಾಗಿ ಅವನು ಭಾರತಕ್ಕೆ ಬಂದಿದ್ದನು. ಇವನು ತನ್ನ ಅನುಭವಗಳನ್ನು 'ಫೋ–ಕೋ–ಕಿ' ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾನೆ. ಈ ಪುಸ್ತಕವು ಅಂದಿನ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳ ಮೇಲೆ ಬೆಳಕು ಚೆಲ್ಲುತ್ತದೆ.

ಸುವರ್ಣಯುಗ

ಭಾರತೀಯ ಇತಿಹಾಸದಲ್ಲಿ ಗುಪ್ತರ ಕಾಲವು ವಿಶಿಷ್ಠ ಸ್ಥಾನವನ್ನು ಪಡೆದಿದೆ. ಈ ಯುಗದ ಸರ್ವಾಂಗೀಣ ಬೆಳವಣಿಗೆಯಿಂದಾಗಿ ಯೂರೋಪಿನ ಬರಹಗಾರರು ಈ ಕಾಲವನ್ನು ಗ್ರೀಸ್‌ನ ಪೆರಿಕ್ಲಸ್, ರೋಮ್‌ನ ಅಗಸ್ಟಸ್

ಸೀಜರ್ ಹಾಗೂ ಇಂಗ್ಲೆಂಡಿನ ರಾಣಿ ಎಲಿಜಬೆತ್‌ಳ ಕಾಲಕ್ಕೆ ಹೋಲಿಸಿದ್ದಾರೆ. ಧರ್ಮ, ಶಿಕ್ಷಣ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅವರ ಸಾಧನೆ ಅಸಾಮಾನ್ಯವಾಗಿವೆ.

ಹಿಂದೂಧರ್ಮದ ಪುನರುತ್ಥಾನ:

ಹಿಂದೂಧರ್ಮದ ಪುನರುತ್ಥಾನ ಗುಪ್ತಯುಗದ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ. ಗುಪ್ತ ಸಾಮ್ರಾಟರು ಹಿಂದೂಧರ್ಮದ ಅನುಯಾಯಿಗಳಾಗಿದ್ದರು. ಆದಾಗ್ಯೂ ಬೇರೆ ಧರ್ಮಗಳಾದ ಜೈನಧರ್ಮ ಮತ್ತು ಬೌದ್ಧಧರ್ಮಗಳ ಬಗೆಗೆ ಸಹಿಷ್ಣುಗಳಾಗಿದ್ದರು.

ಹಿಂದೂಧರ್ಮವು ತುಂಬಾ ಪ್ರೋತ್ಸಾಹ ಪಡೆಯಿತು. ಇದು ಗುಪ್ತರ ರಾಜಧರ್ಮವಾಯಿತು. ವಿಷ್ಣು, ಶಿವ ಮತ್ತು ದುರ್ಗಾ ಆರಾಧನೆ ತುಂಬಾ ಜನಪ್ರಿಯವಾಯಿತು. ಗುಪ್ತ ಅರಸರು ವೈದಿಕ ವಿಧಿವಿಧಾನ ಮತ್ತು ಸಂಪ್ರದಾಯಗಳನ್ನು ಆಚರಿಸಿದರು. ವೈದಿಕ ವಿಧಿಗಳಾದ ಅಶ್ವಮೇಧ, ವಾಜಪೇಯ ಮತ್ತು ರಾಜಸೂಯ ಯಾಗಗಳನ್ನು ತುಂಬಾ ಭವ್ಯವಾಗಿ ಆಚರಿಸಲಾಗುತ್ತಿತ್ತು. ಗುಪ್ತರ ಅವಧಿಯಲ್ಲಿ ಅನೇಕ ವಿಷ್ಣುದೇವಾಲಯಗಳನ್ನು ನಿರ್ಮಿಸಲಾಯಿತು. ಅವರು 'ಪರಮಭಾಗವತ' ಎಂಬ ಬಿರುದನ್ನು ಹೊಂದಿದ್ದು ಇದು ವಿಷ್ಣುವಿನ ಮೇಲಿನ ಅವರ ಭಕ್ತಿಯನ್ನು ಸೂಚಿಸುತ್ತದೆ. ಶೈವ ಮತ್ತು ಶಾಕ್ತ ಪಂಥಗಳೂ ಸಹ ಜನಪ್ರಿಯವಾಗಿದ್ದವು.

ಶಿಕ್ಷಣ.

ಗುಪ್ತರ ಅವಧಿಯಲ್ಲಿ ಶಿಕ್ಷಣ ತುಂಬಾ ಪ್ರವರ್ಧಿಸಿತು. ರಾಜರು ಸ್ವತ: ವಿದ್ವಾಂಸರು ಮತ್ತು ಶಿಕ್ಷಣ ತಜ್ಞರಾಗಿದ್ದರು. ಅವರು ಶಿಕ್ಷಣಕ್ಕೆ ವಿಶೇಷ ಗಮನ ನೀಡಿದರು. ಗುಪ್ತರ ಕಾಲದಲ್ಲಿ ಅನೇಕ ವಿಶ್ವವಿದ್ಯಾನಿಲಯಗಳಿದ್ದವು. ವಿಶ್ವವಿದ್ಯಾನಿಲಯಗಳು ಭಾರತೀಯ ವಿದ್ಯಾರ್ಥಿಗಳನ್ನು ಮಾತ್ರವಲ್ಲದೇ ವಿದೇಶೀ ವಿದ್ಯಾರ್ಥಿಗಳನ್ನು ಆಕರ್ಷಿಸಿದವು. ತಕ್ಷಶಿಲ, ನಳಂದ, ಅಜಂತ ಮತ್ತು ಸಾರನಾಥಗಳು ಗುಪ್ತರ ಹೆಸರಾಂತ ವಿಶ್ವವಿದ್ಯಾನಿಲಯಗಳಾಗಿದ್ದವು. ಪಾಟಲೀಪುತ್ರ ಮತ್ತು ವಲ್ಲಭಿ ಪ್ರಸಿದ್ಧ ಶಿಕ್ಷಣ ಕೇಂದ್ರಗಳಾಗಿದ್ದವು. ಮುಖ್ಯ ವಿಷಯಗಳಾದ ಪುರಾಣಗಳು, ಸಾಹಿತ್ಯ, ತತ್ವಶಾಸ್ತ್ರ, ಅಂಕಗಣಿತ, ಜ್ಯೋತಿಷ್ಯಶಾಸ್ತ್ರ ಮತ್ತು ವಿಜ್ಞಾನ ಪ್ರಮುಖವಾಗಿ ಬೋಧಿಸಲ್ಪಡುತ್ತಿದ್ದವು.

ಸಾಹಿತ್ಯ.

ಶ್ಲೋಕರೂಪದಲ್ಲಿದ್ದ ವೇದಗಳನ್ನೊಳಗೊಂಡಂತೆ ಧಾರ್ಮಿಕ ಸಾಹಿತ್ಯವನ್ನು ಗುಪ್ತರ ಅವಧಿಯಲ್ಲಿ ಬರವಣಿಗೆಯ ರೂಪಕ್ಕೆ ತರಲಾಯಿತು. ಗುಪ್ತರ ಯುಗವನ್ನು 'ಸಂಸ್ಕೃತ ಸಾಹಿತ್ಯದ ಸುವರ್ಣಯುಗ' ಎಂದು ಕರೆಯಲಾಗಿದೆ. ಸಮುದ್ರಗುಪ್ತನು ಕವಿಗಳಲ್ಲಿ ರಾಜನೆಂದು ಅಲಹಾಬಾದ್ ಶಾಸನದಲ್ಲಿ ವಿವರಿಸಲಾಗಿದೆ. ಅವನೊಬ್ಬ ಶ್ರೇಷ್ಠ ಸಂಗೀತಗಾರ ಮತ್ತು ಪ್ರಸಿದ್ಧ ವೇದವಿದ್ವಾಂಸನಾಗಿದ್ದನು. ಎರಡನೇ ಚಂದ್ರಗುಪ್ತನ ಆಸ್ಥಾನದಲ್ಲಿ 'ನವರತ್ನ'ರಿದ್ದರು. ಇವರಲ್ಲಿ ಕಾಳಿದಾಸನು ಪ್ರಾಚೀನ ಭಾರತದ ಶ್ರೇಷ್ಠಕವಿ ಹಾಗೂ ನಾಟಕಕಾರನಾಗಿದ್ದನು. ಅವನು ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶಿಯ ಮತ್ತು ಶಾಕುಂತಲ ಎಂಬ ಪ್ರಸಿದ್ಧ ನಾಟಕಗಳನ್ನು, ರಘುವಂಶ ಮತ್ತು ಕುಮಾರಸಂಭವ ಎಂಬ ಮಹಾಕಾವ್ಯಗಳನ್ನು ಹಾಗೂ ಮೇಘದೂತ ಮತ್ತು ಋತುಸಂಹಾರ ಎಂಬ ಗೀತಾಕಾವ್ಯಗಳನ್ನು ಬರೆದಿದ್ದಾನೆ.

ನವರತ್ನರ ಹೆಸರುಗಳು ಮತ್ತು ಪುಸ್ತಕಗಳು

1.	ಕಾಳಿದಾಸ	–	ಶಾಕುಂತಲ
2.	ವರಹಮಿಹಿರ	–	ಬೃಹತ್‌ಸಂಹಿತೆ
3.	ಘಟಕರ್ಪರ	–	ಘಟಕರ್ಪರಕಾವ್ಯ
4.	ವರರುಚಿ	–	ವ್ಯಾಕರಣ
5.	ಅಮರಸಿಂಹ	–	ಅಮರಕೋಶ
6.	ಧನ್ವಂತ್ರಿ	–	ಆಯುರ್ವೇದ ನಿಘಂಟು
7.	ಶಂಕು	–	ಶಿಲ್ಪಶಾಸ್ತ್ರ
8.	ಕ್ಷಪಣಕ	–	ಜ್ಯೋತಿಷ್ಯಶಾಸ್ತ್ರ
9.	ವೇತಾಲಭಟ್ಟ	–	ಮಂತ್ರಶಾಸ್ತ್ರ

ಗುಪ್ತರ ಕಾಲದ ಪ್ರಮುಖ ಕವಿಗಳು ಮತ್ತು ಅವರ ಕೃತಿಗಳು

1.	ಶೂದ್ರಕ	–	ಮೃಚ್ಛಕಟಿಕ
2.	ಭಾರವಿ	–	ಕಿರಾತಾರ್ಜುನೀಯಂ
3.	ದಂಡಿ	–	ಕಾವ್ಯಾದರ್ಶ ಮತ್ತು ದಶಕುಮಾರಚರಿತೆ
4.	ವಿಶಾಖದತ್ತ	–	ಮುದ್ರಾರಾಕ್ಷಸ ಮತ್ತು ದೇವಿಚಂದ್ರಗುಪ್ತಂ
5.	ವಿಷ್ಣುಶರ್ಮ	–	ಪಂಚತಂತ್ರ
6.	ಭವಭೂತಿ	–	ಉತ್ತರರಾಮಚರಿತೆ
7.	ಚರಕ	–	ಚರಕಸಂಹಿತೆ
8.	ಸುಶ್ರುತ	–	ಸುಶ್ರುತಸಂಹಿತೆ
9.	ಶಂಕು	–	ಶಿಲ್ಪಶಾಸ್ತ್ರ
10.	ಅಮರಸಿಂಹ	–	ಅಮರಕೋಶ

ವಿಜ್ಞಾನ ಮತ್ತು ತಂತ್ರಜ್ಞಾನ.

ವಿಜ್ಞಾನ, ಗಣಿತ, ಖಗೋಳಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಲೋಹಶಾಸ್ತ್ರಗಳಲ್ಲಿ ಅದ್ಭುತ ಪ್ರಗತಿ ಸಾಧಿಸಲಾಗಿತ್ತು. ಆರ್ಯಭಟನು ಈ ಕಾಲದ ಶ್ರೇಷ್ಠ ಗಣಿತಶಾಸ್ತ್ರಜ್ಞ ಮತ್ತು ಖಗೋಳ ವಿಜ್ಞಾನಿಯಾಗಿದ್ದನು. ಅವನು ತನ್ನ ಗ್ರಂಥ 'ಸೂರ್ಯಸಿದ್ಧಾಂತ' ದಲ್ಲಿ ಭೂಮಿಯು ತನ್ನ ಅಕ್ಷದ ಮೇಲೆ ಹೇಗೆ ಸುತ್ತುತ್ತದೆ ಹಾಗೂ ಚಂದ್ರ ಮತ್ತು ಸೂರ್ಯಗ್ರಹಣಗಳು ಹೇಗೆ ಸಂಭವಿಸುತ್ತವೆ ಎಂದು ಚರ್ಚಿಸಿದ್ದಾನೆ. 'ಆರ್ಯಭಟೀಯ' ಅವನ ಇನ್ನೊಂದು ಕೃತಿಯಾಗಿದೆ. ಅವನು ತನ್ನ ಈ ಕೃತಿಯಲ್ಲಿ ದಶಮಾಂಶ ಪದ್ಧತಿಯ ಬಗ್ಗೆ ವಿವರಿಸಿದ್ದಾನೆ.

ಬ್ರಹ್ಮಗುಪ್ತ ಇನ್ನೊಬ್ಬ ಗಣಿತಶಾಸ್ತ್ರಜ್ಞ. ಆತನು ಶೂನ್ಯದ ಪ್ರಾಮುಖ್ಯತೆಯನ್ನು ತಿಳಿಸಿದ್ದಾನೆ. ವರಹಾಮಿಹಿರ ಈ ಕಾಲದ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬನಾಗಿದ್ದಾನೆ. ಅವನು 'ಪಂಚಸಿದ್ಧಾಂತಿಕ', 'ಬೃಹತ್‌ಜಾತಕ' ಮತ್ತು 'ಲಘುಜಾತಕ'ಗಳನ್ನು ಬರೆದಿದ್ದಾನೆ. ಇವನು ಖಗೋಳಶಾಸ್ತ್ರ, ಜೀವಶಾಸ್ತ್ರ, ಗಣಿತ ಮತ್ತು ಭೂಗೋಳಶಾಸ್ತ್ರಗಳಲ್ಲಿ ಪಂಡಿತನಾಗಿದ್ದನು. ಬೃಹತ್ ಸಂಹಿತೆಯು ಆಕಾಶಕಾಯಗಳ ಚಲನೆಯನ್ನು ಕುರಿತು ವಿವರಿಸುತ್ತದೆ. ವೈದ್ಯಕೀಯ

ಕ್ಷೇತ್ರದಲ್ಲಿ ಚರಕ ಮತ್ತು ಸುಶ್ರುತರು 'ಸಂಹಿತೆ'ಗಳನ್ನು ರಚಿಸಿದ್ದಾರೆ. ಧನ್ವಂತ್ರಿಯನ್ನು 'ಭಾರತೀಯ ವೈದ್ಯಶಾಸ್ತ್ರದ ಪಿತಾಮಹ' (ಆಯುರ್ವೇದ) ಎಂದು ಕರೆಯಲಾಗಿದೆ. ವಾಘ್ಭಟನು 'ಅಷ್ಟಾಂಗಸಂಗ್ರಹ'ವನ್ನು ಬರೆದಿದ್ದಾನೆ. ದೆಹಲಿಯ ಸಮೀಪದ ಮೆಹ್ರೌಲಿಯಲ್ಲಿ ಸಂಶೋಧಿಸಲ್ಪಟ್ಟಿರುವ ಕಬ್ಬಿಣದ ಸ್ತಂಭವು ಅವರ ಲೋಹಶಾಸ್ತ್ರ ಕೌಶಲ್ಯಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಶತಮಾನಗಳಿಂದ ಬಿಸಿಲು ಮತ್ತು ಮಳೆಗೆ ಒಡ್ಡಿಕೊಂಡಿದ್ದರೂ ಕಬ್ಬಿಣಸ್ತಂಭವು ತುಕ್ಕು ಹಿಡಿಯದಿರುವುದು ಹಾಗೂ ಶಕ್ತಿಗುಂದದಿರುವುದು ಒಂದು ಪವಾಡವೇ ಆಗಿದೆ.

ಕಲೆ ಮತ್ತು ವಾಸ್ತುಶಿಲ್ಪ.

ಭಾರತೀಯ ದೇವಾಲಯ ವಾಸ್ತುಶಿಲ್ಪದ ಮೂಲ ರಚನಾತ್ಮಕ ಲಕ್ಷಣಗಳು ಗುಪ್ತರ ಕಾಲದಲ್ಲಿ ಅಭಿವೃದ್ಧಿಯಾಯಿತು. ಮಥುರಾ, ಬನಾರಸ್, ಪಾಟ್ನಾ, ಉದಯಗಿರಿ, ದೇವಗಡ್ ಮುಂತಾದವುಗಳು ಅವರ ಕಾಲದ ಪ್ರಮುಖ ಕಲಾಚಟುವಟಿಕೆಯ ಕೇಂದ್ರಗಳಾಗಿದ್ದವು. ದೇವಗಡ್‌ನ ದಶಾವತಾರ ದೇವಾಲಯವು ಗುಪ್ತರ ಕಾಲದ ಮೊದಲ ದೇವಾಲಯವಾಗಿದೆ. ಭೂಮಾರದ ಶಿವದೇವಾಲಯ ಮತ್ತು ಬಿಟ್ಟಿರ್‌ಗಾಂವ್‌ನ ಇಟ್ಟಿಗೆ ದೇವಾಲಯ ಗುಪ್ತರ ಇತರ ದೇವಾಲಯಗಳಾಗಿವೆ. ಗುಪ್ತರ ಅವಧಿಯಲ್ಲಿ ಅನೇಕ ಬುದ್ಧನ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಸುಲ್ತಾನ್‌ಗಂಜ್‌ನ 7½ ಅಡಿ ಎತ್ತರದ ಸುಂದರವಾದ ಬುದ್ಧನ ವಿಗ್ರಹವು ಈಗ ಬರ್ಮಿಂಗ್ ಹ್ಯಾಮ್‌ನ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಲ್ಪಟ್ಟಿದೆ.

ಗುಪ್ತರು ಚಿತ್ರಕಲೆಗೆ ವಿಶೇಷವಾದ ಪ್ರೋತ್ಸಾಹ ನೀಡಿದರು. ಗುಪ್ತರ ವರ್ಣಕಲೆಯ ಅತ್ಯುತ್ತಮ ಉದಾಹರಣೆಗಳು ಗ್ವಾಲಿಯರ್ ಸಮೀಪದ ಬಾಗ್‌ನ ಗೋಡೆಗಳ ಮೇಲಿವೆ. ಗುಪ್ತ ಅರಸರು ಅಜಂತದಲ್ಲಿ ಅನೇಕ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಗುಪ್ತರ ಕಾಲದ ಕಲಾವಿದರು ಬುದ್ಧನ ಜೀವನಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ಚಿತ್ರಿಸಿದ್ದಾರೆ. 17ನೇ ಗುಹೆಯಲ್ಲಿರುವ 'ತಾಯಿ–ಮಗು' ವರ್ಣಚಿತ್ರ ತುಂಬಾ ನೈಜತೆ ಮತ್ತು ಸುಂದರವಾಗಿದ್ದು ಇದು ಅಜಂತಾ ಚಿತ್ರಕಲೆಗಳಲ್ಲಿ ಅತ್ಯಂತ ಶ್ರೇಷ್ಠವಾಗಿದೆ.

ಚಟುವಟಿಕೆ

ಗುಪ್ತರ ಕಲೆ ಮತ್ತು ವಾಸ್ತು ಶಿಲ್ಪದ ಆಲ್ಬಂ ತಯಾರಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಗುಪ್ತ ಸಂತತಿಯ ಸ್ಥಾಪಕ ಯಾರು?
2. 'ಗುಪ್ತಶಕೆ' ಯಾವಾಗ ಆರಂಭವಾಯಿತು?
3. ಅಲಹಾಬಾದ್ ಸ್ತಂಭ ಶಾಸನವನ್ನು ರಚಿಸಿದವರು ಯಾರು?
4. ಸಮುದ್ರಗುಪ್ತನ ದಿಗ್ವಿಜಯಗಳನ್ನು ತಿಳಿಸುವ ಶಾಸನ ಯಾವುದು?
5. ಕಾವ್ಯಮೀಮಾಂಸೆಯ ಕರ್ತೃ ಯಾರು?
6. ಗುಪ್ತವಂಶದ ಶ್ರೇಷ್ಠ ದೊರೆ ಯಾರು?
7. ಗುಪ್ತರ ಯಾವ ಅರಸನು 'ಅಶ್ವಮೇಧಯಾಗ'ವನ್ನು ನೆರವೇರಿಸಿದನು?

8. 'ಕವಿರಾಜ' ಎಂಬ ಬಿರುದನ್ನು ಹೊಂದಿದ್ದವರು ಯಾರು?
9. 'ಶಾಕುಂತಲ'ವನ್ನು ಬರೆದವರು ಯಾರು?
10. ಆರ್ಯಭಟೀಯವನ್ನು ಬರೆದವರು ಯಾರು?
11. ವಿಕ್ರಮಾದಿತ್ಯ ಎಂಬ ಬಿರುದನ್ನು ಹೊಂದಿದ್ದವರು ಯಾರು?
12. ಅಮರಕೋಶವನ್ನು ಬರೆದವರು ಯಾರು?
13. ಬೃಹತ್ ಸಂಹಿತೆಯನ್ನು ಬರೆದವರು ಯಾರು?
14. 'ಫೋ–ಕೋ–ಕಿ'ಯನ್ನು ಬರೆದವರು ಯಾರು?
15. ಕಿರಾತಾರ್ಜುನೀಯಂದ ಲೇಖಕನನ್ನು ಹೆಸರಿಸಿ.
16. ಭಾರತದ ವೈದ್ಯಶಾಸ್ತ್ರದ 'ಪಿತಾಮಹ'ನೆಂದು ಯಾರನ್ನು ಕರೆಯಲಾಗಿದೆ?
17. ಗುಪ್ತರ ಕಾಲದ ಕಬ್ಬಿಣಸ್ತಂಭ ಕಂಡುಬಂದಿರುವುದು ಎಲ್ಲಿ?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಗುಪ್ತರ ಎರಡು ರಾಜಧಾನಿಗಳು ಯಾವುವು?
2. ಸಮುದ್ರಗುಪ್ತನ ದಿಗ್ವಿಜಯಗಳನ್ನು ವಿವರಿಸುವ ಶಾಸನ ಯಾವುದು? ಅದನ್ನು ಯಾರು ರಚಿಸಿದರು?
3. ಗುಪ್ತರ ಕಾಲದ ಇಬ್ಬರು ಕವಿಗಳನ್ನು ಹೆಸರಿಸಿ.
4. ಕಾಳಿದಾಸನ ಯಾವುದಾದರು ಎರಡು ಕೃತಿಗಳನ್ನು ತಿಳಿಸಿ.
5. ಫಾಹಿಯಾನ್ ಯಾರು? ಅವನು ಏಕೆ ಭಾರತಕ್ಕೆ ಬಂದನು?
6. ಗುಪ್ತರ ಇತಿಹಾಸ ತಿಳಿಯಲು ಸಹಾಯಕವಾಗಿರುವ ಯಾವುದಾದರೂ ಎರಡು ಮೂಲಾಧಾರಗಳನ್ನು ಹೆಸರಿಸಿ.
7. ಸಮುದ್ರಗುಪ್ತನಿಂದ ಸೋಲಿಸಲ್ಪಟ್ಟ ಯಾರಾದರೂ ಇಬ್ಬರು ಉತ್ತರ ಭಾರತದ ರಾಜರುಗಳನ್ನು ಹೆಸರಿಸಿ.
8. ಸಮುದ್ರಗುಪ್ತನಿಂದ ಸೋಲಿಸಲ್ಪಟ್ಟ ಯಾರಾದರೂ ಇಬ್ಬರು ದಕ್ಷಿಣ ಭಾರತದ ರಾಜ್ಯಗಳನ್ನು ಹೆಸರಿಸಿ.
9. ಗುಪ್ತರ ಕಾಲದ ಯಾವುದಾದರೂ ಎರಡು ಹೆಸರಾಂತ ವಿಶ್ವವಿದ್ಯಾನಿಲಯಗಳನ್ನು ಹೆಸರಿಸಿ.
10. ವರಾಹಮಿಹಿರನ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ.
11. ಗುಪ್ತರ ಕಾಲದ ಯಾವುದಾದರೂ ಎರಡು ವಾಸ್ತುಶಿಲ್ಪದ ಕೇಂದ್ರಗಳನ್ನು ಹೆಸರಿಸಿ.

III. ಕೆಳಗಿನ ಪ್ರಶ್ನೆಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಸಮುದ್ರಗುಪ್ತನ ದಿಗ್ವಿಜಯಗಳನ್ನು ವಿವರಿಸಿ.

IV. ಕೆಳಗಿನ ಪ್ರಶ್ನೆಗೆ 30– 40 ವಾಕ್ಯಗಳಲ್ಲಿ ಉತ್ತರಿಸಿ.

1. ಗುಪ್ತರ ಕಾಲವನ್ನು ಭಾರತದ ಇತಿಹಾಸದಲ್ಲಿ 'ಸುವರ್ಣ ಯುಗ' ಎಂದು ಏಕೆ ಕರೆಯುತ್ತಾರೆ?

❋ ❋ ❋ ❋

ಅಧ್ಯಾಯ 4.6

ಚೋಳರು

ಸಂಘಂ ಯುಗ

ದಕ್ಷಿಣ ಭಾರತದ ಸಾಮ್ರಾಜ್ಯಗಳಲ್ಲಿ ಚೋಳ ಸಾಮ್ರಾಜ್ಯವು ಅತ್ಯಂತ ಪ್ರಾಚೀನವಾದುದು. ಚೋಳರ ಇತಿಹಾಸವು 'ಸಂಘಂ' ಯುಗದಿಂದ ಆರಂಭವಾಗುವುದು. ಸಂಘಂ ಎಂದರೆ, ತಮಿಳು 'ಸಾಹಿತ್ಯ ಸಂಘ್' ಎಂಬರ್ಥವನ್ನು ಕೊಡುತ್ತದೆ. ಸಾ.ಶ. ಪೂ 200 ರಿಂದ ಸಾ.ಶ. 500ರ ಕಾಲಾವಧಿಯ ಮೂರು ಸಾಹಿತ್ಯ ಸಂಘಗಳನ್ನು ಸಂಘಂ ಯುಗ ಎಂದು ಕರೆಯುವರು. ಮಧುರೈ ಪಾಂಡ್ಯರು ಸಂಘಂ ಸಾಹಿತ್ಯವನ್ನು ಪೋಷಿಸಿದರು. ತಿರುಕ್ಕುರಳ್, ಶಿಲಪ್ಪದಿಗಾರಂ ಮತ್ತು ಮಣಿಮೇಗಲೈ ಇವುಗಳು ಸಂಘಂ ಯುಗದ ಪ್ರಸಿದ್ಧ ಕೃತಿಗಳು.

ಚೋಳರ ರಾಜಕೀಯ ಇತಿಹಾಸವನ್ನು ತಿಳಿದುಕೊಳ್ಳಲು ಸಂಘಂ ಕಾಲದ ಸಾಹಿತ್ಯ ಮತ್ತು ಅಶೋಕನ ಶಿಲಾಶಾಸನಗಳು ಸಹಾಯಕವಾಗಿವೆ. ಇಳ್ಯೆಯಾನ್ ಚೋಳನು ಚೋಳರ ಮೊದಲ ದೊರೆ. ಉರೈಯೂರ್ ಇವನ ರಾಜಧಾನಿಯಾಗಿತ್ತು. ಕರಿಕಾಲ ಚೋಳನು (ಸಾ.ಶ 190) ತುಂಬಾ ಪರಾಕ್ರಮಿಯಾಗಿದ್ದನು. ಇವನು ಚೇರ ಹಾಗೂ ಪಾಂಡ್ಯರನ್ನು ಸೋಲಿಸಿದನು. ಬಲಿಷ್ಠ ನೌಕಾಪಡೆಯೊಂದಿಗೆ ಸಿಂಹಳದವರೆಗೂ ದಂಡಯಾತ್ರೆ ಕೈಗೊಂಡಿದ್ದನು. ನೀರಾವರಿ ಸೌಲಭ್ಯಕ್ಕಾಗಿ ಕಲ್ಲಣೆ ಎಂಬ ಆಣೆಕಟ್ಟನ್ನು ಕಟ್ಟಿಸಿದನು. ಇವನ ನಂತರ ರಾಜಕೀಯ ಅರಾಜಕತೆ ಉಂಟಾಯಿತು. ಸೆಂಗುಣ್ಣಿಯನ್ ಎಂಬುವನು ಸಂಘಂ ಯುಗದ ಕೊನೆಯ ದೊರೆ. ಪಲ್ಲವರು ಪ್ರಾಬಲ್ಯಕ್ಕೆ ಬಂದಿದ್ದರಿಂದ ಸಂಘಂ ಯುಗ ಸಾಶ 3ನೇ ಶತಮಾನದ ಹೊತ್ತಿಗೆ ಕೊನೆಗೊಂಡಿತು.

ಮಧ್ಯಕಾಲೀನ ಚೋಳರ ಇತಿಹಾಸದಲ್ಲಿ ದೊರೆ ವಿಜಯಾಲಯ ಚೋಳ ಪ್ರಮುಖನು. ಇವನು ಸಾ.ಶ. 850ರಲ್ಲಿ ಪಲ್ಲವ ದೊರೆ ಅಪರಾಜಿತವರ್ಮನನ್ನು ಕೊಂದು ಚೋಳರ ಪ್ರಭುತ್ವವನ್ನು ಸ್ಥಾಪಿಸಿದನು. ತಂಜಾವೂರು ಚೋಳರ ರಾಜಧಾನಿಯಾಯಿತು. ಇವನ ನಂತರದಲ್ಲಿ ಅನುಕ್ರಮವಾಗಿ ಅಧಿಕಾರಕ್ಕೆ ಬಂದವರು ಒಂದನೇ ಆದಿತ್ಯ ಚೋಳ ಹಾಗೂ ಒಂದನೇ ಪರಾಂತಕ. ಒಂದನೇ ಪರಾಂತಕನು ಸಾ.ಶ.919 ಮತ್ತು 921ರಲ್ಲಿ ಹೊರಡಿಸಿದ ಉತ್ತರಮೇರೂರು ಶಾಸನ ಚೋಳರ ಗ್ರಾಮಾಡಳಿತವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಸಾ.ಶ. 949ರಲ್ಲಿ ಚೋಳ ಮತ್ತು ರಾಷ್ಟ್ರಕೂಟರ ನಡುವೆ 'ತಕ್ಕೋಳಂ' ಕದನ ನಡೆಯಿತು. ಈ ಕದನದಲ್ಲಿ ಚೋಳರು ಸೋಲುಂಡರು. ಇದರಿಂದಾಗಿ ಚೋಳ ಸಾಮ್ರಾಜ್ಯವು ಕುಸಿಯಿತು. ಆನಂತರ ಅಧಿಕಾರಕ್ಕೆ ಬಂದ ರಾಜರಾಜ ಚೋಳ ಮತ್ತು ರಾಜೇಂದ್ರಚೋಳರು ಚೋಳ ಸಾಮ್ರಾಜ್ಯವನ್ನು ವಿಸ್ತರಿಸಿದರು.

ಒಂದನೇ ರಾಜರಾಜಚೋಳ (ಸಾ.ಶ.985–1014)

ಎರಡನೇ ಪರಾಂತಕನ ಮಗನಾದ ಒಂದನೇ ರಾಜರಾಜಚೋಳನು ಚೋಳ ವಂಶದ ಶ್ರೇಷ್ಠ ದೊರೆ. ಇವನು ರಾಷ್ಟ್ರಕೂಟರ ದಾಳಿಯಿಂದ ದುರ್ಬಲವಾಗಿದ್ದ ಚೋಳ ರಾಜ್ಯವನ್ನು ಬಲಿಷ್ಠಗೊಳಿಸಿದನು.

ಸೈನಿಕ ಸಾಧನೆಗಳು

ದಕ್ಷಿಣದ ವಿಜಯಗಳು: ಒಂದನೇ ರಾಜರಾಜಚೋಳನು ತನ್ನ ರಾಜ್ಯದ ದಕ್ಷಿಣ ಭಾಗದ ಮೇಲೆ ದಂಡೆತ್ತಿ ಹೋಗಿ ಪಾಂಡ್ಯ, ಚೇರ ಮತ್ತು ಸಿಂಹಳದ ಅರಸರೊಂದಿಗೆ ಹೋರಾಡಿದನು. ಇವನು ಯುದ್ಧದಲ್ಲಿ ಪಾಂಡ್ಯ ಅರಸ ಅಮರಬುಜಂಗನನ್ನು ಸೋಲಿಸಿ, ಅವನನ್ನು ಸೆರೆಹಿಡಿದನು. ಚೇರರ ಬಲಿಷ್ಠ ನೌಕಾಪಡೆಯನ್ನು ನಾಶಗೊಳಿಸಿದನು. ಇವನು ಸಿಂಹಳದ ಉತ್ತರ ಭಾಗವನ್ನು ಆಕ್ರಮಿಸಿದನು. ಈ ವಿಜಯದ ನೆನಪಿಗಾಗಿ ಪೊಲೆನ್ನಾರು ಎಂಬಲ್ಲಿ ಶಿವ ದೇವಾಲಯವನ್ನು ಕಟ್ಟಿಸಿದನು.

ಉತ್ತರದ ವಿಜಯಗಳು: ಸಾ.ಶ. 1011ರಲ್ಲಿ ಗಂಗರ ಪ್ರಮುಖ ಪ್ರದೇಶಗಳಾದ ಗಂಗವಾಡಿ ಮತ್ತು ನೊಳಂಬವಾಡಿಗಳನ್ನು ಗೆದ್ದುಕೊಂಡನು. ಅವನು ತಲಕಾಡಿಗೆ 'ರಾಜರಾಜಪುರ' ಎಂಬ ಹೆಸರನ್ನಿತ್ತನು. ನಂತರ ಕಲ್ಯಾಣಿ ಚಾಲುಕ್ಯರ ಅರಸ ಸತ್ಯಾಶ್ರಯನನ್ನು ಎದುರಿಸಿದನಾದರೂ ಗೆಲುವು ದೊರೆತ ಬಗ್ಗೆ ನಿಖರ ಮಾಹಿತಿ ದೊರೆಯುವುದಿಲ್ಲ.

ವೆಂಗಿಚಾಲುಕ್ಯರ ಮೇಲೆ ಗೆಲುವು: ರಾಜ ರಾಜಚೋಳನು ವೆಂಗಿ ಚಾಲುಕ್ಯರ ರಾಜಕೀಯ ಅಂತ:ಕಲಹದಲ್ಲಿ ಪ್ರವೇಶ ಮಾಡಿ, ಶಕ್ತಿವರ್ಮನನ್ನು ವೆಂಗಿಯ ದೊರೆಯನ್ನಾಗಿ ಮಾಡಿದನು ಹಾಗೂ ಅವನ ತಮ್ಮ ವಿಮಾಲಾದಿತ್ಯನಿಗೆ ತನ್ನ ಮಗಳಾದ ಕುಂದವ್ವಳನ್ನು ಕೊಟ್ಟು ಮದುವೆ ಮಾಡಿದನು. ಈ ವಿವಾಹ ಬಂಧನದಿಂದ ಚಾಲುಕ್ಯ ಮತ್ತು ಚೋಳರ ನಡುವಿನ ಸಂಬಂಧ ಭದ್ರವಾಯಿತು. ವೆಂಗಿ ಚಾಲುಕ್ಯರಿಂದ ಪಡೆದ ಸಂಪತ್ತಿನ ಹೆಚ್ಚಿನ ಭಾಗವನ್ನು ತಂಜಾವೂರಿನ ರಾಜರಾಜೇಶ್ವರ ದೇವಾಲಯಕ್ಕೆ ದಾನ ಮಾಡಿದನು. ನಂತರದಲ್ಲಿ ಇವನು ಕಳಿಂಗದವರೆಗೂ ದಂಡೆತ್ತಿ ಹೋಗಿ ಅದನ್ನು ಗೆದ್ದನು.

ಒಂದನೇ ರಾಜ ರಾಜಚೋಳನು ಲಕ್ಷದ್ವೀಪ ಮತ್ತು ಮಾಲ್ಡೀವ್ಸ್ ದ್ವೀಪಗಳ ಮೇಲೆ ದಂಡಯಾತ್ರೆಯನ್ನು ಕೈಗೊಂಡು ಅವುಗಳನ್ನು ಗೆದ್ದುಕೊಂಡನು. ಇವನು ಸುಮಾತ್ರದ ಶೈಲೇಂದ್ರ (ಶ್ರೀವಿಜಯ) ಸಾಮ್ರಾಜ್ಯದೊಡನೆ ಉತ್ತಮ ಬಾಂಧವ್ಯವನ್ನು ಹೊಂದಿದ್ದನು. ಶೈಲೇಂದ್ರದ ದೊರೆ ಶ್ರೀಮಾರ ವಿಜಯೋತ್ತುಂಗವರ್ಮನ್‌ಗೆ ನಾಗಪಟ್ಟಣದಲ್ಲಿ ಚೂಡಾಮಣಿ ಬೌದ್ಧ ವಿಹಾರ ಕಟ್ಟಲು ಅನುಮತಿ ನೀಡಿದನು. ಹೀಗೆ ಚೋಳ ಸಾಮ್ರಾಜ್ಯವನ್ನು ವಿಸ್ತರಿಸಿದ ಕೀರ್ತಿ ರಾಜರಾಜ ಚೋಳನಿಗೆ ಸಲ್ಲುವುದು. ಇವನ ಸಾಮ್ರಾಜ್ಯವು ದಕ್ಷಿಣದಲ್ಲಿ ಸಿಂಹಳ, ಉತ್ತರದಲ್ಲಿ ಒರಿಸ್ಸಾ, ಪಶ್ಚಿಮದಲ್ಲಿ ಕೊಡಗು ಮತ್ತು ಕೊಂಕಣ ಹಾಗೂ ಪೂರ್ವದಲ್ಲಿನ ಅನೇಕ ದ್ವೀಪಗಳವರೆಗೂ ಹಬ್ಬಿತ್ತು. ಇವನು ಅನೇಕ ಬಿರುದುಗಳನ್ನು ಹೊಂದಿದ್ದನು. ಅವುಗಳೆಂದರೆ, 'ಶಿವಪಾದಶೇಖರ', 'ಚೋಳೇಂದ್ರ ಸಿಂಹ', 'ಮುಮ್ಮಡಿ ಚೋಳದೇವ', 'ಜಯಗೊಂಡ', 'ಚೋಳಮಾರ್ತಾಂಡ' ಮುಂತಾದವು. ಇವನು ಕಲಾ ಪೋಷಕನಾಗಿದ್ದನು. ತಂಜಾವೂರಿನ ಪ್ರಸಿದ್ಧ ರಾಜರಾಜೇಶ್ವರ ದೇವಾಲಯವನ್ನು ಕಟ್ಟಿಸಿದನು ಮತ್ತು ಇತರ ಅನೇಕ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿದನು.

ಒಂದನೇ ರಾಜೇಂದ್ರಚೋಳ (ಸಾ.ಶ.1012–1044)

ಒಂದನೇ ರಾಜರಾಜಚೋಳನ ಮಗನಾದ ಇವನು ಸಾ.ಶ.1012ರಲ್ಲಿ ಯುವರಾಜನಾಗಿ ಪಟ್ಟಾಭಿಷಕ್ತನಾದನು. ಸಾ.ಶ.1014ರಲ್ಲಿ ತನ್ನ ತಂದೆಯ ಸಾವಿನ ನಂತರ ಅಧಿಕಾರ ವಹಿಸಿಕೊಂಡನು. ತಂದೆಯಷ್ಟೇ ಮಹತ್ವಾಕಾಂಕ್ಷಿಯಾಗಿದ್ದ ಇವನು ಚೋಳ ಸಾಮ್ರಾಜ್ಯದ ಘನತೆ ಮತ್ತು ಗೌರವಗಳನ್ನು ಮತ್ತಷ್ಟು ಎತ್ತರಿಸಿದನು.

ಸಾಧನೆಗಳು:

ಒಂದನೇ ರಾಜೇಂದ್ರಚೋಳನು ಸಾ.ಶ.1018ರಲ್ಲಿ ಸಿಂಹಳದ ಅರಸ 5ನೇ ಮಹೇಂದ್ರ(ಮಹಿಂದ)ನನ್ನು ಸೋಲಿಸಿ ಬಂಧನದಲ್ಲಿಟ್ಟನು. ಇವನ ವಶದಲ್ಲಿದ್ದ ಪಾಂಡ್ಯ ರಾಜನ ರಾಜಮುದ್ರೆ ಮತ್ತು ರಾಜಕಿರೀಟವನ್ನು ತನ್ನ ವಶಕ್ಕೆ ತೆಗೆದುಕೊಂಡನು. ತಂಜಾವೂರಿನ ಸೆರೆಮನೆಯಲ್ಲಿದ್ದ 5ನೇ ಮಹೇಂದ್ರನು ಮರಣ ಹೊಂದಿದ ನಂತರ ಸಿಂಹಳ ರಾಜ್ಯವು ಚೋಳ ಸಾಮ್ರಾಜ್ಯದ ಭಾಗವಾಯಿತು.

ಇವನು ಸಾ.ಶ. 1021ರಲ್ಲಿ ಕಲ್ಯಾಣಿ ಚಾಲುಕ್ಯ ದೊರೆ 2ನೇ ಜಯಸಿಂಹನ ಮೇಲೆ ಯುದ್ಧ ಸಾರಿ ಮಸಂಗಿ(ಮಸ್ಕಿ)ಯಲ್ಲಿ ಸೋಲಿಸಿದನು. 2ನೇ ಜಯಸಿಂಹನ ಪರವಹಿಸಿ ಬಂದ ವೆಂಗಿಯ ವಿಜಯಾದಿತ್ಯನನ್ನು ಸೋಲಿಸಿ ರಾಜ್ಯದಿಂದ ಹೊರಹಾಕಿದನು. ರಾಜೇಂದ್ರಚೋಳನು ವೆಂಗಿ ಸಿಂಹಾಸನದ ಮೇಲೆ ರಾಜ ರಾಜ ನರೇಂದ್ರನನ್ನು ಕೂಡಿಸಿ ಅವನಿಗೆ ತನ್ನ ಮಗಳಾದ ಅಮ್ಮಂಗದೇವಿಯನ್ನು ಕೊಟ್ಟು ಮದುವೆ ಮಾಡಿದನು. ನಂತರ ಒರಿಸ್ಸಾದತ್ತ ಮುನ್ನುಗ್ಗಿ ಬಂಗಾಳದ ಒಂದನೇ ಮಹಿಪಾಲನನ್ನು ಸೋಲಿಸಿದನು.

ಸೇನಾ ದಂಡನಾಯಕನ ನೇತೃತ್ವದಲ್ಲಿ ಚೋಳ ಸೈನ್ಯವು ಮುಂದುವರೆದು ಗಂಗಾ ನದಿಯವರೆಗೂ ಹೋಗಿ ಗಂಗಾ ಪವಿತ್ರ ಜಲವನ್ನು ತೆಗೆದುಕೊಂಡು ರಾಜ್ಯಕ್ಕೆ ಹಿಂದಿರುಗಿತು. ಈ ವಿಜಯದ ನೆನಪಿಗಾಗಿ ರಾಜೇಂದ್ರಚೋಳನು 'ಗಂಗೈಕೊಂಡ ಚೋಳ'(ಗಂಗಾ ಪ್ರದೇಶ ವಿಜೇತ) ಎಂಬ ಬಿರುದುನ್ನು ಧರಿಸಿದನು ಮತ್ತು ಗಂಗೈಕೊಂಡ ಚೋಳಪುರಂ ಎಂಬ ಹೊಸ ರಾಜಧಾನಿಯನ್ನು ಕಟ್ಟಿಸಿದನು. ಇವನು ಚೋಳಗಂಗಂ ಎಂಬ ಕೆರೆಯನ್ನು ಕಟ್ಟಿಸಿ ಅದರೊಳಗೆ ಗಂಗಾ ಪವಿತ್ರ ಜಲವನ್ನು ಬೆರೆಸಿದನೆಂದು ತಿಳಿಯುವುದು.

ರಾಜೇಂದ್ರಚೋಳನು ತನ್ನ ಬಲಿಷ್ಠ ನೌಕಾಪಡೆ ಮತ್ತು ಸೈನ್ಯದೊಂದಿಗೆ ಸಾ.ಶ. 1025ರಲ್ಲಿ ಆಗ್ನೇಯ ಏಷ್ಯಾದ ಶೈಲೇಂದ್ರ ಸಾಮ್ರಾಜ್ಯದ ಮೇಲೆ ದಂಡಯಾತ್ರೆಯನ್ನು ಕೈಗೊಂಡನು. ಬಂಗಾಳ ಕೊಲ್ಲಿಯನ್ನು ದಾಟಿ ಜಾವಾ, ಸುಮಾತ್ರಗಳನ್ನು ಗೆದ್ದುಕೊಂಡು ಶೈಲೇಂದ್ರದ ದೊರೆ ಸಂಗ್ರಾಮ ವಿಜಯೋತ್ತುಂಗವರ್ಮನ್‌ನನ್ನು ಯುದ್ಧದಲ್ಲಿ ಸೋಲಿಸಿದನು. ಇವನು ಈ ವಿಜಯದ ನೆನಪಿಗಾಗಿ ಶೈಲೇಂದ್ರದದಲ್ಲಿ ಗಂಗೈಕೊಂಡ ಚೋಳ ಶಿವಾಲಯವನ್ನು ಕಟ್ಟಿಸಿದನು.

ಒಂದನೇ ರಾಜೇಂದ್ರ ಚೋಳನು ದಕ್ಷ ಆಡಳಿತಗಾರ ಹಾಗೂ ವಿದ್ಯಾಪೋಷಕನಾಗಿದ್ದನು. ಸಾ.ಶ. 1025ರಲ್ಲಿ ಎನ್ನಾಯಿರಂ(ದಕ್ಷಿಣ ಆರ್ಕಾಟ್ ಜಿಲ್ಲೆ)ಎಂಬಲ್ಲಿ ಉನ್ನತ ವಿದ್ಯಾಕೇಂದ್ರವನ್ನು ಸ್ಥಾಪಿಸಿದನು. ಈ ವಿದ್ಯಾಕೇಂದ್ರದಲ್ಲಿ ಅಭ್ಯಾಸ ಮಾಡುತ್ತಿದ್ದ 340 ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗಿತ್ತು. ಒಂದನೇ ರಾಜೇಂದ್ರಚೋಳನು 'ಪಂಡಿತಚೋಳ', 'ಗಂಗೈಕೊಂಡ ಚೋಳ', 'ಕೇದಾರಕೊಂಡ' ಮುಂತಾದ ಬಿರುದುಗಳನ್ನು ಹೊಂದಿದ್ದನು. ಇವನು ಸಾ.ಶ. 1033ರಲ್ಲಿ ಚೀನಾ ದೇಶಕ್ಕೆ ರಾಯಭಾರಿಗಳನ್ನು ಕಳುಹಿಸುವ ಮೂಲಕ ತನ್ನ ಘನತೆ ಮತ್ತು ಗೌರವವನ್ನು ಹೆಚ್ಚಿಸಿಕೊಂಡನು.

ಚೋಳರ ಆಡಳಿತ ಪದ್ಧತಿ:

ಚೋಳರು ಉತ್ತಮ ಆಡಳಿತ ಪದ್ಧತಿಯನ್ನು ಹೊಂದಿದ್ದರು. ಅವರು ಕೇಂದ್ರೀಕೃತ ಆಡಳಿತ ಪದ್ಧತಿಯನ್ನು ಹೊಂದಿದ್ದರು. ಅರಸನು ನಿರಂಕುಶ ಪ್ರಭುವಾಗಿರಲಿಲ್ಲ. ಯುವರಾಜನು ರಾಜನಾಗುವ ಪದ್ಧತಿ ಇತ್ತು. ಮಂತ್ರಿಮಂಡಲ ಅರಸನಿಗೆ ಸಹಾಯಕವಾಗಿತ್ತು. ಅರಸನ ಆಪ್ತವರ್ಗವನ್ನು 'ಉದನ ಕೂಟಂ' ಎಂದು ಕರೆಯಲಾಗುತ್ತಿತ್ತು.

ಸಾಮ್ರಾಜ್ಯವನ್ನು ಅನೇಕ ವಿಭಾಗಗಳನ್ನಾಗಿ(ಮಂಡಲ) ವಿಂಗಡಿಸಲಾಗಿತ್ತು. ಒಂದನೇ ರಾಜರಾಜ ಚೋಳನ ಕಾಲದಲ್ಲಿ 8 ಮಂಡಲಗಳಿದ್ದವು. ಪ್ರತಿ ಮಂಡಲಗಳನ್ನು ನಾಡುಗಳಾಗಿ, ನಾಡುಗಳನ್ನು (ಕೊಟ್ಟಂ) 'ಒಳ ನಾಡು'ಗಳಾಗಿ ವಿಂಗಡಿಸಲಾಗಿತ್ತು. ಗ್ರಾಮಾಡಳಿತವನ್ನು ಗ್ರಾಮ ಸಭೆಗಳು ನಡೆಸುತ್ತಿದ್ದವು.

ಗ್ರಾಮಾಡಳಿತ:

ಚೋಳರ ಆಡಳಿತದ ಮುಖ್ಯ ಲಕ್ಷಣ ಎಂದರೆ ಗ್ರಾಮ ಸ್ವಾಯತ್ತತೆ. ಗ್ರಾಮಗಳ ಜನರು ತಾವೇ ಆಯ್ಕೆ ಮಾಡಿಕೊಂಡ ಪ್ರತಿನಿಧಿಗಳ ಮೂಲಕ ಆಡಳಿತವನ್ನು ನಡೆಸುತ್ತಿದ್ದರು. ಈ ಆಡಳಿತ ಪದ್ಧತಿಯು ಚೋಳರ ಕಾಲದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆಯಿತು. ಒಂದನೇ ಪರಾಂತಕನ ಉತ್ತರಮೇರೂರು ಶಾಸನ ಗ್ರಾಮಾಡಳಿತದ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುತ್ತದೆ. ಈ ಶಾಸನದ ಪ್ರಕಾರ– ಉತ್ತರಮೇರೂರು ಗ್ರಾಮವನ್ನು 30 ಭಾಗಗಳಾಗಿ(ಕುಡುಂಬು) ವಿಂಗಡಿಸಲಾಗಿತ್ತು. ಪ್ರತಿ ವಿಭಾಗದಿಂದ ಒಬ್ಬೊಬ್ಬ ಸದಸ್ಯರನ್ನು ಒಂದು ವರ್ಷದ ಅವಧಿಗೆ ಆಯ್ಕೆ ಮಾಡಲಾಗುತ್ತಿತ್ತು. ಕುಡುವಲೈ(ಅದೃಷ್ಟ) ಪದ್ಧತಿ ಮೂಲಕ ಸದಸ್ಯರನ್ನು ಆಯ್ಕೆ ಮಾಡಲಾಗುತ್ತಿತ್ತು. ಚುನಾವಣೆ ದಿನದಂದು ಗ್ರಾಮಸ್ಥರು ದೇವಾಲಯದಲ್ಲಿ ಸೇರುತ್ತಿದ್ದರು. ಆಯ್ಕೆ ಮಾಡುವ ಅಭ್ಯರ್ಥಿಗಳ ಹೆಸರನ್ನು ಓಲೆಗರಿಗಳ ಮೇಲೆ ಬರೆದು ಒಂದು ಮಡಕೆಯಲ್ಲಿ ಹಾಕಲಾಗುತ್ತಿತ್ತು. ನಂತರ ಒಬ್ಬ ಚಿಕ್ಕ ಬಾಲಕನಿಂದ ಎಲ್ಲರ ಸಮ್ಮುಖದಲ್ಲಿ ಒಂದೊಂದು ಓಲೆಯನ್ನು ಮಡಕೆಯಿಂದ ಹೊರತಗೆಯುವ ಮೂಲಕ ಪ್ರತಿನಿಧಿಗಳ ಆಯ್ಕೆ ನಡೆಯುತ್ತಿತ್ತು.

ಆಯ್ಕೆಯಾದ ಪ್ರತಿನಿಧಿಗಳು ವಾರ್ಷಿಕ ಸಮಿತಿ, ಉದ್ಯಾನ ಸಮಿತಿ ಮತ್ತು ಕೆರೆ ಕಟ್ಟೆಗಳ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಬೇಕಿತ್ತು. ಈ ಸಮಿತಿಗಳನ್ನು 'ವರಿಯಂ' ಎಂದು ಕರೆಯಲಾಗುತ್ತಿತ್ತು. ಪ್ರತಿನಿಧಿಗಳನ್ನು 'ವರಿಯ ಪೆರುಮಕ್ಕಳ್' ಎಂದು ಕರೆಯುತ್ತಿದ್ದರು. ಈ ಸಮಿತಿಗಳು 360 ದಿನಗಳು ಕಾರ್ಯನಿರ್ವಹಿಸುತ್ತಿದ್ದವು. ಗ್ರಾಮಗಳ ಆಸ್ತಿ ರಕ್ಷಣೆ, ಕಂದಾಯ ವಸೂಲಿ, ದೇವಾಲಯ, ಕೆರೆ, ತೋಪು, ಅರಣ್ಯ ರಕ್ಷಣೆ ಮುಂತಾದ ಕರ್ತವ್ಯಗಳನ್ನು ಗ್ರಾಮ ಸಭೆ ನಿರ್ವಹಿಸುತ್ತಿತ್ತು. ಸಭೆಯ ತೀರ್ಮಾನಗಳನ್ನು ಬರೆದಿಡಲಾಗುತ್ತಿತ್ತು. ಕೇಂದ್ರಾಡಳಿತವು ಗ್ರಾಮಾಡಳಿತದಲ್ಲಿ ಅನಾವಶ್ಯಕವಾಗಿ ಮಧ್ಯಪ್ರವೇಶಿಸುತ್ತಿರಲಿಲ್ಲ.

ಸದಸ್ಯರಿಗೆ ಇರಬೇಕಾದ ಕನಿಷ್ಠ ಅರ್ಹತೆಗಳು.

1. ಅಭ್ಯರ್ಥಿಯು ಕನಿಷ್ಠ 1/2 ಎಕರೆ ತೆರಿಗೆ ಕೊಡುವ ಭೂಮಿಯನ್ನು ಹೊಂದಿರಬೇಕು
2. ಸ್ವಂತ ನಿವೇಶನದಲ್ಲಿ ಕಟ್ಟಿಸಿದ ಸ್ವಂತ ಮನೆಯಲ್ಲಿ ವಾಸವಿರಬೇಕು
3. 35ಕ್ಕಿಂತ ಹೆಚ್ಚು 70ಕ್ಕಿಂತ ಕಡಿಮೆ ವಯಸ್ಸಿನವರಿರಬೇಕು.
4. ವೇದ, ಬ್ರಾಹ್ಮಣಕಗಳ ಹಾಗೂ ವ್ಯವಹಾರಿಕ ಜ್ಞಾನವಿರಬೇಕು
5. ಉತ್ತಮ ಚಾರಿತ್ರ್ಯಯುಳ್ಳವರಾಗಿರಬೇಕು.

ಅನರ್ಹತೆಗಳು

1. ಕಳೆದ ಮೂರು ವರ್ಷಗಳ ಕಾಲ ಸತತವಾಗಿ ಯಾವುದೇ ಒಂದು ಸಮಿತಿ ಸದಸ್ಯನಾಗಿದ್ದರೆ ಪುನರಾಯ್ಕೆಗೆ ಅನರ್ಹ.
2. ಸಮಿತಿಯಲ್ಲಿದ್ದು ಲೆಕ್ಕಪತ್ರಗಳನ್ನು ಸಲ್ಲಿಸದವರು ಮತ್ತು ಅವನ ಹತ್ತಿರ ಸಂಬಂಧಿಕರು

3. ದುಷ್ಟರು, ಮೋಸಗಾರರು, ಮದ್ಯ ಸೇವನೆ, ಕಳ್ಳತನ, ಬ್ರಾಹ್ಮಣ ಹತ್ಯೆ ಮತ್ತು ವ್ಯಭಿಚಾರ ಆರೋಪ ಹೊತ್ತವರು.

ಹೀಗೆ ಕೆಲವು ಕನಿಷ್ಠ ಅರ್ಹತೆ ಮತ್ತು ಅನರ್ಹತೆಗಳನ್ನು ಗ್ರಾಮಾಡಳಿತದಲ್ಲಿ ಪಾಲಿಸಿಕೊಂಡು ಬರಲಾಗುತ್ತಿತ್ತು. ಚೋಳರ ಗ್ರಾಮಗಳನ್ನು ವಿದ್ವಾಂಸರು 'ಚಿಕ್ಕ ಪ್ರಜಾಪ್ರಭುತ್ವ ರಾಜ್ಯಗಳು' ಎಂದು ಕರೆದಿದ್ದಾರೆ.

ಚೋಳರ ಕಲೆ ಮತ್ತು ವಾಸ್ತು ಶಿಲ್ಪ:

ಕಲೆಗೆ ಚೋಳರು ಸರ್ವೋತ್ತಮ ಕೊಡುಗೆಗಳನ್ನು ನೀಡಿದ್ದಾರೆ. ಇವರು ಪಲ್ಲವರ ದ್ರಾವಿಡ ಶೈಲಿಯನ್ನು ಅನುಸರಿಸಿ ಅನೇಕ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಬೃಹತ್ ಮತ್ತು ಭವ್ಯವಾದ ದೇವಾಲಯಗಳು ಹಾಗೂ ಶಿಖರಗಳ ನಿರ್ಮಾಣವು ಚೋಳರ ಕಲೆಯ ವಿಶೇಷತೆಯಾಗಿದೆ.



ಬೃಹದೇಶ್ವರ ದೇವಾಲಯ, ತಂಜಾವೂರು

ಚೋಳರ ಕಲೆಯ ವೈಶಿಷ್ಟ್ಯತೆಯನ್ನು ತಂಜಾವೂರಿನ ಮತ್ತು ಗಂಗೈಕೊಂಡ ಚೋಳಪುರಂ ದೇವಾಲಯಗಳಲ್ಲಿ ನೋಡಬಹುದು. ಇವರ ದೇವಾಲಯಗಳು ಗರ್ಭಗುಡಿ, ಮಹಾಮಂಟಪ, ಅರ್ಧಮಂಟಪ, ನಂದಿಮಂಟಪ, ಮತ್ತು ವಿಮಾನಗಳನ್ನು ಒಳಗೊಂಡಿವೆ. ಸಾ.ಶ.1009ರಲ್ಲಿ ಒಂದನೇ ರಾಜರಾಜಚೋಳನು ತಂಜಾವೂರಿನಲ್ಲಿ ರಾಜರಾಜೇಶ್ವರ(ಬೃಹದೇಶ್ವರ) ದೇವಾಲಯವನ್ನು ಕಟ್ಟಿಸಿದನು. ಈ ದೇವಾಲಯವು ಭಾರತದ ಅತ್ಯಂತ ದೊಡ್ಡ ಮತ್ತು ಎತ್ತರ ಶಿಖರ ಹೊಂದಿರುವ ದೇವಾಲಯವಾಗಿದೆ. ಗರ್ಭಗೃಹದ ಮೇಲಿನ ಶಿಖರವು 200 ಅಡಿ ಎತ್ತರವಿದೆ. ಗರ್ಭಗೃಹದಲ್ಲಿರುವ ಶಿವಲಿಂಗ ಆಕರ್ಷಣೀಯವಾಗಿದೆ. ಮುಂಭಾಗದಲ್ಲಿ ನಂದಿ ವಿಗ್ರಹವಿದೆ. ದೇವಾಲಯದ ದ್ವಾರಪಾಲಕ ಶಿಲ್ಪಗಳು ನೋಡುಗರ ಗಮನ ಸೆಳೆಯುತ್ತವೆ.

ಗಂಗೈಕೊಂಡ ಚೋಳಪುರಂ ದೇವಾಲಯವನ್ನು ಒಂದನೇ ರಾಜೇಂದ್ರಚೋಳನು ಕಟ್ಟಿಸಿದನು. ಈ ದೇವಾಲಯವು 150 ಅಡಿ ಶಿಖರವನ್ನು ಹೊಂದಿದೆ. ದೇವಾಲಯದ 50 ಕಂಬಗಳ ಸಭಾಮಂಟಪವು ಕಲಾತ್ಮಕವಾಗಿದೆ.

ಚೋಳರ ಇತರ ದೇವಾಲಯಗಳು– ಹೊನ್ನೆಹಳ್ಳಿಯ ರಾಮೇಶ್ವರ ದೇವಾಲಯ, ಕೋಲಾರದ ಕೋಲಾರಮ್ಮ ದೇವಾಲಯ, ಶ್ರೀನಿವಾಸನಲ್ಲೂರಿನ ಕೊರಂಗನಾಥ ದೇವಾಲಯ, ನೊಣವಿನಕೆರೆಯ ನೊಣಬೇಶ್ವರ ದೇವಾಲಯ, ದಾರಾಶುರಂನ ಐರಾವತೇಶ್ವರ ದೇವಾಲಯ ಮತ್ತು ನಂದಿಯ ಮಂಟಪ ಮುಂತಾದವುಗಳು.

ಮೂರ್ತಿಶಿಲ್ಪ– ಚೋಳರ ಕಾಲದ ಮೂರ್ತಿಶಿಲ್ಪವು ಭಾರತೀಯ ಕಲೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ವಿವಿಧ ದೇವಾಲಯಗಳಲ್ಲಿರುವ ಶಿವ, ಬ್ರಹ್ಮ, ವಿಷ್ಣು, ಕಾಳಿಂಗ ಮರ್ಧನ, ನಟರಾಜ, ಶ್ರೀದೇವಿ ಮುಂತಾದ ಲೋಹ ಪ್ರತಿಮೆಗಳು ಆತ್ಯಾಕರ್ಷಕವಾಗಿವೆ. ನಟರಾಜನ ಕಂಚಿನ ವಿಗ್ರಹ ಚೋಳರ ಅತ್ಯುತ್ತಮ ಕಲಾ ಕೊಡುಗೆಯಾಗಿದೆ.

ಚಟುವಟಿಕೆ

ಚೋಳರ ಸ್ಥಳೀಯ ಸ್ವಯಮಾಡಳಿತ ಸರ್ಕಾರವನ್ನು ಇಂದಿನ ಗ್ರಾಮೀಣ ಆಡಳಿತದೊಂದಿಗೆ ಹೋಲಿಕೆ ಮಾಡಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1) 'ಸಂಘಂ' ಎಂದರೇನು?
2) ಸಂಘಂ ಕಾಲದ ಚೋಳರ ಮೊದಲ ದೊರೆ ಯಾರು?
3) ತಂಜಾವೂರಿನ ರಾಜರಾಜೇಶ್ವರ ದೇವಾಲಯವನ್ನು ಕಟ್ಟಿಸಿದವರು ಯಾರು?
4) ಚೋಳರ ಗ್ರಾಮಾಡಳಿತವನ್ನು ತಿಳಿಸುವ ಶಿಲಾಶಾಸನ ಯಾವುದು?
5) 'ಕುಡುವಲೈ' ಎಂದರೇನು?
6) 'ವರಿಯಮ್' ಎಂದರೇನು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1) ಸಂಘಂ ಯುಗದ ಯಾವುದಾದರು ಎರಡು ಪ್ರಸಿದ್ಧ ಕೃತಿಗಳನ್ನು ಹೆಸರಿಸಿ.
2) ತಕ್ಕೋಳಂ ಕದನವು ಯಾವಾಗ ಮತ್ತು ಯಾರ ನಡುವೆ ನಡೆಯಿತು?
3) ಒಂದನೇ ರಾಜೇಂದ್ರ ಚೋಳನ ಯಾವುದಾದರು ಎರಡು ಬಿರುದುಗಳನ್ನು ತಿಳಿಸಿ.

III. ಈ ಕೆಳಗಿನ ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1) ರಾಜರಾಜ ಚೋಳನ ಸಾಧನೆಗಳನ್ನು ಚಿತ್ರಿಸಿ.
2) ಒಂದನೇ ರಾಜೇಂದ್ರಚೋಳನ ಸಾಧನೆಗಳನ್ನು ವಿವರಿಸಿ.
3) ಚೋಳರ ಗ್ರಾಮಾಡಳಿತವನ್ನು ವಿವರಿಸಿ.

❋ ❋ ❋ ❋

ಅಧ್ಯಾಯ – 4.7

ವರ್ಧನರು ಮತ್ತು ಆರಂಭಿಕ ಚಾಲುಕ್ಯರು–ಪಲ್ಲವರು

ವರ್ಧನರು

ಗುಪ್ತರ ನಂತರ ಉತ್ತರ ಭಾರತದ ರಾಜಕೀಯದಲ್ಲಿ ಅನೈಕ್ಯತೆ ತಲೆದೋರಿತು. ಹೂಣರ ದಾಳಿಗಳಿಂದ ಹಲವು ಚಿಕ್ಕ ರಾಜ್ಯಗಳು ಸ್ವತಂತ್ರಗೊಂಡವು. ಇಂತಹ ಸ್ವತಂತ್ರ ರಾಜ್ಯಗಳಲ್ಲಿ ಪುಷ್ಯಭೂತಿ ಸಂತತಿಯ ವರ್ಧನರ ರಾಜ್ಯವೂ ಒಂದಾಗಿದೆ. ವರ್ಧನರ ಇತಿಹಾಸ ತಿಳಿದುಕೊಳ್ಳಲು ಹ್ಯೂಯನ್– ತ್ಸಾಂಗ್‌ನ ಸಿ–ಯು–ಕಿ, ಬಾಣಭಟ್ಟನ ಹರ್ಷಚರಿತೆ ಮತ್ತು ಹರ್ಷವರ್ಧನನ ತಾಮ್ರಪಟ ಶಾಸನ ಮುಂತಾದ ಮೂಲಾಧಾರಗಳು ಸಹಾಯಕವಾಗಿವೆ. ಪುಷ್ಯಭೂತಿಯು ವರ್ಧನ ವಂಶದ ಮೂಲಪುರುಷನೆಂದು ತಿಳಿದುಬರುತ್ತದೆ. ಈ ವಂಶದ ಹರ್ಷವರ್ಧನ ಉತ್ತರ ಭಾರತದ ಚಿಕ್ಕಪುಟ್ಟ ರಾಜ್ಯಗಳನ್ನು ಒಂದುಗೂಡಿಸಿ ರಾಜಕೀಯ ಐಕ್ಯತೆಯನ್ನು ಸಾಧಿಸಿದನು.

ಹರ್ಷವರ್ಧನ (ಸಾ.ಶ.606–647)

ಹರ್ಷವರ್ಧನ ವರ್ಧನರ ಶ್ರೇಷ್ಠ ದೊರೆಯಾಗಿದ್ದನು. ಇವನು ಸಾ.ಶ.606ರಲ್ಲಿ ಅಧಿಕಾರಕ್ಕೆ ಬಂದನು. ಪ್ರಭಾಕರವರ್ಧನ ಮತ್ತು ಯಶೋಮತಿ ಇವನ ತಂದೆ ತಾಯಿಗಳು. ಇವನಿಗೆ ರಾಜವರ್ಧನ ಎಂಬ ಅಣ್ಣ ಮತ್ತು ರಾಜಶ್ರೀ ಎಂಬ ತಂಗಿಯಿದ್ದರು. ಇವನನ್ನು ಶಿಲಾದಿತ್ಯ ಎಂದೂ ಕರೆಯಲಾಗುತ್ತಿತ್ತು. ಥಾನೇಶ್ವರ ಇವನ ರಾಜಧಾನಿಯಾಗಿತ್ತು.

ಸಾ.ಶ. 605ರಲ್ಲಿ ಪ್ರಭಾಕರವರ್ಧನನ ಸಾವಿನಿಂದ ನೊಂದ ಯಶೋಮತಿ ಸಹಗಮನ ಕೈಗೊಂಡಳು. ಮಾಳ್ವದ ದೇವಗುಪ್ತನು ರಾಜಶ್ರೀಯ ಗಂಡನಾದ ಗೃಹವರ್ಮನನ್ನು ಕೊಂದು ಅವಳನ್ನು ಕನೌಜಿನಲ್ಲಿ ಬಂಧಿಸಿಟ್ಟಿದ್ದನು. ಇವಳನ್ನು ಬಿಡುಗಡೆ ಮಾಡಿಕೊಂಡು ಬರಲು ಹೋದ ರಾಜವರ್ಧನನು ಗಾವುಡ ದೇಶದ ಶಶಾಂಕನಿಂದ ಹತ್ಯೆಗೀಡಾದನು. ಇಂತಹ ದು:ಖದ ಪರಿಸ್ಥಿತಿಯಲ್ಲಿ ಹರ್ಷವರ್ಧನ ಅಧಿಕಾರಕ್ಕೆ ಬಂದನು. ರಾಜಶ್ರೀಯ ಬಿಡುಗಡೆ ಮತ್ತು ಶಶಾಂಕನ ಮೇಲೆ ಸೇಡು ತೀರಿಸಿಕೊಳ್ಳುವುದು ಇವನ ಮುಖ್ಯ ಉದ್ದೇಶವಾಗಿತ್ತು.

ಸಾಧನೆಗಳು:

ಬಂಧನದಲ್ಲಿದ್ದ ರಾಜಶ್ರೀ ತಪ್ಪಿಸಿಕೊಂಡು ವಿಂಧ್ಯ ಪರ್ವತಗಳ ಕಡೆಗೆ ಹೋಗಿದ್ದಳು. ಈ ವಿಷಯ ಅರಿತುಕೊಂಡ ಹರ್ಷವರ್ಧನ ರಾಜಶ್ರೀಯನ್ನು ತುಂಬಾ ಕಷ್ಟಪಟ್ಟು ಹುಡುಕಿದನು ಮತ್ತು ಅವಳು ಅಗ್ನಿಪ್ರವೇಶಕ್ಕೆ ಮುಂದಾದುದನ್ನು ತಡೆದನು. ನಂತರ ಕನೌಜನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡು ಅದನ್ನು ತನ್ನ ಎರಡನೇ ರಾಜಧಾನಿಯನ್ನಾಗಿ ಮಾಡಿಕೊಂಡನು.

ಹರ್ಷವರ್ಧನ ಕಾಮರೂಪ(ಅಸ್ಸಾಂ)ದ ಭಾಸ್ಕರವರ್ಮನ ಜೊತೆಗೂಡಿ ಗಾವುಡ ದೇಶದ (ಬಂಗಾಳ) ಶಶಾಂಕನನ್ನು ಸೋಲಿಸಿ ಸೇಡು ತೀರಿಸಿಕೊಂಡನು. ಆದರೆ, ಶಶಾಂಕನು ಜೀವಿತವಾಗಿರುವವರೆಗೂ ಅವನನ್ನು ಸಂಪೂರ್ಣವಾಗಿ ಸೋಲಿಸಲಾಗಲಿಲ್ಲ. ನಂತರ ಮಾಳ್ವದ ದೊರೆ ದೇವಗುಪ್ತನನ್ನು ಸೋಲಿಸಿ ಅವನ ರಾಜ್ಯವನ್ನು ತನ್ನ ಸಾಮ್ರಾಜ್ಯದೊಳಗೆ ವಿಲೀನಗೊಳಿಸಿದನು. ಸಾ.ಶ. 612ರ ವೇಳೆಗೆ ಪಂಜಾಬಿನ ಪಂಚ ಸಿಂಧುಗಳ

ಮೇಲೆ ಸಂಪೂರ್ಣ ಹಿಡಿತ ಸಾಧಿಸಿದನು. ಕನೌಜ್, ಬಿಹಾರ, ಒರಿಸ್ಸಾ ಮೊದಲಾದ ಪ್ರದೇಶಗಳನ್ನು ತನ್ನ ಸಾಮ್ರಾಜ್ಯದೊಳಗಡೆ ಸೇರಿಸಿಕೊಂಡನು. ವಲ್ಲಭಿಯ ಎರಡನೇ ಧ್ರುವಸೇನನನ್ನು ಸೋಲಿಸಿದನು. ನಂತರ ಅವನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವ ಮೂಲಕ ಉತ್ತಮ ಸಂಬಂಧ ಏರ್ಪಡಿಸಿಕೊಂಡನು.

ಗಾವುಡ ದೇಶದ ಶಶಾಂಕನ ಮರಣದ ನಂತರ ಹರ್ಷವರ್ಧನ ಒರಿಸ್ಸಾ, ಮಗಧ, ಒಡ್ರ, ಕೊಂಗೊಂಡ(ಗಂಜಾಂ) ಮತ್ತು ಬಂಗಾಳ(ಗಾವುಡ ದೇಶ)ಗಳನ್ನು ಗೆದ್ದುಕೊಂಡನು. ನಂತರ ನೇಪಾಳದ ದೊರೆಯನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಗಳನ್ನು ಪಡೆದನು. ಇವನು ಉತ್ತರಭಾರತದ ರಾಜ್ಯಗಳನ್ನು ಗೆದ್ದು ತನ್ನ ಆಧಿಪತ್ಯವನ್ನು ಸ್ಥಾಪಿಸಿದನು. ಈ ಸಾಧನೆಯ ಸಂಕೇತವಾಗಿ 'ಉತ್ತರಪಥೇಶ್ವರ'ನೆಂದು ಬಿರುದಾಂಕಿತಗೊಂಡನು.

ಇಮ್ಮಡಿ ಪುಲಿಕೇಶಿಯೊಡನೆ ಕಾಳಗ – ಹರ್ಷವರ್ಧನನು ದಕ್ಷಿಣದಲ್ಲಿ ನರ್ಮದಾ ನದಿಯ ಆಚೆ ರಾಜ್ಯವನ್ನು ವಿಸ್ತರಿಸುವ ಪ್ರಯತ್ನ ಮಾಡಿದನು. ಸಾ.ಶ.634ರಲ್ಲಿ ಹರ್ಷವರ್ಧನ ಮತ್ತು ಇಮ್ಮಡಿ ಪುಲಿಕೇಶಿಯ ನಡುವೆ ನರ್ಮದಾ ನದಿ ಕಾಳಗವು ನಡೆಯಿತು. ಈ ಯುದ್ಧದಲ್ಲಿ ಹರ್ಷವರ್ಧನ ಸೋಲುಂಡನು. ಗೆಲುವು ಪಡೆದ ಪುಲಿಕೇಶಿ 'ಪರಮೇಶ್ವರ' ಎಂಬ ಬಿರುದನ್ನು ಧರಿಸಿದನು. ಯುದ್ಧಭೂಮಿಯಲ್ಲಿ ಉರುಳಿಬೀಳುತ್ತಿರುವ ತನ್ನ ರಣಗಜಗಳನ್ನು ಕಂಡ ಹರ್ಷನ ಹರ್ಷ ಹಾರಿಹೋಯಿತು ಎಂದು ಐಹೊಳೆ ಶಾಸನ ಉಲ್ಲೇಖಿಸುತ್ತದೆ. ಹ್ಯೂಯನ್ ತ್ಸಾಂಗ್‌ನೂ ಸಹ ಹರ್ಷನ ಸೋಲಿನ ಬಗ್ಗೆ ಉಲ್ಲೇಖಿಸಿದ್ದಾನೆ. ನರ್ಮದಾ ನದಿ ಈ ಎರಡು ಸಾಮ್ರಾಜ್ಯಗಳ ಗಡಿಯಾಯಿತು.

ಹರ್ಷವರ್ಧನನು ಸಾ.ಶ. 641ರಲ್ಲಿ ಮಗಧ ರಾಜನೆಂದು ಕರೆದುಕೊಂಡನು. ಇವನ ಖ್ಯಾತಿ ವಿದೇಶದಲ್ಲೂ ಹಬ್ಬಿತ್ತು. ಚೀನಾದೊಡನೆ ರಾಯಭಾರಿಗಳನ್ನು ವಿನಿಮಯ ಮಾಡಿಕೊಂಡನು. ಗುಪ್ತರ ನಂತರ ಉತ್ತರ ಭಾರತದಲ್ಲಿ ಐಕ್ಯತೆಯನ್ನು ತಂದಂತಹ ಕೀರ್ತಿ ಹರ್ಷವರ್ಧನನದ್ದಾಗಿದೆ. ಇವನ ಸಾಮ್ರಾಜ್ಯವು ಪಶ್ಚಿಮದಲ್ಲಿ ಪಂಜಾಬ್‌ನಿಂದ ಪೂರ್ವದಲ್ಲಿ ಬಂಗಾಳ ಮತ್ತು ಒರಿಸ್ಸಾ, ಉತ್ತರದಲ್ಲಿ ಹಿಮಾಲಯದಿಂದ ದಕ್ಷಿಣದಲ್ಲಿ ನರ್ಮಾದಾ ನದಿಯವರೆಗೆ ವಿಸ್ತಾರವಾಗಿತ್ತು.

ಹರ್ಷವರ್ಧನ ಮತ್ತು ಬೌದ್ಧ ಧರ್ಮ

ಶಿವಭಕ್ತನಾಗಿದ್ದ ಹರ್ಷವರ್ಧನ ನಂತರದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿದನು. ರಾಜ್ಯದಲ್ಲಿ ಪ್ರಾಣಿ ವಧೆಯನ್ನು ತಡೆದು, ಮಾಂಸಾಹಾರ ಪದ್ಧತಿಯನ್ನು ನಿಷೇಧಿಸಿದನು. ಬೌದ್ಧ ಧರ್ಮದ ಪ್ರಮುಖ ಸ್ಥಳಗಳಲ್ಲಿ ಸ್ತೂಪಗಳನ್ನು ನಿರ್ಮಿಸಿದನು. ಬೌದ್ಧ ಧರ್ಮದ ವಿರೋಧಿಗಳನ್ನು, ಚಾರಿತ್ರ್ಯಹೀನರನ್ನು ಶಿಕ್ಷಿಸಿದನು. ಕಾಶ್ಮೀರದ ದೊರೆಯಿಂದ ಬುದ್ಧನ ಹಲ್ಲಿನ ಅವಶೇಷ ತಗೆದುಕೊಂಡು ಬಂದು ಕನೌಜಿನಲ್ಲಿ ಸ್ತೂಪವನ್ನು ನಿರ್ಮಿಸಿ ಅದನ್ನು ಅಲ್ಲಿ ಇರಿಸಿದನು.

ಕನೌಜಿನ ಧಾರ್ಮಿಕ ಮಹಾಸಭೆ – ಸಾಶ 643

ಹರ್ಷವರ್ಧನ ಧಾರ್ಮಿಕ ಚರ್ಚೆ ಮತ್ತು ಹ್ಯೂಯನ್ ತ್ಸಾಂಗ್‌ನನ್ನು ಸತ್ಕರಿಸಲು ಕನೌಜಿನಲ್ಲಿ ಬೃಹತ್ ಬೌದ್ಧ ಮಹಾಸಭೆಯನ್ನು ನಡೆಸಿದನು. ಈ ಮಹಾಸಭೆಯ ಅಧ್ಯಕ್ಷತೆಯನ್ನು ಹ್ಯೂಯನ್ ತ್ಸಾಂಗ್‌ನು ವಹಿಸಿದ್ದನು. ಈ ಸಭೆಯಲ್ಲಿ 20 ರಾಜರು, 1000 ವಿದ್ವಾಂಸರು, 3000ಕ್ಕೂ ಹೆಚ್ಚು ಬೌದ್ಧ ಬಿಕ್ಷುಗಳು, 3000 ಬ್ರಾಹ್ಮಣರು ಮತ್ತು ಜೈನರು ಭಾಗವಹಿಸಿದ್ದರು. ಸಭಾಂಗಣದಲ್ಲಿ ರಾಜನ ಎತ್ತರದಷ್ಟು ಚಿನ್ನದ ಬುದ್ಧನ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಈ ಸಭೆಯು 23 ದಿನಗಳ ಕಾಲ ನಡೆಯಿತು. ಹ್ಯೂಯನ್ ತ್ಸಾಂಗ್‌ನು ಸಭೆಯಲ್ಲಿ ಮಹಾಯಾನ ತತ್ವಗಳನ್ನು ವಿವರಿಸಿದನು.

ಪ್ರಯಾಗ(ಅಲಹಾಬಾದ್) ಬೌದ್ಧ ಮಹಾಸಮ್ಮೇಳನ–ಸಾಶ 643

ಹರ್ಷವರ್ಧನನು ಐದು ವರ್ಷಕ್ಕೊಮ್ಮೆ ಬರುವ ಮಹಾ ಮೋಕ್ಷ ಪರಿಷತ್ ಎಂದು ಕರೆಯಲ್ಪಡುವ ಸಮ್ಮೇಳನವನ್ನು ಪ್ರಯಾಗದಲ್ಲಿ ಏರ್ಪಡಿಸಿದನು. ಹ್ಯೂಯನ್ ತ್ಸಾಂಗ್‌ನನ್ನು ಈ ಸಮ್ಮೇಳನಕ್ಕೆ ಆಹ್ವಾನಿಸಲಾಗಿತ್ತು. 75 ದಿನಗಳ ಕಾಲ ಈ ಸಭೆ ನಡೆಯಿತು. ಎಲ್ಲಾ ಧರ್ಮದ ಬಡವರಿಗೆ ದಾನ ಮಾಡಿದನು. ಸಮ್ಮೇಳನದಲ್ಲಿ ಬುದ್ಧನ ವಿಗ್ರಹದ ಜೊತೆಯಲ್ಲಿ ಶಿವನ ಮತ್ತು ಸೂರ್ಯನ ವಿಗ್ರಹಗಳಿಗೂ ಉತ್ಸವ ನಡೆಸಲಾಯಿತು.

ಥಾನೇಶ್ವರ ವರ್ಧನ ವಂಶದಲ್ಲಿ ಹರ್ಷವರ್ಧನನ ಸ್ಥಾನ ಹಿರಿದಾಗಿದೆ. ಪ್ರಾಚೀನ ಭಾರತೀಯ ಸಾಧಕರಲ್ಲಿ ಹರ್ಷವರ್ಧನನೂ ಒಬ್ಬನು. ಇವನು ದಕ್ಷ ಆಡಳಿತಗಾರನೂ, ಧೀರ ಯೋಧ, ಪ್ರಜಾಹಿತ ಚಿಂತಕ ಮತ್ತು ಸಾಹಿತ್ಯದ ಆರಾಧಕನಾಗಿದ್ದನು. ಸ್ವತ: ಪಂಡಿತನಾಗಿದ್ದ ಇವನು ಸಂಸ್ಕೃತದಲ್ಲಿ 'ರತ್ನಾವಳಿ', 'ಪ್ರಿಯದರ್ಶಿಕಾ' ಮತ್ತು 'ನಾಗನಂದ' ಎಂಬ ನಾಟಕಗಳನ್ನು ಬರೆದನು. ಪ್ರಸಿದ್ಧ ಕವಿ ಬಾಣಭಟ್ಟನಿಗೆ ಇವನು ರಾಜಾಶ್ರಯ ನೀಡಿದ್ದನು. ಬಾಣಭಟ್ಟನು ಹರ್ಷವರ್ಧನನ್ನು ಕುರಿತು 'ಹರ್ಷಚರಿತೆ' ಎಂಬ ಅಮೂಲ್ಯ ಕೃತಿಯನ್ನು ರಚಿಸಿದನು. ವಿದ್ಯಾ ಪೋಷಕನಾಗಿದ್ದ ಇವನು ನಲಂದಾ ವಿಶ್ವವಿದ್ಯಾಲಯಕ್ಕೆ ಅನೇಕ ದಾನದತ್ತಿಗಳನ್ನು ನೀಡಿದನು.

ನಳಂದ ವಿಶ್ವವಿದ್ಯಾಲಯ

ಪ್ರಾಚೀನ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ನಳಂದ ವಿಶ್ವವಿದ್ಯಾಲಯವು ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಇದನ್ನು ಗುಪ್ತ ದೊರೆ ಒಂದನೇ ಕುಮಾರ ಗುಪ್ತನು ಸ್ಥಾಪಿಸಿದ್ದನು. ನಂತರದ ಗುಪ್ತ ದೊರೆಗಳು ಈ ವಿಶ್ವವಿದ್ಯಾಲಯಕ್ಕೆ ಅನೇಕ ಕಟ್ಟಡಗಳನ್ನು ಕಟ್ಟಿಸಿದರು. ಈ ವಿಶ್ವವಿದ್ಯಾಲಯವು ಬೌದ್ಧ ಮಹಾಯಾನ ತತ್ವಗಳನ್ನು ಪ್ರಚಾರಪಡಿಸಿತು. ಹರ್ಷವರ್ಧನನ ಕಾಲದಲ್ಲಿ ಈ ವಿಶ್ವವಿದ್ಯಾಲಯವು ಅತ್ಯಂತ ಹೆಸರುವಾಸಿಯಾಯಿತು. ಈತನು 700 ಹಳ್ಳಿಗಳ ಭೂಕಂದಾಯವನ್ನು ಈ ವಿಶ್ವವಿದ್ಯಾಲಯಕ್ಕೆ ದತ್ತಿಯಾಗಿ ನೀಡಿದನು. ಇಲ್ಲಿ 10,000 ವಿದ್ಯಾರ್ಥಿಗಳು 1500 ಬೋಧಕರಿದ್ದರು. ಹ್ಯೂಯನ್‌ತ್ಸಾಂಗ್ ಮತ್ತು ಇತ್ಸಿಂಗ್‌ರು ಈ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ್ದರು. ಗ್ರಂಥಾಲಯ ಪ್ರದೇಶವನ್ನು 'ಧರ್ಮಗಂಜ್' ಎಂದು ಕರೆಯಲಾಗುತ್ತಿತ್ತು. ಗ್ರಂಥಾಲಯದ ಕಟ್ಟಡಗಳನ್ನು ರತ್ನೋದಧಿ, ರತ್ನರಂಜಕ ಮತ್ತು ರತ್ನಸಾಗರ ಎಂದು ಕರೆಯುತ್ತಿದ್ದರು. ಮಹಮ್ಮದ್ ಬಖ್ತಿಯಾರ್ ಖಿಲ್ಜಿಯ ದಾಳಿಯಿಂದ ಈ ವಿಶ್ವವಿದ್ಯಾಲಯವು ಹಾಳಾಯಿತು.

ಹ್ಯೂಯನ್‌ತ್ಸಾಂಗ್:

ಚೀನಾದ ಬೌದ್ಧಯಾತ್ರಿಕನಾದ ಇವನು ಸಾ.ಶ. 600ರಲ್ಲಿ ತಹಿನ್–ಲಿಕಾನ್ ಎಂಬಲ್ಲಿ ಜನಿಸಿದನು. ಇವನು 20ನೇ ವಯಸ್ಸಿನಲ್ಲಿ ಬೌದ್ಧ ಸನ್ಯಾಸಿಯಾದನು. ಚೀನಿ ಭಾಷೆಯಲ್ಲಿದ್ದ ಬೌದ್ಧ ಧರ್ಮ ವಿಚಾರಗಳು ಇವನಿಗೆ ತೃಪ್ತಿ ನೀಡಲಿಲ್ಲ. ಆದ್ದರಿಂದ ಮೂಲ ಬೌದ್ಧ ಧರ್ಮದ ಗ್ರಂಥಗಳನ್ನು ಸಂಗ್ರಹಿಸಲು ಮತ್ತು ಬುದ್ಧನ ಜೀವನಕ್ಕೆ ಸಂಬಂಧಿಸಿದ ಮೂಲ ಸ್ಥಳಗಳನ್ನು ಸಂದರ್ಶಿಸುವ ಉದ್ದೇಶದಿಂದ ಭಾರತಕ್ಕೆ ಬಂದನು.

ಸಾ.ಶ. 629ರಲ್ಲಿ ಸಯಾಮ್ ಮೂಲಕ ಭಾರತಕ್ಕೆ ಪ್ರಯಾಣವನ್ನು ಆರಂಭಿಸಿದ ಇವನು ಸಾ.ಶ. 630 ರ ಹೊತ್ತಿಗೆ ಗಾಂಧಾರವನ್ನು ತಲುಪಿದನು. ನಂತರ ಕಾಶ್ಮೀರ, ಕನೌಜ್, ನಲಂದ, ಆಂಧ್ರ, ಕಂಚಿ ಮತ್ತು ಬಾದಾಮಿ ಮುಂತಾದ ಸ್ಥಳಗಳನ್ನು ಸಂದರ್ಶಿಸಿದನು.

ಸಾ.ಶ. 643 ರಲ್ಲಿ ಪುನಃ ನಳಂದಕ್ಕೆ ಭೇಟಿ ನೀಡಿದ ಇವನು ಹರ್ಷವರ್ಧನನ್ನು ಭೇಟಿಯಾದನು. ಇವನು ಸಾ.ಶ. 644ರಲ್ಲಿ ತನ್ನ ದೇಶಕ್ಕೆ ಮರುಪ್ರಯಾಣ ಆರಂಭಿಸಿದನು. ಭಾರತದಿಂದ ಹೋಗುವಾಗ ಬುದ್ಧನ 150 ದೇಹಾವಶೇಷಗಳು, ಬುದ್ಧನ ಚಿನ್ನ, ಬೆಳ್ಳಿ, ಶ್ರೀಗಂಧದ ವಿಗ್ರಹಗಳನ್ನು ಮತ್ತು ಬೌದ್ಧಧರ್ಮದ ಹಸ್ತಪ್ರತಿಗಳನ್ನು 20 ಕುದುರೆಗಳ ಮೇಲೆ ಹೇರಿಕೊಂಡು ಹೋದನಾದರೂ ಮಾರ್ಗಮಧ್ಯದಲ್ಲಿ ದರೋಡೆಕೋರರ ಲೂಟಿಗೆ ಒಳಗಾದನು. ಇವನು ತನ್ನ ಭಾರತದ ಪ್ರವಾಸದ ಅನುಭವಗಳ ಕುರಿತು ಸಿ-ಯು-ಕಿ ಎಂಬ ಗ್ರಂಥವನ್ನು ರಚಿಸಿದನು.

ಆರಂಭಿಕ ಚಾಲುಕ್ಯರು

ಹಿನ್ನಲೆ

ಕರ್ನಾಟಕದ ಮೊದಲ ಸಾರ್ವಭೌಮ ಅರಸರಾದ ಬಾದಾಮಿ ಚಾಲುಕ್ಯರು ಎರಡು ಸಣ್ಣ ರಾಜ್ಯಗಳಾದ ಬನವಾಸಿ ಕದಂಬರು ಹಾಗು ತಲಕಾಡಿನ ಗಂಗರ ನಂತರ ಆಳಿದರು. ಕರ್ನಾಟಕದ ಮೊದಲ ಅರಸು ಮನೆತನವಾದ ಕದಂಬರು ಸಾ.ಶ. 4ನೇ ಶತಮಾನದಿಂದ 6ನೇ ಶತಮಾನದವರೆಗೆ ಆಳಿದರು. ಮಯೂರ. ವರ್ಮ ಈ ವಂಶದ ಸ್ಥಾಪಕನೂ, ಅತ್ಯಂತ ಪ್ರಸಿದ್ಧನೂ ಆಗಿದ್ದನು. ಇವರ ಕಾಲದಲ್ಲಿ ಕನ್ನಡದ ಮೊದಲ ಶಾಸನ, ಹಲ್ಮಿಡಿ ಶಾಸನವನ್ನು ಹೊರಡಿಸಲಾಯಿತು. ಇವರ ಕಾಲದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವಿದ್ದು; ಅಗ್ರಹಾರಗಳು, ಘಟಿಕಗಳು ಮತ್ತು ಬ್ರಹ್ಮಪುರಿಗಳು ವಿದ್ಯಾ ಕೇಂದ್ರಗಳಾಗಿದ್ದವು. ತಾಳಗುಂದ, ಬಳ್ಳಿಗಾವೆ, ಬಂಕಾಪುರ ಮತ್ತು ಕಪ್ಪತ್ತೂರು ಅಗ್ರಹಾರಗಳು ಈ ಕಾಲದಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದವು. ಅವರು ಕರ್ನಾಟಕ ದೇವಾಲಯ ವಾಸ್ತುಶಿಲ್ಪ ನಿರ್ಮಾಣಕಾರರಲ್ಲಿ ಮೊದಲಿಗರು.

ಆರು ಶತಮಾನಗಳ ಕಾಲ ಆಳಿದ ತಲಕಾಡಿನ ಗಂಗರು ಕರ್ನಾಟಕದ ಸಂಸ್ಕೃತಿಗೆ ಗಮನಾರ್ಹ ಕೊಡುಗೆಗಳನ್ನಿತ್ತಿದ್ದಾರೆ. ದುರ್ವಿನೀತನು ಈ ವಂಶದ ಅತ್ಯಂತ ಪ್ರಸಿದ್ಧ ದೊರೆಯಾಗಿದ್ದನು. ಗಂಗರು ಸಾಹಿತ್ಯ, ಕಲೆ, ವಾಸ್ತುಶಿಲ್ಪ ಕ್ಷೇತ್ರದ ಬೆಳವಣಿಗೆಗೆ ಕೊಡುಗೆಗಳನ್ನಿತ್ತಿದ್ದಾರೆ. ಇವರ ಕಾಲದಲ್ಲಿ ಜೈನ ಧರ್ಮ ಅತ್ಯುನ್ನತ ಸ್ಥಿತಿಯಲ್ಲಿತ್ತು. ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಇವರ ಕೊಡುಗೆಗಳು ಗಮನಾರ್ಹವಾಗಿವೆ. ಕಪಿಲೇಶ್ವರ(ಮಣ್ಣೆ), ಮಹಾಲಿಂಗೇಶ್ವರ(ವರುಣ), ಪಾತಾಳೇಶ್ವರ ಮತ್ತು ಮರುಳೇಶ್ವರ(ತಲಕಾಡು), ಭೋಗ ನಂದೀಶ್ವರ(ನಂದಿ), ದೇವಾಲಯಗಳು ಇವರ ವಾಸ್ತುಶಿಲ್ಪಕ್ಕೆ ಉದಾಹರಣೆಗಳು. ಮಾನಸ್ತಂಭ ಮತ್ತು ಬ್ರಹ್ಮಸ್ಥಂಭ ಎಂಬ ಸ್ತಂಭಗಳು ಅವರ ವಿಶಿಷ್ಠ ಕೊಡುಗೆಯಾಗಿವೆ. ಅಟಕೂರು ಶಿಲಾಶಾಸನ ಮತ್ತು ದೊಡ್ಡಹುಂಡಿ ಶಿಲಾಶಾಸನ ಅವರ ಶಿಲ್ಪಕಲೆಯ ಔನ್ನತ್ಯವನ್ನು ತೋರಿಸುತ್ತವೆ. ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿರುವ ಬೃಹದಾಕಾರದ ಗೊಮ್ಮಟೇಶ್ವರ ವಿಗ್ರಹ ಅತ್ಯಂತ ಸುಂದರವಾಗಿದ್ದು ಶಿಲ್ಪಕಲೆಯಲ್ಲಿ ಅವರ ಹೆಸರನ್ನು ಅಮರವಾಗಿಸಿದೆ. ಇದನ್ನು ಗಂಗರ ಪ್ರಸಿದ್ಧ ಮಂತ್ರಿ ಚಾವುಂಡರಾಯನು ಸಾಶ.983ರಲ್ಲಿ ಪ್ರತಿಷ್ಠಾಪಿಸಿದನು. ಇದು 58 ಅಡಿ ಎತ್ತರವಿದ್ದು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಏಕಶಿಲಾ ವಿಗ್ರಹಗಳಲ್ಲಿ ಒಂದಾಗಿದೆ.

ಬಾದಾಮಿ ಚಾಲುಕ್ಯರನ್ನು ಆರಂಭಿಕ ಚಾಲುಕ್ಯರೆಂದು ಕರೆಯಲಾಗಿದೆ. ಇವರು ಸಾ.ಶ. 6ನೇ ಶತಮಾನದಲ್ಲಿ ಕರ್ನಾಟಕ ಪ್ರದೇಶದಲ್ಲಿ ಏಳಿಗೆಗೆ ಬಂದರು. ಬಾಗಲಕೋಟೆ ಜಿಲ್ಲೆ ಬಾದಾಮಿ(ವಾತಾಪಿ) ಇವರ ರಾಜಧಾನಿ. ವರಾಹ ಇವರ ರಾಜ ಲಾಂಛನ. ಜಯಸಿಂಹ ಇವರ ಮೂಲ ಪುರುಷ. ಇವನ ಮಗ ರಣರಾಗ. ಚಾಲುಕ್ಯರು ಮಾನವ್ಯಗೋತ್ರಕ್ಕೆ ಸೇರಿದ ಹರಿತೀಪುತ್ರರೆಂದು ಶಾಸನಗಳಲ್ಲಿ ಕರೆದುಕೊಂಡಿದ್ದಾರೆ. ಒಂದನೇ ಪುಲಿಕೇಶಿ ಬಾದಾಮಿ ಚಾಲುಕ್ಯರ ಮೊದಲ ಐತಿಹಾಸಿಕ ವ್ಯಕ್ತಿ. ಇವನು ರಣರಾಗನ ಮಗ. ಬಾದಾಮಿಯಲ್ಲಿ

ಇವನು ಸ್ವತಂತ್ರ ಆಳ್ವಿಕೆ ಆರಂಭಿಸಿದನು ಮತ್ತು ಬಾದಾಮಿ ಕೋಟೆಯನ್ನು ಕಟ್ಟಿಸಿದನು. ಇವನು ಅಶ್ವಮೇಧಯಾಗ ಮಾಡಿದನೆಂದು ಬಾದಾಮಿ ಶಾಸನ ತಿಳಿಸುತ್ತದೆ. ಇವನಿಗೆ ಕೀರ್ತಿವರ್ಮ ಮತ್ತು ಮಂಗಳೇಶ ಎಂಬ ಇಬ್ಬರು ಮಕ್ಕಳಿದ್ದರು.

ಇಮ್ಮಡಿ ಪುಲಕೇಶಿ (ಸಾ.ಶ. 609–642)

ಇವನು ಬಾದಾಮಿ ಚಾಲುಕ್ಯ ದೊರೆಗಳಲ್ಲಿ ಶ್ರೇಷ್ಠನು. ಕೀರ್ತಿವರ್ಮನ ಮಗನಾದ ಇವನು ಅಧಿಕಾರಕ್ಕೆ ಬಂದಾಗ ಅಪ್ರಾಪ್ತನಾಗಿದ್ದನು. ಆದ್ದರಿಂದ, ಚಿಕ್ಕಪ್ಪನಾದ ಮಂಗಳೇಶನು ಆಡಳಿತ ನೋಡಿಕೊಂಡನು. ಇಮ್ಮಡಿ ಪುಲಿಕೇಶಿಯ ಬಗ್ಗೆ ಹ್ಯೂಯನ್‌ತ್ಸಾಂಗನ ಸಿ–ಯು–ಕಿ, ಬಾಣಭಟ್ಟನ ಹರ್ಷ ಚರಿತೆ, ಐಹೊಳೆ ಶಿಲಾಶಾಸನ ಮುಂತಾದವುಗಳು ಮಾಹಿತಿಯನ್ನು ನೀಡುತ್ತವೆ.

ಸಾಧನೆಗಳು:

ಇಮ್ಮಡಿ ಪುಲಿಕೇಶಿಯು ಪ್ರಾಪ್ತವಯಸ್ಸಿಗೆ ಬಂದರೂ ಮಂಗಳೇಶನು ಅಧಿಕಾರವನ್ನು ಅವನಿಗೆ ಹಸ್ತಾಂತರ ಮಾಡದೇ ತನ್ನ ಮಗನನ್ನು ಅಧಿಕಾರಕ್ಕೆ ತರುವ ಪ್ರಯತ್ನ ಮಾಡಿದನು. ಇದರಿಂದ ಕೆರಳಿದ ಇಮ್ಮಡಿ ಪುಲಿಕೇಶಿಯು ಮಂಗಳೇಶನನ್ನು ಎಳಪಟ್ಟುಸಿಂಬಿಗೆ ಯುದ್ಧದಲ್ಲಿ ಕೊಂದು ಸಾ.ಶ. 609 ರಲ್ಲಿ ಸಿಂಹಾಸನವನ್ನೇರಿದನು.


ಪುಲಿಕೇಶಿಯು ಮಂಗಳೇಶನೊಡನೆ ಅಂತಃಕಲಹದಲ್ಲಿ ತೊಡಗಿದ್ದಾಗ ರಾಷ್ಟ್ರಕೂಟರ ನಾಯಕರಾದ ಅಪ್ಪಾಯಿಕ ಮತ್ತು ಗೋವಿಂದರು ಚಾಲುಕ್ಯ ಪ್ರದೇಶಗಳ ಮೇಲೆ ದಾಳಿ ಮಾಡಿದರು. ಪುಲಿಕೇಶಿಯು ಈ ಇಬ್ಬರನ್ನು ಭೀಮಾ ನದಿ ತೀರದಲ್ಲಿ ಸೋಲಿಸಿದನು. ಅಪ್ಪಾಯಿಕ ಭಯಗೊಂಡು ಯುದ್ಧಭೂಮಿಯಿಂದ ಓಡಿ ಹೋದರೆ, ಗೋವಿಂದನು ಪುಲಿಕೇಶಿಗೆ ಶರಣಾದನು.

ನಂತರ ಕದಂಬರ ರಾಜಧಾನಿಯಾದ ಬನವಾಸಿಯನ್ನು ಗೆದ್ದುಕೊಂಡನು. ಆನಂತರ ಕೊಂಕಣದ ಮೌರ್ಯರನ್ನು, ದಕ್ಷಿಣ ಕನ್ನಡದ ಅಳುಪರನ್ನು ಮತ್ತು ತಲಕಾಡಿನ ಗಂಗರನ್ನು ಸೋಲಿಸಿದನು. ದಕ್ಷಿಣದಲ್ಲಿ ಸಣ್ಣಪುಟ್ಟ ಅರಸರನ್ನು ಗೆದ್ದಬಳಿಕ ಉತ್ತರದ ಕಡೆ ಮುಂದುವರಿದು ಲಾಟ (ಗುಜರಾತ್), ಮಾಳ್ವ, ಗೂರ್ಜರ ದೊರೆಗಳನ್ನು ಸೋಲಿಸಿದನು. ಈ ಗುಜರಾತ್ ಶಾಖೆಗೆ ತನ್ನ ಸಹೋದರ ಜಯಸಿಂಹನನ್ನು ಅಧಿಕಾರಿಯನ್ನಾಗಿ ನೇಮಕ ಮಾಡಿದನು.

ಹರ್ಷವರ್ಧನನೊಡನೆ ಯುದ್ಧ ಸಾ.ಶ. 634

ಹರ್ಷವರ್ಧನನು ಸೈನ್ಯಸಮೇತನಾಗಿ ಕನೌಜ್‌ನಿಂದ ಹೊರಟು ನರ್ಮದಾ ನದಿ ತೀರದಲ್ಲಿ ಬೀಡುಬಿಟ್ಟನು. ಇಮ್ಮಡಿ ಪುಲಿಕೇಶಿಯು ಉತ್ತರಪಥೇಶ್ವರನೆಂದು ಪ್ರಸಿದ್ಧನಾಗಿದ್ದ ಹರ್ಷವರ್ಧನನ್ನು ಎದುರಿಸಲು ಸಿದ್ಧನಾದನು. ಇವರಿಬ್ಬರ ನಡುವೆ ಸಾ.ಶ.634ರಲ್ಲಿ ಭೀಕರ ಯುದ್ಧ ಸಂಭವಿಸಿತು. ಹರ್ಷವರ್ಧನನು ಈ ಯುದ್ಧದಲ್ಲಿ ಸೋಲುಂಡನು. ಗೆಲುವು ಪಡೆದ ಇಮ್ಮಡಿ ಪುಲಿಕೇಶಿ 'ಪರಮೇಶ್ವರ' ಎಂಬ ಬಿರುದನ್ನು ಧರಿಸಿದನು. ನಂತರ ಇವರಿಬ್ಬರ ನಡುವೆ ಸ್ನೇಹ ಸಂಬಂಧ ಏರ್ಪಟ್ಟು ನರ್ಮದಾ ನದಿ ಇವರಿಬ್ಬರ ಸಾಮ್ರಾಜ್ಯಗಳ ಗಡಿಯಾಯಿತು.

ಪೂರ್ವ ಭಾಗದ ಕಡೆ ಮುಂದುವರೆದ ಪುಲಿಕೇಶಿಗೆ ದಕ್ಷಿಣ ಕೋಸಲ ಮತ್ತು ಕಳಿಂಗ ದೊರೆಗಳು ಶರಣಾದರು. ಆಮೇಲೆ ಪಿಷ್ಟಪುರವನ್ನು ಗೆದ್ದುಕೊಂಡು ವೆಂಗಿಮಂಡಲವನ್ನು ವಶಪಡಿಸಿಕೊಂಡನು. ವೆಂಗಿ


ಇಮ್ಮಡಿ ಪುಲಿಕೇಶಿ ಕಾಲದ
ಚಾಲುಕ್ಯ ಸಾಮ್ರಾಜ್ಯ
ಹರ್ಷವರ್ಧನನ ಸಾಮ್ರಾಜ್ಯ
ನರ್ಮದಾ ನದಿ
ಅಜಂತಾ
ಬಾದಾಮಿ
ಪೆಂಗಿ
ಕಂಚಿ
ಚೋಳರು
ಪಾಂಡ್ಯರು
ಜೈನ್ಯ
ಅರಬ್ಬಿ
ಸಮುದ್ರ
ಬಂಗಾಳ ಕೊಲ್ಲಿ
ಸಾಮ್ರಾಜ್ಯ ವಿಸ್ತಾರ
ಹಿಂದೂ ಮಹಾಸಾಗರ
ಉ
ಪ
ಪೂ
ದ

ಪ್ರಾಂತ್ಯಕ್ಕೆ ಮತ್ತೊಬ್ಬ ಸಹೋದರ ಕುಬ್ಜ ವಿಷ್ಣುವರ್ಧನನ್ನು ಅರಸನನ್ನಾಗಿ ನೇಮಕ ಮಾಡಿದನು. ಇದು ವೆಂಗಿ ಚಾಲುಕ್ಯ ರಾಜ್ಯ ಸ್ಥಾಪನೆಗೆ ಅಡಿಪಾಯ ಹಾಕಿತು.

ಪುಲಿಕೇಶಿಯು ಕಂಚಿಯ ಮೇಲೆ ದಾಳಿ ಮಾಡಿ ಪಲ್ಲವರ ದೊರೆ 1ನೇ ಮಹೇಂದ್ರವರ್ಮನನ್ನು ಪೊಲ್ಲಿಲೂರು ಎಂಬಲ್ಲಿ ಸೋಲಿಸಿದನು. ಅವನು ಹಲವು ದಿನಗಳ ಕಾಲ ಕಂಚಿಯಲ್ಲಿ ಬೀಡುಬಿಟ್ಟು ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದನು. ಪುಲಿಕೇಶಿಯ ಈ ದಾಳಿಯು ಪಲ್ಲವ ಮತ್ತು ಚಾಲುಕ್ಯ ಸಂಘರ್ಷಕ್ಕೆ ನಾಂದಿಯಾಯಿತು. ನಂತರ ಚೋಳ ಮತ್ತು ಚೇರ ದೊರೆಗಳನ್ನು ಸೋಲಿಸಿ ಅವರಿಂದ ಕಪ್ಪ ಕಾಣಿಕೆಗಳನ್ನು ಪಡೆದು ರಾಜಧಾನಿಗೆ ಮರಳಿದನು.

ಇಮ್ಮಡಿ ಪುಲಿಕೇಶಿಯು ಕೊನೆಯ ದಿನಗಳಲ್ಲಿ ಕಂಚಿಯನ್ನು ಗೆಲ್ಲಲು ಮುಂದಾದನು. ಆದರೆ, ಪಲ್ಲವ ದೊರೆ ಒಂದನೇ ನರಸಿಂಹವರ್ಮನಿಂದ ಸಾ.ಶ.642ರಲ್ಲಿ ಇಮ್ಮಡಿ ಪುಲಿಕೇಶಿಯು ಪೆರಿಯಾಲ, ಮಣಿಮಂಗಲ ಮತ್ತು ಸುರಮಾರ ಕದನಗಳಲ್ಲಿ ಸೋಲಿಸಲ್ಪಟ್ಟನು. ಈ ಯುದ್ಧದಲ್ಲಿ ಅವನು ಕೊಲ್ಲಲ್ಪಟ್ಟಿರಬೇಕೆಂದು ನಂಬಲಾಗಿದೆ. ನರಸಿಂಹವರ್ಮನು ಬಾದಾಮಿಯನ್ನು ವಶಪಡಿಸಿಕೊಂಡು 'ವಾತಾಪಿಕೊಂಡನ್' ಎಂಬ ಬಿರುದನ್ನು ಧರಿಸಿದನು. ಪಲ್ಲವರು ಬಾದಾಮಿಯನ್ನು ಲೂಟಿ ಮಾಡಿದರು. ಮುಂದಿನ ಕೆಲವು ವರ್ಷಗಳವರೆಗೆ ಚಾಲುಕ್ಯರು ಪಲ್ಲವರ ಹಿಡಿತಕ್ಕೆ ಒಳಪಟ್ಟರು.

ಇಮ್ಮಡಿ ಪುಲಿಕೇಶಿಯು ಪ್ರಾಚೀನ ಭಾರತದ ಅಗ್ರಗಣ್ಯ ಅರಸರಲ್ಲಿ ಒಬ್ಬನು. ಹ್ಯೂಯನ್– ತ್ಸಾಂಗ್‌ನು ಪುಲಿಕೇಶಿಯನ್ನು ಅತ್ಯಂತ ಪರಾಕ್ರಮಿ ಸಾಮ್ರಾಟ ಎಂದು ಕರೆದಿದ್ದಾನೆ. ಇವನ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದಾ, ದಕ್ಷಿಣದಲ್ಲಿ ಮೈಸೂರು, ಪೂರ್ವದಲ್ಲಿ ಬಂಗಾಳ ಕೊಲ್ಲಿ ಮತ್ತು ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ದವರೆಗೂ ವಿಸ್ತರಿಸಿತ್ತು. ಪರ್ಷಿಯಾದ ದೊರೆ ಇಮ್ಮಡಿ ಖುಸ್ರು ಮತ್ತು ಇಮ್ಮಡಿ ಪುಲಿಕೇಶಿಯು ರಾಯಭಾರಿಗಳನ್ನು ವಿನಿಮಯ ಮಾಡಿಕೊಂಡರು. ಖುಸ್ರುವಿನ ರಾಯಭಾರಿ ಪುಲಿಕೇಶಿಗೆ ತಮ್ಮ ರಾಜನ ನಿರೂಪಗಳನ್ನು ಅರ್ಪಿಸುತ್ತಿರುವ ಚಿತ್ರ ಅಜಂತಾದ ಒಂದನೆಯ ಗುಹಾಲಯದಲ್ಲಿದೆ. ಇವನಿಗೆ 'ದಕ್ಷಿಣ ಪಥೇಶ್ವರ', 'ಸತ್ಯಾಶ್ರಯ', 'ಮಹಾರಾಜಾಧಿರಾಜ', 'ಪರಮೇಶ್ವರ', 'ಪೃಥ್ವಿವಲ್ಲಭ' ಇತ್ಯಾದಿ ಬಿರುದುಗಳಿದ್ದವು.

ಚಾಲುಕ್ಯ–ಪಲ್ಲವರ ಸಂಘರ್ಷ:

ಪಲ್ಲವ ಮತ್ತು ಚಾಲುಕ್ಯರ ನಡುವಿನ ಸಂಘರ್ಷವು ಸುಮಾರು ಒಂದು ಶತಮಾನದವರೆಗೆ ನಡೆಯಿತು. ಈ ಸಂಘರ್ಷದಲ್ಲಿ ಪ್ರಮುಖ ಪಾತ್ರ ವಹಿಸಿದವರು ಪಾಂಡ್ಯರು. ಕೃಷ್ಣ ತುಂಗಾಭದ್ರ ದೋ–ಆಬ್ ಪ್ರದೇಶಗಳ ಮೇಲೆ ಹಕ್ಕು ಸಾಧಿಸುವ ನಿಟ್ಟಿನಲ್ಲಿ ಈ ಇಬ್ಬರ ನಡುವೆ ದೀರ್ಘ ಸಂಘರ್ಷ ನಡೆಯಿತು.

ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಆರಂಭವಾದ ಪಲ್ಲವ ಚಾಲುಕ್ಯ ಸಂಘರ್ಷವು ಕೊನೆಯ ಚಾಲುಕ್ಯ ದೊರೆಗಳ ಕಾಲದವರೆಗೂ ಮುಂದುವರೆಯಿತು. ಮೊದಲ ಹಂತದಲ್ಲಿ ಇಮ್ಮಡಿ ಪುಲಿಕೇಶಿ ಪಲ್ಲವರ ಒಂದನೇ ಮಹೇಂದ್ರವರ್ಮನನ್ನು ಸೋಲಿಸಿದನು. ಆದರೆ ಅವನು ಮಹೇಂದ್ರವರ್ಮನ ಮಗನಾದ ಒಂದನೇ ನರಸಿಂಹವರ್ಮನ್‌ನಿಂದ ಸೋಲಬೇಕಾಯಿತು. ಇದರಿಂದಾಗಿ ಬಾದಾಮಿ ಕೆಲವು ವರ್ಷಗಳ ಕಾಲ ಪಲ್ಲವರ ವಶಕ್ಕೆ ಹೋಯಿತು.

ಹನ್ನೆರಡು ವರ್ಷಗಳ ಕಾಲ ಪಲ್ಲವರ ವಶದಲ್ಲಿದ್ದ ಬಾದಾಮಿಯನ್ನು ಇಮ್ಮಡಿ ಪುಲಕೇಶಿಯ ಮಗನಾದ ಒಂದನೇ ವಿಕ್ರಮಾದಿತ್ಯನು ತನ್ನ ವಶಕ್ಕೆ ಪಡೆದನು. ಇವನು ಪಲ್ಲವ ದೊರೆಗಳಾದ ಒಂದನೇ ನರಸಿಂಹವರ್ಮನ್,

ಎರಡನೇ ಮಹೇಂದ್ರವರ್ಮನ್ ಮತ್ತು ಒಂದನೇ ಪರಮೇಶ್ವರವರ್ಮನ್‌ರನ್ನು ಸೋಲಿಸಿದನು. ನಂತರ ಇವನ ಮಗನಾದ ವಿನಯಾದಿತ್ಯನು 2ನೇ ಮಹೇಂದ್ರವರ್ಮನನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು. ನಂತರ ಅಧಿಕಾರಕ್ಕೆ ಬಂದ ಇವನ ಮೊಮ್ಮಗ ವಿಜಯಾದಿತ್ಯನು ಪಲ್ಲವರನ್ನು ಸೋಲಿಸಿದನು. ಇವನು ಪಲ್ಲವ ಅರಸ 2ನೇ ನರಸಿಂಹವರ್ಮನನೊಡನೆ ಶಾಂತತೆಯನ್ನು ಕಾಯ್ದುಕೊಂಡಿದ್ದರಿಂದ ಕಂಚಿಯಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡವು.

ವಿಜಯಾದಿತ್ಯನ ಮಗನಾದ ಇಮ್ಮಡಿ ವಿಕ್ರಮಾದಿತ್ಯನ ಕಾಲಕ್ಕೆ ಪುನ: ಚಾಲುಕ್ಯ ಮತ್ತು ಪಲ್ಲವ ಸಂಘರ್ಷ ಆರಂಭವಾಯಿತು. ಇವನು ಕಂಚಿಯ ಮೇಲೆ ಮೂರು ಬಾರಿ ದಾಳಿ ಮಾಡಿದನು. ಇವನು ಸಾ.ಶ. 731ರಲ್ಲಿ ಪಲ್ಲವ ದೊರೆ 2ನೇ ಪರಮೇಶ್ವರವರ್ಮನ್‌ನನ್ನು ವಿಳಂದ ಎಂಬಲ್ಲಿ ಸೋಲಿಸಿದನು. ಸಾ.ಶ. 735ರಲ್ಲಿ ಪುನ: ದಾಳಿ ಮಾಡಿ ನಂದಿವರ್ಮನ್‌ನನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು. ಇವನು ಕಂಚಿಯ ರಾಜಸಿಂಹ ದೇವಾಲಯಕ್ಕೆ ಹೆಚ್ಚಿನ ದಾನ ನೀಡಿದನು ಮತ್ತು ತನ್ನ ವಿಜಯದ ಕುರಿತು ಅಲ್ಲಿ ಶಾಸನವನ್ನು ಬರೆಸಿದನು. ಸಾ.ಶ. 740ರ ಹೊತ್ತಿಗೆ ಪಲ್ಲವರು ಸಂಪೂರ್ಣವಾಗಿ ಸೋತುಹೋದರು. ರಾಷ್ಟ್ರಕೂಟರು ಚಾಲುಕ್ಯರ ಪ್ರಭಾವವನ್ನು ತಗ್ಗಿಸಿದ ನಂತರ ಚಾಲುಕ್ಯ ಮತ್ತು ಪಲ್ಲವರ ನಿರಂತರ ಸಂಘರ್ಷ ಕೊನೆಗೊಂಡಿತು. ಸುಮಾರು ನೂರು ವರ್ಷಗಳ ಕಾಲ ನಡೆದ ಚಾಲುಕ್ಯ ಪಲ್ಲವ ಸಂಘರ್ಷ ಈ ಎರಡೂ ಸಾಮ್ರಾಜ್ಯಗಳ ಅವನತಿಗೆ ಕಾರಣವಾಯಿತು

ಚಾಲುಕ್ಯರ ಸಾಂಸ್ಕೃತಿಕ ಕೊಡುಗೆಗಳು:

ಧರ್ಮ:

ಚಾಲುಕ್ಯ ದೊರೆಗಳು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಇವರು ವಿಷ್ಣುವಿನ ಪರಮ ಭಕ್ತರಾಗಿದ್ದರೂ ಶೈವ, ಜೈನ ಮತ್ತು ಬೌದ್ಧ ಧರ್ಮಗಳಿಗೆ ರಾಜಾಶ್ರಯ ನೀಡಿದ್ದರು. ಬಾದಾಮಿಯ ಗುಹಾಂತರ ದೇವಾಲಯಗಳು ಇವರ ಧರ್ಮಸಹಿಷ್ಣುತೆಗೆ ಹಿಡಿದ ಕನ್ನಡಿಯಾಗಿದೆ. ಇವರು ಅನೇಕ ದೇವಾಲಯಗಳನ್ನು ಕಟ್ಟಿಸಿ ದಾನದತ್ತಿ ನೀಡಿದರು. ಪುರೋಹಿತರಿಗೆ ರಾಜಾಶ್ರಯ ನೀಡಿ ಗೌರವಿಸಿದರು. ಯಜ್ಞ-ಯಾಗಗಳಿಗೆ ಪ್ರೋತ್ಸಾಹ ನೀಡಿದರು. ಚಾಲುಕ್ಯರ ಕಾಲದಲ್ಲಿ ಬೌದ್ಧ ಧರ್ಮವು ಅಸ್ತಿತ್ವದಲ್ಲಿತ್ತು ಎಂದು ಹ್ಯೂಯನ್-ತ್ಸಾಂಗ್‌ನು ಉಲ್ಲೇಖಿಸುತ್ತಾನೆ.

ಸಾಹಿತ್ಯ :

ಬಾದಾಮಿ ಚಾಲುಕ್ಯ ದೊರೆಗಳು ಅನೇಕ ಪಂಡಿತರಿಗೆ ರಾಜಾಶ್ರಯ ನೀಡಿದ್ದರು. ಇವರ ಕಾಲದಲ್ಲಿ ಅನೇಕ ಶಿಲಾಶಾಸನಗಳು ಕನ್ನಡ ಹಾಗು ಸಂಸ್ಕೃತ ಭಾಷೆಯಲ್ಲಿ ರಚನೆಗೊಂಡವು. ಮಹಾಕೂಟ ಸ್ತಂಭ ಶಾಸನವು ಒಂದನೇ ಕೀರ್ತಿವರ್ಮನ ಸಾಧನೆಯನ್ನು ವಿವರಿಸುತ್ತದೆ. ಇಮ್ಮಡಿ ಪುಲಕೇಶಿಯ ಸೊಸೆ ವಿಜಯಮಹಾದೇವಿ (ವಿಜ್ಜಿಕಾ, ವಿಜಯಭಟ್ಟರಿಕಾ) 'ಕೌಮುದಿ ಮಹೋತ್ಸವ' ಕೃತಿಯನ್ನು ರಚಿಸಿದಳು. ಇಮ್ಮಡಿ ಪುಲಿಕೇಶಿಯ ಆಸ್ಥಾನ ಕವಿ ರವಿಕೀರ್ತಿ ಐಹೊಳೆ ಶಾಸನ ರಚಿಸಿದನು. ಇದು ಇಮ್ಮಡಿ ಪುಲಕೇಶಿಯ ಸಾಧನೆಗಳನ್ನು ವಿವರಿಸುತ್ತದೆ. ಆದ್ದರಿಂದ ಈ ಶಾಸನವನ್ನು **'ಐಹೊಳೆ ಪ್ರಶಸ್ತಿ'** ಎಂದು ಕರೆಯಲಾಗಿದೆ. ಒಂದನೇ ಪುಲಕೇಶಿಯ ಬಾದಾಮಿ ಶಾಸನ, ಕಪ್ಪೆಅರಭಟ್ಟನ ಬಾದಾಮಿ ಶಾಸನ, ಮಂಗಳೇಶನ ಮಹಾಕೂಟ ಶಾಸನ ಮುಂತಾದ ಶಿಲಾಶಾಸನಗಳು ಚಾಲುಕ್ಯರ ಸಾಹಿತ್ಯ ಬೆಳವಣಿಗೆಯನ್ನು ಸೂಚಿಸುತ್ತವೆ.

ಕಲೆ ಮತ್ತು ವಾಸ್ತು ಶಿಲ್ಪ :

ಬಾದಾಮಿ ಚಾಲುಕ್ಯರು ಭಾರತೀಯ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಅದ್ಭುತ ಕೊಡುಗೆಗಳನ್ನು ನೀಡಿದ್ದಾರೆ. ದೇವಾಲಯದ ವಾಸ್ತುಶಿಲ್ಪದಲ್ಲಿ ಗರ್ಭಗೃಹ ಜೊತೆಗೆ ಸ್ತಂಭಮಂಟಪ (ನವರಂಗ) ಮತ್ತು ಸುಖನಾಸಿಗಳ ನಿರ್ಮಾಣ ಚಾಲುಕ್ಯರ ವಿಶಿಷ್ಟ ಕೊಡುಗೆ ಆಗಿದೆ. ಉತ್ತರದ ನಾಗರ ಮತ್ತು ದಕ್ಷಿಣದ ದ್ರಾವಿಡ ಶೈಲಿಗಳನ್ನು ಅನುಸರಿಸಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಇವರು ಕೆಂಪು ಮರಳುಗಲ್ಲುಗಳನ್ನು ಬಳಸಿ ದೇವಾಲಯಗಳನ್ನು ನಿರ್ಮಿಸಿದರು. ದೇವಾಲಯಗಳ ನಿರ್ಮಾಣದಲ್ಲಿ ಇವರು ಅನೇಕ ಪ್ರಯೋಗಗಳನ್ನು ಮಾಡಿದರು. ಇವರು ಚಿಕ್ಕ ಚಿಕ್ಕ ದೇವಾಲಯಗಳ ಮಾದರಿಯನ್ನು ನಿರ್ಮಿಸಿ ಅವುಗಳನ್ನು ಆಧರಿಸಿ ಮುಖ್ಯ ದೇವಾಲಯಗಳನ್ನು ನಿರ್ಮಿಸಿದರು. ಚಾಲುಕ್ಯರ ಕಲೆಯು ಐಹೊಳೆಯಲ್ಲಿ ಜನ್ಮತಾಳಿ ಬಾದಾಮಿ ಮತ್ತು ಪಟ್ಟದಕಲ್ಲಿನಲ್ಲಿ ಬೆಳೆಯಿತು. ಈ ಹಿನ್ನಲೆಯಲ್ಲಿ ಪರ್ಸಿಬ್ರೌನ್ ಚಾಲುಕ್ಯರ ವಾಸ್ತುಶಿಲ್ಪವನ್ನು "ಭಾರತೀಯ ದೇವಾಲಯಗಳ ವಾಸ್ತುಶಿಲ್ಪದ ತೊಟ್ಟಿಲು" ಎಂದಿದ್ದಾರೆ. ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಇವರ ಕಲೆಯ ಪ್ರಮುಖ ಕೇಂದ್ರಗಳು.

ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪದ ಪ್ರಮುಖ ಲಕ್ಷಣಗಳು

1. ಚಿಕ್ಕದಾದ ತಳವಿನ್ಯಾಸ,
2. ಕುದುರೆ ಲಾಳಾಕೃತಿ ತಳವಿನ್ಯಾಸ
3. ಚೌಕಾಕಾರ ಗರ್ಭಗೃಹ
4. ಒಳ ಪ್ರದಕ್ಷಿಣಪಥ
5. ಮುಖಮಂಟಪ, ನವರಂಗ, ಸುಕನಾಸಿ ಮತ್ತು ಗರ್ಭಗೃಹದ ಮೇಲೆ ಪಿರಾಮಿಡ್ಡಿನಾಕೃತಿ ಶಿಖರ
6. ಏಕಕೂಟ, ದ್ವಿಕೂಟ, ತ್ರಿಕೂಟ ದೇವಾಲಯಗಳ ರಚನೆ.

ಬಾದಾಮಿ:

ಗುಹಾಂತರ ದೇವಾಲಯಗಳು

ಚಾಲುಕ್ಯರು ಬಾದಾಮಿಯಲ್ಲಿ ಬೃಹತ್ ಗುಡ್ಡವನ್ನು ಕೊರೆದು ನಿರ್ಮಿಸಿದ ನಾಲ್ಕು ಗುಹಾಂತರ ದೇವಾಲಯಗಳು ನೋಡುಗರ ಗಮನ ಸೆಳೆಯುತ್ತವೆ. ಇವು ಮುಖಮಂಟಪ, ದೊಡ್ಡ ರಂಗಮಂಟಪ ಮತ್ತು ಗರ್ಭಗೃಹಗಳನ್ನು ಹೊಂದಿವೆ. ಮೊದಲನೇ ಗುಹೆ ಶೈವ ಧರ್ಮಕ್ಕೆ ಸೇರಿದೆ. ಇಲ್ಲಿರುವ ಅರ್ಧನಾರೀಶ್ವರ ಮತ್ತು ನಟರಾಜನ ಶಿಲ್ಪಗಳು ಆಕರ್ಷಣೀಯವಾಗಿವೆ. ಎರಡನೇ ಮತ್ತು ಮೂರನೇ ಗುಹೆಗಳು ವೈಷ್ಣವ ಧರ್ಮಕ್ಕೆ ಸೇರಿವೆ. ಎರಡನೇ ಗುಹಾಲಯದಲ್ಲಿರುವ ವರಾಹ ಮತ್ತು ವಾಮನ ಉಬ್ಬು ಶಿಲ್ಪಗಳು ಗಮನಾರ್ಹವಾಗಿವೆ. ಮೂರನೇ ಗುಹೆಯು ಎಲ್ಲವುಗಳಿಗಿಂತ ದೊಡ್ಡದು. ಈ ಗುಹೆಯನ್ನು ಮಂಗಳೇಶನು ಕೆತ್ತಿಸಿದನು. ಈ



ಗುಹಾಂತ ದೇವಾಲಯ, ಬಾದಾಮಿ

ಗುಹಾಲಯದಲ್ಲಿರುವ ಭೂದೇವಿ, ಶೇಷನ ಮೇಲೆ ಕುಳಿತಂತಿರುವ ವಿಷ್ಣು ಹಾಗೂ ನರಸಿಂಹ, ವಾಮನ, ಬಲರಾಮ, ಹರಿಹರ ಶಿಲ್ಪಗಳು ನೋಡುಗರ ಮನ ಸೆಳೆಯುತ್ತವೆ. ನಾಲ್ಕನೇ ಗುಹೆ ಎಲ್ಲವುಗಳಿಗಿಂತ ಚಿಕ್ಕದು. ಇದು ಜೈನ ಗುಹೆ ಆಗಿದೆ. ಈ ಗುಹಾಲಯದಲ್ಲಿ ಮಹಾವೀರ, ಮಹಾವೀರನ ಶಿಷ್ಯ ಗೌತಮ ಮತ್ತು 23ನೇ ತೀರ್ಥಂಕರನಾದ ಪಾರ್ಶ್ವನಾಥನ ಶಿಲ್ಪಗಳನ್ನು ಕಾಣಬಹುದು. ಮೇಲಿನ ಈ ಬಸದಿಯನ್ನು ಕ್ರಮೇಣ ಮೇಲಣ ಅಥವಾ ಮೇಣ ಬಸದಿಗಳೆಂದು ಕರೆಯಲಾಗಿದೆ.

ಬಾದಾಮಿಯು ಗುಹಾಂತರ ದೇವಾಲಯಗಳಿಗೆ ಪ್ರಸಿದ್ಧಿಯಾಗಿದ್ದರೂ ಇಲ್ಲಿ ಕೆಲವು ಕಲಾತ್ಮಕ ದೇವಾಲಯಗಳನ್ನು ಕಾಣಬಹುದು. ಅವುಗಳಲ್ಲಿ ಮಾಲಗಿತ್ತಿ ಶಿವಾಲಯ, ಭೂತನಾಥ ದೇವಾಲಯ, ಲಕುಮೀಶ ದೇವಾಲಯ ಮತ್ತು ವಿರೂಪಾಕ್ಷ ದೇವಾಲಯ ಪ್ರಮುಖವಾಗಿವೆ.

ಐಹೊಳೆ: ಬಾದಾಮಿ ಚಾಲುಕ್ಯರ ಕಲೆಯ ಮತ್ತೊಂದು ಕೇಂದ್ರವಾಗಿದ್ದ ಐಹೊಳೆ ಒಮ್ಮೆ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಚಾಲುಕ್ಯರ ಕಲೆಯ ಅನೇಕ ದೇವಾಲಯಗಳನ್ನು ಇಲ್ಲಿ ಕಾಣಬಹುದು.

ಲಾಡ್‌ಖಾನ್ ದೇವಾಲಯ

ಇದು ಬಾದಾಮಿ ಚಾಲುಕ್ಯರ ಕಲೆಯ ಆರಂಭಿಕ ದೇವಾಲಯವಾಗಿದೆ. ಮುಖಮಂಟಪ ಮತ್ತು ಗರ್ಭಗೃಹಗಳನ್ನು ಹೊಂದಿರುವ ಈ ದೇವಾಲಯದ ಮುಂದೆ ನಂದಿ ವಿಗ್ರಹವಿದೆ. ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗೃಹವಿರುವುದು ಈ ದೇವಾಲಯದ ವೈಶಿಷ್ಟ್ಯವಾಗಿದೆ . ಗರ್ಭಗೃಹದ ಬಾಗಿಲ ಮೇಲೆ ಗರುಡನ ಶಿಲ್ಪವಿರುವುದನ್ನು ಗಮನಿಸಿದ ಕಲಾ ವಿಮರ್ಶಕ ಹೆನ್ರಿ ಕಸಿನ್ಸ್ ಇದು ವೈಷ್ಣವ ದೇವಾಲಯ ಎಂದು ಕರೆದಿದ್ದಾರೆ. ಆದರೆ ಗರ್ಭಗೃಹದಲ್ಲಿ ಶಿವಲಿಂಗವಿತ್ತು ಎನ್ನುವುದು ಇಲ್ಲಿರುವ ನಂದಿ ವಿಗ್ರಹದಿಂದ ತಿಳಿಯುವುದು. ಲಾಡ್‌ಖಾನ್ ಎಂಬ ಮುಸ್ಲಿಂ ಸಂತ ಇಲ್ಲಿ ಹೆಚ್ಚು ದಿನಗಳ ಕಾಲ ವಾಸವಾಗಿದ್ದರಿಂದ ಜನರು ಈ ದೇವಾಲಯವನ್ನು ಲಾಡ್‌ಖಾನ್ ದೇವಾಲಯವೆಂದು ಕರೆಯುತ್ತಾರೆ.

ದುರ್ಗದ ದೇವಾಲಯ:

ಐಹೊಳೆ ದೇವಾಲಯಗಳಲ್ಲಿಯೇ ದುರ್ಗದ ದೇವಾಲಯ ತುಂಬಾ ವಿಶಿಷ್ಟವಾಗಿದೆ. ಕುದುರೆ ಲಾಳಾಕೃತಿ ಮತ್ತು ಬೌದ್ಧ ಚೈತ್ಯಾಲಯ ವಿನ್ಯಾಸದಲ್ಲಿರುವ ಈ ದೇವಾಲಯವು ಸೂರ್ಯ ದೇವಾಲಯವಾಗಿದೆ. ದೇವಾಲಯದ ಶಿಖರವು ಒರಿಸ್ಸಾದ ದೇವಾಲಯಗಳ ಶಿಖರವನ್ನು ಹೋಲುತ್ತದೆ. ಎರಡು ಸಾಲು ಕಂಬಗಳ ರಂಗಮಂಟಪ ಮತ್ತು ಎರಡೂ ಪಕ್ಕಗಳಲ್ಲಿನ ಹಜಾರವು ಗರ್ಭಗೃಹದವರೆಗೆ ಹೋಗಿ ಅರ್ಧವೃತ್ತದಲ್ಲಿ ಸೇರಿರುವುದು ನೋಡುಗರನ್ನು ವಿಸ್ಮಯಗೊಳಿಸುತ್ತದೆ. ದೇವಾಲಯದ ಸುತ್ತ ಕೋಟೆಯ ಗೋಡೆ



ದುರ್ಗದ ದೇವಾಲಯ, ಐಹೊಳೆ

ಇದ್ದುದರಿಂದ ದುರ್ಗ (ಕೋಟೆ) ದೇವಾಲಯ ಎಂದು ಕರೆಯಲಾಗಿದೆ. ದುರ್ಗದ ದೇವಾಲಯದ ಮುಂಭಾಗದಲ್ಲಿ ಕೊಂತಿಗುಡಿಗಳ ಗುಂಪು ಕಾಣಿಸುತ್ತದೆ. ಇವು ಕೂಡ ಬಾದಾಮಿ ಚಾಲುಕ್ಯರ ಪ್ರಾಚೀನ ಗುಡಿಗಳಾಗಿದ್ದು ಪ್ರಯೋಗಾರ್ಥವಾಗಿ ನಿರ್ಮಿಸಿದ ಮಾದರಿ ದೇವಾಲಯಗಳಾಗಿವೆ.

ಹುಚ್ಚಿಮಲ್ಲಿ ಗುಡಿ ದೇವಾಲಯವು ಸರಳ ರಚನೆಯನ್ನು ಹೊಂದಿರುವ ಚಿಕ್ಕದಾದ ಗುಡಿಯಾಗಿದೆ. ಇದು ಚೌಕಾಕಾರದ ಕಂಬಗಳಿಂದ ಕೂಡಿದೆ.

ಮೇಗುತಿ ಜೈನ ದೇವಾಲಯ:

ಐಹೊಳೆ ಪಕ್ಕದ ಚಿಕ್ಕ ಗುಡ್ಡದ ಮೇಲೆ ಇರುವ ಮೇಗುತಿ ಜೈನ ದೇವಾಲಯವನ್ನು ರವಿಕೀರ್ತಿ ಕಟ್ಟಿಸಿದನು. ಈ ದೇವಾಲಯದ ಪೂರ್ವ ಗೋಡೆಯ ಮೇಲೆ ಐಹೊಳೆ ಶಾಸನವನ್ನು ಬರೆಯಲಾಗಿದೆ. ಮುಖಮಂಟಪ, ಮಧ್ಯರಂಗ ಮಂಟಪ ಮತ್ತು ಗರ್ಭಗೃಹಗಳನ್ನು ಹೊಂದಿರುವ ಈ ದೇವಾಲಯ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಗುಡ್ಡದ ಮೇಲೆ ಕಟ್ಟಲಾದ ಇದನ್ನು ಮೇಲುಗುಡಿ ಎಂದು ಕರೆಯುತ್ತಿದ್ದರು. ಕ್ರಮೇಣ ಮೇಗುಡಿ, ಮೇಗುತಿ ದೇವಾಲಯವಾಗಿರಬೇಕು ಎನ್ನುವುದು ವಿದ್ವಾಂಸರ ಅಭಿಪ್ರಾಯ.

ಐಹೊಳೆಯ ರಾವಳಗುಡಿ ಎಂಬ ಗುಹೆಯಲ್ಲಿರುವ ಶಿವಲಿಂಗ, ವರಾಹ ಅವತಾರ, ಕಾಳಿ ಮತ್ತು ನಟರಾಜ ಉಬ್ಬು ಶಿಲ್ಪಗಳು ಗಮನ ಸೆಳೆಯುತ್ತವೆ. ಇಲ್ಲಿನ ಇತರೆ ಪ್ರಮುಖ ದೇವಾಲಯಗಳೆಂದರೆ– ಜ್ಯೋತಿರ್ಲಿಂಗ, ಮಲ್ಲಿಕಾರ್ಜುನ ಮತ್ತು ಸಿದ್ದೇಶ್ವರ ಮುಂತಾದವುಗಳು.

ಐಹೊಳೆಯಿಂದ ಅರ್ಧ ಮೈಲು ದೂರದಲ್ಲಿರುವ ರಾಮಲಿಂಗ ದೇವಾಲಯವು ಮೂರು ಗರ್ಭಗೃಹಗಳನ್ನು ಹೊಂದಿದೆ.

ಪಟ್ಟದಕಲ್ಲು :

ಪಟ್ಟದಕಲ್ಲಿನ ಪ್ರಾಚೀನ ಹೆಸರು **'ಕಿಸುವೊಳಲು'**. ಬಾದಾಮಿ ಚಾಲುಕ್ಯರ ಅನೇಕ ದೇವಾಲಯಗಳು ಇಲ್ಲಿವೆ. ಕಾಶಿವಿಶ್ವನಾಥ, ಪಾಪನಾಥ, ಜಂಬುಲಿಂಗೇಶ್ವರ ದೇವಾಲಯಗಳು ನಾಗರ ಶೈಲಿಯಲ್ಲಿದ್ದರೆ, ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯಗಳು ದ್ರಾವಿಡ ಶೈಲಿಯಲ್ಲಿವೆ.



ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು,

ವಿರೂಪಾಕ್ಷ (ಲೋಕೇಶ್ವರ ದೇವಾಲಯ) ದೇವಾಲಯವು ಪಟ್ಟದ ಕಲ್ಲಿನಲ್ಲಿರುವ ದೇವಾಲಯಗಳಲ್ಲಿಯೇ ಮುಖ್ಯವಾದುದಾಗಿದೆ. 2ನೇ ವಿಕ್ರಮಾದಿತ್ಯನು ಪಲ್ಲವರ ಮೇಲೆ ಮೂರುಬಾರಿ ಗಳಿಸಿದ ಗೆಲುವಿನ ನೆನಪಿಗಾಗಿ ಆತನ ಮಹಾರಾಣಿ ಲೋಕಮಹಾದೇವಿ

ಇದನ್ನು ಕಟ್ಟಿಸಿದಳು. ಈ ದೇವಾಲಯವನ್ನು ಕಟ್ಟಿದ ಶಿಲ್ಪಿ ಅನಿರ್ವಾತಾಚಾರಿ ಗುಂಡ. ಇದು 224 ಅಡಿ ಉದ್ದ, 105 ಅಡಿ ಅಗಲವಿದೆ. ದೇವಾಲಯವನ್ನು ಸಿಂಹಗಳು ಮತ್ತು ತೊಲೆಗಳನ್ನು ಆನೆಗಳು ಹೊತ್ತುಕೊಂಡು ನಿಂತಂತೆ ಕಾಣುತ್ತವೆ. ದೇವಾಲಯದ ಮುಂಭಾಗದ ನಂದಿ ಮಂಟಪದಲ್ಲಿ ಬೃಹತ್ ನಂದಿ ವಿಗ್ರಹವಿದೆ. ಮುಖಮಂಟಪ, ಮಹಾಮಂಟಪ, ಗರ್ಭಗೃಹಗಳನ್ನು ಹೊಂದಿರುವ ಈ ದೇವಾಲಯವು ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದೆ. ಅರ್ಧಮಂಟಪದಲ್ಲಿರುವ ಸೂರ್ಯ ಮೂರ್ತಿ ಶಿಲ್ಪವು ಅತ್ಯಂತ ಸುಂದರವಾಗಿದೆ.

ಮಲ್ಲಿಕಾರ್ಜುನ

ಈ ದೇವಾಲಯವನ್ನು ಹೋಲುವಂತಹ ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ದೇವಾಲಯವು ಇದರ ಪಕ್ಕದಲ್ಲಿದೆ. ಈ ದೇವಾಲಯವನ್ನು ಎರಡನೇ ವಿಕ್ರಮಾದಿತ್ಯನ ಇನ್ನೊಬ್ಬ ರಾಣಿ ತ್ರೈಲೋಕಮಹಾದೇವಿ ಕಟ್ಟಿಸಿದಳು.

ಮಹಾಕೂಟದಲ್ಲಿರುವ ಮಹಾಕೂಟೇಶ್ವರ ದೇವಾಲಯವೂ ಬಾದಾಮಿ ಚಾಲುಕ್ಯರ ಕಲೆಯನ್ನು ಪ್ರದರ್ಶಿಸುತ್ತದೆ

ಪಲ್ಲವರು

ಶಾತವಾಹನರ ನಂತರ ಪಲ್ಲವರು ಏಳಿಗೆಗೆ ಬಂದರು. ಪಲ್ಲವರ ಇತಿಹಾಸ ಶಿವಸ್ಕಂದವರ್ಮನಿಂದ ಆರಂಭವಾಗುತ್ತದೆ. ಕಂಚಿ ಅವರ ರಾಜಧಾನಿಯಾಗಿತ್ತು. ನಂದಿ ಅವರ ರಾಜಲಾಂಛನವಾಗಿತ್ತು. ಸುಮಾರು ಸಾ.ಶ. 3ನೇ ಶತಮಾನದಲ್ಲಿ ಅಧಿಕಾರಕ್ಕೆ ಬಂದ ಸಿಂಹವಿಷ್ಣುವಿನಿಂದ ಪಲ್ಲವ ಇತಿಹಾಸ ಸ್ಪಷ್ಟವಾಗಿ ತಿಳಿಯುತ್ತದೆ. ಇವನ ನಂತರದ ಪಲ್ಲವ ದೊರೆಗಳು ಇಂತಿದ್ದಾರೆ– ಒಂದನೇ ಮಹೇಂದ್ರವರ್ಮ, ಒಂದನೇನರಸಿಂಹವರ್ಮನ್, 2ನೇ ಮಹೇಂದ್ರವರ್ಮನ್, 1ನೇ ಪರಮೇಶ್ವರವರ್ಮನ್, 2ನೇ ನರಸಿಂಹವರ್ಮನ್, 2ನೇ ಪರಮೇಶ್ವರವರ್ಮನ್, ನಂದಿವರ್ಮನ್, ದಂತಿವರ್ಮನ್, 3ನೇ ನಂದಿವರ್ಮನ್ ಮತ್ತು ಅಪರಾಜಿತವರ್ಮನ್. ಪಲ್ಲವರ ಅತ್ಯಂತ ಪ್ರಮುಖ ಕೊಡುಗೆ ಕಲೆ ಮತ್ತು ವಾಸ್ತು ಕ್ಷೇತ್ರದಲ್ಲಾಗಿತ್ತು.

ಪಲ್ಲವರ ಕಲೆ ಮತ್ತು ವಾಸ್ತುಶಿಲ್ಪ

ದಕ್ಷಿಣ ಭಾರತದ ಕಲೆ ಮತ್ತು ವಾಸ್ತುಶಿಲ್ಪ ಇತಿಹಾಸದಲ್ಲಿ ಪಲ್ಲವರು ಅಗ್ರಗಣ್ಯರು. ಇವರ ಕಾಲದಲ್ಲಿ ದ್ರಾವಿಡ ಶೈಲಿಯ ಕಲೆಯು ಅರಳಿತು. ಪಲ್ಲವ ದೊರೆಗಳು ಕಲಾಪ್ರಿಯರೂ ಮತ್ತು ಪೋಷಕರು ಆಗಿದ್ದರು. ಕಂಚಿ, ಮಹಾಬಲಿಪುರಂಗಳಲ್ಲಿ ಇವರ ಕಲೆಯ ಪ್ರೌಢಿಮೆಯನ್ನು ಕಾಣಬಹುದು.

ದ್ರಾವಿಡ ಶೈಲಿ(ಪಲ್ಲವ ಶೈಲಿ)ಯ ಪ್ರಮುಖ ಲಕ್ಷಣಗಳು :

1. ಕಂಬಗಳಿಂದ ಕೂಡಿದ ವಿಶಾಲ ಸಭಾಂಗಣ
2. ಕಂಬಗಳ ಬುಡದಲ್ಲಿ ಸಿಂಹದ ಆಕೃತಿ ರಚನೆ.
3. ಪಿರಮಿಡ್ಡಿನಾಕೃತಿ ಶಿಖರ
4. ಚಚ್ಚೌಕಾಕಾರ ಗೋಡೆಯಾವೃತ ವಿಶಾಲ ಪ್ರಾಕಾರ
5. ಶಿಲಾರಥಗಳ ರಚನೆ

ಕಂಚಿ :

ಕಂಚಿಯನ್ನು ದೇವಾಲಯಗಳ ನಗರ ಎಂದು ಕರೆಯಲಾಗಿದೆ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೆ: ಕಾಮಾಕ್ಷಿ, ಏಕಾಂಬರನಾಥ, ವರದರಾಜ, ಮಹಾಕಾಳೇಶ್ವರ, ಕೈಲಾಸನಾಥ ದೇವಾಲಯ, ಮುಂತಾದವುಗಳು. ಕಾಮಾಕ್ಷಿ ಪಲ್ಲವರ ಅಧಿ ದೇವತೆ. ಕಂಚಿಯನ್ನು ಶಿವ ಕಂಚಿ, ವಿಷ್ಣು ಕಂಚಿ ಮತ್ತು ಜೈನ ಕಂಚಿ ಎಂದು ಕರೆಯುತ್ತಾರೆ. ಶಿವ ಕಂಚಿಯಲ್ಲಿ ಶಿವ ದೇವಾಲಯಗಳೂ, ವಿಷ್ಣು ಕಂಚಿಯಲ್ಲಿ ವಿಷ್ಣು ದೇವಾಲಯಗಳೂ ಮತ್ತು ಜೈನ ಕಂಚಿಯಲ್ಲಿ ಜೈನ ದೇವಾಲಯಗಳು ಅಧಿಕ ಸಂಖ್ಯೆಯಲ್ಲಿವೆ.

ಮಹಾಬಲಿಪುರಂ

ಮಹಾಬಲಿಪುರಂ ಪಾರ್ಲಾ ನದಿ ಸಮೀಪದಲ್ಲಿದೆ. ಇದು ಒಂದನೇ ನರಸಿಂಹವರ್ಮನ್‌ನ ರಾಜಧಾನಿಯಾಗಿತ್ತು. ಇಲ್ಲಿರುವ ಅನೇಕ ದೇವಾಲಯಗಳು, ಭವನಗಳು, ಮತ್ತು ಅರಮನೆಗಳು ಕಲಾಪ್ರೇಮಿಗಳನ್ನು ಆಕರ್ಷಿಸುತ್ತವೆ. ಬಂಡೆಯಲ್ಲಿ ಕೊರೆಯಲಾದ ಹತ್ತು ಮಂಟಪಗಳು, ರಥಗಳು, ಸೌಂದರ್ಯಕ್ಕೆ ಮತ್ತು ಕಲಾ ಪ್ರತಿಭೆಗೆ ಜಗತ್ಪ್ರಸಿದ್ಧಿಯಾಗಿವೆ. ಮಂಟಪಗಳ ಗೋಡೆಗಳ ಮೇಲೆ ಕೆತ್ತಲಾದ ಪೌರಾಣಿಕ ಶಿಲ್ಪಗಳು ಗಮನ ಸೆಳೆಯುತ್ತವೆ. ವರಾಹ, ಮಹಿಷಾಸುರಮರ್ಧಿನಿ ಮಂಟಪಗಳ ಶಿಲ್ಪಗಳು ಅತ್ಯಾಕರ್ಷಕವಾಗಿವೆ. ಇಲ್ಲಿನ ಬೃಹತ್ ಶಿಲಾ ಬಂಡೆಗಳ ಮೇಲೆ ಕೊರೆಯಲಾದ ಶಿಲ್ಪಗುಚ್ಛ ಪಲ್ಲವರ ಕಲೆಯ ವಿಶಿಷ್ಠ ಕೊಡುಗೆಯಾಗಿದೆ. ಇದನ್ನು ಮೊದಲು ಅರ್ಜುನನ ತಪಸ್ಸಿನ ಶಿಲಾಗುಚ್ಛ ಎಂದು ಕರೆಯುತ್ತಿದ್ದರು. ಆದರೆ, ನಂತರದಲ್ಲಿ ಅದು ದೇವಗಂಗೆಯು ಭೂಮಿಗೆ ಇಳಿದು ಬರುತ್ತಿರುವ ದೃಶ್ಯ ಎಂದು ಪರಿಗಣಿಸಲಾಯಿತು..

ಏಳು ಪಗೋಡಗಳೆಂದು ವಿಶ್ವ ಪ್ರಸಿದ್ಧವಾಗಿರುವ ಶಿಲಾ ರಥಗಳು ಪಲ್ಲವರ ಕಲೆಯ ಮೇರು ಕೊಡುಗೆಯಾಗಿವೆ. ಒಟ್ಟು ಎಂಟು ಶಿಲಾರಥಗಳಿವೆ. ಪ್ರತಿಯೊಂದು ರಥವನ್ನು ದೇವಾಲಯದ ವಿನ್ಯಾಸದಲ್ಲಿ ಕೆತ್ತಲಾಗಿದೆ. ಈ ರಥಗಳಿಗೆ ಪಾಂಡವರ ಮತ್ತು ದ್ರೌಪದಿಯ ಹೆಸರುಗಳನ್ನು ನಾಮಕರಣ ಮಾಡಲಾಗಿದೆ. ದ್ರೌಪದಿ ರಥ ಚಿಕ್ಕದು, ಧರ್ಮರಾಯನ ರಥ ದೊಡ್ಡದು. ರಥಗಳಲ್ಲಿರುವ ಶಿಲ್ಪಾಕೃತಿಗಳು ಸೌಂದರ್ಯಕ್ಕೆ ಹೆಸರಾಗಿವೆ.

ಚಟುವಟಿಕೆ

ದ್ರಾವಿಡ ಶೈಲಿಯನ್ನು ಹೊಯ್ಸಳ ಶೈಲಿಯೊಂದಿಗೆ ಹೋಲಿಕೆ ಮಾಡಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ವರ್ಧನರ ಶ್ರೇಷ್ಠ ದೊರೆ ಯಾರು?
2. ಹರ್ಷವರ್ಧನನ ರಾಜಧಾನಿ ಯಾವುದು?
3. ಹರ್ಷವರ್ಧನನ ಸಹೋದರಿ ಯಾರು?
4. ಹರ್ಷಚರಿತೆ ಬರೆದವರು ಯಾರು?
5. ಉತ್ತರಪಥೇಶ್ವರ ಎಂದು ಯಾರು ಪ್ರಸಿದ್ಧರಾಗಿದ್ದರು?
6. ಕನೌಜಿನ ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದವರು ಯಾರು?
7. ಪ್ರಯಾಗ ಬೌದ್ಧ ಮಹಾಸಮ್ಮೇಳನ ಯಾವಾಗ ನಡೆಯಿತು?

8. ಕದಂಬ ವಂಶದ ಸ್ಥಾಪಕ ಯಾರು?
9. ಕನ್ನಡದ ಮೊದಲ ಶಾಸನ ಯಾವುದು?
10. ಗಂಗರ ಪ್ರಸಿದ್ಧ ದೊರೆ ಯಾರು?
11. ಆರಂಭಿಕ ಚಾಲುಕ್ಯರ ರಾಜಧಾನಿ ಯಾವುದಾಗಿತ್ತು?
12. ಬಾದಾಮಿ ಚಾಲುಕ್ಯರ ಪ್ರಸಿದ್ಧ ದೊರೆ ಯಾರು?
13. ಬಾದಾಮಿ ಚಾಲುಕ್ಯರ ರಾಜಲಾಂಛನ ಯಾವುದು?
14. ದಕ್ಷಿಣಪಥೇಶ್ವರ ಎಂದು ಪ್ರಸಿದ್ಧರಾಗಿದ್ದವರು ಯಾರು?
15. ಐಹೊಳೆ ಶಾಸನವನ್ನು ರಚಿಸಿದವರು ಯಾರು?
16. ವಿಜಯಾ ಭಟ್ಟಾರಿಕೆ ರಚಿಸಿದ ಕೃತಿಯನ್ನು ಹೆಸರಿಸಿ.
17. ಹ್ಯೂಯೆನ್ ತ್ಸಾಂಗ್‌ನ ಕೃತಿ ಯಾವುದು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಹರ್ಷವರ್ಧನನ ತಂದೆ ತಾಯಿಗಳು ಯಾರು?
2. ಹರ್ಷವರ್ಧನನ ಯಾವುದಾದರು ಎರಡು ಸಾಹಿತ್ಯ ಕೃತಿಗಳನ್ನು ಹೆಸರಿಸಿ.
3. ಗೊಮ್ಮಟೇಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಿದವರು ಯಾರು ಮತ್ತು ಎಲ್ಲಿ?
4. ಇಮ್ಮಡಿ ಪುಲಿಕೇಶಿಯ ಯಾವುದಾದರು ಎರಡು ಬಿರುದುಗಳನ್ನು ಹೆಸರಿಸಿರಿ.
5. ಐಹೊಳೆಯಲ್ಲಿರುವ ಯಾವುದಾದರು ಎರಡು ದೇವಾಲಯಗಳನ್ನು ಹೆಸರಿಸಿ.
6. ಪಟ್ಟದಕಲ್ಲಿನಲ್ಲಿರುವ ಯಾವುದಾದರು ಎರಡು ದೇವಾಲಯಗಳನ್ನು ಹೆಸರಿಸಿ.
7. ಪಲ್ಲವರ ವಾಸ್ತು ಶಿಲ್ಪದ ಯಾವುದಾದರುಎರಡು ಪ್ರಮುಖ ಕೇಂದ್ರಗಳನ್ನು ಹೆಸರಿಸಿ.

III. ಈ ಕೆಳಗಿನ ಪ್ರಶ್ನೆಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಹರ್ಷವರ್ಧನನ ಸಾಧನೆಗಳನ್ನು ವಿವರಿಸಿ.
2. ಚಾಲುಕ್ಯ ಮತ್ತು ಪಲ್ಲವ ಸಂಘರ್ಷವನ್ನು ವಿವರಿಸಿ.
3. ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಬಾದಾಮಿ ಚಾಲುಕ್ಯರ ಕೊಡುಗೆಗಳ ಬಗ್ಗೆ ಬರೆಯಿರಿ.

IV. ಈ ಕೆಳಗಿನ ಪ್ರಶ್ನೆಗೆ 30– 40 ವಾಕ್ಯಗಳಲ್ಲಿ ಉತ್ತರಿಸಿ.

1. ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ವಿವರಿಸಿ.

❊ ❊ ❊ ❊

ಅಧ್ಯಾಯ 4.8

ರಾಷ್ಟ್ರಕೂಟರು

ರಾಷ್ಟ್ರಕೂಟರು ದಕ್ಷಿಣ ಭಾರತದಲ್ಲಿ ಬೃಹತ್ ಸಾಮ್ರಾಜ್ಯವನ್ನು ಸ್ಥಾಪಿಸಿ ದೀರ್ಘಕಾಲ ಆಳ್ವಿಕೆ ನಡೆಸಿದರು. ಅವರು ಸಾ.ಶ. 753 ರಿಂದ 978ರ ವರೆಗೆ ಆಳಿದರು. ಇವರು ಮೊದಲು ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದರು. ರಾಷ್ಟ್ರಕೂಟ ಎಂಬ ಪದವು ಅಧಿಕಾರವನ್ನು ಸೂಚಿಸುತ್ತದೆ. ರಾಷ್ಟ್ರ ಎಂದರೆ 'ದೇಶ' ಮತ್ತು ಕೂಟ ಎಂದರೆ 'ಮುಖ್ಯಸ್ಥ' ಎಂದರ್ಥ. ಶಿಲಾಶಾಸನಗಳಲ್ಲಿ ಇವರು ತಮ್ಮನ್ನು ಲಟ್ಟಲೂರು ಪುರವರಾಧೀಶ್ವರರು ಎಂದು ಕರೆದುಕೊಂಡಿದ್ದರಿಂದ ಇವರು ಮಹಾರಾಷ್ಟ್ರದ ಲತ್ತಲೂರು(ಲಾತೂರು) ಪ್ರದೇಶಕ್ಕೆ ಸೇರಿದವರೆಂದು ತಿಳಿಯುವುದು. ಗರುಡ ಇವರ ರಾಜ ಲಾಂಛನ. ಗುಲ್ಬರ್ಗ ಜಿಲ್ಲೆಯ ಮಾನ್ಯಖೇಟ(ಮಾಳಖೇಡ) ಇವರ ರಾಜಧಾನಿಯಾಗಿತ್ತು.

ದಂತಿದುರ್ಗನು ರಾಷ್ಟ್ರಕೂಟರ ಮೊದಲ ದೊರೆ. ಇವನು ಬಾದಾಮಿ ಚಾಲುಕ್ಯರನ್ನು ಸೋಲಿಸಿದನು. 1ನೇ ಕೃಷ್ಣನು ಇವನ ಉತ್ತರಾಧಿಕಾರಿಯಾದನು. ಇವನು ಚಾಲುಕ್ಯ ದೊರೆ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸಿದನು. ಈತನು ಎಲ್ಲೋರದಲ್ಲಿ ಏಕಶಿಲಾ ಕೈಲಾಸನಾಥ ದೇವಾಲಯವನ್ನು ಕಟ್ಟಿಸಿದನು. ನಂತರ ಅಧಿಕಾರಕ್ಕೆ ಬಂದ 2ನೇ ಗೋವಿಂದನು ದುರ್ಬಲವಾಗಿದ್ದರಿಂದ ಅವನನ್ನು ಪದಚ್ಯುತಿಗೊಳಿಸಿ ಧ್ರುವನು ಅಧಿಕಾರಕ್ಕೆ ಬಂದನು.

ಧ್ರುವ: (ಸಾ.ಶ. 780– 793)

ರಾಷ್ಟ್ರಕೂಟರ ಆರಂಭಿಕ ದೊರೆಗಳಲ್ಲಿ ಧ್ರುವನು ಪ್ರಮುಖನು. ತನ್ನ ಪ್ರಭಾವವನ್ನು ಉತ್ತರ ಭಾರತದಲ್ಲಿ ಹರಡಿದ ಕೀರ್ತಿ ಇವನದು. ಇವನು ಅಧಿಕಾರಕ್ಕೆ ಬಂದಾಗ ಉತ್ತರ ಭಾರತದ ರಾಜಕೀಯವು ಅನಿಶ್ಚಿತತೆಯಿಂದ ಕೂಡಿತ್ತು. ಕನೌಜಿನ ಸಿಂಹಾಸನದ ಮೇಲೆ ಪ್ರತಿಹಾರ ಮತ್ತು ಬಂಗಾಳದ ಅರಸರು ದೃಷ್ಟಿಬೀರಿದ್ದರು. ಪ್ರತಿಹಾರದ ವತ್ಸರಾಜನು ಕನೌಜಿನ ಮೇಲೆ ದಾಳಿ ಮಾಡಿ ಇಂದ್ರಾಯುಧನನ್ನು ಸೋಲಿಸಿದನು. ಇದೇ ವೇಳೆಯಲ್ಲಿ ಬಂಗಾಳದ ಧರ್ಮಪಾಲನು ವತ್ಸರಾಜನ ಮೇಲೆ ದಂಡೆತ್ತಿ ಹೋದನಾದರೂ ಅವನನ್ನು ಗೆಲ್ಲಲಾಗಲಿಲ್ಲ. ಇಂತಹ ಸಂದರ್ಭದಲ್ಲಿ ಧ್ರುವನು ತನ್ನ ಮಕ್ಕಳಾದ ಇಂದ್ರ ಮತ್ತು 3ನೇ ಗೋವಿಂದರೊಂದಿಗೆ ಉತ್ತರ ಭಾರತದ ಮೇಲೆ ದಂಡೆತ್ತಿ ಹೋಗಿ ವತ್ಸರಾಜ ಮತ್ತು ಧರ್ಮಪಾಲರನ್ನು ಸೋಲಿಸಿದನು. ಇದರಿಂದಾಗಿ ಗಂಗಾ ಯಮುನಾ ನದಿಗಳ ಪ್ರದೇಶಗಳು ಧ್ರುವನ ನಿಯಂತ್ರಣಕ್ಕೆ ಬಂದವು.

ಉತ್ತರ ಭಾರತದ ಮೇಲೆ ವಿಜಯದ ನಂತರ ಅವನು ವೆಂಗಿಯ ಮೇಲೆ ದಾಳಿ ಮಾಡಿದನು. ಆದರೆ, ವೆಂಗಿ ಅರಸ 4ನೇ ವಿಷ್ಣುವರ್ಧನನು ಯುದ್ಧ ಮಾಡಲು ಮುಂದಾಗದೇ ತನ್ನ ಮಗಳಾದ ಶೀಲಭಟ್ಟಾರಿಕೆಯನ್ನು ಧ್ರುವನಿಗೆ ಕೊಟ್ಟು ಮದುವೆ ಮಾಡಿದನು. ಧ್ರುವನು ಗಂಗರ ದೊರೆ 2ನೇ ಶಿವಮಾರನನ್ನು ಮುದುಗುಂದೂರನಲ್ಲಿ ಸೋಲಿಸಿದನು ಮತ್ತು ಅವನನ್ನು ಬಂಧನದಲ್ಲಿಟ್ಟನು. ಗಂಗವಾಡಿ ಪ್ರಾಂತ್ಯಕ್ಕೆ ತನ್ನ ಹಿರಿಯ ಮಗನಾದ ಸ್ತಂಭ(ಕಂಬರಸ)ನನ್ನು ಅಧಿಕಾರಿಯನ್ನಾಗಿ ನೇಮಿಸಿದನು. ಕಂಚಿಯ ಪಲ್ಲವ ದೊರೆ 2ನೇ ನಂದಿವರ್ಮನನ್ನು

ಸೋಲಿಸಿ ಅವನಿಂದ ಸಾಕಷ್ಟು ಆನೆಗಳನ್ನು ಕಪ್ಪವಾಗಿ ಪಡೆದನು. ಧ್ರುವನಿಗೆ 'ಧಾರಾವರ್ಷ', 'ಶ್ರೀ ವಲ್ಲಭ', 'ನರೇಂದ್ರ ದೇವ' ಮತ್ತು 'ಕಲಿವಲ್ಲಭ' ಎಂಬ ಬಿರುದುಗಳಿದ್ದವು.

ಮೂರನೇ ಗೋವಿಂದ: (ಸಾ.ಶ. 793 – 814)

ಧ್ರುವನ ನಂತರ ಅವನ ಮಗನಾದ 3ನೇ ಗೊವಿಂದನು ಸಾ.ಶ 793ರಲ್ಲಿ ಅಧಿಕಾರಕ್ಕೆ ಬಂದನು. ಆದರೆ ಇವನ ಸಹೋದರ ಸ್ತಂಭನು ಇದನ್ನು ವಿರೋಧಿಸಿದನು. ಗಂಗರು ಮತ್ತು ಪಲ್ಲವರು ಸ್ತಂಭನಿಗೆ ಸಹಾಯ ಮಾಡಿದರು. ಇದರಿಂದ ಕೋಪಗೊಂಡ 3ನೇ ಗೊವಿಂದನು ಸ್ತಂಭನನ್ನು ಸೋಲಿಸಿ ಸೆರೆಮನೆಯಲ್ಲಿಟ್ಟನು. ಆದರೆ, ಆನಂತರ ಅವನನ್ನು ಬಿಡುಗಡೆಗೊಳಿಸಿ ಪುನ: ಗಂಗವಾಡಿಯ ಅಧಿಕಾರಿಯನ್ನಾಗಿ ನೇಮಕ ಮಾಡಿದನು. ಸೆರೆಮನೆಯಲ್ಲಿದ್ದ ಗಂಗರ ದೊರೆ ಶಿವಮಾರನನ್ನು ಈ ಹಿಂದೆ ಬಿಡುಗಡೆಗೊಳಿಸಿದ್ದನು. ಆದರೆ, ಅವನು ಸ್ತಂಭನಿಗೆ ಸಹಾಯ ಮಾಡಿದ್ದರಿಂದ ಪುನ: ಅವನು ಸೆರೆಮನೆ ಸೇರಬೇಕಾಯಿತು.

3ನೇ ಗೋವಿಂದನ ಕಾಲದಲ್ಲಿಯೂ ಉತ್ತರ ಭಾರತದಲ್ಲಿ ರಾಜಕೀಯ ಆಂತರಿಕ ಸಂಘರ್ಷಗಳು ನಡೆದಿದ್ದವು. ಪ್ರತಿಹಾರದ ನಾಗಭಟ, ಬಂಗಾಲದ ಧರ್ಮಪಾಲ ಮತ್ತು ಕನೌಜಿನ ಚಕ್ರಾಯುಧರು ತಮ್ಮ ಸಾರ್ವಭೌಮತ್ವವನ್ನು ವಿಸ್ತರಿಸುವ ಪ್ರಯತ್ನದಲ್ಲಿದ್ದರು.


3ನೇ ಗೊವಿಂದನು ಸಾ.ಶ. 800ರಲ್ಲಿ ಉತ್ತರ ಭಾರತದ ದಂಡಯಾತ್ರೆಯನ್ನು ಕೈಗೊಂಡನು. ಇವನ ದಾಳಿಗೆ ಹೆದರಿದ 2ನೇ ನಾಗಭಟನು ಯುದ್ಧ ಭೂಮಿಯಿಂದ ಓಡಿಹೋದನು. ಚಕ್ರಾಯುಧನು ಶರಣಾದನು. ಧರ್ಮಪಾಲನು ಯುದ್ಧದಿಂದ ಹಿಂದಕ್ಕೆ ಸರಿದು ಕಪ್ಪಕಾಣಿಕೆಯನ್ನು ಸಲ್ಲಿಸಿದನು.

3ನೇ ಗೋವಿಂದನ ಸೈನ್ಯವು ಹಿಮಾಲಯದವರೆಗೂ ಸಾಗಿತು. ಗೋವಿಂದನ ಅಶ್ವಗಳು ಹಿಮಾಲಯದ ತಪ್ಪಲಿನಲ್ಲಿ ಹರಿಯುವ ನೀರನ್ನು ಕುಡಿದವು ಮತ್ತು ಅವನ ಗಜಗಳು ಗಂಗಾ ಜಲದಲ್ಲಿ ಮಿಂದವು ಎಂದು ಶಾಸನಗಳು ತಿಳಿಸುತ್ತವೆ.

ಗಂಗರು ಸಾ.ಶ. 803–04ರಲ್ಲಿ ಪಾಂಡ್ಯರು ಮತ್ತು ಕೇರಳದ ಅರಸರನ್ನು ಒಟ್ಟಗೂಡಿಸಿಕೊಂಡು ರಾಷ್ಟ್ರಕೂಟರ ಮೇಲೆ ದಾಳಿ ಮಾಡಿದರು. 3ನೇ ಗೋವಿಂದನು ಇವರನ್ನೆಲ್ಲಾ ಸೋಲಿಸಿ ಅವರ ರಾಜಲಾಂಛನಗಳನ್ನು ಕಿತ್ತುಕೊಂಡನು.

3ನೇ ಗೋವಿಂದನು ಪಲ್ಲವ ದೊರೆ ದಂತಿವರ್ಮನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಯನ್ನು ಸ್ವೀಕರಿಸಿದನು. ಇದೇ ಸಮಯದಲ್ಲಿ ಸಿಂಹಳದ ಅರಸ ತನ್ನ ಪ್ರತಿಮೆಯನ್ನು ಗೋವಿಂದನಿಗೆ ಕಳುಹಿಸುವ ಮೂಲಕ ಶರಣಾಗತನಾದನು.

3ನೇ ಗೋವಿಂದನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತರದಲ್ಲಿ ಹಿಮಾಲಯದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೆ ಮತ್ತು ಪಶ್ಚಿಮದಲ್ಲಿ ಸೌರಾಷ್ಟ್ರದಿಂದ ಪೂರ್ವದಲ್ಲಿ ಬಂಗಾಳದವರೆಗೂ ವಿಸ್ತರಿಸಿತ್ತು. ಒಟ್ಟಾರೆ ಇಡೀ ಭಾರತ ರಾಷ್ಟ್ರಕೂಟರ ಪ್ರಭಾವಕ್ಕೆ ಒಳಗಾಗಿತ್ತು. ಇವನು 'ಜಗತ್ತುಂಗ', 'ಪ್ರಭೂತವರ್ಷ', 'ಶ್ರೀವಲ್ಲಬ' ಮತ್ತು 'ತ್ರಿಭುವನದವಳ' ಎಂಬ ಬಿರುದುಗಳನ್ನು ಹೊಂದಿದ್ದನು.


ಮೂರನೇ ಗೋವಿಂದನ ಕಾಲದ
ರಾಷ್ಟ್ರಕೂಟ ಸಾಮ್ರಾಜ್ಯ
ಕನೌಜ್
ಗುಜರಾತ್
ಮಾಳ್ವ
ಎಲ್ಲೋರಾ
ಎಲಿಫೆಂಟಾ
ಮಾನ್ಯಖೇಟ
ಬಾದಾಮಿ
ಕಂಚಿ
ಗಂಗರು
ಚೋಳರು
ಪಾಂಡ್ಯರು
ಬಂಗಾಳ ಕೊಲ್ಲಿ
ಅರಬ್ಬಿ
ಸಮುದ್ರ
ಸಾಮ್ರಾಜ್ಯ ವಿಸ್ತಾರ
ಹಿಂದೂ ಮಹಾಸಾಗರ
ಉ
ಪ
ಪೂ
ದ

ಒಂದನೇ ಅಮೋಘವರ್ಷ (ಸಾ.ಶ. 814–878)

ಮೂರನೇ ಗೋವಿಂದನ ಮಗನಾದ ಅಮೋಘವರ್ಷನು ಸಾಶ.814ರಲ್ಲಿ ಅಧಿಕಾರಕ್ಕೆ ಬಂದನು. ಇವನಿಗೆ ಶರ್ವ ಎಂಬ ಇನ್ನೊಂದು ಹೆಸರಿತ್ತು. ಇವನು ಅಧಿಕಾರವನ್ನು ವಹಿಸಿಕೊಂಡಾಗ ಅಪ್ರಾಪ್ತನಾಗಿದ್ದನು. ಆದ್ದರಿಂದ ಕೆಲವು ವರ್ಷಗಳ(814–821)ವರೆಗೆ ಇವನ ಚಿಕ್ಕಪ್ಪನಾದ ಕರ್ಕನು ಆಡಳಿತ ನಿರ್ವಹಿಸಿದನು. ಅಮೋಘವರ್ಷನನ್ನು ರಾಷ್ಟ್ರಕೂಟ ದೊರೆಗಳಲ್ಲಿ ಶ್ರೇಷ್ಠ ದೊರೆ ಎಂದು ಪರಿಗಣಿಸಲಾಗಿದೆ. ಇವನ ಸೈನಿಕ ಸಾಧನೆಗಳಿಗಿಂತ ಸಾಂಸ್ಕೃತಿಕ ಸಾಧನೆಗಳು ಹೆಚ್ಚು ಶ್ರೇಷ್ಠವಾಗಿವೆ.

ಸಾಧನೆಗಳು :

ಅಮೋಘವರ್ಷನು ಸಾ.ಶ. 830ರಲ್ಲಿ ವೆಂಗಿ ಚಾಲುಕ್ಯರ ದೊರೆ 3ನೇ ಗುಣಗ ವಿಜಯಾದಿತ್ಯನನ್ನು ವಿಂಗವಳ್ಳಿ ಎಂಬಲ್ಲಿ ಸೋಲಿಸಿ ಹಿಮ್ಮೆಟ್ಟಿಸಿದನು.

ಗಂಗರ ರಾಜ್ಯದ ಉತ್ತರಭಾಗವು ಅಮೋಘವರ್ಷನ ದಂಡನಾಯಕ ಬಂಕೇಶನ ಹಿಡಿತದಲ್ಲಿತ್ತು. ಗಂಗ ದೊರೆ ರಾಚಮಲ್ಲನು ಈ ಪ್ರದೇಶಗಳನ್ನು ಪಡೆಯಲು ಮುಂದಾದನಾದರೂ ಅವನಿಂದ ಸಾಧ್ಯವಾಗಲಿಲ್ಲ. ಬಂಕೇಶನು ಕೈದಾಳ (ತುಮಕೂರು ಬಳಿ) ಪ್ರದೇಶದವರೆಗೂ ತನ್ನ ಪ್ರಭಾವವನ್ನು ಹೊಂದಿದ್ದನು.

ರಾಚಮಲ್ಲನ ನಂತರ ಅಧಿಕಾರಕ್ಕೆ ಬಂದ ನೀತಿಮಾರ್ಗ ಎರೆಗಂಗನು ಸಾ.ಶ 856ರಲ್ಲಿ ರಾಜರಾಮುಡು (ಕೋಲಾರ ಬಳಿ) ಕದನದಲ್ಲಿ ಅಮೋಘವರ್ಷನನ್ನು ಸೋಲಿಸಿದನು.

ಅಮೋಘವರ್ಷನು ಗಂಗ ಮತ್ತು ಇತರ ಅರಸು ಮನೆತನದವರೊಡನೆ ಸಂಘರ್ಷ ಕೈಬಿಟ್ಟು ವೈವಾಹಿಕ ಸಂಬಂಧ ಮಾಡಿಕೊಂಡನು. ತನ್ನ ಮಗಳಾದ ಚಂದ್ರಲಬ್ಬೆಯನ್ನು ಗಂಗ ದೊರೆ ಭೂತುಗನಿಗೆ (ಎರೆಯಂಗನ ಮಗ) ಕೊಟ್ಟು ಮದುವೆ ಮಾಡಿದನು. ಮತ್ತೊಬ್ಬ ಮಗಳಾದ ಶೀಲ ಮಹಾದೇವಿಯನ್ನು ವೆಂಗಿಯ ವಿಜಯಾದಿತ್ಯನ ಮಗ ವಿಷ್ಣುವರ್ಧನನಿಗೆ ಹಾಗೂ ಇನ್ನೊಬ್ಬ ಮಗಳಾದ ಸಂಖಾಳನ್ನು ಕಂಚಿ ಪಲ್ಲವ ದೊರೆ 3ನೇ ನಂದಿವರ್ಮನಿಗೆ ಕೊಟ್ಟು ವಿವಾಹ ಮಾಡಿದನು.

ನೀಲಗುಂದ ಮತ್ತು ಶಿರೂರಿನ ಶಾಸನಗಳು ಅಮೋಘವರ್ಷನು ಅಂಗ, ವಂಗ, ಮಗಧ, ಮಾಳ್ವ, ವೆಂಗಿ ಮತ್ತು ಅಕ್ಕಪಕ್ಕದ ರಾಜ್ಯಗಳ ರಾಜರಿಂದ ಗೌರವಿಸಲ್ಪಡುತ್ತಿದ್ದನೆಂದು ತಿಳಿಸುತ್ತವೆ.

ಅಮೋಘವರ್ಷ ತನ್ನ ಕೊನೆಯ ದಿನಗಳಲ್ಲಿ ಯುವರಾಜನಾದ ಕೃಷ್ಣನ ದಂಗೆಯನ್ನು ಎದುರಿಸಬೇಕಾಯಿತು. ಇವನ ದಂಡನಾಯಕ ಬಂಕೇಶನು ಈ ದಂಗೆಯನ್ನು ಅತ್ಯಂತ ಸಮರ್ಥವಾಗಿ ಎದುರಿಸಿದನು ಮತ್ತು ಕೃಷ್ಣನು ಪಶ್ಚಾತ್ತಾಪದಿಂದ ಬದಲಾಗುವಂತೆ ಮಾಡಿದನು. ಈ ವಿಜಯದ ನೆನಪಿಗಾಗಿ ಅಮೋಘವರ್ಷನು ಬಂಕೇಶನ ಹೆಸರಿನಲ್ಲಿ 'ಬಂಕಾಪುರ'ವೆಂಬ ನಗರವನ್ನು ನಿರ್ಮಿಸಿದನು ಹಾಗೂ ಬಂಕೇಶನನ್ನು ಬನವಾಸಿಯ ರಾಜ್ಯಪಾಲನನ್ನಾಗಿ ನೇಮಿಸಿದನು.

ಅಮೋಘವರ್ಷನು ಧಾರ್ಮಿಕ ಸಹಿಷ್ಣುವು, ಶಾಂತಿಪ್ರಿಯನು ಮತ್ತು ಸ್ವತ: ವಿದ್ವಾಂಸನೂ ಆಗಿದ್ದನು. ರಾಜ್ಯದ ಜನರನ್ನು ಕ್ಷಾಮದಿಂದ ಪಾರು ಮಾಡಲು ಕೊಲ್ಲಾಪುರದ ಮಹಾಲಕ್ಷ್ಮಿಗೆ ತನ್ನ ಕೈ ಬೆರಳನ್ನು ಕತ್ತರಿಸಿ ಅರ್ಪಿಸಿದನೆಂದು ಸಂಜಾನ್ ಶಾಸನ ತಿಳಿಸುತ್ತದೆ. ಸ್ವತ:ಪಂಡಿತನಾದ ಇವನು 'ಪ್ರಶ್ನೋತ್ತರ ರತ್ನಮಾಲಾ' ಎಂಬ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದನು. ಇವನು ಜಿನಸೇನಾಚಾರ್ಯ, ಮಹಾವೀರಾಚಾರ್ಯ, ಶಕ್ತಾಯನ,

ಶ್ರೀವಿಜಯ ಮುಂತಾದ ವಿದ್ವಾಂಸರಿಗೆ ಆಶ್ರಯ ನೀಡಿದ್ದನು. ಶ್ರೀವಿಜಯನಿಂದ ರಚಿಸಲ್ಪಟ್ಟ 'ಕವಿರಾಜಮಾರ್ಗ' ಕನ್ನಡದ ಮೊದಲ ಕೃತಿಯಾಗಿದೆ. ಮಾನ್ಯಖೇಟವು ಇವನ ಕಾಲದಲ್ಲಿ ರಾಜಧಾನಿಯಾಗಿ ತುಂಬಾ ಪ್ರಸಿದ್ಧಿಯಾಗಿತ್ತು. ಅರಬ್ ಪ್ರವಾಸಿ ಸುಲೇಮಾನ್ ಸಾ.ಶ. 851ರಲ್ಲಿ ಇವನ ರಾಜಧಾನಿಗೆ ಭೇಟಿ ನೀಡಿದನು. ಇವನು ರಾಷ್ಟ್ರಕೂಟರ ಸಾಮ್ರಾಜ್ಯವು ಜಗತ್ತಿನ ನಾಲ್ಕು ಶ್ರೇಷ್ಠ ಸಾಮ್ರಾಜ್ಯಗಳಲ್ಲಿ (ಬಾಗ್ದಾದ್, ಚೀನಾ ಮತ್ತು ಕಾನ್‌ಸ್ಟಂಟ್‌ನೋಪಲ್ ಇತರ ಮೂರು) ಒಂದಾಗಿದೆ ಎಂದಿದ್ದಾನೆ. ಇವನು 'ಅತಿಶಯದವಳ', 'ನೃಪತುಂಗ', 'ವೀರನಾರಾಯಣ', 'ಶ್ರೀವಲ್ಲಭ', 'ರಟ್ಟಮಾರ್ತಾಂಡ' ಮುಂತಾದ ಬಿರುದುಗಳನ್ನು ಹೊಂದಿದ್ದನು.

ಉತ್ತರಾಧಿಕಾರಿಗಳು:– ಎರಡನೇ ಕೃಷ್ಣ, 3ನೇ ಇಂದ್ರ, 2ನೇ ಅಮೋಘವರ್ಷ, 4ನೇ ಗೋವಿಂದ, 3ನೇ ಅಮೋಘವರ್ಷ, 3ನೇ ಕೃಷ್ಣ ಮತ್ತು 2ನೇ ಕರ್ಕ.

ಸಾಂಸ್ಕೃತಿಕ ಕೊಡುಗೆಗಳು:

ಧರ್ಮ:

ರಾಷ್ಟ್ರಕೂಟ ಅರಸರು ಧಾರ್ಮಿಕ ಸಹಿಷ್ಣುತಾ ಗುಣವುಳ್ಳವರಾಗಿದ್ದರು. ವೈದಿಕ ಮತಾವಲಂಬಿಗಳಾಗಿದ್ದ ಇವರು ಜೈನ ಮತ್ತು ಬೌದ್ಧ ಧರ್ಮಗಳಿಗೂ ರಾಜಾಶ್ರಯ ನೀಡಿದ್ದರು. ಅಮೋಘವರ್ಷನು ಕೊಲ್ಲಾಪುರದ ಮಹಾಲಕ್ಷ್ಮಿಯ ಪರಮಭಕ್ತನಾಗಿದ್ದನು. ಬ್ರಾಹ್ಮಣರು ಯಜ್ಞ–ಯಾಗಾದಿಗಳಲ್ಲಿ ತೊಡಗುತ್ತಿದ್ದರು. ರಾಜರು ಅವರಿಗೆ ದಾನ ದತ್ತಿಗಳನ್ನು ನೀಡಿ ಗೌರವಿಸುತ್ತಿದ್ದರು. ಮುಂಬೈ ಸಮೀಪ ಕನ್ಹೇರಿಯಲ್ಲಿ ಬೌದ್ಧ ಸಂಘವಿತ್ತು ಎಂದು ತಿಳಿಯುವುದು.

ಸಾಹಿತ್ಯ :

ರಾಷ್ಟ್ರಕೂಟ ದೊರೆಗಳು ಸಾಹಿತ್ಯ ಪೋಷಕರಾಗಿದ್ದರು. ಕೆಲವು ಅರಸರು ಸ್ವತಃ ಸಾಹಿತಿಗಳಾಗಿದ್ದರು. ಕನ್ನಡದ ಶಿಲಾಶಾಸನಗಳ ಸಂಖ್ಯೆ ಹೆಚ್ಚಾಯಿತು. ಕನ್ನಡದ ಮೊದಲ ಕೃತಿ ಕವಿರಾಜಮಾರ್ಗ ಶ್ರೀ ವಿಜಯನಿಂದ ರಚಿಸಲ್ಪಟ್ಟಿತು. ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡನಾಡು ಹರಡಿತ್ತು ಎಂದು 'ಕವಿರಾಜ ಮಾರ್ಗ' ತಿಳಿಸುತ್ತದೆ.

ಇವರ ಕಾಲದಲ್ಲಿ ಸಾಹಿತ್ಯವು ವಿಫುಲವಾಗಿ ಬೆಳೆಯಿತು. 3ನೇ ಕೃಷ್ಣನ ಆಸ್ಥಾನದಲ್ಲಿದ್ದ ಪೊನ್ನನು 'ಶಾಂತಿಪುರಾಣ' ಮತ್ತು 'ಭುವನೈಕ್ಯ ರಾಮಾಭ್ಯುದಯ' ಗ್ರಂಥಗಳನ್ನು ಬರೆದನು. ಇವನಿಗೆ ಉಭಯ ಕವಿ ಚಕ್ರವರ್ತಿ ಎಂಬ ಬಿರುದು ಇತ್ತು. ರಾಷ್ಟ್ರಕೂಟರ ಸಾಮಂತ ವೇಮುಲವಾಡದ ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಪನು 'ವಿಕ್ರಮಾರ್ಜುನ ವಿಜಯ' (ಪಂಪಭಾರತ) ಮತ್ತು 'ಆದಿಪುರಾಣ' ಗ್ರಂಥಗಳನ್ನು ರಚಿಸಿದನು. ಈತನನ್ನು 'ಕನ್ನಡದ ಆದಿಕವಿ'ಯೆಂದು ಕರೆಯಲಾಗಿದೆ. ಶಿವಕೋಟ್ಯಾಚಾರ್ಯನು 'ವಡ್ಡಾರಾಧನೆ' ಎಂಬ ಕೃತಿಯನ್ನು ರಚಿಸಿದನು. ಇದನ್ನು 'ಹಳೆಗನ್ನಡದ ಮೊದಲ ಗದ್ಯ' ಕೃತಿ ಎಂದು ಕರೆಯಲಾಗಿದೆ.

ಸಂಸ್ಕೃತ ಸಾಹಿತ್ಯವೂ ಉತ್ಕೃಷ್ಟವಾಗಿ ಬೆಳೆಯಿತು.

ಶಕ್ತಾಯನ	–	ಶಬ್ದಾನುಶಾಸನ
ಮಹಾವೀರಾಚಾರ್ಯನ	–	ಗಣಿತಸಾರ ಸಂಗ್ರಹ

ಅಮೋಘವರ್ಷನ	–	ಪ್ರಶ್ನೋತ್ತರ ರತ್ನಮಾಲ
ತ್ರಿವಿಕ್ರಮನ	–	ಮದಾಲಸ ಚಂಪೂ
ಜಿನಸೇನಾಚಾರ್ಯನ	–	ಆದಿಪುರಾಣ, ಪಾರ್ಶ್ವಾಭ್ಯುದಯ
ಅಸಗನ	–	ವರ್ಧಮಾನ ಪುರಾಣ
ಹಾಲಾಯುಧನ	–	ಮೃತಸಂಜೀವಿನಿ, ಕವಿರಹಸ್ಯ

ಮುಂತಾದವು ಈ ಕಾಲದ ಪ್ರಮುಖ ಸಂಸ್ಕೃತ ಕೃತಿಗಳಾಗಿದ್ದವು.

ಕಲೆ ಮತ್ತು ವಾಸ್ತುಶಿಲ್ಪ :

ರಾಷ್ಟ್ರಕೂಟ ಅರಸರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅದ್ಭುತ ಕೊಡುಗೆಗಳನ್ನು ನೀಡಿದ್ದಾರೆ. ಇವರು ದೇವಾಲಯ, ಗುಹಾಂತರ ದೇವಾಲಯಗಳನ್ನು ಮತ್ತು ಬಸದಿಗಳನ್ನು ನಿರ್ಮಿಸಿದ್ದಾರೆ . ಎಲ್ಲೋರಾ, ಅಜಂತಾ ಮತ್ತು ಎಲಿಫೆಂಟಾ ಇವರ ಕಲೆಯ ಪ್ರಮುಖ ಕೇಂದ್ರಗಳಾಗಿವೆ.

ಎಲ್ಲೋರಾ : ಕೈಲಾಸನಾಥ ದೇವಾಲಯ

ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಎಲ್ಲೋರಾದಲ್ಲಿ 34 ಗುಹಾಲಯಗಳಿದ್ದು ಅವುಗಳಲ್ಲಿ 5 ಹಿಂದೂ ಧರ್ಮಕ್ಕೆ ಸೇರಿವೆ. ಇಲ್ಲಿನ ಕೈಲಾಸನಾಥ ಏಕಶಿಲಾ ದೇವಾಲಯವು ಜಗತ್ಪ್ರಸಿದ್ಧಿಯಾಗಿದೆ. ಈ ದೇವಾಲಯವನ್ನು ಒಂದನೇ ಕೃಷ್ಣನು ಸಾ.ಶ. 770ರಲ್ಲಿ ನಿರ್ಮಿಸಿದನು. ಈ ದೇವಾಲಯವು 164 ಅಡಿ ಉದ್ದ, 109 ಅಡಿ ಅಗಲ ಮತ್ತು 92 ಅಡಿ ಎತ್ತರವನ್ನು ಹೊಂದಿದೆ. ಮಹಾದ್ವಾರ, ಪ್ರಾಕಾರ, ಶಿಖರ ಮತ್ತು ಲಿಂಗ ಮೊದಲಾದ ಅಂಶಗಳನ್ನು ಹೊಂದಿರುವ ಈ ದೇವಾಲಯವು ದ್ರಾವಿಡ ಶೈಲಿಯಲ್ಲಿದೆ. ಈ ದೇವಾಲಯದಲ್ಲಿರುವ ಶಿವ ಲೀಲೆಗೆ ಸಂಬಂಧಿಸಿದ ಶಿಲ್ಪಗಳು ಪ್ರವಾಸಿಗರ ಗಮನ ಸೆಳೆಯುತ್ತವೆ. ದೇವಾಲಯದ ಬಳಿ ಎರಡು ಕಂಬಗಳು ಮತ್ತು ಎರಡು ಬೃಹತ್ ಆನೆಗಳನ್ನು ಕೆತ್ತಿ ನಿಲ್ಲಿಸಲಾಗಿದೆ. ಮುಂಭಾಗದಲ್ಲಿ ನಂದಿ ಮಂಟಪವಿದೆ. ಗರ್ಭಗೃಹದ ಸುತ್ತಲೂ ಐದು ಪರಿವಾರ ದೇವತೆಗಳ ಗುಡಿಗಳಿವೆ. ಅಷ್ಟದಿಕ್ಪಾಲಕರು, ಗಂಗೆ–ಯಮುನೆ, ಸರಸ್ವತಿ ಮುಂತಾದ ಶಿಲ್ಪಗಳನ್ನು ಕೊರೆಯಲಾಗಿದೆ.



ಕೈಲಾಸನಾಥ ದೇವಾಲಯ – ಎಲ್ಲೋರ

ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿರುವ ದೃಶ್ಯವು ಅದ್ಭುತವಾಗಿ ಕಾಣುವುದರಿಂದ ಈ ದೇವಾಲಯಕ್ಕೆ ಕೈಲಾಸನಾಥ ದೇವಾಲಯ ಎಂದು ಕರೆಯಲಾಗಿದೆ. ಡಾ॥ ವಿ.ಎ. ಸ್ಮಿತ್ ಅವರು ಈ ದೇವಾಲಯವನ್ನು ಜಗತ್ತಿನ ಅತ್ಯದ್ಭುತ ಕಲಾಕೃತಿಗಳಲ್ಲಿ ಒಂದು ಎಂದಿದ್ದಾರೆ.

ಎಲ್ಲೋರಾದ ಇತರೆ ಹಿಂದೂ ದೇವಾಲಯಗಳೆಂದರೆ ರಾವಣ ಗುಹೆ, ದಶಾವತಾರ ಗುಹೆ, ರಾಮೇಶ್ವರ ಗುಹೆ, ದುಮಾರ್ ಲೇನಾ ಗುಹೆ ಮುಂತಾದವು, ಇವುಗಳಲ್ಲದೆ ನೀಲಕಂಠ ಗುಹೆ, ಇಂದ್ರಸಭಾ, ಜಗನ್ನಾಥ ಸಭಾ ಗುಹಾಲಯಗಳು ಇಲ್ಲಿವೆ.

ಎಲಿಫೆಂಟಾ :

ಮುಂಬೈಯಿಂದ ಆರು ಮೈಲಿ ದೂರದಲ್ಲಿರುವ ಒಂದು ದ್ವೀಪ ಪ್ರದೇಶವಾಗಿರುವ ಎಲಿಫೆಂಟಾದಲ್ಲಿ ಏಳು ಗುಹೆಗಳಿವೆ. ಈ ಎಲಿಫೆಂಟಾದ ಹಿಂದಿನ ಹೆಸರು ಗೊರವಪುರಿ. ಇಲ್ಲಿರುವ ಬೃಹತ್ ಆನೆಯನ್ನು ಪೋರ್ಚುಗೀಸರು ಎಲಿಫೆಂಟಾ ಎಂದು ಕರೆದನಂತರ ಈ ದ್ವೀಪಕ್ಕೆ ಎಲಿಫೆಂಟಾ ಎಂಬ ಹೆಸರು ಬಂದಿತು. ಇಲ್ಲಿರುವ ಗುಹೆಗಳ ಮಧ್ಯದಲ್ಲಿರುವ ಗುಹೆಯಲ್ಲಿನ ತ್ರಿಮೂರ್ತಿ ವಿಗ್ರಹ ದೇವರ ಮೂರು ಅವತಾರಗಳಿಗೆ (ಸೃಷ್ಟಿ, ಸ್ಥಿತಿ, ಲಯ) ಸಂಬಂಧಿಸಿದೆ. 18 ಅಡಿ ಎತ್ತರವಿರುವ ಈ ಮೂರ್ತಿಯನ್ನು ಎರಡು ಅರ್ಧಕಂಬಗಳ ನಡುವೆ ಕೊರೆಯಲಾಗಿದೆ. ದ್ವಾರಪಾಲಕ, ಅರ್ಧನಾರೀಶ್ವರ, ಶಿವ, ಪಾರ್ವತಿ ಮುಂತಾದ ಉಬ್ಬು ಶಿಲ್ಪಗಳು ಸುಂದರವಾಗಿ ಕೆತ್ತಲ್ಪಟ್ಟಿವೆ.



ತ್ರಿಮೂರ್ತಿ ಶಿಲ್ಪ, ಎಲಿಫೆಂಟಾ

ಇವರು ಚಿತ್ರಕಲೆಗೂ ಪ್ರೋತ್ಸಾಹ ನೀಡಿದ್ದರೆಂಬುದಕ್ಕೆ ಎಲ್ಲೋರಾದ ಗುಹಾಂತರ ದೇವಾಲಯದಲ್ಲಿರುವ ಚಿತ್ರಕಲೆ ಸಾಕ್ಷಿಯಾಗಿದೆ.

ರಾಷ್ಟ್ರಕೂಟರ ಕಾಲದ ಇತರ ಕೆಲವು ಪ್ರಮುಖ ದೇವಾಲಯಗಳೆಂದರೆ– ಸವಡಿ– ಬ್ರಹ್ಮದೇವ ಮತ್ತು ನಾರಾಯಣ ದೇವಾಲಯ, ರೋಣ – ಸೋಮೇಶ್ವರ ದೇವಾಲಯ, ಕುಕ್ಕನೂರು – ನವಲಿಂಗೇಶ್ವರ ದೇವಾಲಯ, ಮಾನ್ಯಖೇಟ– ಶಿವ, ವಿಷ್ಣು, ಜೈನ ಮಂದಿರಗಳು, ಸನ್ನತಿ– ಚಂದ್ರಲಾಂಬ ದೇವಾಲಯ ಮತ್ತು ಸಂಡೂರು – ಕುಮಾರಸ್ವಾಮಿ ದೇವಾಲಯ

ಚಟುವಟಿಕೆ

ಅಮೋಘವರ್ಷನು ವೈವಾಹಿಕ ಸಂಬಂಧ ಹೊಂದಿದ್ದ ರಾಜಮನೆತನಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1) ರಾಷ್ಟ್ರಕೂಟರ ರಾಜಲಾಂಛನ ಯಾವುದು?
2) ರಾಷ್ಟ್ರಕೂಟರ ರಾಜಧಾನಿ ಯಾವುದು?
3) ರಾಷ್ಟ್ರಕೂಟರ ಮೊದಲ ದೊರೆ ಯಾರು?
4) ರಾಷ್ಟ್ರಕೂಟರ ಪ್ರಸಿದ್ಧ ದೊರೆ ಯಾರು?
5) ಅಮೋಘವರ್ಷನ ಆಸ್ಥಾನಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿ ಯಾರು?
6) ಕನ್ನಡದ ಮೊದಲ ಸಾಹಿತ್ಯ ಕೃತಿ ಯಾವುದು?
7) 'ಉಭಯ ಕವಿ ಚಕ್ರವರ್ತಿ' ಎಂದು ಯಾರನ್ನು ಕರೆಯಲಾಗಿತ್ತು?
8) ಪೊನ್ನನಿಗೆ ಆಶ್ರಯ ನೀಡಿದವರು ಯಾರು?
9) ಕನ್ನಡದ ಆದಿಕವಿ ಎಂದು ಯಾರನ್ನು ಕರೆಯುತ್ತಾರೆ?
10) ಪಂಪನಿಗೆ ಆಶ್ರಯ ನೀಡಿದವರು ಯಾರು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಕೈಲಾಸನಾಥ ದೇವಾಲಯವನ್ನು ನಿರ್ಮಿಸಿದವರು ಯಾರು? ಎಲ್ಲಿ ನಿರ್ಮಿಸಿದರು?
2. ಧ್ರುವನ ಯಾವುದಾದರು ಎರಡು ಬಿರುದುಗಳನ್ನು ಹೆಸರಿಸಿ.
3. 3ನೇ ಗೋವಿಂದನ ಯಾವುದಾದರು ಎರಡು ಬಿರುದುಗಳನ್ನು ತಿಳಿಸಿ.
4. ಅಮೋಘವರ್ಷನ ಯಾವುದಾದರು ಎರಡು ಬಿರುದುಗಳನ್ನು ಬರೆಯಿರಿ.
5. ಪೊನ್ನನ ಯಾವುದಾದರು ಎರಡು ಕೃತಿಗಳನ್ನು ಹೆಸರಿಸಿ.
6. ಪಂಪನ ಯಾವುದಾದರು ಎರಡು ಕೃತಿಗಳನ್ನು ಹೆಸರಿಸಿ.

III. ಈ ಕೆಳಗಿನ ಪ್ರಶ್ನೆಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. 3ನೇ ಗೋವಿಂದನ ಸಾಧನೆಗಳನ್ನು ವಿವರಿಸಿ.
2. ಅಮೋಘವರ್ಷನ ಸಾಧನೆಗಳನ್ನು ವಿವರಿಸಿ.

IV. ಈ ಕೆಳಗಿನ ಪ್ರಶ್ನೆಗೆ 30– 40 ವಾಕ್ಯಗಳಲ್ಲಿ ಉತ್ತರಿಸಿ.

1) ರಾಷ್ಟ್ರಕೂಟರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿರಿ.

❋ ❋ ❋ ❋

ಅಧ್ಯಾಯ 4.9

ನಂತರದ ಚಾಲುಕ್ಯರು ಮತ್ತು ಹೊಯ್ಸಳರು

ನಂತರದ ಚಾಲುಕ್ಯರು.

ನಂತರದ ಚಾಲುಕ್ಯರು ರಾಷ್ಟ್ರಕೂಟರ ಸಾಮಂತರಾಗಿದ್ದರು. ಅವರನ್ನು ಕಲ್ಯಾಣದ ಚಾಲುಕ್ಯರೆಂದೂ ಕರೆಯಲಾಗಿದೆ. 2ನೇ ತೈಲಪ ಈ ಸಂತತಿಯ ಸ್ಥಾಪಕ, ಮಾನ್ಯಖೇಟ ಅವರ ಮೊದಲ ರಾಜಧಾನಿ. 1ನೇ ಸೋಮೇಶ್ವರ ರಾಜಧಾನಿಯನ್ನು ಕಲ್ಯಾಣಕ್ಕೆ ವರ್ಗಾಯಿಸಿದನು.

6ನೇ ವಿಕ್ರಮಾದಿತ್ಯ (ಸಾ.ಶ 1076–1126)

6ನೇ ವಿಕ್ರಮಾದಿತ್ಯ ಈ ವಂಶದ ಅತ್ಯಂತ ಪ್ರಮುಖ ಅರಸ. ಅವನು 50 ವರ್ಷಕಾಲ ಆಳಿದನು. ಅವನು ಬನವಾಸಿಯಲ್ಲಿ ತನ್ನ ಸಹೋದರ ಜಯಸಿಂಹನ ದಂಗೆಯನ್ನು ಹತ್ತಿಕ್ಕಿದನು. ನಂತರ ಅವನು ಹೊಯ್ಸಳ ಅರಸರಾದ 1ನೇ ಬಲ್ಲಾಳ ಹಾಗೂ ವಿಷ್ಣುವರ್ಧನನ ದಂಗೆಯನ್ನು ಎದುರಿಸಬೇಕಾಯಿತು. ವೆಂಗಿಯನ್ನು ವಶಪಡಿಸಿಕೊಳ್ಳಬೇಕೆಂಬ ಕುಲೋತ್ತುಂಗ ಚೋಳನ ಪ್ರಯತ್ನವನ್ನು ವಿಫಲಗೊಳಿಸಿದನು ಮತ್ತು ಪಾರಮಾರರನ್ನು ಸೋಲಿಸಿದನು.

ಗೋವಾದ ಕದಂಬರು ಮತ್ತು ಕರಾಡದ ಶಿಲಾಹರರ ದಂಗೆಗಳನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾದನು. ನಂತರ ಅವರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದನು. ಅವನು ಶ್ರೀಲಂಕಾದ ಅರಸ ವಿಜಯಬಾಹುವಿನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದನು. ಇವನ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದ ನದಿಯಿಂದ ದಕ್ಷಿಣದಲ್ಲಿ ಕಡಪ್ಪಾದವರೆಗೂ ಪೂರ್ವ ಮತ್ತು ಪಶ್ಚಿಮಗಳಲ್ಲಿ ಎರಡು ಸಮುದ್ರಗಳವರೆಗೂ ವಿಸ್ತರಿಸಿತ್ತು. ಅವನ ಎಲ್ಲಾ ಸಾಧನೆಗಳ ಬಗ್ಗೆ ಲಕ್ಷ್ಮೇಶ್ವರ ಶಾಸನ ವಿವರಗಳನ್ನು ನೀಡುತ್ತದೆ. ಅವನಿಗೆ 'ಪೆರ್ಮಾಡಿ ದೇವ' ಮತ್ತು 'ತ್ರಿಭುವನ ಮಲ್ಲ' ಎಂಬ ಬಿರುದುಗಳಿದ್ದವು. ಅವನು ಅಧಿಕಾರಕ್ಕೆ ಬಂದ ನೆನಪಿಗಾಗಿ ಸಾ.ಶ 1076 ರಲ್ಲಿ 'ವಿಕ್ರಮ ಶಕೆ' ಎಂಬ ಹೊಸ ಶಕೆಯನ್ನು ಆರಂಭಿಸಿದನು. 3ನೇ ಸೋಮೇಶ್ವರ ವಿಕ್ರಮಾದಿತ್ಯನ ಉತ್ತರಾಧಿಕಾರಿಯಾದನು. ಈ ಸಾಮ್ರಾಜ್ಯದ ಇತರ ಅರಸರೆಂದರೆ ಜಗದೇಕ ಮಲ್ಲ, 3ನೇ ತೈಲಪ, ತ್ರಿಭುವನ ಮಲ್ಲ ಮತ್ತು 4ನೇ ಸೋಮೇಶ್ವರ.

ಸಾಂಸ್ಕೃತಿಕ ಕೊಡುಗೆಗಳು.

ಕಲ್ಯಾಣದ ಚಾಲುಕ್ಯರು ಬಾದಾಮಿ ಚಾಲುಕ್ಯರ ಮಹಾನ್ ಪರಂಪರೆಯನ್ನು ಅನುಸರಿಸಿ ಕರ್ನಾಟಕದ ಸಂಸ್ಕೃತಿಗೆ ವಿಶೇಷವಾಗಿ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ಶ್ರೀಮಂತ ಕೊಡುಗೆಗಳನ್ನು ನೀಡಿದ್ದಾರೆ.

ಸಾಹಿತ್ಯ:

ಈ ಅವಧಿಯಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಅಭಿವೃದ್ಧಿ ಹೊಂದಿತು. ಜೈನ ಬರಹಗಾರರು ಕನ್ನಡದಲ್ಲಿ ಪಾಂಡಿತ್ಯಪೂರ್ಣ ಸಾಹಿತ್ಯವನ್ನು ರಚಿಸಿದರು. ಕನ್ನಡದ ಪ್ರಸಿದ್ಧ ಕವಿ ರನ್ನನಿಗೆ ಸತ್ಯಾಶ್ರಯನು

ಆಶ್ರಯನೀಡಿದ್ದನು. ಅವನ ಪ್ರಮುಖ ಕೃತಿಗಳೆಂದರೆ 'ಅಜಿತನಾಥ ಪುರಾಣ' ಮತ್ತು 'ಸಾಹಸಭೀಮ ವಿಜಯ' (ಗಧಾಯುದ್ಧ). ಅವನು ತನ್ನ ಆಶ್ರಯದಾತನಿಂದ 'ಕವಿಚಕ್ರವರ್ತಿ' ಎಂದು ಗೌರವಿಸಲ್ಪಟ್ಟಿದ್ದನು. ಈ ಕಾಲದ ಇತರ ಪ್ರಮುಖ ಬರಹಗಾರರು ಹಾಗೂ ಕೃತಿಗಳೆಂದರೆ, 2ನೇ ಚಾವುಂಡರಾಯನ ಲೋಕೋಪಕಾರ – ಇದು ಖಗೋಳಶಾಸ್ತ್ರ, ಜೋತಿಷ್ಯಶಾಸ್ತ್ರ, ಶಿಲ್ಪಶಾಸ್ತ್ರ ಮತ್ತು ವೈದ್ಯಕೀಯಶಾಸ್ತ್ರಗಳ ಬಗ್ಗೆ ವಿವರಣೆ ನೀಡುತ್ತದೆ.

ಶ್ರೀಧರಾಚಾರ್ಯನ ಜಾತಕ ತಿಲಕ–ಇದು ಕನ್ನಡದ ಮೊದಲ ಜೋತಿಷ್ಯಶಾಸ್ತ್ರ ಗ್ರಂಥ. ಕಾಶ್ಮೀರಿ ಕವಿ ಬಿಲ್ಹಣ 6ನೇ ವಿಕ್ರಮಾದತ್ಯನ ಆಸ್ಥಾನ ಕವಿಯಾಗಿದ್ದು ವಿಕ್ರಮಾಂಕದೇವಚರಿತಂ ಎಂಬ ಕೃತಿಯನ್ನು ಬರೆದಿದ್ದಾನೆ.

3ನೇ ಸೋಮೇಶ್ವರ ಅಭಿಲಾಷಿತಾರ್ಥ ಚಿಂತಾಮಣಿ ಅಥವಾ ಮಾನಸೋಲ್ಲಾಸ ಎಂಬ ಕೃತಿ ಬರೆದಿದ್ದು ಇದನ್ನು ಸಂಸ್ಕೃತದ ಪ್ರಥಮ ವಿಶ್ವಕೋಶ ಎಂದು ಪರಿಗಣಿಸಲಾಗಿದೆ.

2ನೇ ನಾಗವರ್ಮನು ಜಗದೇಕಮಲ್ಲನ ಶಿಕ್ಷಕನಾಗಿದ್ದು ಕಾವ್ಯಾವಲೋಕನ (ಕಾವ್ಯ ಕುರಿತಾದ ಕೃತಿ) ಭಾಷಾಭೂಷಣ (ವ್ಯಾಕರಣ ಕೃತಿ) ಮತ್ತು ಅಭಿಧಾನ ವಸ್ತುಕೋಶ (ಕನ್ನಡದ ಮೊದಲ ಶಬ್ದಕೋಶ) ವನ್ನು ರಚಿಸಿದನು.

ದುರ್ಗಸಿಂಹನ – ಪಂಚತಂತ್ರ
ಚಂದ್ರರಾಜನ – ಮದನತಿಲಕ
ಶಾಂತಿನಾಥನ – ಸುಕುಮಾರ ಚರಿತೆ
ಕೀರ್ತಿವರ್ಮನ – ಗೋವೈದ್ಯ
ನಯಸೇನನ – ಧರ್ಮಾಮೃತ
ವಿಜ್ಞಾನೇಶ್ವರನ – ಮಿತಾಕ್ಷರ ನ್ಯಾಯ ಸಂಹಿತೆ (ಹಿಂದೂ ಕಾನೂನು ಸಂಹಿತೆ) ಇತ್ಯಾದಿ.

ಕಲೆ ಮತ್ತು ವಾಸ್ತುಶಿಲ್ಪ

ಕಲ್ಯಾಣದ ಚಾಲುಕ್ಯರು ಕಲೆ ಮತ್ತು ವಾಸ್ತುಶಿಲ್ಪದ ಪೋಷಕರಾಗಿದ್ದರು ಅವರು ಬಾದಾಮಿ ಚಾಲುಕ್ಯರ ವಾಸ್ತುಶೈಲಿಯನ್ನೆ ಮುಂದುವರಿಸಿದರು. ಅವರ ಕಾಲದ ಪ್ರಮುಖ ದೇವಾಲಯಗಳೆಂದರೆ:

ಸ್ಥಳ	...	**ದೇವಾಲಯ**
ಕುಕ್ಕನೂರು	...	ಕಲ್ಲೇಶ್ವರ
ಅಬ್ಬಲೂರು	...	ಬ್ರಹ್ಮೇಶ್ವರ
ಕುರುವತ್ತಿ	...	ಮಲ್ಲಿಕಾರ್ಜುನ
ಲಕ್ಕುಂಡಿ	...	ಬ್ರಹ್ಮ ಜಿನಾಲಯ, ಕಾಶಿ ವಿಶ್ವೇಶ್ವರ
ಲಕ್ಷ್ಮೇಶ್ವರ	...	ಶಂಕಬಸದಿ, ಸೋಮೇಶ್ವರ
ಡಂಬಳ	...	ದೊಡ್ಡಬಸವೇಶ್ವರ
ಹಿರೇಹಡಗಲಿ	...	ಕಲ್ಲೇಶ್ವರ
ಹಾವೇರಿ	...	ಸಿದ್ದೇಶ್ವರ
ಹಾನಗಲ್ಲು	...	ತಾರಕೇಶ್ವರ, ಗಣಪತಿ

ಬಳ್ಳಿಗಾವೆ ... ಕೇದಾರೇಶ್ವರ, ತ್ರಿಪುರಾಂಬಕ

ಇಟಗಿ ... ಮಹಾದೇವ ದೇವಾಲಯ. ಈ ದೇವಾಲಯವನ್ನು 6ನೇ ವಿಕ್ರಮಾದಿತ್ಯನ ಸೇನಾಧಿಪತಿಯಾದ ಮಹಾದೇವ ದಂಡನಾಯಕನು ನಿರ್ಮಿಸಿದನು. ಇದನ್ನು ದೇವಾಲಯಗಳ ಚಕ್ರವರ್ತಿ ಎಂದು ಕರೆಯಲಾಗಿದೆ.

6ನೇ ವಿಕ್ರಮಾದಿತ್ಯನ ರಾಣಿ ಚಂದ್ರಲೇಖ ನೃತ್ಯ, ಸಂಗೀತ ಮತ್ತು ಲಲಿತ ಕಲೆಗಳಲ್ಲಿ ಪ್ರವೀಣೆಯಾಗಿದ್ದಳು ಆದ್ದರಿಂದ ಆಕೆಗೆ 'ನೃತ್ಯ ವಿದ್ಯಾಧರಿ' ಮತ್ತು 'ಅಭಿನಯ ಸರಸ್ವತಿ' ಎಂಬ ಬಿರುದುಗಳಿದ್ದವು.

ದ್ವಾರಸಮುದ್ರದ ಹೊಯ್ಸಳರು

ಹೊಯ್ಸಳರು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದರು. ದ್ವಾರಸಮುದ್ರ (ಹಳೇಬೀಡು) ಅವರ ರಾಜಧಾನಿ. ಶಶಕಪುರ ಅಥವಾ ಸೊಸೆವೂರು (ಚಿಕ್ಕಮಗಳೂರು ಜಿಲ್ಲೆಯ ಅಂಗಡಿ) ಮತ್ತು ಬೇಲೂರು ಬೇರೆ ಬೇರೆ ಸಮಯದಲ್ಲಿ ಅವರ ರಾಜಧಾನಿಗಳಾಗಿದ್ದವು. ಸಳ ಈ ಸಾಮ್ರಾಜ್ಯದ ಸ್ಥಾಪಕ. ಸಳ ಹುಲಿಯನ್ನು ಕೊಲ್ಲುತ್ತಿರುವ ದೃಶ್ಯ ಹೊಯ್ಸಳರ ರಾಜಲಾಂಛನವಾಗಿದೆ.

ವರ್ಧಮಾನ ಸುದತ್ತಾಚಾರ್ಯ ಎಂಬ ಜೈನಮುನಿ ಶಶಕಪುರದಲ್ಲಿನ ವಾಸಂತಿಕದೇವಿ ದೇವಾಲಯದ ಬಳಿ ಧ್ಯಾನ ಮಾಡುತ್ತಿದ್ದನು. ಆ ದೇವಾಲಯ ದಟ್ಟ ಅರಣ್ಯದಿಂದ ಸುತ್ತುವರಿಯಲ್ಪಟ್ಟಿತ್ತು. ಆ ಅರಣ್ಯದಿಂದ ಹುಲಿಯೊಂದು ಪ್ರತ್ಯಕ್ಷವಾಗಿ ಭಕ್ತರಲ್ಲಿ ಭಯವನ್ನುಂಟು ಮಾಡಿತು. ಆಗ ಜೈನಮುನಿ ಕಬ್ಬಿಣದ ಆಯುಧವನ್ನು ನೀಡಿ ಸಳನಿಗೆ ಪೊಯ್–ಸಳ (ಕೊಲ್ಲು) ಎಂದು ಆದೇಶಿಸಿದನು. ಅವನು ಹುಲಿಯನ್ನು ಕೊಂದನು. ಆಗ ಜೈನಮುನಿ ಸಳನನ್ನು ಆಶೀರ್ವದಿಸಿದನು ಮತ್ತು ಸಳ ರಾಜ್ಯವನ್ನು ಸ್ಥಾಪಿಸಿದನು. ಆದ್ದರಿಂದ ಆ ಸಾಮ್ರಾಜ್ಯವನ್ನು ಹೊಯ್ಸಳ ಸಾಮ್ರಾಜ್ಯವೆಂದು ಕರೆಯಲಾಯಿತು. ಮತ್ತು ಸಳ ಹುಲಿಯನ್ನು ಕೊಲ್ಲುತ್ತಿರುವ ದೃಶ್ಯವನ್ನು ಲಾಂಛನವಾಗಿ ಮಾಡಿಕೊಳ್ಳಲಾಗಿದೆ.

ವಿನಯಾದಿತ್ಯ ಮತ್ತು 1ನೇ ಬಲ್ಲಾಳ ಸಳನ ಉತ್ತರಾಧಿಕಾರಿಗಳಾದರು, 1ನೇ ಬಲ್ಲಾಳ ಹೊಯ್ಸಳ ಸಾಮ್ರಾಜ್ಯದ ಏಳಿಗೆಗೆ ಕಾರಣಕರ್ತನಾದನು. ಅವನು 6ನೇ ವಿಕ್ರಮಾದಿತ್ಯನ ಪ್ರಮುಖ ಸಾಮಂತರಲ್ಲಿ ಒಬ್ಬನಾಗಿದ್ದನು. ಅವನು 6ನೇ ವಿಕ್ರಮಾದಿತ್ಯನ ವಿರುದ್ಧ ದಂಗೆಯೆದ್ದು ಸ್ವತಂತ್ರ್ಯನಾಗಲು ಪ್ರಯತ್ನಿಸಿದನು ಆದರೆ ವಿಫಲನಾದನು.

ವಿಷ್ಣುವರ್ಧನ (ಬಿಟ್ಟಿದೇವ) (ಸಾ.ಶ 1108–1152)

ವಿಷ್ಣುವರ್ಧನ ಹೊಯ್ಸಳರಲ್ಲೆ ಅತ್ಯಂತ ಪ್ರಮುಖ ಅರಸನಾಗಿದ್ದನು. ಇವನು ಸಹೋದರ ಬಲ್ಲಾಳನ ಅವಧಿಯಲ್ಲಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದನು. ನಂಜನಗೂಡಿನ ಪ್ರಾಂತ್ಯಾಧಿಕಾರಿಯಾಗಿ ಆಡಳಿತದಲ್ಲಿ ಹೆಚ್ಚಿನ ಅನುಭವವನ್ನು ಪಡೆದುಕೊಂಡನು. ತನ್ನ ಶಕ್ತಿ ಮತ್ತು ಸಾಮರ್ಥ್ಯದಿಂದ ದಕ್ಷಿಣ ಭಾರತದಲ್ಲಿ ಪ್ರಮುಖ ಅರಸನಾದನು. ಅವನಿಗೆ ಅನೇಕ ಬಿರುದುಗಳು ಇದ್ದವು. ಅವು ಅವನ ದಿಗ್ವಿಜಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಅವನು ಸಾ.ಶ 1114 ರ ತಲಕಾಡು ಯುದ್ಧದಲ್ಲಿ ಚೋಳರನ್ನು ಸಂಪೂರ್ಣವಾಗಿ ಸೋಲಿಸಿ ಗಂಗವಾಡಿಯಿಂದಲೇ ಹೊರ ಹಾಕಿದನು ಮತ್ತು 'ತಲಕಾಡುಗೊಂಡ' ಎಂಬ ಬಿರುದನ್ನು ಪಡೆದುಕೊಂಡನು. ಈ ದಿಗ್ವಿಜಯದ ನೆನಪಿಗಾಗಿ ಬೇಲೂರಿನಲ್ಲಿ(ವೇಲಾಪುರ) ಚೆನ್ನಕೇಶವ, ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯಗಳನ್ನು ನಿರ್ಮಿಸಿದನು. ಈ ವಿಜಯದ ನಂತರ ಅವನು ಹೊರಡಿಸಿದ ನಾಣ್ಯಗಳು 'ಶ್ರೀ ತಲಕಾಡುಗೊಂಡ'

ಎಂಬ ಬಿರುದನ್ನು ಒಳಗೊಂಡಿವೆ. ನಂತರ ಅವನು ಕೊಂಗು, ನಂಗಲಿ, ನೊಳಂಬವಾಡಿ, ಮತ್ತು ಹಾನಗಲ್ಲುಗಳನ್ನು ಜಯಿಸಿದನು. ಅಲ್ಲದೆ ಕೋಲಾರದಿಂದ ಚೋಳರನ್ನು ಹೊರಹಾಕಿದನೆಂದು ಮಳವಳ್ಳಿ ಶಾಸನ ತಿಳಿಸುತ್ತದೆ. ನಂತರ ಚೋಳರನ್ನು ಕಂಚಿಯವರೆಗೆ ಅಟ್ಟಿ 'ಕಂಚಿಗೊಂಡ' ಎಂಬ ಬಿರುದು ಪಡೆದನು. ಮಧುರೈಯ ಮೇಲೆ ದಾಳಿಮಾಡಿ ಪಾಂಡ್ಯರನ್ನು ಸೋಲಿಸಿದನು. ಉಚ್ಚಂಗಿ ಪಾಂಡ್ಯರನ್ನು ಸೋಲಿಸಿ ರಾಮೇಶ್ವರದವರೆಗೂ ಮುಂದುವರೆದನು. ವಿಷ್ಣುವರ್ಧನನ ಈ ಎಲ್ಲಾ ದಂಡಯಾತ್ರೆಗಳಲ್ಲಿ ಅವನ ದಂಡನಾಯಕ ಗಂಗರಾಜ ಪ್ರಮುಖ ಪಾತ್ರವಹಿಸಿದನು.

ವಿಷ್ಣುವರ್ಧನ ಚೋಳರನ್ನು ಕರ್ನಾಟಕದಿಂದ ಹೊರ ಹಾಕಿ ಖ್ಯಾತಿಯನ್ನುಗಳಿಸಿದನು. ನಂತರ ಕೊಂಗಾಳ್ವರು ಮತ್ತು ನಿಡುಗಲ್ಲಿನ ಚೋಳರನ್ನು ಸೋಲಿಸಿದನು. ಕೊಂಗಾಳ್ವರ ಅರಸ ತನ್ನ ಮಗಳಾದ ಚಂದಲಾದೇವಿಯನ್ನು ವಿಷ್ಣುವರ್ಧನನಿಗೆ ಮದುವೆ ಮಾಡಿಕೊಟ್ಟನು ಅಲ್ಲದೆ ಆಳ್ವಖೇಡದ ಆಲುಪರನ್ನು ಸೋಲಿಸಿದನು. ವಿಷ್ಣುವರ್ಧನ ಕಲ್ಯಾಣಿ ಚಾಲುಕ್ಯರ ಪ್ರಭುತ್ವವನ್ನು ಕಿತ್ತೊಗೆಯಲು ಪ್ರಯತ್ನಿಸಿದನು. ಆದರೆ ಸಾ.ಶ 1118ರ ಕನ್ನೆಗಾಲ ಯುದ್ಧದಲ್ಲಿ ಅವನನ್ನು 6ನೆಯ ವಿಕ್ರಮಾದಿತ್ಯ ಸೋಲಿಸಿದನು. 6ನೇ ವಿಕ್ರಮಾದಿತ್ಯನ ಮರಣದವರೆಗೆ ಚಾಲುಕ್ಯರ ಸಾರ್ವಭೌಮತ್ವ ಮುಂದುವರೆಯಿತು. 6ನೇಯ ವಿಕ್ರಮಾದಿತ್ಯನ ಉತ್ತರಾಧಿಕಾರಿ ಸೋಮೇಶ್ವರನ ಮರಣದ ನಂತರ ವಿಷ್ಣುವರ್ಧನ ಉತ್ತರದ ತುಂಗಭದ್ರ ನದಿಯವರೆಗೆ ದಂಡೆತ್ತಿ ಹೋದನು. ಸಾ.ಶ 1140 ರಲ್ಲಿ ಹಾನಗಲ್ಲು, ಉಚ್ಚಂಗಿ, ಬಂಕಾಪುರ ಮತ್ತು ಬನವಾಸಿಯನ್ನು ಜಯಿಸಿದನು. ಸಾ.ಶ 1142ರಲ್ಲಿ ಲಕ್ಕುಂಡಿಯನ್ನು ಜಯಿಸಿದನು. ಸಾ.ಶ 1152 ರಲ್ಲಿ ಮರಣ ಹೊಂದಿದನು. ವಿಷ್ಣುವರ್ಧನನಿಗಿದ್ದ ಇತರೆ ಬಿರುದುಗಳೆಂದರೆ 'ಮಹಾಮಂಡಲೇಶ್ವರ' 'ಚಾಲುಕ್ಯ–ಮಣಿ–ಮಾಂಡಲೀಕ ಚೂಡಾಮಣಿ'. 'ತತ್ವಾದ ಪದ್ಮೋಪಜೀವನ್', 'ಮಲೆಪೆರೊಳ್ ಗಂಡ' ಇತ್ಯಾದಿ.

ಹೊಯ್ಸಳರ ಸಾಂಸ್ಕೃತಿಕ ಕೊಡುಗೆಗಳು

ಹೊಯ್ಸಳ ಅರಸರು ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಶ್ರೀಮಂತ ಕೊಡುಗೆಗಳನ್ನು ನೀಡಿದ್ದಾರೆ. ಈ ಅವಧಿಯಲ್ಲಿ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯಲ್ಲಿ ವಿಶಿಷ್ಟವಾದ ಶೈಲಿ ಬೆಳೆಯಿತು. ಭಾರತದ ಇತಿಹಾಸದಲ್ಲಿ ಅವರ ಕಾಲವನ್ನು "ದೇವಾಲಯಗಳ ವಾಸ್ತು ಶಿಲ್ಪದ ಸುವರ್ಣ ಯುಗ" ವೆಂದು ಕರೆಯಲಾಗಿದೆ.

ಧರ್ಮ :

ಹೊಯ್ಸಳರು ಶೈವ, ವೈಷ್ಣವ ಮತ್ತು ಜೈನ ಧರ್ಮಗಳನ್ನು ಪೋಷಿಸಿದರು. ಹಲವಾರು ಅರಸರು ಜೈನಧರ್ಮವನ್ನು ಅನುಸರಿಸಿದರು. ಬಿಟ್ಟಿದೇವ (ವಿಷ್ಣುವರ್ಧನ) ಜೈನನಾಗಿದ್ದನು. ಅವನು ರಾಮಾನುಜರಿಂದ ಪ್ರಭಾವಿತನಾಗಿ ವೈಷ್ಣವ ಧರ್ಮಕ್ಕೆ ಮತಾಂತರಗೊಂಡನು. ಬಿಟ್ಟಿದೇವ ಎಂಬ ತನ್ನ ಹೆಸರನ್ನು ವಿಷ್ಣುವರ್ಧನ ಎಂದು ಬದಲಾಯಿಸಿಕೊಂಡನು. ವಿಷ್ಣುವರ್ಧನನ ರಾಣಿ ಶಾಂತಲದೇವಿ ಮತ್ತು ಹಲವು ಸೇನಾಧಿಪತಿಗಳು ಜೈನರಾಗಿದ್ದರು. ಇದು ವಿಷ್ಣುವರ್ಧನನ ಧಾರ್ಮಿಕ ಸಹಿಷ್ಣುತೆಯನ್ನು ತೋರಿಸುತ್ತದೆ.

ಸಾಹಿತ್ಯ:

ಹೊಯ್ಸಳರ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಬೆಳೆದವು. ಅವರ ಪ್ರಮುಖ ಸಾಹಿತ್ಯ ಕೃತಿಗಳೆಂದರೆ:

ಕನ್ನಡ ಕೃತಿಗಳು

ನಾಗಚಂದ್ರ ... ಮಲ್ಲಿನಾಥಪುರಾಣ, ರಾಮಚಂದ್ರ ಚರಿತ ಪುರಾಣ ಮತ್ತು ಪಂಪ ರಾಮಾಯಣ

ರಾಜಾದಿತ್ಯ ... ಕ್ಷೇತ್ರ ಗಣಿತ, ವ್ಯವಹಾರ ಗಣಿತ ಮತ್ತು ಲೀಲಾವತಿ

ನಯಸೇನ ... ಧರ್ಮಾಮೃತ
ರಾಘವಾಂಕ ... ಹರಿಶ್ಚಂದ್ರ ಕಾವ್ಯ, ಸಿದ್ಧರಾಮಪುರಾಣ
ಹರಿಹರ ... ಗಿರಿಜಾಕಲ್ಯಾಣ, ಪಂಪಶತಕ, ಶಿವಾಕ್ಷರಮಾಲೆ
ಜನ್ನ ... ಯಶೋಧರ ಚರಿತೆ, ಮತ್ತು ಅನಂತನಾಥ ಪುರಾಣ
ಕೇಶಿರಾಜ ... ಶಬ್ದಮಣಿದರ್ಪಣ

ಸಂಸ್ಕೃತ ಕೃತಿಗಳು

ತ್ರಿವಿಕ್ರಮಪಂಡಿತ ... ಉಷಾಹರಣ
ನಾರಾಯಣಪಂಡಿತ ... ಮಾಧವ ವಿಜಯ ಮತ್ತು ಮಣಿ ಮಂಜರಿ
3ನೇ ಸಕಲ ವಿದ್ಯಾಚಕ್ರವರ್ತಿ ರುಕ್ಮಿಣಿ ಕಲ್ಯಾಣ

ಕಲೆ ಮತ್ತು ವಾಸ್ತು ಶಿಲ್ಪ

ಹೊಯ್ಸಳರು ವೇಸರ ಮತ್ತು ದ್ರಾವಿಡ ಶೈಲಿಗಳನ್ನು ಸೇರಿಸಿ 'ಹೊಯ್ಸಳ ಶೈಲಿ' ಎಂಬ ಹೊಸ ವಾಸ್ತುಶಿಲ್ಪ ಶೈಲಿಯನ್ನು ಬೆಳೆಸಿದರು. ಈ ಶೈಲಿಯ ಪ್ರಮುಖ ಲಕ್ಷಣಗಳೆಂದರೆ:

1. ನಕ್ಷತ್ರಾಕಾರದ ತಳಪಾಯ
2. ಸುಮಾರು 4 ಅಡಿ ಎತ್ತರದ ನಕ್ಷತ್ರಾಕಾರದ ಜಗತಿ.
3. ದೇವಾಲಯದ ಸುತ್ತಲಿರುವ ಜಗತಿ ತೆರೆದ ಪ್ರದಕ್ಷಿಣ ಪಥವಾಗಿದೆ.
4. ವೈವಿಧ್ಯಮಯ ರಚನೆ/ವಿನ್ಯಾಸಗಳನ್ನೊಳಗೊಂಡ ನುಣುಪಾದ ಕಂಬಗಳು.
5. ವಿಸ್ತೃತ ಕೆತ್ತನೆ ಮತ್ತು ಸುಂದರವಾಗಿ ಕೆತ್ತಿರುವ ಮದನಿಕೆಯರ ವಿಗ್ರಹಗಳು
6. ವಿಶಾಲವಾದ ನವರಂಗ (ಮಧ್ಯ)
7. ಭುವನೇಶ್ವರಿ (ಕೆತ್ತನೆಗಳನ್ನೊಳಗೊಂಡ ಮೇಲ್ಛಾವಣಿ)
8. ಪಿರಾಮಿಡ್ಡಿನಾಕಾರದಲ್ಲಿರುವ ವಿಮಾನ(ಶಿಖರ)
9. ಒಂದರಿಂದ ಐದು ಗರ್ಭಗೃಹಗಳು (ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟ)


ಮದನಿಕೆ

ಅವರು 100 ಕ್ಕೂ ಹೆಚ್ಚು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬೇಲೂರಿನ ಚನ್ನಕೇಶವ (ಏಕಕೂಟ), ಹಳೇಬೀಡಿನ ಹೊಯ್ಸಳೇಶ್ವರ (ದ್ವಿಕೂಟ), ಸೋಮನಾಥಪುರದ ಕೇಶವ (ತ್ರಿಕೂಟ) ದೊಡ್ಡಗದ್ದವಳ್ಳಿಯ ಲಕ್ಷ್ಮೀ (ಚತುಷ್ಕೂಟ), ಗೋವಿಂದನ ಹಳ್ಳಿಯ ಪಂಚಲಿಂಗೇಶ್ವರ (ಪಂಚಕೂಟ), ತಲಕಾಡಿನ ಕೀರ್ತಿನಾರಾಯಣ, ಹರಿಹರದ ಹರಿಹರೇಶ್ವರ, ಬಂಕಾಪುರದ ಶಿವ ದೇವಾಲಯ, ಅಮೃತಪುರದ

ಅಮೃತೇಶ್ವರ, ಅರಸೀಕೆರೆಯ ವೀರಬಲ್ಲಾಳ ದೇವಾಲಯ ಮುಂತಾದವುಗಳು. ಅವರು ಅನೇಕ ಬಸದಿಗಳನ್ನು ಜೀರ್ಣೋದ್ಧಾರ ಮಾಡಿದರಲ್ಲದೆ ಹೊಸ ಬಸದಿಗಳನ್ನೂ ನಿರ್ಮಿಸಿದರು. ವಿಷ್ಣುವರ್ಧನನ ರಾಣಿ ಶಾಂತಲೆ 'ಸವತಿ ಗಂಧವಾರಣ' ಬಸದಿಯನ್ನು ಶ್ರವಣಬೆಳಗೊಳದಲ್ಲಿ ನಿರ್ಮಿಸಿದಳು.

ಹೊಯ್ಸಳರ ಕಾಲದಲ್ಲಿ ವಾದ್ಯ ಮತ್ತು ಸಂಗೀತದ ಜೊತೆಗೆ ನೃತ್ಯವೂ ಬೆಳೆಯಿತು. ಹಲವು ರಾಣಿಯರು ನೃತ್ಯಗಾರ್ತಿಯರಾಗಿದ್ದರು. ವಿಷ್ಣುವರ್ಧನನ ರಾಣಿ ಶಾಂತಲೆ 'ನಾಟ್ಯ ಸರಸ್ವತಿ' ಎಂದು ಪ್ರಖ್ಯಾತಳಾಗಿದ್ದಳು.



ಚನ್ನಕೇಶವ ದೇವಾಲಯ, ಬೇಲೂರು

ಚಟುವಟಿಕೆ

ಹೊಯ್ಸಳರು ಮತ್ತು ನಂತರದ ಚಾಲುಕ್ಯರ ಪ್ರಮುಖ ದೇವಾಲಯಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಕಲ್ಯಾಣಿ ಚಾಲುಕ್ಯರ ಸ್ಥಾಪಕ ಯಾರು?
2. ಕಲ್ಯಾಣಿ ಚಾಲುಕ್ಯರ ಮೊದಲ ರಾಜಧಾನಿ ಯಾವುದು?
3. ರನ್ನನ ಆಶ್ರಯದಾತ ಯಾರು?
4. 'ಕವಿಚಕ್ರವರ್ತಿ' ಎಂಬ ಬಿರುದು ಹೊಂದಿದವರು ಯಾರು?
5. ಯಾವ ಕೃತಿಯನ್ನು ಸಂಸ್ಕೃತದ ಮೊದಲ ವಿಶ್ವಕೋಶ ಎಂದು ಪರಿಗಣಿಸಲಾಗಿದೆ?
6. ಹೊಯ್ಸಳ ರಾಜ್ಯದ ಸ್ಥಾಪಕ ಯಾರು?
7. ಹೊಯ್ಸಳರ ರಾಜಲಾಂಛನ ಯಾವುದು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. 'ವಿಕ್ರಮ ಶಕ'ವನ್ನು ಯಾರು ಮತ್ತು ಯಾವಾಗ ಆರಂಭಿಸಿದರು?
2. 6ನೇ ವಿಕ್ರಮಾದಿತ್ಯನಿಗಿದ್ದ ಯಾವುದಾದರು ಎರಡು ಬಿರುದುಗಳನ್ನು ತಿಳಿಸಿ.
3. ರನ್ನನ ಯಾವುದಾದರು ಎರಡು ಕೃತಿಗಳನ್ನು ಹೆಸರಿಸಿ.
4. 6ನೇ ವಿಕ್ರಮಾದಿತ್ಯನ ಆಸ್ಥಾನ ಕವಿ ಯಾರು? ಅವನ ಕೃತಿಯನ್ನು ಹೆಸರಿಸಿ.

5. ಹೊಯ್ಸಳರ ಯಾವುದಾದರು ಎರಡು ರಾಜಧಾನಿಗಳನ್ನು ಹೆಸರಿಸಿ.
6. ವಿಷ್ಣುವರ್ಧನನ ಯಾವುದಾದರೂ ಎರಡು ಬಿರುದುಗಳನ್ನು ತಿಳಿಸಿ.
7. ಹೊಯ್ಸಳರ ಯಾವುದಾದರು ಎರಡು ಪ್ರಸಿದ್ಧ ದೇವಾಲಯಗಳನ್ನು ಹೆಸರಿಸಿ.

III. ಈ ಕೆಳಗಿನ ಪ್ರಶ್ನೆಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಕಲ್ಯಾಣದ ಚಾಲುಕ್ಯರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿ.
2. ವಿಷ್ಣುವರ್ಧನನ ಸಾಧನೆಗಳನ್ನು ವಿವರಿಸಿ.
3. ಧರ್ಮ ಮತ್ತು ಸಾಹಿತ್ಯಕ್ಕೆ ಹೊಯ್ಸಳರ ಕೊಡುಗೆಗಳನ್ನು ನಿರೂಪಿಸಿ.
4. ಹೊಯ್ಸಳ ವಾಸ್ತು ಶೈಲಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.

❋ ❋ ❋ ❋

ಅಧ್ಯಾಯ–5

ಮಧ್ಯಕಾಲೀನ ಯುಗ

ಅಧ್ಯಾಯ 5.1
ದೆಹಲಿ ಸುಲ್ತಾನರು

ಹರ್ಷವರ್ಧನನ ಮರಣಾನಂತರ ಉತ್ತರ ಭಾರತದಲ್ಲಿ ಮಹತ್ತರ ಬದಲಾವಣೆಯಾಯಿತು. ಬಲಿಷ್ಠ ರಾಜಕೀಯ ಶಕ್ತಿಯು ಇಲ್ಲದಿದ್ದರಿಂದ ದೆಹಲಿಯಲ್ಲಿ ತೋಮರರು, ಅಜ್ಮೀರ್‌ದಲ್ಲಿ ಚೌಹಾಣರು, ಕನೌಜ್‌ನಲ್ಲಿ ರಾಥೋಡರು, ಬುಂದೇಲ್‌ಖಂಡದಲ್ಲಿ ಚಂದೇಲರು, ಮಾಳ್ವದಲ್ಲಿ ಪರಮಾರರು, ಮೇವಾರದಲ್ಲಿ ಸಿಸೋದಿಯನ್ನರು ಮುಂತಾದ ಹಲವಾರು ಸ್ವತಂತ್ರ್ಯ ರಾಜ್ಯಗಳ ಏಳಿಗೆಗೆ ಅವಕಾಶವಾಯಿತು. ಸಾ.ಶ 8 ರಿಂದ 12ನೇ ಶತಮಾನಗಳ ಅವಧಿಯಲ್ಲಿ ಉತ್ತರ ಭಾರತದಲ್ಲಿ ಸುಮಾರು 70 ಸ್ವತಂತ್ರ್ಯ ರಾಜ್ಯಗಳಿದ್ದವು. ಈ ರಾಜ್ಯಗಳು ಶ್ರೀಮಂತವಾಗಿದ್ದವು. ಆದರೆ ತಮ್ಮ ತಮ್ಮಲ್ಲಿ ಕಚ್ಚಾಡುತ್ತಿದ್ದವು. ಈ ಅನೈಕ್ಯತೆ ವಿದೇಶೀಯರ ದಾಳಿಗೆ ಕಾರಣವಾಯಿತು.

ಭಾರತದ ಮೇಲೆ ದಾಳಿ ಮಾಡಿದ ಮುಸ್ಲಿಮರಲ್ಲಿ ಅರಬ್ಬರು ಮೊದಲಿಗರು. ಅವರು ಸಿಂಧ್ ಪ್ರಾಂತ್ಯದವರೆಗೆ ತಮ್ಮ ಅಧಿಕಾರವನ್ನು ವಿಸ್ತರಿಸಿದ್ದರು. ಬಸ್ರಾದ ರಾಜ್ಯಪಾಲನಾಗಿದ್ದ ಮೊಹಮದ್ ಬಿನ್ ಖಾಸಿಂನು ಸಾ.ಶ. 712ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದನು. ಭಾರತದ ಮೇಲೆ ಆಕ್ರಮಣ ಮಾಡಿದ ಮುಸ್ಲಿಮರಲ್ಲಿ ತುರ್ಕರು ಎರಡನೆಯವರು. ಸಾ.ಶ. 1000 ದಿಂದ 1027ರವರೆಗೆ ಘಜ್ನಿ ಮಹಮದ್ ಭಾರತದ ಮೇಲೆ 17 ಬಾರಿ ದಂಡಯಾತ್ರೆ ಮಾಡಿದನು. ಇವನ ಪುನರಾವರ್ತಿತ ಆಕ್ರಮಣಗಳು ದೊಡ್ಡ ನಗರಗಳ ಮತ್ತು ಶ್ರೀಮಂತ ದೇವಸ್ಥಾನಗಳ ಸಂಪತ್ತನ್ನು ಲೂಟಿ ಮಾಡುವುದಕ್ಕಾಗಿಯೇ ಆಗಿದ್ದವು. 15ನೆಯ ದಂಡಯಾತ್ರೆಯನ್ನು ಗುಜರಾತಿನ ಪ್ರಸಿದ್ಧ ಸೋಮನಾಥ ದೇವಾಲಯದ ಮೇಲೆ ಮಾಡಲಾಯಿತು. ಪರ್ಷಿಯಾದ ವಿದ್ವಾಂಸ ಅಲ್ಬೆರುನಿಯು ಅವನ ಒಂದು ದಂಡಯಾತ್ರೆಯಲ್ಲಿ ಅವನೊಂದಿಗೆ ಆಗಮಿಸಿದ್ದನು. ಅವನು ಕಿತಾಬ್–ಉಲ್–ಹಿಂದ್ ಎಂಬ ಪ್ರಸಿದ್ಧ ಗ್ರಂಥವನ್ನು ರಚಿಸಿದನು.

ಸಾ.ಶ. 1030ರಲ್ಲಿ ಘಜ್ನಿ ಮಹಮದ್ ಮರಣ ಹೊಂದಿದ ನಂತರ ಸುಮಾರು ಒಂದೂವರೆ ಶತಮಾನಗಳ ಕಾಲ ಭಾರತವು ಯಾವುದೇ ದಾಳಿಗೊಳಪಡಲಿಲ್ಲ. ಸಾ.ಶ. 1175ರಲ್ಲಿ ಷಹಬುದ್ದೀನ್ ಮಹಮದ್ ಘೋರಿಯು ಭಾರತದ ಮೇಲೆ ದಾಳಿ ಮಾಡಿದನು. ಸಾ.ಶ. 1191ರಲ್ಲಿ ನಡೆದ ಮೊದಲನೇ ತರೈನ್ ಕದನದಲ್ಲಿ ಮಹಮದ್ ಘೋರಿಯನ್ನು ಪೃಥ್ವಿರಾಜ್ ಚೌಹಾಣ್ ಸೋಲಿಸಿದನು. ಸಾ ಶ 1192 ರಲ್ಲಿ ನಡೆದ 2ನೆಯ ತರೈನ್ ಕದನದಲ್ಲಿ ಪೃಥ್ವಿರಾಜ್ ಚೌಹಾಣ್‌ನನ್ನು ಸೋಲಿಸಿ ಸೆರೆ ಹಿಡಿಯಲಾಯಿತು. ಈ ಯುದ್ಧದ ನಂತರ ಘೋರಿಯು ಅಜ್ಮೀರ್ ಮತ್ತು ದೆಹಲಿಗಳನ್ನು ವಶಪಡಿಸಿಕೊಂಡು ಭಾರತದಲ್ಲಿ ಮುಸ್ಲಿಮರ ಆಳ್ವಿಕೆಯನ್ನು ಸ್ಥಾಪಿಸಿದನು. ಕನೌಜ್‌ನ ಗಹದ್ವಾಲ ರಾಜ ಜೈಚಂದ್ರನನ್ನು ಸೋಲಿಸಿದ ನಂತರ ತುರ್ಕರ ಆಳ್ವಿಕೆಯು ಗಂಗಾ–ಯಮುನಾ ನದಿಗಳ ದೋಅಬ್ ಪ್ರದೇಶದ ಮೇಲೂ ವಿಸ್ತರಿಲ್ಪಟ್ಟಿತು. ಮಹಮದ್ ಘೋರಿಯು ತಾನುಗೆದ್ದ ಭಾರತೀಯ

ಪ್ರದೇಶಗಳ ಆಡಳಿತವನ್ನು ತನ್ನ ನಂಬಿಕಸ್ತ ಗುಲಾಮನೂ ಮತ್ತು ಸೇನಾನಿಯೂ ಆಗಿದ್ದ ಕುತುಬ್–ಉದ್–ದಿನ್ ಐಬಕ್‌ಗೆ ವಹಿಸಿದನು.

ಮಹಮದ್ ಘೋರಿಯು ಸಾ. ಶ. 1206ರಲ್ಲಿ ಮರಣ ಹೊಂದಿದನು. ಇದಾದ ನಂತರ ಕುತುಬ್–ಉದ್–ದಿನ್ ಐಬಕ್ ಬಾಗ್ದಾದಿನ ಕಲೀಫನಿಂದ 'ದಾಸ್ಯವಿಮೋಚನೆ' ಯನ್ನು ಪಡೆದು ಸ್ವಾತಂತ್ರ್ಯ ಘೋಷಿಸಿಕೊಂಡನು. ಹೀಗಾಗಿ ಐಬಕ್‌ನನ್ನು 'ಮಾಮುಲುಕ್' ಅಥವಾ 'ಗುಲಾಮಿ' ಸಂತತಿಯ ಸಂಸ್ಥಾಪಕನೆಂದು ತಿಳಿಯಲಾಗಿದೆ. 'ಮಾಮುಲಕ್' ಎಂದರೆ ಗುಲಾಮ ಎಂದರ್ಥ. ದೆಹಲಿಯಲ್ಲಿ 'ಕುತುಬ್ ಮಿನಾರ್' ನಿರ್ಮಿಸಿದ್ದರಿಂದ ಐಬಕ್ ಪ್ರಸಿದ್ಧನಾಗಿದ್ದಾನೆ.

ದೆಹಲಿಯನ್ನು ಈ ಕೆಳಕಂಡ 5 ಸುಲ್ತಾನ ಸಂತತಿಗಳು ಆಳಿದವು.

1. ಗುಲಾಮಿ ಸಂತತಿ (ಸಾ.ಶ. 1206 ರಿಂದ 1290)
2. ಖಿಲ್ಜಿ ಸಂತತಿ (ಸಾ.ಶ. 1290 ರಿಂದ 1320)
3. ತೊಘಲಕ್ ಸಂತತಿ (ಸಾ.ಶ. 1320 ರಿಂದ 1413)
4. ಸೈಯದ್ ಸಂತತಿ (ಸಾ.ಶ. 1414 ರಿಂದ 1451)
5. ಲೋದಿ ಸಂತತಿ (ಸಾ.ಶ. 1451 ರಿಂದ 1526)

ಗುಲಾಮಿ ಸಂತತಿಯ ಪ್ರಮುಖ ಸುಲ್ತಾನರು

(1) ಕುತುಬ್–ಉದ್–ದಿನ್–ಐಬಕ್, (2). ಇಲ್ತುಮಶ್, (3). ರಜಿಯಾಬೇಗಂ (ಸುಲ್ತಾನ) ಮಧ್ಯಕಾಲೀನ ಭಾರತದ ಮೊದಲ ಮುಸ್ಲಿಂ ಮಹಿಳಾ ಸಾಮ್ರಾಜ್ಞಿ, (4). ಬಲ್ಬನ್ (5). ಕೈಕುಬಾದ್

ಖಿಲ್ಜಿ ಸಂತತಿ (ಸಾ.ಶ. 1290 ರಿಂದ 1320)

ಖಿಲ್ಜಿ ಎಂಬ ಪದವು ಟರ್ಕಿ ಭಾಷೆಯಲ್ಲಿ 'ಖಡ್ಗಧಾರಿ ಪುರುಷರು' ಎಂಬ ಅರ್ಥದ್ದಾಗಿದೆ. ಜಲಾಲ್ ಉದ್ದೀನ್ ಖಿಲ್ಜಿ ಖಿಲ್ಜಿ ಸಂತತಿಯ ಸಂಸ್ಥಾಪಕ. ಇವನು ಸಾ.ಶ. 1290 ರಲ್ಲಿ ಅಧಿಕಾರಕ್ಕೆ ಬಂದನು. ಅವನ ಸಹೋದರನ ಮಗ ಅಲ್ಲಾವುದ್ದೀನ್ ಖಿಲ್ಜಿ ಎಂಬ ಮಹತ್ವಾಕಾಂಕ್ಷಿಯು ಸಾ.ಶ. 1296 ರಲ್ಲಿ ಅವನನ್ನು ಕೊಂದು ಉತ್ತರಾಧಿಕಾರಿಯಾದನು.

ಅಲ್ಲಾವುದ್ದೀನ್ ಖಿಲ್ಜಿ: (ಸಾ.ಶ. 1296–1316)

ಅಲಿಗುರ್ಷಪ್ ಎಂಬುದು ಅಲ್ಲಾವುದ್ದೀನ್ ಖಿಲ್ಜಿಯ ಮೊದಲ ಹೆಸರು. ಅತ್ಯಂತ ಸಣ್ಣ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡನು. ಜಲಾಲ್‌ವುದ್ದೀನ್ ಅವನನ್ನು ಮಮತೆಯಿಂದ ಬೆಳೆಸಿದನು. ಅಲ್ಲಾವುದ್ದೀನನು ಜಲಾಲ್‌ವುದ್ದೀನನ ಮಗಳನ್ನು ವಿವಾಹವಾದನು. ಜಲಾಲ್‌ವುದ್ದೀನನು ಅವನನ್ನು ಕರಾ ಪ್ರಾಂತ್ಯದ ರಾಜ್ಯಪಾಲನನ್ನಾಗಿ ನೇಮಿಸಿದನು. ಸಾ.ಶ. 1292 ರಲ್ಲಿ ಅಲ್ಲಾವುದ್ದೀನನು ಮಾಳ್ವವನ್ನು ಆಕ್ರಮಿಸಿ ಬಿಲ್ಸಾ ನಗರವನ್ನು ವಶಪಡಿಸಿಕೊಂಡನು. ಅವನು ಸುಲ್ತಾನನ ಅನುಮತಿ ಇಲ್ಲದೆ ದಕ್ಷಿಣದಲ್ಲಿ ದೇವಗಿರಿಯ ವಿರುದ್ಧ ದಂಡೆತ್ತಿ ಹೋದನು. ದೇವಗಿರಿಯ ರಾಮಚಂದ್ರ ದೇವ ಇವನಿಂದ ಸೋಲಿಸಲ್ಪಟ್ಟನು. ಅಲ್ಲಾವುದ್ದೀನ್ ಖಿಲ್ಜಿಯು ದೇವಗಿರಿಯ ಅಪಾರ ಸಂಪತ್ತಾದ ಚಿನ್ನ, ಬೆಳ್ಳಿ, ಮುತ್ತುಗಳು ಮತ್ತು ಬೆಲೆ ಬಾಳುವ ಹರಳುಗಳ ಭಾರಿ ಮೊತ್ತದ ಲೂಟಿಯೊಂದಿಗೆ ಕರಾಕ್ಕೆ

ಹಿಂದುರಿಗಿದನು. ಜಯಶಾಲಿಯಾದ ಅಲ್ಲಾವುದ್ದೀನ್‌ನನ್ನು ಸ್ವಾಗತಿಸಲು ವೃದ್ಧ ಸುಲ್ತಾನನು ಅವಸರದಿಂದಲೇ ಕರಾಕ್ಕೆ ಆಗಮಿಸಿದನು. ಅಲ್ಲಾವುದ್ದೀನ್ ತನ್ನ ಚಿಕ್ಕಪ್ಪ ಜಲಾಲ್ ಉದ್ದೀನ್ ಖಿಲ್ಜಿಯನ್ನು ಕೊಂದು ತಾನೇ ದೆಹಲಿಯ ಸುಲ್ತಾನನೆಂದು ಘೋಷಿಸಿಕೊಂಡನು.

ಅಲ್ಲಾವುದ್ದೀನ್ ಖಿಲ್ಜಿಯ ಸಾಧನೆಗಳು:

I. ಉತ್ತರಭಾರತದ ದಿಗ್ವಿಜಯಗಳು

ಗುಜರಾತ್ ಆಕ್ರಮಣ: (ಸಾ.ಶ. 1297)

ರಜಪೂತ್ ದೊರೆ ಕರ್ಣದೇವನು ಗುಜರಾತನ್ನು ಆಳುತ್ತಿದ್ದನು. ಅಲ್ಲಾವುದ್ದೀನ್ ಖಿಲ್ಜಿಯ ಸೇನಾ ಪತಿಗಳಾದ ಉಲುಘ್‌ಖಾನ್ ಮತ್ತು ನಜರತ್‌ಖಾನ್ ಸಾ.ಶ. 1297ರಲ್ಲಿ ಗುಜರಾತಿನ ಅನ್ಹಿಲ್‌ವಾಡ, ಸೋಮನಾಥ ಮತ್ತು ಕ್ಯಾಂಬೆಗಳನ್ನು ವಶಪಡಿಸಿಕೊಂಡು ಸಂಪತ್ತನ್ನು ಲೂಟಿ ಮಾಡಿದರು. ರಾಜ ಕರ್ಣದೇವನು ತನ್ನ ಮಗಳಾದ ದೇವಲದೇವಿಯೊಂದಿಗೆ ದೇವಗಿರಿಗೆ ಪಲಾಯನ ಮಾಡಿದನು. ಕರ್ಣದೇವನ ಮಡದಿ ಕಮಲಾದೇವಿಯನ್ನು ಸೇನಾಪತಿಗಳು ಸೆರೆಹಿಡಿದರು. ಅಲ್ಲಾವುದ್ದೀನ್ ಖಿಲ್ಜಿಯು ಅವಳನ್ನು ವಿವಾಹವಾದನು. ಈ ದಂಡೆಯಾತ್ರೆಯ ಸಂದರ್ಭದಲ್ಲಿ ಮಲ್ಲಿಕಾಫರ್ ಎಂಬ ನಪುಂಸಕನನ್ನು ಒಂದು ಸಾವಿರ ದಿನಾರ್‌ಗಳಿಗೆ ಕೊಂಡುಕೊಳ್ಳಲಾಯಿತು. ಆದ್ದರಿಂದ ಅವನು 'ಹಜಾರ್ ದಿನಾರಿ' ಎಂದೇ ಜನಪ್ರಿಯನಾದನು.

ರಣಥಂಬೋರ್ ಆಕ್ರಮಣ : (ಸಾ.ಶ. 1301)

ರಾಜಾ ಹಮೀರ್ ದೇವನು ರಣಥಂಬೋರ್‌ನನ್ನು ಆಳುತ್ತಿದ್ದನು. ಇವನು ಕೆಲವು 'ನವ ಮುಸ್ಲೀಮರಿಗೆ' ಆಶ್ರಯ ನೀಡಿದ್ದನು. ಇದು ಅಲ್ಲಾವುದ್ದೀನ್‌ನನ್ನು ಕೆರಳಿಸಿತ್ತು. ಉಲುಘ್ ಖಾನ್ ಮತ್ತು ನಜರತ್ ಖಾನರು ರಣಥಂಬೋರ್‌ನ ಮೇಲೆ ದಾಳಿ ಮಾಡಿದರು, 11 ತಿಂಗಳ ಮುತ್ತಿಗೆಯ ನಂತರ ಅದನ್ನು ವಶಪಡಿಸಿಕೊಂಡರು. ಹಮೀರ್‌ದೇವನು ಕದನದಲ್ಲಿ ತನ್ನ ಪ್ರಾಣವನ್ನುಕಳೆದುಕೊಂಡನು.

ಮೇವಾರ (ಚಿತ್ತೋರ್) ಆಕ್ರಮಣ: (ಸಾ.ಶ. 1303)

ಮೇವಾಡದ ಸಿಸೋಡಿಯರು ರಜಪೂತರಲ್ಲೇ ಅಪಾರ ಗೌರವ ಹೊಂದಿದ್ದರು. ಅವರ ಚಿತ್ತೋರಿನ ಕೋಟೆಯನ್ನು ಯಾರೂ ವಶಪಡಿಸಿಕೊಳ್ಳಲಾಗದ್ದು ಎಂದು ಪರಿಗಣಿಸಲಾಗಿತ್ತು. ರಾಣಾರತನ್ ಸಿಂಗ್‌ನ ಸುಂದರ ಪತ್ನಿ ಪದ್ಮಿನಿಯನ್ನು ಹೊತ್ತೊಯ್ಯಬೇಕೆಂಬ ಅಲ್ಲಾವುದ್ದೀನ್‌ನ ಬಲವಾದ ಇಚ್ಛೆಯೇ ಈ ಆಕ್ರಮಣಕ್ಕೆ ತಕ್ಷಣದ ಕಾರಣವೆಂಬ ಪ್ರತೀತಿ ಇದೆ. ಯಾವಾಗ ಸೋಲು ಖಚಿತವೆಂದು ಕಂಡು ಬಂದಿತೋ ಪದ್ಮಿನಿ ಮತ್ತಿತರ ರಜಪೂತ ಮಹಿಳೆಯರು 'ಜೌಹಾರ್'ಗೆ ಶರಣಾದರು. ಚಿತ್ತೋರನ್ನು ವಶಪಡಿಸಿಕೊಂಡು ಸುಲ್ತಾನನು ತನ್ನ ಹಿರಿಯಮಗ ಖಿಜರ್ ಖಾನ್‌ನನ್ನು ಚಿತ್ತೋರ್ (ಮೇವಾರದ ರಾಜಧಾನಿ)ನ ರಾಜ್ಯಪಾಲನನ್ನಾಗಿ ಮಾಡಿದನು.

> **ಜೌಹಾರ್:** ರಜಪೂತ ಮಹಿಳೆಯರು ವೈರಿಗಳಿಂದ ತಮ್ಮ ಸತಿತ್ವವನ್ನು ಕಾಪಾಡಿಕೊಳ್ಳಲು ಅಗ್ನಿಕುಂಡದಲ್ಲಿ ಹಾರಿ ತಮ್ಮ ಜೀವಗಳನ್ನು ತ್ಯಾಗ ಮಾಡುವ ಪದ್ಧತಿಯನ್ನು 'ಜೌಹಾರ್' ಎನ್ನುವರು.

ಇತರೆ ಆಕ್ರಮಣಗಳು:

ಮಾಳ್ವ, ಉಜ್ಜೈನ್, ಮಂಡು, ಧಾರ್, ಚಾಂದೇರಿ ಮತ್ತು ಜೋಲೂರ್ ರಾಜ್ಯಗಳನ್ನು ಗೆಲ್ಲುವುದರೊಂದಿಗೆ ಸಾ.ಶ. 1305ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಉತ್ತರ ಭಾರತದ ದಿಗ್ವಿಜಯಗಳನ್ನು ಪೂರ್ಣಗೊಳಿಸಿದನು.

ಮಂಗೋಲಿಯನ್ನರ ದಾಳಿಗಳು:

ಸಾ.ಶ. 1296 ರಿಂದ 1308 ರ ಅವಧಿಯಲ್ಲಿ ಅಲ್ಲಾವುದ್ದೀನ್‌ನು ಮಂಗೋಲಿಯನ್ನರ ಆರಕ್ಕೂ ಹೆಚ್ಚು ದಾಳಿಗಳನ್ನು ಎದುರಿಸಬೇಕಾಯಿತು. ಮಂಗೋಲರ ಪದೇ ಪದೇ ದಾಳಿಗಳಿಂದಾಗಿ ಸಾಮ್ರಾಜ್ಯಕ್ಕೆ ಬೆದರಿಕೆ ಇತ್ತು. ನವ–ಮುಸ್ಲಿಮರೂ ಸಹ ಮಂಗೋಲರಿಗೆ ನೆರವು ನೀಡುತ್ತಿದ್ದರು. ಮಂಗೋಲರ ದಾಳಿಯನ್ನು ಎದುರಿಸಲು ಅಲ್ಲಾವುದ್ದೀನ್ ಖಿಲ್ಜಿಯು ರಸ್ತೆಗಳು ಮತ್ತು ಕೋಟೆಗಳನ್ನು ನಿರ್ಮಿಸುವುದು, ಕಾವಲು ಪಡೆಗಳನ್ನು ಇರಿಸುವುದು, ಸಾಕಷ್ಟು ಸಂಖ್ಯೆಯ ನುರಿತ ಸೈನಿಕರನ್ನು ನಿಶ್ಚಿತ ಅಂತರದಲ್ಲಿ ನೇಮಿಸುವುದು, ನವ–ಮುಸ್ಲಿಮರನ್ನು ನಿರ್ದಯವಾಗಿ ಹತ್ಯೆಗೈಯುವುದು ಮುಂತಾದ ಕ್ರಮಗಳನ್ನು ಕೈಗೊಂಡನು.

ನವ ಮುಸ್ಲಿಮರು: ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಮಂಗೋಲಿಯನ್ನರ ಒಂದು ಗುಂಪಿಗೆ ದೆಹಲಿಯ ಸಮೀಪ ನೆಲೆಸಲು ಜಲಾಲ್ ಉದ್ದೀನ್ ಖಿಲ್ಜಿ ಅವಕಾಶ ಕಲ್ಪಿಸಿದ್ದನು. ಇವರು ನವ–ಮುಸ್ಲಿಮರು (Neo Muslims) ಎಂದು ಕರೆಯಲ್ಪಡುತ್ತಿದ್ದರು. ಅವರು ಅಲ್ಲಾವುದ್ದೀನ್ ಖಿಲ್ಜಿಯನ್ನು ಕೊಲ್ಲುವ ಸಂಚು ರೂಪಿಸಿ, ವಿಫಲರಾಗಿದ್ದರು. ಆದ್ದರಿಂದ ಅಲ್ಲಾವುದ್ದೀನ್ ಖಿಲ್ಜಿಯು ದೆಹಲಿಯ ಸಮೀಪ ನೆಲೆಸಿದ್ದ 30,000 ನವ ಮುಸ್ಲಿಮರನ್ನು ಹತ್ಯೆಮಾಡಿದನು

II ದಕ್ಷಿಣ ಭಾರತದ ದಂಡೆಯಾತ್ರೆಗಳು:


ದಕ್ಷಿಣ ಭಾರತವನ್ನು ಗೆಲ್ಲುವ ಪ್ರಯತ್ನ ಮಾಡಿದ ಮುಸ್ಲಿಂ ಸುಲ್ತಾನರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಮೊದಲಿಗ. ಇವನು ತನ್ನ ಸಮರ್ಥ ಸೇನಾನಿಯಾಗಿದ್ದ ಮಲಿಕಾಫರ್‌ನನ್ನು ದಕ್ಷಿಣ ಭಾರತದ ದಂಡೆಯಾತ್ರೆಗೆ ನಿಯೋಜಿಸಿದನು. ದಕ್ಷಿಣ ಭಾರತದ ಅಪಾರ ಸಂಪತ್ತು ಮತ್ತು ಅದನ್ನು ಆಕ್ರಮಿಸುವ ಅವನ ಮಹತ್ವಾಕಾಂಕ್ಷೆಗಳು ಅವನ ಈ ದಂಡಯಾತ್ರೆಗೆ ಪ್ರಮುಖ ಕಾರಣಗಳಾಗಿದ್ದವು.

ದೇವಗಿರಿಯಮೇಲೆ ಆಕ್ರಮಣ: (ಸಾ.ಶ. 1307)

ದೇವಗಿರಿಯ ರಾಜ ರಾಮಚಂದ್ರ ದೇವನು, ಕರ್ಣದೇವ ಮತ್ತು ಅವನ ಮಗಳು ದೇವಲದೇವಿಯರಿಗೆ ಆಶ್ರಯ ನೀಡಿದ್ದ ಮತ್ತು ಮೂರು ವರ್ಷಗಳಿಂದಲೂ ವಾರ್ಷಿಕ ಕಪ್ಪ ಕಾಣಿಕೆಯನ್ನು ಕೊಟ್ಟಿರಲಿಲ್ಲ. ಅಲ್ಲಾವುದ್ದೀನನು 30 ಸಾವಿರ ಸೈನಿಕರೊಂದಿಗೆ ಮಲಿಕಾಫರನನ್ನು ದೇವಗಿರಿಯ ವಿರುದ್ಧ ಕಳುಹಿಸಿದನು. ಅವನು ರಾಮಚಂದ್ರದೇವನನ್ನು ಸೋಲಿಸಿ ದೇವಲದೇವಿಯನ್ನು ಸೆರೆಹಿಡಿದನು. ಅವಳನ್ನು ಅಲ್ಲಾವುದ್ದೀನ್ ಖಿಲ್ಜಿಯ ಹಿರಿಯ ಮಗ ಖಿಜರ್‌ಖಾನನು ವಿವಾಹವಾದನು. ರಾಮಚಂದ್ರ ದೇವನು ವಾರ್ಷಿಕ ಕಪ್ಪ ಕಾಣಿಕೆ ಕೊಡಲು ಒಪ್ಪಿದನು.

ವಾರಂಗಲ್‌ನ ದಂಡೆಯಾತ್ರೆ: (ಸಾ.ಶ. 1309)

ಮಲಿಕಾಫರನು ದೇವಗಿರಿಯ ಮೂಲಕ ವಾರಂಗಲ್ಲಿನತ್ತ ಮುನ್ನಡೆದು ಕೋಟೆಗೆ ಮುತ್ತಿಗೆ ಹಾಕಿದನು. ವಾರಂಗಲ್‌ನ ರಾಜ ಪ್ರತಾಪರುದ್ರದೇವನು ಶರಣಾಗತನಾಗಿ ಶಾಂತಿ ಒಪ್ಪಂದ ಮಾಡಿಕೊಳ್ಳಬೇಕಾಯಿತು.


ಅಲ್ಲಾವುದ್ದಿನ್ ಖಿಲ್ಜಿಯ ಸಾಮ್ರಾಜ್ಯ
ಕಾಬೂಲ್
ಬಲುಚಿಸ್ತಾನ್
ದೆಹಲಿ
ರಣಥಂಬೂರ್
ಚಿತ್ತೋರ್
ಅಲಹಾಬಾದ್
ಕರಾ
ಬಂಗಾಳ
ಗುಜರಾತ್
ಬ್ರೋಚ್
ದೇವಗಿರಿ
ವಾರಂಗಲ್
ಅರಬ್ಬಿ ಸಮುದ್ರ
ಬಂಗಾಳ ಕೊಲ್ಲಿ
ದ್ವಾರಸಮುದ್ರ
ತಂಜಾವೂರು
ಮಧುರೈ
ರಾಮೇಶ್ವರಂ
ಸಿಲೋನ್
ಸಾಮ್ರಾಜ್ಯ ವಿಸ್ತಾರ
ಮಲಿಕಾಫರ್‌ನ ದಕ್ಷಿಣ ದಂಡೆಯಾತ್ರೆ
ಉ
ಪ
ಪೂ
ದ
ಹಿಂದೂ ಮಹಾಸಾಗರ

ರಾಜ ಪ್ರತಾಪರುದ್ರದೇವನ ಚಿನ್ನದ ಪ್ರತಿಮೆ, 100 ಆನೆಗಳು, 7000 ಕುದುರೆಗಳು, ಚಿನ್ನ ಹಾಗೂ ಬೆಳ್ಳಿಯ ಭಾರಿ ಪ್ರಮಾಣದ ಆಭರಣಗಳು ಮತ್ತು ಹಣವನ್ನು ಮಲಿಕಾಫರ್ ದೆಹಲಿಗೆ ಹೊತ್ತೊಯ್ದನು. "ಈ ಯುದ್ಧದಲ್ಲಿ ಕೊಳ್ಳೆ ಹೊಡೆದ ಸಂಪತ್ತನ್ನು ಮಲ್ಲಿಕಾಫರನು ಸಾವಿರ ಒಂಟೆಗಳ ಮೇಲೆ ದೆಹಲಿಗೆ ಸಾಗಿಸುವಾಗ ಅವು ಭಾರದಿಂದ ನರಳಾಡಿದವು", ಎಂದು ಅಮೀರ್ ಖುಸ್ರು ಹೇಳಿದ್ದಾನೆ.

ದ್ವಾರ ಸಮುದ್ರದ ಮೇಲೆ ದಾಳಿ: (ಸಾ.ಶ. 1310)

ಹೊಯ್ಸಳ ರಾಜ 3ನೇ ವೀರ ಬಲ್ಲಾಳ ದ್ವಾರಸಮುದ್ರ (ಹಳೇಬೀಡು)ವನ್ನು ಆಳುತ್ತಿದ್ದನು. ಮುಸ್ಲಿಂ ಸೈನ್ಯದ ಹಠಾತ್ ಆಕ್ರಮಣದಿಂದಾಗಿ ಬೆರಗಾದ ಹೊಯ್ಸಳರಾಜ ತನ್ನ ರಾಜಧಾನಿಯನ್ನು ರಕ್ಷಿಸಿಕೊಳ್ಳಲಾಗಲಿಲ್ಲ. ರಾಜಧಾನಿಯನ್ನು ಲೂಟಿ ಮಾಡಿದ ಮಲಿಕಾಫರ್ ಹಲವಾರು ದೇವಾಲಯಗಳನ್ನು ಕೆಡವಿದನು. ಶರಣಾಗತನಾದ 3ನೇ ವೀರ ಬಲ್ಲಾಳನು ಕೆಲವು ಆನೆಗಳನ್ನು, ಕುದುರೆಗಳನ್ನೂ ಮತ್ತು ಸಂಪತ್ತನ್ನು ಸಲ್ಲಿಸಿ, ಸುಲ್ತಾನನಿಗೆ ವಾರ್ಷಿಕ ಕಪ್ಪ ಕಾಣಿಕೆಯನ್ನು ಕೊಡಲು ಒಪ್ಪಿದನು.

ಮಧುರೈನ ಆಕ್ರಮಣ: (ಸಾ.ಶ. 1311)

ಮಧುರೈನಲ್ಲಿ ಸುಂದರ ಪಾಂಡ್ಯ ಮತ್ತು ವೀರ ಪಾಂಡ್ಯ ಎಂಬ ಇಬ್ಬರು ಸಹೋದರರ ಮಧ್ಯೆ ಅಂತಃ ಕಲಹ ನಡೆಯುತ್ತಿತ್ತು. ಮಲಿಕಾಫರನ ಸೈನ್ಯ ಮಧುರೈನ ಕಡೆ ಹೊರಟು ಪಾಂಡ್ಯ ರಾಜ್ಯದ ಮಾರ್ಗದಲ್ಲಿನ ಎಲ್ಲಾ ಪ್ರಮುಖನಗರಗಳು ಮತ್ತು ದೇವಾಲಯಗಳನ್ನು ಲೂಟಿ ಮಾಡಿತು. ಅವನು ರಾಮೇಶ್ವರದವರೆಗೆ ಹೋಗಿ, ಅಲ್ಲಿನ ಪ್ರಸಿದ್ಧ ದೇವಾಲಯವನ್ನು ಧ್ವಂಸ ಮಾಡಿ, ಮಸೀದಿಯೊಂದನ್ನು ನಿರ್ಮಿಸಿದನು. ಕೊಳ್ಳೆಹೊಡೆದ ಅಪಾರ ಸಂಪತ್ತಿನೊಂದಿಗೆ ಅವನು ಸಾ.ಶ. 1311 ರಲ್ಲಿ ದೆಹಲಿಗೆ ಹಿಂದಿರುಗಿದನು.

ದೇವಗಿರಿಯ ಮೇಲೆ 2ನೇ ಆಕ್ರಮಣ: (ಸಾ.ಶ. 1312)

ದೇವಗಿರಿಯ ಶಂಕರದೇವನ ಮೇಲೆ ಮಲಿಕಾಫರನು ಮಾಡಿದ ಯುದ್ಧವು ದಕ್ಷಿಣ ಭಾರತದ ದಂಡಯಾತ್ರೆಯ ಕೊನೆಯ ಯುದ್ಧವಾಗಿತ್ತು. ಶಂಕರದೇವನು ಕಪ್ಪ ಕಾಣಕೆಯನ್ನು ತಡೆ ಹಿಡಿದು ಸ್ವತಂತ್ರನಾಗುವ ಪ್ರಯತ್ನ ಮಾಡಿದನು. ಆದ್ದರಿಂದ ಮಲಿಕಾಫರನು ದೇವಗಿರಿಯ ಮೇಲೆ ಮತ್ತೊಮ್ಮೆ ಆಕ್ರಮಣ ಮಾಡಿ ಅವನನ್ನು ಸೋಲಿಸಿ ಸಾಯಿಸಿದನು. ದೇವಗಿರಿಯನ್ನು ಸುಲ್ತಾನನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಲಾಯಿತು.

ಅಲ್ಲಾವುದ್ದೀನ್‌ಖಿಲ್ಜಿಯ ಸಾಮ್ರಾಜ್ಯವು ಉತ್ತರದಲ್ಲಿ ಲಾಹೋರ್‌ನಿಂದ ದಕ್ಷಿಣದಲ್ಲಿ ಮದುರೈವರೆಗೂ ಮತ್ತು ಪೂರ್ವದಲ್ಲಿ ಬಂಗಾಳದಿಂದ ಪಶ್ಚಿಮದಲ್ಲಿ ಗುಜರಾತಿನವರೆಗೂ ವ್ಯಾಪಿಸಿತ್ತು. ಸಾ.ಶ. 1312 ರ ವೇಳೆಗೆ ಅಲ್ಲಾವುದ್ದೀನ್‌ಖಿಲ್ಜಿಯು ಸಂಪೂರ್ಣ ಭಾರತದ ಅಧಿಪತಿಯಾದನು. ಅವನಿಗೆ ಪ್ರಪಂಚವನ್ನೆಲ್ಲಾ ಗೆಲ್ಲಬೇಕೆಂಬ ಮಹತ್ವಾಕಾಂಕ್ಷೆ ಇತ್ತು. ಆದರೆ ಇಡೀ ಭಾರತವನ್ನು ಗೆಲ್ಲುವುದರಲ್ಲಿಯೇ ಅವನು ತೃಪ್ತನಾಗಬೇಕಾಯಿತು. ಆದಾಗ್ಯೂ ಅವನು ಸಿಕಂದರ್ (2ನೇ ಅಲೆಗ್ಸಾಂಡರ್) ಎಂಬ ಬಿರುದಿನೊಂದಿಗೆ ನಾಣ್ಯಗಳನ್ನು ಹೊರಡಿಸಿದನು.

ಅಲ್ಲಾವುದ್ದೀನ್ ಖಿಲ್ಜಿಯ ಸುಧಾರಣೆಗಳು :

ಆಡಳಿತಸುಧಾರಣೆಗಳು :

ಅಲ್ಲಾವುದ್ದೀನ್‌ಖಿಲ್ಜಿಯು ಒಬ್ಬ ಪ್ರಬಲ ಮತ್ತು ಸಮರ್ಥ ಆಡಳಿತಗಾರನಾಗಿದ್ದನು. ಇವನು ಬಲಿಷ್ಠ ಕೇಂದ್ರ ಸರ್ಕಾರವನ್ನು ರಚಿಸಿದ್ದನು. ರಾಜ್ಯದ ಅತ್ಯುನ್ನತ ಅಧಿಕಾರ ಹೊಂದಿದ್ದ ಇವನು ದೈವದತ್ತ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿದ್ದನು. ಆದ್ದರಿಂದ ಸುಲ್ತಾನನು ತನ್ನನ್ನು 'ಭೂಮಿಯ ಮೇಲೆ ದೇವರ ಪ್ರತಿನಿಧಿ' ಅಥವಾ

'ದೇವರ ನೆರಳು' ಎಂದು ಕೊಂಡಿದ್ದನು. ದಂಗೆಗಳನ್ನು ತಡೆಗಟ್ಟಲು ಅವನು ಹಲವಾರು ಕ್ರಮಗಳನ್ನು ಕೈಗೊಂಡನು. ಅವುಗಳೆಂದರೆ ಸರದಾರರು ಮತ್ತು ಅಧಿಕಾರಿಗಳ ವೈವಾಹಿಕ ಸಂಬಂಧಗಳನ್ನು ನಿರ್ಬಂಧಿಸಿದ್ದು, ಅವರ ಗುಪ್ತ ಸಭೆ ಮತ್ತು ಔತಣ ಕೂಟಗಳನ್ನು ನಿಷೇಧಿಸಿದ್ದು, ಅವರ ಮೇಲೆ ನಿಗಾವಹಿಸಲು ಗುಪ್ತಚರರನ್ನು ನೇಮಿಸಿದ್ದು, ಅವರ ಹೆಚ್ಚುವರಿ ಸಂಪತ್ತನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮದ್ಯಪಾನ ಮತ್ತು ಜೂಜಾಟವನ್ನು ನಿಷೇಧಿಸಿ ತಾನೂ ಅವುಗಳಿಂದ ದೂರವಿದ್ದದ್ದು ಮತ್ತು ಉಲೇಮರು ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆದದ್ದೂ ಸೇರಿವೆ.

ಸೈನಿಕ ಸುಧಾರಣೆಗಳು:

(ಎ) ತನ್ನ ಸಾಮ್ರಾಜ್ಯ ರಕ್ಷಿಸಿಕೊಳ್ಳಲು ಅಲ್ಲಾವುದ್ದೀನ್‌ಖಿಲ್ಜಿಯು ಪ್ರಬಲ ಮತ್ತು ಬೃಹತ್ ಸರ್ವಸನ್ನದ್ಧ ಸೈನ್ಯವನ್ನು ಇಟ್ಟುಕೊಂಡಿದನು.

(ಬಿ) ಕುದುರೆಗಳಿಗೆ ಮುದ್ರೆ ಹಾಕುವ ಪದ್ಧತಿ (ದಾಘ್)ಯನ್ನು ಜಾರಿಗೊಳಿಸಿದನು. ಸೈನಿಕರ ನಕಲಿ ಹಾಜರಾತಿಯನ್ನು ಮತ್ತು ಭ್ರಷ್ಟಾಚಾರಗಳನ್ನು ತಡೆಯಲು ಅವರ ವಿವರಣಾತ್ಮಕ ದಾಖಲೆಗಳ ನಿರ್ವಹಣೆಯನ್ನು ಜಾರಿಗೊಳಿಸಿದನು.

(ಸಿ) ಅವನು ಜಾಗೀರ್ ಪದ್ಧತಿಯನ್ನು ರದ್ದುಪಡಿಸಿ ನಗದು ರೂಪದಲ್ಲಿ ವೇತನ ನೀಡಲಾರಂಭಿಸಿದನು.

(ಡಿ) ಸೈನಿಕರಿಗೆ ವಾರ್ಷಿಕ 234 ಟಂಕಗಳ ವೇತನ ನಿಗದಿಗೊಳಿಸಿದನು. ಅಲ್ಲದೆ ಎರಡು ಕುದುರೆಗಳನ್ನು ನಿರ್ವಹಿಸುತ್ತಿದ್ದ ಸೈನಿಕನಿಗೆ 78 ಟಂಕಗಳ ಹೆಚ್ಚುವರಿ ವೇತನ ನೀಡಲಾಗುತ್ತಿತ್ತು.

(ಇ) ಅರೀಜ್–ಇ–ಮುಮಾಲಿಕ್ ಎಂಬ ಅಧಿಕಾರಿಯು ಸೈನಿಕರ ನೇಮಕಾತಿಯ ಅಧಿಕಾರವನ್ನು ಹೊಂದಿದ್ದನು.

ಕಂದಾಯ ಸುಧಾರಣೆಗಳು:

(ಎ) ಅಲ್ಲಾವುದ್ದೀನ್ ಖಿಲ್ಜಿ ವೈಜ್ಞಾನಿಕ ತಳಹದಿಯ ಮೇಲೆ ಭೂ ಮಾಪನ ಪದ್ಧತಿಯನ್ನು ಆರಂಭಿಸಿ ಭೂಕಂದಾಯವನ್ನು ನಿಗದಿಗೊಳಿಸಿದನು.

(ಬಿ) ಸರದಾರರು, ಜಾಗೀರ್‌ದಾರರು ಮತ್ತು ಉಲೇಮಾರ ಮೇಲೆ ಅವನು ಹೆಚ್ಚಿನ ತೆರಿಗೆಗಳನ್ನು ಹೇರಿದನು.

(ಸಿ) ಮುಸ್ಲೀಮೇತರರ ಮೇಲೆ 'ಜಜಿಯಾ'ವನ್ನು ವಿಧಿಸಿದನು. ಅವರು ಯಾತ್ರಾ ತೆರಿಗೆ, ಸರಕು ತೆರಿಗೆ ಮುಂತಾದವುಗಳೊಂದಿಗೆ ಇದನ್ನೂ ಕೊಡಬೇಕಾಗಿತ್ತು.

(ಡಿ) ಕಂದಾಯ ಅಧಿಕಾರಿಗಳ ಭ್ರಷ್ಟಾಚಾರ ಮತ್ತು ಲಂಚಗುಳಿತನಗಳನ್ನು ತಡೆಯುವ ಉದ್ದೇಶದಿಂದ ಅವರ ವೇತನಗಳನ್ನು ಹೆಚ್ಚಿಸಿದನು.

(ಇ) ರೈತರಿಂದ ಭೂ ಕಂದಾಯವನ್ನು ಸಂಗ್ರಹಿಸಲು 'ಮುಸ್ತಕ್‌ರಾಜ್' ಎಂಬ ವಿಶೇಷ ಅಧಿಕಾರಿಯ ಹುದ್ದೆಯನ್ನು ಸೃಷ್ಟಿಸಿದನು.

(ಎಫ್) ರೈತರನ್ನು ಭ್ರಷ್ಟ ಕಂದಾಯ ಅಧಿಕಾರಿಗಳ ಬೇಡಿಕೆಗಳಿಂದ ರಕ್ಷಿಸಲು ಅವರು ಎಸಗುವ ಕ್ಷುಲ್ಲಕ ಅಪರಾಧಗಳಿಗೂ ಕಠಿಣ ಶಿಕ್ಷೆ ವಿಧಿಸಲು ಕ್ರಮಕೈಗೊಂಡನು.

ಆರ್ಥಿಕ ಸುಧಾರಣೆಗಳು : (ಮಾರು ಕಟ್ಟೆ ನಿಯಮಗಳು)

ಸೈನಿಕರಿಗೆ ಮೂಲಭೂತ ಅಗತ್ಯತೆಗಳನ್ನು ಪೂರೈಸಲು ಅಲ್ಲಾವುದ್ದೀನನು ಮಾರುಕಟ್ಟೆ ನಿಯಮಗಳನ್ನು ಜಾರಿಗೊಳಿಸಿದನು. ದೈನಂದಿನ ಉಪಯೋಗದ ಎಲ್ಲಾ ವಸ್ತುಗಳ ದರಗಳನ್ನು ನಿಗದಿಗೊಳಿಸಲಾಯಿತು. ಮಾರುಕಟ್ಟೆಯನ್ನು ನಿಯಂತ್ರಿಸಲು ಪ್ರತ್ಯೇಕ ಇಲಾಖೆ ಮತ್ತು ವಿಶೇಷ ಅಧಿಕಾರಿಗಳನ್ನು ನೇಮಿಸಿದನು. ರಾಜಧಾನಿಯಲ್ಲಿ ನಿಗದಿಗೊಳಿಸಿದ್ದ ದರಗಳು ಎಲ್ಲಾ ನಗರಗಳಿಗೂ ಅನ್ವಯವಾಗುತ್ತಿದ್ದವು.

ದರಪಟ್ಟಿ

1)	ಗೋಧಿ ಪ್ರತಿಮಣಕ್ಕೆ	– 7½ ಜಿತಾಲ್‌ಗಳು
2)	ಅಕ್ಕಿ ಪ್ರತಿಮಣಕ್ಕೆ	– 5 ಜಿತಾಲ್‌ಗಳು
3)	ದ್ವಿದಳಧಾನ್ಯಗಳು ಪ್ರತಿಮಣಕ್ಕೆ	– 5 ಜಿತಾಲ್‌ಗಳು
4)	ಬಾರ್ಲಿ ಪ್ರತಿಮಣಕ್ಕೆ	– 4 ಜಿತಾಲ್‌ಗಳು
5)	ಎಳ್ಳು ಪ್ರತಿ 3 ಸೇರ್‌ಗಳಿಗೆ	– 1 ಜಿತಾಲ್
6)	ತುಪ್ಪ ಪ್ರತಿ 2½ ಸೇರ್‌ಗಳಿಗೆ	– 1 ಜಿತಾಲ್
7)	ಸಕ್ಕರೆ ಪ್ರತಿ 1½ ಸೇರ್‌ಗಳಿಗೆ	– 1½ ಜಿತಾಲ್‌ಗಳು
8)	ಒಂದು ಕುದುರೆಗೆ	– 100 ರಿಂದ 200 ಟಂಕಗಳು
9)	ಒಂದು ಹಸುವಿಗೆ	– 4 ರಿಂದ 5 ಟಂಕಗಳು
10)	ಪುರುಷ ಗುಲಾಮರಿಗೆ	– 100 ರಿಂದ 200 ಟಂಕಗಳು
11)	ಮಹಿಳಾ ಗುಲಾಮರಿಗೆ	– 40 ರಿಂದ 50 ಟಂಕಗಳು

ಸರ್ಕಾರಿ ಉಗ್ರಾಣಗಳಲ್ಲಿ ಧಾನ್ಯಗಳನ್ನು ಶೇಖರಿಸಿಡಲಾಗುತಿತ್ತು. ತುರ್ತು ಸಂದರ್ಭಗಳಾದ ಕೊರತೆಯ ಸಮಯ ಮತ್ತು ಕ್ಷಾಮಗಳ ಕಾಲಗಳಿಗಾಗಿ ಇವುಗಳನ್ನು ಸಂಗ್ರಹಿಸಿ ಇಡಲಾಗುತ್ತಿತ್ತು. ಯಾವುದೇ ವ್ಯಾಪಾರಿ ಅಥವಾ ಮಾರಟಗಾರ ತೂಕ ಮತ್ತು ಅಳತೆಗಳಲ್ಲಿ ವಂಚಿಸಿದರೆ, ವಂಚಿಸಲಾದ ತೂಕಕ್ಕೆ ಸಮನಾದಷ್ಟು ಮಾಂಸವನ್ನು ಅವನ ಶರೀರ (ತೊಡೆ)ದಿಂದ ಕತ್ತರಿಸಿ ಹಾಕುವ ಶಿಕ್ಷೆ ವಿಧಿಸಲಾಗುತ್ತಿತ್ತು.

ಅಲ್ಲಾವುದ್ದೀನ್ ಖಿಲ್ಜಿಯ ಕೊನೆಯ ದಿನಗಳು ಸುಖಕರವಾಗಿರಲಿಲ್ಲ. ಅವನ ನಂಬಿಕಸ್ತ ಸೇನಾಪತಿ ಮಲಿಕಾಫರ್ ಅವನಿಗೆ ವಿಷಪ್ರಾಶನ ಮಾಡಿದ್ದರಿಂದ ಸುಲ್ತಾನನು ಸಾ.ಶ. 1316 ರಲ್ಲಿ ಮರಣ ಹೊಂದಿದನು.

ಖಿಲ್ಜಿ ಸಂತತಿಯ ಉತ್ತರಾಧಿಕಾರಿಗಳು: ಶಿಹಾಬ್ ಉದ್ದೀನ್ ಉಮರ್, ಕುತುಬ್ ಉದ್ದೀನ್ ಮುಬಾರಕ್ ಷಾ ಮತ್ತು ನಾಸಿರ್ ಉದ್ದೀನ್ ಖುಸ್ರೋ ಷಾ

ತೊಘಲಕ್ ಸಂತತಿ:

ಸಾ.ಶ. 1320 ರಲ್ಲಿ ಘಿಯಾಸುದ್ದೀನ್ ತೊಘಲಕ್ ಎಂಬುವನು ತೊಘಲಕ್ ಸಂತತಿಯನ್ನು ಸ್ಥಾಪಿಸಿದನು. ಇವನು ನುರಿತ ಸೇನಾನಿ, ರಾಜನೀತಿಜ್ಞ ಮತ್ತು ಸಮರ್ಥ ಆಡಳಿತಗಾರನಾಗಿದ್ದನು. ಅಲ್ಲಾವುದ್ದೀನ್ ಖಿಲ್ಜಿಯ ಹಲವಾರು ನಿರ್ದಯ ಕ್ರಮಗಳನ್ನು ಇವನು ಮುಕ್ತಗೊಳಿಸಿ, ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಪುನರ್ ಸ್ಥಾಪಿಸಿದನು.

ಮಹಮದ್ ಬಿನ್ ತೊಘಲಕ್ (ಸಾ.ಶ. 1325–51)

ಘಿಯಾಸುದ್ದೀನ್ ತೊಘಲಕ್‌ನ ಮಗ ರಾಜಕುಮಾರ ಜೂನಾಖಾನನು ಮಹಮದ್ ಬಿನ್ ತೊಘಲಕ್ ಎಂಬ ಬಿರುದಿನೊಂದಿಗೆ ಸಾ.ಶ. 1325 ರಲ್ಲಿ ಸಿಂಹಾಸನವೇರಿದನು. ಇವನು ತೊಘಲಕ್ ವಂಶದ ಪ್ರಮುಖ ದೊರೆಯಾಗಿದ್ದನು. ಅವನು ತನ್ನ ಸೈನಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಪ್ರಯೋಗಗಳಿಗಾಗಿ ಹೆಸರು ವಾಸಿಯಾಗಿದ್ದಾನೆ

ತೊಘಲಕ್‌ನ ಸೈನಿಕ ಆಕ್ರಮಣಗಳು:

ಮಹಮದ್ ಬಿನ್ ತೊಘಲಕ್‌ನು ಸಾ. ಶ. 1337 ರಲ್ಲಿ ನಗರ್ ಕೋಟ್ ಮೇಲೆ ಯಶಸ್ವಿ ದಾಳಿಯನ್ನು ಮಾಡಿದನು. ಹಿಮಾಲಯದ ತಪ್ಪಲಿನ ಕಾರಾಜಲ್ ಮೇಲೆ ಅವನ ದಾಳಿ ಯಶಸ್ವಿಯಾದರೂ ಅಲ್ಲಿಯ ಚಳಿಯಿಂದ ಅವನ ಸೈನ್ಯ ಹೆಚ್ಚಿನ ನಷ್ಟವನ್ನು ಅನುಭವಿಸಿತು. ಅವನು ಕಂಪಿಲಿರಾಯ ಮತ್ತು ಹೊಯ್ಸಳರ ವೀರಬಲ್ಲಾಳನ ವಿರುದ್ಧವೂ ದಾಳಿ ಮಾಡಿದನು. ಅವನ ಆಳ್ವಿಕೆಯ ಅವಧಿಯಲ್ಲಿ ಹಿಂದೂ ಮುಖಂಡರು ಮತ್ತು ಮುಸ್ಲಿಂ ಪ್ರಾಂತೀಯ ರಾಜ್ಯಪಾಲರುಗಳ ಅನೇಕ ದಂಗೆಗಳಾದವು ಅವುಗಳನ್ನು ನಿರ್ದಯವಾಗಿ ಸದೆಬಡಿಯಲಾಯಿತು.

ಆಡಳಿತ ಪ್ರಯೋಗಗಳು: (ಸುಧಾರಣೆಗಳು)

ದೋಅಬ್‌ನಲ್ಲಿ ತೆರಿಗೆಗಳ ಹೆಚ್ಚಳ:

ಮಹಮದ್‌ಬಿನ್ ತೊಘಲಕ್‌ನು ತನ್ನ ಸಾಮ್ರಾಜ್ಯದ ಆದಾಯವನ್ನು ಹೆಚ್ಚಿಸಲು ಗಂಗಾ ಮತ್ತು ಯಮುನಾ ನದಿಗಳ ಫಲವತ್ತಾದ ದೋಅಬ್ ಪ್ರದೇಶದ ಮೇಲೆ ತೆರಿಗೆಗಳನ್ನು ಹೆಚ್ಚಿಸಲು ನಿರ್ಧರಿಸಿದನು. ಇದು ಕಾರ್ಯ ಸಾಧುವಾದ ನಿರ್ಧಾರವಾಗಿದ್ದರೂ ತೆರಿಗೆ ಹೆಚ್ಚಳ ತುಂಬಾ ಜಾಸ್ತಿಯಾಗಿತ್ತು ಮತ್ತು ಮಳೆಯ ಕೊರತೆಯಿಂದಾಗಿ ರೈತರು ಅಸಂತುಷ್ಟರಾಗಿದ್ದ ಸಮಯದಲ್ಲಿ ಇದನ್ನು ಜಾರಿಗೊಳಿಸಿದನು. ರೈತರು ತೆರಿಗೆ ಕೊಡಲು ಸಾಧ್ಯವಾಗದಿದ್ದಲ್ಲಿ ಅವರನ್ನು ನಿರ್ದಯವಾಗಿ ಶಿಕ್ಷಿಸಿದನು ಈ ಕ್ರಮವು ಮಹಮದ್‌ಬಿನ್ ತೊಘಲಕ್‌ನ ಜನಪ್ರಿಯತೆಯನ್ನು ಕುಗ್ಗಿಸಿತು.

ರಾಜಧಾನಿಯ ವರ್ಗಾವಣೆ: (ಸಾ.ಶ. 1327)

ಮಂಗೋಲರ ದಾಳಿಗಳಿಂದ ರಾಜಧಾನಿಯನ್ನು ರಕ್ಷಿಸುವ ಸಲುವಾಗಿ ಸುಲ್ತಾನನು ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಸ್ಥಳಾಂತರಿಸುವ ನಿರ್ಧಾರ ಮಾಡಿದನು. ಅವನು ದೇವಗಿರಿಯ ಸಮೀಪ ಹೊಸನಗರವನ್ನು ನಿರ್ಮಿಸಿ ಅದನ್ನು ದೌಲತಾಬಾದ್ ಎಂದು ಹೆಸರಿಸಿದನು. ಈ ಬದಲಾವಣೆಗೆ ಇದ್ದ ಇತರ ಕಾರಣಗಳೆಂದರೆ, ದೆಹಲಿಯು ಗಡಿಪ್ರದೇಶಕ್ಕೆ ಸಮೀಪವಿದ್ದದ್ದು ಮತ್ತು ಹೊಸ ರಾಜಧಾನಿಯು ಸಾಮ್ರಾಜ್ಯದ ಕೇಂದ್ರದಲ್ಲಿದ್ದದ್ದು. ಇವನು ಸಮಸ್ತ ಜನತೆಯನ್ನು ಸ್ಥಳಾಂತರಿಸಲು ಬಯಸಿದನು. "ಒಂದು ಬೆಕ್ಕು ಮತ್ತು ನಾಯಿಯನ್ನೂ ಬಿಡಲಿಲ್ಲ" ಎಂದು ಬರಾನಿ ಎಂಬ ಇತಿಹಾಸಕಾರ ಹೇಳಿದ್ದಾನೆ. ಇಬನ್ ಬತೂತನ ಪ್ರಕಾರ "ಹೊಸ ರಾಜಧಾನಿಗೆ ಹೋಗಲು ಇಚ್ಛಿಸದ ಒಬ್ಬ ಕುರುಡ ಮತ್ತು ಹೆಳವರನ್ನೂ ಎಳೆದೊಯ್ಯಲಾಯಿತು". ಈ ಬದಲಾವಣೆಯ ಕಾರಣಗಳು ಸಮರ್ಪಕವಾಗಿದ್ದರೂ ಅನುಸರಿಸಿದ ವಿಧಾನ ಕಾರ್ಯಸಾಧ್ಯವಾಗಿರಲಿಲ್ಲ. ದೆಹಲಿಯ ಎಲ್ಲಾ ಜನತೆಯು ದೌಲತಾಬಾದ್‌ಗೆ (1120 ಕಿ.ಮೀ.) ಪ್ರಯಾಣ ಮಾಡುವಂತೆ ಆಜ್ಞೆ ಮಾಡಿದನು. ದಟ್ಟಕಾಡುಗಳ ಮೂಲಕ ಆಯಾಸಕರ ಪ್ರಯಾಣ, ಭಾರಿ ಮಳೆ, ಕಾಯಿಲೆ, ದರೋಡೆಕೋರರ ದಾಳಿ, ಹಸಿವು ಮುಂತಾದವು ಜನರ ಸಾವು–ನೋವುಗಳಿಗೆ ಕಾರಣವಾದವು. ಸುಲ್ತಾನನಿಗೆ ತನ್ನ ತಪ್ಪಿನ ಅರಿವಾಗಿ ಸುಲ್ತಾನನು ಎಲ್ಲಾ ಜನರಿಗೆ ಮತ್ತೆ ದೆಹಲಿಗೆ ಹಿಂದಿರುಗುವಂತೆ ಆದೇಶಿಸಿದನು ಇದರಿಂದ ಮತ್ತಷ್ಟು ಸಾವು–ನೋವುಗಳಾದವು ಈ ಇಡೀ ಪ್ರಕರಣದಿಂದಾಗಿ ಸುಲ್ತಾನನು ತನ್ನ ಜನಪ್ರಿಯತೆ ಕಳೆದುಕೊಂಡನು.

ಸಂಕೇತ ನಾಣ್ಯ ಚಲಾವಣೆ : (ಸಾ.ಶ. 1329–32)

ಮಹಮದ್‌ಬಿನ್ ತೊಘಲಕ್‌ನು ನಾಣ್ಯ ಚಲಾವಣೆಯಲ್ಲಿ ಪ್ರಯೋಗಗಳನ್ನು ಮಾಡಿದನು. ದುಬಾರಿ

ಲೋಹಗಳಾದ ಚಿನ್ನ ಮತ್ತು ಬೆಳ್ಳಿಗಳನ್ನು ಉಳಿತಾಯ ಮಾಡುವುದು ಮತ್ತು ಹೆಚ್ಚು ಹಣವನ್ನು ಚಲಾವಣೆಗೆ ತರುವುದು ಅವನ ಮುಖ್ಯ ಉದ್ದೇಶವಾಗಿತ್ತು. ಇದಕ್ಕಾಗಿ ತಾಮ್ರದ ನಾಣ್ಯಗಳನ್ನು ಹೊರಡಿಸಿದನು. ಅವು ಬೆಳ್ಳಿಯ ನಾಣ್ಯಗಳಾದ ಟಂಕಗಳಿಗೆ ಸಮಾನ ಮೌಲ್ಯವನ್ನು ಹೊಂದಿದ್ದವು. ಈ ತಾಮ್ರದ ನಾಣ್ಯಗಳನ್ನು ಅಚ್ಚು ಹಾಕುವುದು ಸರ್ಕಾರದ ಏಕ ಸ್ವಾಮ್ಯವಾಗಿರುವಂತೆ ಮಾಡಲಿಲ್ಲ. ಇದರಿಂದ ಸಾಮ್ರಾಜ್ಯದಲ್ಲಿ ತಾಮ್ರದ ನಕಲಿ ನಾಣ್ಯಗಳ ಪ್ರವಾಹವೇ ಹರಿಯಿತು. ಜನರು ತೆರಿಗೆಗಳನ್ನು ಈ ನಕಲಿ ನಾಣ್ಯಗಳಲ್ಲೇ ಪಾವತಿಸಿದರು. ವಿನಿಮಯ ಮಾಧ್ಯಮವಾಗಿ ತಾಮ್ರದ ನಾಣ್ಯಗಳು ತಮ್ಮ ಮೌಲ್ಯ ಕಳೆದುಕೊಂಡವು. ವ್ಯಾಪಾರ ಅಪಾರ ನಷ್ಟಕ್ಕೀಡಾಯಿತು. ಆದ್ದರಿಂದ ಸುಲ್ತಾನನು ತಾಮ್ರ ನಾಣ್ಯಗಳನ್ನು ಹಿಂಪಡೆದನು. ತಮ್ಮಲ್ಲಿರುವ ತಾಮ್ರನಾಣ್ಯಗಳ ಬದಲಾಗಿ ಜನರು ಚಿನ್ನ–ಬೆಳ್ಳಿಯ ನಾಣ್ಯಗಳಿಗೆ ಬದಲಾಯಿಸಿಕೊಳ್ಳುವಂತೆ ಹೇಳಲಾಯಿತು. ಇದರಿಂದ ರಾಜ್ಯದ ಖಜಾನೆ ಬರಿದಾಯಿತು. ಹೀಗೆ ಸುಲ್ತಾನನ ನಾಣ್ಯ ಸುಧಾರಣೆಯು ಸಂಪೂರ್ಣವಾಗಿ ವಿಫಲಗೊಂಡಿತು.

ಅವನ ನಡತೆಯ ಲಕ್ಷಣಗಳು ಮತ್ತು ಸಾಧನೆಗಳು ಹೆಚ್ಚಿನ ಚರ್ಚೆ ಮತ್ತು ವಾದ–ವಿವಾದಗಳಿಗೆ ಗ್ರಾಸವಾಗಿವೆ. ಡಾ॥ ವಿ.ಎ.ಸ್ಮಿಥ್‌ರವರು, "ಇವನು ಒಬ್ಬ ಪರಸ್ಪರ ವಿರುದ್ಧ ಗುಣಗಳ ಮಿಶ್ರಣವಾಗಿದ್ದ" ಎಂದು ಹೇಳಿದ್ದಾರೆ. ಇವನು ಸುಶಿಕ್ಷಿತ ವಿದ್ವಾಂಸ, ಒಳ್ಳೆಯ ವಾಗ್ಮಿ, ಪ್ರತಿಭಾವಂತ ಕಲಾ ಲಿಪಿಕಾರ ಮತ್ತು ಧರ್ಮನಿಷ್ಠ ಮುಸಲ್ಮಾನನಾಗಿದ್ದನು. ಗಣಿತ, ಖಗೋಳ ಶಾಸ್ತ್ರ, ತತ್ವ ಶಾಸ್ತ್ರ ಮತ್ತು ತರ್ಕ ಶಾಸ್ತ್ರಗಳಲ್ಲೂ ಅವನಿಗೆ ಪಾಂಡಿತ್ಯವಿತ್ತು. ಆದರೆ ಅವನ ನೀತಿಗಳು ಸರಿಯಾಗಿದ್ದರೂ ಅವುಗಳ ಜಾರಿಯ ಯೋಜನೆ ಸಮರ್ಪಕವಾಗಿರಲಿಲ್ಲ. ಅವುಗಳು ಅವನು ಜನಪ್ರಿಯತೆಯನ್ನು ಕಳೆದುಕೊಳ್ಳುವಂತೆ ಮಾಡಿ, ಅವನಿಗೆ "ವೈರುಧ್ಯಗಳ ಮಿಶ್ರಣ" ಎಂಬ ಖ್ಯಾತಿ ನೀಡಿದವು.

ಮಹಮದ್ ಬಿನ್ ತೊಘಲಕ್‌ನು ಸಾ.ಶ. 1351ರಲ್ಲಿ ತಟ್ಟಾ (ಸಿಂಧ್‌ನಲ್ಲಿ) ಎಂಬಲ್ಲಿ ಮರಣ ಹೊಂದಿದನು. ಸರದಾರರು ಫಿರೋಜ್ ಷಾ ತೊಘಲಕ್‌ನನ್ನು ಅವನ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿದರು. ಸುಲ್ತಾನರ ಆಳ್ವಿಕೆ ನಿಧಾನವಾಗಿ ಅವನತಿಯಾಗಲಾರಂಭಿಸಿತು. ತೊಘಲಕ್ ಸಂತತಿಯ ನಂತರ ಸೈಯದರು ಮತ್ತು ಲೋಧಿಗಳು ಅಧಿಕಾರಕ್ಕೆ ಬಂದರು. ಸಾ.ಶ. 1526 ರ ಮೊದಲ ಪಾಣಿಪತ್ ಕದನದಲ್ಲಿ ಲೋಧಿ ಸಂತತಿಯ ಕೊನೆಯ ಸುಲ್ತಾನ ಇಬ್ರಾಹಿಂ ಲೋಧಿಯನ್ನು ಬಾಬರ್ ಪರಾಭವಗೊಳಿಸಿ, ಮೊಘಲರ ಆಳ್ವಿಕೆಯನ್ನು ಸ್ಥಾಪಿಸಿದನು.

ಸೈಯ್ಯದ್‌ಸುಲ್ತಾನರು: (ಸಾ.ಶ. 1414–1451) ಖಿಜರ್‌ಖಾನ್, ಮುಬಾರಕ್‌ಷಾ, ಸೈಯಿದ್ ಮೊಹಮದ್‌ಷಾ ಮತ್ತು ಅಲ್ಲಾವುದ್ದೀನ್ ಆಲಂಷಾ.

ಲೋಧಿ ಸುಲ್ತಾನರು: (ಸಾ.ಶ. 1451–1526) ಬಹಲಲ್ ಲೋಧಿ, ನಿಜಾಂಖಾನ್, ಸಿಕಂದರ್ ಲೋಧಿ ಮತ್ತು ಇಬ್ರಾಹಿಂ ಲೋದಿ

ದೆಹಲಿ ಸುಲ್ತಾನರ ಕೊಡುಗೆಗಳು :

(1) **ಆಡಳಿತ :** ದೆಹಲಿ ಸುಲ್ತಾನರ ರಾಜ್ಯವು ದೇವಪ್ರಭುತ್ವವಾಗಿತ್ತು. ಷರಿಯತ್ (ಇಸ್ಲಾಂ ಕಾನೂನು) ರಾಜ್ಯದ ನಿಯಮಗಳಾಗಿದ್ದವು. ಉಲೇಮಾ (ಇಸ್ಲಾಂ ವಿದ್ವಾಂಸರ ಒಂದು ಸಮಿತಿ) ರಾಜ್ಯ ಮತ್ತು ಆಡಳಿತವನ್ನು ನಿಯಂತ್ರಿಸುತ್ತಿತ್ತು. ಸುಲ್ತಾನರು ತಮ್ಮನ್ನು ಖಲೀಫಾ (ವಿಶ್ವದ ಇಸ್ಲಾಂ ರಾಜ್ಯ ಮತ್ತು ಧರ್ಮದ ಮುಖ್ಯಸ್ಥ)ನ ಸಹಾಯಕ (ನಾಯಿಬ್) ರೆಂದು ಕರೆದುಕೊಂಡಿದ್ದರು.

ಕೇಂದ್ರ ಸರ್ಕಾರ : ಸುಲ್ತಾನನು ಅಧಿಕಾರದ ಉಗಮ ಕೇಂದ್ರವಾಗಿದ್ದನು. ಅವನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರಗಳನ್ನು ಚಲಾಯಿಸುತ್ತಿದ್ದನು. ಅವನಿಗೆ ಆಗಿಂದಾಗ್ಗೆ ಉಲೇಮಾ ಮಾರ್ಗದರ್ಶನ ನೀಡುತ್ತಿತ್ತು. ಆದಾಗ್ಯೂ ಅಲ್ಲಾವುದ್ದೀನ್ ಖಿಲ್ಜಿಯು ಉಲೇಮಾವನ್ನು ರಾಜ್ಯ ವ್ಯವಹಾರಗಳಿಂದ ದೂರವಿಟ್ಟನು. ಹಲವು ಮಂತ್ರಿಗಳ ನೆರವಿನಿಂದ ಸುಲ್ತಾನನು ಆಡಳಿತ ನಡೆಸುತ್ತಿದ್ದನು. ಅವರು ವಿದೇಶಾಂಗ ವ್ಯವಹಾರ, ಕಂದಾಯ, ರಾಜಪತ್ರ ವ್ಯವಹಾರ, ಕೃಷಿ, ಮಾರುಕಟ್ಟೆ, ಸೈನ್ಯ, ನ್ಯಾಯಾಡಳಿತ, ಹಣಕಾಸು ಮುಂತಾದ ಇಲಾಖೆಗಳ ಉಸ್ತುವಾರಿಯನ್ನು ಹೊಂದಿದ್ದರು.

ಕೇಂದ್ರದ ಪ್ರಮುಖ ಅಧಿಕಾರಿಗಳು:

(1) ವಜೀರ್ – ಪ್ರಧಾನಮಂತ್ರಿ–ಸುಲ್ತಾನನ ನಂತರದ ಸ್ಥಾನ ಹೊಂದಿದ್ದನು. ಕಂದಾಯ ಮತ್ತು ಹಣಕಾಸು ಉಸ್ತುವಾರಿ

(2) ಅರೀಜ್–ಇ–ಮಾಮ್ಲಿಕ್–ಸೈನಿಕ ಇಲಾಖೆಯ ಮುಖ್ಯಸ್ಥ

(3) ಅಮೀರ್–ಇ–ಮಜ್ಲೀಸ್–ರಾಜ್ಯದ ಉತ್ಸವಗಳು ಮತ್ತು ಸಭೆಗಳ ಉಸ್ತುವಾರಿ ಅಧಿಕಾರಿ

(4) ಬರೀದ್–ಇ–ಮುಮಾಲಿಕ್–ರಾಜ್ಯ ಸಮಾಚಾರಗಳ ಮುಖ್ಯ ಪ್ರತಿನಿಧಿ.

(5) ದಬೀರ್–ಇ–ಮುಮಾಲಿಕ್–ರಾಜನ ಪತ್ರ ವ್ಯವಹಾರದ ಮುಖ್ಯಸ್ಥ

(6) ಸದರ್–ಉಸ್–ಸದರ್–ಧಾರ್ಮಿಕ ವಿಷಯಗಳು ಮತ್ತು ದತ್ತಿಗಳ ನಿರ್ವಾಹಕ.

(7) ಖಾಜಿ–ಉಲ್–ಖಾಜತ್–ಮುಖ್ಯ ನ್ಯಾಯಾಧೀಶ.

ಕಂದಾಯ : ಭೂ ಕಂದಾಯ, ಯುದ್ಧದ ಲೂಟಿ, ವಾರ್ಷಿಕ ಕಪ್ಪ ಕಾಣಿಕೆ, ಗೃಹ, ನೀರು, ಧಾರ್ಮಿಕ ಮತ್ತು ತಲೆಗಂದಾಯ (ಜಜಿಯಾ) ಮುಂತಾದ ತೆರಿಗೆಗಳು ರಾಜ್ಯಾದಾಯದ ವಿವಿಧ ಮೂಲಗಳಾಗಿದ್ದವು. ಭೂಕಂದಾಯವನ್ನು ನಗದು ಅಥವಾ ಧಾನ್ಯ ರೂಪಗಳಲ್ಲಿ ಪಾವತಿಸಬಹುದಿತ್ತು.

ನ್ಯಾಯಾಂಗ: ಸುಲ್ತಾನರು ಖಾಜಿ–ಉಲ್–ಖಾಜತ್ (ಮುಖ್ಯನ್ಯಾಯಾಧೀಶ)ನ ನೆರವಿನಿಂದ ನ್ಯಾಯಾಡಳಿತ ನಡೆಸುತ್ತಿದ್ದರು. ಮುಖ್ಯ ಖಾಜಿಗೆ ಮುಫ್ತಿ (ಇಸ್ಲಾಮಿಕ್ ಕಾಯ್ದೆಗಳ ವ್ಯಾಖ್ಯಾನಕಾರ)ಯು ನೆರವನ್ನು ನೀಡುತ್ತಿದ್ದನು. ನಗರ ಮತ್ತು ಪಟ್ಟಣಗಳಲ್ಲೂ ಮುಫ್ತಿಗಳ ನೆರವನ್ನು ಪಡೆದ ಖಾಜಿಗಳ ನೇತೃತ್ವದ ನ್ಯಾಯಾಲಯಗಳಿದ್ದವು. ಕಾನೂನು ಮತ್ತು ಸುವ್ಯಸ್ಥೆಯನ್ನು ನೋಡಿಕೊಳ್ಳಲು ಕೊತ್ವಾಲ್ ಎಂಬ ಪೊಲೀಸ್ ಅಧಿಕಾರಿಯಿದ್ದನು.

ಸೈನ್ಯ: ಸುಲ್ತಾನರು ಪ್ರಬಲವಾದ ಸೈನ್ಯವನ್ನು ಹೊಂದಿದ್ದರು. ಇದು ಅಶ್ವಪಡೆ, ಕಾಲ್ದಳ ಮತ್ತು ಗಜದಳಗಳನ್ನೊಳಗೊಂಡಿತ್ತು. ಸುಲ್ತಾನರ ಆಳ್ವಿಕೆಯು ಮುಖ್ಯವಾಗಿ ಸೈನಿಕ ರಾಜ್ಯವಾಗಿತ್ತು. ಸುಲ್ತಾನನೇ ಸರ್ವೋನ್ನತ ದಂಡನಾಯಕನಾಗಿದ್ದನು. ಮುಖ್ಯನ್ಯಾಯಾಧೀಶ ಮತ್ತು ಖಾಜಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ಮಂತ್ರಿಗಳು ಮತ್ತು ಅಧಿಕಾರಿಗಳು ನಾಗರಿಕ ಮತ್ತು ಸೈನಿಕ ಸೇವೆಗಳೆರಡನ್ನು ನೀಡಬೇಕಿತ್ತು. ದಿವಾನ್–ಇ–ಅರೀಜ್ ಸೈನ್ಯಾಡಳಿತ ಮತ್ತು ಸಂಘಟನೆಯ ಉಸ್ತುವಾರಿ ಅಧಿಕಾರಿಯಾಗಿದ್ದನು.

ಪ್ರಾಂತೀಯ ಆಡಳಿತ: ಸಾಮ್ರಾಜ್ಯವನ್ನು 'ಇಕ್ತಾ' ಎಂಬ ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಪ್ರಾಂತ್ಯವು 'ನಯಿಬ್ ಸುಲ್ತಾನ' ಎಂಬ ರಾಜ್ಯಪಾಲನ ಅಧೀನದಲ್ಲಿತ್ತು. ರಾಜ್ಯಪಾಲನು ತನ್ನ ಪ್ರಾಂತ್ಯದಲ್ಲಿ ನಿರಂಕುಶ ಅಧಿಕಾರಗಳನ್ನು ಚಲಾಯಿಸುತ್ತಿದ್ದನು. ಅವನು ತನ್ನ ಪ್ರಾಂತ್ಯದಲ್ಲಿ ಆಡಳಿತ, ಕಂದಾಯ ವಸೂಲಿ, ಕಾನೂನು ಮತ್ತು ಶಾಂತಿ ಪಾಲನೆ ಮುಂತಾದ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದನು. ಅವನು

ತನ್ನದೇ ಆದ ಸೈನ್ಯವನ್ನು ಹೊಂದಿದ್ದನು. ಕೆಲವು ಸುಲ್ತಾನರಿಗೆ ರಾಜ್ಯಪಾಲರನ್ನು ವರ್ಗಾಯಿಸುವ ಪರಿಪಾಠವಿತ್ತು ಮತ್ತು ಸುಲ್ತಾನರ ವಿರುದ್ಧ ದಂಗೆ ಎದ್ದ ರಾಜ್ಯಪಾಲರನ್ನು ಕಠಿಣವಾಗಿ ಶಿಕ್ಷಿಸಲಾಗುತ್ತಿತ್ತು.

ಪ್ರತಿಯೊಂದು ಪ್ರಾಂತ್ಯವನ್ನು ಶಿಖ್ ಮತ್ತು ಪರಗಣಗಳನ್ನಾಗಿ ವಿಭಜಿಸಲಾಗಿತ್ತು. ಶಿಖ್‌ದಾರರು ಮತ್ತು ಅಮೀಲ್‌ಗಳು ಕ್ರಮವಾಗಿ ಅವುಗಳ ಆಡಳಿತ ನೋಡಿಕೊಳ್ಳುತ್ತಿದ್ದರು. ಗ್ರಾಮವು ಆಡಳಿತದ ಪ್ರಾಥಮಿಕ ಘಟಕವಾಗಿತ್ತು. ಅದು ಪರಂಪರಾಗತ ಅಧಿಕಾರಿಗಳಾದ ಚೌಧರಿ, ಪಟ್ವಾರಿ, ಚೌಕಿದಾರ್ ಮುಂತಾದವರನ್ನು ಹೊಂದಿತ್ತು.

(2) ಸಾಹಿತ್ಯ: ಈ ಕಾಲವು ಪರ್ಷಿಯನ್ ಮತ್ತು ದೇಶೀಯ ಭಾಷಾ ಸಾಹಿತ್ಯದ ಅಭಿವೃದ್ಧಿಗೆ ಸಾಕ್ಷಿಯಾಗಿತ್ತು. ಮಧ್ಯ ಏಷ್ಯಾದ ಪರ್ಷಿಯನ್ ಕವಿಗಳು ದೆಹಲಿ ಸುಲ್ತಾನರ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು. ಅಮೀರ್ ಖುಸ್ರು ಅತ್ಯಂತ ಪ್ರಮುಖ ಬರಹಗಾರನಾಗಿದ್ದನು. ಇವನನ್ನು "ಭಾರತದ ಗಿಣಿ" ಎಂದು ಕರೆಯಲಾಗಿದೆ. ಖಜ್ಯಾನ್–ಉಲ್–ಫುತಹ್ ಮತ್ತು ತಾರೀಖ್–ಇ–ಆಲೈ ಅವನ ಗ್ರಂಥಗಳು. ಅಮೀರ್ ಹಸನ್ ದೆಹಲ್ವಿಯು ಅಷ್ಟ ಷಟ್ಪದಿ (ಸಾನೆಟ್–14 ಸಾಲುಗಳ ಪದ್ಯ)ಗಳನ್ನು ರಚಿಸಿದನು. ಬದ್ರ–ಉದ್–ದಿನ್, ಮೌಲಾನಾ ಮೊಯೀನ್–ಉದ್–ದಿನ್ ಉಮ್ರಾನಿ ಮತ್ತು ಹಸನ್ ನಿಜಾಮಿ ಕೆಲವು ಪ್ರಮುಖ ಪರ್ಷಿಯನ್ ಬರಹಗಾರರಾಗಿದ್ದರು. ಮಹಮದ್–ಬಿನ್–ತೊಘಲಕ್ ಮತ್ತು ಫಿರೋಜ್‌ಷಾ ತೊಘಲಕ್ ಪ್ರಸಿದ್ಧ ವಿದ್ವಾಂಸರಾಗಿದ್ದರು. ಜಿಯಾ–ಉದ್–ದಿನ್ ಬರಾನಿ ಮತ್ತು ಇಬನ್ ಬತೂತ ತೊಘಲಕ್ ಕಾಲದ ಪ್ರಸಿದ್ಧ ಇತಿಹಾಸಕಾರರಾಗಿದ್ದರು. ಬರಾನಿಯು ಅಪೂರ್ಣಗೊಳಿಸಿದ್ದ ತಾರೀಖ್–ಇ–ಫಿರೋಷಾಹಿ ಎಂಬ ಗ್ರಂಥವನ್ನು ಶಾಮ್ಸ್–ಇ–ಸಿರಾಜ್ ಅಫೀಫ್ ಪೂರ್ಣಗೊಳಿಸಿದನು.

ಭಕ್ತಿ ಚಳುವಳಿಯು ಸ್ಥಳೀಯ ಭಾಷಾ ಸಾಹಿತ್ಯ (ಹಿಂದಿ, ಬಂಗಾಳಿ, ಪಂಜಾಬಿ ಮತ್ತು ಗುಜರಾತಿ)ಗಳ ಬೆಳವಣಿಗೆಗೂ ಅವಕಾಶ ಕಲ್ಪಿಸಿತು. ಚಾಂದ್ ಬರ್ದಾಯಿಯು ಪೃಥ್ವಿರಾಜ್ ರಾಸೋ ಮತ್ತು ಮಲಿಕ್ ಮಹಮದ್ ಜೈಸಿಯು 'ಪದ್ಮಾವತಿ' ಎಂಬ ಗ್ರಂಥಗಳನ್ನು ರಚಿಸಿದರು. ಸಂಸ್ಕೃತ ಗ್ರಂಥಗಳನ್ನು ಪರ್ಷಿಯನ್ ಭಾಷೆಗೆ ತರ್ಜುಮೆ ಮಾಡಲು ಪ್ರೋತ್ಸಾಹ ನೀಡಲಾಯಿತು.

(3) ಕಲೆ ಮತ್ತು ವಾಸ್ತುಶಿಲ್ಪ: ಭಾರತೀಯ ವಾಸ್ತುಶಿಲ್ಪ ಪರಂಪರೆಯನ್ನು ದೆಹಲಿ ಸುಲ್ತಾನರು ಸಮೃದ್ಧಗೊಳಿಸಿದರು. ಇಂಡೋ–ಇಸ್ಲಾಮಿಕ್ ಎಂಬ ಹೊಸ ವಾಸ್ತು ಶೈಲಿಯ ಬೆಳವಣಿಗೆಗೆ ಅವರು ಕಾರಣರಾದರು. ಹಿಂದೂ ಮತ್ತು ಇಸ್ಲಾಂ ಧಾರ್ಮಿಕ ವಿಚಾರಗಳ ಸಮ್ಮಿಲನವನ್ನು ಇದು ಪ್ರತಿನಿಧಿಸುತ್ತದೆ. ಮಿನಾರ್‌ಗಳು, ಕಮಾನುಗಳು, ಗುಮ್ಮಟಗಳು, ಹಜಾರಗಳು, ಬೃಹತ್ ಹೆಬ್ಬಾಗಿಲುಗಳು ಮುಂತಾದವು ಇಂಡೋ–ಇಸ್ಲಾಮಿಕ್ ಸ್ಮಾರಕಗಳ ಪ್ರಮುಖ ಲಕ್ಷಣಗಳು.



ಕುತುಬ್ ಮಿನಾರ್, ದೆಹಲಿ

ದೆಹಲಿಯ ಖುವಾತ್–ಉಲ್–ಇಸ್ಲಾಂ ಮಸೀದಿ ಮತ್ತು ಅಜ್ಮೀರಾದ ಅಡೈ–ದಿನ್–ಕಾ–ಜೋಂಪರ ಮಸೀದಿಗಳು ಆರಂಭಿಕ ರಚನೆಗಳಾಗಿದ್ದವು. ಕುತುಬ್ ಮಿನಾರ್ ಆರಂಭಕಾಲದ ಪ್ರಸಿದ್ಧ ಸಾಧನೆಯಾಗಿತ್ತು. ಇದರ ನಿರ್ಮಾಣವು ಕುತುಬ್–ಉದ್–ದಿನ್ ಐಬಕ್‌ನಿಂದ ಆರಂಭವಾಗಿ ಇಲ್ತಮಷ್‌ನಿಂದ ಪೂರ್ಣಗೊಂಡಿತು. ಹೌಜ್–ಇ–ಶಾಮ್ಸಿ, ಜಾಮಿ ಮಸೀದಿ ಮತ್ತು ಶಾಮ್ಸಿ ಈದ್ಗಾಗಳನ್ನು ಇಲ್ತಮಶ್ ನಿರ್ಮಿಸಿದನು. ಅವನ ಕಟ್ಟಡಗಳಲ್ಲಿ ಜಾಮಿಮಸೀದಿ ಒಂದು ಬೃಹತ್ ಮತ್ತು ಅತ್ಯಂತ ಸುಂದರವಾದುದಾಗಿದೆ. ಅಲ್ಲಾವುದ್ದೀನ್ ಖಿಲ್ಜಿಯು ದೆಹಲಿಯಲ್ಲಿ ಹಜಾರ್ ಸಿತಮ್ (ಸಾವಿರ ಸ್ತಂಭಗಳ ಅರಮನೆ) ಅರಮನೆಯನ್ನು, ಸಿರಿಯಕೋಟೆ, ಜಮೈತ್‌ಖಾನ್ ಮಸೀದಿ ಮತ್ತು ಆಲೈದರ್ವಾಜಾಗಳನ್ನು ನಿರ್ಮಿಸಿದನು. ತೊಘಲಕರು ಪಟ್ಟಣಗಳು ಮತ್ತು ಕೋಟೆಗಳ ನಿರ್ಮಾಣಕ್ಕೆ ಅತೀವ ಆಸಕ್ತಿ ತೋರಿಸಿದರು. ಫಿರೋಜ್‌ಷಾ ಪ್ರಸಿದ್ಧ ನಿರ್ಮಾಣಕಾರನಾಗಿದ್ದನು. ಅವನು ಫಿರೋಜಾಬಾದ್, ಫತೇಬಾದ್, ಹಿಸ್ಸಾರ್ ಮತ್ತು ಜಾನ್‌ಪುರ್ ಎಂಬ ನಗರಗಳನ್ನು ನಿರ್ಮಿಸಿದನು.

ಚಟುವಟಿಕೆಗಳು

1. ಮಹಮದ್‌ಬಿನ್ ತೊಘಲಕ್‌ನ ಆಡಳಿತ ಪ್ರಯೋಗಗಳನ್ನು ಪಟ್ಟಿಮಾಡಿ.
2. ದೆಹಲಿ ಸುಲ್ತಾನರ ಇಂಡೋ– ಇಸ್ಲಾಮಿಕ್ ಸ್ಮಾರಕಗಳ ಕಲೆ ಮತ್ತು ವಾಸ್ತುಶಿಲ್ಪದ ಚಿತ್ರಗಳನ್ನು ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಭಾರತದ ಮೇಲೆ ದಾಳಿ ಮಾಡಿದ ಮೊದಲ ಮುಸ್ಲಿಮರು ಯಾರು?
2. ಅಲ್‌ಬೆರುನಿಯ ಪ್ರಸಿದ್ಧ ಪುಸ್ತಕವನ್ನು ಹೆಸರಿಸಿ.
3. ಗುಲಾಮಿ ಸಂತತಿಯ ಸ್ಥಾಪಕರು ಯಾರು?
4. ಖಿಲ್ಜಿ ಸಂತತಿಯ ಸ್ಥಾಪಕರು ಯಾರು?
5. ದಕ್ಷಿಣದ ದಂಡೆಯಾತ್ರೆ ಕೈಗೊಂಡ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಯಾರು?
6. 'ಭಾರತದ ಗಿಣಿ' ಎಂದು ಯಾರನ್ನು ಕರೆಯಲಾಗಿದೆ?
7. ತೊಘಲಕ್' ಸಂತತಿಯ ಸ್ಥಾಪಕರು ಯಾರು?
8. ತೊಘಲಕ್ ಸಂತತಿಯ ಪ್ರಸಿದ್ಧ ಸುಲ್ತಾನನು ಯಾರು?
9. ದೆಹಲಿಯಿಂದ ದೇವಗಿರಿಗೆ ರಾಜಧಾನಿಯನ್ನು ವರ್ಗಾಯಿಸಿದವರು ಯಾರು?
10. ಸಾಂಕೇತಿಕ ನಾಣ್ಯವನ್ನು ಜಾರಿಗೊಳಿಸಿದವರು ಯಾರು?
11. ದೆಹಲಿಯಲ್ಲಿ ಕುತುಬ್ ಮಿನಾರ್‌ನ ನಿರ್ಮಾಣವನ್ನು ಆರಂಭಿಸಿದವರು ಯಾರು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ:

1. 2ನೇ ತರೈನ್ ಕದನ ನಡೆದ ವರ್ಷ ಯಾವುದು? ಅದು ಯಾರ ನಡುವೆ ನಡೆಯಿತು?
2. ದೆಹಲಿಯನ್ನು ಆಳಿದ ಯಾವುದಾದರು ಎರಡು ಸುಲ್ತಾನ ಸಂತತಿಗಳನ್ನು ಹೆಸರಿಸಿ.

3. ಅಲ್ಲಾವುದ್ದೀನ್ ಖಿಲ್ಜಿ ಕಟ್ಟಿಸಿದ ಯಾವುದಾದರು ಎರಡು ಪ್ರಮುಖ ಸ್ಮಾರಕಗಳನ್ನು ಹೆಸರಿಸಿ.
4. ಅಲ್ಲಾವುದ್ದೀನ್ ಖಿಲ್ಜಿಯು ತನ್ನನ್ನು ಸಿಕಂದರ್ ಎಂದು ಏಕೆ ಕರೆದುಕೊಂಡನು?
5. ಅಲ್ಲಾವುದ್ದೀನ್ ಖಿಲ್ಜಿಯ ಇಬ್ಬರು ಸೇನಾಪತಿಗಳನ್ನು ಹೆಸರಿಸಿ.
6. ಮಹಮದ್ ಬಿನ್ ತೊಘಲಕನು ರಾಜಧಾನಿಯ ವರ್ಗಾವಣೆ ಮಾಡಿದ್ದಕ್ಕೆ ಯಾವುದಾದರು ಎರಡು ಕಾರಣಗಳನ್ನು ನೀಡಿ.
7. ತೊಘಲಕ್ ಕಾಲದ ಇಬ್ಬರು ಇತಿಹಾಸಕಾರರನ್ನು ಹೆಸರಿಸಿ.
8. 'ತಾರೀಕ್–ಇ–ಫಿರೋಜ್ ಷಾಹಿ' ಯನ್ನು ಬರೆಯಲಾರಂಭಿಸಿದವರು ಯಾರು? ಅದನ್ನು ಪೂರ್ಣಗೊಳಿಸಿದವರು ಯಾರು?
9. ಅಮೀರ್ ಖುಸ್ರುವಿನ ಎರಡು ಗ್ರಂಥಗಳನ್ನು ಹೆಸರಿಸಿ.

III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದನ್ನು 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ

1. ಅಲ್ಲಾವುದ್ದೀನ್ ಖಿಲ್ಜಿಯ ದಕ್ಷಿಣ ದಂಡೆಯಾತ್ರೆಯ ಬಗ್ಗೆ ಒಂದು ವಿವರಣೆ ಬರೆಯಿರಿ.
2. ಅಲ್ಲಾವುದ್ದೀನ್ ಖಿಲ್ಜಿಯ ಸುಧಾರಣೆಗಳನ್ನು ತಿಳಿಸಿ.
3. ಮಹಮದ್ ಬಿನ್ ತೊಘಲಕ್‌ನನ್ನು 'ವೈರುದ್ಧಗಳ ಮಿಶ್ರಣ' ಎಂದು ಏಕೆ ಕರೆಯಲಾಗಿದೆ?

IV. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ

1. ಅಲ್ಲಾವುದ್ದೀನ್ ಖಿಲ್ಜಿಯ ಸಾಧನೆಗಳನ್ನು ವಿವರಿಸಿ.
2. ಮಹಮದ್ ಬಿನ್ ತೊಘಲಕನ ಆಡಳಿತ ಪ್ರಯೋಗಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.
3. ದೆಹಲಿ ಸುಲ್ತಾನರ ಕೊಡುಗೆಗಳ ಬಗ್ಗೆ ಒಂದು ವಿವರಣೆ ನೀಡಿ.

****

ಅಧ್ಯಾಯ–5.2

ಮೊಘಲರು

ಮಧ್ಯ ಕಾಲದ ಉತ್ತರಾರ್ಧದಲ್ಲಿ ಭಾರತದ ಮೇಲೆ ಮಧ್ಯ ಏಷಿಯಾದ ಮತ್ತೊಂದು ದಾಳಿಯಾಯಿತು. ಸಾ.ಶ.1526ರಲ್ಲಿ ನಡೆದ ಮೊದಲನೇ ಪಾಣಿಪತ್ ಕದನದಲ್ಲಿ ಬಾಬರನು ಇಬ್ರಾಹಿಂ ಲೋಧಿಯನ್ನು ಸೋಲಿಸಿ, ಕೊಂದು ಭಾರತದಲ್ಲಿ ಮೊಘಲ್ ಆಳ್ವಿಕೆಯನ್ನು ಸ್ಥಾಪಿಸಿದನು.

ಬಾಬರ್ ಪ್ರಸಿದ್ಧ ಕವಿಯೂ ಮತ್ತು ಗದ್ಯ ಬರಹಗಾರನೂ ಆಗಿದ್ದನು. 'ಬಾಬರ್ ನಾಮ' ಎಂಬುದು ಅವನ ಆತ್ಮ ಚರಿತ್ರೆಯಾಗಿದೆ. ಹುಮಾಯೂನನು ಅವನ ಮಗ ಮತ್ತು ಉತ್ತರಾಧಿಕಾರಿಯಾಗಿದ್ದನು. ಷೇರ್‌ಷಹ ಸೂರ್‌ನಿಂದಾಗಿ ತನ್ನ ಅಧಿಕಾರವನ್ನು ಕಳೆದುಕೊಂಡು, 15 ವರ್ಷಗಳ ನಂತರ ಮರಳಿ ಪಡೆದನು. ಇವನು ಸಾ.ಶ.1556 ರಲ್ಲಿ ಹಠಾತ್ ಮರಣ ಹೊಂದಿದನು. ಇವನ ನಂತರ ಅವನ ಮಗ ಅಕ್ಬರ್ ಉತ್ತರಾಧಿಕಾರಿಯಾದನು.

ಅಕ್ಬರ್ ಮಹಾಶಯ: (ಸಾ.ಶ. 1556–1605)

ಜಲಾಲ್–ಉದ್–ದಿನ್ ಮಹಮದ್ ಅಕ್ಬರನು ಹುಮಾಯೂನ್ ಮತ್ತು ಹಮೀದಾಬಾನುಬೇಗಂರ ಪುತ್ರ. ಹುಮಾಯೂನ್ ತನ್ನ ರಾಜ್ಯವನ್ನು ಕಳೆದುಕೊಂಡು ತನ್ನ ಪತ್ನಿ ಮತ್ತು ಕೆಲವೇ ಕೆಲವು ಅನುಯಾಯಿಗಳೊಂದಿಗೆ ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಿದ್ದನು. ಈ ಸಂದರ್ಭದಲ್ಲಿ ರಾಣಾನ ರಕ್ಷಣೆಯಲ್ಲಿ ಅಮರಕೋಟೆ ಎಂಬಲ್ಲಿ ಸಾ.ಶ.1542 ರಲ್ಲಿ ಅಕ್ಬರ್ ಜನಿಸಿದನು. ಹುಮಾಯೂನನ ಶತ್ರುಗಳು ಮತ್ತು ನಂಬಲನರ್ಹ ಕೆಲವು ಅನುಯಾಯಿಗಳು ಕೊಡುತ್ತಿದ್ದ ಕಿರುಕುಳಗಳಿಂದಾಗಿ ಅಕ್ಬರ್ ತನ್ನ ಬಾಲ್ಯ ಜೀವನವನ್ನು ಸಂಕಷ್ಟದಲ್ಲಿ ಕಳೆದನು. ಆದ್ದರಿಂದ ಅಕ್ಬರ್ ವಿದ್ಯಾಭ್ಯಾಸ ಮತ್ತು ರಾಜಕೀಯ ತರಬೇತಿಗಳಿಂದ ವಂಚಿತನಾದನು. ಇವನು ತನ್ನ ತಂದೆಯ ಮರಣದಿಂದಾಗಿ 14 ನೇ ವಯಸ್ಸಿನಲ್ಲೇ ಅಧಿಕಾರಕ್ಕೆ ಬರಬೇಕಾಯಿತು. ಅವನು ಅಪ್ರಾಪ್ತವಯಸ್ಕನಾಗಿದ್ದರಿಂದ ಬೈರಾಂಖಾನನು ರಾಜಪ್ರತಿನಿಧಿಯಾಗಿದ್ದನು.

ಅಕ್ಬರನ ಸೈನಿಕ ಸಾಧನೆಗಳು:

2ನೇ ಪಾಣಿಪತ್ ಕದನ : (ಸಾ.ಶ. 1556). ಬಂಗಾಳದ ಮಹಮದ್ ಆದಿಲ್‌ಷಾನ ಪ್ರಧಾನ ಮಂತ್ರಿ ಹೇಮು ಮೊಘಲ್ ರಾಜ್ಯಪಾಲ ತರ್ದಿಬೇಗ್‌ನಿಂದ ದೆಹಲಿ ಮತ್ತು ಆಗ್ರಾಗಳನ್ನು ವಶಪಡಿಸಿಕೊಂಡು ರಾಜಾ ವಿಕ್ರಮಾದಿತ್ಯ ಎಂಬ ಬಿರುದು ಪಡೆದನು. ಅಕ್ಬರನು ಪಂಜಾಬಿನಲ್ಲಿದ್ದನು ಮತ್ತು ಅವನ ರಾಜಕೀಯ ಸ್ಥಿತಿಯು ಚಿಂತಾಜನಕವಾಗಿತ್ತು. ಸಾ.ಶ. 1556 ರಲ್ಲಿ ನಡೆದ 2ನೇ ಪಾಣಿಪತ್ ಕದನದಲ್ಲಿ ಹೇಮುವನ್ನು ಎದುರಿಸಲು ಬೈರಾಂಖಾನನು ಅಕ್ಬರನಿಗೆ ನೆರವಾದನು. ವಿಜಯದ ಅಂಚಿನಲ್ಲಿದ್ದ ಹೇಮುವಿನ ಕಣ್ಣಿಗೆ ಬಾಣವೊಂದು ತಗುಲಿ ಪ್ರಜ್ಞಾಹೀನನಾದನು. ನಾಯಕನಿಲ್ಲದ ಹೇಮುವಿನ ಸೈನ್ಯ ಪಲಾಯನಮಾಡಿತು. ಹೇಮುವನ್ನು ಬೈರಾಂಖಾನ್ ಕೊಲೆ ಮಾಡಿದನು. ಈ ಕದನದ ನಂತರ ಅಕ್ಬರ್ ದೆಹಲಿ ಮತ್ತು ಆಗ್ರಾಗಳನ್ನು ಮರುವಶಪಡಿಸಿಕೊಂಡನು.


ಅಕ್ಬರನ ಕಾಲದ
ಮೊಘಲ್ ಸಾಮ್ರಾಜ್ಯ
ಕಾಬೂಲ್
ಕಾಶ್ಮೀರ
ಖಾಂದಹಾರ್
ಲಾಹೋರ್
ಪಾಣಿಪತ್
ದೆಹಲಿ
ಆಗ್ರಾ
ಫತೆಪುರಸಿಕ್ರಿ
ಅಹಮದ್‌ನಗರ
ಬಂಗಾಳ
ಸೂರತ್
ಖಾಂದೇಶ್
ಗೊಂಡ್ವಾನ
ಒಂಸಾ
ಬಿಜಾಪುರ
ಅರಬ್ಬಿ
ಸಮುದ್ರ
ಬಂಗಾಳ ಕೊಲ್ಲಿ
ಸಿಲೋನ್
ಸಾಮ್ರಾಜ್ಯ ವಿಸ್ತರಣೆ
ಹಿಂದೂ ಮಹಾಸಾಗರ

ಗೊಂಡ್ವಾನದ ದಿಗ್ವಿಜಯ : ಗೊಂಡ್ವಾನ ರಾಜ್ಯವನ್ನು ವಶಪಡಿಸಿಕೊಳ್ಳಲು ಅಕ್ಬರ್‌ನು ಅಸಫಖಾನ್ ಎಂಬುವನನ್ನು ಕಳುಹಿಸಿದನು. ಈ ರಾಜ್ಯವನ್ನು ರಾಣಿ ದುರ್ಗಾವತಿಯು ತನ್ನ ಮಗ ವೀರ ನಾರಾಯಣನ ರಾಜ ಪ್ರತಿನಿಧಿಯಾಗಿ ಆಳುತ್ತಿದ್ದಳು. ಯುದ್ಧ ಮಾಡುತ್ತಲೇ ಅವಳು ಮರಣಹೊಂದಿದಳು. ಗೊಂಡ್ವಾನ ರಾಜ್ಯವನ್ನು ಮೊಘಲ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಯಿತು.

ಗುಜರಾತ್ ಆಕ್ರಮಣ : ಗುಜರಾತಿನ ಸಂಪತ್ತು ಮತ್ತು ಸಮುದ್ರ ವ್ಯಾಪಾರದ ಪ್ರಾಮುಖ್ಯತೆಯಿಂದಾಗಿ ಅಕ್ಬರ್ ಗುಜರಾತಿನ ಮೇಲೆ ದಾಳಿ ಮಾಡಿದನು. ಅದರ ರಾಜ ಮುಜಾಫರ್‌ಷಾನನ್ನು ಸೋಲಿಸಿ ಗುಜರಾತನ್ನು ವಶಪಡಿಸಿಕೊಂಡನು. ಈ ದಿಗ್ವಿಜಯದ ಸ್ಮರಣಾರ್ಥ ಅಕ್ಬರ್ ಫತೇಪುರ ಎಂಬ ಹೊಸ ರಾಜಧಾನಿಯನ್ನು ಸಿಕ್ರಿಯ ಬಳಿ ನಿರ್ಮಿಸಿದನು.

ಬಂಗಾಳ ಮತ್ತು ಒರಿಸ್ಸಾಗಳ ಆಕ್ರಮಣ : ಬಂಗಾಳದ ರಾಜ್ಯಪಾಲ ದಾವುದ್ ಖಾನ್ ಸ್ವತಂತ್ರ ಘೋಷಿಸಿಕೊಂಡನು. ಆದ್ದರಿಂದ ಅವನನ್ನು ಹತ್ತಿಕ್ಕಲು ಅಕ್ಬರ್ ತನ್ನ ಸೈನ್ಯವನ್ನು ಕಳುಹಿಸಿದನು. ಬಂಗಾಳ ಮತ್ತು ಒರಿಸ್ಸಾಗಳನ್ನು ವಶಪಡಿಸಿಕೊಂಡ ನಂತರ ಅವುಗಳು ಮೊಘಲ್ ಸಾಮ್ರಾಜ್ಯದ ಭಾಗಗಳಾದವು.

ಕಾಬೂಲ್ ಮತ್ತು ಕಾಶ್ಮೀರಗಳ ಸೇರ್ಪಡೆ : ಹಕೀಮ್ ಮಿರ್ಜಾ ಎಂಬ ಅಕ್ಬರನ ಮಲ–ಸಹೋದರ ಕಾಬೂಲನ್ನು ಆಳುತ್ತಿದ್ದನು. ಸಾ.ಶ. 1585 ರಲ್ಲಿ ಅವನ ಮರಣಾನಂತರ ಅಕ್ಬರನು ಅದನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ನಂತರ ಕಾಶ್ಮೀರವನ್ನು ವಶಪಡಿಸಿಕೊಂಡನು.

ರಜಪೂತ ನೀತಿ : ಬಲಶಾಲಿಗಳಾಗಿದ್ದ ರತಪೂತರು ಮೊಘಲರ ಪ್ರಮುಖ ಶತ್ರುಗಳಾಗಿದ್ದರು. ರಜಪೂತರ ಧೈರ್ಯ, ಕೆಚ್ಚೆದೆ ಮತ್ತು ರಾಜನಿಷ್ಠೆಗಳು ಮೊಘಲ್ ಸಾಮ್ರಾಜ್ಯವನ್ನು ಬಲಪಡಿಸಲು ಅಗತ್ಯವೆಂದು ಅಕ್ಬರ್ ಅರಿತಿದ್ದನು. ಆದ್ದರಿಂದ ಅಕ್ಬರನು ಅವರ ಬೆಂಬಲ ಗಳಿಸಿಕೊಳ್ಳಲು ಸ್ನೇಹ ಸಂಬಂಧ, ಸಹಕಾರ ನೀತಿ, ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದು ಮತ್ತು ಅವರನ್ನು ಮನ್‌ಸಬ್ದಾರರನ್ನಾಗಿ ನೇಮಿಸಿಕೊಳ್ಳುವ ಕ್ರಮಗಳನ್ನು ಅನುಸರಿಸಿದನು. ಅಂಬರ್(ಜೈಪುರ)ದ ಬಿಹಾರಿಮಲ್‌ನ ಮಗಳು ಜೋದಾಬಾಯಿಯನ್ನು ಅಕ್ಬರ್ ವಿವಾಹವಾದನು. ರಣಥಂಬೋರ್‌ನ ರಾಜ ಸುರ್ಜನ್‌ರಾಯ್ ಸ್ವಇಚ್ಛೆಯಿಂದ ಅಕ್ಬರನ ಪ್ರಭುತ್ವವನ್ನು ಒಪ್ಪಿದನು. ಕಲಿಂಜಾರದ ರಾಜ ರಾಮಚಂದ್ರನು ಸಾ.ಶ. 1569 ರಲ್ಲಿ ಸ್ವತಃ ಶರಣಾದನು. ಜೋಧ್ಪುರ ಮತ್ತು ಬಿಕನೇರ್ ರಾಜ್ಯಗಳ ರಾಜರೂ ಸಹ ಅಕ್ಬರನ ಸಾರ್ವಭೌಮತ್ವವನ್ನು ಒಪ್ಪಿಕೊಂಡರು.

ಮೇವಾರ ರಾಜ್ಯವು ಅಕ್ಬರನ ಪ್ರಭುತ್ವವನ್ನು ಸ್ವೀಕರಿಸಲು ಒಪ್ಪದ ಏಕಮಾತ್ರ ರಜಪೂತ ರಾಜ್ಯವಾಗಿತ್ತು. ಸಾ.ಶ. 1568 ರಲ್ಲಿ ಅಕ್ಬರ್ ಮೇವಾರದ ರಾಜ ಉದಯ್‌ಸಿಂಗ್‌ನನ್ನು ಸೋಲಿಸಿ ಅವನ ರಾಜಧಾನಿ ಚಿತ್ತೂರನ್ನು ವಶಪಡಿಸಿಕೊಂಡನು. ಆದರೆ ಉದಯ್‌ಸಿಂಗ್ ತನ್ನ ಮರಣದವರೆಗೂ ಮೊಘಲರ ವಿರುದ್ಧ ಹೋರಾಟವನ್ನು ಮುಂದುವರೆಸಿದನು. ಉದಯಸಿಂಗ್‌ನ ಮರಣದ ನಂತರ ಅವನ ಮಗ ರಾಣಾ ಪ್ರತಾಪಸಿಂಗ್‌ನೂ ಹೋರಾಟವನ್ನು ಮುಂದುವರಿಸಿದನು. ಸಾ.ಶ. 1576 ರಲ್ಲಿ ನಡೆದ 'ಹಳ್ದಿ ಘಾಟ್' ಕದನವು ಮೊಘಲರು ಮತ್ತು ರಜಪೂತರ ನಡುವೆ ನಡೆದ ಅತ್ಯಂತ ಮಹತ್ವದ ಕದನವಾಗಿದೆ. ಈ ಕದನದಲ್ಲಿ ರಾಣಾ ಪ್ರತಾಪಸಿಂಗನು ತೀವ್ರ ನಷ್ಟವನ್ನು ಅನುಭವಿಸಿದನು. ರಾಣಾಪ್ರತಾಪಸಿಂಗನ ಮರಣಾನಂತರವೇ ಅಕ್ಬರನು ಮೇವಾಡವನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಯಿತು.

ರಜಪೂತ ಅರಸರು ಆಂತರಿಕ ಸ್ವಾಯತ್ತತೆಯನ್ನು ಉಳಿಸಿಕೊಳ್ಳಲು ಅನುಮತಿ ನೀಡಲಾಯಿತು. ರಾಜಾತೋಡರಮಲ್, ರಾಜಾಮಾನಸಿಂಗ್, ರಾಜಾ ಭಗವಾನ್‌ದಾಸ್ ಮತ್ತಿತರರು ಅಕ್ಬರನ ಪ್ರಮುಖ ರಜಪೂತ ಸಹಾಯಕರಾಗಿದ್ದರು.

ದಕ್ಷಿಣ ಭಾರತದ ಆಕ್ರಮಣಗಳು: ಅಕ್ಬರ್ ಉತ್ತರ ಭಾರತದ ದಂಡೆಯಾತ್ರೆಯ ನಂತರ ದಕ್ಷಿಣ ಭಾರತದ ರಾಜ್ಯಗಳಾದ ಬೀದರ್, ಖಾಂದೇಶ್, ಅಹಮದ್‌ನಗರ, ಗೋಲ್ಕೊಂಡ ಮತ್ತು ಬಿಜಾಪುರಗಳಿಗೆ ತನ್ನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ತಿಳಿಸಲು ರಾಜಕೀಯ ನಿಯೋಗಗಳನ್ನು ಕಳುಹಿಸಿದನು. ಖಾಂದೇಶ್ ಒಂದನ್ನು ಬಿಟ್ಟು ಉಳಿದ ರಾಜ್ಯಗಳು ಈ ಪ್ರಸ್ತಾಪವನ್ನು ತಿರಸ್ಕರಿಸಿದವು. ಆದ್ದರಿಂದ ಅವುಗಳನ್ನು ಗೆಲ್ಲಲು ಅವನು ಯುದ್ಧ ಮಾರ್ಗವನ್ನು ಅನುಸರಿಸಿದನು. ಸಾ.ಶ. 1595ರಲ್ಲಿ ಅಹಮದ್‌ನಗರದ ರಾಣಿ ಚಾಂದ್‌ಬೀಬಿಯು ಮೊಘಲರ ಆಕ್ರಮಣದ ವಿರುದ್ಧ ವೀರಾವೇಶದಿಂದ ಹೋರಾಡಿ ವಿಫಲಳಾದಳು. ಹೀಗಾಗಿ ಅಕ್ಬರ್ ಬೀದರ್ ಮತ್ತು ಅಹಮದ್‌ನಗರಗಳನ್ನು ಗೆದ್ದುಕೊಂಡನು.

ಅಕ್ಬರನ ಸಾಮ್ರಾಜ್ಯವು ಉತ್ತರದಲ್ಲಿ ಹಿಮಾಲಯದಿಂದ ದಕ್ಷಿಣದಲ್ಲಿ ಗೋದಾವರಿ ನದಿಯವರೆಗೂ ಮತ್ತು ಪೂರ್ವದಲ್ಲಿ ಬಂಗಾಳದಿಂದ ಪಶ್ಚಿಮದಲ್ಲಿ ಕಾಬೂಲ್‌ವರೆಗೂ ವಿಸ್ತರಿಸಿತ್ತು.

ಅಕ್ಬರನ ಆಡಳಿತ: ಅಕ್ಬರ್ ಒಂದು ಉತ್ತಮವಾದ ಆಡಳಿತ ಪದ್ಧತಿಯನ್ನು ಒದಗಿಸಿದನು. ಇದು ಕೆಲವೇ ಬದಲಾವಣೆಗಳೊಂದಿಗೆ ಮೊಘಲರ ಆಳ್ವಿಕೆಯುದ್ದಕ್ಕೂ ಮುಂದುವರೆಯಿತು. ಅಕ್ಬರನ ಅಧೀನದಲ್ಲಿ ಮೊಘಲರ ಆಡಳಿತ ಕೇಂದ್ರೀಕೃತವಾಗಿತ್ತು. ಅವನು ಎಲ್ಲಾ ಅಧಿಕಾರದ ಕೇಂದ್ರ ಬಿಂದುವಾಗಿದ್ದನು. ಮೊಘಲ್ ಚಕ್ರವರ್ತಿಯನ್ನು 'ಪಾದಿಷಹ' ಅಥವಾ 'ಬಾದ್‌ಷಹ' ಎಂದು ಕರೆಯಲಾಗುತ್ತಿತ್ತು. ಇವನನ್ನು ದೇವರ ನೆರಳೆಂದು ಪರಿಗಣಿಸಲಾಗಿತ್ತು ಮತ್ತು ಅವನು ಇಸ್ಲಾಂ ತತ್ವಗಳಿಗೆ ಅನುಗುಣವಾಗಿ ಆಳ್ವಿಕೆ ಮಾಡುತ್ತಿದ್ದನು. ಸಾಮ್ರಾಟನು ಮಂತ್ರಿ ಮಂಡಲವನ್ನು ಹೊಂದಿದ್ದು, ಮಂತ್ರಿಗಳು ಆಡಳಿತ ವಿಷಯಗಳಲ್ಲಿ ಸಹಾಯ ಮಾಡುತ್ತಿದ್ದರು. ಕೆಲವು ಪ್ರಮುಖ ಮಂತ್ರಿಗಳೆಂದರೆ

(ಎ) ವಕೀಲ್ – ಮುಖ್ಯಮಂತ್ರಿ
(ಬಿ) ದಿವಾನ್–ಇ–ಆಲಾ – ಅರ್ಥಮಂತ್ರಿ
(ಸಿ) ಮೀರ್‌ಭಕ್ಷಿ – ವೇತನ ಬಟವಾಡೆ ಅಧಿಕಾರಿ.
(ಡಿ) ಸದರ್ ಉಸ್–ಸದರ್ – ದಾನದತ್ತಿಯ ಉಸ್ತುವಾರಿ
(ಇ) ಖಾನ್–ಇ–ಸಮಾನ್ – ಗೃಹಮಂತ್ರಿ
(ಎಫ್) ದಿವಾನ್ – ಕಂದಾಯಮಂತ್ರಿ
(ಜಿ) ಖಾಜಿ – ಮುಖ್ಯ ನ್ಯಾಯಾಧೀಶ.

ಇವರೆಲ್ಲರೂ ಚಕ್ರವರ್ತಿಯ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಯಾವುದೇ ಸಮಯದಲ್ಲಿ, ಅವರನ್ನು ಚಕ್ರವರ್ತಿಯು ವಜಾ ಮಾಡಬಹುದಿತ್ತು.

ಅಕ್ಬರನ ಸಾಮ್ರಾಜ್ಯವು 16 ಪ್ರಾಂತ್ಯಗಳನ್ನು ಒಳಗೊಂಡಿತ್ತು. ಅವುಗಳನ್ನು ಸುಭಾಗಳೆಂದು ಕರೆಯಲಾಗಿತ್ತು. ಪ್ರತಿಯೊಂದು ಪ್ರಾಂತ್ಯಕ್ಕೂ 'ಸುಭಾದಾರ್' ಎಂಬ ರಾಜ್ಯಪಾಲನಿದ್ದನು. ಇವನು ಕಂದಾಯ ವಸೂಲಿ, ಕಾನೂನು ಮತ್ತು ಸುವ್ಯವಸ್ಥೆ ಪರಿಪಾಲನೆಯ ಜವಾಬ್ದಾರಿ ಹೊಂದಿದ್ದನು. ದಿವಾನ್, ಬಕ್ಷಿ, ಸದರ್, ಫೌಜ್‌ದಾರ್, ಕೊತ್ವಾಲ್, ಖಾಜಿ ಮುಂತಾದವರು ಪ್ರಾಂತ್ಯಗಳ ಹಲವಾರು ಪ್ರಮುಖ ಅಧಿಕಾರಿಗಳಾಗಿದ್ದರು. ಸುಭಾಗಳನ್ನು ಸರ್ಕಾರ್ (ಜಿಲ್ಲೆ)ಗಳಾಗಿ ಮತ್ತು ಸರ್ಕಾರ್‌ಗಳನ್ನು ಪರ್ಗಣ (ತಾಲ್ಲೂಕ್)ಗಳನ್ನಾಗಿ ಪುನರ್ ವಿಭಜಿಸಲಾಗಿತ್ತು. ನಗರಾಡಳಿತದ ಉಸ್ತುವಾರಿಯು ಕೊತ್ವಾಲರದ್ದಾಗಿತ್ತು. ಗ್ರಾಮವು ಆಡಳಿತದ ಕೊನೆಯ ಘಟಕವಾಗಿತ್ತು. ಗ್ರಾಮ ಪಂಚಾಯಿತಿಗಳು ಗ್ರಾಮಾಡಳಿತವನ್ನು ನಡೆಸುತ್ತಿದ್ದವು.

ಮನ್‌ಸಬ್ದಾರಿ ಪದ್ಧತಿ : ಅಕ್ಬರನು ಸೈನಿಕ ಮತ್ತು ನಾಗರಿಕ ಆಡಳಿತದಲ್ಲಿ 'ಮನ್‌ಸಬ್ದಾರಿ' ಎಂಬ ಹೊಸ ಪದ್ಧತಿಯನ್ನು ಜಾರಿಗೊಳಿಸಿದನು. 'ಮನ್‌ಸಬ್' ಎಂದರೆ 'ಶ್ರೇಣಿ' ಅಥವಾ 'ಸ್ಥಾನ' ಎಂದರ್ಥ. ಇದು 'ನಸಬ್‌ಕರ್ದನ್' ಎಂಬ ಪರ್ಷಿಯನ್ ಪರಿಕಲ್ಪನೆಯಿಂದ ಉಗಮವಾಗಿದೆ. ನಿರ್ದಿಷ್ಠ ವ್ಯಕ್ತಿಯೊಬ್ಬನನ್ನು ನಿರ್ದಿಷ್ಠ ಸ್ಥಾನದಲ್ಲಿ ನೆಲೆಗೊಳಿಸುವುದು ಎಂಬುದು ಇದರ ಅರ್ಥವಾಗಿದೆ. ಆದ್ದರಿಂದ ಮನ್‌ಸಬ್ದಾರರು ರಾಜನ ಸೇವೆಯಲ್ಲಿ ಈ ಸ್ಥಾನಗಳು ಅಥವಾ ಶ್ರೇಣಿಗಳನ್ನು ಹೊಂದಿದ್ದರು. ಸಾ.ಶ. 1571 ರಲ್ಲಿ ಮೀರ್‌ಭಕ್ಷಿಯ ನೆರವಿನಿಂದ ಅಕ್ಬರ್ ಮನ್‌ಸಬ್ದಾರಿ ಪದ್ಧತಿಯನ್ನು ರೂಪಿಸಿದನು. ಮನ್‌ಸಬ್ದಾರರನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ವರ್ಗಾವಣೆ ಮಾಡಬಹುದಿತ್ತು.

10 ರಿಂದ ಗರಿಷ್ಠ 10,000 ವರೆಗಿನ ಸೈನಿಕರನ್ನು ನಿಯಂತ್ರಿಸುವ ವಿವಿಧ ಶ್ರೇಣಿಯ ಮನ್‌ಸಬ್ದಾರರಿದ್ದರು. ನಂತರದಲ್ಲಿ ಈ ಸಂಖ್ಯೆಯು 50,000 ವರೆಗೂ ಹೋಯಿತು. ರಾಜ್ಯದ ಎಲ್ಲಾ ಅಧಿಕಾರಿಗಳು ಮನ್‌ಸಬ್‌ಗಳನ್ನು ಹೊಂದಿದ್ದು, ಅವರು ತಮ್ಮ ಅಧೀನದಲ್ಲಿ ನಿರ್ದಿಷ್ಟ ಸಂಖ್ಯೆಯ ಸೈನಿಕರನ್ನು ನೇಮಿಸಿಕೊಳ್ಳಬೇಕಿತ್ತು. ಚಕ್ರವರ್ತಿಯು ತನ್ನ ಇಚ್ಛಾನುಸಾರ ಮನ್‌ಸಬ್ದಾರರನ್ನು ನೇಮಿಸಬಹುದಿತ್ತು, ಬಡ್ತಿ ನೀಡಬಹುದಿತ್ತು ಅಥವಾ ವಜಾಗೊಳಿಸಲೂ ಬಹುದಿತ್ತು.

ಮನ್‌ಸಬ್ದಾರಿ ಪದ್ಧತಿಯು 'ಜಾಟ್' ಮತ್ತು 'ಸವಾರ್'ರನ್ನು ಒಳಗೊಂಡಿತ್ತು. ಮನ್‌ಸಬ್ದಾರನು ನಿರ್ವಹಿಸುವ ಸೈನಿಕರ ಸಂಖ್ಯೆಯನ್ನು ಜಾಟ್ ಸೂಚಿಸುತ್ತದೆ. ಸವಾರ್ ಎಂದರೆ ಅವನು ನಿರ್ವಹಿಸುವ ನಿರ್ದಿಷ್ಟ ಕುದುರೆ ಸವಾರರ ಸಂಖ್ಯೆಯಾಗಿತ್ತು. ಮನ್‌ಸಬ್ದಾರರಿಗೆ ಅಧಿಕ ವೇತನ ನಿಗದಿಗೊಳಿಸಲಾಗಿತ್ತು. ಸಾಮಾನ್ಯವಾಗಿ ಅವರಿಗೆ ನಗದು ವೇತನ ನೀಡುತ್ತಿರಲಿಲ್ಲ. ಆದರೆ ಅವರ ವೇತನಗಳಿಗೆ ಸಮನಾದ ಆದಾಯವಿರುವ ಜಾಗೀರ್‌ಗಳನ್ನು ಮಂಜೂರು ಮಾಡಲಾಗುತ್ತಿತ್ತು. ಕಾಲಾಂತರದಲ್ಲಿ ಕೆಲವು ಮನ್‌ಸಬ್ದಾರರು ಪ್ರಬಲರಾಗಿ ಚಕ್ರವರ್ತಿಗೆ ತೊಂದರೆ ನೀಡುತ್ತಿದ್ದರು. ಅಕ್ಬರನ ಸೈನ್ಯವು ಕೇವಲ 25000 ಸೈನಿಕರನ್ನು ಮಾತ್ರ ಹೊಂದಿದ್ದರಿಂದ ಅವನು ಸೈನಿಕ ಸಹಾಯಕ್ಕೆ ಮನ್‌ಸಬ್ದಾರರನ್ನೇ ಅವಲಂಬಿಸಿದ್ದನು.

ರಾಜಾತೋದರ ಮಲ್ಲನ ಕಂದಾಯ ಪದ್ಧತಿ:

ಅಕ್ಬರ್ ಅತ್ಯುತ್ತಮ ರೀತಿಯ ಭೂಕಂದಾಯ ಪದ್ಧತಿ ರೂಪಿಸಿದ್ದನು. ಸಾ.ಶ.1581 ರಲ್ಲಿ ಅವನ ಕಂದಾಯ ಮಂತ್ರಿ ರಾಜಾತೋದರ ಮಲ್ ಭೂ ಕಂದಾಯ ಪದ್ಧತಿಯನ್ನು ಸಂಪೂರ್ಣವಾಗಿ ಪುನರ್ ಸಂಘಟಿಸಿದನು. ಈ ಪದ್ಧತಿಯನ್ನು 'ಜಬ್ತಿ' ಪದ್ಧತಿ ಅಥವಾ 'ಐನ್–ಇ–ದಹ್–ಸಲ' ಎಂದೂ ಸಹ ಕರೆಯಲಾಗಿತ್ತು. ಅಲ್ಲಾವುದೀನ್‌ಖಿಲ್ಜಿ ಮತ್ತು ಷೇರ್‌ಷಹಸೂರ್‌ರವರ ಕಂದಾಯ ನೀತಿಗಳು ಮೊಘಲ್ ಕಂದಾಯ ನೀತಿಯ ಆಧಾರಗಳಾಗಿದ್ದವು, ಅದರ ಪ್ರಮುಖ ಲಕ್ಷಣಗಳೆಂದರೆ:

ಈ ಪದ್ಧತಿಯನ್ವಯ ಭೂಮಿಯನ್ನು ಅಳತೆ ಮಾಡಿ ಫಲವತ್ತತೆಯ ಆಧಾರದ ಮೇಲೆ ವಿಂಗಡಿಸಲಾಗುತ್ತಿತ್ತು. ಅವುಗಳೆಂದರೆ, (1) ಪೋಲಜ್ – ಸತತ ಉಳುಮೆಯಲ್ಲಿರುವ ಭೂಮಿ, (2) ಪರೌತಿ – 1 ಅಥವಾ 2 ವರ್ಷಗಳ ವರೆಗೆ ಬೀಳುಬಿಟ್ಟ ಭೂಮಿ, (3) ಚಚರ್ – 3 ರಿಂದ 4 ವರ್ಷಗಳ ಕಾಲ ಉಳುಮೆ ಮಾಡಿದಿದ್ದ ಭೂಮಿ, (4) ಬಂಜರ್ – 5 ವರ್ಷಗಳಿಗಿಂತ ಹೆಚ್ಚುಕಾಲ ಉಳುಮೆ ಮಾಡದಿದ್ದ ಭೂಮಿ. 10 ವರ್ಷಗಳ ಸರಾಸರಿ ಉತ್ಪನ್ನದ ಆಧಾರದ ಮೇಲೆ ಕಂದಾಯವನ್ನು ನಿಗದಿ ಪಡಿಸಲಾಗುತ್ತಿತ್ತು. ಅದು ಸರಾಸರಿ 1/3 ರಷ್ಟಿತ್ತು. ಕಂದಾಯವನ್ನು ಹಣ ಅಥವಾ ಧಾನ್ಯಗಳ ರೂಪದಲ್ಲಿ ಪಾವತಿಸಬಹುದಿತ್ತು.

ತೋದರ ಮಲ್‌ನ ಬಂದೋಬಸ್ತ್ ಪದ್ಧತಿ: ಸುಗ್ಗಿಯ ಕಾಲಗಳಲ್ಲಿ ಅಧಿಕಾರಗಳು ವೀಕ್ಷಣೆಗೆ ಹೋಗಿ ಕೃಷಿ ಭೂಮಿಗಳ ಸ್ಥಿತಿಗತಿಗಳನ್ನು ಪರೀಕ್ಷಿಸಿ ರೈತರಿಗೆ ಸರಿಯಾದ ಸಲಹೆಗಳನ್ನು ಕೊಡುತ್ತಿದ್ದರು. ಸರ್ಕಾರವು ರೈತರಿಗೆ ಸಾಲಗಳನ್ನು ಒದಗಿಸುತ್ತಿತ್ತು. ಅವುಗಳನ್ನು ಕಂತುಗಳಲ್ಲಿ ಮರುಪಾವತಿ ಮಾಡಬಹುದಿತ್ತು. ಇದನ್ನು 'ಬಂದೋಬಸ್ತ್' ಪದ್ಧತಿ ಎಂದು ಕರೆಯಲಾಗಿತ್ತು.

ಧಾರ್ಮಿಕ ನೀತಿ : ಅಕ್ಬರನು ಮಧ್ಯಕಾಲೀನ ಭಾರತದ ಜ್ಞಾನ ಸಂಪನ್ನ ಮತ್ತು ಉದಾರಿ ಚಕ್ರವರ್ತಿಗಳಲ್ಲಿ ಅತ್ಯಂತ ಪ್ರಮುಖನಾಗಿದ್ದನು. ಹಿಂದೂ ಯಾತ್ರಿಗಳು ಕೊಡಬೇಕಾಗಿದ್ದ ಯಾತ್ರಾ ತೆರಿಗೆಯನ್ನು ಸಾ.ಶ.1563 ರಲ್ಲಿ ರದ್ದು ಪಡಿಸಿದನು. ಅಂತೆಯೇ ಜಜಿಯಾವನ್ನೂ ಸಹ ರದ್ದು ಪಡಿಸಿದನು. ಯಾವುದೇ ಅಡೆತಡೆಗಳಿಲ್ಲದೆ ಜನರು ತಮ್ಮ ಆರಾಧನಾ ಸ್ಥಳಗಳನ್ನು ನಿರ್ಮಿಸಿಕೊಳ್ಳಲು ಅವಕಾಶ ನೀಡಿದನು. ಹಿಂದೂಗಳನ್ನು ಉನ್ನತ ಹುದ್ದೆಗಳಿಗೆ ನೇಮಿಸಿದ ಮತ್ತು ಹಲವಾರು ಹಿಂದೂ ಹಬ್ಬಗಳಲ್ಲಿ ಅವನೂ ಪಾಲ್ಗೊಳ್ಳುತ್ತಿದ್ದನು. ಅವನ ಹಿಂದೂ ಮಡದಿಯರೂ ಸಹ ಅವನ ಮೇಲೆ ಅಸಾಧಾರಣ ಪ್ರಭಾವ ಬೀರಿದ್ದರು. ಬಾಲ್ಯವಿವಾಹ ಮತ್ತು ಸತಿ ಪದ್ಧತಿಯನ್ನು ನಿಷೇಧಿಸಿದ ಅವನು ವಿಧವೆಯರ ಮರು ವಿವಾಹವನ್ನು ಪ್ರೋತ್ಸಾಹಿಸಿದನು.

ದಿನ್–ಇ–ಇಲಾಹಿ: (ಸಾ.ಶ. 1581–82) ದಿನ್–ಇ–ಇಲಾಹಿ (ತೌದಿದ್–ಇ–ಇಲಾಹಿ ಅಥವಾ ದೈವಿಕ ಏಕ ದೇವತಾವಾದ) ಎಂಬ ಹೊಸ ಧರ್ಮವನ್ನು ಅಕ್ಬರ್ ಸ್ಥಾಪಿಸಿದನು. ಇವನ ಹೊಸ ಧರ್ಮವು ಸರ್ವರಿಗೂ ಶಾಂತಿ ಎಂಬ ತತ್ವವನ್ನಾಧರಿಸಿತ್ತು. ವಿವಿಧ ಮತಗಳ ಜನರನ್ನು ಭ್ರಾತೃಭಾವನೆಯಿಂದ ಒಗ್ಗೂಡಿಸುವ ಪ್ರಯತ್ನ ಇದಾಗಿತ್ತು.

ಅವನು ಸಾ.ಶ. 1582ರಲ್ಲಿ ಫತೇಪುರಸಿಕ್ರಿಯಲ್ಲಿ 'ಇಬಾದತ್ ಖಾನಾ' ವನ್ನು ನಿರ್ಮಿಸಿದನು. ಹಿಂದೂ, ಬೌದ್ಧ, ಜೈನ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಧಾರ್ಮಿಕ ನಾಯಕರು ಇಲ್ಲಿ ಸಭೆ ಸೇರಿ ಧಾರ್ಮಿಕ ಚರ್ಚೆ ಕೈಗೊಳ್ಳುತ್ತಿದ್ದರು. ಅಕ್ಬರನು ವಿವಿಧ ಧರ್ಮಗಳ ಸಾಮಾನ್ಯ ತತ್ವಗಳನ್ನು ಕ್ರೋಢೀಕರಿಸಿ ಹೊಸ ಧರ್ಮವನ್ನು ಸ್ಥಾಪಿಸಿದನು. ಈ ಧರ್ಮದ ಅನುಯಾಯಿಗಳು ಎಲ್ಲಾ ಧರ್ಮಗಳನ್ನು ಗೌರವಿಸಬೇಕಾಗಿತ್ತು, ಅಗ್ನಿಯನ್ನು ಪೂಜಿಸಬೇಕಾಗಿತ್ತು, ಇತರ ಧರ್ಮಗಳ ಜನರೊಂದಿಗೆ ಸೇರಿ ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಬೇಕಿತ್ತು ಮತ್ತು ವಯಸ್ಸಾದ ಸ್ತ್ರೀ ಅಥವಾ ಅಪ್ರಾಪ್ತ ಬಾಲಕಿಯರನ್ನು ವಿವಾಹವಾಗಬಾರದಿತ್ತು. ಅಕ್ಬರ್ ತನ್ನ ಹೊಸ ಧರ್ಮವನ್ನು ಅನುಸರಿಸಲು ಯಾರೊಬ್ಬರನ್ನೂ ಒತ್ತಾಯಿಸಲಿಲ್ಲ. ಅಕ್ಬರನ ಮರಣಾ ನಂತರ ಅದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು.

ಸಾಹಿತ್ಯ ಪೋಷಣೆ: ಅಕ್ಬರನ ಕಾಲದಲ್ಲಿ ಅಪಾರ ಸಂಖ್ಯೆಯ ಸಂಸ್ಕೃತ ಮತ್ತು ಇತರ ಭಾಷೆಗಳ ಗ್ರಂಥಗಳನ್ನು ಪರ್ಷಿಯನ್ ಭಾಷೆಗೆ ತರ್ಜುಮೆ ಮಾಡಲಾಯಿತು. ಮಹಾಭಾರತ, ರಾಮಾಯಣ, ಅಥರ್ವವೇದ, ಲೀಲಾವತಿ, ರಾಜತರಂಗಿಣಿ, ಪಂಚತಂತ್ರ ಮತ್ತು ನಳ–ದಮಯಂತಿ ಕಥೆಗಳು ತರ್ಜುಮೆ ಗೊಂಡ ಪ್ರಮುಖ ಗ್ರಂಥಗಳು. ತುಳಸಿದಾಸ್, ಸೂರ್‌ದಾಸ್, ಅಬ್ದುಲ್ ರಹೀಮ್, ರಕ್ಷನ್ ಮತ್ತು ಬೀರ್‌ಬಲ್ ಹಿಂದಿಯ ಜನಪ್ರಿಯ ವಿದ್ವಾಂಸರಾಗಿದ್ದರು. ತುಳಸಿದಾಸನ ರಾಮಚರಿತ ಮಾನಸ ಮತ್ತು ಸೂರ್‌ದಾಸನ ಸೂರ್‌ಸಾಗರ್ ಉತ್ಕೃಷ್ಟ ಗ್ರಂಥಗಳು. ಈ ಕಾಲದಲ್ಲಿ ಹೆಚ್ಚಿನ ಸಂಖ್ಯೆಯ ಐತಿಹಾಸಿಕ ಗ್ರಂಥಗಳು ರಚನೆಯಾದವು. ಅಬುಲ್ ಫಜಲ್‌ನ 'ಐನ್–ಇ–ಅಕ್ಬರಿ' ಮತ್ತು 'ಅಕ್ಬರ್‌ನಾಮ' ಬದೌನಿಯ ಮುಂತಕಾಬ್–ಉಲ್–ತವಾರಿಕ್ ಮುಂತಾದವು ಅವುಗಳಲ್ಲಿ ಪ್ರಮುಖವಾದವು.

ಅಕ್ಬರನ ನವರತ್ನರು

(1) ಅಬ್ದುಲ್ ರಹೀಮ್, (2) ಅಬುಲ್ ಫಜಲ್ (3) ಬೀರ್‌ಬಲ್, (4) ಫೈಜಿ, (5) ಹಮೀದ್ ಹುಮನ್ (6) ರಾಜಾ ಮಾನ್‌ಸಿಂಗ್ (7) ಷೇಖ್ ಮುಬಾರಕ್ (8) ತಾನ್‌ಸೇನ್ (9) ತೋದರಮಲ್.

ಕಲೆ ಮತ್ತು ವಾಸ್ತುಶಿಲ್ಪ :

ಅಂಬರ್, ಬಿಕನೇರ್ ಮತ್ತು ಜೋಧ್‌ಪುರಗಳಲ್ಲಿ ಅಕ್ಬರನು ಹಲವಾರು ಅರಮನೆಗಳನ್ನು ನಿರ್ಮಿಸಿದನು. ಕೆರೆ ಮತ್ತು ಉದ್ಯಾನವನಗಳನ್ನೂ ನಿರ್ಮಿಸಿದನು. ಅವನು ಕಟ್ಟಿಸಿದ ಅತ್ಯಂತ ಪ್ರಭಾವ ಪೂರ್ಣ ಕಟ್ಟಡಗಳು ಫತೇಪುರ ಸಿಕ್ರಿಯಲ್ಲಿ ಕಂಡು ಬರುತ್ತವೆ. ಬುಲಂದ್ ದರ್ವಾಜ, ಸಲೀಮ್ ಚಿಸ್ತಿಯ ಗೋರಿ, ಪಂಚಮಹಲ್ ಮತ್ತು ಜೋಧಾಬಾಯಿ ಅರಮನೆಗಳು, ದಿವಾನ್–ಇ–ಆಮ್, ದಿವಾನ್–ಇ–ಖಾಸ್, ಆಗ್ರಾ ಕೋಟೆ ಮುಂತಾದ ಪ್ರಮುಖ ಕಟ್ಟಡಗಳನ್ನು ನಿರ್ಮಿಸಿದನು.

ಮೊಘಲ್ ಚಕ್ರವರ್ತಿಗಳಲ್ಲಿ ಅಕ್ಬರ್ ಅತ್ಯಂತ ಪ್ರಸಿದ್ಧನಾಗಿದ್ದನು. ಇವನು ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದನು. ಅನಕ್ಷರಸ್ತನಾಗಿದ್ದರೂ ಎಲ್ಲಾ ವಿವರಗಳನ್ನು ಗ್ರಹಿಸುವ ಅಗಾಧವಾದ ತಿಳುವಳಿಕೆ ಮತ್ತು ಅಪೂರ್ವ ಜ್ಞಾಪಕ ಶಕ್ತಿ ಯನ್ನು ಹೊಂದಿದ್ದನು. ತತ್ವಶಾಸ್ತ್ರ, ಸಾಹಿತ್ಯ, ಇತಿಹಾಸ ಮತ್ತಿತರ ವಿಜ್ಞಾನಗಳ ಜ್ಞಾನವನ್ನು ಹೊಂದಿದ್ದನು. ಪ್ರಸಿದ್ಧ ದಿಗ್ವಿಜಯಿ ಹಾಗೂ ರಾಜನೀತಜ್ಞನಾಗಿದ್ದನು. ಆದ್ದರಿಂದ ಅಕ್ಬರನನ್ನು 'ಅಕ್ಬರ್ ಮಹಾಶಯ' ಎಂದು ಕರೆಯಲಾಗಿದೆ.

ಜಹಂಗೀರ್ : (ಸಾ.ಶ. 1605–1627) ಇವನು ಅಕ್ಬರನ ಮಗ. ಇವನೂ ಸಹ ದಿಗ್ವಿಜಯಗಳನ್ನು ಮಾಡಿದ. ಈತನು ತನ್ನ ಪತ್ನಿ ನೂರ್‌ಜಹಾನಳ ಪ್ರಭಾವಕ್ಕೊಳಗಾದನು. ಅವಳೇ ನಿಜವಾದ ಪರಮಾಧಿಕಾರಿಯಾದಳು. ಇದರಿಂದಾಗಿ ಷಹಜಹಾನ್ ತನ್ನ ತಂದೆಯ ವಿರುದ್ಧವೇ ದಂಗೆ ಎದ್ದನು.

ಷಹಜಹಾನ್ (ಸಾ.ಶ. 1627–1658) ಕಲೆ ಮತ್ತು ವಾಸ್ತುಶಿಲ್ಪದ ಕೊಡುಗೆಗಳಿಂದಾಗಿ ಷಹಜಹಾನ್ ಸ್ಮರಣೀಯನಾಗಿದ್ದಾನೆ. ಇವನು ಮಮ್ತಾಜ್ ಮಹಲ್‌ಳನ್ನು ವಿವಾಹವಾದನು. ತಾಜ್‌ಮಹಲ್ ಎಂಬ ಸ್ಮಾರಕವನ್ನು ಅವಳ ನೆನಪಿಗಾಗಿ ನಿರ್ಮಿಸಲಾಗಿದೆ.

ಔರಂಗಜೇಬ್ : (ಸಾ.ಶ. 1658–1707) ಇವನು 'ಅಲಂಗೀರ್' ಎಂಬ ಬಿರುದನ್ನು ಸ್ವೀಕರಿಸಿದನು. ಇವನು ವ್ಯಾಪಕವಾದ ಉತ್ತರ ಮತ್ತು ದಕ್ಷಿಣ ಭಾರತದ ದಿಗ್ವಿಜಯಗಳಿಂದಾಗಿ ವಿಶಾಲ ಸಾಮ್ರಾಜ್ಯ ಸ್ಥಾಪಿಸಿದನು. ಹಲವಾರು ಧಾರ್ಮಿಕ ಕ್ರಾಂತಿಗಳನ್ನು ಮತ್ತು ಆಕ್ರಮಣಗಳನ್ನು ಅವನು ಎದುರಿಸಬೇಕಾಯಿತು. 1707ರಲ್ಲಿ ಔರಂಗ ಜೇಬನ ಮರಣದ ನಂತರ ಮೊಘಲ್ ಸಾಮ್ರಾಜ್ಯವು ಅವನತಿಯಾಗಲಾರಂಭಿಸಿತು. ಸಿಂಹಾಸನಕ್ಕಾಗಿ ಕಿತ್ತಾಟ ಮತ್ತು ಸರದಾರದಲ್ಲಿನ ಮೇಲಾಟಗಳು ಪತನಕ್ಕೆ ಪ್ರಮುಖ ಕಾರಣಗಳು. 1857 ರ ಸಿಪಾಯಿ ದಂಗೆಯ ನಂತರ ಈ ವಂಶದ ಕೊನೆಯ ದೊರೆ 2ನೇ ಬಹದ್ದೂರ್ ಷಾನನ್ನು ರಂಗೂನಿಗೆ ಗಡಿಪಾರು ಮಾಡುವುದರೊಂದಿಗೆ ಮೊಘಲ್ ಸಾಮ್ರಾಜ್ಯ ಅಂತ್ಯಗೊಂಡಿತು.

ಮೊಘಲ್‌ರ ಕೊಡುಗೆಗಳು :


ಶಿಕ್ಷಣ ಮತ್ತು ಸಾಹಿತ್ಯ : ಮೊಘಲ್ ದೊರೆಗಳು ಮದರಸಾಗಳನ್ನು, ಕಾಲೇಜುಗಳನ್ನು ಸ್ಥಾಪಿಸಿದರು. ಅಕ್ಬರನು ಹಿಂದೂಗಳ ವಿದ್ಯಾಭ್ಯಾಸಕ್ಕೂ ವ್ಯವಸ್ಥೆ ಮಾಡಿದನು. ಷಹಜಹಾನನು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಿದನು. ಬಾಲಕಿಯರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಿಲ್ಲ. ದೊರೆಗಳು ವಿದ್ವಾಂಸರಿಗೆ ಪ್ರೋತ್ಸಾಹವನ್ನು ನೀಡಿದ್ದರು.

ಶಿಕ್ಷಣದ ಪ್ರಸಾರದಿಂದಾಗಿ ಸಾಹಿತ್ಯದ ಪ್ರಗತಿಯಾಯಿತು. ಟರ್ಕಿಶ್, ಪರ್ಷಿಯನ್, ಸಂಸ್ಕೃತ ಮತ್ತು ಹಿಂದಿ ಭಾಷೆಗಳ ಕೆಲವು ಪ್ರಮುಖ ಸಾಹಿತ್ಯ ಗ್ರಂಥಗಳು ಇಂತಿವೆ:

ಬಾಬರನು 'ಬಾಬರ್‌ನಾಮಾ' ವನ್ನು ಬರೆದನು. ರಾಮಾಯಣ, ಮಹಾಭಾರತ, ಅಥರ್ವವೇದ, ಪಂಚತಂತ್ರ ಮುಂತಾದವುಗಳನ್ನು ಸಂಸ್ಕೃತದಿಂದ ಪರ್ಷಿಯನ್‌ಗೆ ತರ್ಜುಮೆ ಮಾಡಲಾಯಿತು. ಷಹಜಹಾನ್‌ನ ಮಗ ದಾರ ಉಪನಿಷತ್‌ಗಳನ್ನು ಪರ್ಷಿಯನ್ ಭಾಷೆಗೆ ತರ್ಜುಮೆ ಮಾಡಿದನು. ಅಬುಲ್ ಫಜಲ್ ಬರೆದ ಐನ್–ಇ–ಅಕ್ಬರಿ ಮತ್ತು ಅಕ್ಬರ್‌ನಾಮಾ, ಗುಲ್ಬದನ್ ಬೇಗಂ ಬರೆದ ಹುಮಾಯೂನ್‌ನಾಮ, ಜಹಂಗೀರ್‌ನ ಆತ್ಮಕಥೆ ಫರ್ಹಾಂಗ್–ಇ–ಜಹಂಗೀರ್ ಮುಂತಾದವು ಪರ್ಷಿಯನ್ ಭಾಷೆಯಲ್ಲಿ ಬರೆದ ಇತಿಹಾಸದ ಪ್ರಮುಖವಾದ ಕೃತಿಗಳಾಗಿವೆ. ಮಲಿಕ್ ಮಹಮದ್ ಜೈಸಿಯ ಪದ್ಮಾವತಿ, ಅಬ್ದುಲ್‌ರಹೀಮ್ ಬರೆದ ರಹೀಮ್ ಸತ್‌ಸಾಯಿ (ದೋಹಗಳು) ತುಳಸಿದಾಸರ ರಾಮಚರಿತ ಮಾನಸ ಮತ್ತು ಸೂರ್‌ದಾಸರ (ಅಂಧಕವಿ) ಸೂರ್‌ಸಾಗರ್ ಹಿಂದಿಯ ಪ್ರಮುಖ ಕೃತಿಗಳಾಗಿವೆ.

ಕಲೆ ಮತ್ತು ವಾಸ್ತುಶಿಲ್ಪ: ಮೊಘಲರು ಪ್ರಸಿದ್ಧ ನಿರ್ಮಾಣಕಾರರು ಮತ್ತು ಕಲೆ ಮತ್ತು ವಾಸ್ತುಶಿಲ್ಪದ ಆರಾಧಕರಾಗಿದ್ದರು. ಮೊಘಲ್ ವಾಸ್ತು ಶಿಲ್ಪದ ಪ್ರಮುಖ ಲಕ್ಷಣಗಳೆಂದರೆ, ಗುಮ್ಮಟಗಳು, ಎತ್ತರವಾದ ಸ್ಥಂಭಗಳು, ಗುಮ್ಮಟಗಳಿರುವ ಹೆಬ್ಬಾಗಿಲುಗಳು, ಕಮಾನುಗಳು, ಮಿನಾರ್‌ಗಳು ಮುಂತಾದವು. ಮೊಘಲರ ಪ್ರಮುಖ ಸ್ಮಾರಕಗಳು ಕೆಳಕಂಡಂತಿವೆ.

ಕ್ರ.ಸಂ.	ಚಕ್ರವರ್ತಿಗಳು	ಸ್ಮಾರಕಗಳು	ಸ್ಥಳ
1.	ಬಾಬರ್	ಕಾಬೂಲ್‌ಬಾಗ್‌ಜುಮ್ಮಾ ಮಸೀದಿ	ಪಾಣಿಪತ್‌ಸಂಭಾಲ್
2.	ಅಕ್ಬರ್	ಬುಲಂದ್ ದರ್ವಾಜ (ಭಾರತದ ಅತಿ ಎತ್ತರದ ಹೆಬ್ಬಾಗಿಲು)	ಫತೇಪುರ್ ಸಿಕ್ರಿ
		ಜಮ್ಮಾ–ಇ–ಮಸೀದಿ	ಫತೇಪುರ್ ಸಿಕ್ರಿ
		ಷೇಖ್ ಸಲೀಂ ಚಿಸ್ತಿಯ ಗೋರಿ	ಫತೇಪುರ್ ಸಿಕ್ರಿ
		ಪಂಚಮಹಲ್	ಫತೇಪುರ್ ಸಿಕ್ರಿ
		ಜೋಧಾಬಾಯಿ ಅರಮನೆ	ಫತೇಪುರ್ ಸಿಕ್ರಿ
		ದಿವಾನ್–ಇ–ಆಂ ಮತ್ತು	ಫತೇಪುರ್ ಸಿಕ್ರಿ
		ದಿವಾನ್–ಇ–ಖಾಸ್	ಫತೇಪುರ್ ಸಿಕ್ರಿ
3.	ಜಹಾಂಗೀರ್	ಬಾದ್‌ಷಾಹಿ ಮಸೀದಿ	ಲಾಹೋರ್
4.	ಷಹಜಹಾನ್	ತಾಜ್ ಮಹಲ್	ಆಗ್ರಾ


ಬುಲಂದ್ ದರ್ವಾಜ

ಮೋತಿ ಮಸೀದಿ	ಆಗ್ರಾ
ಜಮ್ಮಾ–ಮಸೀದಿ (ದೆಹಲಿಯ ಕೆಂಪುಕೋಟೆಯಲ್ಲಿ)	ದೆಹಲಿ
ದಿವಾನ್–ಇ–ಆಂ	ದೆಹಲಿ
ದಿವಾನ್–ಇ–ಖಾಸ್	ದೆಹಲಿ
ಕೆಂಪು ಕೋಟೆ	ದೆಹಲಿ
ಮಯೂರ ಸಿಂಹಾಸನ (ದೆಹಲಿಯ ಕೆಂಪುಕೋಟೆಯಲ್ಲಿತ್ತು.)	ದೆಹಲಿ

ಷಹಜಹಾನನ ಕಾಲವನ್ನು ವಾಸ್ತು ಶಿಲ್ಪದ ಸುವರ್ಣಯುಗವೆಂದು ಪರಿಗಣಿಸಲಾಗಿದೆ

ತಾಜ್ ಮಹಲ್:

ಷಹಜಹಾನನ ನಿರ್ಮಾಣಗಳಲ್ಲಿ ಅತ್ಯುತ್ತಮ ಮತ್ತು ಉತ್ಕೃಷ್ಟವಾದದ್ದು ತಾಜ್ ಮಹಲ್. ಇದನ್ನು ವಿಶ್ವದ ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ತನ್ನ ಪತ್ನಿ ಅರ್ಜುಮಂದ್‌ಬಾನುಬೇಗಂ (ಮುಮ್ತಾಜ್ ಮಹಲ್)ಳ ಸ್ಮರಣಾರ್ಥ ಇದನ್ನು ನಿರ್ಮಿಸಿದನು. ಇದರ ಪ್ರಧಾನ ಶಿಲ್ಪಿ ಉಸ್ತಾದ್ ಇಸಾ. ಇದನ್ನು ಆಗ್ರಾದ ಯಮುನಾ ನದಿಯ ದಂಡೆಯ ಮೇಲೆ ಶ್ವೇತ ಅಮೃತ ಶಿಲೆಯಲ್ಲಿ ನಿರ್ಮಿಸಲಾಗಿದೆ.



ತಾಜ್‌ಮಹಲ್, ಆಗ್ರಾ

ಮಯೂರ ಸಿಂಹಾಸನ:

ಪ್ರಪಂಚದಲ್ಲೇ ಅತ್ಯಂತ ಭವ್ಯ ಮತ್ತು ದುಬಾರಿ ಸಿಂಹಾಸನವನ್ನು ಷಹಜಹಾನ್ ನಿರ್ಮಿಸಿದನು. ಇದನ್ನು ಬೇಬದಲ್ ಖಾನ್‌ನ ಮೇಲ್ವಿಚಾರಣೆಯಲ್ಲಿ ನಿರ್ಮಿಸಲಾಯಿತು. ಈ ಸಿಂಹಾಸನದ ಅಂದಾಜು ವೆಚ್ಚ 1 ಕೋಟಿ ರೂ.ಗಳಾಗಿತ್ತು. ಇದರ ಕಂಬಗಳನ್ನೂ ಸಹ ಗಟ್ಟಿ ಚಿನ್ನದಿಂದ ತಯಾರಿಸಲಾಗಿತ್ತು. ಈ ಸಿಂಹಾಸನದ ನಿರ್ಮಾಣಕ್ಕೆ 1 ಲಕ್ಷ ತೊಲ (1000 ಕೆ.ಜಿ) ಚಿನ್ನವನ್ನು ಮತ್ತು 50,000 ಮಾಣಿಕ್ಯ, ವಜ್ರ, ಪಚ್ಚೆ ಮತ್ತು ಮುತ್ತುಗಳನ್ನು ಬಳಸಲಾಗಿತ್ತೆಂದು ಹೇಳಲಾಗಿದೆ, ಸಿಂಹಾಸಹನದ ಮೇಲ್ಛಾವಣಿಯು 2 ಮಯೂರ (ನವಿಲು)ಗಳ ಚಿತ್ರಗಳಿಂದ ಆವೃತವಾಗಿತ್ತು. ಈ ಮಯೂರಗಳ ಮಧ್ಯದಲ್ಲಿ ಅಮೂಲ್ಯ ಹರಳುಗಳಿಂದ ರಚಿಸಿದ 1 ವೃಕ್ಷವಿತ್ತು. ಚಕ್ರವರ್ತಿಯ ಸಿಂಹಾಸನಕ್ಕೆ ಮೇಲೇರಿ ಹೋಗಲು ರತ್ನ ಖಚಿತವಾದ ಮೂರು ಮೆಟ್ಟಿಲುಗಳಿದ್ದವು. ಇದನ್ನು ದೆಹಲಿಯ ಕೆಂಪುಕೋಟೆಯಲ್ಲಿನ ದಿವಾನ್–ಇ–ಖಾಸ್ ಎಂಬಲ್ಲಿ ಇಡಲಾಗಿತ್ತು. ಇದನ್ನು ಆಫ್ಘನ್ ಸರದಾರ ನಾದಿರ್ ಷಾ 1737ರಲ್ಲಿ ಹೊತ್ತೊಯ್ದನು.

ಮೊಘಲ್ ಚಕ್ರವರ್ತಿಗಳ ಆಳ್ವಿಕೆಯಲ್ಲಿ ಚಿತ್ರಕಲೆಯು ಹೆಚ್ಚು ಬೆಳವಣಿಗೆಯಾಯಿತು. ಇದು ದೇಶೀಯ ಮತ್ತು ವಿದೇಶಿ ಮೂಲ ಅಂಶಗಳನ್ನು ಒಟ್ಟುಗೂಡಿಸಿಕೊಂಡಿತ್ತು. ಚಿತ್ರಕಲೆಗೆ ಆಶ್ರಯವನ್ನಿತ್ತ ಮೊಘಲರಲ್ಲಿ ಜಹಂಗೀರ್ ಅತ್ಯಂತ ಪ್ರಮುಖನು. ಉಸ್ತಾದ್ ಮನ್ಸೂರ್, ಮುರಾದ್, ಬಿಷನ್ ದಾಸ್, ಮನೋಹರ್ ಮುಂತಾದವರು ಅವನ ಆಸ್ಥಾನದ ಪ್ರಸಿದ್ಧ ಚಿತ್ರಕಾರರಾಗಿದ್ದರು. ಜಹಂಗೀರನು ಪರಿಣಿತ ಚಿತ್ರಕಾರನಾಗಿದ್ದನು ಮತ್ತು ಚಿತ್ರಕಾರರ ಶೈಲಿಗಳಿಂದ ಚಿತ್ರಕಾರರನ್ನು ಗುರುತಿಸುವ ಅಸಾಧಾರಣ ಸಾಮರ್ಥ್ಯ ಅವನಿಗಿತ್ತು. ವ್ಯಕ್ತಿಚಿತ್ರ ಹಾಗೂ ಸೂಕ್ಷ್ಮಕಾರದ ಚಿತ್ರಕಲೆ ಇವರ ಕಾಲದಲ್ಲಿ ಅಪಾರವಾಗಿ ಬೆಳೆಯಿತು.

ಸಂಗೀತ: ಮೊಘಲರ ಕಾಲದಲ್ಲಿ ಸಂಗೀತ ಹೆಚ್ಚಿನ ಅಭಿವೃದ್ಧಿಯಾಯಿತು. ಔರಂಗಜೇಬನ ಹೊರತು ಬೇರೆಲ್ಲಾ ದೊರೆಗಳು ಸಂಗೀತ ಮತ್ತು ಸಂಗೀತಗಾರರನ್ನು ಪ್ರೋತ್ಸಾಹಿಸಿದರು. ಅಕ್ಬರನು ಸಂಗೀತವನ್ನು ಅತ್ಯಂತ ಹೆಚ್ಚು ಪ್ರೋತ್ಸಾಹಿಸಿದನು. ತಾನ್‌ಸೇನ್, ರಾಮದಾಸ್, ಬ್ರೀಜುಬಾವರ್ ಮತ್ತು ಸೂರ್‌ದಾಸ್ ಅವನ ಆಸ್ಥಾನದ ಪ್ರಸಿದ್ಧ ಸಂಗೀತಗಾರರಾಗಿದ್ದರು. ಬಾಬರ್, ಜಹಾಂಗೀರ್ ಮತ್ತು ಷಹಜಹಾನ್ ಉತ್ತಮ ಗಾಯಕರಾಗಿದ್ದುದಲ್ಲದೇ ಅನೇಕ ಗೀತೆಗಳ ರಚನಾಕಾರರೂ ಆಗಿದ್ದರು.

ಚಟುವಟಿಕೆ

ಮೊಘಲ್ ಸಾಮ್ರಾಜ್ಯದ ಅವನತಿಗೆ ಔರಂಗಜೇಬನ ನೀತಿಗಳು ಮಾರ್ಗವಾದುದನ್ನು ಗುರುತಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಮೊದಲ ಪಾಣಿಪತ್ ಕದನ ಯಾವಾಗ ನಡೆಯಿತು?
2. ಮೊಘಲ್ ಸಂತತಿಯ ಸ್ಥಾಪಕ ಯಾರು?
3. ಗೊಂಡ್ವಾನ ರಾಜ್ಯದ ರಾಣಿ ಯಾರು?
4. 'ಹಳ್ದಿ ಘಾಟ್' ಕದನ ಯಾವಾಗ ನಡೆಯಿತು?
5. ಅಕ್ಬರ್ ಜಾರಿಗೊಳಿಸಿದ ಹೊಸ ಧರ್ಮ ಯಾವುದು?
6. ಅಕ್ಬರನ ಪ್ರಸಿದ್ಧ ಕಂದಾಯ ಮಂತ್ರಿ ಯಾರು?
7. 'ಹುಮಾಯೂನ್‌ನಾಮಾ' ಎಂಬ ಗ್ರಂಥ ಬರೆದವರು ಯಾರು?
8. 'ಅಕ್ಬರ್‌ನಾಮಾ' ಎಂಬ ಗ್ರಂಥ ಬರೆದವರು ಯಾರು?
9. 'ಐನ್–ಇ–ಅಕ್ಬರಿ' ಎಂಬ ಗ್ರಂಥ ಬರೆದವರು ಯಾರು?
10. ತಾಜ್‌ಮಹಲ್‌ನ ಪ್ರಧಾನ ಶಿಲ್ಪಿ ಯಾರು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ

1. 2ನೇ ಪಾಣಿಪತ್ ಕದನವು ಯಾರ ನಡುವೆ ನಡೆಯಿತು?
2. ಅಕ್ಬರ್ ಎಲ್ಲಿ ಮತ್ತು ಯಾವಾಗ ಜನಿಸಿದನು?
3. ಅಕ್ಬರನ ಕಾಲದ ಯಾರಾದರು ಇಬ್ಬರು ಪ್ರಸಿದ್ಧ ಇತಿಹಾಸಕಾರರನ್ನು ಹೆಸರಿಸಿ.
4. ಅಕ್ಬರನ ರಾಜಧಾನಿಗಳಾವುವು?

5. ತೋದರ ಮಲ್ಲನು ವರ್ಗೀಕರಿಸಿದ ಯಾವುದಾದರು ಎರಡು ಬಗೆಯ ಭೂಮಿಯ ವಿಧಗಳನ್ನು ಹೆಸರಿಸಿ.
6. ಅಬುಲ್ ಫಜಲ್‌ನ ಎರಡು ಕೃತಿಗಳನ್ನು ಹೆಸರಿಸಿ.
7. ತಾಜ್‌ಮಹಲ್ ಕಟ್ಟಿಸಿದವರು ಯಾರು? ಅದು ಎಲ್ಲಿದೆ?
8. ಮೊಘಲರ ಕಾಲದ ಯಾರಾದರೂ ಇಬ್ಬರು ಪ್ರಸಿದ್ಧ ಸಂಗೀತಗಾರರನ್ನು ಹೆಸರಿಸಿ.
9. ದೆಹಲಿಯಲ್ಲಿನ ಯಾವುದಾದರೂ ಎರಡು ಪ್ರಸಿದ್ಧ ಮೊಘಲ್ ಸ್ಮಾರಕಗಳನ್ನು ತಿಳಿಸಿ.

III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದನ್ನು 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ

1. ಅಕ್ಬರನ ಧಾರ್ಮಿಕ ಮತ್ತು ರಜಪೂತ ನೀತಿಯನ್ನು ವಿವರಿಸಿ.
2. ಅಕ್ಬರನ ಆಡಳಿತವನ್ನು ಸಂಕ್ಷಿಪ್ತವಾಗಿ ಬರೆಯಿರಿ.
3. ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಮೊಘಲರ ಕೊಡುಗೆಗಳನ್ನು ವಿವರಿಸಿ.

IV. ಈ ಕೆಳಗಿನ ಪ್ರಶ್ನೆಗೆ 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ

1. ಅಕ್ಬರನ ಸಾಧನೆಗಳನ್ನು ವಿವರಿಸಿ.

****

ಅಧ್ಯಾಯ–5.3

ಮರಾಠರ ಏಳಿಗೆ

ಮೊಘಲರ ಅವನತಿಯು ಭಾರತದ ವಿವಿಧ ಭಾಗಗಳಲ್ಲಿ ಸ್ವತಂತ್ರ ರಾಜ್ಯಗಳ ಉದಯಕ್ಕೆ ಅವಕಾಶ ಕಲ್ಪಿಸಿತು. ಅವರಲ್ಲಿ ಮರಾಠರು ಪ್ರಮುಖರು. ಶಿವಾಜಿಯು ಮರಾಠ ರಾಜ್ಯದ ಸ್ಥಾಪಕ.

ಶಿವಾಜಿ:

ಆರಂಭಿಕ ಜೀವನ : ಶಿವಾಜಿಯು ಸಾಶ. 1627ರಲ್ಲಿ ಶಿವನೇರಿ ಎಂಬಲ್ಲಿ ಜನಿಸಿದನು. ಹಲವು ಇತಿಹಾಸಕಾರರು ಅವನು ಜನಿಸಿದ ವರ್ಷ ಸಾ.ಶ. 1630 ಎಂದಿದ್ದಾರೆ. ಷಹಜಿ ಭೋಂಸ್ಲೆ ಮತ್ತು ಜೀಜಾಬಾಯಿ ಅವನ ತಂದೆ–ತಾಯಿಗಳು. ಷಹಜಿಯು ಸೇನಾ ಸರದಾರನಾಗಿ ಆರಂಭದಲ್ಲಿ ಅಹಮದ್ ನಗರದ ಸುಲ್ತಾನನಲ್ಲಿ ಮತ್ತು ನಂತರ ಬಿಜಾಪುರದ ಆದಿಲ್‌ಷಾಹಿ ಸುಲ್ತಾನನಲ್ಲಿ ಸೇವೆ ಸಲ್ಲಿಸಿದನು.



ಶಿವಾಜಿ

ಷಹಜಿಗೆ ಪೂನಾವನ್ನು ಜಹಗೀರನ್ನಾಗಿ ನೀಡಲಾಗಿತ್ತು. ಇದನ್ನು ಜೀಜಾಬಾಯಿ ನೋಡಿಕೊಳ್ಳುತ್ತಿದ್ದಳು. ಆದರೆ ಷಹಜಿಯು ಅವನ ಮತ್ತೊಂದು ಜಹಗೀರ್ ಆಗಿದ್ದ ಬೆಂಗಳೂರಿನಲ್ಲಿ ನೆಲೆಸಿದನು. ಧೈರ್ಯ ಮತ್ತು ಧರ್ಮ ಶ್ರದ್ಧೆಯ ಸ್ವಭಾವದ ಮಹಿಳೆಯಾಗಿದ್ದ ಜೀಜಾಬಾಯಿ ತನ್ನ ಮಗನಲ್ಲಿ ಪರಾಕ್ರಮ, ಆಧ್ಯಾತ್ಮ ಮತ್ತು ಶೌರ್ಯಗಳನ್ನು ತುಂಬಿದಳು. ಅವಳು ತನ್ನ ಮಗನಿಗೆ ರಾಮಾಯಣ, ಮಹಾಭಾರತದ ಕಥೆಗಳನ್ನು ಹೇಳುತ್ತಿದ್ದಳು ಇದು ಅವನನ್ನು ಧೈರ್ಯವಂತನನ್ನಾಗಿ ಮಾಡಿತು. ದಾದಾಜಿ ಕೊಂಡದೇವನು ಶಿವಾಜಿಯ ವಿದ್ಯಾಗುರು ಮತ್ತು ಮಾರ್ಗದರ್ಶಕನಾಗಿದ್ದನು. ಅವನು ಶಿವಾಜಿಗೆ ಆಡಳಿತ ಮತ್ತು ಯುದ್ಧ ಕಲೆಗಳ ತರಬೇತಿ ನೀಡಿದನು. ಶಿವಾಜಿಯು ಸಂತರಾದ ರಾಮ್‌ದಾಸ್ ಮತ್ತು ತುಕಾರಾಂರಿಂದಲೂ ಸಹ ಪ್ರಭಾವಿತನಾದನು. ಗುಡ್ಡ ಗಾಡುಗಳಲ್ಲಿ ಜೀವಿಸುತ್ತಿದ್ದ ಮಾವಳಿಯರು ಶಿವಾಜಿಯ ಸ್ನೇಹಿತರು ಮತ್ತು ಅನುಯಾಯಿಗಳಾದರು.

ಶಿವಾಜಿಯ ಸಾಧನೆಗಳು :

ಯುದ್ಧಗಳು: ಶಿವಾಜಿಯು 20ನೇ ವಯಸ್ಸನ್ನು ತಲುಪುವುದಕ್ಕಿಂತ ಮೊದಲೇ ಸೈನಿಕ ಜೀವನವನ್ನಾರಂಭಿಸಿದನು. ಮಾವಳಿಯರ ನೆರವಿನಿಂದ ಅವನು ತೋರಣ ಕೋಟೆಯನ್ನು ವಶಪಡಿಸಿಕೊಂಡನು. ಇವನು ಚಿಕಾನ, ಕೊಂಡನ, ಸಿಂಹಗಡ ಮತ್ತು ಪುರಂಧರ ಮುಂತಾದ ಅನೇಕ ಕೋಟೆಗಳನ್ನು ಬಿಜಾಪುರದ ಸುಲ್ತಾನ್‌ನಿಂದ ಗೆದ್ದುಕೊಂಡನು. ಭಾರಿ ನಷ್ಟಗಳನ್ನು ಅನುಭವಿಸಿದ ಬಿಜಾಪುರದ ಸುಲ್ತಾನನು ಷಹಜಿಯನ್ನು ಬಂಧಿಸಿದನು. ಶಿವಾಜಿಯು ತನ್ನ ರಾಜನೈತಿಕ ಜಾಣ್ಮೆಯಿಂದ ತನ್ನ ತಂದೆಯನ್ನು ಬಿಡುಗಡೆಗೊಳಿಸಿಕೊಂಡನು. ನಂತರ ಶಿವಾಜಿಯು ತನ್ನ ಗಮನವನ್ನು ಕೊಂಕಣ ತೀರದ ಕಡೆ ಹರಿಸಿ ಜಾವಳಿ ಪ್ರದೇಶವನ್ನು ಆಕ್ರಮಿಸಿದನು. ಇಲ್ಲಿ ಅವನು ಪ್ರತಾಪಗಡ್ ಎಂಬ ಹೊಸ ಕೋಟೆಯನ್ನು ನಿರ್ಮಿಸಿದನು.

ಶಿವಾಜಿ ಮತ್ತು ಅಫ್ಜಲ್‌ಖಾನ್ : (ಸಾ.ಶ. 1659) ಆದಿಲ್‌ಷಾಹಿ ಸುಲ್ತಾನರ ವಿರುದ್ಧ ಶಿವಾಜಿಯ ಸೈನಿಕ ಚಟುವಟಿಕೆಗಳು ಮುಂದುವರೆದವು. ಇದರಿಂದಾಗಿ ಶಿವಾಜಿಯನ್ನು ಶಿಕ್ಷಿಸಲು ಬಿಜಾಪುರದ ಸುಲ್ತಾನನು ಅಫ್ಜಲ್ ಖಾನ್‌ನನ್ನು ಕಳುಹಿಸಿದನು. ಶಿವಾಜಿಯು ತುಂಬಾ ಚತುರತೆ (ವಾಘ್ರನಖಿವೆಂಬ ಆಯುಧದ ಸಹಾಯದಿಂದ) ಯಿಂದ ಅವನನ್ನು ಕೊಂದು, ಅವನ ಬಿಡಾರವನ್ನು ಲೂಟಿ ಮಾಡಿದನು. ಸಾ.ಶ. 1661 ರಲ್ಲಿ ಬಿಜಾಪುರದ ಸುಲ್ತಾನನು ಶಾಂತಿ ಒಪ್ಪಂದ ಮಾಡಿಕೊಂಡು, ಶಿವಾಜಿಯ ಆಕ್ರಮಿತ ಪ್ರದೇಶಗಳಿಗೆ ಮಾನ್ಯತೆ ನೀಡಿದನು.

ಶಿವಾಜಿ ಮತ್ತು ಔರಂಗಜೇಬ : ಔರಂಗಜೇಬನಿಗೆ ಸೇರಿದ್ದ ಹಲವಾರು ಕೋಟೆಗಳು ಮತ್ತು ಪ್ರದೇಶಗಳನ್ನು ಶಿವಾಜಿ ಗೆದ್ದುಕೊಂಡನು. ಶಿವಾಜಿಯ ಆಕ್ರಮಣ ತಡೆಯಲು ಔರಂಗಜೇಬ್ ಶೈಯಿಸ್ತಾಖಾನನನ್ನು ದಖ್ಖಿನ್ನಿನ ನೂತನ ರಾಜ್ಯಪಾಲನನ್ನಾಗಿ ನೇಮಿಸಿದನು. ಪೂನಾವನ್ನು ಒಳಗೊಂಡಂತೆ ವಿಶಾಲ ಮರಾಠ ಪ್ರದೇಶ (ಕೊಂಕಣ ಮತ್ತು ಚಕಾನ್‌ಕೋಟೆಗಳು)ಗಳನ್ನು ವಶಪಡಿಸಿಕೊಳ್ಳುವಲ್ಲಿ ಶೈಯಿಸ್ತಾಖಾನ್ ಯಶಸ್ವಿಯಾದನು. ನಂತರ ಶೈಯಿಸ್ತಾಖಾನ್‌ನು ಶಿವಾಜಿಯು ತನ್ನ ಬಾಲ್ಯ ಜೀವನವನ್ನು ಕಳೆದ ಪೂನಾದ ಮನೆಯಲ್ಲೇ ಬಂದು ನೆಲೆಸಿದನು. ಸಾ.ಶ. 1663 ರಲ್ಲಿ ಕೆಲವೇ ನೂರು ಸೈನಿಕರೊಂದಿಗೆ ವಿವಾಹ ದಿಬ್ಬಣದವರಂತೆ ವೇಶ ಮೆರೆಸಿಕೊಂಡು ಶಿವಾಜಿಯು ಪೂನಾ ನಗರವನ್ನು ಪ್ರವೇಶಿಸಿದನು. ಸುಲಭವಾಗಿ ಆ ಮನೆಯೊಳಗೆ ದಾರಿ ಕಂಡುಕೊಂಡ ಶಿವಾಜಿಯು ಶೈಯಿಸ್ತಾಖಾನನ ಮೇಲೆ ದಾಳಿ ಮಾಡಿದನು. ಖಾನನು ತನ್ನ ಕೈಬೆರಳುಗಳನ್ನು ಕಳೆದುಕೊಂಡು ಪಲಾಯನ ಮಾಡಿದನು. ಇದು ಶಿವಾಜಿಯ ಖ್ಯಾತಿಯನ್ನು ಹೆಚ್ಚಿಸಿತು.

ಸೂರತ್‌ನ ಮೇಲೆ ದಾಳಿ: ಪಶ್ಚಿಮ ತೀರದಲ್ಲಿ ಸಂಪದ್ಭರಿತ ಬಂದರಾಗಿದ್ದ ಸೂರತ್‌ನ ಮೇಲೆ ಸಾ.ಶ. 1664 ರಲ್ಲಿ ಶಿವಾಜಿಯು ದಾಳಿ ಮಾಡಿ, ಅದನ್ನು ಕೊಳ್ಳೆಹೊಡೆದನು. ಇದರಿಂದ ಶಿವಾಜಿಯು ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದನು. ಮೊಘಲರನ್ನು ಬೆಂಬಲಿಸಿದ ಇಂಗ್ಲೀಷರನ್ನು ಹಿಮ್ಮೆಟ್ಟಿಸಿದನು. ಮೊಘಲ್ ಸೈನ್ಯದ ಆಗಮನದ ಸುದ್ದಿ ತಿಳಿದ ಶಿವಾಜಿಯು ಸೂರತ್‌ನಿಂದ ಪಲಾಯನ ಮಾಡಿದನು.

ಶಿವಾಜಿಯ ವಿರುದ್ಧ ಔರಂಗಜೇಬನು ರಾಜಾ ಜೈಸಿಂಗ್‌ನನ್ನು ಕಳುಹಿಸಿದನು. ತನ್ನ ಮಿಂಚಿನ ದಾಳಿಗಳ ಮೂಲಕ ಜೈಸಿಂಗ್‌ನು ಪುರಂಧರ, ರಾಯಗಢ ಮುಂತಾದ ಕೋಟೆಗಳನ್ನು ಸ್ವಾಧೀನ ಪಡಿಸಿಕೊಂಡನು. ಸಾ.ಶ. 1665 ರಲ್ಲಿ ಸಹಿಹಾಕಲಾದ ಪುರಂಧರ ಒಪ್ಪಂದದಂತೆ ಶಿವಾಜಿಯು 23 ಕೋಟೆಗಳನ್ನು ಮೊಘಲರಿಗೆ ಒಪ್ಪಿಸಿದ ಮತ್ತು 12 ಕೋಟೆಗಳನ್ನು ಮಾತ್ರ ತನ್ನಲ್ಲಿ ಉಳಿಸಿಕೊಂಡನು. ಔರಂಗಜೇಬನಿಗೆ ಕಪ್ಪಕಾಣಿಕೆಯನ್ನು ಕೊಡಲು ಒಪ್ಪಿಕೊಂಡನು. ಶಿವಾಜಿಯ ಮಗ ಸಾಂಬಾಜಿಯನ್ನು 5000ದ ಮನ್‌ಸಬ್ದಾರನಾಗಿ ನೇಮಕ ಮಾಡಬೇಕೆಂದು ನಿರ್ಧರಿಸಲಾಯಿತು.

ಜೈಸಿಂಗನ ಒತ್ತಾಯದ ಮೇರೆಗೆ ಶಿವಾಜಿಯು ಆಗ್ರಾದಲ್ಲಿನ ಮೊಘಲರ ಆಸ್ಥಾನಕ್ಕೆ ಭೇಟಿ ನೀಡಿದನು. ಆದರೆ ಔರಂಗಜೇಬನು ಶಿವಾಜಿಯನ್ನು ಅವಮಾನಗೊಳಿಸಿ ಬಂಧನದಲ್ಲಿಟ್ಟನು (ಸಾ.ಶ.1666). ಶಿವಾಜಿಯು ಅನಾರೋಗ್ಯವಂತನಂತೆ ನಟಿಸಿ, ಸಿಹಿ ತುಂಬಿದ ಬುಟ್ಟಿಗಳನ್ನು ದಾನ ಮಾಡಲು ಹೊರಗೆ ಕಳುಹಿಸುತ್ತಿದ್ದನು. ಅವಕಾಶ ನೋಡಿ ಬುಟ್ಟಿಯಲ್ಲಿ ಅಡಗಿಕೊಂಡು ಸಾಂಬಾಜಿಯೊಂದಿಗೆ ತಪ್ಪಿಸಿಕೊಂಡನು. ಅವನು ಸನ್ಯಾಸಿಯ ವೇಶದಲ್ಲಿ ತನ್ನ ರಾಜ್ಯ ತಲುಪಿದನು. ನಂತರ ಶಿವಾಜಿಯು ಎರಡು ಬಾರಿ ಸೂರತ್‌ಅನ್ನು ಲೂಟಿ ಮಾಡಿದನು. ಅಲ್ಲದೆ ಹಿಂದೆ ಮೊಘಲರಿಗೆ ಬಿಟ್ಟು ಕೊಟ್ಟಿದ್ದ ಎಲ್ಲಾ ಕೋಟೆಗಳನ್ನು ಅವನು ಮರುವಶಪಡಿಸಿಕೊಂಡನು. ಔರಂಗಜೇಬನಿಗೆ ಅವನನ್ನು ನಿಗ್ರಹಿಸಲು ಸಾಧ್ಯವಾಗಲಿಲ್ಲ.

ಶಿವಾಜಿಯ ಕಿರೀಟಧಾರಣೆ : ಶಿವಾಜಿಯು ಸಾ.ಶ. 1674 ರಲ್ಲಿ ರಾಜನಾಗಿ ಕಿರೀಟಧಾರಣೆ ಮಾಡಿಕೊಂಡನು. ಇವನ ಪಟ್ಟಾಭಿಷೇಕವು ರಾಯಗಡ್ ಎಂಬಲ್ಲಿ ವೈಭವ ಮತ್ತು ವೈದಿಕ ವಿಧಿಯಾಚರಣೆಗಳ ಪ್ರಕಾರ ನಡೆಯಿತು. ಇವನು 'ಛತ್ರಪತಿ' ಎಂಬ ಬಿರುದನ್ನು ಪಡೆದುಕೊಂಡನು.

ಕೆಲವು ಸಮಯದ ನಂತರ ಶಿವಾಜಿಯು ಹುಬ್ಬಳ್ಳಿ, ಜಿಂಜಿ ಮತ್ತು ವೆಲ್ಲೂರುಗಳನ್ನು ಆಕ್ರಮಿಸಿದನು. ತಂಜಾವೂರಿನ ರಾಜನಾಗಿದ್ದ ಅವನ ಮಲಸಹೋದರ ವೆಂಕೋಜಿಯನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸಿಕೊಂಡನು. ಶಿವಾಜಿಯು ಸಾ.ಶ. 1680 ರಲ್ಲಿ ಮರಣ ಹೊಂದಿದನು.

ಶಿವಾಜಿಯ ಆಡಳಿತ ಪದ್ಧತಿ:

ಕೇಂದ್ರ ಸರ್ಕಾರ : ಶಿವಾಜಿಯು ಮರಾಠ ರಾಜ್ಯವನ್ನು ನಿರ್ಮಿಸಿದ್ದಲ್ಲದೆ ತನ್ನ ಆಡಳಿತವನ್ನು ಸಮರ್ಥ ರೀತಿಯಲ್ಲಿ ಸಂಘಟಿಸಿದನು. ಇವನು ಸರ್ಕಾರದ ಏಕಮಾತ್ರ ಮುಖ್ಯಸ್ಥನಾಗಿದ್ದು, ಎಲ್ಲಾ ಅಧಿಕಾರ ಅವನಲ್ಲೇ ಕೇಂದ್ರೀಕೃತವಾಗಿತ್ತು. ಇವನು ಮಂತ್ರಿ ಮಂಡಲವನ್ನು ರಚಿಸಿದನು. ಇದು 8 ಜನ ಮಂತ್ರಿಗಳನ್ನೊಳಗೊಂಡಿತ್ತು ಹಾಗೂ ಅವರನ್ನು 'ಅಷ್ಠ ಪ್ರಧಾನ'ರೆಂದು ಕರೆಯಲಾಗುತ್ತಿತ್ತು.

(1) ಪೇಶ್ವ – ಪ್ರಧಾನ ಮಂತ್ರಿ – ಜನರ ಕ್ಷೇಮ ಮತ್ತು ರಾಜ್ಯದ ಹಿತಗಳನ್ನು ನೋಡಿಕೊಳ್ಳುವುದು.
(2) ಅಮಾತ್ಯ – ಹಣಕಾಸು ಮಂತ್ರಿ.
(3) ಮಂತ್ರಿ – ಇತಿಹಾಸಕಾರ – ರಾಜನ ದೈನಂದಿನ ಚಟುವಟಿಕೆಗಳ ದಿನಚರಿ ಇಡುವವನು.
(4) ಸುಮಂತ್ – ವಿದೇಶಾಂಗ ವ್ಯವಹಾರಗಳ ಉಸ್ತುವಾರಿ.
(5) ಸಚಿವ – ರಾಜ ಪತ್ರ ವ್ಯವಹಾರ ನೋಡಿಕೊಳ್ಳುವವ.
(6) ಪಂಡಿತ್‌ರಾವ್ – ದಾನಾಧ್ಯಕ್ಷ – ಎಲ್ಲಾ ಧಾರ್ಮಿಕ ವ್ಯವಹಾರಗಳ ಉಸ್ತುವಾರಿ.
(7) ಸೇನಾಪತಿ – ಸರ್–ಇ–ನೌಬತ್ – ಸೈನ್ಯದ ಮುಖ್ಯ ದಂಡನಾಯಕ.
(8) ನ್ಯಾಯಾಧೀಶ – ಮುಖ್ಯ ನ್ಯಾಯಾಧೀಶ – ನಾಗರಿಕ ಮತ್ತು ಸೈನಿಕ ನ್ಯಾಯಗಳಿಗೆ ಜವಾಬ್ದಾರ.

ಸರ್ಕಾರದಲ್ಲಿ 18 ಇಲಾಖೆಗಳಿದ್ದು, ಅವು ವಿವಿಧ ಮಂತ್ರಿಗಳ ಉಸ್ತುವಾರಿಯಲ್ಲಿದ್ದವು. ಅವರು ರಾಜನ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

ಪ್ರಾಂತೀಯ ಸರ್ಕಾರ : ಶಿವಾಜಿಯು ತನ್ನ ರಾಜ್ಯವನ್ನು 'ಸ್ವರಾಜ್ಯ' ಎಂದು ಕರೆಯಲಾಗಿದ್ದ ನಾಲ್ಕು ಪ್ರಾಂತ್ಯಗಳನ್ನಾಗಿ ವಿಂಗಡಿಸಿದ್ದನು. ಪ್ರತಿಯೊಂದು ಪ್ರಾಂತ್ಯಕ್ಕೂ ಸರ್ದೇಶ್‌ಮುಖ್ ಎಂಬ ರಾಜ್ಯಪಾಲನನ್ನು

ನೇಮಿಸಲಾಗಿತ್ತು. ಸ್ವರಾಜ್ಯಗಳನ್ನು ಅನೇಕ 'ಪ್ರಾಂತ್' (ಜಿಲ್ಲೆಗಳ ಸಮೂಹ)ವಾಗಿ ಪುನರ್‌ವಿಂಗಡಿಸಲಾಗಿತ್ತು. ಜಿಲ್ಲೆಗಳನ್ನು 'ದೇಶ್' ಎಂದು ಕರೆಯಲಾಗಿತ್ತು ಮತ್ತು 'ದೇಶ್ ಮುಖ್' ಅಥವಾ 'ದೇಶ್ ಪಾಂಡೆ' ಅದರ ಮುಖ್ಯಸ್ಥನಾಗಿದ್ದನು. ಅವುಗಳನ್ನು 'ಪರಗಣ'ಗಳೆಂಬ ಉಪ ವಿಭಾಗಗಳನ್ನಾಗಿ ಮಾಡಲಾಗಿತ್ತು. 'ದೇಸಾಯಿ' ಎಂಬ ಅಧಿಕಾರಿ ಇವುಗಳನ್ನು ನೋಡಿಕೊಳ್ಳುತ್ತಿದ್ದನು. ಗ್ರಾಮ ಸಭೆಯು ಆಡಳಿತದ ಅತಿಚಿಕ್ಕ ಘಟಕವಾಗಿತ್ತು. ಶಿವಾಜಿಯು ತನ್ನ ಅಧಿಕಾರಿಗಳಿಗೆ ಜಹಗೀರ್ ನೀಡುವ ಪದ್ಧತಿಯನ್ನು ರದ್ದುಪಡಿಸಿ, ನಗದು ವೇತನ ಪಾವತಿಸಲಾರಂಭಿಸಿದನು.

ಕಂದಾಯ ಪದ್ಧತಿ : ಭೂಮಿಯ ಫಲವತ್ತತೆ ಮತ್ತು ಉತ್ಪತ್ತಿಯನ್ನಾಧರಿಸಿ ಶಿವಾಜಿಯು ಭೂಮಿಯನ್ನು ವರ್ಗೀಕರಿಸಿದನು. ಭೂಕಂದಾಯವನ್ನು ಉತ್ಪನ್ನದ ಶೇ.30ಕ್ಕೆ ನಿಗದಿಗೊಳಿಸಿದ್ದನು. ಆದರೆ ನಂತರದಲ್ಲಿ ಅದನ್ನು ಶೇ. 40ಕ್ಕೆ ಹೆಚ್ಚಿಸಿದನು. ಕಂದಾಯವನ್ನು ನಗದು ರೂಪದಲ್ಲಾಗಲಿ ಇಲ್ಲವೇ ಧಾನ್ಯ ರೂಪದಲ್ಲಾಗಲಿ ಪಾವತಿಸಬೇಕಿತ್ತು. ಕ್ಷಾಮ ಅಥವಾ ಯಾವುದೇ ಪ್ರಾಕೃತಿಕ ವಿಕೋಪಗಳಿದ್ದಾಗ ಭೂ ಕಂದಾಯವನ್ನು ಮನ್ನಾ ಮಾಡಲಾಗುತ್ತಿತ್ತು. ಗೆದ್ದ ಪ್ರದೇಶಗಳಿಂದ ಶಿವಾಜಿಯು 'ಚೌತ್' ಮತ್ತು ಸರ್ದೇಶ್‌ಮುಖಿ ಎಂಬ ಇನ್ನೆರಡು ಪ್ರಮುಖ ತೆರಿಗೆ ಅಥವಾ ಸೈನಿಕ ಕಾಣಿಕೆಗಳನ್ನು ಸಂಗ್ರಹಿಸುತ್ತಿದ್ದನು.

ಚೌತ್: ಶಿವಾಜಿಯ ನೇರ ಆಡಳಿತಕ್ಕೆ ಒಳಪಡದ ಅವನ ಸಾಮ್ರಾಜ್ಯದ ನೆರೆಯ ಪ್ರದೇಶಗಳು ತಾವು ಸಂಗ್ರಹಿಸಿದ ಭೂಕಂದಾಯದಲ್ಲಿ ¼ ಭಾಗವನ್ನು ಅವನಿಗೆ ನೀಡಬೇಕಿತ್ತು. ಇದನ್ನು ಚೌತ್ ಎಂದು ಕರೆಯಲಾಗಿತ್ತು. ಇದಕ್ಕೆ ಪ್ರತಿಯಾಗಿ ಅವನು ಸೈನಿಕ ರಕ್ಷಣೆಯನ್ನು ನೀಡುತ್ತಿದ್ದನು.

ಸರ್ದೇಶ್‌ಮುಖಿ: ರೈತರು ತಾವು ಸ್ಥಳೀಯ ಕಂದಾಯ ಅಧಿಕಾರಿಗಳಿಗೆ ನೀಡುತ್ತಿದ್ದ ನಿಯಮಿತ ತೆರಿಗೆಗಳೊಂದಿಗೆ ಹೆಚ್ಚುವರಿ ಶೇ.10 ರಷ್ಟು ತೆರಿಗೆಯನ್ನು ನೇರವಾಗಿ ಶಿವಾಜಿಗೆ ಅಥವಾ ಕೇಂದ್ರಾಡಳಿತಕ್ಕೆ ಕೊಡಬೇಕಿತ್ತು. ಇದನ್ನು ಸರ್ದೇಶ್‌ಮುಖಿ ಎಂದು ಕರೆಯಲಾಗುತ್ತಿತ್ತು.

ಸೈನಿಕ ವ್ಯವಸ್ಥೆ : ಶಿವಾಜಿಯ ರಾಜ್ಯವು ಸೈನಿಕ ರಾಜ್ಯವಾಗಿತ್ತು. ಆದ್ದರಿಂದ ಸೈನ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇತ್ತು. ರಾಜನೇ ಸೈನ್ಯದ ಮುಖ್ಯಸ್ಥನಾಗಿದ್ದನು. ಸೇನಾಪತಿ ಅವನ ಅಧೀನದಲ್ಲಿದ್ದನು. ಶಿವಾಜಿಯ ಸೈನ್ಯವು ಕಾಲಾಳು, ಅಶ್ವಪಡೆ ಮತ್ತು ಫಿರಂಗಿಪಡೆ, ಒಂಟೆ ಮತ್ತು ಆನೆಗಳನ್ನು ಒಳಗೊಂಡಿತ್ತು. ಕಾಲ್ದಳದ ಸೈನಿಕರಿಗೆ ಗೆರಿಲ್ಲಾ ಮತ್ತು ಪರ್ವತ ಯುದ್ಧ ಕಲೆಯಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿತ್ತು. ಸೈನಿಕರು ಮಹಿಳೆಯರನ್ನು ಯುದ್ಧ ಭೂಮಿಗೆ ಕರೆದುಕೊಂಡು ಹೋಗುವಂತಿರಲಿಲ್ಲ. ಮಹಿಳೆಯರು, ವರ್ತಕರು, ಬ್ರಾಹ್ಮಣರು, ಹಸುಗಳು ಮತ್ತು ಕೃಷಿಕರನ್ನು ಸೈನಿಕರು ಕೆಟ್ಟದಾಗಿ ನಡೆಸಿಕೊಳ್ಳುವಂತಿರಲಿಲ್ಲ. ಕಾಲ್ದಳ ಮತ್ತು ಅಶ್ವದಳದಲ್ಲಿ ನಾಯಕರು, ಹವಾಲ್ದಾರರು, ಜುಮ್ಲಾದಾರರು, ಹಜಾರಿಗಳು ಮತ್ತಿತರ ವಿವಿಧ ಶ್ರೇಣಿಯ ಸೈನಿಕಾಧಿಕಾರಿಗಳು ಇದ್ದರು. ಶಿವಾಜಿಯು 200 ಹಡಗುಗಳನ್ನೊಳಗೊಂಡ ಬಲಿಷ್ಠ ನೌಕಾ ಪಡೆಹೊಂದಿದ್ದನು. ಕಾನ್ಹೊಜಿಆಂಗ್ರೇ ಮರಾಠರ ಪ್ರಸಿದ್ಧ ನೌಕಾದಳಪತಿಯಾಗಿದ್ದನು.

ನ್ಯಾಯಾಂಗ ಪದ್ಧತಿ: ರಾಜನೇ ಸರ್ವೋಚ್ಚ ನ್ಯಾಯಾಧೀಶನಾಗಿದ್ದನು.ಗ್ರಾಮ ಪಂಚಾಯಿತಿಗಳು ನಾಗರಿಕ ಮೊಕದ್ದಮೆಗಳನ್ನು ಮತ್ತು ಜಿಲ್ಲಾ ಅಧಿಕಾರಿಗಳು ಹಾಗೂ ರಾಜ್ಯಪಾಲರು ಅಪರಾಧ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಿದ್ದರು. ಗ್ರಾಮ ನ್ಯಾಯಾಲಯಗಳ ತೀರ್ಪುಗಳಿಗೆ ರಾಜ ಮನ್ನಣೆ ಇತ್ತು. ರಾಜ ಮತ್ತು ನ್ಯಾಯಾಧೀಶರು ಮೇಲ್ಮನವಿಗಳ ಬಗ್ಗೆ ಆಲಿಸುತ್ತಿದ್ದರು. ನ್ಯಾಯಾಧೀಶನು ನಾಗರಿಕ ಮತ್ತು ಸೈನಿಕ ನ್ಯಾಯ ನಿರ್ವಹಣೆಗೆ ಜವಾಬ್ದಾರನಾಗಿದ್ದನು.

ಚಟುವಟಿಕೆ

ಶಿವಾಜಿಯ ಕೋಟೆಗಳ ಪಟ್ಟಿಮಾಡಿ

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಮರಾಠ ರಾಜ್ಯದ ಸ್ಥಾಪಕರು ಯಾರು?
2. ಶಿವಾಜಿ ಮತ್ತು ಜೈಸಿಂಗ್ ನಡುವೆ ಸಹಿ ಹಾಕಲಾದ ಒಪ್ಪಂದವನ್ನು ಹೆಸರಿಸಿ.
3. ಶಿವಾಜಿಯ ಬಿರುದು ಯಾವುದು?
4. ಶಿವಾಜಿಯ ಕಿರೀಟಧಾರಣೆಯಾದ ವರ್ಷ ಯಾವುದು?
5. 'ಚೌತ್' ಎಂದರೇನು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ:

1. ಶಿವಾಜಿ ಎಲ್ಲಿ, ಯಾವಾಗ ಜನಿಸಿದನು?
2. ಶಿವಾಜಿಯ ತಂದೆ–ತಾಯಿ ಯಾರು?
3. ಶಿವಾಜಿಯ ಮೇಲೆ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳನ್ನು ಹೆಸರಿಸಿ.
4. ಶಿವಾಜಿಯ ಯಾವುದಾದರು ಎರಡು ಪ್ರಮುಖ ಕೋಟೆಗಳನ್ನು ಹೆಸರಿಸಿ.
5. ಶಿವಾಜಿಯು ಸಂಗ್ರಹಿಸುತ್ತಿದ್ದ ಎರಡು ಪ್ರಮುಖ ತೆರಿಗೆಗಳು ಯಾವುವು?

III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದನ್ನು 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ

1. ಶಿವಾಜಿಯ ದಿಗ್ವಿಜಯಗಳನ್ನು ವಿವರಿಸಿ.
2. ಶಿವಾಜಿಯ ಆಡಳಿತ ಪದ್ಧತಿಯ ಬಗ್ಗೆ ಒಂದು ವಿವರಣೆ ನೀಡಿ.

❊ ❊ ❊ ❊

ಅಧ್ಯಾಯ–5.4

ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ಭಾರತದ ಇತಿಹಾಸದಲ್ಲಿಯೇ ಒಂದು ಮಹತ್ವಪೂರ್ಣ ಘಟನೆ ಎಂದು ಪರಿಗಣಿಸಲಾಗಿದೆ. ಈ ಸಾಮ್ರಾಜ್ಯವು ಉನ್ನತಾವಸ್ಥೆಯಲ್ಲಿದ್ದಾಗ ಇಡೀ ದಕ್ಷಿಣ ಭಾರತವನ್ನು ಆಳಿತು. ಸಾ.ಶ.1336 ರಲ್ಲಿ ಸ್ಥಾಪನೆಯಾದ ಈ ಸಾಮ್ರಾಜ್ಯವು ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಿದ್ದಲ್ಲದೇ, ಅದರ ಬೆಳವಣಿಗೆಗೂ ಕಾರಣವಾಯಿತು. ತುಂಗಭದ್ರಾ ತೀರದ ಹಂಪಿ ಅಥವಾ ವಿಜಯನಗರ ಈ ಸಾಮ್ರಾಜ್ಯದ ರಾಜಧಾನಿ ಆಗಿತ್ತು. ಹಂಪಿ ಎಂಬ ಪದವು ಪಂಪಾಂಬಿಕಾ ದೇವತೆಯ ಹೆಸರಿನಿಂದ ಬಂದಿದೆ. ಇಂದು ಹಂಪಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿದೆ. 'ಶ್ರೀ ವಿರೂಪಾಕ್ಷ' ವಿಜಯನಗರದ ಅರಸರ ಕುಲದೇವರು ಹಾಗೂ ರಾಜಮುದ್ರಿಕೆ ಆಗಿತ್ತು. 'ವರಾಹ' ಇವರ ರಾಜ ಲಾಂಛನವಾಗಿತ್ತು.

ಸ್ಥಾಪನೆ:

ಸಂಗಮ ಸಹೋದರರಾದ ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಮಹಾ ಸಾಹಸಿಗರಾಗಿದ್ದರು. ಇವರಲ್ಲಿ ಮೊದಲಿನ ಇಬ್ಬರಾದ ಹರಿಹರ ಮತ್ತು ಬುಕ್ಕರಾಯ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರು. ಹಂಪಿಗೆ ಸಮೀಪದ ಆನೆಗೊಂದಿಯಲ್ಲಿ ರಾಜ್ಯ ಸ್ಥಾಪಿಸಿ ಅದನ್ನೇ ಆರಂಭಿಕ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಮೂಲ:

ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಹರಿಹರ ಮತ್ತು ಬುಕ್ಕರಾಯ ಎಂಬ ಬಗ್ಗೆ ಯಾವ ಸಂದೇಹವೂ ಇಲ್ಲ. ಆದರೆ, ಅವರ ಮೂಲಸ್ಥಳ ಯಾವುದು ಎಂಬ ಬಗ್ಗೆ ವಿದ್ವಾಂಸರಲ್ಲಿ ವಿವಾದಗಳಿವೆ. ಒಂದು ಸಿದ್ಧಾಂತದ ಪ್ರಕಾರ ಆಂಧ್ರದ ವಾರಂಗಲ್‌ನ ಕಾಕತೀಯ ದೊರೆ ಪ್ರತಾಪರುದ್ರನ ಆಶ್ರಯದಲ್ಲಿ ಹರಿಹರ ಮತ್ತು ಬುಕ್ಕರಾಯ ಅಧಿಕಾರಿಗಳಾಗಿದ್ದರು. ದೆಹಲಿಯ ಸುಲ್ತಾನ ಮಹಮ್ಮದ ಬಿನ್ ತೊಘಲಕ್‌ನ ವಿರುದ್ಧ ಬಂಡೆದ್ದು, ಈ ಸಹೋದರರು ಹಂಪಿ ಪ್ರದೇಶದಲ್ಲಿ ರಾಜ್ಯಸ್ಥಾಪನೆ ಮಾಡಿದರು. ಇನ್ನೊಂದು ಸಿದ್ಧಾಂತದ ಪ್ರಕಾರ ಹರಿಹರ–ಬುಕ್ಕರಾಯ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಅಧೀನದಲ್ಲಿ ಹಂಪಿ ಪ್ರದೇಶದಲ್ಲಿ ಅಧಿಕಾರಿಗಳಾಗಿದ್ದರು. ಮತ್ತೊಂದು ಸಿದ್ಧಾಂತದ ಪ್ರಕಾರ ಸಂಗಮನು ಕಂಪಿಲಿಯ ಸಮೀಪದ ಕುಮ್ಮಟದುರ್ಗದ ಧೈರ್ಯಶಾಲಿ ಆಡಳಿತಗಾರನಾಗಿದ್ದ ಕುಮಾರರಾಮನ ಸಂಬಂಧಿಕನಾಗಿದ್ದನು. ಆವನ ಮಕ್ಕಳಾದ ಹರಿಹರ ಮತ್ತು ಬುಕ್ಕರಾಯ ವಿಜಯನಗರದ ಸಾಮ್ರಾಜ್ಯ ಸ್ಥಾಪನೆ ಮಾಡಿದರು. ಹೀಗೆ ವಿಜಯನಗರದ ಮೂಲದ ಬಗ್ಗೆ ಸ್ಪಷ್ಟ ಅಭಿಪ್ರಾಯವಿಲ್ಲ.

ರಾಜಕೀಯ ಇತಿಹಾಸ:

ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ರಾಜಮನೆತನಗಳು ಒಂದರ ನಂತರ ಇನ್ನೊಂದು ಆಳಿದವು.

1. ಸಂಗಮ ಮನೆತನ : ಸಾ.ಶ.1336 – 1485
2. ಸಳುವ ಮನೆತನ : ಸಾ.ಶ.1485 – 1505

3. ತುಳುವ ಮನೆತನ : ಸಾ.ಶ.1505 – 1570

4. ಅರವೀಡು ಮನೆತನ : ಸಾ.ಶ.1571 – 1646

ಸಂಗಮ ಅರಸರು	ಸಳುವ ಅರಸರು	ತುಳುವ ಅರಸರು	ಅರವೀಡು ಅರಸರು
ಒಂದನೇ ಹರಿಹರರಾಯ	ಸಳುವ ನರಸಿಂಹ	ನರಸನಾಯಕ	ಅಳಿಯ ರಾಮರಾಯ
ಒಂದನೇ ಬುಕ್ಕರಾಯ		ವೀರನರಸಿಂಹ	ತಿರುಮಲ ದೇವರಾಯ
2ನೇ ಹರಿಹರರಾಯ		ಕೃಷ್ಣದೇವರಾಯ	ಒಂದನೇ ಶ್ರೀರಂಗ
ಒಂದನೇ ದೇವರಾಯ		ಅಚ್ಯುತರಾಯ	2ನೇ ವೆಂಕಟ
2ನೇ ದೇವರಾಯ		ಸದಾಶಿವರಾಯ	3ನೇ ವೆಂಕಟ
ಮಲ್ಲಿಕಾರ್ಜುನರಾಯ			3ನೇ ಶ್ರೀರಂಗ
2ನೇ ವಿರೂಪಾಕ್ಷರಾಯ			

ಕೃಷ್ಣದೇವರಾಯ (ಸಾ.ಶ.1509–1529)

ದಕ್ಷಿಣ ಭಾರತವನ್ನು ಆಳಿದ ಸರ್ವಶ್ರೇಷ್ಠ ಸಾಮ್ರಾಟರಲ್ಲಿ ಕೃಷ್ಣದೇವರಾಯನು ಒಬ್ಬನು. ಇವನು ತುಳುವ ವಂಶದ ನರಸನಾಯಕ ಹಾಗೂ ನಾಗಲಾದೇವಿಯರ ಪುತ್ರ. ಇವನು ಸಾ.ಶ. 1509 ರ ಶ್ರೀಕೃಷ್ಣಜನ್ಮಾಷ್ಟಮಿಯಂದು ಸಿಂಹಾಸನವೇರಿದನು. ತಿಮ್ಮರಸನು ಇವನ ಪ್ರಧಾನಮಂತ್ರಿಯಾಗಿದ್ದು, ಕೃಷ್ಣದೇವರಾಯ, ಅವನನ್ನು ಅಪ್ಪಾಜಿ ಎಂದು ಕರೆಯುತ್ತಿದ್ದನು.

ಸೈನಿಕ ಸಾಧನೆಗಳು:

ಸಾ.ಶ.1510 ರ ಯುದ್ಧ:


ಬಿಜಾಪುರದ ಸುಲ್ತಾನ ಯೂಸುಫ್ ಆದಿಲ್‌ಷಾ ಹಾಗೂ ಬೀದರ್ ಸುಲ್ತಾನ ಮಹಮದ್‌ಷಾ ವಿಜಯನಗರದ ಮೇಲೆ ಆಕ್ರಮಣ ಮಾಡಿದರು. ಸಾ.ಶ. 1510 ರಲ್ಲಿ ನಡೆದ ಈ ಯುದ್ಧದಲ್ಲಿ ಕೃಷ್ಣದೇವರಾಯನು ವೈರಿಗಳ ಆಕ್ರಮಣವನ್ನು ಹಿಮ್ಮೆಟ್ಟಿಸಿದನು. ಯೂಸೂಫ್ ಆದಿಲ್‌ಷಾ ತನ್ನ ಪ್ರಾಣ ಕಳೆದುಕೊಂಡನು. ನಂತರ ಕೃಷ್ಣದೇವರಾಯ ರಾಯಚೂರು ಕೋಟೆಯೊಂದಿಗೆ ಕೃಷ್ಣಾ–ತುಂಗಭದ್ರಾ ದೋ–ಅಬ್‌ನ್ನು ಆಕ್ರಮಿಸಿಕೊಂಡನು.

ಉಮ್ಮತ್ತೂರಿನ ಮುತ್ತಿಗೆ–ಸಾ.ಶ.1513:

ಉಮ್ಮತ್ತೂರಿನ ನಾಯಕ ಗಂಗರಾಜನು ವಿಜಯನಗರದ ವಿರುದ್ಧ ಬಂಡಾಯವೆದ್ದನು. ಕೃಷ್ಣದೇವರಾಯನು ಪೆನುಗೊಂಡವನ್ನು ಗೆದ್ದು ಉಮ್ಮತ್ತೂರು ಕೋಟೆಗೆ ಮುತ್ತಿಗೆ ಹಾಕಿದನು. ಈ ಬಂಡಾಯವನ್ನು ಹತ್ತಿಕ್ಕಿ ಶಿವನಸಮುದ್ರ ಹಾಗೂ ಶ್ರೀರಂಗಪಟ್ಟಣ ಕೋಟೆಗಳನ್ನು ವಶಪಡಿಸಿಕೊಂಡನು.

ಕಳಿಂಗ ದಿಗ್ವಿಜಯ – ಸಾ.ಶ.1513–1518:

ಒರಿಸ್ಸಾದ ಗಜಪತಿ ಪ್ರತಾಪರುದ್ರನನ್ನು ಸೋಲಿಸಲು ಕೃಷ್ಣದೇವರಾಯನು ಕಳಿಂಗದ ಮೇಲೆ ದಂಡಯಾತ್ರೆ ಆರಂಭಿಸಿದನು. ಈ ದಿಗ್ವಿಜಯ ಐದು ಹಂತಗಳಲ್ಲಿ ಜರುಗಿತು.


ಕೃಷ್ಣದೇವರಾಯನ ಕಾಲದ
ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯ
ಬಹಮನಿ ರಾಜ್ಯ
ಬೀದರ್
ಬಿಜಾಪುರ
ಗುಲ್ಬರ್ಗಾ
ತಾಳಿಕೋಟೆ
ರಾಜಮಹೇಂದ್ರಿ
ವಿಜಯನಗರ
(ಹಂಪಿ)
ಅರಬ್ಬಿ
ಸಮುದ್ರ
ಬಂಗಾಳ ಕೊಲ್ಲಿ
ತಾಡಪತ್ರಿ
ಲೇಪಾಕ್ಷಿ
ತಿರುಪತಿ
ಶೃಂಗೇರಿ
ಮಂಗಳೂರು
ಕನ್ಯಾಕುಮಾರಿ
ಸಿಲೋನ್
ಸಾಮ್ರಾಜ್ಯ ವಿಸ್ತರಣೆ
ಉ
ಪ
ಪೂ
ದ
ಹಿಂದೂ ಮಹಾಸಾಗರ

* ಮೊದಲ ಹಂತದಲ್ಲಿ ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡನು. ನಂತರ ಅವನು ತನ್ನ ರಾಣಿಯರಾದ ತಿರುಮಲಾಂಬ ಹಾಗೂ ಚಿನ್ನಲಾಂಬರೊಂದಿಗೆ ತಿರುಪತಿಗೆ ಪ್ರಯಾಣಿಸಿ ಶ್ರೀ ವೆಂಕಟೇಶ್ವರನ ಆರಾಧನೆ ಮಾಡಿದನು. ಉದಯಗಿರಿಯಿಂದ ತಂದ ಬಾಲಕೃಷ್ಣನ ಮೂರ್ತಿಯನ್ನು ಹಂಪಿಯಲ್ಲಿ ಪ್ರತಿಷ್ಠಾಪನೆ ಮಾಡಿ, ಭವ್ಯವಾದ ದೇವಾಲಯವನ್ನು ನಿರ್ಮಿಸಿದನು.

* ದ್ವಿತೀಯ ಹಂತದಲ್ಲಿ ಕೊಂಡವೀಡು ಕೋಟೆಗೆ ಮುತ್ತಿಗೆ ಹಾಕಿ ಪ್ರತಾಪರುದ್ರನ ಬೆಂಬಲಿಗರಾದ ರೆಡ್ಡಿಗಳನ್ನು ಸೋಲಿಸಿದನು. ಇದರಿಂದ ಕೃಷ್ಣಾ ತೀರದ ಆಂಧ್ರದ ಭಾಗವು ಕೃಷ್ಣದೇವರಾಯನ ವಶಕ್ಕೆ ಬಂದಿತು. ಈ ಪ್ರದೇಶದ ಆಡಳಿತವನ್ನು ಸಾಳ್ವ ತಿಮ್ಮನಿಗೆ ವಹಿಸಲಾಯಿತು.

* ಮೂರನೇ ಹಂತದಲ್ಲಿ ವಿಜಯವಾಡ ಹಾಗೂ ಕೊಂಡಪಲ್ಲಿ ದುರ್ಗಗಳನ್ನು ಕೃಷ್ಣದೇವರಾಯನು ವಶಪಡಿಸಿಕೊಂಡನು. ಕೃಷ್ಣದೇವರಾಯನಿಗೆ ಮುಖಾಮುಖಿ ಎದುರಾದ ಗಜಪತಿರಾಜನು ಯುದ್ಧ ಭೂಮಿಯಿಂದ ಪಲಾಯನ ಮಾಡಬೇಕಾಯಿತು.

* ನಾಲ್ಕನೇ ಹಂತದಲ್ಲಿ ತೆಲಂಗಾಣ ಪ್ರದೇಶದಲ್ಲಿ ರಾಯನು ಅನಂತಗಿರಿ, ಕನಕಗಿರಿ, ದೇವರಕೊಂಡ ಹಾಗೂ ಇತರ ಕೋಟೆಗಳನ್ನು ವಶಪಡಿಸಿಕೊಂಡನು. ಈ ವಿಜಯದ ಸಂಕೇತವಾಗಿ ಪೋತನೂರು ಎಂಬಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು.

* ಐದನೇ ಹಂತದಲ್ಲಿ ಪ್ರತಾಪರುದ್ರನ ರಾಜಧಾನಿ ಕಟಕ್‌ಗೆ ಮುತ್ತಿಗೆ ಹಾಕಿದನು. ಆಗ ಪ್ರತಾಪರುದ್ರನು ಶಾಂತಿ ಸಂಧಾನಕ್ಕೆ ಬಂದನು. ಕೃಷ್ಣಾತೀರದ ಉತ್ತರದ ಭಾಗವನ್ನು ಮರಳಿ ಕೊಟ್ಟ ರಾಯನು, ಅವನ ಮಗಳು ಜಗನ್ಮೋಹಿನಿಯನ್ನು ವಿವಾಹವಾದನು.

ರಾಯಚೂರು ಯುದ್ಧ – ಸಾ.ಶ.1520:

ಕೃಷ್ಣದೇವರಾಯನು ಕಳಿಂಗ ಯುದ್ಧದಲ್ಲಿ ತೊಡಗಿದ್ದಾಗ ಬಿಜಾಪುರದ ಇಸ್ಮಾಯಿಲ್ ಆದಿಲ್‌ಷಾನು ರಾಯಚೂರು ಕೋಟೆಯನ್ನು ಮರಳಿ ವಶಕ್ಕೆ ಪಡೆದನು. ಇದರಿಂದ ಕೃಷ್ಣದೇವರಾಯನು ಸಾ.ಶ.1520 ರಲ್ಲಿ ಯುದ್ಧವನ್ನು ಮಾಡಿ ಕೋಟೆಯನ್ನು ಮರಳಿ ವಶಕ್ಕೆ ಪಡೆದನು. ಈ ಯುದ್ಧದಲ್ಲಿ ಕೋವಿದಾರಿ ಪೋರ್ಚುಗೀಸರು ವಿಜಯನಗರಕ್ಕೆ ಸಹಾಯ ಮಾಡಿದರು. ಈ ಸಹಾಯದಿಂದ ಸಂತೃಪ್ತಗೊಂಡ ಕೃಷ್ಣದೇವರಾಯನು ವಿಜಯನಗರದ ಸೈನ್ಯಕ್ಕೆ ಪರ್ಷಿಯಾದ ಕುದುರೆಗಳನ್ನು ಪೂರೈಸುವ ಏಕಸ್ವಾಮ್ಯದ ವ್ಯಾಪಾರವನ್ನು ಪೋರ್ಚುಗೀಸರಿಗೆ ಮಂಜೂರು ಮಾಡಿದನು. ಕೃಷ್ಣದೇವರಾಯನು ಬಿಜಾಪುರದವರೆಗೂ ಹೋದನು. ಇಲ್ಲಿಂದ ಗುಲ್ಬರ್ಗಾಕ್ಕೆ ಹೋಗಿ ಅಮೀರ್ ಬರೀದನನ್ನು ಸೋಲಿಸಿದನು. ನಂತರ ಬೀದರ್‌ಗೆ ಹೋಗಿ ಅಲ್ಲಿ ಸೆರೆಯಲ್ಲಿದ್ದ ಬಹಮನಿ ಸುಲ್ತಾನನನ್ನು ಬಿಡುಗಡೆ ಮಾಡಿ ಸಿಂಹಾಸನಕ್ಕೆ ತಂದನು. ಇದರಿಂದಾಗಿ ಕೃಷ್ಣದೇವರಾಯನು 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನು ಪಡೆದುಕೊಂಡನು.

ಸಿಲೋನ್‌ನಲ್ಲಿ ಶಾಂತಿ: ದ್ವೀಪರಾಷ್ಟ್ರವಾದ ಸಿಲೋನ್ (ಶ್ರೀಲಂಕಾ)ನಲ್ಲಿ ರಾಜಕೀಯ ಅಸ್ಥಿರತೆ ತಲೆದೋರಿತ್ತು. ಅಲ್ಲಿನ ರಾಜನಾದ ವಿಜಯಬಾಹುವಿನ ವಿರುದ್ಧ ಬಂಡಾಯಗಳು ತಲೆದೋರಿದ್ದವು. ಕೃಷ್ಣದೇವರಾಯನು ಅಲ್ಲಿನ ರಾಜಕೀಯದಲ್ಲಿ ಮಧ್ಯಪ್ರವೇಶ ಮಾಡಿ ಶಾಂತಿ ಸ್ಥಾಪಿಸಿದನು. ವಿಜಯಬಾಹುವಿನ ಮಗ ಭುವನೈಕ್ಯಬಾಹುವನ್ನು ಅಧಿಕಾರಕ್ಕೆ ತಂದನು.

ಕೃಷ್ಣದೇವರಾಯನ ಕೊನೆಯ ದಿನಗಳು ದುಃಖದಿಂದ ಕೂಡಿದ್ದವು. ಸಾ.ಶ.1524 ರಲ್ಲಿ ಅವನ ಏಕಮಾತ್ರ ಪುತ್ರ ತಿರುಮಲನು ಸಂಶಯಾಸ್ಪದ ರೀತಿಯಲ್ಲಿ ತೀರಿಕೊಂಡನು. ಈ ಘಟನೆಯಿಂದ ಮನನೊಂದ ರಾಜನು ಸಾ.ಶ.1529 ರಲ್ಲಿ ಮರಣ ಹೊಂದಿದನು.

ಕೃಷ್ಣದೇವರಾಯನು ವಿಜಯನಗರದ ಶ್ರೇಷ್ಠ ದೊರೆಯಾಗಿದ್ದನು. ಇವನು ಸ್ವತ: ಕವಿಯಾಗಿದ್ದು ಆಮುಕ್ತಮಾಲ್ಯದ, ಜಾಂಬವತಿ ಕಲ್ಯಾಣಂ ಹಾಗೂ ಉಷಾಪರಿಣಯಂ ಎಂಬ ಕೃತಿಗಳನ್ನು ರಚನೆ ಮಾಡಿದನು. ಇವನ ಆಸ್ಥಾನದಲ್ಲಿ ಅಷ್ಟದಿಗ್ಗಜರು ಎಂಬ ಎಂಟು ಕವಿಗಳು ಇದ್ದರು. ಸಿಂಹಾಸನಕ್ಕೆ ಬಂದ ಕ್ಷಣದಿಂದಲೇ ವಿವಾಹ ಸುಂಕವನ್ನು ರದ್ದುಪಡಿಸಿದನು. ಇವನು ತಿರುಪತಿ ವೆಂಕಟೇಶ್ವರನ ಭಕ್ತನಾಗಿದ್ದನು. ತನ್ನ ತಾಯಿ ನಾಗಲಾದೇವಿ ಸ್ಮರಣಾರ್ಥಕವಾಗಿ ನಾಗಾಲಾಪುರ(ಹೊಸಪೇಟೆ) ಎಂಬ ನಗರವನ್ನು ನಿರ್ಮಿಸಿದನು. ವ್ಯಾಸತೀರ್ಥ ಎಂಬ ಪಂಡಿತರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಗೌರವಿಸಿದನು. ಹಂಪಿಯಲ್ಲಿ ಪುರಂದರ ಮಂಟಪ ನಿರ್ಮಿಸಿದನು. ಕವಿ ಅಲ್ಲಸಾನಿ ಪೆದ್ದನ್ನನನ್ನು ಪಟ್ಟದ ಆನೆಯ ಮೇಲೆ ಕುಳ್ಳಿರಿಸಿ ಗೌರವಿಸಿದನು. ಕೃಷ್ಣದೇವರಾಯನು ಕುಡಿಯುವ ನೀರು ಹಾಗೂ ನೀರಾವರಿಗಾಗಿ ಹಲವಾರು ಕೆರೆಕಾಲುವೆಗಳನ್ನು ನಿರ್ಮಿಸಿದನು. ಅವು ಇಂದಿಗೂ ರೈತರ ಬಳಕೆಗೆ ಯೋಗ್ಯವಾಗಿವೆ. ಹಂಪಿಯ ಜನತೆಗಾಗಿ ಬೃಹದಾಕಾರದ ಜಲಾಶಯ ನಿರ್ಮಿಸಿ ಕಾಲುವೆಗಳ ಮೂಲಕ ನೀರು ರಾಜಧಾನಿಯಲ್ಲಿ ಹರಿಯುವಂತೆ ಮಾಡಿದನು. ರಾಜನು ಸ್ವತಃ ಕಲಾಕಾರನಾಗಿದ್ದನು ಮತ್ತು ಇತರರಿಗೆ ಸ್ಫೂರ್ತಿ ನೀಡುತ್ತಿದ್ದನು. ಇದಕ್ಕೆ ನಿದರ್ಶನವೆಂದರೆ ವಿರೂಪಾಕ್ಷಸ್ವಾಮಿಯ ಚೈತ್ರೋತ್ಸವದ ಸಮಯದಲ್ಲಿ ತಾನೇ ಬರೆದ ನಾಟಕ ಜಾಂಬವತಿ ಕಲ್ಯಾಣಂದಲ್ಲಿ ಕೃಷ್ಣನ ಪಾತ್ರ ಮಾಡಿ ಪ್ರದರ್ಶನ ನೀಡುವ ಮೂಲಕ ಜನರಿಂದ ಮೆಚ್ಚುಗೆಯನ್ನು ಪಡೆದನು. ಇವನಿಗೆ 'ಕನ್ನಡರಾಜ್ಯರಮಾರಮಣ', 'ಕವಿಪುಂಗವ', 'ಕರ್ನಾಟಕಾಂಧ್ರಭೋಜ', 'ಯವನರಾಜ್ಯಪ್ರತಿಷ್ಠಾಪನಾಚಾರ್ಯ', ಮುಂತಾದ ಬಿರುದುಗಳು ಇದ್ದವು.

ತಾಳಿಕೋಟೆ ಕದನ – ಸಾ.ಶ. 1565

ತಾಳಿಕೋಟೆ ಕದನವು ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಒಂದು ನಿರ್ಣಾಯಕ ಕದನವಾಗಿತ್ತು. ಈ ಕದನವು 40 ಕಿ.ಮೀ. ವ್ಯಾಪ್ತಿಯಲ್ಲಿ ನಡೆಯಿತು. ತಾಳಿಕೋಟೆ ಸಮೀಪದ ರಕ್ಕಸಗಿ ಮತ್ತು ತಂಗಡಗಿ ಗ್ರಾಮಗಳ ಮಧ್ಯದಲ್ಲಿ ಕದನ ನಡೆಯಿತು. ಹೀಗಾಗಿ ಈ ಕದನವನ್ನು ತಾಳಿಕೋಟೆ ಕದನ ಅಥವಾ ರಕ್ಕಸ–ತಂಗಡಿ ಕದನವೆಂದು ಕರೆಯಲಾಗಿದೆ. ಕೆಲವು ವಿದ್ವಾಂಸರ ಪ್ರಕಾರ ಈ ನಿರ್ಣಾಯಕ ಕದನವು ಕೃಷ್ಣಾ ಬನ್ನಿಹಟ್ಟಿ ಎಂಬಲ್ಲಿ ನಡೆದಿದ್ದರಿಂದ ಇದನ್ನು ಬನ್ನಿಹಟ್ಟಿ ಕದನವೆಂದೂ ಕರೆಯುತ್ತಾರೆ. ಈ ಕದನದಲ್ಲಿ ವಿಜಯನಗರದ ನಾಯಕತ್ವವನ್ನು ಅಳಿಯ ರಾಮರಾಯನು ವಹಿಸಿದ್ದನು. ವಿರೋಧಿ ಗುಂಪಿನಲ್ಲಿ ಷಾಹಿಸುಲ್ತಾನರ ಒಕ್ಕೂಟ ಸೈನವಿತ್ತು. ಬಿಜಾಪುರದ ಆದಿಲ್‌ಷಾ, ಅಹ್ಮದನಗರದ ನಿಜಾಮ್‌ಷಾ, ಗೋಲ್ಕೊಂಡದ ಕುತುಬ್‌ಷಾ ಹಾಗೂ ಬೀದರಿನ ಬರೀದ್‌ಷಾ ಸುಲ್ತಾನರ ಸೈನಿಕರು ಈ ಮಹಾ ಸೈನ್ಯದಲ್ಲಿದ್ದರು.

ಯುದ್ಧಕ್ಕೆ ಕಾರಣಗಳು:

1. **ದೊ–ಅಬ್ ಪ್ರದೇಶದ ಮೇಲಿನ ಪ್ರಭುತ್ವ:** ಫಲವತ್ತಾದ ಕೃಷ್ಣಾ–ತುಂಗಭದ್ರಾ ನದಿಗಳ ನಡುವಣ ದೊ–ಅಬ್ ಪ್ರದೇಶವು ಎರಡು ಶಕ್ತಿಗಳ ನಡುವೆ ವೈರತ್ವಕ್ಕೆ ಕಾರಣವಾಗಿ ಈ ಯುದ್ಧಕ್ಕೂ ಕಾರಣವಾಯಿತು.
2. **ಧಾರ್ಮಿಕ ಭಿನ್ನತೆ:** ವಿಜಯನಗರ ಹಾಗೂ ಷಾಹಿ ಸುಲ್ತಾನರ ನಡುವೆ ಇದ್ದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಭಿನ್ನತೆಗಳೂ ಯುದ್ಧಕ್ಕೆ ಒಂದು ಕಾರಣವಾಯಿತು.

3. **ಅಳಿಯ ರಾಮರಾಯನ ನೀತಿ:** ಅರವೀಡು ಮನೆತನದ ರಾಮರಾಯನು ಕೃಷ್ಣದೇವರಾಯನ ಮಗಳನ್ನು ವಿವಾಹವಾಗಿ ಅಳಿಯ ರಾಮರಾಯನೆಂದು ಪ್ರಸಿದ್ಧನಾದನು. ಇವನು ಅಚ್ಯುತರಾಯ ಹಾಗೂ ಸದಾಶಿವರಾಯರ ಕಾಲದಲ್ಲಿ ಸರ್ವಾಧಿಕಾರಿಯಾಗಿ ಹೊರಹೊಮ್ಮಿದನು. ಷಾಹಿ ಸುಲ್ತಾನರ ಆಂತರಿಕ ಕಚ್ಚಾಟದಲ್ಲಿ ಇವನು ಹಸ್ತಕ್ಷೇಪ ಮಾಡಿದನು. ಬಿಜಾಪುರ ಹಾಗೂ ಅಹ್ಮದನಗರದ ಸುಲ್ತಾನರೊಂದಿಗೆ ಒಡೆದು ಆಳುವ ನೀತಿಯನ್ನು ಅನುಸರಿಸಿದನು. ಷಾಹಿಗಳು ತಮ್ಮ ವೈಮನಸ್ಸು ಮರೆತು ವೈವಾಹಿಕ ಸಂಬಂಧಗಳ ಮೂಲಕ ಒಂದಾದರು. ಇದರ ಪರಿಣಾಮವಾಗಿ ಬಿಜಾಪುರ, ಅಹ್ಮದನಗರ, ಗೋಲ್ಕೊಂಡ ಹಾಗೂ ಬೀದರ್‌ನ ಷಾಹಿ ಸುಲ್ತಾನರ ಬೃಹತ್ ಸೇನಾ ಒಕ್ಕೂಟ ರಚನೆಯಾಯಿತು.

4. **ತಕ್ಷಣದ ಕಾರಣ:** ಬಿಜಾಪುರದ ಅಲಿ ಆದಿಲ್‌ಷಾಹನು ಅಳಿಯ ರಾಮರಾಯನನ್ನು ರಾಯಚೂರು ಕೋಟೆಯನ್ನು ಹಿಂತಿರುಗಿಸಬೇಕೆಂದು ಒತ್ತಾಯಿಸಿದನು. ಇದನ್ನು ನಿರಾಕರಿಸಿದ ರಾಮರಾಯನು ಯುದ್ಧಭೂಮಿಯಲ್ಲಿ ಕೋಟೆಯನ್ನು ಮರಳಿ ಪಡೆಯಲು ತಿಳಿಸಿದನು. ಇದು ಕದನಕ್ಕೆ ತಕ್ಷಣದ ಕಾರಣವಾಯಿತು.

ಯುದ್ಧದ ಗತಿ : ಸಾ.ಶ.1565 ರ ಜನವರಿ 23 ನೇ ಮಂಗಳವಾರ ಕದನ ಜರುಗಿತು. ಕದನದಲ್ಲಿ 90 ವರ್ಷ ವಯಸ್ಸಿನ ಅಳಿಯ ರಾಮರಾಯ ವೀರಾವೇಶದಿಂದ ಹೋರಾಡಿದನು. ಆರಂಭದಲ್ಲಿ ವಿಜಯನಗರದ ಸೈನ್ಯವು ಮೇಲುಗೈ ಸಾಧಿಸಿತು. ಆದರೆ ಷಾಹಿ ಸೈನಿಕರಿಗೆ ಸೆರೆಯಾದ ರಾಮರಾಯನನ್ನು ಶಿರಚ್ಛೇದ ಮಾಡಿ ರಣರಂಗದಲ್ಲಿ ಪ್ರದರ್ಶಿಸಿದರು. ಇದನ್ನು ಕಂಡ ವಿಜಯನಗರದ ಸೈನಿಕರು ಭಯಗೊಂಡು ದಿಕ್ಕಾಪಾಲಾಗಿ ಓಡಿದರು. ಷಾಹಿ ಸುಲ್ತಾನರಿಗೆ ಜಯವಾಯಿತು. ಈ ರೀತಿ ದಕ್ಷಿಣ ಭಾರತ ಇತಿಹಾಸದಲ್ಲಿನ ನಿರ್ಣಾಯಕ ಕದನವು ಒಂದೇ ದಿನದಲ್ಲಿ ಮುಕ್ತಾಯವಾಯಿತು.

ಪರಿಣಾಮಗಳು:

1. ವಿಜಯನಗರ ಸಾಮ್ರಾಜ್ಯವು ತನ್ನ ವೈಭವವನ್ನು ಕಳೆದು ಕೊಂಡಿತು. ಕದನದಲ್ಲಿ ವಿಜಯಿಗಳಾದ ಷಾಹಿ ಸುಲ್ತಾನರು ವಿಜಯನಗರವನ್ನು ಅನೇಕ ತಿಂಗಳುಗಳ ಕಾಲ ಲೂಟಿ ಮಾಡಿದರು.
2. ಪೋರ್ಚುಗೀಸರಿಗೆ ವಿಜಯನಗರದ ಬೆಂಬಲವಿಲ್ಲದ್ದರಿಂದ ಅವರು ಕೇವಲ ಗೋವಾ ಪ್ರದೇಶಕ್ಕೆ ಸೀಮಿತವಾದರು. ಇದರಿಂದ ಅವರ ವ್ಯಾಪಾರಕ್ಕೆ ಹಿನ್ನಡೆಯಾಯಿತು.
3. ಶೃಂಗೇರಿ, ತಿರುಪತಿ, ಶ್ರೀಶೈಲ ಮತ್ತು ಕಾಳಹಸ್ತಿಯಂತಹ ಹಲವಾರು ಧಾರ್ಮಿಕ ಕೇಂದ್ರಗಳಿಗೆ ದತ್ತಿ ನಿಂತುಹೋಯಿತು. ಇದರಿಂದ ಧಾರ್ಮಿಕ ಬೆಳವಣಿಗೆಗೆ ಅಡ್ಡಿಯಾಯಿತು.
4. ಆಂಧ್ರ ಪ್ರದೇಶದ ಪೆನುಗೊಂಡ ಹಾಗೂ ಚಂದ್ರಗಿರಿಯಿಂದ ಆಡಳಿತ ಮಾಡಲು ಆರಂಭಿಸಿದ ಅರವೀಡು ಮನೆತನವು ದಕ್ಷಿಣ ಭಾರತದ ಮೇಲೆ ನಿಯಂತ್ರಣ ಸಾಧಿಸಲು ಅಸಮರ್ಥವಾಯಿತು.
5. ದಕ್ಷಿಣ ಭಾರತದಲ್ಲಿ ಆಡಳಿತ ಮಾಡುತಿದ್ದ ವಿಜಯನಗರದ ಸಾಮಂತರಾಗಿದ್ದ ನಾಯಕರು ಹಾಗೂ ಪಾಳೆಯಗಾರರು ಸ್ವತಂತ್ರರಾದರು. ಇದರಿಂದಾಗಿ ವಿಜಯನಗರ ಸಾಮ್ರಾಜ್ಯವು ವಿಘಟನೆಯಾಯಿತು.

ಸಾಂಸ್ಕೃತಿಕ ಕೊಡುಗೆಗಳು

1.ಆಡಳಿತ : ವಿಜಯನಗರದ ಅರಸರು ಆಡಳಿತ ವ್ಯವಸ್ಥೆಯೊಂದನ್ನು ಒದಗಿಸಿದರು. ಅಲ್ಲದೇ ಅವರು ಸಾಮ್ರಾಜ್ಯಕ್ಕೆ ಆಂತರಿಕ ಶಾಂತಿ ಹಾಗೂ ಬಾಹ್ಯ ಶತ್ರುಗಳಿಂದ ರಕ್ಷಣೆಯನ್ನು ಒದಗಿಸಿದರು ಅಧಿಕಾರ ವಿಕೇಂದ್ರೀಕರಣದೊಂದಿಗೆ ವಿಜಯನಗರದ ಅರಸರು ಬಲಿಷ್ಠವಾದ ಕೇಂದ್ರಸರ್ಕಾರವನ್ನು ಜಾರಿಗೆ ತಂದರು.

ಕೇಂದ್ರೀಯ ಆಡಳಿತ: ರಾಜಪ್ರಭುತ್ವ ರೂಢಿಯಲ್ಲಿತ್ತು. ರಾಜನೇ ರಾಜ್ಯದ ಮುಖ್ಯಸ್ಥನಾಗಿದ್ದನು. ಪ್ರಜಾರಕ್ಷಣೆ ಹಾಗೂ ಅವರ ಹಿತಗಳನ್ನು ಕಾಪಾಡುವುದು ರಾಜನ ಕರ್ತವ್ಯವಾಗಿತ್ತು. ರಾಜನು ಮುಖ್ಯ ಕಾನೂನು ರಚನಾಕಾರ ಹಾಗೂ ಸರ್ವೋಚ್ಚ ನ್ಯಾಯಾಧೀಶನಾಗಿದ್ದನು. ನ್ಯಾಯಸಮ್ಮತವಾದ ಚತುರ ನಿರ್ಣಯಗಳಿಗೆ ವಿಜಯನಗರದ ಅರಸರು ಹೆಸರುವಾಸಿಯಾಗಿದ್ದರು. ಅಪರಾಧಿಗಳಿಗೆ ಮರಣದಂಡನೆ, ಸೆರೆವಾಸ ಮತ್ತು ದಂಡವನ್ನು ಶಿಕ್ಷೆಗಳಾಗಿ ವಿಧಿಸಲಾಗುತ್ತಿತ್ತು. ಕೆಲವೊಂದು ಸಂದರ್ಭಗಳಲ್ಲಿ ಅಪರಾಧಿಗಳನ್ನು ಆನೆಕಾಲಿನಿಂದ ತುಳಿಸಿ ಸಾಯಿಸುವ ಶಿಕ್ಷೆ ಕೊಡಲಾಗುತಿತ್ತು.

ರಾಜಪ್ರಭುತ್ವವು ಆನುವಂಶಿಕವಾಗಿತ್ತು. ಯುವರಾಜನು ಆಡಳಿತದಲ್ಲಿ ಭಾಗವಹಿಸುತ್ತಿದ್ದನು. ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ರಾಜನಿಗೆ ಸಹಾಯ ಮಾಡಲು ಮಂತ್ರಿಮಂಡಲವಿತ್ತು. ಆಡಳಿತದಲ್ಲಿ ಮಂತ್ರಿಗಳು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು. ಅವರು ಆಡಳಿತದ ವಿವಿಧ ಇಲಾಖೆಗಳ ಮೇಲ್ವಿಚಾರಣೆ ನೋಡಿಕೊಳ್ಳುವುದರೊಂದಿಗೆ, ರಾಜನಿಗೆ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಲಹೆ ನೀಡುತ್ತಿದ್ದರು. ಆ ಕಾಲದ ವಿವಿಧ ಪ್ರಮುಖ ಅಧಿಕಾರಿಗಳೆಂದರೆ: ಮಹಾಪ್ರಧಾನಿ, ಉಪಪ್ರಧಾನಿ, ದಂಡನಾಯಕ, ಮಹಾಸಾಮಂತಾಧಿಪತಿ, ರಾಯಭಂಡಾರಿ, ಸಭಾನಾಯಕ (ಪರಿಷತ್‌ನ ಮುಖ್ಯಸ್ಥ) ಹಾಗೂ ಮಹಾಸಂದಿವಿಗ್ರಹಿ (ವಿದೇಶಾಂಗ ವ್ಯವಹಾರ). ಗೂಢಚಾರ ವ್ಯವಸ್ಥೆಯು ಉತ್ತಮವಾಗಿ ಸಂಘಟಿಸಲ್ಪಟ್ಟಿತ್ತು.

ಪ್ರಾಂತೀಯ ಆಡಳಿತ: ವಿಜಯನಗರ ಸಾಮ್ರಾಜ್ಯದಲ್ಲಿ ಎರಡು ರೀತಿಯ ಪ್ರಾಂತ್ಯಗಳಿದ್ದವು. ರಾಜನ ಪ್ರತಿನಿಧಿಗಳಿಂದ ಆಳಲ್ಪಡುವುದು ಮೊದಲನೆಯದಾಗಿದ್ದರೆ, ಸಾಮಂತರದ್ದು ಎರಡನೆಯ ರೀತಿಯದ್ದಾಗಿತ್ತು. ಸಾಮಂತರಿಂದ ಆಳಲ್ಪಡುತ್ತಿದ್ದ ಪ್ರಾಂತೀಯ ಆಡಳಿತವನ್ನು 'ನಾಯಂಕರ' ಪದ್ಧತಿ ಎಂದು ಕರೆಯುತ್ತಿದ್ದರು. ಕಾನೂನು ಮತ್ತು ಶಾಂತಿ ಪಾಲನೆ ನೋಡಿಕೊಳ್ಳುವುದು ಪ್ರಾಂತ್ಯಾಧಿಕಾರಿಗಳ ಕರ್ತವ್ಯವಾಗಿತ್ತು. ನಾಯಂಕರ ಪದ್ಧತಿಯು ಸಾಮಂತರಿಗೆ ಹೆಚ್ಚಿನ ಸ್ವಾಯತ್ತತೆ ನೀಡಿತ್ತು. ರಾಜನು ಈ ಪ್ರಾಂತ್ಯಾಧಿಕಾರಿಗಳನ್ನು ವರ್ಗಾಯಿಸುವ ಅಥವಾ ತೆಗೆದು ಹಾಕುವ ಅಧಿಕಾರವನ್ನು ಹೊಂದಿದ್ದನು.

ರಾಜನನ್ನು ಭೂಮಿಯ ಒಡೆಯನೆಂದು ಪರಿಗಣಿಸಲಾಗಿತ್ತು. ತನ್ನ ಅವಲಂಬಿತರಿಗೆ ಅವನು ಭೂಮಿಯನ್ನು ವಿತರಿಸುತ್ತಿದ್ದನು. ಭೂಮಿಯ ಮೇಲ್ವಿಚಾರಣೆಯನ್ನು ನೋಡಿಕೊಳುತ್ತಿದ್ದ ಅವಲಂಬಿತರನ್ನು ನಾಯಕರು ಎನ್ನುತ್ತಿದ್ದರು. ಈ ನಾಯಕರು ರಾಜನಿಗೆ ವಾರ್ಷಿಕ ಕಪ್ಪಕಾಣಿಕೆಗಳನ್ನು ಸಲ್ಲಿಸಬೇಕಾಗಿತ್ತು ಮತ್ತು ಯುದ್ಧಗಳಿಗಾಗಿ ಸೈನ್ಯ ಪಡೆಗಳನ್ನು ನಿರ್ವಹಣೆ ಮಾಡಬೇಕಾಗಿತ್ತು. ನಾಯಕರು ಸೈನ್ಯದ ವ್ಯವಸ್ಥಾಕರಾಗಿದ್ದರು ಮತ್ತು ರಾಜನ ಹಣಕಾಸಿನ ಬೇಡಿಕೆಗಳನ್ನೂ ಪೂರೈಸುತ್ತಿದ್ದರು. ನಾಯಕರು ತಮ್ಮ ನಾಗರಿಕ ಹಾಗೂ ಸೈನ್ಯದ ಪ್ರತಿನಿಧಿಗಳನ್ನು ರಾಜನ ಆಸ್ಥಾನದಲ್ಲಿ ಇರಿಸುತ್ತಿದ್ದರು. ಇದು ಸುಗಮ ಆಡಳಿತಕ್ಕೆ ಸಹಾಯಕವಾಗಿತ್ತು.

ಗ್ರಾಮಾಡಳಿತ: ಗ್ರಾಮವು ಆಡಳಿತದ ಅತೀ ಚಿಕ್ಕ ಘಟಕವಾಗಿತ್ತು. ಅಗ್ರಹಾರ ಹಾಗೂ ಪಟ್ಟಣಗಳು ಇತರ ಘಟಕಗಳಾಗಿದ್ದವು. ಗ್ರಾಮ ಸಭೆಗಳು ಗ್ರಾಮದ ಪ್ರಗತಿಯನ್ನು ನೋಡಿಕೊಳ್ಳುತ್ತಿದ್ದವು. ಗ್ರಾಮ ಸಭೆಗಳ ಪ್ರಮುಖ ಕಾರ್ಯಗಳೆಂದರೆ ಕೆರೆ, ಕಾಲುವೆ, ದೇವಾಲಯ, ಸಭಾಭವನ ನಿರ್ಮಾಣ ಮಾಡುವುದು ಹಾಗೂ ಕುಡಿಯುವ ನೀರು ಹಾಗೂ ನೀರಾವರಿ ಸೌಲಭ್ಯಗಳ ನಿರ್ವಹಣೆ ಮಾಡುವುದಾಗಿತ್ತು. ಗೌಡನು ಗ್ರಾಮಾಡಳಿತದ ಮುಖ್ಯಸ್ಥನಾಗಿದ್ದನು. ಕಂದಾಯ ಸಂಗ್ರಹಣೆಯು ಅವನ ಮುಖ್ಯ ಕರ್ತವ್ಯವಾಗಿತ್ತು. ಕರಣಿಕನು ಗ್ರಾಮದ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದನು. ಗ್ರಾಮದ ಇನ್ನೊಬ್ಬ ಅಧಿಕಾರಿ ತಳವಾರನಾಗಿದ್ದನು. ಇವನು ಪೊಲೀಸ್ ಕೆಲಸ ನಿರ್ವಹಿಸುತ್ತಿದ್ದನು.

ಭೂಕಂದಾಯ ವ್ಯವಸ್ಥೆ: ಭೂಕಂದಾಯವು ರಾಜ್ಯಾದಾಯದ ಪ್ರಮುಖ ಮೂಲವಾಗಿತ್ತು. ಸಾಮಾನ್ಯವಾಗಿ ಇದು ಒಟ್ಟು ಉತ್ಪಾದನೆಯ 1/6 ಭಾಗದ ದರದಲ್ಲಿ ಇತ್ತು. ಆಸ್ತಿ ಹಾಗೂ ವಾಣಿಜ್ಯ ತೆರಿಗೆಗಳು, ಕೈಗಾರಿಕಾ ತೆರಿಗೆಗಳು ಯುದ್ಧದಲ್ಲಿ ಕೊಳ್ಳೆ ಹೊಡೆದ ಸಂಪತ್ತು ನ್ಯಾಯಿಕ ದಂಡಗಳು ಮತ್ತು ವೇಶ್ಯಾವಾಟಿಕೆಯನ್ನು ಒಳಗೊಂಡಂತೆ ಎಲ್ಲಾ ವೃತ್ತಿಗಳ ಮೇಲೆ ತೆರಿಗೆಗಳು ರಾಜ್ಯಾದಾಯದ ಇತರ ಮೂಲಗಳಾಗಿದ್ದವು. ತೆರಿಗೆಗಳನ್ನು ನಗದು ಅಥವಾ ವಸ್ತುಗಳ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು.

ಸೈನ್ಯ ಸಂಘಟನೆ: ವಿಜಯನಗರ ಸಾಮ್ರಾಜ್ಯವು ತನ್ನ ವಿಶಾಲವಾದ ಪ್ರದೇಶವನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಬಲಿಷ್ಠವಾದ ಸೈನ್ಯ ಹೊಂದಿತ್ತು. ಆ ಸೈನ್ಯವು ಆನೆ, ಕುದುರೆ ಹಾಗೂ ಕಾಲುದಳಗಳಿಂದ ಕೂಡಿತ್ತು. ಅರೇಬಿಯಾದ ಕುದುರೆಗಳನ್ನು ಅವರು ಪೋರ್ಚುಗೀಸರಿಂದ ತರಸಿಕೊಳ್ಳುತ್ತಿದ್ದರು. ಯುದ್ಧಗಳಲ್ಲಿ ಕೋಟೆಗಳು ಬಹುಮುಖ್ಯ ಪಾತ್ರ ವಹಿಸುತ್ತಿದ್ದವು. ಪ್ರತಿವರ್ಷ ಮಹಾನವಮಿ ಉತ್ಸವದ ಸಂದರ್ಭದಲ್ಲಿ ಸೈನ್ಯದ ಎಲ್ಲಾ ತುಕಡಿಗಳ ಸಾಮರ್ಥ್ಯವನ್ನು ಪರೀಕ್ಷಿಸಲು ಪ್ರದರ್ಶನ ಏರ್ಪಡಿಸಲಾಗುತ್ತಿತ್ತು.

2. ಸಾಮಾಜಿಕ ಸ್ಥಿತಿ: ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಾಜಿಕ ಸಾಮರಸ್ಯ ಅಸ್ತಿತ್ವದಲ್ಲಿತ್ತು. ಸಮಾಜದಲ್ಲಿ ಬ್ರಾಹ್ಮಣರು ಉನ್ನತ ಸ್ಥಾನ ಹೊಂದಿದ್ದರು. ಕಮ್ಮಾರರು, ಅಕ್ಕಸಾಲಿಗರು, ನೇಕಾರರು, ಕೃಷಿಕರು ಹಾಗೂ ವ್ಯಾಪಾರಿಗಳು ಸಾಮಾಜಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಾಮಾನ್ಯವಾಗಿ ಮಹಿಳೆಯರು ಸಮಾಜದಲ್ಲಿ ಗೌರವದ ಸ್ಥಾನವನ್ನು ಹೊಂದಿದ್ದರು. ಕೆಲವೇ ಮಹಿಳೆಯರು ಶಿಕ್ಷಣ ಪಡೆಯುತ್ತಿದ್ದರು. ಅವರು ನೃತ್ಯ ಹಾಗೂ ಸಂಗೀತ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಅಂದಿನ ಸಮಾಜದಲ್ಲಿ ಅಸ್ಥಿತ್ವದಲ್ಲಿದ್ದ ಅನಿಷ್ಠ ಆಚರಣೆಗಳಾದ ಸತಿಪದ್ಧತಿ, ವೇಶ್ಯಾವಾಟಿಕೆ, ಬಾಲ್ಯ ವಿವಾಹ, ಬಹುಪತ್ನಿತ್ವ ಮುಂತಾದವುಗಳು ಮಹಿಳೆಯರ ಸ್ಥಾನಮಾನವನ್ನು ಕುಗ್ಗಿಸಿದ್ದವು. ಮದುವೆಯು ಅವರಿಗೆ ಒಂದು ಪವಿತ್ರ ಬಂಧನವಾಗಿತ್ತು. 'ವಧುದಕ್ಷಿಣೆ' ಕೊಡುವ ಪದ್ಧತಿ ಆಚರಣೆಯಲ್ಲಿತ್ತು.

ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂರು ನೆಲಸಿದ್ದರು. ಅವರಿಗೆ ರಾಜರು ಭದ್ರತೆ ಒದಗಿಸಿದ್ದರು. ಪ್ರಾರ್ಥನೆಗಾಗಿ ಅಲ್ಲಿ ಮಸೀದಿಗಳನ್ನು ನಿರ್ಮಿಸಲಾಗಿತ್ತು. ಮತ್ತು ಕುರಾನ ಗ್ರಂಥವನ್ನು ಗೌರವದ ಸ್ಥಾನದಲ್ಲಿ ಇಡಲಾಗಿತ್ತು. ರಾಜ ಪರಿವಾರದವರು ಹಿಂದೂ, ಬೌದ್ಧ ಹಾಗೂ ಜೈನ ಧರ್ಮದ ದೇವತೆಗಳನ್ನು ಪೂಜಿಸುತ್ತಿದ್ದರು ಹಾಗೂ ಈ ಧರ್ಮಗಳಲ್ಲಿನ ಸಾಮಾನ್ಯ ವಿಧಿ ವಿಧಾನಗಳನ್ನು ಪಾಲಿಸುತ್ತಿದ್ದರು. ಆದ್ದರಿಂದ ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಾಜಿಕ ಸಾಮರಸ್ಯವಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

3. ಆರ್ಥಿಕ ಸ್ಥಿತಿ: ಕೃಷಿಯು ಜನರ ಪ್ರಮುಖ ಉದ್ಯೋಗವಾಗಿತ್ತು. ಭೂ ಮಾಪನ ಮಾಡಿ ಮಣ್ಣಿನ ಗುಣಮಟ್ಟಕ್ಕೆ ಅನುಗುಣವಾಗಿ ಕಂದಾಯವನ್ನು ನಿಗದಿಗೊಳಿಸಲಾಗುತ್ತಿತ್ತು. ಕೃಷಿಗೆ ರಾಜರು ಸೂಕ್ತ ಗಮನ ಕೊಡುತ್ತಿದ್ದರು. ಭೂಮಿಯನ್ನು ನೀರಾವರಿ, ಒಣಬೇಸಾಯ ಹಾಗೂ ತೋಟಗಾರಿಕಾ ಭೂಮಿ ಎಂದು ವಿಭಾಗಿಸಲಾಗಿತ್ತು. ಭತ್ತ, ಬೇಳೆಕಾಳುಗಳು, ಸಾಂಬಾರ ಪದಾರ್ಥಗಳು, ಎಲೆ, ಅಡಿಕೆ, ಶುಂಠಿ, ಅರಿಶಿಣ, ಹಣ್ಣು ಹಾಗೂ ಹೂಗಳು ಪ್ರಮುಖ ಕೃಷಿ ಉತ್ಪನ್ನಗಳಾಗಿದ್ದವು.

ನೀರಾವರಿ ಹಾಗೂ ಕುಡಿಯುವ ನೀರಿನ ಉದ್ದೇಶಗಳಿಗಾಗಿ ಆಣೆಕಟ್ಟುಗಳನ್ನು, ಕೆರೆಗಳನ್ನು ಮತ್ತು ಕಾಲುವೆಗಳನ್ನು ನಿರ್ಮಿಸಲಾಗುತ್ತಿತ್ತು. ನಾಗಲಾಪುರದ ದಕ್ಷಿಣ ದ್ವಾರದ ಹತ್ತಿರ ಬೃಹದಾಕಾರವಾದ ಕೆರೆಯೊಂದು ಕೃಷ್ಣದೇವರಾಯನಿಂದ ನಿರ್ಮಾಣವಾಯಿತು. ಕೋರಂಗಲ್ ಎಂಬಲ್ಲಿ ಆಣೆಕಟ್ಟು ಹಾಗೂ ರಾಯ ಕಾಲುವೆಯನ್ನು ಇವನು ನಿರ್ಮಾಣ ಮಾಡಿದನು. ವ್ಯಾಸರಾಯನು ದಕ್ಷಿಣ ಕರ್ನಾಟಕದಲ್ಲಿ ವ್ಯಾಸಸಮುದ್ರವನ್ನು ನಿರ್ಮಿಸಿದನು. ಅನೇಕ ಬಾವಿಗಳು ಹಾಗೂ ಕೆರೆಗಳ ನಿರ್ಮಾಣ ಹಾಗೂ ಅಭಿವೃದ್ಧಿಯು ಕೃಷಿಗೆ ಸಹಾಯಕವಾಯಿತು.

ವಿಜಯನಗರದ ಅರಸರು ವ್ಯಾಪಾರ ಮತ್ತು ವಾಣಿಜ್ಯವನ್ನು ಪ್ರೋತ್ಸಾಹಿಸಿದರು. ವಿಜಯನಗರ ಸಾಮ್ರಾಜ್ಯವು ಬಟ್ಟೆ, ಅಮೂಲ್ಯವಾದ ಹರಳುಗಳು, ಸಾಂಬಾರ ಪದಾರ್ಥಗಳು ಇತ್ಯಾದಿಗಳ ಚುರುಕಾದ ವ್ಯಾಪಾರಕ್ಕೆ ಹೆಸರುವಾಸಿಯಗಿತ್ತು. ಆ ಕಾಲದ ಅತ್ಯಮೂಲ್ಯ ವಜ್ರಗಳು ಆಂಧ್ರಪ್ರದೇಶದ ವಜ್ರಕರೂರು ಗಣಿಗಳಿಂದ ಪೂರ್ಯಕೆಯಾಗುತ್ತಿದ್ದವು. ಭಾರತದ ವಸ್ತುಗಳಿಗೆ ಪ್ರಪಂಚದಾದ್ಯಂತ ಹೆಚ್ಚಿನ ಬೇಡಿಕೆ ಇತ್ತು. ಬಟ್ಟೆ, ಅಕ್ಕಿ, ಸಕ್ಕರೆ, ಸಾಂಬಾರ ಪದಾರ್ಥಗಳು, ಕಬ್ಬಿಣದ ಅದಿರು ಮತ್ತು ಇತರೆ ವಸ್ತುಗಳು ಆ ಕಾಲದ ಪ್ರಮುಖ ರಫ್ತುಗಳಾಗಿದ್ದವು. ಆನೆ, ಕುದುರೆ, ಮುತ್ತು, ಹವಳ, ಪಾದರಸ, ರೇಷ್ಮೆ ಮುಂತಾದವುಗಳು ಪ್ರಮುಖ ಆಮದುಗಳಾಗಿದ್ದವು. ಪೂರ್ವ ಹಾಗೂ ಪಶ್ಚಿಮ ಕರಾವಳಿಯಲ್ಲಿ ಸುಮಾರು ಇನ್ನೂರು ಬಂದರುಗಳಿದ್ದವು.

4. ಧರ್ಮ: ವಿಜಯನಗರ ಸಾಮ್ರಾಜ್ಯವು ಹಿಂದೂ ಧರ್ಮ ಹಾಗೂ ಸಂಸ್ಕೃತಿಯನ್ನು ಆಕ್ರಮಣಕಾರರ ಧಾರ್ಮಿಕ ದಾಳಿಗಳಿಂದ ರಕ್ಷಿಸಿತ್ತು. ಹಿಂದೂಗಳು, ಜೈನರು ಹಾಗೂ ಮುಸಲ್ಮಾನರಲ್ಲಿ ಧಾರ್ಮಿಕ ಸಹಿಷ್ಣುತೆ ಇತ್ತು. ಸಾಮ್ರಾಜ್ಯದಲ್ಲಿನ ಪ್ರತಿಯೊಂದು ಧರ್ಮವನ್ನು ರಕ್ಷಿಸುವುದು ರಾಜನ ಕರ್ತವ್ಯವಾಗಿತ್ತು. ಇಮ್ಮಡಿ ದೇವರಾಯನ ಕಾಲದಿಂದ ಮುಸ್ಲಿಮರು ವಿಜಯನಗರ ಸೈನ್ಯದಲ್ಲಿ ಸೇರಿದರು. ಸಂಗಮ ಅರಸರು ಶೈವ ಧರ್ಮವನ್ನು ಪ್ರೋತ್ಸಾಹಿಸಿದರು. ನಂತರದ ಅರಸರು ವೈಷ್ಣವ ಧರ್ಮಕ್ಕೆ ಮಹತ್ವ ನೀಡಿದರು.

ಮೊದಲನೇ ದೇವರಾಯನ ರಾಣಿ ಭೀಮಾದೇವಿಯು ಜೈನ ಧರ್ಮದ ಅನುಯಾಯಿಯಾಗಿದ್ದಳು. ಎರಡನೇ ದೇವರಾಯನು ತನ್ನ ರಾಜ್ಯದಲ್ಲಿ ಜೈನ ಬಸದಿಯನ್ನು ನಿರ್ಮಿಸಿದನು. ಒಂದನೇ ಬುಕ್ಕರಾಯನ ಶ್ರವಣಬೆಳಗೊಳದ ಶಾಸನವು ಶ್ರೀವೈಷ್ಣವರು ಮತ್ತು ಜೈನರ ನಡುವಿನ ಶಾಂತಿ ಒಪ್ಪಂದವನ್ನು ಉಲ್ಲೇಖಿಸುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಧಾರ್ಮಿಕ ಸಾಮರಸ್ಯವನ್ನು ಈ ಉದಾಹರಣೆಗಳು ತೋರಿಸುತ್ತವೆ. ಈ ಕಾಲದಲ್ಲಿ ವಚನ ಚಳುವಳಿಯು ಜನಪ್ರಿಯವಾಗಿತ್ತು ಹಾಗೂ ಧರ್ಮಕ್ಕೆ ಹೆಚ್ಚಿನ ಕೊಡುಗೆ ನೀಡಿತು. 'ಶೂನ್ಯ ಸಂಪಾದನೆ' ಎಂಬ ವಚನ ಸಂಗ್ರಹವನ್ನು ಈ ಕಾಲದಲ್ಲಿ ಹೊರತರಲಾಯಿತು. ತೋಂಟದ ಸಿದ್ದಲಿಂಗ ಯತಿ ಅನೇಕ ವಚನಗಳನ್ನು ರಚಿಸಿದರು. ಸಾಮ್ರಾಜ್ಯದ ಅನೇಕ ಭಾಗಗಳಲ್ಲಿ ಮಠಗಳನ್ನು ಸ್ಥಾಪಿಸಲಾಯಿತು. ಪಂಡರಾಪುರದ ವಿಠಲ ದೇವರ ವಾರ್ಕರಿ ಚಳುವಳಿ ಹಾಗೂ ದಾಸಕೂಟ ಸಂಪ್ರದಾಯಗಳು ಪ್ರೋತ್ಸಾಹಿಸಲ್ಪಟ್ಟವು. ಈ ಚಳುವಳಿಗಳು ಶ್ರೀವೈಷ್ಣವ ತತ್ವಗಳನ್ನು ಪ್ರಚಾರ ಮಾಡಿದವು. ಹಂಪಿ, ಶೃಂಗೇರಿ, ಶ್ರವಣಬೆಳಗೊಳ ಶ್ರೀಶೈಲ, ಶ್ರೀಕಾಳಹಸ್ತಿ, ಅಹೋಬಿಲಂ, ಮಧುರೈ, ಶ್ರೀರಂಗಂ ಮತ್ತು ಹುಂಚ ಪ್ರಮುಖವಾದ ಧಾರ್ಮಿಕ ಕೇಂದ್ರಗಳಾಗಿದ್ದವು.

ದೇವಾಲಯಗಳು ಮತ್ತು ಮಠಗಳು ಈ ಕಾಲದ ಎರಡು ಗಮನಾರ್ಹ ಧಾರ್ಮಿಕ ಸಂಸ್ಥೆಗಳಾಗಿದ್ದವು. ದೇವಾಲಯಗಳು ದೇವರ ಆರಾಧನಾ ಕೇಂದ್ರಗಳಾಗಿದ್ದರೆ, ಮಠಗಳು ಧರ್ಮದ ತತ್ವಗಳನ್ನು ಪ್ರಸಾರ ಮಾಡುತ್ತಿದ್ದವು. ಅವುಗಳು ಶಿಕ್ಷಣ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಿದವು. ಶೃಂಗೇರಿ, ಕಂಚಿ. ಗೊಳಕಿ, ಉಡುಪಿ. ಧರ್ಮಪುರಂ ಮತ್ತು ಕೋಡಿಮಠ ವಿಜಯನಗರ ಕಾಲದ ಪ್ರಮುಖವಾದ ಮಠಗಳಾಗಿದ್ದವು. ಕೆಲವು ಸಂದರ್ಭಗಳಲ್ಲಿ ಈ ಮಠ ಮತ್ತು ದೇವಾಲಯಗಳು, ಭೂ ಮಾಲೀಕರಾಗಿ ಹಾಗೂ ಬ್ಯಾಂಕುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಈ ಕಾಲದಲ್ಲಿ ವಿರಕ್ತಮಠಗಳು ಪ್ರಾಮುಖ್ಯತೆ ಪಡೆದವು. ಮಹಾನವಮಿ, ದೀಪಾವಳಿ, ಹೋಳಿ ಮುಂತಾದವುಗಳು ಆ ಕಾಲದ ಪ್ರಮುಖ ಧಾರ್ಮಿಕ ಹಬ್ಬಗಳಾಗಿದ್ದವು.

5. ಶಿಕ್ಷಣ ಮತ್ತು ಸಾಹಿತ್ಯ: ಅಗ್ರಹಾರಗಳು, ಮಠಗಳು ಮತ್ತು ದೇವಾಲಯಗಳು ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದವು. 'ಧೂಳಾಕ್ಷರ' ಎಂಬುದು ಒಂದು ಶಿಕ್ಷಣ ಪದ್ಧತಿಯಾಗಿದ್ದು ಅದು ಕನಕದಾಸರ ಮೋಹನತರಂಗಿಣಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದು ಮರಳಿನ ಮೇಲೆ ಬರೆಯುವ, ಕಲಿಕೆಯ ಪದ್ಧತಿಯಾಗಿತ್ತು.

ಪ್ರಾಥಮಿಕ ಶಿಕ್ಷಣವನ್ನು 'ಬಾಲಬೋಧೆ' ಎಂದು ಕರೆಯಲಾಗಿತ್ತು. ಹಂಪಿ, ಕೋಡಿಮಠ, ಶೃಂಗೇರಿ, ಎಡಿಯೂರು ಹಾಗೂ ಕುಣಿಗಲ್ ಆ ಕಾಲದ ಪ್ರಮುಖವಾದ ಶಿಕ್ಷಣ ಕೇಂದ್ರಗಳಾಗಿದ್ದವು.

ವಿಜಯನಗರದ ಅರಸರು ಸಾಹಿತ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿದರು. ಆಸ್ಥಾನ ಕವಿಗಳು ಮತ್ತು ಪಂಡಿತರನ್ನು ರಾಜರು ಗೌರವಿಸುತ್ತಿದ್ದರು. ಅನೇಕ ರಾಜರು ಮತ್ತು ರಾಣಿಯರು ಸ್ವತಃ ವಿದ್ವಾಂಸರಾಗಿದ್ದರು. ಸಂಸ್ಕೃತ, ಕನ್ನಡ, ತೆಲಗು ಹಾಗೂ ಇತರ ಭಾಷೆಗಳು ಪ್ರೋತ್ಸಾಹಿಸಲ್ಪಟ್ಟಿದವು. ಈ ಕಾಲದ ಕೆಲವು ಪ್ರಮುಖ ಸಾಹಿತ್ಯ ಕೃತಿಗಳೆಂದರೆ:

ಸಂಸ್ಕೃತ :

ಕವಿ/ಸಾಹಿತಿ	ಸಾಹಿತ್ಯ ಕೃತಿಗಳು
ಮಾಧವ–ಸಾಯಣ	ಪರಾಸರ ಮಾಧವೀಯ
ಗಂಗಾದೇವಿ	ವೀರಕಂಪರಾಯ ಚರಿತಂ(ಮಧುರಾವಿಜಯಂ)
ತಿರುಮಲಾಂಬ	ವರದಾಂಬಿಕಾ ಪರಿಣಯಂ
ಗುರು ವಿದ್ಯಾರಣ್ಯ	ರಾಜಕಾಲನಿರ್ಣಯ
ಕೃಷ್ಣದೇವರಾಯ	ಜಾಂಬವತಿಕಲ್ಯಾಣಂ, ಉಷಾ ಪರಿಣಯಂ

ಕನ್ನಡ :

ತೋಂಟದ ಸಿದ್ದಲಿಂಗೇಶ್ವರ	ವಚನಗಳು
ಗುಮ್ಮಳಾಪುರದ ಸಿದ್ಧಲಿಂಗಯತಿ	ಶೂನ್ಯಸಂಪಾದನೆ
ಕುಮಾರವ್ಯಾಸ	ಕರ್ನಾಟಕ ಕಥಾಮಂಜರಿ (ಗದುಗಿನ ಭಾರತ)
ನಂಜುಂಡ ಕವಿ	ಕುಮಾರರಾಮನ ಕಥೆ
ರತ್ನಾಕರವರ್ಣಿ	ಭರತೇಶವೈಭವ
ಭೀಮಕವಿ	ಬಸವಪುರಾಣ
ಚಾಮರಸ	ಪ್ರಭುಲಿಂಗಲೀಲೆ
ವಿರೂಪಾಕ್ಷಪಂಡಿತ	ಚನ್ನಬಸವಪುರಾಣ
ಕನಕದಾಸ	ಮೋಹನತರಂಗಿಣಿ ನಳಚರಿತ, ಹರಿಭಕ್ತಿಸಾರ, ರಾಮಧಾನ್ಯಚರಿತ
ಪುರಂದರದಾಸ	ಕೀರ್ತನೆಗಳು
ನರಹರಿ	ತೊರವೆ ರಾಮಾಯಣ
ನಿಜಗುಣಶಿವಯೋಗಿ	ವಿವೇಕಚಿಂತಾಮಣಿ

ತೆಲುಗು :

ನಾಚನಸೋಮನಾಥ	ಹರಿವಂಶ
ಶ್ರೀನಾಥ	ಕಾಶಿಕಂದ
ಕೃಷ್ಣದೇವರಾಯ	ಆಮುಕ್ತಮಾಲ್ಯದ
ಅಲ್ಲಸಾನಿಪೆದ್ದನ್ನ	ಮನುಚರಿತಮು
(ಬಿರುದು–ಆಂಧ್ರಕವಿತಾ ಪಿತಾಮಹ)	
ವೇಮನ	ಪದ್ಯಗಳು

ಅಷ್ಟದಿಗ್ಗಜರುಗಳು

ಅಷ್ಟದಿಗ್ಗಜರು ಎಂಬ ಎಂಟು ಜನ ಶ್ರೇಷ್ಠ ತೆಲುಗು ಕವಿಗಳು ಕೃಷ್ಣದೇವರಾಯನ ಆಸ್ಥಾನದಲ್ಲಿ ಇದ್ದರು. ಅಲ್ಲಸಾನಿ ಪೆದ್ದನ್ನ, ತೆನಾಲಿರಾಮಕೃಷ್ಣ, ನಂದಿತಿಮ್ಮಣ್ಣ, ರಾಮಭದ್ರಿಯ, ದೂರ್ಜಟಿ, ಮಾದಯ್ಯಗಾರಿ ಮಲ್ಲಣ್ಣ, ಪಿಂಗಳಿ ಸೂರಣ್ಣ ಮತ್ತು ರಾಮರಾಜಭೂಷಣ

6. **ಕಲೆ ಮತ್ತು ವಾಸ್ತುಶಿಲ್ಪ :** ವಿಜಯನಗರದ ಅರಸರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ ಕೊಟ್ಟರು. ರಾಜಧಾನಿ ಹಂಪಿಯು ಶ್ರೇಷ್ಠವಾದ ಕಲೆ ಮತ್ತು ವಾಸ್ತುಶಿಲ್ಪದ ಕೇಂದ್ರವಾಗಿತ್ತು.

ವಾಸ್ತುಶಿಲ್ಪ: ಅವರು ದ್ರಾವಿಡ ಶೈಲಿಯ ವಾಸ್ತುಶಿಲ್ಪವನ್ನು ಬಳಸಿದರು. ನಂತರ ಕೆಲವೊಂದು ವಿಶಿಷ್ಠವಾದ ಲಕ್ಷಣಗಳನ್ನು ಸೇರಿಸಿದರು. ಇದು 'ವಿಜಯನಗರದ ವಾಸ್ತುಶಿಲ್ಪ ಶೈಲಿ' ಎಂದು ಕರೆಯಲ್ಪಟ್ಟಿತು. ವಿಜಯನಗರ ಶೈಲಿಯ ಕೆಲವು ಪ್ರಮುಖ ಲಕ್ಷಣಗಳೆಂದರೆ:

1. ದೇವಾಲಯಗಳು ಗರ್ಭಗೃಹ, ಅರ್ಧಮಂಟಪ, ಸುಖನಾಸಿ, ಮತ್ತು ಮಹಾಮಂಟಪಗಳನ್ನು ಹೊಂದಿವೆ.
2. ಸ್ಮಾರಕಗಳ ನಿರ್ಮಾಣದಲ್ಲಿ ಬೆಣಚುಕಲ್ಲನ್ನು ಬಳಸಲಾಗಿದೆ.
3. ಕಂಬಗಳು ಹಾಗೂ ಆಸರೆಗಂಬಗಳು ಬಹು ಕೋನಗಳನ್ನು ಹೊಂದಿವೆ.
4. ದೇವಾಲಯದ ಗೋಡೆಗಳು ಜನಪದ ಸನ್ನಿವೇಶ, ದೇವಾಧಿದೇವತೆಗಳು, ಆನೆಗಳು, ಕುದುರೆಗಳು ಮುಂತಾದ ಶಿಲ್ಪಗಳಿಂದ ಕೂಡಿವೆ.
5. ದೇವಾಲಯದ ಆವರಣದಲ್ಲಿ ಸಂಗೀತ, ನೃತ್ಯ ಹಾಗೂ ನಾಟಕ ಕಲಾ ಪ್ರದರ್ಶನಕ್ಕಾಗಿ ಸಂಗೀತ ಮಂಟಪಗಳನ್ನು ನಿರ್ಮಿಸಲಾಗಿದೆ.
6. ದೇವಾಲಯಗಳ ಪ್ರವೇಶ ದ್ವಾರದ ಮೇಲೆ ಬೃಹದಾಕಾರದ 'ರಾಯಗೋಪುರ'ಗಳನ್ನು ಕಟ್ಟಲಾಗಿದೆ.
7. ಕಲ್ಯಾಣ ಮಂಟಪವನ್ನು ದೇವಾಲಯಗಳಲ್ಲಿ ದೇವತೆಗಳ ಮದುವೆಗಾಗಿ ನಿರ್ಮಿಸಲಾಗಿದೆ.

ವಿಜಯನಗರದ ಸ್ಮಾರಕಗಳು ದಕ್ಷಿಣ ಭಾರತದಾದ್ಯಂತ ಹರಡಿಕೊಂಡಿವೆ. ಆದರೆ ಅವುಗಳಲ್ಲಿ ಅತ್ಯಂತ ಸುಂದರವಾದವು ಹಂಪೆಯಲ್ಲಿವೆ.

ವಿರೂಪಾಕ್ಷ ದೇವಾಲಯ, ವಿಠಲಸ್ವಾಮಿ ದೇವಾಲಯ, ಕಲ್ಲಿನ ರಥ, ಕೃಷ್ಣಸ್ವಾಮಿ ದೇವಾಲಯ, ಅಚ್ಯುತರಾಯ ದೇವಾಲಯ, ಹಜಾರರಾಮಸ್ವಾಮಿ ದೇವಾಲಯ, ಮಹಾನವಮಿ ದಿಬ್ಬದ ಕಟ್ಟೆ ಹಂಪಿಯಲ್ಲಿವೆ. ಕಮಲ ಮಹಲ್ ಎಂಬ ಹಿಂದೂ–ಇಸ್ಲಾಮಿಕ್ ಶೈಲಿಯ ಕಟ್ಟಡ ವಾಸ್ತುಶಿಲ್ಪಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ.

ಶೃಂಗೇರಿಯ ವಿದ್ಯಾಶಂಕರ, ತಾಡಪತ್ರಿಯ ರಾಮಲಿಂಗೇಶ್ವರ, ಲೇಪಾಕ್ಷಿಯ ವೀರಭದ್ರ, ವೆಲ್ಲೂರಿನ ಜಲಕಂಠೇಶ್ವರ, ಕಂಚಿಪುರದ ಏಕಾಂಬರನಾಥ, ಚಿದಂಬರಂನ ಶಿವ, ಶ್ರೀರಂಗಂನ ಶ್ರೀರಂಗನಾಥ ಮತ್ತು ಮಧುರೈ ಮೀನಾಕ್ಷಿ ಸುಂದರೇಶ್ವರ ದೇವಾಲಯಗಳು ಇತರ ಪ್ರಮುಖ ದೇವಾಲಯಗಳಾಗಿವೆ.


ಕಲ್ಲಿನ ರಥ, ಹಂಪಿ


ಕಮಲ ಮಹಲ್, ಹಂಪಿ


ವಿದ್ಯಾಶಂಕರ ದೇವಾಲಯ, ಶೃಂಗೇರಿ

ಮೂರ್ತಿಶಿಲ್ಪ: ವಾಸ್ತುಶಿಲ್ಪದ ಜೊತೆಯಲ್ಲಿಯೇ ಮೂರ್ತಿಶಿಲ್ಪ ಬೆಳವಣಿಗೆಯಾಯಿತು. ಮೂರ್ತಿಶಿಲ್ಪಕ್ಕೆ ಧರ್ಮ ಪ್ರಧಾನ ಅಂಶವಾಗಿದೆ. ಹಂಪಿಯ ಕಡಲೆಕಾಳು ಗಣೇಶ, ಸಾಸಿವೆಕಾಳು ಗಣೇಶ, ಹಾಗೂ ಲಕ್ಷ್ಮೀ ನರಸಿಂಹ ಮೂರ್ತಿಗಳು ಗಮನಾರ್ಹವಾಗಿವೆ. ತಮಿಳುನಾಡಿನ ತಿರುಪರುತ್ತಿಕುನ್ರಮ್ ಎಂಬಲ್ಲಿನ ಇರುಗಪ್ಪ ದಂಡನಾಯಕನ ಮೂರ್ತಿ ಶಿಲ್ಪವು ಈಕಾಲದ ಮೂರ್ತಿಗಳಲ್ಲಿ ಮೊದಲನೆಯದಾಗಿದೆ. ತಿರುಪತಿ–ತಿರುಮಲದಲ್ಲಿರುವ ಕೃಷ್ಣದೇವರಾಯ ಹಾಗೂ ಅವನ ಪತ್ನಿಯರಾದ ತಿರುಮಲಾದೇವಿ–ಚಿನ್ನಾದೇವಿಯರ ಕಂಚಿನ ಪುತ್ಥಳಿಗಳು ಭಕ್ತಿಪೂರ್ವಕವಾಗಿವೆ. ಚಿದಂಬರಂ ಎಂಬಲ್ಲಿ ಕೃಷ್ಣದೇವರಾಯನ ಕಲ್ಲಿನ ಮೂರ್ತಿ ಶಿಲ್ಪವನ್ನು ಕೂಡಾ ಕಾಣಬಹುದಾಗಿದೆ.

ಚಿತ್ರಕಲೆ: ಇತರ ಕಲೆಗಳೊಂದಿಗೆ ಚಿತ್ರಕಲೆ ಕೂಡಾ ವಿಜಯನಗರ ಸಾಮ್ರಾಜ್ಯದಲ್ಲಿ ಬೆಳವಣಿಗೆಯಾಯಿತು. ಚಿತ್ರಕಲೆಯು ದೇವಾಲಯದ ಗೋಡೆ ಹಾಗೂ ಮೇಲ್ಛಾವಣಿಯಲ್ಲಿ ಕಂಡುಬರುತ್ತವೆ. ಹಂಪಿ, ಆನೆಗೊಂದಿ ಮತ್ತು ಲೇಪಾಕ್ಷಿ ವಿಜಯನಗರದ ಚಿತ್ರಕಲಾ ಕೇಂದ್ರಗಳಾಗಿದ್ದವು. ಹಂಪಿಯ ವಿರೂಪಾಕ್ಷ ದೇವಾಲಯ ಹಾಗೂ ಲೇಪಾಕ್ಷಿಯ ವೀರಭದ್ರ ದೇವಾಲಯಗಳಲ್ಲಿನ ಚಿತ್ರಕಲೆಗಳು ಶೈವ ಪುರಾಣಗಳಿಗೆ ಸಂಬಂಧಿಸಿವೆ. ವಿರೂಪಾಕ್ಷನೊಂದಿಗೆ 'ಪಂಪಾಂಬಿಕೆಯ ವಿವಾಹ' 'ಮದನವಿಜಯ', ಹಾಗೂ 'ತ್ರಿಪುರ ಸಂಹಾರ'ಗಳು ಶ್ರೇಷ್ಠ ಚಿತ್ರಕಲೆಗಳಾಗಿವೆ. ಲೇಪಾಕ್ಷಿಯನ್ನು 'ಶೈವರ ಅಜಂತಾ' ಎಂದು ಕರೆಯಲಾಗಿದೆ.

ಲಲಿತ ಕಲೆಗಳು: ಈ ಕಾಲದಲ್ಲಿ ಸಂಗೀತ ಹಾಗೂ ನೃತ್ಯ ಕಲೆಗಳು ಪ್ರೋತ್ಸಾಹಿಸಲ್ಪಟ್ಟವು. ಅಂದಿನ ದಾಸಕೂಟ–ವ್ಯಾಸಕೂಟಗಳು ಸಂಗೀತದ ಬೆಳವಣಿಗೆಗೆ ಕೊಡುಗೆ ನೀಡಿವೆ. ವಾದಿರಾಜ, ವ್ಯಾಸತೀರ್ಥ, ಪುರಂದರದಾಸ ಹಾಗೂ ಕನಕದಾಸರು ಈ ಸಂಪ್ರದಾಯಕ್ಕೆ ಸೇರಿದವರು. ಅವರು ಕೀರ್ತನೆಗಳೆನ್ನುವ ಭಕ್ತಿ ಗೀತೆಗಳನ್ನು ರಚಿಸಿದರು. ಪುರಂದರದಾಸರನ್ನು 'ಕರ್ನಾಟಿಕ ಸಂಗೀತ ಪಿತಾಮಹ' ಎಂದು ಕರೆಯಲಾಗಿದೆ. ವಿಜಯನಗರದಲ್ಲಿ ಅನೇಕ ಉತ್ತಮ ನೃತ್ಯಾಲಯಗಳಿದ್ದವು. 'ಬಂಧಂ ಲಕ್ಷ್ಮೀ ನಾರಾಯಣ' ಎಂಬ ನೃತ್ಯ ಗುರು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದನು.

ವಿದೇಶೀಯರ ಬರವಣಿಗೆಗಳು:

1. **ನಿಕೋಲೊ ಕೊಂಟಿ :** ಮೊದಲನೇ ದೇವರಾಯನ ಆಳ್ವಿಕೆಯ ಕಾಲದಲ್ಲಿ ಇಟಲಿಯಿಂದ ತನ್ನ ಪತ್ನಿಯೊಡಗೂಡಿ ವಿಜಯನಗರಕ್ಕೆ ಸಾ.ಶ.1421 ರಲ್ಲಿ ಭೇಟಿ ನೀಡಿದನು. ಆತನು "ವಿಜಯನಗರವು ಬೆಟ್ಟಗಳಿಂದ ಸುತ್ತುವರೆದಿದೆ,

ಅದು 60 ಮೈಲಿ ಸುತ್ತಳತೆ ಹೊಂದಿದೆ. ಸುಮಾರು 90,000 ಸೈನಿಕರಿದ್ದಾರೆ ಹಾಗೂ ಇಲ್ಲಿನ ರಾಜ ಬಹು ಶಕ್ತಿಶಾಲಿಯಾಗಿದ್ದಾನೆ", ಎಂದು ಹೇಳಿದ್ದಾನೆ.

2. **ಅಬ್ದುರ್ ರಜಾಕ್ :** ಇವನು ಪರ್ಷಿಯಾದ ರಾಯಭಾರಿಯಾಗಿ ಎರಡನೇ ದೇವರಾಯನ ಆಸ್ಥಾನಕ್ಕೆ ಸಾ.ಶ.1443 ರಲ್ಲಿ ಬಂದಿದ್ದನು. ಈತನು ರಾಯನನ್ನು ಹಾಗೂ ರಾಜಧಾನಿಯನ್ನು ಕುರಿತು ಹೀಗೆ ವಿವರಿಸಿದ್ದಾನೆ– "ಈ ಭೂಮಿಯ ಮೇಲೆ ವಿಜಯನಗರದಂತಹ ನಗರ ಇದ್ದ ಬಗ್ಗೆ ಕಣ್ಣುಗಳು ನೋಡಿಲ್ಲ ಹಾಗೂ ಕಿವಿಗಳು ಕೇಳಿಲ್ಲ, ನಗರವು ಏಳು ಸುತ್ತಿನ ಕೋಟೆಯಿಂದ ಸುತ್ತುವರಿದಿದೆ. ರಾಜನು ಬಲಶಾಲಿಯಾಗಿದ್ದಾನೆ. ಬ್ರಾಹ್ಮಣರು ಗೌರವಿಸಲ್ಪಡುತ್ತಾರೆ. ಈ ನಗರದ ರಕ್ಷಣೆಗಾಗಿ 12000 ರಕ್ಷಣಾ ಸಿಬ್ಬಂದಿ ಇದ್ದಾರೆ. ರಾಜನ ಆಸ್ಥಾನದಲ್ಲಿ ಕುರಾನ್ ಮತ್ತು ಪುರಾಣಗಳನ್ನು ಎತ್ತರದ ಹಾಗೂ ಗೌರವಯುತ ಸ್ಥಾನದಲ್ಲಿ ಇಡಲಾಗಿದೆ". ಅತೀ ವಿಜೃಂಭಣೆಯಿಂದ ಮಹಾನವಮಿ ಉತ್ಸವವನ್ನು ಆಚರಿಸುತ್ತಿದ್ದ ಬಗ್ಗೆ ಇವನು ವಿವರಿಸಿದ್ದಾನೆ.

3. **ನಿಕಿಟಿನ್ :** ಇವನು ರಷ್ಯಾದ ಪ್ರವಾಸಿಯಾಗಿದ್ದು ಸಾ.ಶ.1470 ರಲ್ಲಿ ಬಹಮನಿ ರಾಜ್ಯಕ್ಕೆ ಭೇಟಿ ನೀಡಿದನು. ಇವನು ನೆರೆಯ ವಿಜಯನಗರ ಸಾಮ್ರಾಜ್ಯದ ಜನಜೀವನ ಹಾಗೂ ರಾಜವೈಭವ ಕುರಿತು ವಿವರಣೆ ನೀಡಿದ್ದಾನೆ.

4. **ಡುರೆಟ್ ಬಾರ್ಬೋಸಾ :** ಇವನು ಪೋರ್ಚುಗೀಸ್ ಪ್ರವಾಸಿಯಾಗಿದ್ದು ಸಾ.ಶ.1514ರಲ್ಲಿ ವಿಜಯನಗರಕ್ಕೆ ಬಂದಿದ್ದನು. "ಹಂಪಿಯ ಮಾರುಕಟ್ಟೆಗಳು ಮುತ್ತು, ವಜ್ರ, ರೇಷ್ಮೆ ಮುಂತಾದ ವಸ್ತುಗಳ ಮಾರಾಟದ ಕೇಂದ್ರಗಳಾಗಿವೆ ಸಭಾಭವನದಲ್ಲಿ ರಾಜನು ತನ್ನ ಮಂತ್ರಿಗಳೊಂದಿಗೆ ಆಪ್ತಾಲೋಚನೆ ಮಾಡುತ್ತಾನೆ" ಎಂದು ಹೇಳಿದ್ದಾನೆ.

5. **ಡೊಮಿಂಗೋ ಪಯಾಸ್ :** ಈ ಪೊರ್ಚುಗೀಸ್ ಪ್ರವಾಸಿಯು ಸಾ.ಶ. 1520ರಲ್ಲಿ ಕೃಷ್ಣದೇವರಾಯನ ಆಸ್ಥಾನವನ್ನು ಸಂದರ್ಶಿಸಿದನು. ಮಹಾನವಮಿ ದಿಬ್ಬವು ಉತ್ಸವದ ವೇಳೆ ಅಲಂಕಾರಯುತವಾಗಿರುತ್ತದೆ ಎಂದು ಇವನು ಹೇಳುತ್ತಾನೆ. ರಾಯನ ಬಹುಮುಖ ವ್ಯಕ್ತಿತ್ವವನ್ನು ವರ್ಣಿಸುತ್ತ, ಅವನ ಮುಖದ ಮೇಲೆ ಸಿಡುಬಿನ ಕಲೆಗಳನ್ನು ಹೊಂದಿದ್ದರ ಬಗ್ಗೆ ಉಲ್ಲೇಖಿಸಿದ್ದಾನೆ.

6. **ಫರ್ನಾವೋ ನ್ಯೂನಿಜ್ :** ಪೋರ್ಚುಗಲ್‌ನ ಇನ್ನೊಬ್ಬ ಪ್ರವಾಸಿಯಾದ ಇವನು ಅಚ್ಯುತರಾಯನ ಆಳ್ವಿಕೆಯಲ್ಲಿ ಸಾ.ಶ.1535ರಲ್ಲಿ ವಿಜಯನಗರವನ್ನು ತಲುಪಿದನು. ಇವನ ಬರವಣಿಗೆಗಳು ವಿಜಯನಗರ ಸಾಮ್ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ವಿಜಯನಗರವು ಪ್ರಪಂಚದಲ್ಲಿಯೇ ಅತ್ಯುತ್ತಮ ಮೂಲ ಸೌಕರ್ಯ ಹೊಂದಿದ ನಗರವಾಗಿದೆ ಎಂದು ಹೇಳಿದ್ದಾನೆ.

7. **ಸೀಜರ್ ಫೆಡ್ರಿಸ್:** ಇಟಲಿಯ ಪ್ರವಾಸಿಯಾದ ಇವನು ವಿಜಯನಗರಕ್ಕೆ ಸಾ.ಶ.1567 ರಲ್ಲಿ ಭೇಟಿ ಕೊಟ್ಟಿದ್ದನು. ಇವನು ತಾಳಿಕೋಟೆಯ ಕದನದಲ್ಲಿ ಗಿಲಾನಿ ಸಹೋದರರು ವಹಿಸಿದ ಪಾತ್ರದ ಬಗ್ಗೆ ವಿವರಿಸಿದ್ದಾನೆ. ಅವನ ಬರವಣಿಗೆಯ ಪ್ರಕಾರ ವಿಜಯನಗರವು ತಾಳಿಕೋಟೆ ಕದನದ ನಂತರ ಹಾಳು ಬಿದ್ದ ನಗರವಾಗಿತ್ತು. ಇಲ್ಲಿ ಮಾನವರು ವಾಸಿಸುತ್ತಿರಲಿಲ್ಲ ಮತ್ತು ಕಾಡು ಪ್ರಾಣಿಗಳು ಮಾತ್ರ ವಾಸಿಸುತ್ತಿದ್ದವೆಂದು ಹೇಳಿದ್ದಾನೆ.

ವಿಜಯನಗರ ಸಾಮ್ರಾಜ್ಯದ ವಿಘಟನೆ

ತಾಳಿಕೋಟೆಯ ಕದನದ ನಂತರ ವಿಜಯನಗರ ಸಾಮ್ರಾಜ್ಯವು ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿತು. ಸಾಮ್ರಾಜ್ಯವು ವಿಘಟನೆಗೊಂಡು ಅನೇಕ ನಾಯಕರು, ಪಾಳೆಯಗಾರರು ಹಾಗೂ ಸಣ್ಣಪುಟ್ಟ ರಾಜರು ಸ್ವತಂತ್ರರಾದರು. ನಾಮಮಾತ್ರ ಆಡಳಿತವು ಅರವೀಡು ಸಂತತಿಯಿಂದ ಮುಂದುವರಿಸಲ್ಪಟ್ಟಿತು. ಚಂದ್ರಗಿರಿ ಅವರ ರಾಜಧಾನಿಯಾಗಿತ್ತು

ಮತ್ತು ನಂತರದಲ್ಲಿ ಅದು ಪೆನುಗೊಂಡಕ್ಕೆ ಸ್ಥಳಾಂತರಿಸಲ್ಪಟ್ಟಿತು. ದಕ್ಷಿಣದ ಸಣ್ಣಪುಟ್ಟ ರಾಜ್ಯಗಳು ರಾಜಕೀಯ ಸ್ಥಿರತೆಯನ್ನು ಕೊಟ್ಟವಲ್ಲದೆ ಸಾಂಸ್ಕೃತಿಕ ಪರಂಪರೆಗೆ ಸ್ವಲ್ಪಪ್ರಮಾಣದ ಕೊಡುಗೆ ನೀಡಿದವು. ವಿಜಯನಗರದ ವಿಘಟನೆಯ ನಂತರ ಸ್ವತಂತ್ರರಾದ ಕೆಲವು ಪ್ರಮುಖ ಮನೆತನಗಳು ಈ ಕೆಳಗಿನಂತಿವೆ.

ಯಲಹಂಕದ ನಾಡಪ್ರಭುಗಳು: ಬೆಂಗಳೂರಿಗೆ ಸಮೀಪದ ಯಲಹಂಕ ನಾಡ ಪ್ರಭುಗಳ ರಾಜಧಾನಿಯಾಗಿತ್ತು. ಇವರು ಮೂಲತಃ ತಮಿಳುನಾಡಿನ ಕಾಂಚಿಪುರಂ ಸಮೀಪವಿರುವ ಅತ್ತೂರಿನವರು ಮತ್ತು ನಂತರದಲ್ಲಿ ಬೆಂಗಳೂರಿಗೆ ಸಮೀಪದ ಆವತಿಯಲ್ಲಿ ನೆಲೆಸಿದರು. ರಣಭೈರೇಗೌಡ ಈ ಮನೆತನದ ಸ್ಥಾಪಕ. ವಿಜಯನಗರದ ಸಾಮಂತನಾಗಿದ್ದ ಇವನು ಅರಸರಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದನು. ಕೆಂಪಮ್ಮ ಇವರ ಕುಲದೇವತೆ ಆಗಿದ್ದಳು. ಒಂದನೇ ಕೆಂಪೇಗೌಡನು ಈವಂಶದಲ್ಲಿ ಶ್ರೇಷ್ಠನಾಗಿದ್ದನು. ಇವನು ಸಾ.ಶ.1537 ರಲ್ಲಿ ಬೆಂಗಳೂರು ನಗರವನ್ನು ನಿರ್ಮಿಸಿದ್ದಕ್ಕಾಗಿ ಜನಪ್ರಿಯನಾಗಿದ್ದಾನೆ. ಈ ನಗರದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕಾವಲು ಗೋಪುರಗಳನ್ನು ಇವನು ಕಟ್ಟಿಸಿದನು. ಮಾಗಡಿಯು ಈ ಕಾಲದ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು.

ಕೆಳದಿಯ ನಾಯಕರು (ಸಾ.ಶ.1499–1763) ಇಕ್ಕೇರಿಯ ನಾಯಕರು ಎಂದು ಕರೆಯಲ್ಪಡುವ ಕೆಳದಿಯ ನಾಯಕರು 16 ನೇ ಶತಮಾನದಲ್ಲಿ ಅಧಿಕಾರಕ್ಕೆ ಬಂದರು. ಇವರು ಕರ್ನಾಟಕ, ಕೇರಳ ಮತ್ತು ಗೋವಾದ ಕೆಲವು ಭಾಗಗಳಲ್ಲಿ 250 ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಚೌಡಪ್ಪ ಮತ್ತು ಭದ್ರಪ್ಪ ಎಂಬ ಇಬ್ಬರು ಸಹೋದರರು ಈ ವಂಶವನ್ನು ಸ್ಥಾಪಿಸಿದರು. ಶಿವಪ್ಪ ನಾಯಕ (ಸಾ.ಶ.1645–1660) ಈ ವಂಶದ ಸಮರ್ಥ ಆಡಳಿತಗಾರನಾಗಿದ್ದನು. ಇವನು ತನ್ನ 'ಶಿಸ್ತು' ಎಂಬ ಕಂದಾಯ ಪದ್ಧತಿಯಿಂದ ಪ್ರಸಿದ್ಧನಾಗಿದ್ದಾನೆ. ಈ ನೀತಿಯ ಪ್ರಕಾರ ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಭೂಮಿಯನ್ನು ವರ್ಗೀಕರಿಸಿ, ಸರಾಸರಿ ಉತ್ಪನ್ನದ ಆಧಾರದ ಮೇಲೆ ಭೂಕಂದಾಯವನ್ನು ನಿಗದಿಗೊಳಿಸಲಾಗುತ್ತಿತ್ತು. ಭೂಮಿಯನ್ನು ಐದು ವರ್ಗಗಳಾಗಿ ವಿಂಗಡಿಸಲಾಗಿತ್ತು: (1)ಉತ್ತಮ–ಫಲವತ್ತಾದ ಕಪ್ಪು ಮಣ್ಣಿನ ಭೂಮಿ (2)ಮಧ್ಯಮ– ಕೆಂಪು ಮಣ್ಣಿನ ಭೂಮಿ (3)ಕನಿಷ್ಠ– ಮರಳು ಮಿಶ್ರಿತ ಭೂಮಿ (4)ಅಧಮ– ತೇವಾಂಶ ರಹಿತ ಭೂಮಿ (5)ಅಧಮಾಧಮ–ಬಂಜರು ಭೂಮಿ. ಭೂಕಂದಾಯವು ಒಟ್ಟು ಉತ್ಪಾದನೆಯ 1/3 ಭಾಗವಾಗಿತ್ತು. ಕಂದಾಯವನ್ನು ವಸ್ತು ಅಥವಾ ನಗದು ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಕೆಳದಿಯ ಚೆನ್ನಮ್ಮಾಜಿ ಕೂಡಾ ಒಬ್ಬ ಪ್ರಸಿದ್ಧ ಆಡಳಿತಗಾರ್ತಿಯಾಗಿದ್ದಳು. ಮೊಘಲ್ ಸಾಮ್ರಾಟ ಔರಂಗಜೇಬನ ವಿರುದ್ಧ ದಂಗೆ ಎದ್ದಿದ್ದ ಮರಾಠರ ರಾಜ ರಾಜಾರಾಮನಿಗೆ ಆಶ್ರಯ ನೀಡಿದಳು. ಲಿಂಗಣ್ಣ ಕವಿಯಿಂದ 'ಕೆಳದಿನೃಪವಿಜಯ' ಎಂಬ ಐತಿಹಾಸಿಕ ಕೃತಿಯು ಬರೆಯಲ್ಪಟ್ಟಿತು.

ಚಿತ್ರದುರ್ಗದ ನಾಯಕರು. ಚಿತ್ರದುರ್ಗದ ನಾಯಕರು ಮೂಲತಃ ಆಂಧ್ರದ ತಿರುಪತಿಗೆ ಸಮೀಪದ ಮೇದಕೇರಿಯವರಾಗಿದ್ದು ಚಿತ್ರದುರ್ಗಕ್ಕೆ ಬಂದು ನೆಲೆಸಿದರು. ವಿಜಯನಗರ ಕಾಲದಲ್ಲಿ ಪಾಳೆಯಗಾರರಾಗಿ ರಾಜಕೀಯ ಜೀವನ ಆರಂಭಿಸಿದ ಇವರು, ಬೇಡ ಸಮುದಾಯಕ್ಕೆ ಸೇರಿದವರಾಗಿದ್ದರು. ಈ ಪಾಳೆಯಗಾರರಲ್ಲಿ ಐದನೇಯ ಮದಕರಿ ನಾಯಕನು (ಸಾ.ಶ.1754–1779) ಶ್ರೇಷ್ಠನಾಗಿದ್ದು, ಚಿತ್ರದುರ್ಗದ ಕೋಟೆಯನ್ನು ನಿರ್ಮಿಸಿದನು. ಅವನು ಹೈದರಾಲಿಯ ವಿರುದ್ಧ ಹೋರಾಡಿದನು. ಆ ಹೋರಾಟದಲ್ಲಿ ಕೋಟೆಯ ಕಾವಲುಗಾರನ ಹೆಂಡತಿ ಒನಕೆ ಓಬವ್ವ ಎಂಬ ವೀರಮಹಿಳೆ ಒನಕೆಯಿಂದ ಬಡಿದು ಹೈದರನ ಹಲವಾರು ಸೈನಿಕರನ್ನು ಕೊಂದಳು. ಈ ಹೋರಾಟದಲ್ಲಿ ಅವಳು ಪ್ರಾಣ ಕಳೆದುಕೊಂಡಳು ಅಂತಿಮವಾಗಿ ಮದಕರಿನಾಯಕ ಸೋತನು ಹಾಗೂ ಹೈದರಾಲಿಯು ಚಿತ್ರದುರ್ಗವನ್ನು ವಶಪಡಿಸಿಕೊಂಡನು.

ಮೈಸೂರು ಒಡೆಯರು: ಸಾ.ಶ. 1399 ರಲ್ಲಿ ಒಡೆಯರ ಮನೆತನವನ್ನು ಯದುರಾಯ ಹಾಗೂ ಕೃಷ್ಣರಾಯ ಎಂಬ ಇಬ್ಬರು ಸಹೋದರರು ಸ್ಥಾಪಿಸಿದರು. ಇವರು ವಿಜಯನಗರದ ಸಾಮಂತರಾಗಿದ್ದರು. ನಂತರದಲ್ಲಿ

ಸ್ವತಂತ್ರರಾಗಿ ಮೈಸೂರು ಪ್ರದೇಶದಲ್ಲಿ ಆಳ್ವಿಕೆ ಮಾಡಿದರು. ಶ್ರೀರಂಗಪಟ್ಟಣ ಅವರ ರಾಜಧಾನಿಯಾಗಿತ್ತು. ಚಾಮುಂಡೇಶ್ವರಿಯು ಈ ರಾಜವಂಶದ ಅಧಿದೇವತೆ ಹಾಗೂ ಗಂಡಭೇರುಂಡ ಈ ವಂಶದ ರಾಜಲಾಂಛನವಾಗಿತ್ತು. ವಿಜಯನಗರದ ಮಹಾನವಮಿ ಉತ್ಸವವು ಮೈಸೂರು ದಸರಾ ಎಂದು ಒಡೆಯರಿಂದ ಮುಂದುವರಸಲ್ಪಟ್ಟಿತ್ತು. ಸಾ.ಶ.1610 ರಲ್ಲಿ ಮೈಸೂರು ದಸರಾವನ್ನು ಆರಂಭಿಸಿದ ಕೀರ್ತಿ ರಾಜ ಒಡೆಯರಿಗೆ ಸಲ್ಲುತ್ತದೆ.

ಚಿಕ್ಕದೇವರಾಜ ಒಡೆಯರ್ (ಸಾ.ಶ. 1673–1704): ಆರಂಭದ ಮೈಸೂರು ಒಡೆಯರಲ್ಲಿ ಇವರು ಸಮರ್ಥ ಅರಸರು. 'ಕರ್ನಾಟಕ ಚಕ್ರವರ್ತಿ', 'ಅಪ್ರತಿಮ ವೀರ', 'ತೆಂಕಣರಾಜ', 'ರಾಜಾಜಗದೇವ', 'ಮಹಾರಾಷ್ಟ್ರ ಭೂಪಾಲ ಜಲರಿಪು' ಮುಂತಾದ ಬಿರುದುಗಳನ್ನು ಗಳಿಸಿದ್ದರು. ಇವರು ತಮ್ಮ ಖಜಾನೆಯಲ್ಲಿ ಒಂಭತ್ತು ಕೋಟಿ ಚಿನ್ನದ ಪಗೋಡಗಳನ್ನು ಸಂಗ್ರಹಿಸಿ 'ನವಕೋಟಿ ನಾರಾಯಣ' ಎಂಬ ಬಿರುದು ಗಳಿಸಿದ್ದರು. ಇವರ ಕಾಲದಲ್ಲಿ ಆರಕ್ಷಕ(ಪೊಲೀಸ್) ವ್ಯವಸ್ಥೆಯನ್ನು ಜಾರಿಗೆತರಲಾಯಿತು. ಮೊಘಲ್ ಬಾದಷಾ ಔರಂಗಜೇಬನ ಆಸ್ಥಾನಕ್ಕೆ ರಾಯಭಾರಿಯನ್ನು ಕಳುಹಿಸುವುದರ ಮೂಲಕ ಅವನ ಸ್ನೇಹವನ್ನು ಸಂಪಾದಿಸಿದರು. ಇವರು ಗೀತಗೋಪಾಲ ಮತ್ತು ಚಿಕ್ಕದೇವರಾಜ ಬಿನ್ನಪಂ ಎಂಬ ಕೃತಿಗಳನ್ನು ರಚನೆ ಮಾಡಿದರು. ಸಾ.ಶ.1687 ರಲ್ಲಿ ಬೆಂಗಳೂರು ನಗರವನ್ನು ಮೂರು ಲಕ್ಷ ಚಿನ್ನದ ವರಹಗಳನ್ನು ಕೊಟ್ಟು ಮೊಘಲರಿಂದ ಖರೀದಿಸಿದರು.

ಇವರ ಕಾಲದಲ್ಲಿ ಆಡಳಿತವು ಅಠಾರಾ ಕಛೇರಿ ಎಂಬ 18 ಇಲಾಖೆಗಳಾಗಿ ವಿಭಾಗಿಸಲ್ಪಟ್ಟಿತು. ನೀರಾವರಿ ಮತ್ತು ಪಶುಸಂಗೋಪನೆ ಅಭಿವೃದ್ಧಿಯಾಯಿತು. ಇವರ ಮಂತ್ರಿ ತಿರುಮಲಾರ್ಯನು 'ಚಿಕ್ಕದೇವರಾಜ ವಿಜಯ' ಮತ್ತು 'ಅಪ್ರತಿಮ ವೀರ ಚರಿತ' ಕೃತಿಗಳನ್ನು ಬರೆದನು. ಇನ್ನೊಬ್ಬ ಕವಿ ಸಿಂಗರಾರ್ಯನು ಕನ್ನಡದ ಮೊದಲ ನಾಟಕ 'ಮಿತ್ರಾವಿಂದ ಗೋವಿಂದ'ವನ್ನು ಬರೆದಿದ್ದಾನೆ. ಸಂಚಿ ಹೊನ್ನಮ್ಮ 'ಹದಿಬದೆಯ ಧರ್ಮ' ಎಂಬ ಕೃತಿ ಬರೆದಿದ್ದಾಳೆ. ಅವಳು ಸ್ತ್ರೀ–ಪುರಷರ ಸಮಾನತೆಯನ್ನು ಪ್ರತಿಪಾದಿಸಿದ್ದಾಳೆ.

ಪ್ರಮುಖ ಮೈಸೂರು ಒಡೆಯರು

ರಾಜ ಒಡೆಯರ್	(ಸಾ.ಶ.1578–1617)
ಚಾಮರಾಜ ಒಡೆಯರ್	(ಸಾ.ಶ.1617–1637)
ಒಂದನೇ ನರಸರಾಜ ಒಡೆಯರ್	(ಸಾ.ಶ.1638–1659)
ದೇವರಾಜ ಒಡೆಯರ್	(ಸಾ.ಶ.1659–1673)
ಚಿಕ್ಕದೇವರಾಜ ಒಡೆಯರ್	(ಸಾ.ಶ.1673–1704)
ಎರಡನೇ ನರಸರಾಜ ಒಡೆಯರ್	(ಸಾ.ಶ.1704–1714)
ಕೃಷ್ಣರಾಜ ಒಡೆಯರ್	(ಸಾ.ಶ.1714–1732)
ಮುಮ್ಮಡಿ ಕೃಷ್ಣರಾಜ ಒಡೆಯರ್	(ಸಾ.ಶ.1799–1831)
ನಾಲ್ವಡಿ ಕೃಷ್ಣರಾಜ ಒಡೆಯರ್	(ಸಾ.ಶ.1902–1940)
ಜಯಚಾಮರಾಜ ಒಡೆಯರ್	(ಸಾ.ಶ.1940–1950)

ಚಟುವಟಿಕೆ

ವಿಜಯನಗರದ ವೈಭವದ ಬಗ್ಗೆ ವಿದೇಶಿ ಸಂದರ್ಶಕರು ಮತ್ತು ಅವರ ಅಭಿಪ್ರಾಯಗಳನ್ನು ಪಟ್ಟಿ ಮಾಡಿ.

ಪ್ರಶ್ನೆಗಳು

I. ಈ ಕೆಳಕಂಡ ಪ್ರಶ್ನೆಗಳಿಗೆ ತಲಾ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ.

1. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಯಾವುದು?
2. ಕೃಷ್ಣದೇವರಾಯನು ಯಾವ ವಂಶಕ್ಕೆ ಸೇರಿದವನು?
3. ವಿಜಯನಗರ ಸಾಮ್ರಾಜ್ಯದ ಶ್ರೇಷ್ಠ ರಾಜ ಯಾರು?
4. 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ', ಎಂಬ ಬಿರುದನ್ನು ಹೊಂದಿದ್ದವರು ಯಾರು?
5. ವಿಜಯನಗರಕ್ಕೆ ಭೇಟಿ ನೀಡಿದ ಪರ್ಷಿಯಾದ ರಾಯಭಾರಿಯನ್ನು ಹೆಸರಿಸಿ.
6. 'ಮಧುರಾವಿಜಯಂ' ಎಂಬ ಕೃತಿ ರಚಿಸಿದವರು ಯಾರು?
7. ವಿಜಯನಗರ ಸಾಮ್ರಾಜ್ಯದ ಅವನತಿಗೆ ಕಾರಣವಾದ ಕದನ ಯಾವುದು?
8. ಬೆಂಗಳೂರಿನ ಸ್ಥಾಪಕನು ಯಾರು?
9. 'ನವಕೋಟಿ ನಾರಾಯಣ' ಎಂದು ಯಾರನ್ನು ಕರೆಯಲಾಗಿತ್ತು?
10. ಶಿವಪ್ಪ ನಾಯಕನ 'ಶಿಸ್ತು' ಎಂದರೇನು?
11. ಚಿತ್ರದುರ್ಗದ ಕೋಟೆಯನ್ನು ಕಟ್ಟಿಸಿದವರು ಯಾರು?
12. ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿದ ಮಹಿಳೆಯನ್ನು ಹೆಸರಿಸಿ.
13. ಮೈಸೂರು ದಸರಾ ಉತ್ಸವ ಆರಂಭಿಸಿದ ರಾಜನನ್ನು ಹೆಸರಿಸಿ.

II. ಈ ಕೆಳಕಂಡ ಪ್ರಶ್ನೆಗಳಿಗೆ ತಲಾ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.

1. ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಯಾರು?
2. ಕೃಷ್ಣದೇವರಾಯನ ಯಾವುದಾದರೂ ಎರಡು ಸಾಹಿತ್ಯ ಕೃತಿಗಳನ್ನು ಹೆಸರಿಸಿ.
3. ಕೃಷ್ಣದೇವರಾಯನ ಯಾವುದಾದರೂ ಎರಡು ಬಿರುದುಗಳನ್ನು ತಿಳಿಸಿರಿ.
4. 'ಮನುಚರಿತಮು' ಬರೆದವರು ಯಾರು ಮತ್ತು ಅವನ ಬಿರುದು ಯಾವುದು?
5. ಚಿಕ್ಕದೇವರಾಜ ಒಡೆಯರ ಯಾವುದಾದರೂ ಎರಡು ಬಿರುದುಗಳನ್ನು ತಿಳಿಸಿರಿ.
6. ಕನ್ನಡದ ಪ್ರಥಮ ನಾಟಕ ಯಾವುದು ಮತ್ತು ಅದರ ಕರ್ತೃ ಯಾರು?
7. ಹದಿಬದೆಯ ಧರ್ಮ ಎಂಬ ಕೃತಿಯನ್ನು ಬರೆದವರು ಯಾರು ಮತ್ತು ಅವಳನ್ನು ಪ್ರೋತ್ಸಾಹಿಸಿದ ರಾಜ ಯಾರು?

8. ಶಿವಪ್ಪನಾಯಕನು ಯಾರು ಹಾಗೂ ಅವನು ಏಕೆ ಪ್ರಸಿದ್ಧನಾಗಿದ್ದಾನೆ?

III. ಈ ಕೆಳಕಂಡ ಪ್ರಶ್ನೆಗಳಿಗೆ ತಲಾ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ತಾಳಿಕೋಟೆಯ ಕದನದ ಕಾರಣಗಳು ಮತ್ತು ಪರಿಣಾಮಗಳು ಯಾವುವು?
2. ವಿಜಯನಗರ ಸಾಮ್ರಾಜ್ಯದ ಆಡಳಿತವನ್ನು ವಿವರಿಸಿರಿ.
3. ವಿಜಯನಗರ ಕುರಿತು ವಿದೇಶಿ ವರದಿಗಳನ್ನು ವಿವರಿಸಿರಿ.

IV. ಈ ಕೆಳಕಂಡ ಪ್ರಶ್ನೆಗಳಿಗೆ ತಲಾ 30–40 ವಾಕ್ಯಗಳಲ್ಲಿ ಉತ್ತರಿಸಿ.

1. ಕೃಷ್ಣದೇವರಾಯನ ಸಾಧನೆಗಳ ಬಗ್ಗೆ ಒಂದು ವಿವರಣೆ ಬರೆಯಿರಿ.
2. ವಿಜಯನಗರ ಕಾಲದ ಧರ್ಮ, ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.

❊ ❊ ❊ ❊

ಅಧ್ಯಾಯ–5.5

ಬಹಮನಿ ಮತ್ತು ಆದಿಲ್‌ಷಾಹಿ ಸುಲ್ತಾನರು

ಬಹಮನಿ ಸುಲ್ತಾನರು :

ಬಹಮನಿ ಸುಲ್ತಾನರು ಕರ್ನಾಟಕ, ಆಂಧ್ರ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳ ಮೇಲೆ ಆಳ್ವಿಕೆ ಮಾಡಿದರು. ಈ ವಂಶವು ಸಾ.ಶ. 1347 ರಲ್ಲಿ ಅಲ್ಲಾವುದ್ದೀನ್ ಹಸನ್ ಗಂಗೂ ಬಹಮನ್‌ಷಾನಿಂದ ಸ್ಥಾಪಿಸಲ್ಪಟ್ಟಿತು. ಇವನು ಮಹಮದ್ ಬಿನ್‌ತೊಘಲಕ್‌ನ ವಿರುದ್ಧ ದಂಗೆ ಎದ್ದು ಸ್ವಾತಂತ್ರ್ಯವನ್ನು ಘೋಷಿಸಿಕೊಂಡನು. ಗುಲ್ಬರ್ಗಾ ಅವರ ಮೊದಲ ರಾಜಧಾನಿಯಾಗಿತ್ತು. ನಂತರ ರಾಜಧಾನಿಯನ್ನು ಬೀದರ್‌ಗೆ ವರ್ಗಾಯಿಸಿದರು. ಈ ವಂಶದ ಸುಲ್ತಾನರು ನಿರಂತರವಾಗಿ ವಿಜಯನಗರ ಸಾಮ್ರಾಜ್ಯದ ವಿರುದ್ಧ ಹೋರಾಡಿದರು.

ಪ್ರಮುಖ ಬಹಮನಿ ಸುಲ್ತಾನರು

ಅಲ್ಲಾವುದ್ದೀನ್ ಹಸನ್ ಗಂಗೂ ಬಹಮನ್‌ಷಾ, ಫಿರೋಜ್ ಷಾ, ಅಹಮದ್ ಷಾ, ಮತ್ತು 3ನೇ ಮಹಮ್ಮದ್ ಷಾ

ಮಹಮದ್ ಗವಾನ್ (ಸಾ.ಶ.1463–1481): ಮಹಮದ್ ಗವಾನ್ ಒಬ್ಬ ಮುಖ್ಯಮಂತ್ರಿ ಮತ್ತು ಸಮರ್ಥ ಆಡಳಿತಗಾರನಾಗಿದ್ದನು. ಪರ್ಷಿಯಾ ದೇಶದ ಗವಾನ್ ಎಂಬಲ್ಲಿ ಜನಿಸಿದ ಇವನು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದನು. ಮೂರನೇ ಮಹಮ್ಮದ್ ಷಾನ ಮುಖ್ಯಮಂತ್ರಿಯಾಗಿ ನೇಮಕವಾದನು.

ಸಾಧನೆಗಳು:

1. ವಿಜಯನಗರ ಸಾಮ್ರಾಜ್ಯದಿಂದ ಹುಬ್ಬಳ್ಳಿ, ಬೆಳಗಾವಿ ಮತ್ತು ಗೋವಾ ಪ್ರದೇಶಗಳನ್ನು ವಶಪಡಿಸಿಕೊಂಡನು.
2. ಮಾಳ್ವದ ಸುಲ್ತಾನನೊಂದಿಗೆ ಒಪ್ಪಂದ ಮಾಡಿಕೊಂಡು ರಾಜಕೀಯ ಸ್ಥಿರತೆಯನ್ನು ಸ್ಥಾಪಿಸಿದನು
3. ಒರಿಸ್ಸಾದ ರಾಜಮಹೇಂದ್ರಿ ಹಾಗೂ ಕೊಂಡವೀಡು ಪ್ರದೇಶಗಳನ್ನು ಗೆದ್ದನು.
4. ಆಡಳಿತದ ಅನುಕೂಲಕ್ಕಾಗಿ ರಾಜ್ಯದ ನಾಲ್ಕು ಪ್ರಾಂತ್ಯಗಳನ್ನು ಎಂಟಕ್ಕೆ ಹೆಚ್ಚಿಸಲಾಯಿತು. ಅವುಗಳನ್ನು ತರಫ್‌ಗಳೆಂದು ಕರೆಯಲಾಗಿತ್ತು.
5. ಭೂಮಿಯನ್ನು ಮಾಪನ ಮಾಡಿ ಕಂದಾಯವನ್ನು ನಿಗದಿಪಡಿಸಲಾಯಿತು. ಕಂದಾಯವನ್ನು ನಗದು ರೂಪದಲ್ಲಿ ಮಾತ್ರ ಸಂಗ್ರಹಿಸಲಾಗುತ್ತಿತ್ತು.
6. ಇವನು ಬೀದರ್‌ನಲ್ಲಿ ಮದರಸ ಕಾಲೇಜು ನಿರ್ಮಿಸಿದನು. ಅಲ್ಲಿ ಒಂದು ಗ್ರಂಥಾಲಯವನ್ನು ನಿರ್ಮಿಸಿ ಜಗತ್ತಿನೆಲ್ಲೆಡೆಯಿಂದ ಸುಮಾರು 3000 ಹಸ್ತ ಪ್ರತಿಗಳನ್ನು ಸಂಗ್ರಹಿಸಿದನು.

ಗವಾನ್‌ನ ಪ್ರಗತಿಯನ್ನು ಸಹಿಸದ ಸ್ಥಳೀಯ ಮುಸಲ್ಮಾನ ನಾಯಕರು ಅವನ ವಿರುದ್ಧ ಮಿಥ್ಯಾರೋಪ ಮಾಡಿದರು. ಸಾ.ಶ.1481 ರಲ್ಲಿ ಅವನ ಶಿರಚ್ಛೇಧನ ಮಾಡಲಾಯಿತು. ಅವನ ಮರಣದೊಂದಿಗೆ ಬಹಮನಿ

ರಾಜ್ಯವು ಪತನವಾಗಲಾರಂಭಿಸಿತು. ಆಗ ದಖಿನ್‌ನ ಐದು ಷಾಹಿ ಸುಲ್ತಾನರು ಸ್ವತಂತ್ರ್ಯವನ್ನು ಘೋಷಿಸಿಕೊಂಡರು. ಅವರುಗಳೆಂದರೆ ಬಿಜಾಪುರದ ಆದಿಲ್ ಷಾಹಿಗಳು, ಅಹಮದ್ ನಗರದ ನಿಜಾಂ ಷಾಹಿಗಳು, ಬೀದರ್‌ನ ಬರೀದ್ ಷಾಹಿಗಳು, ಬೇರಾರ್‌ನ ಇಮಾದ್ ಷಾಹಿಗಳು ಹಾಗೂ ಗೋಲ್ಕೊಂಡದ ಕುತುಬ್ ಷಾಹಿಗಳು.

ಸಾಂಸ್ಕೃತಿಕ ಕೊಡುಗೆಗಳು:

ಶಿಕ್ಷಣ:

ಕುರಾನ್ ಪಠಣವು ಶಿಕ್ಷಣದ ಒಂದು ಭಾಗವಾಗಿತ್ತು. ಬಡ ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿತ್ತು. ಬಾಲಕಿಯರಿಗಾಗಿಯೇ ಪ್ರತ್ಯೇಕ ಶಾಲೆಗಳಿದ್ದವು. ಮಹಮದ್ ಗವಾನ್‌ನು ಒಬ್ಬ ಶ್ರೇಷ್ಠ ವಿದ್ಯಾಪೋಷಕನಾಗಿದ್ದನು. ಅವನು ತನ್ನ ಸ್ವಂತ ಗಳಿಕೆಯನ್ನು ಶಿಕ್ಷಣದ ಪ್ರಸಾರಕ್ಕಾಗಿ ವೆಚ್ಚ ಮಾಡಿದನು. ಇವನು ಸಾ.ಶ. 1472 ರಲ್ಲಿ ಬೀದರ್‌ನಲ್ಲಿ ಮದರಸವನ್ನು ನಿರ್ಮಿಸಿದನು. ಈ ಕಟ್ಟಡವು ಮೂರು ಅಂತಸ್ತಿನಿಂದ ಕೂಡಿತ್ತು. ಈ ಮದರಸದಲ್ಲಿ ಒಟ್ಟು 36 ಕೊಠಡಿಗಳಿದ್ದವಲ್ಲದೇ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಹಾ ವಸತಿಯನ್ನು ಹೊಂದಿದ್ದರು. ತತ್ವಶಾಸ್ತ್ರ, ಧರ್ಮಶಾಸ್ತ್ರ ಹಾಗೂ ವಿಜ್ಞಾನಗಳನ್ನು ಕಲಿಸಲಾಗುತ್ತಿತ್ತು. ಪರ್ಷಿಯನ್, ಅರೇಬಿಕ್ ಮತ್ತು ಉರ್ದು ಭಾಷೆಗಳು ಶಿಕ್ಷಣದ ಮಾಧ್ಯಮವಾಗಿದ್ದವು.



ಗವಾನನ ಮದರಸಾ, ಬೀದರ್.

ಸಾಹಿತ್ಯ: ಈ ಕಾಲದಲ್ಲಿ ಪರ್ಷಿಯನ್, ಅರೇಬಿಕ್ ಹಾಗೂ ಉರ್ದು ಸಾಹಿತ್ಯ ಬೆಳವಣಿಗೆಯಾಯಿತು. ಸುಲ್ತಾನ್ ಫಿರೋಜ್‌ಷಾನು ತತ್ವಶಾಸ್ತ್ರದಲ್ಲಿ ಪಾಂಡಿತ್ಯವನ್ನು ಹೊಂದಿದ್ದನು. ಅವನು ಪ್ರಕೃತಿ ವಿಜ್ಞಾನ, ರೇಖಾಗಣಿತ ಮತ್ತು ಕುರಾನ್ ವಿಷಯಗಳಲ್ಲಿ ಪ್ರವೀಣನಾಗಿದ್ದನು. ಅವನು ವಿದ್ವಾಂಸರಿಗೆ ಪ್ರೋತ್ಸಾಹ ಕೊಟ್ಟನು. ಮಹಮದ್ ಗವಾನ್ ಪರ್ಷಿಯನ್ ಭಾಷೆಯಲ್ಲಿ ಕವಿತೆಗಳನ್ನು ರಚನೆ ಮಾಡಿದನು. ಅವನು 'ರಿಯಾಜ್–ಉಲ್–ಇನ್ಷಾ' ಹಾಗೂ 'ಮಂಜಿರ್–ಉಲ್–ಇನ್ಷಾ' ಕೃತಿಗಳನ್ನು ರಚಿಸಿದನು. ಇವು ರಾಜನೀತಿಶಾಸ್ತ್ರ, ಕಾವ್ಯ ಹಾಗೂ ಇತರ ವಿಷಯಗಳನ್ನು ತಿಳಿಸುತ್ತವೆ. ಕುರಾನ್‌ನ ಉಕ್ತಿಗಳನ್ನು ಬರೆಯಲು ಕಲಾಲಿಪಿ (ಕ್ಯಾಲಿಗ್ರಫಿ) ಬಳಸಲಾಗುತ್ತಿತ್ತು. ಮಹಮದ್ ಗವಾನನು ಕಲಾ ಲಿಪಿಕಾರನಾಗಿದ್ದನು.

'ದಖಿನೀ' ಉರ್ದು ಎಂಬ ಹೊಸ ಉಪಭಾಷೆ ಬಳಕೆ ಜನಪ್ರಿಯವಾಯಿತು. ಹಜರತ್ ಖ್ವಾಜಾ ಬಂದೇ ನವಾಜ್ ಗೇಸು ದರಾಜ್ ಎಂಬ ಗುಲ್ಬರ್ಗಾದ ಸೂಫಿಸಂತನು ಈ ಹೊಸ ಭಾಷೆಯಲ್ಲಿ ಬರೆದಿದ್ದಾನೆ. ಈ ಸಂತನ ದರ್ಗಾವನ್ನು ಗುಲ್ಬರ್ಗಾದಲ್ಲಿ ಕಾಣಬಹುದು.

ವಾಸ್ತುಶಿಲ್ಪ: ಈ ಕಾಲದಲ್ಲಿ ಇಂಡೋ–ಇಸ್ಲಾಮಿಕ್ ಶೈಲಿಯು ಅಸ್ತಿತ್ವದಲ್ಲಿತ್ತು. ಕಟ್ಟಡ ನಿರ್ಮಾಣಕ್ಕೆ ಸ್ಥಳೀಯ ಸಾಮಗ್ರಿಗಳನ್ನು ಉಪಯೋಗಿಸಿದರು. ಈ ಶೈಲಿಯ ಪ್ರಮುಖ ಲಕ್ಷಣಗಳೆಂದರೆ:

1. ಎತ್ತರವಾದ ಮಿನಾರ್‌ಗಳು
2. ಬಲಿಷ್ಠ ಕಮಾನುಗಳು
3. ಬೃಹದಾಕಾರದ ಗುಮ್ಮಟಗಳು
4. ವಿಶಾಲವಾದ ಹಜಾರಗಳು
5. ಕಟ್ಟಡಗಳ ಮೇಲ್ಭಾಗದ ಬಾಲಚಂದ್ರಾಕೃತಿ

ಬಹಮನಿ ಸುಲ್ತಾನರ ಕೋಟೆಗಳು, ಮಸೀದಿಗಳು, ಗುಮ್ಮಟಗಳು, ಮಹಲ್‌ಗಳು ಮತ್ತು ದರ್ಗಾಗಳು ಈ ಶೈಲಿಯಲ್ಲಿವೆ. ಗುಲ್ಬರ್ಗಾ ಹಾಗೂ ಬೀದರ್‌ನಲ್ಲಿರುವ ಕಟ್ಟಡಗಳು ಉತ್ತಮ ನಿದರ್ಶನಗಳಾಗಿವೆ.

ಗುಲ್ಬರ್ಗಾ: ಕೋಟೆ, ಜಾಮಿ ಮಸೀದಿ(ದಕ್ಷಿಣ ಭಾರತದಲ್ಲಿಯೇ ಅತ್ಯಂತ ದೊಡ್ಡ ಮಸೀದಿ), ಷಾಬಜಾರ್ ಮಸೀದಿ, ಹಫ್ತಾ ಗುಂಬಜ್ (ಸುಲ್ತಾನರ ಏಳು ಗೋರಿಗಳ ಸಂಕೀರ್ಣ) ಮುಂತಾದವು ಗುಲ್ಬರ್ಗಾದಲ್ಲಿ ಇವೆ.

ಬೀದರ್: ಕೋಟೆ, ರಂಗೀನ್ ಮಹಲ್, ಆಸ್ಥಾನ್ ಮಹಲ್, ಜನತಾ ಮಹಲ್, ಜನಾನಾ ಮಹಲ್, ಸೋಲಹ ಕಂಬ ಮಸೀದಿ, ಗವಾನನ ಮದರಸಾ ಮುಂತಾದವುಗಳು ಬೀದರ್‌ನಲ್ಲಿ ಇವೆ.

ಬಿಜಾಪುರದ ಆದಿಲ್‌ಷಾಹಿಗಳು

ಬಹಮನಿ ಸುಲ್ತಾನರಿಂದ ಸ್ವತಂತ್ರ ಘೋಷಿಸಿಕೊಂಡ ಆದಿಲ್‌ಷಾಹಿಗಳು ಬಿಜಾಪುರದಿಂದ ಆಳ್ವಿಕೆ ಮಾಡಲಾರಂಭಿಸಿದರು. ಯೂಸುಫ್ ಆದಿಲ್‌ಖಾನನು ಸಾ.ಶ.1489 ರಲ್ಲಿ ಈ ವಂಶವನ್ನು ಸ್ಥಾಪಿಸಿದನು.

ಪ್ರಮುಖ ಆದಿಲ್‌ಶಾಹಿ ಸುಲ್ತಾನರು

ಯೂಸುಫ್ ಆದಿಲ್ ಖಾನ್	(ಸಾ.ಶ.1489–1510)
ಇಸ್ಮಾಯಿಲ್ ಆದಿಲ್ ಖಾನ್	(ಸಾ.ಶ.1510–1534)
ಒಂದನೇ ಇಬ್ರಾಹಿಂ ಆದಿಲ್ ಷಾ	(ಸಾ.ಶ. 1535–1558)
ಒಂದನೇ ಅಲಿ ಆದಿಲ್ ಷಾ	(ಸಾ.ಶ.1558–1580)
ಎರಡನೇ ಇಬ್ರಾಹಿಂ ಆದಿಲ್‌ಷಾ	(ಸಾ.ಶ.1580–1626)
ಮಹಮ್ಮದ ಆದಿಲ್ ಷಾ	(ಸಾ.ಶ.1626–1656)
ಎರಡನೇ ಅಲಿ ಆದಿಲ್ ಷಾ	(ಸಾ.ಶ.1656–1672)
ಸಿಕಂದರ್ ಆದಿಲ್ ಷಾ	(ಸಾ.ಶ.1672–1686)

ಎರಡನೇ ಇಬ್ರಾಹಿಂ ಆದಿಲ್‌ಷಾ (ಸಾ.ಶ.1580–1626):

ಎರಡನೇ ಇಬ್ರಾಹಿಂ ಆದಿಲ್‌ಷಾನು ಸಾ.ಶ.1580 ರಲ್ಲಿ ಅಧಿಕಾರಕ್ಕೆ ಬಂದನು. ಚಾಂದ್‌ಬೀಬಿ ಇವನ ರಾಜಪ್ರತಿನಿಧಿಯಾಗಿದ್ದಳು. ಇವನು 'ಜಗದ್ಗುರು–ಬಾದಷಾ' ಎಂದು ಹೆಸರಾಗಿದ್ದನು. ಇವನು ಧರ್ಮಸಹಿಷ್ಣುತಾ ನೀತಿಯನ್ನು ಅನುಸರಿಸಿದನು. ಅವನು ಸ್ವತಃ ಸಂಗೀತಗಾರನಾಗಿದ್ದು 'ಕಿತಾಬ್–ಇ–ನವರಸ್' ಎಂಬ ಕೃತಿಯನ್ನು

ರಚಿಸಿದನು. ಬಿಜಾಪುರದಲ್ಲಿ 'ನವರಸಪುರ' ಎಂಬ ಉಪನಗರವನ್ನು ಕಲಾಕಾರರಿಗಾಗಿಯೇ ನಿರ್ಮಿಸಿದನು. ಅವನು ಹಿಂದೂ ದೇವತೆಗಳಾದ ನರಸಿಂಹ, ಸರಸ್ವತಿ ಗಣೇಶನನ್ನು ಮತ್ತು ಇತರ ಹಿಂದೂ ದೇವರುಗಳನ್ನು ಆರಾಧಿಸುತ್ತಿದ್ದನು. ಸಾ.ಶ.1686 ರಲ್ಲಿ ಔರಂಗಜೇಬನು ಬಿಜಾಪುರವನ್ನು ಆಕ್ರಮಿಸಿಕೊಳ್ಳುವುವದರೊಂದಿಗೆ ಆದಿಲ್ ಷಾಹಿಗಳ ಆಳ್ವಿಕೆ ಕೊನೆಯಾಯಿತು.

ಸಾಂಸ್ಕೃತಿಕ ಕೊಡುಗೆಗಳು:


ಸಾಹಿತ್ಯ: ಅರೇಬಿಕ್, ಪರ್ಷಿಯನ್ ಹಾಗೂ ದಖನೀ ಉರ್ದು ಭಾಷೆಗಳು ಹಾಗೂ ಸಾಹಿತ್ಯ ಬೆಳವಣಿಗೆಯಾದವು.

- ಸೂಫಿ–ಸಂತರು ಹಿಂದೂ ಮತ್ತು ಮುಸ್ಲಿಂರಲ್ಲಿ ಏಕತೆಯನ್ನು ಮೂಡಿಸಿದರು.
- ಸಯ್ಯದ್ ಅಹ್ಮದ್ ಹರವಿ, ಮೌಲಾನಾ ಗೈತುದ್ದೀನ್, ಹಬೀಬುಲ್ಲಾ ಮತ್ತು ಅಬ್ದುಲ್ಲಾ ಪ್ರಸಿದ್ಧ ವಿದ್ವಾಂಸರಾಗಿದ್ದರು.
- ಮುಲ್ಲಾ ನಸ್ರತಿ ಮತ್ತು ಫೆರಿಸ್ತಾ ಪ್ರಸಿದ್ಧ ಇತಿಹಾಸಕಾರರಾಗಿದ್ದು, ಅವರು ಕ್ರಮವಾಗಿ 'ಆಲಿನಾಮ' ಮತ್ತು 'ತಾರೀಖ್–ಇ–ಫೆರಿಸ್ತಾ' ಕೃತಿಗಳನ್ನು ಬರೆದಿದ್ದಾರೆ.

ವಾಸುಶಿಲ್ಪ: ಆದಿಲ್ ಷಾಹಿಗಳು ನಿರ್ಮಿಸಿದ ಸ್ಮಾರಕಗಳು ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿವೆ. ಇದು ದಖ್ಖನಿ ಶೈಲಿ ಎಂದೂ ಸಹ ಕರೆಯಲ್ಪಟ್ಟಿದೆ. ಬಿಜಾಪುರದ ಪ್ರಮುಖ ಸ್ಮಾರಕಗಳು ಇಂತಿವೆ:



ಇಬ್ರಾಹಿಂ ರೋಜಾ, ಬಿಜಾಪುರ



ಗೋಳಗುಮ್ಮಟ, ಬಿಜಾಪುರ

1. 'ಜಾಮೀ ಮಸೀದಿ'ಯನ್ನು ಅಲಿ ಆದಿಲ್ ಷಾ ನಿರ್ಮಾಣ ಮಾಡಿದನು. ಇದು ಕಲಾತ್ಮಕವಾದ ಕಮಾನುಗಳು, ಮಿನಾರ್‌ಗಳು, ಬೃಹತ್ತಾದ ಗುಮ್ಮಟ ಹಾಗೂ ಭವ್ಯವಾದ ಪ್ರಾರ್ಥನಾ ಭವನಕ್ಕೆ ಹೆಸರುವಾಸಿಯಾಗಿದೆ.
2. ಇಬ್ರಾಹಿಂ ರೋಜಾ ಇಲ್ಲಿಯ ಇನ್ನೊಂದು ಪ್ರಸಿದ್ಧ ಕಟ್ಟಡವಾಗಿದೆ. ಇದು ಭಾರತದಲ್ಲಿರುವ ಏಕೈಕ ರೋಜಾ ಆಗಿರುತ್ತದೆ. ಒಂದು ಎತ್ತರವಾದ ಕಟ್ಟೆಯ ಮೇಲೆ ಗೋರಿ ಹಾಗೂ ಮಸೀದಿಯನ್ನು ಕಟ್ಟಿದ್ದು ಸುತ್ತಲೂ ಉದ್ಯಾನವನ ಹಾಗೂ ಆವರಣ ಗೋಡೆಯನ್ನು ಒಳಗೊಂಡಿರುವುದಕ್ಕೆ ರೋಜಾ ಎಂದು ಕರೆಯುತ್ತಾರೆ. ಇದನ್ನು ಎರಡನೇ ಇಬ್ರಾಹಿಂ ಆದಿಲ್‌ಷಾ ನಿರ್ಮಿಸಿದನು. ಇದನ್ನು ದಕ್ಷಿಣ ಭಾರತದ ತಾಜ್ ಮಹಲ್ ಎಂದು ಕರೆಯಲಾಗಿದೆ.
3. ಮೆಹತರ್ ಮಹಲ್ ಎಂಬುದು ಮೂರು ಅಂತಸ್ತಿನ ಅರಮನೆಯಾಗಿದೆ. ಇದನ್ನು ಸಹ 2 ನೇ ಇಬ್ರಾಹಿಂ ಆದಿಲ್ ಷಾ ನಿರ್ಮಿಸಿದನು.

4. ಬಿಜಾಪುರದ ಗೋಳಗುಮ್ಮಟವು ಒಂದು ಅದ್ಭುತವಾದ ಸ್ಮಾರಕವಾಗಿದೆ. ಈ ಬೃಹತ್ ಗುಮ್ಮಟವನ್ನು ಮಹಮ್ಮದ್ ಆದಿಲ್‌ಷಾನು ಸಾ.ಶ.1656 ರಲ್ಲಿ ನಿರ್ಮಿಸಿದನು. ಇದು ಅವನ ಗೋರಿಯಾಗಿದೆ. ಇದರ ಪಿಸುಗುಟ್ಟುವ ಮೊಗಸಾಲೆಯು ವಿಶೇಷವಾಗಿದೆ. ಇಲ್ಲಿ ಒಮ್ಮೆ ಮಾಡಿದ ಶಬ್ದವು ಏಳು ಬಾರಿ ಪ್ರತಿಧ್ವನಿಸುತ್ತದೆ. ಈ ಎಲ್ಲಾ ಲಕ್ಷಣಗಳು ಅದನ್ನು ವಿಶ್ವವಿಖ್ಯಾತ ಸ್ಮಾರಕವನ್ನಾಗಿಸಿದೆ.

5. ಬಾರಾ ಕಮಾನ್, ಬಡೇ ಕಮಾನ್, ಅಸಾರ್ ಮಹಲ್, ಆನಂದ ಮಹಲ್, ಉಪ್ಲಿ ಬುರುಝ್, ತಾಜ್ ಬಾವ್ಡಿ, ಚಾಂದ್ ಬಾವ್ಡಿ ಮುಂತಾದವು ಅವರ ಇತರ ಪ್ರಮುಖ ಸ್ಮಾರಕಗಳಾಗಿವೆ.

ಚಟುವಟಿಕೆ

ಬಹುಮನಿ ಮತ್ತು ಆದಿಲ್‌ಷಾಹಿ ಸುಲ್ತಾನರ ಸ್ಮಾರಕಗಳನ್ನು ಪಟ್ಟಿಮಾಡಿ ಮತ್ತು ಅವುಗಳ ಚಿತ್ರಗಳನ್ನು ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಕಂಡ ಪ್ರಶ್ನೆಗಳಿಗೆ ತಲಾ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಬಹಮನಿ ಮನೆತನದ ಸ್ಥಾಪಕನನ್ನು ಹೆಸರಿಸಿರಿ.
2. ಆದಿಲ್ ಷಾಹಿ ಮನೆತನದ ಸ್ಥಾಪಕ ಯಾರು?
3. ಇಬ್ರಾಹಿಂ ರೋಜಾ ನಿರ್ಮಿಸಿದವರಾರು?
4. ಬೀದರ್‌ನಲ್ಲಿರುವ ಮದರಸಾ ನಿರ್ಮಿಸಿದವರಾರು?
5. ದಕ್ಷಿಣ ಭಾರತದ ಅತ್ಯಂತ ದೊಡ್ಡ ಮಸೀದಿ ಯಾವುದು?
6. 'ಜಗದ್ಗುರು ಬಾದಷಾ' ಎಂದು ಯಾರನ್ನು ಕರೆಯಲಾಗಿದೆ?
7. 'ಕಿತಾಬ್–ಇ–ನವರಸ್' ಬರೆದವರಾರು?

II. ಈ ಕೆಳಕಂಡ ಪ್ರಶ್ನೆಗಳಿಗೆ ತಲಾ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬಹಮನಿ ಮನೆತನದ ರಾಜಧಾನಿಗಳನ್ನು ತಿಳಿಸಿ.
2. ಮಹಮದ್ ಗವಾನ ಯಾರು ಹಾಗೂ ಅವನು ಮದರಸಾವನ್ನು ಎಲ್ಲಿ ನಿರ್ಮಿಸಿದನು?
3. ಹಜರತ್ ಖ್ವಾಜಾಬಂದೇ ನವಾಜ್ ಯಾರು ಮತ್ತು ಅವರ ದರ್ಗ ಎಲ್ಲಿದೆ?
4. ಗೋಳ ಗುಮ್ಮಟ ಎಲ್ಲಿದೆ ಹಾಗೂ ಅದನ್ನು ನಿರ್ಮಿಸಿದವರಾರು?
5. ಬಿಜಾಪುರದ ಆದಿಲ್‌ಷಾಹಿಗಳ ಯಾವುದಾದರು ಎರಡು ಸ್ಮಾರಕಗಳನ್ನು ತಿಳಿಸಿ.
6. ಆದಿಲ್‌ಷಾಹಿ ಕಾಲದ ಇಬ್ಬರು ಇತಿಹಾಸಕಾರರನ್ನು ಹೆಸರಿಸಿರಿ.

III. ಈ ಕೆಳಕಂಡ ಪ್ರಶ್ನೆಗಳಿಗೆ ತಲಾ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಮಹಮದ್ ಗವಾನನ ಸಾಧನೆಗಳನ್ನು ವಿವರಿಸಿರಿ.
2. ಆದಿಲ್ ಷಾಹಿ ಕಾಲದ ಸಾಹಿತ್ಯ ಹಾಗೂ ವಾಸ್ತುಶಿಲ್ಪ ಪ್ರಗತಿಯನ್ನು ಕುರಿತು ಚರ್ಚಿಸಿರಿ.

❋ ❋ ❋ ❋

ಅಧ್ಯಾಯ – 6

ಮಧ್ಯಕಾಲೀನ ಭಾರತದ ಸಾಮಾಜಿಕ–ಧಾರ್ಮಿಕ ಸುಧಾರಣಾ ಚಳುವಳಿ

ಹಿಂದೂ ಧರ್ಮ ಕಾಲಾಂತರದಲ್ಲಿ ನ್ಯೂನತೆ ಮತ್ತು ಜಟಿಲತೆಗಳನ್ನು ಬೆಳೆಸಿಕೊಂಡಿತು. ಹಲವು ಸುಧಾರಕರಾದ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮತ್ತು ಬಸವೇಶ್ವರರು ಸಾಮಾಜಿಕ–ಧಾರ್ಮಿಕ ಸುಧಾರಣೆಗಳನ್ನು ಆರಂಭಿಸಿದರು. ಅವರು ಹಿಂದೂ ಧರ್ಮದ ಮೂಲತತ್ವ ಮತ್ತು ಧರ್ಮಶಾಸ್ತ್ರದ ನಿಯಮಗಳನ್ನು ಸ್ಪಷ್ಟಪಡಿಸಿದರು. ಈ ಸಾಮಾಜಿಕ ಸುಧಾರಣೆಗಳು ಮೂಢನಂಬಿಕೆಗಳನ್ನು ತೊಲಗಿಸುವ ಮತ್ತು ಸಮಾಜದಲ್ಲಿ ಸಮಾನತೆ ಸಾಧಿಸುವ ಉದ್ದೇಶವನ್ನು ಹೊಂದಿದ್ದವು.

ಶಂಕರಾಚಾರ್ಯ (ಸಾಶ 788–820)

ಶಂಕರರು ಕೇರಳದ ಕಾಲಡಿ ಎಂಬಲ್ಲಿ ಸಾಶ 788 ರಲ್ಲಿ ಜನಿಸಿದರು. ಶಿವಗುರು ಮತ್ತು ಆರ್ಯಾಂಬ ಇವರ ತಂದೆ ತಾಯಿಯರು. ಇವರು ಸಂಸಾರಿಕ ಜೀವನದಲ್ಲಿ ಆಸಕ್ತಿ ಹೊಂದದೆ, ತಾಯಿಯ ಅನುಮತಿ ಪಡೆದು ಸನ್ಯಾಸಿಯಾದರು. ಅವರು ಸನ್ಯಾಸ ಸ್ವೀಕರಿಸಿದ ನಂತರ ನರ್ಮದ ನದಿ ತೀರದಲ್ಲಿ ತಮ್ಮ ಗುರು ಗೋವಿಂದ ಭಗವತ್ಪಾದರನ್ನು ಭೇಟಿಯಾದರು. ಶಂಕರರು ದೇಶಾದ್ಯಂತ 3 ಬಾರಿ ಪ್ರವಾಸ ಮಾಡಿ ಕಾಶ್ಮೀರ, ನೇಪಾಳ, ಬನಾರಸ್, ಬದರಿನಾಥ್, ದ್ವಾರಕ, ಪುರಿ, ತಿರುಪತಿ, ಕಾಂಚಿ ಮುಂತಾದ ಸ್ಥಳಗಳಿಗೆ ಭೇಟಿನೀಡಿದರು. ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು 'ಸರ್ವಜ್ಞ' ಮತ್ತು 'ಜಗದ್ಗುರು' ಎಂಬ ಬಿರುದುಗಳನ್ನು ಹೊಂದಿದ್ದರು. ಅವರು ಹಲವಾರು ಮಠಗಳನ್ನು ಸ್ಥಾಪಿಸಿದ್ದರು. ಅವುಗಳಲ್ಲಿ 4 ಪ್ರಮುಖ ಮಠಗಳೆಂದರೆ,


ಶಂಕರಾಚಾರ್ಯರು

1) ಪುರಿಯ ಗೋವರ್ಧನ ಪೀಠ
2) ದ್ವಾರಕೆಯ ಕಾಳಿಕ ಮಠ
3) ಬದರಿನಾಥದ ಜೋತಿರ್ ಮಠ
4) ಶೃಂಗೇರಿಯ ಶಾರದ ಪೀಠ.


ಶಿವ, ವಿಷ್ಣು, ಸೂರ್ಯ, ಗಣೇಶ, ಕುಮಾರ ಮತ್ತು ಶಕ್ತಿ ದೇವರುಗಳ ಪೂಜೆಗೆ ಪ್ರಾಮುಖ್ಯತೆ ನೀಡುವುದರ ಮೂಲಕ ವಿವಿಧ ಪಂಥಗಳನ್ನು ಒಂದುಗೂಡಿಸುವ ಪ್ರಯತ್ನವನ್ನು ಮಾಡಿದರು. ಆದ್ದರಿಂದ ಇವರನ್ನು 'ಷಣ್ಮತ ಸ್ಥಾಪನಾಚಾರ್ಯ' ಎಂದು ಕರೆಯಲಾಗಿದೆ. ಶಂಕರರು ಬ್ರಹ್ಮಸೂತ್ರ, ಉಪನಿಷದ್, ಭಗವದ್ಗೀತೆಗಳ ಮೇಲೆ ವ್ಯಾಖ್ಯಾನಗಳನ್ನು ಬರೆದರು. ಇವರು 'ವಿವೇಕ ಚೂಡಾಮಣಿ', 'ಶಿವಾನಂದಲಹರಿ', 'ಆನಂದಲಹರಿ', 'ಸೌಂದರ್ಯಲಹರಿ' 'ಭಜಗೋವಿಂದಂ', ಮುಂತಾದ ಕೃತಿಗಳನ್ನು ರಚಿಸಿದರು. ಶಂಕರರು ತಮ್ಮ 32 ರ ಕಿರಿಯ ವಯಸ್ಸಿನಲ್ಲಿಯೇ ಮರಣ ಹೊಂದಿದರು.

ಅದ್ವೈತ ಸಿದ್ಧಾಂತ

ಅದ್ವೈತ ಎಂದರೆ ಏಕತ್ವ ಅಥವಾ ಎರಡಲ್ಲದ್ದು ಎಂದರ್ಥ. ಅವರ ಪ್ರಕಾರ ಬ್ರಹ್ಮ (ದೇವರು) ಅಂತಿಮ ಸತ್ಯ, ಅವನು ನಿರ್ಗುಣ (ಯಾವುದೇ ಗುಣ ವಿಶೇಷ ಇಲ್ಲದ್ದು), ನಿರಾಕಾರ (ಆಕಾರ ರಹಿತ) ಮತ್ತು ಸ್ವಪ್ರಕಾಶಕ (ಸ್ವಂತ ಬೆಳಕುಳ್ಳವನು). ಅವರು ಲೌಕಿಕ ಪ್ರಪಂಚಕ್ಕೆ ಆದ್ಯತೆ ನೀಡದೆ ಆಧ್ಯಾತ್ಮಿಕ ಪ್ರಪಂಚಕ್ಕೆ ಹೆಚ್ಚು ಒತ್ತು ನೀಡಿದರು. ಆದ್ದರಿಂದ ಅವರು ಪ್ರಪಂಚವನ್ನು ಮಾಯೆ ಎಂದರು. ಪ್ರಪಂಚ ಒಂದು ಭ್ರಮೆ. ಆತ್ಮ ಮತ್ತು ಪರಮಾತ್ಮ ಎರಡೂ ಒಂದೇ. ಶಂಕರರು "ಅಹಂ ಬ್ರಹ್ಮಾಸ್ಮಿ" (ನಾನೇ ಬ್ರಹ್ಮ) ಎಂದು ಪ್ರತಿಪಾದಿಸಿದವರು. ಅಜ್ಞಾನಿಯು ತನ್ನ ಆಂತರ್ಯದಲ್ಲಿ 'ಅವನನ್ನು' ಅರಿತುಕೊಳ್ಳದೆ ಬಾಹ್ಯ ಜಗತ್ತಿನಲ್ಲಿ ಹುಡುಕುತ್ತಾನೆ. ಈ ಸತ್ಯವನ್ನು ತಿಳಿಯಲು ಜ್ಞಾನವು ಅತೀ ಅವಶ್ಯಕ ಹಾಗೂ ಅದು ಮೋಕ್ಷಕ್ಕೆ ದಾರಿ ಮಾಡಿಕೊಡುತ್ತದೆ ಎಂದರು.

ರಾಮಾನುಜಾಚಾರ್ಯ (ಸಾಶ 1017–1137)

ರಾಮಾನುಜಾಚಾರ್ಯರು ಸಾಶ 1017 ರಲ್ಲಿ ಚೆನ್ನೈ ಸಮೀಪದ ಶ್ರೀ ಪೆರಂಬದೂರಿನಲ್ಲಿ ಜನಿಸಿದರು. ಕೇಶವ ಸೋಮಯಾಜಿ ಮತ್ತು ಕಾಂತಿಮತಿ ಅವರ ತಂದೆ ತಾಯಿಗಳು. ಇವರು ಕಾಂಚಿಯಲ್ಲಿ ಗುರುಗಳಾದ ಯಾದವ ಪ್ರಕಾಶರ ಬಳಿ ವಿದ್ಯಾಭ್ಯಾಸಮಾಡಿದರು. ರಾಮಾನುಜರು ತಮ್ಮ 16ನೇ ವಯಸ್ಸಿನಲ್ಲಿ ತಂಗಮ್ಮಳೊಂದಿಗೆ ವಿವಾಹವಾದರು. ಸಂಸಾರಿಕ ಜೀವನದಲ್ಲಿ ಅತೃಪ್ತಿ ಇದ್ದುದರಿಂದ ಸಂಸಾರವನ್ನು ತೊರೆದು ಸನ್ಯಾಸಿಯಾದರು. ಶ್ರೀರಂಗಂ ಮಠದ ಮುಖ್ಯಸ್ಥರಾದ ಯಮುನಾಚಾರ್ಯರು, ರಾಮಾನುಜಾಚಾರ್ಯರು ತನ್ನ ಉತ್ತರಾಧಿಕಾರಿಯಾಗಬೇಕೆಂದು ಬಯಸಿದರು. ಆದರೆ ರಾಮಾನುಜರು ಅಲ್ಲಿಗೆ ತಲುಪುವ ಮೊದಲೇ ಅವರು ಕಾಲವಾದರು.



ರಾಮಾನುಜಾಚಾರ್ಯ

ಮುಂದೆ ರಾಮಾನುಜಚಾರ್ಯರು ಶ್ರೀರಂಗಂ ಮಠದ ಮುಖ್ಯಸ್ಥರಾಗಿ ವೈಷ್ಣವ ಮತವನ್ನು ಜನಪ್ರಿಯಗೊಳಿಸಿದರು ಇದು ಕುಲೋತ್ತುಂಗ ಚೋಳನಿಗೆ ಇಷ್ಟವಾಗಲಿಲ್ಲ. ಆತ ಶೈವ ಮತಸ್ಥನಾಗಿದ್ದನು, ಆದ್ದರಿಂದ ರಾಮಾನುಜರು ಶ್ರೀರಂಗಂ ಅನ್ನು ಬಿಟ್ಟು ಕರ್ನಾಟಕಕ್ಕೆ ಬಂದರು. ಅವರಿಗೆ ಹೊಯ್ಸಳ ಅರಸ ವಿಷ್ಣುವರ್ಧನ ಆಶ್ರಯವನ್ನು ನೀಡಿದನು. ರಾಮಾನುಜರು ಮೇಲುಕೋಟೆಯಲ್ಲಿ ವೈಷ್ಣವ ಮಠ ಸ್ಥಾಪಿಸಿ ಅಲ್ಲಿಯೇ 20 ವರ್ಷ ನೆಲೆಸಿದರು. ಕುಲೋತ್ತುಂಗನ ಮರಣದ ನಂತರ ತಮಿಳುನಾಡಿಗೆ ಹಿಂದಿರುಗಿದರು. ಅವರು ಸಾಶ 1137ರಲ್ಲಿ ತಮ್ಮ 120ನೇ ವಯಸ್ಸಿನಲ್ಲಿ ಮರಣ ಹೊಂದಿದರು. 'ವೇದಾಂತಸಾರ', 'ವೇದಾಂತ ಸಂಗ್ರಹ', 'ವೇದಾಂತ ಸೂತ್ರ', 'ಗೀತ ಭಾಷ್ಯ' ಮತ್ತು 'ಶ್ರೀಭಾಷ್ಯಾ'. ರಾಮಾನುಜರ ಪ್ರಮುಖ ಕೃತಿಗಳು.

ವಿಶಿಷ್ಟಾದ್ವೈತ ಸಿದ್ಧಾಂತ

ರಾಮಾನುಜರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಶ್ರೀ ಅಥವಾ ಲಕ್ಷ್ಮೀ ಆರಾಧನೆಗೆ ಪ್ರಾಮುಖ್ಯತೆ ನೀಡಿರುವುದರಿಂದ ಅವರ ಅನುಯಾಯಿಗಳನ್ನು ಶ್ರೀವೈಷ್ಣವರು ಎಂದು ಕರೆಯಲಾಗಿದೆ. ಆಕೆಯನ್ನು

ದೇವರು ಮತ್ತು ಮನುಷ್ಯರ ನಡುವಿನ ಮಧ್ಯವರ್ತಿಯೆಂದು ಪರಿಗಣಿಸಲಾಗಿದೆ. ಅವರು ಶಂಕರರ ಮಾಯಾವಾದವನ್ನು ಖಂಡಿಸಿದರು. ರಾಮಾನುಜರ ಪ್ರಕಾರ ದೇವರಿದ್ದಾನೆ ಮತ್ತು ಪ್ರಪಂಚ ಸತ್ಯ. ಅಲ್ಲದೆ ಪರಮಾತ್ಮನು ಸತ್ಯ, ಸ್ವತಂತ್ರ ಮತ್ತು ಶಾಶ್ವತ ಎಂದು ಪ್ರತಿಪಾದಿಸಿದರು. ಆತ್ಮ (ಚಿತ್) ಮತ್ತು ಪ್ರಪಂಚ (ಅಚಿತ್)ಗಳು ದೇವರ ಅಧೀನ. ಪರಮಾತ್ಮನಿಲ್ಲದೆ ಆತ್ಮಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ರಾಮಾನುಜರು ಮೋಕ್ಷಕ್ಕೆ ಭಕ್ತಿ ಮಾರ್ಗವೆ ಪ್ರಧಾನವೆಂದು ಪ್ರತಿಪಾದಿಸಿದರು. ಅವರ ಭಕ್ತಿ ಮಾರ್ಗದಲ್ಲಿ 2 ಅಂಶಗಳಿವೆ.

1. ಪ್ರಪತ್ತಿ– ದೇವರಿಗೆ ಸಂಪೂರ್ಣವಾಗಿ ಶರಣಾಗುವುದು.
2. ಆಚಾರ್ಯಾಭಿಮಾನ – ಗುರುವಿಗೆ ಶರಣಾಗುವುದು.

ರಾಮಾನುಜರು ಜನನದ ಬೇಧವಿಲ್ಲದೆ ಎಲ್ಲಾ ವರ್ಗದ ಭಕ್ತರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ನೀಡಿದರು. ಅಸ್ಪೃಶ್ಯರನ್ನು 'ತಿರುಕುಲತ್ತರ್' ಅಥವಾ ಶ್ರೀಹರಿಯ ವಂಶಸ್ಥರು ಎಂದು ಕರೆದಿದ್ದಾರೆ.

ಮಧ್ವಾಚಾರ್ಯ (ಸಾಶ 1238–1317)

ಮಧ್ವಾಚಾರ್ಯರು ಉಡುಪಿ ಬಳಿಯ ಪಾಜಕದಲ್ಲಿ ಸಾಶ 1238 ರಲ್ಲಿ ಜನಿಸಿದರು. ಮಧ್ಯಗೇಹ ನಾರಾಯಣಭಟ್ಟ ಮತ್ತು ವೇದಾವತಿ ಅವರ ತಂದೆ ತಾಯಿಯರು. ಮಧ್ವಾಚಾರ್ಯರ ಮೊದಲ ಹೆಸರು ವಾಸುದೇವ, ಅಲ್ಲದೆ ಪೂರ್ಣಪ್ರಜ್ಞ ಮತ್ತು ಆನಂದತೀರ್ಥ ಎಂದೂ ಅವರನ್ನು ಕರೆಯಲಾಗುತ್ತಿತ್ತು. ಮಧ್ವಾಚಾರ್ಯರು ಶೀಘ್ರವೇ ವೇದ, ಪುರಾಣ ಮತ್ತು ಇತಿಹಾಸದ ಪ್ರಸಿದ್ಧ ವಿದ್ವಾಂಸರಾದರು. ಅವರ ಗುರು ಅಚ್ಯುತ ಪ್ರೇಕ್ಷರು ಅದ್ವೈತ ಮತಿಗಳಾಗಿದ್ದು, ಮಧ್ವರು ಗುರುಗಳೊಂದಿಗೆ ಭಿನ್ನಾಭಿಪ್ರಾಯವನ್ನು ಹೊಂದಲಾರಂಭಿಸಿದರು ಅಲ್ಲದೆ ತಮ್ಮದೇ ಸಿದ್ಧಾಂತವನ್ನು ವಿಕಾಸಗೊಳಿಸಿದರು.


ಮಧ್ವಾಚಾರ್ಯ

ಅವರು ಉತ್ತರ ಭಾರತದ ವ್ಯಾಪಕ ಪ್ರವಾಸ ಕೈಗೊಂಡು ಕಾಶಿ, ಬದರಿ, ಕೇದಾರ, ಹರಿದ್ವಾರ, ಗಯಾ ಮುಂತಾದ ಸ್ಥಳಗಳಿಗೆ ಭೇಟಿನೀಡಿದರು. ಉತ್ತರ ಭಾರತದಿಂದ ಹಿಂದಿರುಗುವಾಗ ಕೃಷ್ಣ ಮತ್ತು ಬಲರಾಮರ ಮೂರ್ತಿಗಳನ್ನು ತಂದು ಉಡುಪಿಯಲ್ಲಿ ಕೃಷ್ಣ ಹಾಗೂ ಮಲ್ಪೆಯಲ್ಲಿ ಬಲರಾಮನನ್ನು ಪ್ರತಿಷ್ಠಾಪಿಸಿದರು. ಅವರು ಉಡುಪಿಯಲ್ಲಿ ಅಷ್ಟ ಮಠಗಳನ್ನು ಸ್ಥಾಪಿಸಿದರು ಅವುಗಳೆಂದರೆ 1. ಸೋದೆ ಮಠ 2. ಶಿರೂರು ಮಠ 3. ಕಾಣಿಯೂರು ಮಠ 4. ಪೇಜಾವರ ಮಠ 5. ಪಾಲಿಮಾರು ಮಠ 6. ಆದಮಾರು ಮಠ 7. ಕೃಷ್ಣಪುರ ಮಠ ಮತ್ತು 8. ಪುತ್ತಿಗೆ ಮಠ.

ಅವರು ದಕ್ಷಿಣ ಭಾರತದ ಪವಿತ್ರ ಸ್ಥಳಗಳಾದ ಕಾಂಚಿ, ತಂಜಾವೂರು, ಶ್ರೀರಂಗಂ, ಕುಂಭಕೋಣಂ, ಮಧುರೈ, ರಾಮೇಶ್ವರಂ, ಕನ್ಯಾಕುಮಾರಿ ಮುಂತಾದ ಸ್ಥಳಗಳಿಗೂ ಭೇಟಿ ನೀಡಿದರು. ಅವರು 80 ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಮಧ್ವರು ಹಲವಾರು ಕೃತಿಗಳನ್ನು ಬರೆದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 'ಗೀತ ಭಾಷ್ಯ', 'ಬ್ರಹ್ಮಸೂತ್ರ ಭಾಷ್ಯ', 'ಅನುಭಾಷ್ಯ', 'ದ್ವಾದಶ ಸ್ತೋತ್ರ' ಮುಂತಾದವು.

ದ್ವೈತ ಸಿದ್ಧಾಂತ

ಮಧ್ವಾಚಾರ್ಯರ ಸಿದ್ಧಾಂತವನ್ನು ದ್ವೈತ (ಎರಡು) ಸಿದ್ಧಾಂತ ಎಂದು ಕರೆಯಲಾಗಿದೆ. ಇವರು ಅದ್ವೈತ ಸಿದ್ಧಾಂತವನ್ನು ಸಂಪೂರ್ಣವಾಗಿ ತಿರಸ್ಕರಿಸಿದರು. ಅವರ ಪ್ರಕಾರ ಮೂರು ಪ್ರಧಾನಾಂಶಗಳಿವೆ. ಜಡ (ಪ್ರಪಂಚ), ಆತ್ಮ (ಚೇತನ ಅಥವಾ ಜೀವಾತ್ಮ) ಮತ್ತು ದೇವರು (ಪರಮಾತ್ಮ). ದೇವರು (ಪರಮಾತ್ಮ) ಸ್ವತಂತ್ರ ಜೀವಾತ್ಮ ಮತ್ತು ಜಡ ಪರಮಾತ್ಮನ ಅಧೀನ. ಮಧ್ವರ ಪ್ರಕಾರ ಜೀವಾತ್ಮ ಮತ್ತು ಪರಮಾತ್ಮ ಎರಡು ಬೇರೆ ಬೇರೆ ಆದ್ದರಿಂದ ಇದನ್ನು ದ್ವೈತ ಸಿ ದ್ಧಾಂತ ಎಂದು ಕರೆಯಲಾಗಿದೆ.

ಮಧ್ವರು ಆತ್ಮ, ಜಡಪ್ರಪಂಚ ಮತ್ತು ಪರಮಾತ್ಮರ ನಡುವೆ ಐದು ಮೂಲಭೂತ ವ್ಯತ್ಯಾಸಗಳನ್ನು ಗುರುತಿಸಿದರು.

1. ಆತ್ಮ ಮತ್ತು ಪರಮಾತ್ಮ ಒಂದರೊಳಗೊಂದು ವಿಲೀನಗೊಳ್ಳುವುದಿಲ್ಲ..
2. ಆತ್ಮ ಇನ್ನೊಂದು ಆತ್ಮದೊಂದಿಗೆ ವಿಲೀನಗೊಳ್ಳುವುದಿಲ್ಲ.
3. ಜಡಪ್ರಪಂಚ ಪರಮಾತ್ಮನೊಂದಿಗೆ ವಿಲೀನಗೊಳ್ಳುವುದಿಲ್ಲ.
4. ಜಡಪ್ರಪಂಚ ಆತ್ಮದೊಂದಿಗೆ ವಿಲೀನಗೊಳ್ಳುವುದಿಲ್ಲ.
5. ಜಡಪ್ರಪಂಚ ಇನ್ನೊಂದು ಜಡಪ್ರಪಂಚದೊಂದಿಗೆ ವಿಲೀನಗೊಳ್ಳುವುದಿಲ್ಲ.

ಬಸವೇಶ್ವರ (ಸಾಶ 1132–1168)



ಬಸವೇಶ್ವರರು

ಬಸವೇಶ್ವರರು ಸಾಶ 1132 ರಲ್ಲಿ ಬಾಗೇವಾಡಿಯಲ್ಲಿ ಜನಿಸಿದರು. ಮಾದರಸ ಮತ್ತು ಮಾದಲಾಂಬಿಕೆ ಇವರ ತಂದೆ ತಾಯಿಯರು. ಚಿಕ್ಕವಯಸಿನಲ್ಲೆ ವೇದ, ವ್ಯಾಕರಣ, ತರ್ಕಶಾಸ್ತ್ರ ಅಧ್ಯಯನ ಮಾಡಿದರು. 8ನೇ ವಯಸ್ಸಿನಲ್ಲಿ ಜನಿವಾರ ಕಿತ್ತೊಗೆದು ತಮಗೆ ಹುಟ್ಟುವಾಗಲೇ ಲಿಂಗ ದೀಕ್ಷೆಯಾಗಿರುವುದರಿಂದ ಉಪನಯನದ ಅಗತ್ಯವಿಲ್ಲ ಎಂದರು. ನಂತರ ಕೂಡಲಸಂಗಮಕ್ಕೆ ತೆರಳಿ ಜಾತವೇದಮುನಿ ಬಳಿ ವಿದ್ಯಾಭ್ಯಾಸ ಮಾಡಿದರು.

ಕಲಚೂರಿ ಅರಸ ಬಿಜ್ಜಳ ಬಸವೇಶ್ವರರನ್ನು ಕರಣಿಕರನ್ನಾಗಿ ನೇಮಿಸಿಕೊಂಡನು. ಬಸವೇಶ್ವರರು ನೀಲಾಂಬಿಕೆ ಹಾಗೂ ಗಂಗಾಂಬಿಕೆಯರನ್ನು ವಿವಾಹವಾದರು. ಅಧಿಕಾರ, ಸಂಪತ್ತು ಹಾಗೂ ಲೌಕಿಕ ಬಂಧನಕ್ಕೆ ಒಳಗಾಗದೆ ಅವರು ಪ್ರಾಮಾಣಿಕ ಸೇವೆಯಿಂದ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದರು. ಸಿದ್ಧರಸನ ಮರಣದ ನಂತರ ಪ್ರಧಾನಮಂತ್ರಿಯಾದರು. ಅಂದು ಸಮಾಜದಲ್ಲಿ ರೂಢಿಯಲ್ಲಿದ್ದ ಜಾತಿಪದ್ಧತಿ, ಮೂಢನಂಬಿಕೆ, ಬಹುದೇವತಾರಾಧನೆ, ಮೂರ್ತಿ ಪೂಜೆ ಮತ್ತು ಪ್ರಾಣಿಬಲಿ ನಿರ್ಮೂಲನೆಗೆ ಪಣತೊಟ್ಟರು. ರಾಜ್ಯದಲ್ಲಿ ಪ್ರವಾಸ ಕೈಗೊಂಡು ಜನರಲ್ಲಿ ಜಾಗೃತಿ ಮೂಡಿಸಿದರು. ಜಾತಿಪದ್ಧತಿಗೆ ಧರ್ಮಶಾಸ್ತ್ರಗಳ

ಆಧಾರವಿಲ್ಲವೆಂಬುದನ್ನು ಸ್ಪಷ್ಟಪಡಿಸಿದರು. ಸಹಭೋಜನಕ್ಕೆ ಪ್ರೋತ್ಸಾಹಿಸಿ, ಅಸ್ಪೃಶ್ಯ ನಾಗದೇವನಿಗೆ ಲಿಂಗದೀಕ್ಷೆ ನೀಡಿ ಅವನ ಆತಿಥ್ಯವನ್ನು ಸ್ವೀಕರಿಸಿದರು. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಿಸಿ, ಬ್ರಾಹ್ಮಣ ಮಧುವಯ್ಯನ ಮಗಳಿಗೂ ಹರಿಜನ ಹರಳಯ್ಯನ ಮಗನಿಗೂ ವಿವಾಹ ಮಾಡಿಸಿದರು ಅವರಿಬ್ಬರೂ ಶಿವಭಕ್ತರಾಗಿದ್ದರು. ಪ್ರಾಣಿಬಲಿಯನ್ನು ತಡೆದು "ದಯವೇ ಧರ್ಮದ ಮೂಲವಯ್ಯ" ಎಂದರು.

ಬಸವೇಶ್ವರರ ಧರ್ಮಕಾರ್ಯಗಳನ್ನು ಕಂಡು ಸಂಪ್ರದಾಯಸ್ಥರು ಈ ಧರ್ಮಕಾರ್ಯಗಳಿಗೆ ಭಂಡಾರದ ಹಣವನ್ನು ಬಳಸುತ್ತಿದ್ದಾರೆಂದೂ ಹಾಗೂ ಹಿಂದೂ ಧರ್ಮವನ್ನು ಕೆಡಿಸುತ್ತಿದ್ದಾರೆಂದೂ ಬಿಜ್ಜಳನಲ್ಲಿ ದೂರು ನೀಡಿದರು. ಸಂಪ್ರದಾಯಸ್ಥರನ್ನು ಸಮಾಧಾನ ಪಡಿಸುವ ಸಲುವಾಗಿ ಬಿಜ್ಜಳನು ಮಧುವಯ್ಯ ಮತ್ತು ಹರಳಯ್ಯರನ್ನು ಮರಣ ದಂಡನೆಗೆ ಗುರಿಪಡಿಸಿದನು ಹಾಗೂ ನವ ದಂಪತಿಗಳ ಕಣ್ಣು ಕೀಳಿಸಿದನು. ಇದರಿಂದ ಬೇಸರಗೊಂಡ ಬಸವೇಶ್ವರರು ಮಂತ್ರಿ ಪದವಿ ತ್ಯಾಗಮಾಡಿ ಕೂಡಲಸಂಗಮಕ್ಕೆ ತೆರಳಿದರು. ಇದು ಕಲ್ಯಾಣದಲ್ಲಿ ಕ್ರಾಂತಿಗೆ ಕಾರಣವಾಯಿತು. ಈ ದಂಗೆಯಲ್ಲಿ ಬಿಜ್ಜಳನ ಕೊಲೆಯಾಯಿತು. ಬಸವೇಶ್ವರರು ಸಾಶ 1168 ರಲ್ಲಿ ಕೂಡಲಸಂಗಮ ದೇವರಲ್ಲಿ ಐಕ್ಯರಾದರು.

ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ

ಬಸವೇಶ್ವರರು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ಲಿಂಗ ಪೂಜೆಗೆ ಆದ್ಯತೆ ನೀಡಿದರು. ಅಲ್ಲದೆ ಜಾತಿ ಅಥವಾ ಲಿಂಗ ಬೇಧವಿಲ್ಲದೆ ಎಲ್ಲರೂ ಇಷ್ಟಲಿಂಗ ಧರಿಸಲು ಅವಕಾಶ ನೀಡಿದರು. ಹೀಗೆ ಲಿಂಗ ಧರಿಸಿದವರನ್ನು ಲಿಂಗಾಯತರೆಂದು ಕರೆಯಲಾಯಿತು. ಲಿಂಗಾಯಿತ ಧರ್ಮದಲ್ಲಿ ಶಿವ ಪೂಜೆಗೆ ಅವಕಾಶ ನೀಡಲಾಗಿದ್ದು ಶಿವನ ಆರಾಧನೆಯಲ್ಲಿ ಲಿಂಗ (ಪರಮಾತ್ಮ) ಮತ್ತು ಅಂಗ(ಜೀವಾತ್ಮ) ಎಂಬ ಎರಡು ಭಾಗಗಳಿವೆ, ಅಂಗ (ಜೀವಾತ್ಮ) ಲಿಂಗೈಕ್ಯವಾಗುವುದೇ ಮೋಕ್ಷ. ಶಿವ (ಪುರುಷ) ಮತ್ತು ಶಕ್ತಿ (ಪ್ರಕೃತಿ)ಗಳ ವಿಲೀನವು ಬಸವ ತತ್ವಕ್ಕೆ ಆಧಾರವಾಗಿದೆ. ಪರಸ್ಪರ ವಿಲೀನವಿಲ್ಲದೆ ಪುರುಷ ಮತ್ತು ಪ್ರಕೃತಿಯು ಅಪೂರ್ಣ. ಇದನ್ನು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಎಂದು ಕರೆಯಲಾಗಿದೆ. ಮೋಕ್ಷಕ್ಕಾಗಿ ಅಂಗವು ಲಿಂಗ ಪೂಜೆ ಮಾಡುವುದು ಅತ್ಯಗತ್ಯ. ಲಿಂಗಾಯತರು ದೀಕ್ಷೆಯ ಸಮಯದಲ್ಲಿ ಹೇಳಿಕೊಡುವ ಅಷ್ಟಾವರಣ (ಎಂಟು) ತತ್ವಗಳನ್ನು ಪಾಲಿಸಬೇಕು. ಅವುಗಳೆಂದರೆ:

1) ಗುರುವಿಗೆ ವಿಧೇಯತೆ ತೋರುವುದು.
2) ಲಿಂಗಪೂಜೆ ಮಾಡುವುದು.
3) ಜಂಗಮರಿಗೆ ಗೌರವ ತೋರುವುದು.
4) ಹಣೆಗೆ ವಿಭೂತಿ ಧರಿಸುವುದು.
5) ರುದ್ರಾಕ್ಷಿ ಧರಿಸುವುದು.
6) ಪಾದೋದಕವನ್ನು ಸ್ವೀಕರಿಸುವುದು.
7) ದೇವರಿಗೆ ನೈವೇದ್ಯ ಅರ್ಪಿಸಿ ಪ್ರಸಾದವನ್ನು ಸ್ವೀಕರಿಸುವುದು.
8) ನಮಃ ಶಿವಾಯ ಎಂಬ ಪಂಚಾಕ್ಷರ ಮಂತ್ರ ಉಚ್ಚರಿಸುವುದು.

ಬಸವೇಶ್ವರರು ಮುಕ್ತಿ ಸಾಧನೆಗೆ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿದರು. ಮುಕ್ತಿ ಸಾಧನೆಗೆ ಜಾತಿ ಅಥವಾ ಲಿಂಗ ಬೇಧವಿಲ್ಲ ಎಂದ ಅವರು ಜಾತಿಪದ್ಧತಿಯನ್ನು ಕಟುವಾಗಿ ಟೀಕಿಸಿದರು. ಮಾನವನ ಅಂತಸ್ತು

ಅವನ ಯೋಗ್ಯತೆಯಿಂದ ನಿರ್ಧಾರವಾಗುವುದೇ ಹೊರತು ಜಾತಿಯಿಂದಲ್ಲ, ಶಿವನ ಮುಂದೆ ಎಲ್ಲರೂ ಸಮಾನರು ಎಂದರು. ಮೂರ್ತಿಪೂಜೆ, ತೀರ್ಥಸ್ನಾನ, ಕಲ್ಲು–ಮರಗಳ ಪೂಜೆಯನ್ನು ಖಂಡಿಸಿದರು. "ಕಲ್ಲ ನಾಗರ ಕಂಡರೆ ಹಾಲನೆರೆ ಎಂಬವರು ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ" ಎಂದರು. ಅವರು "ಉಳ್ಳವರು ಶಿವಾಲಯವ ಮಾಡುವರು! ನಾನೇನ ಮಾಡುವೆ ಬಡವನಯ್ಯ!....." ಎಂಬ ವಚನಗಳ ಮೂಲಕ ಜನರ ಡಂಬಾಚಾರಗಳನ್ನು ಬಯಲಿಗೆಳೆದರು.

ಪ್ರತಿಯೊಬ್ಬರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿ ಜೀವಿಸಬೇಕು, ದುಡಿಯದೆ ಅನ್ನ ತಿನ್ನುವ ಹಕ್ಕು ಯಾರಿಗೂ ಇಲ್ಲ. ಕಾಯಕ ಮುಕ್ತಿಗೆ ದಾರಿತೋರ ಬಲ್ಲದು. ಕಾಯಕವು ಭಕ್ತಿಯ ಮತ್ತೊಂದು ರೂಪವಾದ್ದರಿಂದ "ಕಾಯಕವೇ ಕೈಲಾಸ" ಎಂದರು. ವೃತ್ತಿ ಆಧಾರದ ಜಾತಿ ವ್ಯವಸ್ಥೆಯನ್ನು ಖಂಡಿಸಿದ ಬಸವಣ್ಣನವರು ಯಾವ ಕಾಯಕವೂ ಕನಿಷ್ಠವಲ್ಲ ಎಂದು ಶ್ರಮ ಗೌರವ (Dignity of labour)ವನ್ನು ಎತ್ತಿ ಹಿಡಿದರು. ನಾವು ಸರಳತೆ, ಸಚ್ಚಾರಿತ್ರ್ಯ, ದಯೆ, ಪ್ರೀತಿ, ಅನುಕಂಪ ರೂಢಿಸಿಕೊಳ್ಳಬೇಕು. "ಆಚಾರವೇ ಸ್ವರ್ಗ ಅನಾಚಾರವೇ ನರಕ" ಎಂದರು. ಅಲ್ಲದೇ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಇದೇ ಅಂತರಂಗ ಶುದ್ಧಿ! ಇದೇ ಬಹಿರಂಗ ಶುದ್ಧಿ!" ಎಂದ ಬಸವೇಶ್ವರರು ಬಹಿರಂಗ ಶುದ್ಧಿಗಿಂತ ಅಂತರಂಗ ಶುದ್ಧಿಗೆ ಆದ್ಯತೆ ಕೊಟ್ಟರು. ವ್ಯಕ್ತಿಯು ಸಂಗ್ರಹಣೆಯಲ್ಲಿ ತೊಡಗದೆ 'ದಾಸೋಹ'ದಲ್ಲಿ ತೊಡಗಿಸಿಕೊಳ್ಳಬೇಕು. ವೈಯಕ್ತಿಕ ಗಳಿಕೆಯನ್ನು ಸಮಾಜಕ್ಕೆ ಹಂಚುವುದನ್ನು ದಾಸೋಹ ಎನ್ನವರು,

ಅನುಭವ ಮಂಟಪ

ಬಸವೇಶ್ವರರು ತಮ್ಮ ತತ್ವ ಪ್ರಚಾರಕ್ಕಾಗಿ ಕಲ್ಯಾಣದಲ್ಲಿ 'ಅನುಭವ ಮಂಟಪ'ವನ್ನು ಸ್ಥಾಪಿಸಿದರು. ಇದನ್ನು 'ವಚನ ಮಂಟಪ' ಎಂದೂ ಕರೆಯಲಾಗಿದೆ. ಇಲ್ಲಿ ಧರ್ಮಗೋಷ್ಠಿಗಳು ನಡೆದು ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಗಳನ್ನು ಚರ್ಚಿಸಲಾಗುತ್ತಿತ್ತು. ಇಲ್ಲಿನ ಧರ್ಮಗೋಷ್ಠಿಯ ಅಧ್ಯಕ್ಷತೆಯನ್ನು ಅಲ್ಲಮಪ್ರಭು ವಹಿಸುತ್ತಿದ್ದರು. ಈ ಸಭೆಯಲ್ಲಿ ಪಾಲ್ಗೊಂಡ ಪ್ರಮುಖರೆಂದರೆ ಚನ್ನಬಸವಣ್ಣ, ಸಿದ್ದರಾಮೇಶ್ವರ, ಮಾದಾರ ಧೂಳಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ, ಮಾದಾರ ಚನ್ನಯ್ಯ, ಅಕ್ಕಾಮಹಾದೇವಿ, ಲಕ್ಕಮ್ಮ, ನಾಗಾಂಬಿಕೆ, ಮುಕ್ತಾಯಕ್ಕ ಮುಂತಾದವರು. ಈ ಮೂಲಕ ಕಲ್ಯಾಣ ದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯಿತು.

ವಚನಗಳು

ವಚನಗಳು ಕನ್ನಡ ಸಾಹಿತ್ಯದ ವಿಶಿಷ್ಠ ಪ್ರಕಾರವಾಗಿದ್ದು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಇವು ಜನರಲ್ಲಿ ಜಾಗೃತಿಯನ್ನುಂಟು ಮಾಡಿ ಸಮಾಜ ಸುಧಾರಣೆಗೆ ಬುನಾದಿಯನ್ನು ಹಾಕಿದವು. ಅಲ್ಲದೆ ಅವು ಸದ್ಗುಣ ಮತ್ತು ನೈತಿಕ ಮೌಲ್ಯಗಳನ್ನೊಳಗೊಂಡಿವೆ. ಬಸವೇಶ್ವರರು ಸುಮಾರು 5000 ವಚನಗಳನ್ನು ರಚಿಸಿದ್ದು 'ಕೂಡಲಸಂಗಮದೇವ' ಎಂಬುದು ಅವರ ಅಂಕಿತನಾಮವಾಗಿದೆ.

ಭಕ್ತಿ ಚಳುವಳಿ:

ಮಧ್ಯಕಾಲೀನ ಯುಗದಲ್ಲಿ ನಡೆದ ಭಕ್ತಿ ಚಳುವಳಿಯು ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿಯಾಗಿತ್ತು. ಭಕ್ತಿ ಚಳುವಳಿಯ ಪ್ರತಿಪಾದಕರು ಭಕ್ತಿ, ಧಾರ್ಮಿಕ ಸಾಮರಸ್ಯ, ಸಾಮಾಜಿಕ ಸಮಾನತೆ ಮತ್ತು ಲಿಂಗ ಸಮಾನತೆಗೆ ಪ್ರಾಮುಖ್ಯತೆ ನೀಡಿದರು.

ರಮಾನಂದ (ಸಾಶ 1400–1470)

ಭಕ್ತಿ ಚಳುವಳಿ ದಕ್ಷಿಣ ಭಾರತದ ಸಂತರಿಂದ ಪ್ರತಿಪಾದಿಸಲ್ಪಟ್ಟರೂ, ಉತ್ತರ ಭಾರತದಲ್ಲಿ ಈ ಚಳುವಳಿಯನ್ನು ಜನಪ್ರಿಯಗೊಳಿಸಿದ ಕೀರ್ತಿ ರಮಾನಂದರಿಗೆ ಸಲ್ಲುತ್ತದೆ. ಪ್ರಯಾಗದಲ್ಲಿ ಜನಿಸಿದ ಅವರು ವೈಷ್ಣವ ಪಂಥವನ್ನು ಬೋಧಿಸಿದರು. ಅವರು ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ವಿಶ್ವಾಸವಿಟ್ಟು ಅವರ ಬೋಧನೆಯನ್ನು ಇನ್ನಷ್ಟು ಪ್ರಚಾರಗೊಳಿಸಿದರು. ಅವರು ಸಂಸ್ಕೃತಕ್ಕೆ ಬದಲಾಗಿ ಹಿಂದಿ ಭಾಷೆಯನ್ನು ಬಳಸಿದರು. ಇದರಿಂದ ಸಾಮಾನ್ಯ ಜನರಿಗೆ ಅವರ ಬೋಧನೆ ಸರಳವಾಗಿ ತಿಳಿಯಿತು. ಇವರು ಜಾತಿ ವ್ಯವಸ್ಥೆಯನ್ನು ಖಂಡಿಸಿ ಭ್ರಾತೃತ್ವವನ್ನು ಬೋಧಿಸಿದರು.

ಕಬೀರ್ (ಸಾಶ 1440–1518)

ಕಬೀರರು ವಾರಣಾಸಿಯಲ್ಲಿನ ನೇಕಾರ ಮುಸ್ಲಿಂ ದಂಪತಿಗಳಾದ ನಿರು ಮತ್ತು ನಿಮ ಬಳಿ ಬೆಳೆದರು. ಅವರು ರಮಾನಂದರ ಶಿಷ್ಯರಲ್ಲಿ ಅತ್ಯಂತ ಪ್ರಮುಖರಾಗಿದ್ದರು. ಇವರು ಸಮಾನತೆಯನ್ನು ಬೋಧಿಸಿದರು ಮತ್ತು ಎಲ್ಲಾ ಜಾತಿ ಮತಗಳ ನಡುವೆ ಸಾಮರಸ್ಯಕ್ಕಾಗಿ ಪ್ರೀತಿಯೆಂಬ ಧರ್ಮವನ್ನು ಬೋಧಿಸಿದರು. ಬಹುಶ: ಹಿಂದು ಮುಸ್ಲಿಂ ಏಕತೆಯನ್ನು ಒಪ್ಪಿದ ಸಂತರಲ್ಲಿ ಇವರು ಪ್ರಮುಖರು. ಅವರ ಪ್ರಕಾರ ಅಲ್ಲಾ ಮತ್ತು ರಾಮ ಎಂಬುದು ಒಂದೇ ದೇವರ ಎರಡು ಹೆಸರುಗಳು. ದೇವರನ್ನು ಭಕ್ತರ ಹೃದಯದಲ್ಲಲ್ಲದೆ ದೇವಾಲಯ ಅಥವಾ ಮಸೀದಿಯಲ್ಲಿ ಕಾಣಲು ಸಾಧ್ಯವಿಲ್ಲ. ಅವರು ಮೂರ್ತಿ ಪೂಜೆಯನ್ನು ಖಂಡಿಸಿದರು ಮತ್ತು ತೀರ್ಥಯಾತ್ರೆ, ಪವಿತ್ರ ಸ್ನಾನ ಅಥವಾ ಜೋರಾಗಿ ಪ್ರಾರ್ಥಿಸುವುದರಿಂದ ದೇವರನ್ನು ಕಾಣಲು ಸಾಧ್ಯವಿಲ್ಲ, ಭಕ್ತಿ ಮಾರ್ಗದಿಂದ ಮಾತ್ರ ದೇವರನ್ನು ಕಾಣಲು ಸಾಧ್ಯ ಎಂದರು. ಕಬೀರ ಪಂಥಿಯರೆಂಬ ಅವರ ಅನುಯಾಯಿಗಳಲ್ಲಿ ಹಿಂದೂಗಳು ಮತ್ತು ಮುಸಲ್ಮಾನರಿಬ್ಬರೂ ಇದ್ದರು. ಅವರ ಭಕ್ತಿ ಪೂರಕ ಗೀತ ರಚನೆಗಳು 'ದೋಹ' ಪ್ರಕಾರದಲ್ಲಿವೆ.

ಗುರುನಾನಕ್ (ಸಾಶ 1469–1539)

ಗುರುನಾನಕ್ ಸಿಖ್ ಧರ್ಮದ ಸ್ಥಾಪಕರು. ಇವರು ಕಬೀರರ ಬೋಧನೆಯಿಂದ ಪ್ರಭಾವಿತರಾಗಿದ್ದರು. ಇವರು ಮಾನವ ಭ್ರಾತೃತ್ವವನ್ನು ಬೋಧಿಸಿದರು. ಇವರು ಮೂರ್ತಿ ಪೂಜೆ, ಜಾತಿಪದ್ಧತಿ, ಸತಿಪದ್ಧತಿ ಮತ್ತು ಇತರೆ ಸಾಮಾಜಿಕ ಅನಿಷ್ಠಗಳನ್ನು ವಿರೋಧಿಸಿದರು. ಜನರಿಗೆ ಸತ್ಯ ನುಡಿಯಬೇಕೆಂದು ಉಪದೇಶಿಸಿದರು. ಹಿಂದೂ–ಮುಸ್ಲಿಂರಲ್ಲಿನ ತಪ್ಪು ತಿಳುವಳಿಕೆಗಳು ಘರ್ಷಣೆಗಳಿಗೆ ಕಾರಣವೆಂದು ನಂಬಿದ್ದರು. ಪುರೋಹಿತರು ಮತ್ತು ಮೇಲ್ವರ್ಗದವರು ಬಡವರನ್ನು ಶೋಷಿಸುವುದನ್ನು ಅವರು ವಿರೋಧಿಸಿದರು. ಸಿಖ್ಖರ ನಂಬಿಕೆಯಂತೆ ಅವರಿಗೆ 30ನೇ ವಯಸ್ಸಿನಲ್ಲಿ ಸುಲ್ತಾನ್‌ಪುರದ ಬಳಿ ಒಂದು ಸ್ಥಳದಲ್ಲಿ ಜ್ಞಾನೋದಯವಾಯಿತು. ನಂತರದ 30ವರ್ಷ ವ್ಯಾಪಾಕವಾಗಿ ಪ್ರವಾಸ ಮಾಡಿ ಆಧ್ಯಾತ್ಮಿಕ ಅನುಭವ ಪಡೆದುಕೊಂಡರು. ಇವರ ಅನುಯಾಯಿಗಳನ್ನು ಸಿಖ್ಖರು ಎಂದು ಕರೆಯಲಾಗಿದೆ. ಗುರುಗ್ರಂಥ ಸಾಹೆಬ್ ಸಿಖ್ಖರ ಪವಿತ್ರ ಗ್ರಂಥವಾಗಿದೆ. ಅದು ಗುರುಮುಖಿ ಲಿಪಿಯಲ್ಲಿದೆ.

ಚೈತನ್ಯ (ಸಾಶ 1486–1534)

ಚೈತನ್ಯರು ಭಾರತದ ಪೂರ್ವ ಭಾಗದಲ್ಲಿ ಭಕ್ತಿ ಚಳುವಳಿ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದರು, ಇವರು ಆಧುನಿಕ ವೈಷ್ಣವ ಪಂಥದ ಸ್ಥಾಪಕರಾಗಿದ್ದು, ಅದನ್ನು ಬಂಗಾಳದಲ್ಲಿ ತಮ್ಮ ಕೀರ್ತನೆಗಳ ಮೂಲಕ ಜನಪ್ರಿಯಗೊಳಿಸಿದರು. ಮೋಕ್ಷಕ್ಕೆ ರಾಗ (ಸಂಗೀತ ಮತ್ತು ನೃತ್ಯ) ಉತ್ತಮ ಮಾರ್ಗ ಎಂಬ ಸಂದೇಶವನ್ನು

ಹರಡಿದರು. ಅವರು ರಾಧ ಮತ್ತು ಕೃಷ್ಣರನ್ನು ಆರಾಧಿಸಿದರು ಮತ್ತು ಅವರ ಜೀವನವನ್ನು ಆಧ್ಯಾತ್ಮೀಕರಣಗೊಳಿಸಲು ಪ್ರಯತ್ನಿಸಿದರು.

ಮೀರಾಬಾಯಿ (ಸಾಶ 1498–1569)

ಮೀರಾಬಾಯಿ ಬಾಲ್ಯದಿಂದಲೂ ಹೆಚ್ಚು ಧಾರ್ಮಿಕ ಶ್ರದ್ಧೆ ಉಳ್ಳವಳಾಗಿದ್ದಳು. ಅವಳು ತನ್ನ ತಾತನ ರೀತಿಯಲ್ಲಿ ವೈಷ್ಣವ ಪಂಥದ ಕೃಷ್ಣನ ಆರಾಧಕಳಾಗಿದ್ದಳು. ಗಂಡನ ಮರಣದ ನಂತರ ಅವಳು ಸಂಪೂರ್ಣವಾಗಿ ಧಾರ್ಮಿಕ ಕಾರ್ಯಗಳಿಗೆ ಅರ್ಪಿಸಿಕೊಂಡಳು. ಅವಳು ಕೃಷ್ಣನ ಪರಮ ಭಕ್ತೆಯಾಗಿದ್ದು, ತನ್ನ ಗೀತೆಗಳ ಮೂಲಕ ರಾಜಾಸ್ಥಾನದಲ್ಲಿ ಕೃಷ್ಣ ಪಂಥವನ್ನು ಜನಪ್ರಿಯಗೊಳಿಸಿದಳು. ಮೀರಾ ಅನೇಕ ಗೀತೆಗಳನ್ನು ರಚಿಸಿದಳೆಂದು ಹೇಳಲಾಗಿದೆ. ಅವೆಲ್ಲವೂ ಭಕ್ತಿಗೀತೆಗಳಾಗಿದ್ದು 'ಮೀರಾಭಜನ್'ಗಳೆಂದು ಕರೆಯಲ್ಪಟ್ಟಿವೆ. ಅವುಗಳನ್ನು ಬ್ರಿಜ್‌ಭಾಷೆ ಹಾಗೂ ಭಾಗಶ: ರಾಜಸ್ಥಾನಿಯಲ್ಲಿ ಬರೆಯಲಾಗಿದ್ದು ಕೆಲವು ಗೀತೆಗಳು ಗುಜರಾತಿ ಭಾಷೆಯಲ್ಲಿವೆ.

ಸೂಫಿ ಪಂಥ

ಸೂಫಿ ಎಂಬ ಶಬ್ದ ಸಾಫ್ ಎಂಬ ಪದದಿಂದ ಬಂದಿದೆ ಅದರ ಅರ್ಥ ಉಣ್ಣೆ. ಸೂಫಿ ಸಂತರು ಉಣ್ಣೆ ನಿಲುವಂಗಿಯನ್ನು ಧರಿಸುತ್ತಿದ್ದುದರಿಂದ ಸೂಫಿ ಎಂಬ ಪದ ಬಂದಿದೆ. ಇದರ ಇನ್ನೊಂದು ಅರ್ಥ ಪರಿಶುದ್ಧತೆ. ಸಫಾ ಎಂಬುದು ಮಸೀದಿಯ ಹೊರಗಿನ ವೇದಿಕೆ. ಹಾಗಾಗಿ ಕೆಲವು ವಿದ್ವಾಂಸರು ಈ ಕಾರಣದಿಂದಲೇ ಸೂಫಿ ಪದ ಬಳಕೆಗೆ ಬಂದಿದೆ ಎಂದು ನಂಬುತ್ತಾರೆ.

ಮಧ್ಯಕಾಲೀನ ಭಾರತದಲ್ಲಿ ಇಸ್ಲಾಂ ಧರ್ಮದ ಮೇಲೆ ಹಿಂದೂ ಧರ್ಮದ ಪ್ರಭಾವದ ಪರಿಣಾಮವಾಗಿ ಸೂಫಿ ಪಂಥ ಉದಯಿಸಿತು. ಇದು ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಅನೇಕ ಆಚರಣೆಗಳನ್ನು ಅಳವಡಿಸಿಕೊಂಡಿತು. ಹಿಂದೂ ಸಂತರಂತೆ ಸೂಫಿ ಸಂತರು ಕೂಡ ಸಾಮಾಜಿಕ ಸಮಾನತೆ, ಲಿಂಗ ಸಮಾನತೆ, ಧಾರ್ಮಿಕ ಸಾಮರಸ್ಯ, ಭಕ್ತಿ, ಮುಂತಾದವುಗಳನ್ನು ಬೋಧಿಸಿದರು, ಕೆಲವು ಆಚರಣೆಗಳು ಇಸ್ಲಾಮಿಕ್ ತತ್ವಗಳಿಗೆ ವಿರುದ್ಧವಾಗಿದ್ದವು. ಅಂತಹ ಕೆಲವು ಆಚರಣೆಗಳೆಂದರೆ ದೇವರಿಗೆ ಭಕ್ತಿಯ ರೂಪದಲ್ಲಿ ಸಂಗೀತ ಹಾಗೂ ಗೀತೆಗಳನ್ನು ಹಾಡುವುದು, ದರ್ಗಾಗಳಲ್ಲಿ ಪೂಜೆ ಮಾಡುವುದು, ಪುರುಷರು ಮತ್ತು ಮಹಿಳೆಯರು ಒಟ್ಟಾಗಿ ದರ್ಗಾಗಳಲ್ಲಿ ಪ್ರಾರ್ಥನೆ ಸಲ್ಲಿಸುವುದು, ಇತ್ಯಾದಿ. ಸೂಫಿ ಸಂತರು ಅವರ ಸಾಮಾಜಿಕ, ಧಾರ್ಮಿಕ ಸುಧಾರಣೆಯಿಂದ ಅದೆಷ್ಟು ಜನಪ್ರಿಯರಾದರೆಂದರೆ, ಹಿಂದೂ ಮತ್ತು ಮುಸಲ್ಮಾನರಿಬ್ಬರೂ ಅವರ ಶಿಷ್ಯರಾದರು.

ಪ್ರಮುಖ ಸೂಫಿ ಪಂಥಗಳು:

1. ಚಿಸ್ತಿ ಪಂಥ–ಖ್ವಾಜಾ ಅಬ್ದುಲ್ ಚಿಸ್ತಿ ಇದನ್ನು ಸಾ.ಶ. 966 ರಲ್ಲಿ ಸ್ಥಾಪಿಸಿದರು. ಈ ಪಂಥದ ಪ್ರಮುಖ ಸಂತರೆಂದರೆ ಮೊಯ್ನುದ್ದಿನ್ ಚಿಸ್ತಿ, ಫರಿದುದ್ದಿನ್ ಶಕರ್, ಶೇಕ್ ನಿಜಾಮುದ್ದಿನ್ ಔಲಿಯ, ಶೇಕ್ ಸಲೀಮ್ ಚಿಸ್ತಿ, ಮುಂತಾದವರು. ಭಾರತದಲ್ಲಿನ ಚಿಸ್ತಿ ಪಂಥದ ಪವಿತ್ರ ದರ್ಗಾಗಳಲ್ಲಿ ಫತೇಪುರ್ ಸಿಕ್ರಿಯ ದರ್ಗಾ ಒಂದಾಗಿದೆ.

2. ಸುಹರ್‌ವರ್ದಿ ಪಂಥ– ಸುಹರ್‌ವರ್ದಿ ಪಂಥವನ್ನು ಬಾಗ್ದಾದಿನ ಶೇಕ್ ಶಹಾಬುದ್ದಿನ್ ಸ್ಥಾಪಿಸಿದರು. ಶೇಕ್ ಬಹಾವುದ್ದಿನ್ ಸುಹರ್‌ವರ್ದಿ ಈ ಪಂಥದ ಪ್ರಮುಖ ಸಂತರು.

ಇತರೆ ಪ್ರಮುಖ ಸೂಫಿ ಪಂಥಗಳೆಂದರೆ ಫಿರ್‌ದೌಸಿ, ಖಾದ್ರಿ, ಶತ್ತಾರ, ಮಹದಾವಿ, ರೌಷನಿಯತ್, ಮತ್ತು ನಕ್ಷ್‌ಬಂದಿ.

ಚಟುವಟಿಕೆ

ಸಮಕಾಲೀನ ಪ್ರಪಂಚದಲ್ಲಿ ಸುಧಾರಕರ ಬೋಧನೆಗಳ ಪ್ರಸ್ತುತತೆಯ ಬಗ್ಗೆ ಬರೆಯಿರಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಶಂಕರಾಚಾರ್ಯರ ಜನ್ಮಸ್ಥಳ ಯಾವುದು?
2. ಶಂಕರಾಚಾರ್ಯರ ಸಿದ್ಧಾಂತವನ್ನು ಹೆಸರಿಸಿ.
3. ರಾಮಾನುಜಾಚಾರ್ಯರ ಸಿದ್ಧಾಂತವನ್ನು ಹೆಸರಿಸಿ.
4. ರಾಮಾನುಜಾಚಾರ್ಯರಿಗೆ ಆಶ್ರಯ ನೀಡಿದ ಹೊಯ್ಸಳ ಅರಸ ಯಾರು?
5. ಮಧ್ವಾಚಾರ್ಯರ ಜನ್ಮಸ್ಥಳ ಯಾವುದು?
6. ಮಧ್ವಾಚಾರ್ಯರ ಮೂಲ ಹೆಸರೇನು?
7. ಮಧ್ವಾಚಾರ್ಯರ ಸಿದ್ಧಾಂತವನ್ನು ಹೆಸರಿಸಿ.
8. ಬಸವೇಶ್ವರರ ಜನ್ಮಸ್ಥಳ ಯಾವುದು?
9. ಬಸವೇಶ್ವರರಿಗೆ ರಾಜಾಶ್ರಯ ನೀಡಿದ ಕಲಚೂರಿ ಅರಸ ಯಾರು?
10. ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಧರ್ಮಗೋಷ್ಠಿಯ ಅಧ್ಯಕ್ಷತೆ ವಹಿಸುತ್ತಿದ್ದವರು ಯಾರು?
11. ರಮಾನಂದರು ಏಲ್ಲಿ ಜನಿಸಿದರು?
12. ಸಿಖ್ ಧರ್ಮದ ಸ್ಥಾಪಕರು ಯಾರು?
13. ಸಿಖ್ಖರ ಪವಿತ್ರ ಗ್ರಂಥ ಯಾವುದು?
14. ರಾಜಸ್ಥಾನದಲ್ಲಿ ತನ್ನ ಸಿದ್ಧಾಂತವನ್ನು ಜನಪ್ರಿಯಗೊಳಿಸಿದ ಕೃಷ್ಣನ ಭಕ್ತೆ ಯಾರು?
15. ಸೂಫಿ ಎಂಬ ಶಬ್ದ ಯಾವ ಪದದಿಂದ ಬಂದಿದೆ?
16. ಚಿಸ್ತಿ ಪಂಥದ ಸ್ಥಾಪಕರು ಯಾರು?
17. ಸುಹರ್‌ವರ್ದಿ ಪಂಥದ ಸ್ಥಾಪಕರು ಯಾರು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಶಂಕರಾಚಾರ್ಯರ ತಂದೆ ತಾಯಿ ಯಾರು?
2. ಶಂಕರಾಚಾರ್ಯರನ್ನು 'ಷಣ್ಮತ ಸ್ಥಾಪನಾಚಾರ್ಯ' ಎಂದು ಕರೆಯಲು ಕಾರಣವೇನು?
3. ಶಂಕರಾಚಾರ್ಯರು ಸ್ಥಾಪಿಸಿದ ಯಾವುದಾದರು ಎರಡು ಪ್ರಮುಖ ಮಠಗಳನ್ನು ಹೆಸರಿಸಿ.
4. ಶಂಕರಾಚಾರ್ಯರ ಯಾವುದಾದರು ಎರಡು ಕೃತಿಗಳನ್ನು ಹೆಸರಿಸಿ.
5. ರಾಮಾನುಜಾಚಾರ್ಯರು ಯಾವ ವರ್ಷ ಮತ್ತು ಏಲ್ಲಿ ಜನಿಸಿದರು?
6. ರಾಮಾನುಜಾಚಾರ್ಯರ ತಂದೆ ತಾಯಿ ಯಾರು?
7. ರಾಮಾನುಜಾಚಾರ್ಯರ ಯಾವುದಾದರು ಎರಡು ಕೃತಿಗಳನ್ನು ಹೆಸರಿಸಿ.

8. ಮಧ್ವಾಚಾರ್ಯರು ಯಾವ ವರ್ಷ ಮತ್ತು ಎಲ್ಲಿ ಜನಿಸಿದರು?
9. ಮಧ್ವಾಚಾರ್ಯರ ತಂದೆ ತಾಯಿ ಯಾರು?
10. ಮಧ್ವಾಚಾರ್ಯರು ಸ್ಥಾಪಿಸಿದ ಯಾವುದಾದರು ಎರಡು ಮಠಗಳನ್ನು ಹೆಸರಿಸಿ.
11. ಮಧ್ವಾಚಾರ್ಯರ ಯಾವುದಾದರು ಎರಡು ಕೃತಿಗಳನ್ನು ಹೆಸರಿಸಿ.
12. ಬಸವೇಶ್ವರರು ಯಾವ ವರ್ಷ ಮತ್ತು ಎಲ್ಲಿ ಜನಿಸಿದರು?
13. ಬಸವೇಶ್ವರರ ತಂದೆ ತಾಯಿ ಯಾರು?
14. ಅನುಭವ ಮಂಟಪವನ್ನು ಸ್ಥಾಪಿಸಿದವರು ಯಾರು ಮತ್ತು ಎಲ್ಲಿ?
15. ಯಾವುದಾದರು ಎರಡು ಪ್ರಮುಖ ಸೂಫಿ ಪಂಥಗಳನ್ನು ಹೆಸರಿಸಿ.
16. ಚಿಸ್ತಿ ಪಂಥದ ಯಾರಾದರು ಇಬ್ಬರು ಪ್ರಮುಖ ಸಂತರನ್ನು ಹೆಸರಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಶಂಕರಾಚಾರ್ಯರರ ಜೀವನ ಮತ್ತು ಬೋಧನೆಗಳನ್ನು ವಿವರಿಸಿ.
2. ರಾಮಾನುಜಾಚಾರ್ಯರ ಜೀವನ ಮತ್ತು ಬೋಧನೆಗಳನ್ನು ವಿವರಿಸಿ.
3. ಮಧ್ವಾಚಾರ್ಯರ ಜೀವನ ಮತ್ತು ಬೋಧನೆಗಳನ್ನು ವಿವರಿಸಿ.
4. ಬಸವೇಶ್ವರರ ಸಾಮಾಜಿಕ–ಧಾರ್ಮಿಕ ಸುಧಾರಣೆಗಳನ್ನು ಚರ್ಚಿಸಿ.
5. ಕಬೀರ್ ಮತ್ತು ಗುರುನಾನಕ್‌ರ ಕುರಿತು ಒಂದು ವಿವರಣೆ ನೀಡಿ.

****

ಅಧ್ಯಾಯ–7

ಆಧುನಿಕ ಯುಗ

ಅಧ್ಯಾಯ–7.1
ಯೂರೋಪಿಯನ್ನರ ಆಗಮನ

ಅತಿ ಪ್ರಾಚೀನ ಕಾಲದಿಂದಲೂ ಭಾರತ ಪಾಶ್ಚಿಮಾತ್ಯ ದೇಶಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಹೊಂದಿತ್ತು. ಭಾರತದ ವಸ್ತುಗಳಾದ ಹತ್ತಿ, ಮುತ್ತು, ಶ್ರಿಗಂಧ, ಸಾಂಬಾರ ಪದಾರ್ಥ ಮುಂತಾದವುಗಳಿಗೆ ಯುರೋಪಿನ ಮಾರುಕಟ್ಟೆಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು. 1453ರಲ್ಲಿ ತುರ್ಕರು ಕಾನ್‌ಸ್ಟಾಂಟಿನೋಪಲ್ ಅನ್ನು ವಶಪಡಿಸಿಕೊಂಡಿದ್ದರ ಪರಿಣಾಮವಾಗಿ ಯೂರೋಪಿಯನ್ನರು ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯುವುದು ಅನಿವಾರ್ಯವಾಯಿತು. ಪೋರ್ಚುಗೀಸ್‌ರು, ಇಂಗ್ಲೀಷರು, ಡಚ್ಚರು ಮತ್ತು ಫ್ರೆಂಚರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು.

ಪೋರ್ಚುಗೀಸರು:–

ಸಮುದ್ರಮಾರ್ಗದ ಮೂಲಕ ಭಾರತಕ್ಕೆ ಆಗಮಿಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರು ಮೊದಲಿಗರು. ವಾಸ್ಕೋ–ಡ–ಗಾಮನು 1498ರಲ್ಲಿ ಭಾರತ ತಲುಪಿದನು. ಕಲ್ಲಿಕೋಟೆಯ ದೊರೆ ಜಾಮೊರಿನ್ ಈತನನ್ನು ಸ್ವಾಗತಿಸಿದನು. ಇದರಿಂದಾಗಿ ಯೂರೋಪಿನ ಜೊತೆಗೆ ಭಾರತದ ವ್ಯಾಪಾರ ಸಂಬಂಧವು ಪುನರ್ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಭಾರತದೊಂದಿಗಿನ ವ್ಯಾಪಾರ ಚುರುಕುಗೊಂಡಿತು. ಫ್ರಾನ್ಸಿಸ್ಕೊ–ಡಿ–ಅಲ್‌ಮಿಡಾ ಭಾರತದ ಪ್ರಥಮ ಪೋರ್ಚುಗೀಸ್ ಗೌವರ್ನರ್ ಆಗಿದ್ದನು. ಅಲ್ಫೆನ್ಸೊ–ಡಿ–ಅಲ್ಬುಕರ್ಕ್‌ನು ಇವನ ಉತ್ತರಾಧಿಕಾರಿಯಾದನು. ಇವನು 1510ರಲ್ಲಿ ಬಿಜಾಪುರದ ಆದಿಲ್‌ಷಾಹಿಗಳಿಂದ ಗೋವಾವನ್ನು ಗೆದ್ದುಕೊಂಡನು ಮತ್ತು ಅದನ್ನು ತಮ್ಮ ಆಡಳಿತದ ಕೇಂದ್ರವನ್ನಾಗಿ ಮಾಡಿಕೊಂಡನು. 1961ರ ವರೆಗೆ ಇದು ಪೋರ್ಚುಗೀಸ್‌ರ ಅಧೀನದಲ್ಲಿತ್ತು.

ಪೋರ್ಚುಗೀಸರು ಗೋವಾ, ದಿಯು, ದಮನ್, ಸಾಲ್‌ಸೆಟ್, ಬೇಸ್ಸಿನ್, ಬಾಂಬೆ ಮುಂತಾದಕಡೆಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದರು. ಇಂಗ್ಲೀಷ್ ಮತ್ತು ಡಚ್ಚರೊಂದಿಗೆ ಸ್ಪರ್ಧಿಸಲು ಅಸಮರ್ಥರಾಗಿದ್ದರಿಂದ ಪೋರ್ಚುಗೀಸರು ಭಾರತದಲ್ಲಿ ಬಹುಕಾಲ ಉಳಿಯಲಿಲ್ಲ. ಭ್ರಷ್ಠ ಮತ್ತು ಅಸಮರ್ಥ ಅಧಿಕಾರಿಗಳು, ಧಾರ್ಮಿಕ ಮತಾಂಧ ನೀತಿ, ಬ್ರೆಜಿಲ್‌ನ ಮೇಲಿನ ಹೆಚ್ಚಿನ ಗಮನ, ಮರಾಠರ ಏಳಿಗೆ, ವಿಜಯನಗರ ಸಾಮ್ರಾಜ್ಯದ ಅವನತಿ ಮುಂತಾದವು ಭಾರತದಲ್ಲಿನ ಅವರ ಅವನತಿಗೆ ಪ್ರಮುಖ ಕಾರಣಗಳಾದವು.

ಡಚ್ಚರು:–

1602 ರಲ್ಲಿ ಡಚ್ಚರು 'ಡಚ್ ಈಸ್ಟ್ ಇಂಡಿಯಾ ಕಂಪನಿ' ಯನ್ನು ಸ್ಥಾಪಿಸಿದರು. ಮಚಲಿಪಟ್ಟಣ, ನಾಗಪಟ್ಟಣ, ಬಲಿಪಟ್ಟಣ, ಚಿನ್‌ಸುರಾ, ಕೊಚ್ಚಿನ್, ಖಾಸಿಂಬಜಾರ್, ಮಾಹೆ ಮುಂತಾದೆಡೆಗಳಲ್ಲಿ ತಮ್ಮ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಿದರು. ಪುಲಿಕಾಟ್ ಭಾರತದಲ್ಲಿ ಅವರ ರಾಜಧಾನಿ ಆಗಿತ್ತು. ಆಗ್ನೇಯ

ಏಷಿಯಾ ದ್ವೀಪಗಳ (ಇಂಡೊನೇಷಿಯಾ, ಮಲಯ, ಥೈಲಾಂಡ್, ಫಿಲಿಪೈನ್ಸ್ ಮತ್ತು ಕಾಂಬೋಡಿಯಾ) ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರಿಂದ ಮತ್ತು ಬ್ರಿಟಿಷರೊಂದಿಗೆ ಸ್ಪರ್ಧಿಸಲು ಅಸಮರ್ಥರಾಗಿದ್ದರಿಂದ ಡಚ್ಚರು ಭಾರತದಲ್ಲಿ ಬಹಳ ಕಾಲ ಉಳಿಯಲಿಲ್ಲ.

ಫ್ರೆಂಚರು:

ಫ್ರೆಂಚರು 1664ರಲ್ಲಿ 'ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ'ಯನ್ನು ಸ್ಥಾಪಿಸಿದರು. ಅವರು ಪಾಂಡಿಚೇರಿ, ಸೂರತ್, ಚಂದ್ರನಾಗೋರ್, ಮಾಹೆ, ಕಾರೈಕಲ್ ಮಚಲಿಪಟ್ಟಣ ಮುಂತಾದೆಡೆಗಳಲ್ಲಿ ವ್ಯಾಪರಿ ಕೇಂದ್ರಗಳನ್ನು ಸ್ಥಾಪಿಸಿದರು. ಪಾಂಡಿಚೇರಿ ಭಾರತದಲ್ಲಿನ ಅವರ ರಾಜಧಾನಿಯಾಗಿತ್ತು. ಫ್ರೆಂಚರು ಭಾರತಕ್ಕೆ ಬರುವ ವೇಳೆಗೆ ಪೋರ್ಚುಗೀಸರು ಮತ್ತು ಡಚ್ಚರ ಅಧಿಕಾರ ದುರ್ಬಲವಾಗಿತ್ತು. ಫ್ರೆಂಚರು ಮತ್ತು ಇಂಗ್ಲೀಷರು ವ್ಯಾಪಾರದ ಏಕಸ್ವಾಮ್ಯತೆಗಾಗಿ ಪರಸ್ಪರ ಸ್ಪರ್ಧಿಸಿದರು. ಫ್ರೆಂಚ್ ಗವರ್ನರ್‌ಗಳಾಗಿದ್ದ ಡೂಪ್ಲೆ ಮತ್ತು ಕೌಂಟ್–ಡಿ–ಲ್ಯಾಲಿ ಭಾರತದಲ್ಲಿ ಫ್ರೆಂಚ್ ಸಾಮ್ರಾಜ್ಯ ಸ್ಥಾಪನೆಗಾಗಿ ಪ್ರಯತ್ನಿಸಿದರು. ಇದು ಇಂಗ್ಲೀಷ್ ಮತ್ತು ಫ್ರೆಂಚರ ನಡುವೆ ವೈರತ್ವಕ್ಕೆ ಕಾರಣವಾಯಿತು.

ಇಂಗ್ಲೀಷರು:

1600ರಲ್ಲಿ ಇಂಗ್ಲೀಷರು 'ದಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ'ಯನ್ನು ಸ್ಥಾಪಿಸಿದರು. ಪೋರ್ಚುಗೀಸರು ಮತ್ತು ಡಚ್ಚರಿಗಿಂತ ಇಂಗ್ಲೀಷರ ನೌಕಾದಳವು ಪ್ರಬಲವಾಗಿತ್ತು. ಅವರು ಸ್ಪೇನಿನ ನೌಕಾಪಡೆಯನ್ನು ಸೋಲಿಸಿ, ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಸರ್ ಥಾಮಸ್ ರೋ 1615ರಲ್ಲಿ ಜಹಂಗೀರ್‌ನ ಆಸ್ಥಾನಕ್ಕೆ ಭೇಟಿ ನೀಡಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ಪಡೆದನು. ಸೂರತ್, ಅಹ್ಮದಾಬಾದ್, ಬ್ರೋಚ್ ಮತ್ತು ಆಗ್ರಾ ಅವರ ಆರಂಭಿಕ ವ್ಯಾಪಾರಿ ಕೇಂದ್ರಗಳಾಗಿದ್ದವು. ನಂತರದಲ್ಲಿ ಅವರು ಬಾಂಬೆ, ಮದ್ರಾಸ್ ಮತ್ತು ಕಲ್ಕತ್ತಾಗಳನ್ನೊಳಗೊಂಡಂತೆ, ಇಡೀ ಭಾರತದಾದ್ಯಂತ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದರು. ಕಲ್ಕತ್ತಾ ಭಾರತದಲ್ಲಿ ಅವರ ಮೊದಲ ರಾಜಧಾನಿಯಾಗಿತ್ತು.

ಭಾರತದಲ್ಲಿ ಬ್ರಿಟಿಷರ ಅಧಿಪತ್ಯ ಸ್ಥಾಪನೆ

ಆಂಗ್ಲೋ–ಫ್ರೆಂಚ್ ವೈರತ್ವ.

ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಭಾರತ ಮತ್ತು ಅಮೇರಿಕಾಗಳಲ್ಲಿ ವಸಾಹತು ಸ್ಥಾಪಿಸುವಲ್ಲಿ ಸ್ಪರ್ಧಿಗಳಾಗಿದ್ದರು. ಇದು ಇಬ್ಬರ ಮಧ್ಯೆ ಯುದ್ಧಗಳಿಗೆ ಕಾರಣವಾಯಿತು. ದಕ್ಷಿಣ ಭಾರತದಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸುವ ಸಲುವಾಗಿ ಇಪ್ಪತ್ತು ವರ್ಷಗಳ ಕಾಲ ಅವರು ಹೋರಾಡಿದರು. ಅವರು ಪಾರಂಪರಿಕ ವೈರಿಗಳೂ ಆಗಿದ್ದರು.

ಮೊದಲ ಕರ್ನಾಟಿಕ್ ಯುದ್ಧ (1746–48)

1740ರಲ್ಲಿ ಆಸ್ಟ್ರೀಯಾದ ಉತ್ತರಾಧಿಕಾರತ್ವದ ಕಾರಣಕ್ಕಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ನಡುವೆ ಯುದ್ಧವಾಯಿತು. ಇದರಿಂದಾಗಿ ಭಾರತದಲ್ಲಿ ಇಂಗ್ಲೀಷ್ ಮತ್ತು ಫ್ರೆಂಚರ ನಡುವೆ ಯುದ್ಧ ಪ್ರಾರಂಭವಾಯಿತು. ಇಂಗ್ಲೀಷರ ಸೇನಾಪತಿ ಬರ್ನೆಟ್ ಫ್ರೆಂಚರ ಕೆಲವು ಹಡಗುಗಳನ್ನು ವಶಪಡಿಸಿಕೊಂಡನು. ಫ್ರೆಂಚ್ ಗವರ್ನರ ಡೂಪ್ಲೆ ಮದ್ರಾಸನ್ನು ಆಕ್ರಮಿಸಿಕೊಳ್ಳಬಯಸಿದನು. ಅದಕ್ಕಾಗಿ ಅವನು ಮಾರಿಷಿಯಸ್ ಗವರ್ನರ್ ಆಗಿದ್ದ

ಲಾ–ಬೋರ್ಡೊನಾಯಿಸ್‌ನ ಸಹಾಯ ಕೇಳಿದನು. ಅವನು 1746ರಲ್ಲಿ ಮದ್ರಾಸ್‌ನ್ನು ವಶಪಡಿಸಿಕೊಂಡನು. ನಂತರದಲ್ಲಿ ಅವನು ಇಂಗ್ಲೀಷರಿಂದ 40,000 ಪೌಂಡ್‌ಗಳನ್ನು ಪಡೆದು ಮದ್ರಾಸನ್ನು ಹಿಂದಿರುಗಿಸಿದನು. ಡೂಪ್ಲೆ ಇದನ್ನು ಒಪ್ಪದೆ, ಪುನಃ ಮದ್ರಾಸ್‌ನ್ನು ವಶಪಡಿಸಿಕೊಂಡನು. ಇಂಗ್ಲೀಷರು ಅರ್ಕಾಟಿನ ನವಾಬ ಅನ್ವರುದ್ದೀನ್‌ನ ಸಹಾಯ ಯಾಚಿಸಿದರು. ಅನ್ವರುದ್ದೀನ್ ಮದ್ರಾಸನ್ನು ಮುತ್ತಗೊಳಿಸುವಂತೆ ಫ್ರೆಂಚರಿಗೆ ಆದೇಶಿಸಿದನು. ಡೂಪ್ಲೆ ಅದನ್ನು ಬಿಟ್ಟುಕೊಡಲು ನಿರಾಕರಿಸಿದನು. ಆದ್ದರಿಂದ ಅನ್ವರುದ್ದೀನ್ 10,000 ಸೈನಿಕರೊಂದಿಗೆ ಮದ್ರಾಸ್ ಅನ್ನು ಪುನಃ ಆಕ್ರಮಿಸಲು ಕಳುಹಿಸಿದನು. ಸೇಂಟ್ ಥೋಮ್ (ಅಡಿಯಾರ ಕಾಳಗ)ನಲ್ಲಿ ಕಾಳಗ ನಡೆಯಿತು. ಫ್ರೆಂಚರ 1100ರ ಸಣ್ಣ ಸೈನ್ಯ ನವಾಬನ ಸೈನ್ಯವನ್ನು ಸೋಲಿಸುವ ಮೂಲಕ ಉತ್ತಮ ತರಬೇತಿ ಹೊಂದಿದ ಯೂರೋಪಿನ ಸೈನಿಕರು ಭಾರತದ ಪಾರಂಪರಿಕ ಸೈನ್ಯಕ್ಕಿಂತಲೂ ಪ್ರಬಲವೆಂಬುದನ್ನು ಸಾಬೀತುಪಡಿಸಿತು. ಯೂರೋಪಿನಲ್ಲಿ 'ಎಕ್ಸ–ಲಾ–ಛಾಪೆಲ್' ಒಪ್ಪಂದದ ಮೂಲಕ ಇಂಗ್ಲೀಷ್ ಮತ್ತು ಫ್ರೆಂಚರ ನಡುವಿನ ಯುದ್ಧವು ಮುಕ್ತಾಯವಾಯಿತು. ಆ ಒಪ್ಪಂದದ ಒಂದು ನಿಬಂಧನೆಯನ್ವಯ ಭಾರತದಲ್ಲಿ ಮೊದಲ ಕರ್ನಾಟಿಕ್ ಯುದ್ಧವು ಕೊನೆಗೊಂಡಿತು. ಮದ್ರಾಸ್ ಅನ್ನು ಇಂಗ್ಲೀಷರಿಗೆ ಹಿಂದುರುಗಿಸಲಾಯಿತು ಮತ್ತು ಯುದ್ಧ ಖೈದಿಗಳನ್ನು ಬಿಡುಗಡೆ ಮಾಡಲಾಯಿತು.

ಎರಡನೇ ಕರ್ನಾಟಿಕ್ ಯುದ್ಧ (1748–1754)

ಆರ್ಕಾಟಿನಲ್ಲಿ ಚಂದಾಸಾಹೇಬ್ ಮತ್ತು ಅನ್ವರುದ್ದೀನರ ನಡುವೆ ಹಾಗೂ ಹೈದರಾಬಾದನಲ್ಲಿ ನಾಸೀರಜಂಗ್ ಮತ್ತು ಮುಜಾಫರ್‌ಜಂಗ್‌ರ ನಡುವೆ ಉತ್ತರಾಧಿಕಾರತ್ವಕ್ಕಾಗಿ ಅಂತಃಕಲಹ ನಡೆದಿತ್ತು. ಫ್ರೆಂಚರ ಗವರ್ನರ್ ಡೂಪ್ಲೆಯು ಚಂದಾಸಾಹೇಬ್ ಮತ್ತು ಮುಜಾಫರ್‌ಜಂಗರನ್ನು ಬೆಂಬಲಿಸಿದರೆ, ಬ್ರಿಟಿಷರು ಅನ್ವರುದ್ದೀನ್ ಮತ್ತು ನಾಸೀರಜಂಗ್‌ರನ್ನು ಬೆಂಬಲಿಸಿದರು. ಈ ಸಂಘರ್ಷವು ಎರಡನೇ ಕರ್ನಾಟಿಕ್ ಯುದ್ಧಕ್ಕೆ ಕಾರಣವಾಯಿತು. ಫ್ರೆಂಚ್‌ಬಣ ಅಂಬರ್ ಕಾಳಗದಲ್ಲಿ ಅನ್ವರುದ್ದೀನ್‌ನನ್ನು ಸೋಲಿಸಿ, ಕೊಂದಿತು. ಅವನ ಮಗ ಮಹಮದ್ ಅಲಿಯು ತಿರುಚನಾಪಳ್ಳಿಗೆ ಪಲಾಯನ ಮಾಡಿದನು. ಚಂದಾಸಾಹೇಬನನ್ನು ಆರ್ಕಾಟದ ನವಾಬನನ್ನಾಗಿ ಮಾಡಲಾಯಿತು ಮತ್ತು ಅವನು ತಿರುಚನಾಪಳ್ಳಿಗೆ ಮುತ್ತಿಗೆ ಹಾಕಿದನು.

ನಾಸಿರ್‌ಜಂಗ್‌ನು ಬ್ರಿಟಿಷರ ಸಹಾಯದೊಂದಿಗೆ ಮುಜಫರ್‌ಜಂಗನ ಮೇಲೆ ಯುದ್ಧ ಸಾರಿದನು. ನಾಸೀರ ಜಂಗನು ಕೊಲೆಯಾದದ್ದರಿಂದ ಮುಜಫರ್ ಜಂಗ್‌ನನ್ನು ಹೈದರಾಬಾದ್‌ನ ನಿಜಾಮನನ್ನಾಗಿ ಮಾಡಲಾಯಿತು. ನಂತರ ಅವನೂ ಅರಮನೆಯ ಅಂತಃಕಲಹದಲ್ಲಿ ಕೊಲ್ಲಲ್ಪಟ್ಟನು. ಆದ್ದರಿಂದ ಡೂಪ್ಲೆಯು ಸಲಾಬತ್‌ಜಂಗನನ್ನು ಹೈದರಾಬಾದ್‌ನ ನಿಜಾಮನನ್ನಾಗಿ ಮಾಡಿದನು.

ಡೂಪ್ಲೆ ಮತ್ತು ಚಂದಾಸಾಹೇಬರು, ಮಹಮದ್ ಅಲಿಯನ್ನು ಕೊಲ್ಲಲು ತಿರುಚನಾಪಳ್ಳಿಗೆ ಮುತ್ತಿಗೆ ಹಾಕಿದರು. ಇಂಗ್ಲೀಷರು ರಾಬರ್ಟ್‌ಕ್ಲೈವನ ನೇತೃತ್ವದಲ್ಲಿ ಅರ್ಕಾಟ್‌ಗೆ ಮುತ್ತಿಗೆ ಹಾಕಿದರು. ಚಂದಾಸಾಹೇಬನು ತನ್ನ ರಾಜಧಾನಿಯನ್ನು ರಕ್ಷಿಸಲು ಧಾವಿಸಿದನು. ಆದರೆ ಮಾರ್ಗ ಮಧ್ಯದಲ್ಲಿ ಕೊಲ್ಲಲ್ಪಟ್ಟನು ಮತ್ತು ಇಂಗ್ಲೀಷರು ಮಹಮದ್ ಅಲಿಯನ್ನು ಅರ್ಕಾಟ್‌ನ ನವಾಬನ್ನನಾಗಿ ಮಾಡಿದರು. ಈ ಯುದ್ಧದಲ್ಲಿ ಡೂಪ್ಲೆಯು ಸೋತಿದ್ದರಿಂದ, ಫ್ರೆಂಚ್ ಸರಕಾರವು ಅವನನ್ನು ವಾಪಸ್ಸು ಕರೆಸಿಕೊಂಡಿತು. 1754ರ ಪಾಂಡಿಚೇರಿ ಒಪ್ಪಂದದೊಂದಿಗೆ ಯುದ್ಧ ಕೊನೆಗೊಂಡಿತು. ಭಾರತೀಯ ರಾಜಕೀಯದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರಲು ಎರಡೂ ಪಕ್ಷಗಳು ಒಪ್ಪಿದವು.

ಮೂರನೇ ಕರ್ನಾಟಿಕ್ ಯುದ್ಧ (1758–1763)

ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ನಡುವೆ ಯುರೋಪಿನಲ್ಲಿ ನಡೆದ ಸಪ್ತವಾರ್ಷಿಕ (1756–63) ಯುದ್ಧ ಭಾರತದಲ್ಲಿಯೂ ಎರಡು ದೇಶಗಳ ನಡುವಿನ ಯುದ್ಧಕ್ಕೆ ಕಾರಣವಾಯಿತು. ಫ್ರೆಂಚ್‌ರ ವಸಾಹತುವಾಗಿದ್ದ

ಚಂದ್ರನಾಗೂರನ್ನು ಇಂಗ್ಲೀಷ್ ಗವರ್ನರ್ ರಾಬರ್ಟ್ ಕ್ಲೈವ್ ಆಕ್ರಮಿಸಿದನು. ಫ್ರೆಂಚ್ ಸರಕಾರ ಇಂಗ್ಲೀಷರನ್ನು ಭಾರತದಿಂದ ಹೊರಹಾಕಲು ಕೌಂಟ್–ಡಿ–ಲ್ಯಾಲಿಯನ್ನು ಗವರ್ನರ್ ಆಗಿ ಕಳುಹಿಸಿತು. ಲ್ಯಾಲಿ ಸೇಂಟ್ ಡೆವಿಡ್ ಕೋಟೆಗೆ ಮುತ್ತಿಗೆ ಹಾಕಿದನು ಮತ್ತು ಮದ್ರಾಸ್‌ಅನ್ನು ಆಕ್ರಮಿಸಲು ಯೋಜಿಸಿ ಹೈದರಾಬಾದ್‌ನಲ್ಲಿದ್ದ ಬುಸ್ಸಿಯನ್ನು ಹಿಂದಕ್ಕೆ ಕರೆಸಿದನು. ಬುಸ್ಸಿ ಮದ್ರಾಸ್‌ನತ್ತ ಸಾಗುವಾಗ, ಇಂಗ್ಲೀಷರು ಹೈದರಾಬಾದನ್ನು ಆಕ್ರಮಿಸಿಕೊಂಡರು. ಸಲಾಬತ್ ಜಂಗನು ಇಂಗ್ಲೀಷರ ಮಿತ್ರನಾದನು. 1760ರಲ್ಲಿ ಜರುಗಿದ ವಾಂಡಿವಾಷ್ ಕಾಳಗದಲ್ಲಿ ಫ್ರೆಂಚರು ಸಂಪೂರ್ಣವಾಗಿ ಸೋಲಿಸಲ್ಪಟ್ಟರು. ಫ್ರೆಂಚರು ತಮ್ಮ ಎಲ್ಲ ವಸಾಹತುಗಳನ್ನು ಕಳೆದುಕೊಂಡರು. 1763ರಲ್ಲಿ ಪ್ಯಾರಿಸ್ ಒಪ್ಪಂದದೊಂದಿಗೆ ಸಪ್ತವಾರ್ಷಿಕ ಯುದ್ಧವು ಕೊನೆಗೊಂಡಿತು. ಭಾರತದಲ್ಲಿಯೂ ಯುದ್ಧಕೊನೆಗೊಂಡಿತು. ಕೇವಲ ವ್ಯಾಪಾರಕ್ಕೆ ಮಾತ್ರ ಸೀಮಿತವಾಗುವ ಷರತ್ತಿನ ಮೇಲೆ ಫ್ರೆಂಚರಿಗೆ ಅವರ ವಸಾಹತುಗಳನ್ನು ಹಿಂತಿರುಗಿಸಲಾಯಿತು.

ಪ್ಲಾಸಿ ಕದನ–1757

ಬಂಗಾಳವು ಮೊಘಲ್ ಸಾಮ್ರಾಜ್ಯದ ಒಂದು ಸುಭಾ ಆಗಿತ್ತು. ಬಂಗಾಳದ ನವಾಬ ಅಲಿವರ್ದಿಖಾನನು ಸ್ವತಂತ್ರವಾದನು ಮತ್ತು ಮುರ್ಷಿದಾಬಾದ್ ಅವನ ರಾಜಧಾನಿಯಾಗಿತ್ತು. ಅವನು ಇಂಗ್ಲೀಷರೊಂದಿಗೆ ಸ್ನೇಹ ಸಂಬಂಧವನ್ನು ಕಾಯ್ದುಕೊಂಡನು. ಅವನಿಗೆ ಗಂಡುಮಕ್ಕಳಿಲ್ಲದ್ದರಿಂದ ತನ್ನ ಮೂರನೇ ಮಗಳ ಮಗನಾದ ಸಿರಾಜ್–ಉದ್–ದೌಲ್‌ನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದನು. ಸಿರಾಜ್–ಉದ್–ದೌಲ ತನ್ನ ತಾತನ ಮರಣಾನಂತರ 1756ರಲ್ಲಿ ನವಾಬನಾದನು.

ಕಾರಣಗಳು:

1. ರಾಜಕೀಯ ಕಾರಣ:

ಶೌಕತ್ ಜಂಗ್, ಘಸ್ತಿ ಬೇಗಂ ಮುಂತಾದವರು ಸಿರಾಜ್–ಉದ್–ದೌಲನ ವೈರಿಗಳಾದರು. ಅವರಿಗೆ ಬ್ರಿಟಿಷರ ಬೆಂಬಲವಿತ್ತು.

2. ದಸ್ತಕ್‌ಗಳ ದುರುಪಯೋಗ:

ಮೊಘಲ್ ಸಾಮ್ರಾಟನು ಇಂಗ್ಲೀಷರಿಗೆ ಬಂಗಾಳದಲ್ಲಿ ತೆರಿಗೆ ರಹಿತ ವ್ಯಾಪಾರಕ್ಕಾಗಿ ಅನುಮತಿ ನೀಡಿದ್ದನು. ದಸ್ತಕ್‌ಗಳನ್ನು ಬಂಗಾಳದ ಸರ್ಕಾರ ಈಸ್ಟ್ ಇಂಡಿಯಾ ಕಂಪನಿಗೆ ನೀಡಿತ್ತು ಮತ್ತು ಅವು ವ್ಯಾಪಾರದಲ್ಲಿ ಸುಂಕ ವಿನಾಯಿತಿಯನ್ನು ಒದಗಿಸಿದವು. ಅವುಗಳನ್ನು ಈಸ್ಟ್ ಇಂಡಿಯಾ ಕಂಪನಿಯ ನೌಕರರು ತಮ್ಮ ಖಾಸಗಿ ವ್ಯಾಪಾರಕ್ಕಾಗಿ ದುರುಪಯೋಗ ಪಡಿಸಿಕೊಂಡರು ಮತ್ತು ಲಾಭಕ್ಕಾಗಿ ಸ್ಥಳೀಯ ವ್ಯಾಪಾರಿಗಳಿಗೆ ಮಾರಿಕೊಂಡರು. ಇದರಿಂದಾಗಿ ರಾಜ್ಯದ ಆದಾಯಕ್ಕೆ ನಷ್ಟವಾಯಿತು.

3. ಫ್ರೆಂಚರಿಗೆ ಆಶ್ರಯ:

ಬ್ರಿಟಿಷರು ಮತ್ತು ಫ್ರೆಂಚರು ವೈರಿಗಳಾಗಿದ್ದರು. ಫ್ರೆಂಚ್ ವ್ಯಾಪಾರಿ ಕೇಂದ್ರವಾದ ಚಂದ್ರನಾಗೂರನ್ನು 1756ರಲ್ಲಿ ಇಂಗ್ಲೀಷರು ವಶಪಡಿಸಿಕೊಂಡರು ಮತ್ತು ಸಿರಾಜ್–ಉದ್–ದೌಲನು ಕೆಲವು ಫ್ರೆಂಚರಿಗೆ ಆಶ್ರಯ ನೀಡಿದ್ದು ಬ್ರಿಟಿಷರನ್ನು ಕೆರಳಿಸಿತು.

4. ಕಲ್ಕತ್ತಾ ಕೋಟೆಯ ಆಕ್ರಮಣ:

ಫ್ರೆಂಚರಿಗೆ ಹೆದರಿದ ಇಂಗ್ಲೀಷರು ನವಾಬನ ಅನುಮತಿ ಇಲ್ಲದೆ ಕಲ್ಕತ್ತಾ ಕೋಟೆಯನ್ನು ಭದ್ರ ಪಡಿಸಿಕೊಂಡರು.

ಸಿರಾಜ್–ಉದ್–ದೌಲನು ಅದನ್ನು ಕೆಡವಲು ಆದೇಶಿಸಿದನು. ಆದರೆ ಇಂಗ್ಲೀಷರು ಹಾಗೆ ಮಾಡಲು ನಿರಾಕರಿಸಿದರು. ಇದರಿಂದಾಗಿ ಸಿರಾಜ್–ಉದ್–ದೌಲ ಜೂನ್ 1756ರಲ್ಲಿ ಕಲ್ಕತ್ತಾ ಕೋಟೆಯನ್ನು ವಶಕ್ಕೆ ಪಡೆದನು. ಆದರೆ ರಾಬರ್ಟ್‌ಕ್ಲೈವ್ ಪುನಃ ಇದನ್ನು ವಶಪಡಿಸಿಕೊಂಡನು. ಇದು ಇಬ್ಬರ ನಡುವಿನ ವೈರತ್ವಕ್ಕೆ ಕಾರಣವಾಯಿತು.

5. ದಿವಾನ ರಾಜವಲ್ಲಭನಿಗೆ ಆಶ್ರಯ:

ದಿವಾನ ರಾಜವಲ್ಲಭನು ತನ್ನ ಕಛೇರಿಯ ಲೆಕ್ಕ ಪತ್ರಗಳನ್ನು ಒಪ್ಪಿಸದಿದ್ದಾಗ, ನವಾಬನು ಅವುಗಳನ್ನು ಒಪ್ಪಿಸುವಂತೆ ಒತ್ತಾಯ ಮಾಡಿದನು, ಆಗ ಅವನು ಬ್ರಿಟಿಷರಲ್ಲಿಗೆ ಹೋಗಿ ಅವರ ಆಶ್ರಯವನ್ನು ಪಡೆದನು. ಇದು ಸಿರಾಜ್–ಉದ್–ದೌಲನನ್ನು ಕೆರಳಿಸಿತು.

6. ಕಪ್ಪು ಕೋಣೆ ದುರಂತ:

ಕಲ್ಕತ್ತಾದ ಆಕ್ರಮಣದ ವೇಳೆಯಲ್ಲಿ ಸಿರಾಜ್–ಉದ್–ದೌಲನು 146 ಜನ ಇಂಗ್ಲೀಷರನ್ನು ಬಂಧಿಸಿದನೆಂದು ಹೇಳಲಾಗಿದೆ. ಅವರನ್ನು ಖೈದಿಗಳಾಗಿ ತೆಗೆದುಕೊಂಡು ಬಂದು 15 x 18 ಅಡಿಗಳು ವಿಸ್ತಾರದ ಕೋಣೆಗೆ ದೂಡಿದನು. ಅವರಲ್ಲಿ 123 ಜನರು ಉಸಿರುಗಟ್ಟಿ ಮರಣ ಹೊಂದಿದರು ಮತ್ತು 23 ಜನ ಮಾತ್ರ ಬದುಕುಳಿದಿದ್ದರು. ಈ ಘಟನೆಯನ್ನು 'ಕಪ್ಪು ಕೋಣೆ ದುರಂತ' ಎಂದು ಕರೆಯಲಾಗಿದೆ.

ಅಲಿಗಢ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಬ್ರಿಟಿಷ್ ಮತ್ತು ಸಿರಾಜ್–ಉದ್–ದೌಲನ ನಡುವೆ ಶಾಂತಿ ಒಪ್ಪಂದ ಏರ್ಪಟ್ಟಿತು. ರಾಬರ್ಟ್‌ಕ್ಲೈವ್ ಬಂಗಾಳದ ಸೇನಾಪತಿಯಾದ ಮೀರ ಜಾಫರ್ ಮತ್ತು ಕೆಲವು ಪ್ರಮುಖ ಅಧಿಕಾರಿಗಳೊಂದಿಗೆ ಸೇರಿಕೊಂಡು ಸಿರಾಜ್–ಉದ್–ದೌಲನ ವಿರುದ್ಧ ಸಂಚು ರೂಪಿಸಿದರು. ಅಲಿಗಡ ಒಪ್ಪಂದದ ಷರತ್ತುಗಳನ್ನು ಪಾಲನೆ ಮಾಡಿಲ್ಲ ಎಂಬ ಕಾರಣ ನೀಡಿ ಸಿರಾಜ್–ಉದ್–ದೌಲನ ಮೇಲೆ ಇಂಗ್ಲೀಷರು ಆಕ್ರಮಣ ಮಾಡಿದರು. 1757ರ ಜೂನ್‌ನಲ್ಲಿ ಪ್ಲಾಸಿ ಕದನವು ನಡೆಯಿತು. ಸಿರಾಜ್–ಉದ್–ದೌಲನು ಸೋತು ಪಲಾಯನ ಮಾಡಿದನು. ಆದರೆ ಅವನು ಪಲಾಯನ ಮಾಡುತ್ತಿದ್ದಾಗ ಮೀರ್‌ಜಾಫರ್‌ನ ಮಗ ಅವನನ್ನು ಕೊಂದನು. ಮೀರ್‌ಜಾಫರ್‌ನನ್ನು ಬಂಗಾಳದ ನವಾಬನನ್ನಾಗಿ ಮಾಡಲಾಯಿತು. ಅವನು ಬ್ರಿಟಿಷರಿಗೆ ಯಥೇಚ್ಛವಾದ ಕೊಡುಗೆ ನೀಡುವುದರೊಂದಿಗೆ 24 ಪರಗಣಗಳನ್ನು ನೀಡಿದನು. ಈ ಕದನವು ಭಾರತದಲ್ಲಿ ಬ್ರಿಟೀಷರ ಸಾಮ್ರಾಜ್ಯಕ್ಕೆ ಬುನಾದಿ ಹಾಕಿತು.

ಬಕ್ಸಾರ್ ಕಾಳಗ–1764

ಮೀರ್‌ಜಾಫರ್ ಒಬ್ಬ ಅಸಮರ್ಥ ಆಡಳಿತಗಾರನಾಗಿದ್ದನು. ಅವನು ಬ್ರಿಟಿಷರ ಕೈಗೊಂಬೆಯಾಗಿದ್ದನು. ಹೀಗಾಗಿ ಬಂಗಾಳದ ಆಡಳಿತ ಕುಸಿದು ನವಾಬನು ತನ್ನ ಪ್ರತಿಷ್ಠೆಯನ್ನು ಕಳೆದುಕೊಂಡನು. ಇಂಗ್ಲೀಷರ ಪುನಾರಾವರ್ತಿತ ಬೇಡಿಕೆಗಳನ್ನು ಸಹ ಅವನಿಂದ ಈಡೇರಿಸಲಾಗಲಿಲ್ಲ. ಆದ್ದರಿಂದ ಬ್ರಿಟಿಷರು ಮೀರ್‌ಜಾಫರನನ್ನು ಬದಲಾಯಿಸಿ, ಅವನ ಅಳಿಯ ಮೀರ್‌ಕಾಸಿಂನನ್ನು ನವಾಬನನ್ನಾಗಿಸಿದರು.

ಮೀರ್‌ಕಾಸಿಂ ಒಬ್ಬ ಸಮರ್ಥ ಆಡಳಿತಗಾರನಾಗಿದ್ದನು ಮತ್ತು ಆಡಳಿತವನ್ನು ಉತ್ತಮಗೊಳಿಸಲು ಹಲವಾರು ಸುಧಾರಣೆಗಳನ್ನು ಜಾರಿಗೆ ತಂದನು. ದಸ್ತಕ್ (ಪಾಸ್) ಗಳ ದುರುಪಯೋಗವನ್ನು ತಡೆಯಲು ಆಗದಿದ್ದಾಗ ವ್ಯಾಪಾರದ ಮೇಲಿನ ತೆರಿಗೆಯನ್ನು ಹಿಂಪಡೆದನು. ಇಂಗ್ಲೀಷರು ವ್ಯಾಪಾರದಲ್ಲಿನ ತಮ್ಮ ಸೌಲಭ್ಯಗಳನ್ನು ಕಳೆದುಕೊಂಡು ಮೀರಕಾಸಿಂನ ಬಗ್ಗೆ ಅಸಂತುಷ್ಟರಾದರು. ಆದ್ದರಿಂದ ಮೀರಕಾಸಿಂನು ಔದ್‌ನ ನವಾಬ ಷೂಜಾ–ಉದ್–ದೌಲ ಮತ್ತು ಮೊಗಲ್ ಸಾಮ್ರಾಟ ಎರಡನೇ ಷಾ–ಆಲಮ್ ಜೊತೆಗೂಡಿ ಇಂಗ್ಲೀಷರ

ವಿರುದ್ಧ ಒಕ್ಕೂಟ ರಚಿಸಿಕೊಂಡನು. ಬಕ್ಸಾರ್ ಕದನವು 1764ರಲ್ಲಿ ನಡೆಯಿತು. ಅದರಲ್ಲಿ ಇಂಗ್ಲೀಷರು ಒಕ್ಕೂಟ ಸೈನ್ಯವನ್ನು ಸೋಲಿಸಿದರು. ಮೀರ್ ಕಾಸಿಂ ಯುದ್ಧ ಭೂಮಿಯಿಂದ ಪಲಾಯನ ಮಾಡಿದರೆ, ಷೂಜಾ–ಉದ್–ದೌಲ ಮತ್ತು ಎರಡನೇ ಷಾ–ಅಲಂ ಇಂಗ್ಲೀಷರಿಗೆ ಶರಣಾಗತರಾದರು, ಮೀರ್‌ಜಾಫರ್‌ನನ್ನು ಮತ್ತೊಮ್ಮೆ ಬಂಗಾಳದ ನವಾಬನನ್ನಾಗಿ ಮಾಡಲಾಯಿತು. ಈ ನಿರ್ಣಾಯಕ ಕದನವು ಬಂಗಾಳದ, ಮೇಲೆ ಇಂಗ್ಲೀಷರ ಪ್ರಾಬಲ್ಯವನ್ನು ಸ್ಥಿರವಾಗಿ ಸ್ಥಾಪಿಸಿತು.

ಆಂಗ್ಲೋ–ಮೈಸೂರು ಯುದ್ಧಗಳು

ಬ್ರಿಟಿಷರು ಬಂಗಾಳದ ಮೇಲೆ ಪ್ರಭುತ್ವ ಸಾಧಿಸಿದ ನಂತರ ದಕ್ಷಿಣ ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ಮೈಸೂರಿನ ವಿರುದ್ಧ ಕದನಗಳನ್ನು ಮಾಡಿದರು.

ಮೊದಲ ಆಂಗ್ಲೋ–ಮೈಸೂರು ಯುದ್ಧ–1767–1769

ಮೈಸೂರಿನಲ್ಲಿ ಹೈದರ ಅಲಿಯ ಪ್ರಾಬಲ್ಯದ ಹೆಚ್ಚಳವೇ ಈ ಯುದ್ಧಕ್ಕೆ ಕಾರಣವಾಯಿತು. ಮರಾಠರು, ನಿಜಾಮ ಮತ್ತು ಇಂಗ್ಲೀಷರು ಹೈದರನ ವಿರುದ್ಧ ತ್ರಿಕೂಟವನ್ನು ರಚಿಸಿಕೊಂಡರು. ಈ ಯುದ್ಧವು 1767ರಲ್ಲಿ ಪ್ರಾರಂಭವಾಯಿತು. ಹೈದರನು ಚತುರತೆಯಿಂದ ಮರಾಠರನ್ನು ಮತ್ತು ನಿಜಾಮನನ್ನು ತಟಸ್ಥಗೊಳಿಸಿದನು ಇಂಗ್ಲೀಷರಿಗೆ ದೊಡ್ಡ ಪ್ರಮಾಣದಲ್ಲಿ ಹಾನಿ ಮಾಡಿದನು. ಒತ್ತಡದಲ್ಲಿ ಸಿಲುಕಿದ ಇಂಗ್ಲೀಷರು ಶಾಂತಿ ಒಪ್ಪಂದಕ್ಕೆ ಬರಬೇಕಾಯಿತು. 1769ರ 'ಮದ್ರಾಸ್ ಒಪ್ಪಂದ' ದೊಂದಿಗೆ ಯುದ್ಧ ಕೊನೆಗೊಂಡಿತು. ಈ ಒಪ್ಪಂದದ ಪ್ರಕಾರ ಎರಡೂ ಪಕ್ಷದವರು ಪರಸ್ಪರ ಗೆದ್ದುಕೊಂಡ ಪ್ರದೇಶಗಳನ್ನು ಮರಳಿಸಲು ಒಪ್ಪಿದರು. ಭವಿಷ್ಯದಲ್ಲಿ ಒಂದು ವೇಳೆ ತಮ್ಮ ಮೇಲೆ ಮೂರನೇ ಪಕ್ಷದವರಿಂದ ಆಕ್ರಮಣವಾದಲ್ಲಿ ಪರಸ್ಪರರು ಸಹಾಯ ಮಾಡಲೂ ಒಪ್ಪಿಕೊಂಡರು.

ಎರಡನೇ ಆಂಗ್ಲೋ–ಮೈಸೂರು ಯುದ್ಧ–1780–1784:

1770ರಲ್ಲಿ ಮರಾಠರು ಮೈಸೂರಿನ ಮೇಲೆ ಆಕ್ರಮಣ ಮಾಡಿದ್ದರು. ಮದ್ರಾಸ್ ಒಪ್ಪಂದದ ಪ್ರಕಾರ ಇಂಗ್ಲೀಷರು ಹೈದರನಿಗೆ ಸಹಾಯ ಮಾಡಬೇಕಿತ್ತು, ಆದರೆ ಅವರು ಹಾಗೆ ಮಾಡಲಿಲ್ಲ. ಹೈದರನು ಇಂಗ್ಲೀಷರೇ ತನ್ನ ನಿಜವಾದ ಶತ್ರುಗಳೆಂದು ಭಾವಿಸಿ, ಅವಕಾಶಕ್ಕಾಗಿ ಕಾಯತೊಡಗಿದನು. ಫ್ರೆಂಚ್ ವಸಾಹತಾಗಿದ್ದ ಮತ್ತು ಹೈದರನ ರಕ್ಷಣೆಯಲ್ಲಿದ್ದ ಮಾಹೆಯನ್ನು ಬ್ರಿಟಿಷರು ಆಕ್ರಮಿಸಿದಾಗ ಅವನಿಗೆ ಅವಕಾಶ ಒದಗಿಬಂದಿತು. 1780ರಲ್ಲಿ ಹೈದರನು ಇಂಗ್ಲೀಷರ ಮೇಲೆ ಯುದ್ಧ ಸಾರಿದನು. ಅವನು ಇಂಗ್ಲೀಷರನ್ನು ಹಲವು ಆರಂಭಿಕ ಕದನಗಳಲ್ಲಿ ಸೋಲಿಸಿದನು. ಆದರೆ ಇಂಗ್ಲೀಷರು ಸರ್ ಐರ್‌ಕೂಟನನ್ನು ಕಳುಹಿಸಿ 1781ರ ಪೋರ್ಟೊನೊವೋ ಯುದ್ಧದಲ್ಲಿ ಹೈದರನನ್ನು ಸೋಲಿಸಿದರು. ಆ ಯುದ್ಧ ನಡೆಯುತ್ತಿರುವಾಗಲೇ 1782ರಲ್ಲಿ ಹೈದರನು ಮರಣ ಹೊಂದಿದನು. ಯುದ್ಧವನ್ನು ಅವನ ಮಗ ಟಿಪ್ಪು ಸುಲ್ತಾನ್ ಮುಂದುವರೆಸಿದನು. 1784ರಲ್ಲಿ ಮಂಗಳೂರು ಒಪ್ಪಂದದೊಂದಿಗೆ ಈ ಯುದ್ಧ ಕೊನೆಗೊಂಡಿತು. ಒಪ್ಪಂದದನ್ವಯ ಉಭಯ ಪಕ್ಷದವರು ಗೆದ್ದ ಪ್ರದೇಶಗಳನ್ನು ಹಿಂದಿರುಗಿಸಲು ಮತ್ತು ಯುದ್ಧ ಖೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿದರು.

ಮೂರನೇ ಆಂಗ್ಲೋ–ಮೈಸೂರು ಯುದ್ಧ–1790–1792:

ಟಿಪ್ಪು ಮತ್ತು ಇಂಗ್ಲೀಷರು ಪರಸ್ಪರರ ಮೇಲೆ ಅನುಮಾನದಿಂದಿದ್ದರು. ಇಂಗ್ಲೀಷರನ್ನು ಭಾರತದಿಂದ ಹೊರಹಾಕಲು ಟಿಪ್ಪು ಫ್ರೆಂಚರ ಸಹಾಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದನು. 1789ರಲ್ಲಿ ಟಿಪ್ಪು ತಿರುವಾಂಕೂರಿನ ಮೇಲೆ ಅಪ್ರಚೋದಿತ ಆಕ್ರಮಣ ಮಾಡುವುದರೊಂದಿಗೆ ಯುದ್ಧ ಪ್ರಾರಂಭವಾಯಿತು. ತಿರುವಾಂಕೂರು ಕಂಪನಿಯ

ಜೊತೆಗೆ ಒಪ್ಪಂದದಲ್ಲಿ ಇದ್ದುದ್ದರಿಂದ, ಬ್ರಿಟಿಷರು ಟಿಪ್ಪುವಿನ ಮೇಲೆ ಯುದ್ಧ ಸಾರಿದರು. ಬ್ರಿಟಿಷರ ಗೌವರ್ನರ್ ಜನರಲ್ ಅಗಿದ್ದ ಲಾರ್ಡ್ ಕಾರ್ನವಾಲೀಸ್‌ನು ಮರಾಠರು ಮತ್ತು ನಿಜಾಮನನ್ನು ತನ್ನೆಡೆಗೆ ಸೆಳೆದುಕೊಂಡು ಟಿಪ್ಪುವನ್ನು ಏಕಾಂಗಿಯನ್ನಾಗಿಸಿ ಸೋಲಿಸಿದನು. ಈ ಯುದ್ಧವು 1792ರ ಶ್ರೀರಂಗಪಟ್ಟಣ ಒಪ್ಪಂದದೊಂದಿಗೆ ಕೊನೆಗೊಂಡಿತು ಮತ್ತು ಒಪ್ಪಂದದನ್ವಯ ಟಿಪ್ಪು ತನ್ನ ರಾಜ್ಯದ ಅರ್ಧ ಭಾಗವನ್ನು ಬಿಟ್ಟುಕೊಡಬೇಕಾಯಿತಲ್ಲದೆ ಯುದ್ಧ ಪರಿಹಾರವಾಗಿ 330 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಈ ಯುದ್ಧ ಪರಿಹಾರವನ್ನು ಪಾವತಿಸುವವರೆಗೂ ತನ್ನ ಇಬ್ಬರು ಮಕ್ಕಳನ್ನು ಇಂಗ್ಲೀಷರಲ್ಲಿ ಒತ್ತೆ ಇಡಬೇಕಾಯಿತು.

ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧ–1798–1799:

ಶ್ರೀರಂಗಪಟ್ಟಣ ಒಪ್ಪಂದದಲ್ಲಿ ಕಳೆದುಕೊಂಡ ಗೌರವದಿಂದ ಟಪ್ಪುವಿಗೆ ಅವಮಾನವಾಗಿತ್ತು. ಬ್ರಿಟಿಷರು ಸಹ ಟಿಪ್ಪುನ ಮೇಲೆ ಸಂಶಯಗೊಂಡಿದ್ದರು ಮತ್ತು ಲಾರ್ಡ್ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ದತಿಗೆ ಸಹಿ ಹಾಕಲು ಅವನನ್ನು ಒತ್ತಾಯಿಸಿದನು. ಇದನ್ನು ನಿರಾಕರಿಸಿದ ಟಿಪ್ಪು ಫ್ರಾನ್ಸ್, ಅಫಘಾನಿಸ್ತಾನ, ಅರೇಬಿಯಾ, ಮತ್ತು ಟರ್ಕಿ ದೇಶಗಳ ಸಹಾಯ ಪಡೆಯಲು ಪ್ರಯತ್ನಿಸಿದನು. ಬ್ರಿಟಿಷರು, ಮರಾಠರು ಮತ್ತು ನಿಜಾಮರೊಂದಿಗೆ ಮೈಸೂರಿನ ಮೇಲೆ ಆಕ್ರಮಣ ಮಾಡಿದರು. ಟಿಪ್ಪು ನಿರ್ಭಯವಾಗಿ ಯುದ್ಧ ಮಾಡಿದನು. ಅವನು ಬ್ರಿಟೀಷರಿಗೆ ಅತಿದೊಡ್ಡ ವೈರಿಯಾಗಿದ್ದ ಮತ್ತು ಧೈರ್ಯಶಾಲಿಯಾಗಿದ್ದ ಆದ್ದರಿಂದ ಅವನನ್ನು 'ಮೈಸೂರಿನ ಹುಲಿ' ಎಂದು ಕರೆಯಲಾಗಿದೆ. 1799ರಲ್ಲಿ ಟಿಪ್ಪು ತನ್ನ ರಾಜಧಾನಿ ಶ್ರೀರಂಗಪಟ್ಟಣವನ್ನು ರಕ್ಷಿಸಲು ಹೋರಾಡುತ್ತಿರುವಾಗಲೇ ಮಡಿದನು.

ಟಿಪ್ಪುವಿನ ಮರಣಾನಂತರ ಅವನ ರಾಜ್ಯವನ್ನು ಬ್ರಿಟಿಷರು, ಮರಾಠರು ಮತ್ತು ನಿಜಾಮರೊಂದಿಗೆ ಹಂಚಿಕೊಂಡರು. ಅವನ ರಾಜ್ಯದ ಒಂದು ಭಾಗವನ್ನು ಮೈಸೂರಿನ ಒಡೆಯರಿಗೆ ನೀಡಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನ ರಾಜರಾದರು.

ಸಹಾಯಕ ಸೈನ್ಯ ಪದ್ಧತಿ:

ಇದನ್ನು ಲಾರ್ಡ್‌ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆ ಇದರ ಮುಖ್ಯ ಉದ್ದೇಶವಾಗಿತ್ತು. ಇದರ ಮುಖ್ಯ ನಿಬಂಧನೆಗಳು ಹೀಗಿವೆ, ಇದರ ಪ್ರಕಾರ ಈ ಒಪ್ಪಂದಕ್ಕೆ ಒಳಪಡುವ ರಾಜನು, ತನ್ನ ರಾಜ್ಯದಲ್ಲಿ ಬ್ರಿಟಿಷರ ಸೈನ್ಯವನ್ನು ಇಟ್ಟುಕೊಳ್ಳಬೇಕಾಗಿತ್ತು. ಆ ಸೈನ್ಯದ ಖರ್ಚು–ವೆಚ್ಚಗಳನ್ನು ತಾನೆ ಭರಿಸಬೇಕಾಗಿತ್ತು. ಒಪ್ಪಂದಕ್ಕೆ ಒಳಪಟ್ಟ ರಾಜ ಖರ್ಚು–ವೆಚ್ಚ ಭರಿಸದಿದ್ದಲ್ಲಿ, ತನ್ನ ರಾಜ್ಯದ ಒಂದು ಭಾಗವನ್ನು ಬ್ರಿಟಿಷರಿಗೆ ಬಿಟ್ಟು ಕೊಡಬೇಕಾಗಿತ್ತು ಅಲ್ಲದೇ ತನ್ನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟ್‌ನನ್ನು ಇಟ್ಟುಕೊಳ್ಳಬೇಕಾಗಿತ್ತು. ಆ ರಾಜ್ಯವು ಯುರೋಪಿನ ಇತರೆ ದೇಶಗಳೊಂದಿಗೆ ವ್ಯಾಪಾರಿ ಸಂಬಂಧವನ್ನು ಹೊಂದುವಂತಿರಲಿಲ್ಲ. ಒಪ್ಪಂದಕ್ಕೆ ಒಳಪಟ್ಟ ರಾಜರು ತಮ್ಮ ಆಡಳಿತ ಮತ್ತು ಸೇನೆಯಲ್ಲಿ ಬ್ರಿಟಿಷರ ಪೂರ್ವಾನುಮತಿ ಇಲ್ಲದೆ ವಿದೇಶಿಯರನ್ನು ನೇಮಿಸಿಕೊಳ್ಳುವಂತಿರಲಿಲ್ಲ. ಆ ರಾಜ್ಯದ ರಕ್ಷಣೆ ಕಂಪನಿಯ ಜವಾಬ್ದಾರಿಯಾಗಿತ್ತು.

ಹೈದರಾಬಾದಿನ ನಿಜಾಮನು ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ಭಾರತೀಯ ಅರಸ. ನಂತರದಲ್ಲಿ ಮೈಸೂರು, ಔಧ್, ತಿರುವಾಂಕೂರು, ಬರೋಡಾ, ಜೈಪುರ, ಜೋಧ್‌ಪುರ, ಭರತ್‌ಪುರ, ನಾಗಪುರ ಮತ್ತು ಗ್ವಾಲಿಯರ್ ಅರಸರೂ ಸಹ ಒಪ್ಪಂದಕ್ಕೆ ಸಹಿ ಹಾಕಿದರು.

ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ:

1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಆಗಮಿಸಿದ ಲಾರ್ಡ್ ಡಾಲ್ ಹೌಸಿ ಭಾರತದ ಮೇಲೆ ನೇರ ಬ್ರಿಟಿಷ್ ಆಡಳಿತವನ್ನು ವಿಸ್ತರಿಸುವ ನಿರ್ಧಾರ ಮಾಡಿದನು. ಇದನ್ನು ಸಾಧಿಸಲು 'ದತ್ತು

ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಜಾರಿಗೊಳಿಸಿದನು. ಈ ನೀತಿಯ ಪ್ರಕಾರ ಅಧೀನಕ್ಕೆ ಒಳಪಟ್ಟ ರಾಜ್ಯದ ರಾಜ ಸ್ವಾಭಾವಿಕ ವಾರಸುದಾರನಿಲ್ಲದೆ ಸತ್ತರೆ ಆ ರಾಜ್ಯವು ಇಂಗ್ಲೀಷರ ಅಧಿಪತ್ಯಕ್ಕೆ ಸೇರುತ್ತಿತ್ತು. ಈ ನೀತಿಯನ್ನು ಅನುಸರಿಸಿ ಬ್ರಿಟಿಷರು ಸತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ, ನಾಗಪುರ ಮತ್ತು ಭಗತ್‌ಪುರಗಳನ್ನು ಸ್ವಾಧೀನಪಡಿಸಿಕೊಂಡರು.

ಆಂಗ್ಲೋ–ಮರಾಠ ಯುದ್ಧಗಳು:

ಮೊದಲ ಆಂಗ್ಲೋ–ಮರಾಠ ಯುದ್ಧ–1775–1782:

ಪೇಶ್ವೆ ಮಾಧವರಾವನು 1772 ರಲ್ಲಿ ನಿಧನನಾದನು. ಅವನ ಸಹೋದರ ನಾರಾಯಣರಾವನು ಅವನ ಉತ್ತರಾಧಿಕಾರಿಯಾದನು. ಅವನನ್ನು ಕೊಲ್ಲಿಸಿದ ಅವನ ಚಿಕ್ಕಪ್ಪ ರಘುನಾಥ್ ರಾವ್ ತಾನೇ ಪೇಶ್ವೆಯಾದನು. ಈ ನಡುವೆ ನಾರಾಯಣರಾವನ ವಿಧವೆ ಹೆಂಡತಿ ಗಂಡು ಮಗುವಿಗೆ ಜನ್ಮವಿತ್ತಳು. ಸವಾಯ್ ಮಾಧವರಾವ್ ಎಂಬ ಹೆಸರಿನ ಈ ಮಗುವನ್ನು ಮರಾಠ ಪ್ರಮುಖರು ಬೆಂಬಲಿಸಿದರು. ರಘುನಾಥರಾವನು ತನ್ನ ಸ್ಥಾನಮಾನವನ್ನುಳಿಸಿಕೊಳ್ಳಲು ಬ್ರಿಟಿಷರ ಸಹಾಯವನ್ನು ಯಾಚಿಸಿದನು. ಅವನು 1775 ರಲ್ಲಿ ಬಾಂಬೆ ಗೌವ್ಹರ್ನರ್ ಆಗಿದ್ದ ಎಲ್ಫಿನ್‌ಸ್ಟನ್‌ನನೊಂದಿಗೆ 'ಸೂರತ್ ಒಪ್ಪಂದ'ಕ್ಕೆ ಸಹಿ ಹಾಕಿದನು.

ರಘುನಾಥರಾವ್ ಮತ್ತು ಬ್ರಿಟಿಷರ ಸಂಯುಕ್ತ ಸೈನ್ಯಕ್ಕು, ಮರಾಠಾ ಪ್ರಮುಖರಿಗೂ ಪೂನಾದಲ್ಲಿ ಯುದ್ಧ ನಡೆಯಿತು. ಆದರೆ ಪೇಶ್ವೆ ಸವಾಯ್ ಮಾಧವರಾವನ ಪ್ರಧಾನಿ ನಾನಾ ಫಡ್ನವೀಸ್‌ನು ಕಲ್ಕತ್ತಾದಲ್ಲಿದ್ದ ಬ್ರಿಟಿಷ್ ಗವರ್ನರ್ ಜನರಲ್ ಹೇಸ್ಟಿಂಗ್ಸನ ಸಹಾಯ ಪಡೆಯುವಲ್ಲಿ ಯಶಸ್ವಿಯಾದನು. 1776 ರಲ್ಲಿ 'ಪುರಂಧರ ಒಪ್ಪಂದ'ಕ್ಕೆ ಅವನೊಂದಿಗೆ ಸಹಿ ಹಾಕಿದನು. ಈ ಒಪ್ಪಂದದ ಪ್ರಕಾರ ಬ್ರಿಟಿಷರು ರಘುನಾಥರಾವನಿಗೆ ನೀಡಿದ ಬೆಂಬಲವನ್ನು ಹಿಂಪಡೆಯಲು ಒಪ್ಪಿದರು ಮತ್ತು ಪೇಶ್ವಾ ಸರ್ಕಾರವು ರಘುನಾಥರಾಯನಿಗೆ ಮಾಸಿಕ 25000ರೂ ಗಳ ನಿವೃತ್ತಿ ವೇತನವನ್ನು ನೀಡಿತು. ಆದರೆ ಇದನ್ನು ಬಾಂಬೆ ಗವರ್ನರ್ ಆಗಿದ್ದ ಎಲ್ಫಿನ್‌ಸ್ಟನ್‌ನು ಒಪ್ಪಲಿಲ್ಲ. ಅವನು ಯುದ್ಧವನ್ನು ಪುನರಾರಂಭಿಸಿದನು. ಯುದ್ಧದಲ್ಲಿ ಇಂಗ್ಲೀಷರು ಸೋತರು ಮತ್ತು 1779 ರಲ್ಲಿ 'ವಡಗಾಂವ್' ಒಪ್ಪಂದಕ್ಕೆ ಸಹಿ ಹಾಕಿದರು. ಅವರು 1773 ರಿಂದ ಪಡೆದುಕೊಂಡಿದ್ದ ಎಲ್ಲಾ ಪ್ರದೇಶಗಳನ್ನು ಬಿಟ್ಟು ಕೊಡಬೇಕಾಯಿತು. ಹೇಸ್ಟಿಂಗ್ಸ್ ಕಲ್ಕತ್ತಾದಿಂದ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿದ್ದರಿಂದ ಯುದ್ಧಗಳು ನಡೆದವು. ಅಂತಿಮವಾಗಿ 1782ರಲ್ಲಿ 'ಸಾಲ್ಬಾಯ್ ಒಪ್ಪಂದ' ಮಾಡಿಕೊಂಡು, ಎರಡೂ ಪಕ್ಷದವರು ಗೆದ್ದ ಪ್ರದೇಶಗಳನ್ನು ಹಿಂತಿರುಗಿಸಲು ಒಪ್ಪಿಕೊಂಡರು. ಮುಂದಿನ 20 ವರ್ಷಗಳ ಕಾಲ ಶಾಂತಿ ನೆಲೆಸಿತ್ತು.

ಎರಡನೇ ಆಂಗ್ಲೋ–ಮರಾಠಾ ಯುದ್ಧ–1803–1806:

1800ರಲ್ಲಿ ನಾನಾ ಫಡ್ನವೀಸ್‌ನು ಮರಣ ಹೊಂದಿದನು. ಪೇಶ್ವೆ ಎರಡನೆಯ ಬಾಜೀರಾವ್‌ನ ಮೇಲೆ ಹಿಡಿತ ಸಾಧಿಸಲು ಮರಾಠಾ ಸರದಾರರಾದ ಹೋಳ್ಕರ್ ಮತ್ತು ಸಿಂಧಿಯಾ ಪ್ರಯತ್ನಿಸುತ್ತಿದ್ದರು. ಪೇಶ್ವೆಯು ಮಹಾದಾಜಿ ಸಿಂಧಿಯಾನಿಂದ ಬಹಳಷ್ಟು ಪ್ರಭಾವಕ್ಕೆ ಒಳಪಟ್ಟಿದ್ದನು. ಇದರಿಂದಾಗಿ 1802ರಲ್ಲಿ ಹೋಳ್ಕರನು ಯುದ್ಧಹೂಡಿ, ಸಿಂಧಿಯಾ ಮತ್ತು ಪೇಶ್ವೆಯ ಒಕ್ಕೂಟ ಸೈನ್ಯವನ್ನು ಸೋಲಿಸಿದನು. ಪೇಶ್ವೆಯು ಬೆಸ್ಸಿನ್‌ಗೆ ಓಡಿಹೋದನು ಮತ್ತು ಮಾರ್ಚ್ 1802ರಲ್ಲಿ ಇಂಗ್ಲೀಷರೊಂದಿಗೆ 'ಬೆಸ್ಸಿನ್ ಒಪ್ಪಂದ'ಕ್ಕೆ ಸಹಿ ಹಾಕಿದನು. ಹೋಳ್ಕರನು ವಿನಾಯಕರಾವ್‌ನನ್ನು ಸಿಂಹಾಸನದ ಮೇಲೆ ಕೂರಿಸಿದನು.

ಬೆಸ್ಸಿನ್ ಒಪ್ಪಂದದಲ್ಲಿ ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದನು, 6000 ಬ್ರಿಟಿಷ್ ಸೈನಿಕರನ್ನು ಇಟ್ಟುಕೊಳ್ಳಲು ಒಪ್ಪಿದನು ಹಾಗೂ ನಿರ್ವಹಣೆಗಾಗಿ ಪ್ರತಿ ವರ್ಷ 26 ಲಕ್ಷ ರೂಪಾಯಿಗಳನ್ನು

ಕೊಡಲೊಪ್ಪಿದನು. ಪೇಶ್ವೆಯು ತನ್ನ ಸಾಮ್ರಾಜ್ಯದ ಉತ್ತರದ ಭಾಗಗಳನ್ನು ಬ್ರಿಟಿಷರಿಗೆ ಒಪ್ಪಿಸಿದನು. ಈ ಒಪ್ಪಂದವು ಇಂಗ್ಲೀಷರಿಗೆ ಮರಾಠ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಲು ಅನುಕೂಲಕರ ಅವಕಾಶಗಳನ್ನು ಒದಗಿಸಿಕೊಟ್ಟಿತು. ಪೇಶ್ವೆಗಳಿಗೆ ಅಧೀನರಾಗಿದ್ದ ಮರಾಠ ಸರದಾರರು ಕಂಪನಿಯ ಅಧೀನಕ್ಕೆ ಬಂದರು. ಇದು ಮರಾಠರಿಗೆ ಅಪಮಾನಕರವಾಗಿತ್ತು. ಸಿಂಧಿಯಾ ಮತ್ತು ಭೋಂಸ್ಲೆ ಇಂಗ್ಲೀಷರ ಅಧಿಕಾರಕ್ಕೆ ಸವಾಲೆಸೆದರು. ಇದರಿಂದ ಕಾಳಗಗಳ ಒಂದು ಸರಣಿಯೇ ನಡೆಯಿತು. ಬ್ರಿಟಿಷರು ಅವರನ್ನು ಸೋಲಿಸಿದರು ಮತ್ತು ಇಬ್ಬರೂ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡರು. ಹೋಳ್ಕರನೂ ಸಹ ಇಂಗ್ಲೀಷರೊಂದಿಗೆ ಹೋರಾಡಿದನು ಮತ್ತು 'ರಾಜಪುರ್‌ಘಾಟ್ ಒಪ್ಪಂದ'ವನ್ನು ಮಾಡಿಕೊಂಡನು ಹಾಗೂ ಬ್ರಿಟಿಷರಿಗೆ ಬುಂದೇಲಖಂಡ ಮತ್ತು ಚಂಬಲ್ ಪ್ರದೇಶಗಳನ್ನು ಬಿಟ್ಟುಕೊಟ್ಟನು.

ಮೂರನೇ ಆಂಗ್ಲೋ–ಮರಾಠಾ ಯುದ್ಧ–1817–1818:

ತನ್ನ ಅಧಿಕಾರ ಮತ್ತು ಪ್ರತಿಷ್ಠೆಗಳನ್ನು ಕಳೆದುಕೊಂಡಿದ್ದ ಪೇಶ್ವೆ ಎರಡನೇ ಬಾಜಿರಾಯನು ಮರಾಠ ಒಕ್ಕೂಟವನ್ನು ಪುನರ್ ಸಂಘಟಿಸಲು, ಮತ್ತು ಕಳೆದು ಹೋಗಿದ್ದ ಮರಾಠರ ವೈಭವವನ್ನು ಪುನರ್ ಸ್ಥಾಪಿಸಲು ನಿರ್ಧರಿಸಿದನು. ಈ ಉದ್ದೇಶಕ್ಕಾಗಿ ಪಠಾಣರ ಮತ್ತು ಪಿಂಡಾರಿಗಳ ಬೆಂಬಲವನ್ನು ಪಡೆದುಕೊಂಡನು. ಅವರು ಕಿರ್ಕಿಯಲ್ಲಿಯ ಇಂಗ್ಲೀಷ್ ಸೇನಾ ಶಿಬಿರದ ಮೇಲೆ ದಾಳಿ ಮಾಡಿದರು. ಇದು ಮೂರನೇ ಆಂಗ್ಲೋ–ಮರಾಠಾ ಯುದ್ಧಕ್ಕೆ ಕಾರಣವಾಯಿತು. ಸರಣಿ ಕದನಗಳಲ್ಲಿ ಇಂಗ್ಲೀಷರು ಮರಾಠರನ್ನು ಸೋಲಿಸಿದರು. ಎಲ್ಲ ಮರಾಠಾ ಸರದಾರರೂ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡರು. ಛತ್ರಪತಿ ಸಾಹುನ ವಂಶಸ್ಥನಿಗೆ ಸತಾರ ಪ್ರದೇಶದ ಆಳ್ವಿಕೆ ನಡೆಸಲು ಅನುಮತಿಸಲಾಯಿತು. ಪೇಶ್ವೆ ಎರಡನೆಯ ಬಾಜಿರಾಯನಿಗೆ ವಾರ್ಷಿಕ 8,00,000 ರೂಪಾಯಿಗಳ ವಿಶ್ರಾಂತಿ ವೇತನ ನೀಡಿ ಬಿಥೂರಿಗೆ ಕಳಿಸಲಾಯಿತು. ಇದರೊಂದಿಗೆ ಬ್ರಿಟಿಷರು ಇಡೀ ದಕ್ಷಿಣ ಭಾರತದ ಮೇಲೆ ತಮ್ಮ ರಾಜಕೀಯ ಸಾರ್ವಭೌಮತ್ವವನ್ನು ಸ್ಥಾಪಿಸಿದರು.

ಇದೇ ರೀತಿಯಾಗಿ ಬ್ರಿಟಿಷರು ಭಾರತದ ಇತರ ಸ್ವತಂತ್ರ ರಾಜರುಗಳ ಮೇಲೆ ವಿಸ್ತರಣಾ ಮತ್ತು ಆಕ್ರಮಣಕಾರಿ ನೀತಿಯನ್ನು ಅನುಸರಿಸಿದರು. ಬ್ರಿಟಿಷರು ಸಿಖ್ಖರು, ಆಫ್‌ಘಾನ್ನರು, ನೇಪಾಳಿಗಳು, ಬರ್ಮಿಯರ ಮೇಲೆ ಯುದ್ಧಗಳನ್ನು ಮಾಡಿ ಭಾರತೀಯ ಉಪಖಂಡದ ಮೇಲೆ ಅವರ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಿದರು.

ಚಟುವಟಿಕೆ : ಭಾರತದಲ್ಲಿ ಬ್ರಿಟಿಷರ ಕಾನೂನು–ಕಟ್ಟಳೆಗಳ ಒಂದು ಪಟ್ಟಿ ಮಾಡಿರಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಭಾರತದಲ್ಲಿ ಪೋರ್ಚುಗೀಸರ ಮೊದಲ ಗವರ್ನರ್ ಯಾರು?
2. 'ಡಚ್ ಈಸ್ಟ್ ಇಂಡಿಯಾ ಕಂಪನಿ' ಸ್ಥಾಪಿತವಾದ ವರ್ಷ ಯಾವುದು?
3. ಭಾರತದಲ್ಲಿ ಡಚ್ಚರ ರಾಜಧಾನಿಯನ್ನು ಹೆಸರಿಸಿ.
4. 'ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ'ಯನ್ನು ಯಾವಾಗ ಸ್ಥಾಪಿಸಲಾಯಿತು?
5. ಭಾರತದಲ್ಲಿ ಫ್ರೆಂಚರ ರಾಜಧಾನಿ ಯಾವುದು?
6. 'ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ'ಯನ್ನು ಯಾವಾಗ ಸ್ಥಾಪಿಸಲಾಯಿತು?
7. ಭಾರತದಲ್ಲಿ ಬ್ರಿಟಿಷರ ಮೊದಲ ರಾಜಧಾನಿ ಯಾವುದು?

8. ಮೊದಲ ಕರ್ನಾಟಿಕ್ ಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದವನ್ನು ಹೆಸರಿಸಿ.
9. ಪ್ಲಾಸಿ ಕದನ ನಡೆದ ವರ್ಷ ಯಾವುದು?
10. ಬಕ್ಸಾರ್ ಕದನ ನಡೆದ ವರ್ಷ ಯಾವುದು?
11. ಮೊದಲನೇ ಆಂಗ್ಲೋ–ಮೈಸೂರು ಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದವನ್ನು ಹೆಸರಿಸಿ.
12. 2ನೇ ಆಂಗ್ಲೋ–ಮೈಸೂರು ಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದವನ್ನು ಹೆಸರಿಸಿ
13. 3ನೇ ಆಂಗ್ಲೋ–ಮೈಸೂರು ಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದವನ್ನು ಹೆಸರಿಸಿ
14. 'ಮೈಸೂರಿನ ಹುಲಿ' ಎಂದು ಯಾರನ್ನು ಕರೆಯಲಾಗಿದೆ?
15. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೊಳಿಸಿದ ಗೌವರ್ನರ್ ಯಾರು?
16. ಸಹಾಯಕ ಸೈನ್ಯ ಪದ್ಧತಿಯನ್ನು ಮೊದಲು ಒಪ್ಪಿದ ಭಾರತೀಯ ಅರಸ ಯಾರು?
17. 'ದತ್ತು ಪುತ್ರರಿಗೆ ಹಕ್ಕಿಲ್ಲ' ನೀತಿಯನ್ನು ಭಾರತದಲ್ಲಿ ಜಾರಿಗೊಳಿಸಿದವರು ಯಾರು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ:

1. ಬಿಜಾಪುರದ ಆದಿಲ್ ಷಾಹಿ ಸುಲ್ತಾನರಿಂದ ಗೋವಾವನ್ನು ಯಾರು ವಶಪಡಿಸಿಕೊಂಡರು ಮತ್ತು ಯಾವಾಗ?
2. ಭಾರತದಲ್ಲಿ ಪೋರ್ಚುಗೀಸರ ಯಾವುದಾದರೂ ಎರಡು ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.
3. ಭಾರತದಲ್ಲಿ ಪೋರ್ಚುಗೀಸರ ಅಧಿಕಾರದ ಅವನತಿಗೆ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
4. ಭಾರತದಲ್ಲಿ ಡಚ್ಚರ ಯಾವುದಾದರೂ ಎರಡು ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.
5. ಭಾರತದಲ್ಲಿ ಫ್ರೆಂಚ್‌ರ ಯಾವುದಾದರೂ ಎರಡು ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.
6. ಪ್ಲಾಸಿ ಕದನ ಯಾರ ನಡುವೆ ನಡೆಯಿತು?
7. ಶ್ರೀ ರಂಗಪಟ್ಟಣ ಒಪ್ಪಂದದ ಯಾವುದಾದರೂ ಎರಡು ಕರಾರುಗಳನ್ನು ತಿಳಿಸಿ.
8. ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ ಯಾವುದಾದರೂ ಎರಡು ಭಾರತೀಯ ರಾಜ್ಯಗಳನ್ನು ಹೆಸರಿಸಿ.
9. ದತ್ತು ಪುತ್ರರಿಗೆ ಹಕ್ಕಿಲ್ಲ ನೀತಿಯನ್ವಯ ಬ್ರಿಟಿಷರು ವಶಪಡಿಸಿಕೊಂಡ ಯಾವುದಾದರು ಎರಡು ಭಾರತೀಯ ರಾಜ್ಯಗಳನ್ನು ಹೆಸರಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಪ್ಲಾಸಿ ಕದನದ ಕಾರಣಗಳು ಮತ್ತು ಪರಿಣಾಮಗಳು ಯಾವುವು?
2. ಬ್ರಿಟಿಷರೊಂದಿಗೆ ಟಿಪ್ಪುವಿನ ಹೋರಾಟವನ್ನು ಚರ್ಚಿಸಿ.
3. ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಪುತ್ರರಿಗೆ ಹಕ್ಕಿಲ್ಲ ನೀತಿಯ ಬಗ್ಗೆ ಬರೆಯಿರಿ.

IV.ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ 30–40 ವಾಕ್ಯಗಳಲ್ಲಿ ಉತ್ತರಿಸಿ.

1. ಕರ್ನಾಟಿಕ್ ಯುದ್ಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಆಂಗ್ಲೋ–ಮರಾಠ ಯುದ್ಧಗಳ ಬಗ್ಗೆ ಒಂದು ವಿವರಣೆ ನೀಡಿ.

❋ ❋ ❋ ❋

ಅಧ್ಯಾಯ – 7.2

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ–1857

ಭಾರತದ ಇತಿಹಾಸದಲ್ಲಿ 1857ರ ದಂಗೆಯು ಒಂದು ವಿಶಿಷ್ಠ ಸ್ಥಾನ ಹೊಂದಿದೆ. ಈ ಘಟನೆಯನ್ನು 'ಸಿಪಾಯಿದಂಗೆ', 'ಭಾರತೀಯ ಬಂಡಾಯ' ಮತ್ತು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂಬ ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಇದು ಬ್ರಿಟಿಷರ ವಿರುದ್ಧ ಪ್ರಥಮ ಏಕೀಕೃತ ಹೋರಾಟವಾಗಿದೆ. ಈ ಘಟನೆಯು ಈಸ್ಟ್ ಇಂಡಿಯಾ ಕಂಪನಿಯ ನೀತಿಗಳ ಮತ್ತು ಸಾಮ್ರಾಜ್ಯಷಾಹಿ ಶೋಷಣೆಯ ವಿರುದ್ಧದ ಭಾರತೀಯರ ಅತೃಪ್ತಿಯ ಸ್ಫೋಟವಾಗಿತ್ತು. ಬ್ರಿಟಿಷರು ಇದನ್ನು 'ಸಿಪಾಯಿ ದಂಗೆ' ಎಂದರೆ, ರಾಷ್ಟ್ರೀಯವಾದಿಗಳು ಇದನ್ನು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದಿದ್ದಾರೆ.

ಕಾರಣಗಳು:

ರಾಜಕೀಯ ಕಾರಣಗಳು:

ಈಸ್ಟ್ ಇಂಡಿಯಾ ಕಂಪನಿಯ ವಿಸ್ತರಣಾ ನೀತಿಯು ಇದಕ್ಕೆ ಒಂದು ಮುಖ್ಯ ಕಾರಣವಾಗಿತ್ತು. ಬ್ರಿಟಿಷರು ಭಾರತೀಯ ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಮತ್ತು ಒಡೆದು ಆಳುವ ನೀತಿಯನ್ನು ಅನುಸರಿಸಿದರು. ದತ್ತು ಮಕ್ಕಳಿಗೆ ಹಕ್ಕಿಲ್ಲ ಮತ್ತು ಸಹಾಯಕ ಸೈನ್ಯ ಪದ್ಧತಿಗಳು ಭಾರತೀಯ ರಾಜರುಗಳನ್ನು ಕೆರಳಿಸಿದವು. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ದೊಡ್ಡ ಜಮಿನ್ದಾರರಿಗೂ ಅನ್ವಯಿಸಲಾಯಿತು. ಈ ಎಲ್ಲ ಕಾರಣಗಳಿಂದಾಗಿ ರಾಜರು, ರಾಜಕುಮಾರರು, ಅವರ ಆಸ್ಥಾನಿಕರು, ಸೇವೆಯಿಂದ ವಜಾಗೊಂಡ ಸೈನಿಕರು ಮತ್ತು ರೈತರು ಬ್ರಿಟಿಷರ ಬಗ್ಗೆ ಕೋಪಗೊಂಡರು.

ಆಡಳಿತಾತ್ಮಕ ಕಾರಣಗಳು:

ಭಾರತೀಯ ಸಾಂಪ್ರದಾಯಿಕ ಆಡಳಿತ ಪದ್ಧತಿಯನ್ನು ತೆಗೆದುಹಾಕಿ ಬ್ರಿಟಿಷರು ಹೊಸ ಆಡಳಿತ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದಾಗಿ ಅನೇಕ ಸ್ಥಳೀಯ ಆಡಳಿತಗಾರರು ನಿರುದ್ಯೋಗಿಗಳಾದರು ಮತ್ತು ಅವರೆಲ್ಲ ಇಂಗ್ಲೀಷರ ವಿರೋಧಿಗಳಾದರು. 'ಕಾನೂನಿನ ಆಡಳಿತ' ಹಾಗೂ 'ಕಾನೂನಿನ ದೃಷ್ಟಿಯಲ್ಲಿ ಸಮಾನತೆ' ಎಂಬ ತತ್ವಗಳು ಸಾಂಪ್ರದಾಯಿಕ 'ಧರ್ಮಶಾಸ್ತ್ರ' ಮತ್ತು 'ಷರಿಯತ್' ಕಾನೂನುಗಳಿಂದ ಪ್ರಭಾವಿತಗೊಂಡಿದ್ದ ಹಿಂದು, ಮುಸ್ಲಿಂರ ಮನಸ್ಸಿನಲ್ಲಿ ಸಂಶಯ ಬಿತ್ತಿದವು. ಭಾರತೀಯರಿಗೆ ಆಡಳಿತದಲ್ಲಿ ಉನ್ನತ ಹುದ್ದೆಗಳನ್ನು ನೀಡುತ್ತಿರಲಿಲ್ಲ ಮತ್ತು ಭಾರತೀಯ ನೌಕರರಿಗೆ ಕೊಡುತ್ತಿದ್ದ ಸಂಬಳವು ಅವರ ಇಂಗ್ಲೀಷ್ ಸಮಕಕ್ಷಿಗಳಿಗಿಂತ ಬಹಳಷ್ಟು ಕಡಿಮೆಯಾಗಿತ್ತು. ಇದು ಕಾನೂನಿನ ಮುಂದೆ ಸರಿಸಮಾನರು ಎಂಬ ಇಂಗ್ಲೀಷರ ತತ್ವದ ವಿರುದ್ಧವಾಗಿತ್ತು.

ಆರ್ಥಿಕ ಕಾರಣಗಳು:

ಈಸ್ಟ್ ಇಂಡಿಯಾ ಕಂಪನಿಯು ಆರ್ಥಿಕ ಶೋಷಣೆಯ ನೀತಿಯನ್ನು ಅನುಸರಿಸಿತ್ತು. ಭಾರತದ ಸಂಪತ್ತು ಮತ್ತು ಸಂಪನ್ಮೂಲಗಳನ್ನು ತಮ್ಮ ಸ್ವಾರ್ಥದ ಉದ್ದೇಶಗಳಿಗಾಗಿ ಬಳಸಿಕೊಂಡರು. ಕೈಗಾರಿಕಾ ಕ್ರಾಂತಿಯ ನಂತರ ಇಂಗ್ಲೆಂಡಿನಿಂದ ಆಮದು ಹೆಚ್ಚಾಯಿತು. ಇಂಗ್ಲೀಷರು ವ್ಯಾಪಾರದ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಿದರು.

ಭಾರತವನ್ನು ಕಚ್ಚಾವಸ್ತುಗಳ ಪೂರೈಕೆದಾರ ಮತ್ತು ಅವರ ಸಿದ್ಧ ವಸ್ತುಗಳ ಮಾರುಕಟ್ಟೆಯನ್ನಾಗಿ ಪರಿವರ್ತಿಸಿದರು. ಇದರಿಂದಾಗಿ ಕುಶಲಕರ್ಮಿಗಳು ಮತ್ತು ಕಸಬುದಾರರು ನಿರುದ್ಯೋಗಿಗಳಾದರು. ಭಾರತೀಯ ಕೈಕಸಬುಗಳು ತೊಂದರೆಗೀಡಾದವು. ಬ್ರಿಟಿಷ್ ಕಂದಾಯ ನೀತಿಗಳು ರೈತರಿಗೆ ಹಾನಿಕಾರಕವಾಗಿದ್ದವು.

ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳು:

ಬ್ರಿಟಿಷರು ತಮ್ಮನ್ನು ಉಚ್ಚಜನಾಂಗಕ್ಕೆ ಸೇರಿದವರೆಂದು ಭಾವಿಸಿದ್ದರು ಮತ್ತು ಭಾರತೀಯರನ್ನು ಅವಮಾನಿಸುತ್ತಿದ್ದರು. ಅವರು ಹೊರಡಿಸಿದ 'ಸಾಮಾಜಿಕ ಸುಧಾರಣೆಗಳು' ಹಿಂದೂ ಮತ್ತು ಮುಸ್ಲಿಂರ ಮನಸ್ಸಿನಲ್ಲಿ ಸಂಶಯ ಮೂಡಿಸಿದವು. ಏಕೆಂದರೆ ಹಿಂದೂಗಳು ಮತ್ತು ಮುಸ್ಲಿಂರು ಸತಿ ಪದ್ಧತಿ, ಬಾಲ್ಯವಿವಾಹ, ಮನುಷ್ಯ ಮತ್ತು ಪ್ರಾಣಿ ಬಲಿಗಳು ಮತ್ತು ಬುರ್ಖಾ ಪದ್ಧತಿಗಳು ಧರ್ಮದ ಒಂದು ಅಂಗವೆಂದು ತಿಳಿದಿದ್ದರು. ಹೀಗಾಗಿ ಬ್ರಿಟಿಷರ ಬಗ್ಗೆ ಅಸಂತುಷ್ಟರಾದರು.

ಈಸ್ಟ್ ಇಂಡಿಯಾ ಕಂಪನಿಯು ಕ್ರಿಶ್ಚಿಯನ್ ಮಿಷನರಿಗಳಿಗೆ ಧಾರ್ಮಿಕ ಕ್ಷೇತ್ರದಲ್ಲಿ ಸ್ವಾತಂತ್ರ್ಯವನ್ನು ನೀಡಿತು. ಅವು ಶಾಲೆ, ಆಸ್ಪತ್ರೆ, ಬಂಧಿಖಾನೆ ಮತ್ತು ಮಾರುಕಟ್ಟೆಗಳಲ್ಲಿ ಸಕ್ರಿಯವಾಗಿ ಕ್ರೈಸ್ತ ಧರ್ಮ ಪ್ರಚಾರ ಮಾಡುತ್ತಿದ್ದವು. ಕ್ರಿಶ್ಚಿಯನ್ ಮಿಷನರಿಗಳು ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಬಗ್ಗೆ ಅಸಹನೆ ಹೊಂದಿದ್ದವು. ಬಹಿರಂಗವಾಗಿಯೇ ಅವುಗಳನ್ನು ಟೀಕಿಸುತ್ತಿದ್ದವು. ಅವರು ಭಾರತೀಯರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸಲು ಪ್ರಯತ್ನಿಸಿದರು. ಮಿಷನರಿಗಳು ಮತ್ತು ಕಾನ್ವೆಂಟುಗಳ ಮೂಲಕ ಪಸರಿಸಿದ ಇಂಗ್ಲೀಷ್ ಶಿಕ್ಷಣ ಮತ್ತು ಸಂಸ್ಕೃತಿಯು ಭಾರತೀಯರಲ್ಲಿ ತಮ್ಮ ಧರ್ಮಗಳ ಉಳಿವಿನ ಬಗ್ಗೆ ಸಂಶಯಮೂಡಿಸಿದವು. ಧರ್ಮ ಬೋಧಕರಾದ ಮುಲ್ಲಾಗಳು, ಮೌಲ್ವಿಗಳು ಮತ್ತು ಪಂಡಿತರು ಇಂಗ್ಲೀಷರ ವಿರುದ್ಧ ದ್ವೇಷ ಮೂಡಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದರು.

ಸೈನಿಕ ಕಾರಣಗಳು:

ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸೈನಿಕರು ಬ್ರಿಟಿಷ್ ಅಧಿಕಾರಿಗಳಿಂದ ಅವಮಾನಿಸಲ್ಪಡುತ್ತಿದ್ದರು. ಅವರಿಗೆ ಕಡಿಮೆ ಸಂಬಳ ನೀಡುತ್ತಿದ್ದರು ಮತ್ತು ಸುಭೇದಾರರಿಗಿಂತ ಮೇಲಿನ ಹುದ್ದೆಗೆ ಬಡ್ತಿ ನೀಡುತ್ತಿರಲಿಲ್ಲ. 1856ರ ಜನರಲ್ ಸರ್ವಿಸ್ ಎನ್‌ಲಿಸ್ಟಮೆಂಟ್ ಆ್ಯಕ್ಟ್ ಪ್ರಕಾರ, ಭಾರತೀಯ ಸೈನಿಕರನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಎಲ್ಲಿಯಾದರೂ ವರ್ಗಾಯಿಸಬಹುದಾಗಿತ್ತು. ಇದು ಅವರ ಧಾರ್ಮಿಕ ನಂಬಿಕೆಗೆ ವಿರುದ್ಧವಾಗಿತ್ತು. ಹಿಂದೂಗಳು ಸಮುದ್ರಯಾನಮಾಡುವುದೆಂದರೆ ಪಾಪವೆಂದು ನಂಬಿದ್ದರು. ಬ್ರಿಟಿಷ್ ಸೈನಿಕರಿಗಿಂತ ಭಾರತೀಯ ಸೈನಿಕರ ಸಂಖ್ಯೆ ಹೆಚ್ಚಾಗಿದ್ದುದರಿಂದ ಅವರಲ್ಲಿ ಆತ್ಮ ವಿಶ್ವಾಸ ಹೆಚ್ಚಿತು. ಬ್ರಿಟಿಷ್ ಸೈನ್ಯದಲ್ಲಿ ಔದ್ ಪ್ರಾಂತ್ಯವೊಂದರಿಂದಲೇ 75000 ಕ್ಕಿಂತ ಹೆಚ್ಚಿನ ಸೈನಿಕರಿದ್ದರು. ನವಾಬ ವಾಜಿದ್–ಅಲಿಯ ಆಡಳಿತ ಕೆಟ್ಟಿದೆ ಎಂಬ ಕಾರಣ ನೀಡಿ ಅವನ ರಾಜ್ಯವನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸಿಕೊಂಡಿದ್ದರಿಂದ ಆ ಸೈನಿಕರು ಇಂಗ್ಲೀಷರ ವಿರುದ್ಧ ವ್ಯಾಪ್ತರಾದರು.

ತಕ್ಷಣದ ಕಾರಣಗಳು:

ಬ್ರಿಟಿಷರು ಹೊಸ ಎನ್‌ಫೀಲ್ಡ್ ಬಂದೂಕುಗಳನ್ನು ಉಪಯೋಗಕ್ಕೆ ತಂದರು. ಆ ತೋಟಾಗಳ ಮೇಲು ಹೊದಿಕೆಯನ್ನು ಹಲ್ಲಿನಿಂದ ಹರಿದು ತೆಗೆದು ಬಂದೂಕಿನೊಳಗೆ ಹಾಕಬೇಕಿತ್ತು. ತೋಟಾಗಳಿಗೆ ದನದ ಮತ್ತು ಹಂದಿಯ ಕೊಬ್ಬನ್ನು ಸವರಲಾಗಿದೆ ಎಂಬ ವದಂತಿ ಹರಡಿತು. ಆಕಳು ಹಿಂದೂಗಳಿಗೆ ಪವಿತ್ರ ಪ್ರಾಣಿಯಾದರೆ, ಹಂದಿ ಮುಸ್ಲಿಂರಿಗೆ ನಿಷಿದ್ಧವಾಗಿತ್ತು. ಇದು ಭಾರತೀಯ ಸೈನಿಕರಿಗೆ ತಮ್ಮ ಧರ್ಮವನ್ನು ಬ್ರಿಟಿಷರು ಹಾಳುಮಾಡಲು ಪ್ರಯತ್ನಿಸುತ್ತಿದ್ದಾರೆಂಬ ಭಾವನೆ ಮೂಡಿಸಿತು. ಭಾರತೀಯ ಸೈನಿಕರು ಬಂದೂಕುಗಳನ್ನು ಉಪಯೋಗಿಸಲು

ನಿರಾಕರಿಸಿದರು ಮತ್ತು ಬ್ರಿಟಿಷರು ಭಾರತೀಯ ಸೈನಿಕರಿಗೆ ಬಂದೂಕುಗಳನ್ನು ಉಪಯೋಗಿಸುವಂತೆ ಒತ್ತಾಯಿಸಿದರು. ಇದರಿಂದ ಬ್ರಿಟಿಷರ ವಿರುದ್ಧ ದಂಗೆಯು ಆರಂಭವಾಯಿತು.

ಸಂಗ್ರಾಮದ ಗತಿ:

ಬರಹಾಂಪುರದ 19ನೆಯ ಪದಾತಿ ದಳವು ತೋಟಾಗಳನ್ನು ಬಳಸಲು ನಿರಾಕರಿಸಿತು. ಹೀಗಾಗಿ ಮಾರ್ಚ್ 29ರಂದು ಆ ಸೈನ್ಯದ ತುಕಡಿಯನ್ನು ವಜಾಮಾಡಿದರು. ಅದರಂತೆ ಬ್ಯಾರಕ್‌ಪುರದಲ್ಲಿರುವ 34ನೇ ಪದಾತಿದಳವು ಸಹ ಈ ಹೊಸ ತೋಟಾಗಳನ್ನು ಬಳಸಲು ನಿರಾಕರಿಸಿತು. ಅದನ್ನು ಉಪಯೋಗಿಸಲು ಒತ್ತಾಯ ಪಡಿಸಿದಾಗ ಮಂಗಲ್‌ಪಾಂಡೆಯು ಬ್ರಿಟಿಷ್ ಸಾರ್ಜಂಟ್‌ನನ್ನು ಕೊಂದುಹಾಕಿದನು. ಮಂಗಲ್ ಪಾಂಡೆಯನ್ನು ಬಂಧಿಸಿ ಗಲ್ಲಿಗೇರಿಸಲಾಯಿತು. 34ನೇ ಪದಾತಿ ದಳವನ್ನು ವಜಾಮಾಡಲಾಯಿತು.


2ನೇ ಬಹದ್ದೂರ್ ಷಾ


ಮೀರತ್‌ನ 85 ಸೈನಿಕರು ಮೇ ತಿಂಗಳಲ್ಲಿ ತೋಟಾಗಳನ್ನು ಬಳಸಲು ನಿರಾಕರಿಸಿದರು. ಅವರನ್ನು ವಿಚಾರಣೆಗೆ ಒಳಪಡಿಸಿ, ಧೀರ್ಘಾವಧಿಯ ಸೆರೆಮನೆ ವಾಸದ ಶಿಕ್ಷೆ ವಿಧಿಸಲಾಯಿತು. ಸೈನಿಕರು ದಂಗೆ ಎದ್ದು ಜೈಲಿನ ಬಾಗಿಲುಗಳನ್ನು ಮುರಿದು, ತಮ್ಮ ಸಹ ಸೈನಿಕರನ್ನು ಬಿಡುಗಡೆ ಮಾಡಿದರು ಮತ್ತು ಅವರೆಲ್ಲ ದೆಹಲಿಯ ಕಡೆಗೆ ಮುನ್ನುಗ್ಗಿದರು. ಎರಡು ದಿನಗಳಲ್ಲಿ ಅವರು ದೆಹಲಿಯನ್ನು ಆಕ್ರಮಿಸಿಕೊಂಡರಲ್ಲದೆ ಎರಡನೇ ಬಹಾದ್ದೂರ್ ಷಾ (ಕೊನೆಯ ಮೊಘಲ್ ಬಾದ್‌ಷಾ)ನನ್ನು ಭಾರತದ ಸಾಮ್ರಾಟ ಎಂದು ಘೋಷಿಸಿದರು. ಅವರು ದೆಹಲಿ ಕೆಂಪುಕೋಟೆಯ ಮೇಲೆ ಸ್ವಾತಂತ್ರ್ಯ ಧ್ವಜವನ್ನು ಹಾರಿಸಿದರು. ಬಹುಬೇಗ ಈ ದಂಗೆ ಲಕ್ನೋ, ಅಲಹಾಬಾದ್, ಕಾನ್ಪುರ, ಬರೈಲಿ, ಬಿಹಾರ್, ಝಾನ್ಸಿ ಮುಂತಾದ ಕಡೆಗಳಿಗೆ ಹರಡಿತು.

ಬೇಗಂ ಹಜರತ್ ಮಹಲ್ (ವಾಜೀದ್ ಅಲಿಯ ವಿಧವೆ) ಜೂನ್ 1857ರಲ್ಲಿ ಬ್ರಿಟಿಷರ ವಿರುದ್ಧ ಲಕ್ನೋದಲ್ಲಿ ದಂಗೆ ಎದ್ದಳು. ಆದರೆ ಬ್ರಿಟಿಷರು ಲಕ್ನೊದ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡರು. ಬೇಗಂ ಹಜರತ್ ಮಹಲ್‌ಳು ನೇಪಾಳಕ್ಕೆ ಪಲಾಯನಗೈದಳು.

ನಾನಾಸಾಹೇಬನು 1857ರ ಜೂನ್ 5ರಂದು ಬ್ರಿಟಿಷರ ವಿರುದ್ಧ ದಂಗೆಯೆದ್ದು ಕಾನ್ಪುರವನ್ನು ವಶಪಡಿಸಿಕೊಂಡನು ತನ್ನನ್ನು ಪೇಶ್ವೆ ಎಂದು ಘೋಷಿಸಿಕೊಂಡನು. ತಕ್ಷಣವೆ ಬ್ರಿಟಿಷರು ಬೃಹತ್ ಸೈನ್ಯದೊಂದಿಗೆ ಕಾನ್ಪುರದಲ್ಲಿದ್ದ ನಾನಾಸಾಹೇಬನ ಮೇಲೆ ದಾಳಿಮಾಡಿದರು. ನಿಷ್ಠಾವಂತ ಸೇವಕನಾಗಿದ್ದ ತಾತ್ಯಾಟೋಪೆ ಅವನನ್ನು ಕೂಡಿಕೊಂಡನು. ಆದರೆ ಬ್ರಿಟಿಷರು ಕಾನ್ಪುರವನ್ನು ಪುನಃ ವಶಪಡಿಸಿಕೊಳ್ಳವಲ್ಲಿ ಯಶಸ್ವಿಯಾದರು. ನಾನಾಸಾಹೇಬನು ನೇಪಾಳಕ್ಕೆ ಓಡಿಹೋದನು. ಅಂತೆಯೇ ತಾತ್ಯಾಟೋಪೆ ತಪ್ಪಿಸಿಕೊಂಡನು.

1857ರ ಸೆಪ್ಟಂಬರ್‌ನಲ್ಲಿ ಬ್ರಿಟಿಷರು ದೆಹಲಿಯನ್ನು ಮರಳಿ ಸ್ವಾಧೀನ ಪಡಿಸಿಕೊಂಡರು. ಎರಡನೇ ಬಹಾದ್ದೂರ್ ಷಾನನ್ನು ಬಂಧಿಸಿ ರಂಗೂನಿಗೆ ಗಡಿಪಾರು ಮಾಡಿದರು.

ಬ್ರಿಟಿಷರು ತನ್ನ ದತ್ತು ಪುತ್ರನನ್ನು ಮಾನ್ಯಮಾಡಲು ನಿರಾಕರಿಸಿದ್ದರಿಂದ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅವರ ವಿರುದ್ಧ ದಂಗೆ ಎದ್ದಳು. ಅವಳನ್ನು ದಂಗೆಗೆ ಪ್ರಚೋದನೆ ನೀಡುತ್ತಿರುವಳೆಂದು ಪರಿಗಣಿಸುವುದಾಗಿ ಹೆದರಿಸಿದರು ಹಾಗೂ ಝಾನ್ಸಿಯಿಂದ ಹೊರಗೋಡಿಸಿದರು. ಈ ಸಂದರ್ಭದಲ್ಲಿ ತಾತ್ಯಾಟೋಪೆಯು ಬಂದು ಲಕ್ಷ್ಮೀಬಾಯಿಯನ್ನು ಸೇರಿಕೊಂಡನು. ಅವನ ಸಹಾಯದಿಂದ ಅವಳು ಗ್ವಾಲಿಯರ್‌ನ್ನು ವಶಪಡಿಸಿಕೊಂಡಳು.


1857ರ ಭಾರತದ ಮೊದಲನೇ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಸ್ಥಳಗಳು
ಮೀರತ್
ದೆಹಲಿ
ಔಧ್
ಗ್ವಾಲಿಯರ್
ಝಾನ್ಸಿ
ಕಾನ್ಪುರ
ಜಗದೀಶ್‌ಪುರ
ಬ್ಯಾರಕ್‌ಪುರ
ಅರಬ್ಬಿ ಸಮುದ್ರ
ಬಂಗಾಳ ಕೊಲ್ಲಿ
ಹಿಂದೂ ಮಹಾಸಾಗರ
ಉ
ಪ
ಪೂ
ದ

ಬ್ರಿಟೀಷರು ಗ್ವಾಲಿಯರನ್ನು ಪುನಃ ವಶಪಡಿಸಿಕೊಳ್ಳಲು ಬಂದಾಗ ಭೀಕರ ಕಾಳಗ ನಡೆಯಿತು. ಲಕ್ಷ್ಮೀಬಾಯಿ ವೀರಾವೇಶದಿಂದ ಹೋರಾಡುತ್ತಲೆ ರಣರಂಗದಲ್ಲಿ 1858ರ ಜೂನ್ 17 ರಂದು ಮರಣ ಹೊಂದಿದಳು.

ಜಗದೀಶ್‌ಪುರದ ಕುಂವರ್‌ಸಿಂಗ್ ಎಂಬ ಜಮೀನ್ದಾರನು ಬಿಹಾರದಲ್ಲಿ ಬ್ರಿಟಿಷರ ವಿರುದ್ಧ ಬಂಡೆದ್ದನು. ಆದರೆ ನಿರ್ದಯವಾಗಿ ಅವನನ್ನು ಹತ್ತಿಕ್ಕಲಾಯಿತು. 1858ರ ಜುಲೈ ಹೊತ್ತಿಗೆ ಎಲ್ಲ ದಂಗೆಗಳನ್ನು ಬ್ರಿಟಿಷರು ಹತ್ತಿಕ್ಕುವಲ್ಲಿ ಯಶಸ್ವಿಯಾದರು.

ಸಂಗ್ರಾಮದ ವಿಫಲತೆಗೆ ಕಾರಣಗಳು

1. ಈ ದಂಗೆಯು ರಾಷ್ಟ್ರೀಯ ಲಕ್ಷಣಗಳನ್ನು ಹೊಂದಿರಲಿಲ್ಲ. ಇದು ಮಧ್ಯ ಭಾರತಕ್ಕೆ ಮಾತ್ರ ಸೀಮಿತಗೊಂಡಿತ್ತು. ರಜಪೂತರು, ಸಿಖ್ಖರು, ಬಂಗಾಲಿಗಳು, ಹೈದರಾಬಾದಿನ ನಿಜಾಮ, ಪಟಿಯಾಲದ ನವಾಬ, ಕಾಶ್ಮೀರದ ಮಹಾರಾಜ ಇವರೆಲ್ಲರು ಬ್ರಿಟಿಷರನ್ನು ಬೆಂಬಲಿಸಿದರು. ದೊಡ್ಡ ದೊಡ್ಡ ಜಮೀನ್ದಾರರು, ವ್ಯಾಪಾರಸ್ಥರು ಮತ್ತು ಲೇವಾದೇವಿದಾರರು ಸಹ ಬ್ರಿಟಿಷರನ್ನು ಬೆಂಬಲಿಸಿದರು.
2. ಸುಶಿಕ್ಷಿತ ಭಾರತೀಯರು ಹಳೆಯ ವ್ಯವಸ್ಥೆಯೆ ಮರಳಿ ಬರಬಹುದೆಂಬ ಭಯದಿಂದ ದಂಗೆಯನ್ನು ಬೆಂಬಲಿಸಲಿಲ್ಲ. ಬ್ರಿಟಿಷರ ಆಡಳಿತವು ಆಧುನೀಕರಣದ ಗುರಿಯನ್ನು ಸಾಧಿಸುವುದಾಗಿ ಅವರು ನಂಬಿದ್ದರು.
3. ದಂಗೆಕೋರರಿಗೆ ಸರಿಯಾದ ನಾಯಕತ್ವ, ಶಸ್ತ್ರಾಸ್ತ್ರಗಳ ಸಂಗ್ರಹಣೆ, ಮತ್ತು ಸಮಾನ ಯೋಜನೆ ಇರಲಿಲ್ಲ. ಅನೇಕ ವೇಳೆ ಅವರು ಜಮೀನ್ದಾರರನ್ನು ಮತ್ತು ವ್ಯಾಪಾರಸ್ಥರನ್ನು ಲೂಟಿ ಮಾಡಿದರು.
4. ಯೋಜನೆಯಂತೆ ದಂಗೆಯು 1857ರ ಮೇ 31 ರಂದು ಪ್ರಾರಂಭವಾಗಬೇಕಿತ್ತು. ಆದರೆ ಸೈನಿಕರು ಅವಸರದಲ್ಲಿದ್ದರು ಹಾಗೂ ಮೊದಲೇ ಬಂಡೆದ್ದರು.
5. ದಂಗೆಕೋರರಲ್ಲಿ ಸಮಾನ ಉದ್ದೇಶ ಇರಲಿಲ್ಲ.
6. ಸುಸಜ್ಜಿತ ಸೈನ್ಯ, ಸಮರ್ಥ ದಂಡನಾಯಕರು ನಿರಂತರ ಶಸ್ತ್ರಾಸ್ತ್ರಗಳ ಸರಬರಾಜು, ಟೆಲಿಗ್ರಾಫ್ ಮತ್ತು ರೈಲುಗಳು, ಆರ್ಥಿಕ ಸಂಪನ್ಮೂಲಗಳು ಇತ್ಯಾದಿ ಬ್ರಿಟಿಷರಿಗೆ ಸಂಗ್ರಾಮವನ್ನು ಹತ್ತಿಕ್ಕುವಲ್ಲಿ ಸಹಾಯಮಾಡಿದವು.

ಸಂಗ್ರಾಮದ ಪರಿಣಾಮಗಳು:

1. ಇದು ಇಂಗ್ಲೀಷರಿಗೆ ಭಾರತೀಯರ ರಾಷ್ಟ್ರಾಭಿಮಾನವನ್ನು ತೋರಿಸಿಕೊಟ್ಟಿತು.
2. ಹಿಂದೂಗಳು ಹಾಗೂ ಮುಸ್ಲೀಮರು ಒಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಡಿದರು. ಇದು ಅವರಲ್ಲಿ ಏಕತೆಯನ್ನು ಮೂಡಿಸಿತು.
3. ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯನ್ನು ರದ್ದುಗೊಳಿಸಲಾಯಿತು ಮತ್ತು ಇಂಗ್ಲೆಂಡಿನ ರಾಣಿಯು ಭಾರತದ ಆಡಳಿತವನ್ನು ವಹಿಸಿಕೊಂಡಳು.
4. ರಾಣಿ ವಿಕ್ಟೋರಿಯಾಳು 1858ರಲ್ಲಿ ಪ್ರಸಿದ್ಧ ಘೋಷಣೆಯನ್ನು ಹೊರಡಿಸಿದಳು. ಅದರನ್ವಯ ಈ ಕೆಳಕಂಡ ಆಶ್ವಾಸನೆಗಳನ್ನು ಭಾರತೀಯರಿಗೆ ನೀಡಲಾಯಿತು
   ಎ) ಬ್ರಿಟಿಷ್ ಸರ್ಕಾರವು ಇನ್ನು ಮುಂದೆ ಯಾವುದೇ ಭಾರತೀಯ ರಾಜ್ಯಗಳನ್ನು ವಿಲೀನಗೊಳಿಸಿಕೊಳ್ಳುವುದಿಲ್ಲ.
   ಬಿ) ದತ್ತು ಪುತ್ರರನ್ನು ಪಡೆಯುವ ಭಾರತೀಯ ಅರಸರ ಹಕ್ಕನ್ನು ಮಾನ್ಯ ಮಾಡಲಾಗುವುದು.
   ಸಿ) ಬ್ರಿಟಿಷ್ ಸರ್ಕಾರವು ಭಾರತೀಯರ ಧಾರ್ಮಿಕ ನಂಬಿಕೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ.
   ಡಿ) ಭಾರತೀಯರಿಗೆ ಆಡಳಿತದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸಲಾಗುವುದು.
5. ಮೊಗಲ್‌ರ ಆಳ್ವಿಕೆ ಕೊನೆಗೊಂಡಿತು.

ಹೀಗೆ 1857ರ ಕ್ರಾಂತಿಯು ಸಿಪಾಯಿ ದಂಗೆಯಾಗಿ ಪ್ರಾರಂಭಗೊಂಡು, ರಾಜರ ಹೋರಾಟವಾಗಿ ಪರಿವರ್ತನೆ ಹೊಂದಿ, ಭಾರತೀಯರ ದಂಗೆಯಾಗಿ ಬೆಳವಣಿಗೆ ಹೊಂದಿ ಮತ್ತು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾಗಿ ಕೊನೆಗೊಂಡಿತು. ಇದು ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿತು.

ಚಟುವಟಿಕೆ

ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಸ್ಥಳಗಳನ್ನು ಭಾರತದ ಭೂಪಟದಲ್ಲಿ ಗುರ್ತಿಸಿ, ಅದರ ಬಗ್ಗೆ ಒಂದು ವಿವರಣೆಯನ್ನು ಬರೆಯಿರಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ

1. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ನಡೆದ ವರ್ಷ ಯಾವುದು?
2. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ದಂಗೆ ಎದ್ದ ಲಕ್ನೋದ ರಾಣಿಯನ್ನು ಹೆಸರಿಸಿ.
3. 1857ರಲ್ಲಿ ಬ್ರಿಟಿಷ್ ಸಾರ್ಜೆಂಟ್‌ನನ್ನು ಕೊಂದ ಭಾರತೀಯ ಸೈನಿಕನನ್ನು ಹೆಸರಿಸಿ.
4. 1857ರಲ್ಲಿ ಬ್ರಿಟಿಷ್‌ರ ವಿರುದ್ಧ ಕಾನ್ಪುರದಲ್ಲಿ ದಂಗೆ ಎದ್ದವರು ಯಾರು?
5. ಝಾನ್ಸಿಯರಾಣಿ ಲಕ್ಷ್ಮೀ ಬಾಯಿಯು ಬ್ರಿಟಿಷರ ವಿರುದ್ಧ ಏಕೆ ದಂಗೆ ಎದ್ದಳು?

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ

1. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣವೇನು?
2. 1857ರ ದಂಗೆಯ ವಿಫಲತೆಗೆ ಯಾವುದಾದರೂ ಎರಡು ಕಾರಣಗಳನ್ನು ಬರೆಯಿರಿ.

III. ಕೆಳಗಿನ ಪ್ರಶ್ನೆಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಗತಿಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

IV. ಕೆಳಗಿನ ಪ್ರಶ್ನೆಗೆ 30– 40 ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ವಿವರಿಸಿ.

❋ ❋ ❋ ❋

ಅಧ್ಯಾಯ – 7.3

ಆರ್ಥಿಕತೆ ಮತ್ತು ಶಿಕ್ಷಣದ ಮೇಲೆ ಬ್ರಿಟಿಷ್ ಆಡಳಿತದ ಪ್ರಭಾವ.

ಬ್ರಿಟಿಷರು ಭಾರತವನ್ನು ಎರಡು ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ಆಳಿದರು. ಅವರು ಭಾರತವನ್ನು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶೋಷಿಸಿದರು. ಬ್ರಿಟಿಷರ ಆಳ್ವಿಕೆಯು ಭಾರತದ ಆರ್ಥಿಕತೆ ಮತ್ತು ಶಿಕ್ಷಣದ ಮೇಲೆ ಗಾಢವಾದ ಪ್ರಭಾವ ಬೀರಿದೆ.

1. ಆರ್ಥಿಕ ಪ್ರಭಾವ;

ಭೂ ಕಂದಾಯವು ಸರಕಾರದ ಪ್ರಮುಖ ಆದಾಯದ ಮೂಲವಾಗಿತ್ತು. ಬ್ರಿಟಿಷರು, ಆಡಳಿತಕ್ಕೆ, ಬೃಹತ್ ಸೇನೆಯ ನಿರ್ವಹಣೆಗೆ ಮತ್ತು ಯುದ್ಧಗಳನ್ನು ಮಾಡಲು ಅಪಾರ ಖರ್ಚುನ್ನು ಮಾಡಬೇಕಿತ್ತು. ಈ ಖರ್ಚಿನ ಭಾರವನ್ನು ಭಾರತೀಯ ಕೃಷಿಕರು ಅಥವಾ ರೈತರ ಮೇಲೆ ಹೇರಲಾಗುತ್ತಿತ್ತು. ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಹಳೆಯ ಕಂದಾಯ ಪದ್ಧತಿಯ ಜೊತೆಗೆ ಅವರು ಹೊಸ ರೀತಿಯ ಕಂದಾಯ ಪದ್ಧತಿಗಳನ್ನು ಬೇರೆ ಬೇರೆ ಪ್ರಾಂತಗಳಲ್ಲಿ ಕಾಲದಿಂದ ಕಾಲಕ್ಕೆ ಪರಿಚಯಿಸಿದರು. ಅವುಗಳು ಈ ಕೆಳಗಿನಂತಿವೆ:

ಶಾಶ್ವತ ಕಂದಾಯ ಪದ್ಧತಿ ಅಥವಾ ಜಮೀನ್ದಾರಿ ಪದ್ಧತಿ–1793:

1793 ರಲ್ಲಿ ಲಾರ್ಡ್‌ಕಾರ್ನ್‌ವಾಲೀಸ್‌ನು ಬಂಗಾಳ, ಬಿಹಾರ, ಓರಿಸ್ಸಾ ಮತ್ತು ಉತ್ತರ ಪ್ರದೇಶದ ಉತ್ತರ ಭಾಗಗಳಲ್ಲಿ ಈ ಪದ್ಧತಿಯನ್ನು ಜಾರಿಗೆ ತಂದನು. ಈ ಪದ್ಧತಿಯ ಪ್ರಕಾರ ಈಸ್ಟ್ ಇಂಡಿಯಾ ಕಂಪನಿಯು ಜಮೀನ್ದಾರರೊಂದಿಗೆ ಒಂದು ಒಪ್ಪಂದಕ್ಕೆ ಬಂದಿತು. ಆರಂಭದಲ್ಲಿ ಇದನ್ನು ಹತ್ತು ವರ್ಷಗಳವರೆಗೆ ಜಾರಿಗೊಳಿಸಲಾಯಿತು. ನಂತರ ಇದನ್ನು ಶಾಶ್ವತಗೊಳಿಸಲಾಯಿತು. ಆದ್ದರಿಂದ ಇದನ್ನು ಖಾಯಂ ಗುತ್ತಾ ಪದ್ಧತಿ ಎಂದು ಕರೆಯಲಾಗಿದೆ. ಜಮೀನ್ದಾರರಿಗೆ ಶಾಶ್ವತವಾಗಿ ಭೂ ಮಾಲಿಕತ್ವವನ್ನು ಕೊಡಲಾಯಿತು ಅದನ್ನು ಅವರು ರೈತರ ಸಹಾಯದಿಂದ ಸಾಗುವಳಿ ಮಾಡಿಸುತ್ತಿದ್ದರು. ಒಟ್ಟು ಸಂಗ್ರಹಿಸಿದ ಕಂದಾಯದಲ್ಲಿ ಶೇ 89 ರಷ್ಟನ್ನು ಜಮೀನ್ದಾರರು ಸರ್ಕಾರಕ್ಕೆ ಕೊಡಬೇಕಿತ್ತು, ಮತ್ತು ಉಳಿದ ಶೇ 11 ರಷ್ಟನ್ನು ತಾವೇ ಇಟ್ಟುಕೊಳ್ಳಬೇಕಿತ್ತು. ಇದು ಸರ್ಕಾರಕ್ಕೆ ನಿಯಮಿತವಾದ ಆದಾಯವನ್ನು ತಂದುಕೊಟ್ಟಿತು.

ಈ ಪದ್ಧತಿಯಡಿಯಲ್ಲಿ ಸರ್ಕಾರವು ಸಂಪೂರ್ಣವಾಗಿ ಕಂದಾಯ ಸಂಗ್ರಹಕ್ಕಾಗಿ ಜಮೀನ್ದಾರರನ್ನೇ ಅವಲಂಬಿಸಿತ್ತು ಮತ್ತು ರೈತರು ಜಮೀನ್ದಾರರ ಹಿಡಿತದಲ್ಲಿದ್ದರು. ಕೃಷಿಕರು ಪೀಡಿಸಲ್ಪಡುತ್ತಿದ್ದರು ಹಾಗು ಮಧ್ಯವರ್ತಿಗಳಾಗಿದ್ದ ಜಮೀನ್ದಾರರು ಕೃಷಿಕರಿಗೆ ಹಾನಿ ಮಾಡಿ ಅಪಾರ ಸಂಪತ್ತನ್ನು ಪಡೆದುಕೊಂಡರು.

ರೈತವಾರಿ ಪದ್ಧತಿ:

ಈ ಪದ್ಧತಿಯನ್ನು ಬಾಂಬೆ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಜಾರಿಗೊಳಿಸಲಾಯಿತು. ಈ ಪದ್ಧತಿಯಡಿಯಲ್ಲಿ ಈಸ್ಟ್ ಇಂಡಿಯಾ ಕಂಪನಿಯು ರೈತರು ಅಥವಾ ಕೃಷಿಕರೊಂದಿಗೆ ನೇರ ಒಪ್ಪಂದವನ್ನು ಮಾಡಿಕೊಂಡಿತು. ರೈತರು ನಿಗದಿತ ಶೇಕಡ 50 ಕಂದಾಯವನ್ನು ನಿಯಮಿತವಾಗಿ ಕೊಡುವ ಷರತ್ತಿನ ಮೇಲೆ ಅವರಿಗೆ ಮಾಲೀಕತ್ವವನ್ನು ನೀಡಲಾಗುತ್ತಿತ್ತು. ಪ್ರತಿ 20 ರಿಂದ 30 ವರ್ಷಗಳಿಗೊಮ್ಮೆ ಕಂದಾಯವನ್ನು ಪರಿಷ್ಕರಿಸಲಾಗುತ್ತಿತ್ತು, ಈ ಪದ್ಧತಿಯಡಿಯಲ್ಲಿ ಕೃಷಿಕರು ಸರಕಾರದ ಸಂಪೂರ್ಣ ಅಧೀನದಲ್ಲಿದ್ದರು. ಕಂದಾಯವನ್ನು, ಕಂದಾಯ

ಅಧಿಕಾರಿಗಳ ಸಹಾಯದಿಂದ ಸಂಗ್ರಹಿಸಲಾಗುತ್ತಿತ್ತು. ಅನೇಕ ವೇಳೆ ಕೃಷಿಕರು, ತಮ್ಮ ಎಲ್ಲಾ ಉತ್ಪಾದನೆಯು ಬರಗಾಲ ಅಥವಾ ಪ್ರವಾಹಗಳಿಂದ ಹಾನಿಗೊಳಗಾದರು ಕಂದಾಯವನ್ನು ಕೊಡಲೇಬೇಕಾಗಿತ್ತು. ತೆರಿಗೆ ಕೊಡಲಾಗದೆ ಅನೇಕ ಕೃಷಿಕರು ಭೂ–ಒಡೆತನವನ್ನು ಕಳೆದುಕೊಂಡರು.

ಮಹಲ್ವಾರಿ ಪದ್ಧತಿ:

ಈ ಪದ್ಧತಿಯನ್ನು ಭಾರತದ ವಾಯುವ್ಯ ಭಾಗದಲ್ಲಿ, ಗಂಗಾ ಕೊಳ್ಳ ಮತ್ತು ಮಧ್ಯ ಭಾರತದಲ್ಲಿ ಜಾರಿಗೊಳಿಸಲಾಯಿತು. ಇಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಮಹಲ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುತಿತ್ತು. 'ಮಹಲ್' ಒಂದು ಕಂದಾಯ ಘಟಕವಾಗಿದ್ದು ಒಂದು ಅಥವಾ ಒಂದಕ್ಕಿಂತ ಹೆಚ್ಚು ಹಳ್ಳಿಗಳನ್ನು ಒಳಗೊಂಡಿರುತ್ತಿತ್ತು. ಮಹಲ್‌ನೊಳಗಿದ್ದ ಕೃಷಿಕರನ್ನು ಒಟ್ಟಾಗಿ ಭೂ–ಮಾಲಿಕರೆಂದು ಪರಿಗಣಿಸಿದರು. ಎಲ್ಲರೂ ಒಟ್ಟಾಗಿ ಕಂದಾಯ ಕೊಡಲು ಜವಾಬ್ದಾರರಾಗಿದ್ದರು. ಕಂದಾಯವನ್ನು ಶೇ 50 ರಿಂದ 60 ರವರೆಗೆ ನಿಗದಿಗೊಳಿಸಲಾಗಿತ್ತು ಹಾಗೂ ಕಾಲ ಕಾಲಕ್ಕೆ ಪರಿಷ್ಕರಿಸಲಾಗುತ್ತಿತ್ತು. ಹೆಚ್ಚಿನ ಭೂಕಂದಾಯವು ರೈತರಿಗೆ ದೊಡ್ಡ ಹೊರೆಯಾಗಿ ಕೃಷಿಕರು ತೀವ್ರ ಬಡತನಕ್ಕೆ ತಳ್ಳಲ್ಪಟ್ಟರು.

ಸಂಪತ್ತಿನ ಸೋರಿಕೆ ಅಥವಾ ಸೋರಿಕೆ ಸಿದ್ಧಾಂತ:

ಭಾರತದ ಕೃಷಿಯನ್ನು ಅಭಿವೃದ್ಧಿಪಡಿಸಲು ಬ್ರಿಟಿಷರಿಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಅವರು ಇಂಗ್ಲೆಂಡಿನಲ್ಲಿನ ತಮ್ಮ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳನ್ನು ದೊರಕಿಸಿಕೊಳ್ಳಲು ಮತ್ತು ತಮ್ಮ ವಾಣಿಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಮಾತ್ರ ಆಸಕ್ತರಾಗಿದ್ದರು. ಯೂರೋಪ್ ಮತ್ತು ಅಮೇರಿಕದ ಮಾರುಕಟ್ಟೆಗಳಲ್ಲಿ ಅಪಾರ ಬೇಡಿಕೆ ಇದ್ದ ವಾಣಿಜ್ಯ ಬೆಳೆಗಳಾದ, ಹತ್ತಿ, ಕಬ್ಬು, ಚಹ, ನೀಲಿ ಮುಂತಾದವುಗಳನ್ನು ಬೆಳೆಯಲು ಭಾರತೀಯ ಕೃಷಿಕರ ಮೇಲೆ ಒತ್ತಡ ಹೇರುತ್ತಿದ್ದರು.

ಇಂಗ್ಲೆಂಡ್ ಉದ್ದೇಶಪೂರ್ವಕವಾಗಿಯೇ ಭಾರತದಲ್ಲಿ ಕೈಗಾರಿಕೆಗಳನ್ನು ಆರಂಭಿಸಲಿಲ್ಲ. ಅವರು ಭಾರತವನ್ನು ಕಚ್ಚಾ ವಸ್ತುಗಳ ಮೂಲವಾಗಿ ಮತ್ತು ಉತ್ಪಾದಿತ ವಸ್ತುಗಳಿಗೆ ಮಾರಕಟ್ಟೆಯನ್ನಾಗಿ ಪರಿವರ್ತಿಸಿದ್ದರು. ಭಾರತೀಯ ಕರಕುಶಲ ವಸ್ತುಗಳು ಯಂತ್ರದಿಂದ ಮಾಡಿದ ಉತ್ಪಾದನೆಗಳೊಂದಿಗೆ ಸ್ಪರ್ಧಿಸಲಾಗಲಿಲ್ಲ. ಕಸುಬುದಾರರು ಮತ್ತು ಕುಶಲಕರ್ಮಿಗಳು, ರೈತರಾಗಿ ಇಲ್ಲವೆ ಕೃಷಿಕೂಲಿಕಾರರಾಗಿ ಹಸಿವೆಯಿಂದ ಬಳಲುವಷ್ಟು ಕಡಿಮೆ ಕೂಲಿಗೆ ಕೆಲಸ ಮಾಡಬೇಕಾಯಿತು. ಬ್ರಿಟಿಷರು ಜಾರಿಗೆ ತಂದ ಹೊಸ ರೈತವಾರಿ ಮತ್ತು ಮಹಲ್ವಾರಿ ಪದ್ಧತಿಗಳು ಲೇವಾದೇವಿದಾರರ ಮತ್ತು ಜಮೀನ್ದಾರರ ಪರವಾಗಿದ್ದುದರಿಂದ ಪುನ: ಜಮೀನ್ದಾರಿ ಪದ್ಧತಿಗೆ ದಾರಿ ಮಾಡಿಕೊಟ್ಟಿತು. ಇದರಿಂದ ಭಾರತೀಯ ಗ್ರಾಮಗಳ ಸ್ಥಿರತೆ ಮತ್ತು ಬೆಳವಣಿಗೆಗಳು ಕುಂಟಿತಗೊಂಡವು.

ಭಾರತದ ಸಂಪತ್ತು ಮತ್ತು ಸಂಪನ್ಮೂಲಗಳು ಯಾವುದೇ ಆರ್ಥಿಕ ಮತ್ತು ವಸ್ತು ರೂಪದ ಸಮಾನ ಆದಾಯ ಅಥವಾ ಲಾಭವಿಲ್ಲದೆ ಇಂಗ್ಲೆಂಡಿಗೆ ಹರಿದು ಹೋದದ್ದನ್ನು **'ಸಂಪತ್ತಿನ ಸೋರಿಕೆ'** ಎಂದು ಕರೆಯಲಾಗಿದೆ. ನಾಗರಿಕ ಮತ್ತು ಸೇನಾ ಅಧಿಕಾರಿಗಳ ವೇತನ ಮತ್ತು ಪಿಂಚಣಿ (ನಿವೃತ್ತಿ ವೇತನ), ಸಾಲದ ಮೇಲಿನ ಬಡ್ಡಿ, ಬ್ರಿಟಿಷ್ ಬಂಡವಾಳಶಾಹಿಗಳ ಲಾಭ, ಆಡಳಿತದ ವೆಚ್ಚ ಇತ್ಯಾದಿ ಸಾಕಷ್ಟು ಸಂಪತ್ತು ಇಂಗ್ಲೆಂಡಿಗೆ ಹರಿದು ಹೋಯಿತು. ಭಾರತದ ರಫ್ತಿಗಿಂತಲೂ ಇಂಗ್ಲೆಂಡ್‌ನಿಂದ ಆಮದಿನ ಹೆಚ್ಚಳ ಹಾಗೂ ಭಾರತೀಯ ವಸ್ತುಗಳ ಮೇಲಿನ ಹೆಚ್ಚಿನ ತೆರಿಗೆಗಳು ಮತ್ತು ಬ್ರಿಟಿಷ್ ವಸ್ತುಗಳ ಮೇಲಿನ ಕಡಿಮೆ ತೆರಿಗೆಗಳಿಂದಾಗಿಯೂ ಭಾರತೀಯ ಸಂಪತ್ತಿನ ಸೋರಿಕೆಯಾಯಿತು.

ದಾದಾಬಾಯಿ ನವರೋಜಿಯವರು ತಮ್ಮ 'ಪಾವರ್ಟಿ ಆ್ಯಂಡ ಅನ್‌ಬ್ರಿಟಿಷ್ ರೂಲ್ ಇನ್ ಇಂಡಿಯಾ' ಎಂಬ ಕೃತಿಯಲ್ಲಿ ಸೋರಿಕೆ ಸಿದ್ಧಾಂತವನ್ನು ಮಂಡಿಸಿದ್ದಾರೆ. ಇವರು ಭಾಷಣ ಹಾಗೂ ಪತ್ರಿಕಾ ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ತಿಳಿವಳಿಕೆ ಮೂಡಿಸಲು ಒಂದು ಆಂದೋಲನವನ್ನೇ ನಡೆಸಿದರು. ಭಾರತದ

ಬಡತನಕ್ಕೆ ಸಂಪತ್ತಿನ ಸೋರಿಕೆ ಮತ್ತು ಬ್ರಿಟಿಷ್‌ರ ದುರಾಡಳಿತವೇ ಮೂಲಕಾರಣವೆಂದು ಘೋಷಿಸಿದರು. ಮುಂದೆ ರಾಷ್ಟ್ರೀಯವಾದಿಗಳು ಸೋರಿಕೆ ಸಿದ್ಧಾಂತ ಮತ್ತು ಬ್ರಿಟಿಷ್‌ರ ಆರ್ಥಿಕ ಶೋಷಣೆಯನ್ನು ಅಸ್ತ್ರವನ್ನಾಗಿಸಿಕೊಂಡು ಜನರನ್ನು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಜಾಗೃತಗೊಳಿಸಿದರು.

2. ಶಿಕ್ಷಣದ ಮೇಲೆ ಪ್ರಭಾವ:

ಯೂರೋಪಿಯನ್ನರು ಭಾರತಕ್ಕೆ ಆಗಮಿಸುವ ಮೊದಲು ಭಾರತದಲ್ಲಿನ ಶಿಕ್ಷಣವು ಧರ್ಮಾಧಾರಿತವಾಗಿತ್ತು. ಹಿಂದೂ ಪಾಠಶಾಲೆಗಳು ಮತ್ತು ಮುಸ್ಲಿಂರ ಮದರಸಗಳು ಜನರಿಗೆ ಶಿಕ್ಷಣವನ್ನು ನೀಡುತ್ತಿದ್ದವು. ಪ್ರಾರಂಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಜನರಿಗೆ ಶಿಕ್ಷಣಕೂಡಲು ಯಾವುದೆ ಆಸಕ್ತಿ ತೋರಲಿಲ್ಲ. 1813 ರಲ್ಲಿ ಬ್ರಿಟಿಷ್ ಸಂಸತ್ ಚಾರ್ಟರ್ ಕಾಯಿದೆಯನ್ನು ಅಂಗೀಕರಿಸುವುದರೊಂದಿಗೆ ಶಿಕ್ಷಣದಲ್ಲಿ ಹೊಸ ಅಧ್ಯಾಯ ಆರಂಭಗೊಂಡಿತು. ಈ ಶಾಸನವು ಭಾರತದಲ್ಲಿನ ಶಿಕ್ಷಣದ ಅಭಿವೃದ್ಧಿಗೆ ವಾರ್ಷಿಕ ವೆಚ್ಚವಾಗಿ 1,00,000 ರೂಪಾಯಿಗಳನ್ನು ಒದಗಿಸಿತು. ಆದರೆ ಪೌರತ್ಯರು (ಓರಿಯಂಟಲಿಸ್ಟ್ಸ್) ಮತ್ತು ಇಂಗ್ಲೀಷ್ ಶಿಕ್ಷಣದ ಬೆಂಬಲಿಗರ (ಆಂಗ್ಲಿಸಿಸ್ಟರು) ಮಧ್ಯದ ಭಿನ್ನಾಭಿಪ್ರಾಯದಿಂದಾಗಿ ಅನೇಕ ವರ್ಷಗಳವರೆಗೆ ಈ ಹಣವನ್ನು ಕಂಪನಿಯು ಖರ್ಚು ಮಾಡಲಿಲ್ಲ. ಪೌರತ್ಯರು ಹಣವನ್ನು ಭಾರತೀಯ ಭಾಷೆಗಳಾದ ಸಂಸ್ಕೃತ, ಅರೇಬಿಕ್, ಪರ್ಷಿಯನ್ ಮತ್ತು ದೇಶೀಯ ಭಾಷೆಗಳ ಕಲಿಕೆಗೆ ಖರ್ಚುಮಾಡಬೇಕೆಂದು ವಾದಿಸಿದರು. ಆದರೆ ಇಂಗ್ಲೀಷ್ ಶಿಕ್ಷಣ ಬೆಂಬಲಿಗರು ಭಾರತದಲ್ಲಿನ ಶಿಕ್ಷಣದ ಅಭಿವೃದ್ಧಿಯೆಂದರೆ ಇಂಗ್ಲೀಷ್ ಭಾಷೆ ಹಾಗೂ ಕಲಿಕೆಯ ಅಭಿವೃದ್ಧಿಯೆಂದು ತಿಳಿದಿದ್ದರಿಂದ ಆ ಹಣವನ್ನು ಅದಕ್ಕಾಗಿಯೇ ಖರ್ಚು ಮಾಡಬೇಕೆಂದರು.

ಮೆಕಾಲೆಯ ವರದಿ – 1835:

ಪೌರತ್ಯರ ಮತ್ತು ಇಂಗ್ಲೀಷ್ ಶಿಕ್ಷಣದ ಬೆಂಬಲಿಗರ ಮಧ್ಯದ ವಿವಾದವು 1835 ರವರೆಗೆ ಮುಂದುವರೆಯಿತು. ಈ ವಿವಾದವನ್ನು ಬಗೆಹರಿಸಲು ಅಂದಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕ್‌ನು, ಮೆಕಾಲೆಯನ್ನು ನೇಮಕಮಾಡಿದ. ಮೆಕಾಲೆಯು ತನ್ನ 1835 ರ ಪ್ರಸಿದ್ಧ ವರದಿಯಲ್ಲಿ ಇಂಗ್ಲೀಷ್ ಶಿಕ್ಷಣದ ಬೆಂಬಲಿಗರ ಅಭಿಪ್ರಾಯಗಳನ್ನು ಬೆಂಬಲಿಸಿದನು. ಈತನು ಭಾರತದಲ್ಲಿ ಪಾಶ್ಚತ್ಯ ಮಾದರಿಯ ಶಿಕ್ಷಣ ವ್ಯವಸ್ಥೆಯ ಬೆಳವಣಿಗೆ ಹಾಗೂ ಇಂಗ್ಲೀಷನ್ನು ಶಿಕ್ಷಣದ ಮಾಧ್ಯಮವಾಗಬೇಕೆಂದು ಪ್ರತಿಪಾದಿಸಿದನು. 'ರಕ್ತ ಮತ್ತು ಬಣ್ಣದಲ್ಲಿ ಭಾರತೀಯ, ಆದರೆ ಅಭಿರುಚಿ, ಹವ್ಯಾಸ ಮತ್ತು ಬುದ್ಧಿಮತ್ತೆಯಲ್ಲಿ ಇಂಗ್ಲೀಷರಂತಹ ವರ್ಗ' ವನ್ನು ಸೃಷ್ಟಿಸಲು ಅವನು ಉದ್ದೇಶಿಸಿದನು.

ಮೆಕಾಲೆಯ ಅಭಿಪ್ರಾಯವನ್ನು ಒಪ್ಪಿಕೊಂಡ ಲಾರ್ಡ್ ವಿಲಿಯಂ ಬೆಂಟಿಂಕ್‌ನು ಆ ಪ್ರಕಾರವೇ ನಿಧಿಯನ್ನು ಖರ್ಚು ಮಾಡಲು ನಿರ್ಧರಿಸಿದನು. ಈ ಶಾಸನವು ಶಿಕ್ಷಣದ ಮೂಲಕ ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವ ಹಾಗೂ ಈಸ್ಟ್ ಇಂಡಿಯಾ ಕಂಪನಿಯ ಕೆಲಸಕ್ಕೆ ಗುಮಾಸ್ತರನ್ನು ತಯಾರಿಸುವ ಉದ್ದೇಶವನ್ನು ಹೊಂದಿತ್ತು.

ಮೆಕಾಲೆಯು ಇಂಗ್ಲೀಷ್ ಶಿಕ್ಷಣದ ದೃಢ ಬೆಂಬಲಿಗನಾಗಿದ್ದ ಪೌರತ್ಯ ಕಲಿಕೆಯು (ಓರಿಯಂಟಲ್) ಪಾಶ್ಚಾತ್ಯ ಕಲಿಕೆಗಿಂತ (ಯುರೋಪಿನ) ತೀರಾ ಕಳಪೆಯಾಗಿದೆ ಎಂದು ವಾದಿಸಿದನು. "ಭಾರತ ಮತ್ತು ಅರೇಬಿಯಾದ ಸಮಸ್ತ ಪೌರ್ವಾತ್ಯ ಸಾಹಿತ್ಯ ಸೇರಿದರೂ ಯೂರೋಪಿನ ಉತ್ತಮ ಗ್ರಂಥಾಲಯದ ಕಪಾಟೊಂದರ ಗ್ರಂಥಗಳಿಗೆ ಸಮವಾಗದು" ಎಂದು ಹೇಳಿದನು.

ವುಡ್‌ನ ವರದಿ–1854

ಭಾರತದಲ್ಲಿನ ಶಿಕ್ಷಣದ ಅಭಿವೃದ್ಧಿಯ ಮುಂದಿನ ಹಂತ 1854ರ ಸರ್ ಚಾರ್ಲ್ಸ್ ವುಡ್‌ನಿಂದ ಸಿದ್ಧಪಡಿಸಲ್ಪಟ್ಟ 'ವುಡ್‌ನ ವರದಿ'. ಇದು ಸಮಗ್ರ ವರದಿಯಾಗಿದ್ದು ಈ ಕೆಳಗಿನ ಮಹತ್ವದ ಶಿಫಾರಸ್ಸುಗಳನ್ನು ಮಾಡಿದೆ.

1. ಕಂಪನಿಯು ಹಳ್ಳಿಯಲ್ಲಿ ಪ್ರಾಥಮಿಕ ಶಾಲೆ, ಪಟ್ಟಣಗಳಲ್ಲಿ ಪ್ರೌಢಶಾಲೆ ಮತ್ತು ಜಿಲ್ಲಾ ಮಟ್ಟದಲ್ಲಿ ಕಾಲೇಜುಗಳನ್ನು ಆರಂಭಿಸಬೇಕು.
2. ಪ್ರಾಥಮಿಕ ಶಿಕ್ಷಣವು ದೇಶೀಯ ಭಾಷೆಗಳಲ್ಲಿರಬೇಕು, ಪ್ರೌಢ ಶಾಲೆಗಳಲ್ಲಿ ಹಾಗೂ ಉನ್ನತ ಶಿಕ್ಷಣಕ್ಕೆ ಆಂಗ್ಲ ಮಾಧ್ಯಮವಿರಬೇಕು.
3. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುವುದು.
4. ಕಂಪನಿಯು ಎಲ್ಲಾ ಪ್ರಾಂತಗಳಲ್ಲಿ ಶಿಕ್ಷಣದ ಮೇಲ್ವಿಚಾರಣೆಗೆ 'ಸಾರ್ವಜನಿಕ ಶಿಕ್ಷಣ ಇಲಾಖೆ'ಯನ್ನು ಸ್ಥಾಪಿಸಬೇಕು.
5. ಲಂಡನ್ ವಿಶ್ವವಿದ್ಯಾಲಯ ಮಾದರಿಯಲ್ಲಿ ಬಾಂಬೆ, ಮದ್ರಾಸ್ ಮತ್ತು ಕಲ್ಕತ್ತಾಗಳಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆ.
6. ಶಿಕ್ಷಕರ ತರಬೇತಿ ಕಾಲೇಜುಗಳನ್ನು ಆರಂಭಿಸುವುದು.
7. ವೃತ್ತಿ ಶಿಕ್ಷಣ ಮತ್ತು ತಾಂತ್ರಿಕ ಶಾಲಾ–ಕಾಲೇಜುಗಳ ಸ್ಥಾಪನೆ.
8. ಮಹಿಳಾ ಶಿಕ್ಷಣಕ್ಕೆ ಪ್ರಧಾನ್ಯತೆ.

ಈ ವರದಿಯ ಬಹುತೇಕ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಯಿತು. ಚಾರ್ಲ್ಸ್‌ವುಡ್‌ರ ವಿಚಾರಗಳು ಭಾರತೀಯ ಶಿಕ್ಷಣದ ಮೇಲೆ ಮುಂದಿನ ಅನೇಕ ವರ್ಷಗಳವರೆಗೆ ಪ್ರಭಾವ ಬೀರಿದವು. ಈ ವರದಿಯನ್ನು ಭಾರತದಲ್ಲಿನ **'ಇಂಗ್ಲೀಷ್ ಶಿಕ್ಷಣದ ಮಹಾಸನ್ನದು'** ಎಂದು ಕರೆಯಲಾಗಿದೆ.

ಚಟುವಟಿಕೆ

1854ರ ವುಡ್ಡರ ವರದಿಯ ಶಿಫಾರಸ್ಸುಗಳ ಒಂದು ಪಟ್ಟಿ ತಯಾರಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

1. ಶಾಶ್ವತ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದವರು ಯಾರು?
2. ಸೋರಿಕೆ ಸಿದ್ಧಾಂತವನ್ನು ಪ್ರತಿಪಾದಿಸಿದವರು ಯಾರು?
3. ದಾದಾಬಾಯಿ ನವರೋಜಿಯವರು ಬರೆದ ಕೃತಿ ಯಾವುದು?
4. ವುಡ್ ವರದಿ ರಚನೆಯಾದದ್ದು ಯಾವ ವರ್ಷದಲ್ಲಿ?
5. 'ಭಾರತದಲ್ಲಿ ಇಂಗ್ಲೀಷ್ ಶಿಕ್ಷಣದ ಮಹಾಸನ್ನದು' ಎಂದು ಯಾವುದನ್ನು ಕರೆಯಲಾಗಿದೆ?

II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಯಾವುದಾದರೂ ಎರಡು ಭೂ ಕಂದಾಯ ಪದ್ಧತಿಗಳನ್ನು ಹೆಸರಿಸಿ.
2. ರೈತವಾರಿ ಪದ್ಧತಿ ಎಂದರೇನು?
3. ಮಹಲ್‌ವಾರಿ ಪದ್ಧತಿ ಎಂದರೇನು?
4. ಪೌರಾತ್ಯ ಸಾಹಿತ್ಯದ ಬಗ್ಗೆ ಮೆಕಾಲೆಯ ಅಭಿಪ್ರಾಯವೇನಾಗಿತ್ತು?

III. ಕೆಳಗಿನ ಪ್ರಶ್ನೆಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.

1. ಸೋರಿಕೆ ಸಿದ್ಧಾಂತವನ್ನು ವಿವರಿಸಿ.
2. ಬ್ರಿಟಿಷ್ ಆಡಳಿತವು ಭಾರತೀಯ ಶಿಕ್ಷಣದ ಮೇಲೆ ಬೀರಿದ ಪ್ರಭಾವನ್ನು ಕುರಿತು ಬರೆಯಿರಿ.

IV. ಕೆಳಗಿನ ಪ್ರಶ್ನೆಗೆ 30– 40 ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದ ಆರ್ಥಿಕತೆಯ ಮೇಲೆ ಬ್ರಿಟಿಷ್ ಆಳ್ವಿಕೆಯ ಪ್ರಭಾವದ ಕುರಿತು ವಿವರಣೆ ನೀಡಿ.

❋ ❋ ❋ ❋

ಅಧ್ಯಾಯ - 7.4

ಸಾಮಾಜಿಕ-ಧಾರ್ಮಿಕ ಸುಧಾರಣಾ ಚಳುವಳಿ

19 ನೆಯ ಶತಮಾನದಲ್ಲಿ ಭಾರತವು ಬೌದ್ಧಿಕ ಪುನರುಜ್ಜೀವನವನ್ನು ಕಂಡಿತು. ಪಾಶ್ಚಾತ್ಯ ಮಾನವೀಯತೆ, ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನಗಳು ಹಿಂದೂ ಧಾರ್ಮಿಕ ಚಿಂತನೆ ಹಾಗೂ ಸುಶಿಕ್ಷಿತ ಭಾರತೀಯರ ಮೇಲೆ ಪ್ರಭಾವ ಬೀರಿದವು. ಅವರು ತಮ್ಮ ಧರ್ಮ, ಸಾಮಾಜಿಕ ವ್ಯವಸ್ಥೆ ಹಾಗೂ ಸಂಪ್ರದಾಯಗಳನ್ನು ಮರುಪರೀಕ್ಷಿಸಿದರು. ಇದನ್ನು ಭಾರತದ ಪುನರುಜ್ಜೀವನ ಎಂದು ಕರೆಯಲಾಗಿದೆ. ಬ್ರಹ್ಮ ಸಮಾಜ, ಆರ್ಯಸಮಾಜ, ರಾಮಕೃಷ್ಣ ಮಿಷನ್, ಅಲಿಘರ ಚಳುವಳಿಗಳು ಮುಂತಾದವು ಈ ಜಾಗೃತಿಯ ಪರಿಣಾಮಗಳಾಗಿದ್ದವು.

ರಾಜಾ ರಾಮ್‌ಮೋಹನ್ ರಾಯ್:


ರಾಜಾ ರಾಮ್‌ಮೋಹನ್ ರಾಯ್:

ರಾಜಾ ರಾಮಮೋಹನ್ ರಾಯರನ್ನು 'ಭಾರತೀಯ ಪುನರುಜ್ಜೀವನದ ಪಿತಾಮಹ' ಮತ್ತು 'ಭಾರತೀಯ ಪುನರುಜ್ಜೀವನದ ಧ್ರುವತಾರೆ' ಎಂದು ಕರೆಯಲಾಗಿದೆ. ರಾಜಾ ರಾಮ್‌ಮೋಹನ್ ರಾಯರು ಬಂಗಾಳದ, ರಾಧಾನಗರದಲ್ಲಿ 1772 ರಲ್ಲಿ ಜನಿಸಿದರು. ರಮಾಕಾಂತ ರಾಯ್ ಮತ್ತು ತಾರಿಣಿದೇವಿ ಇವರ ತಂದೆ ತಾಯಿಗಳಾಗಿದ್ದರು. ರಾಮ್ ಮೋಹನ್ ರಾಯರು, ಮಹಾನ್ ಪಂಡಿತರು ಹಾಗೂ ಅರೇಬಿಕ್, ಪರ್ಷಿಯನ್, ಇಂಗ್ಲೀಷ್, ಫ್ರೆಂಚ್, ಲ್ಯಾಟಿನ್, ಗ್ರೀಕ್ ಮತ್ತು ಹಿಬ್ರೂ ನಂತಹ ಭಾಷೆಗಳಲ್ಲಿ ಅಪಾರ ಜ್ಞಾನಿಗಳಾಗಿದ್ದರು. ಇವರು ಹಿಂದೂ, ಇಸ್ಲಾಂ, ಕ್ರೈಸ್ತ ಮತ್ತು ಸೂಫಿ ಪಂಥಗಳ ಬಗ್ಗೆ ಆಳವಾದ ಜ್ಞಾನ ಹೊಂದಿದ್ದರು. ಇವರು ಇಂಗ್ಲೀಷ್ ಭಾಷೆ ಹಾಗೂ ಪಾಶ್ಚಾತ್ಯ ವೈಚಾರಿಕತೆಯಿಂದ ಹೆಚ್ಚು ಪ್ರಭಾವಿತರಾಗಿದ್ದರು. ಸಮಾಜ ಹಾಗೂ ಧರ್ಮದ ಸುಧಾರಣೆ ಇವರ ಪ್ರಾಥಮಿಕ ಉದ್ದೇಶವಾಗಿತ್ತು. ಸಂಪ್ರದಾಯಸ್ಥ ಹಿಂದೂಗಳ ಮತ್ತು ಧರ್ಮಾಂಧ ಕ್ರೈಸ್ತ ಮಿಷನರಿಗಳ ಸವಾಲುಗಳನ್ನು ಇವರು ಎದುರಿಸಬೇಕಾಯಿತು.


1828 ರಲ್ಲಿ ರಾಜಾ ರಾಮ್‌ಮೋಹನ್ ರಾಯರು ಬ್ರಹ್ಮ ಸಮಾಜವನ್ನು ಕಲ್ಕತ್ತದಲ್ಲಿ ಸ್ಥಾಪಿಸಿದರು. ಹಿಂದೂ ಧರ್ಮದಲ್ಲಿ ಅಂಧಶ್ರದ್ಧೆಗಳು ಮತ್ತು ಮೂಢ ನಂಬಿಕೆಗಳಿದ್ದವು. ಬ್ರಹ್ಮ ಸಮಾಜವು ಹಿಂದೂ ಸಮಾಜದ ಸುಧಾರಣೆಯ ಉದ್ದೇಶವನ್ನು ಕೈಗೆತ್ತಿಕೊಂಡಿತು. ಇದು 'ದೇವರು ಒಬ್ಬನೇ, ಪ್ರತಿ ಧರ್ಮದಲ್ಲಿ ಸತ್ಯವಿದೆ, ಮೂರ್ತಿಪೂಜೆ ಮತ್ತು ಆಚರಣೆಗಳೆಲ್ಲ ಅರ್ಥಹೀನ ಮತ್ತು ಸಾಮಾಜಿಕ ಅನಿಷ್ಟಗಳು ಧರ್ಮದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ' ಎಂದು ಬ್ರಹ್ಮ-ಸಮಾಜ ಬೋಧಿಸಿತು.

ಬ್ರಹ್ಮ-ಸಮಾಜವು ಸತಿಪದ್ಧತಿ, ಬಾಲ್ಯ ವಿವಾಹ, ಅಪ್ರಾಪ್ತ ಬಾಲಕಿಯರೊಂದಿಗೆ ಮದುವೆ, ಜಾತಿ ಪದ್ಧತಿ, ಪರ್ದಾ ಪದ್ಧತಿ, ಅಸ್ಪೃಶ್ಯತೆ ಮತ್ತು ಮಾದಕ ವಸ್ತುಗಳ ಸೇವನೆ ವಿರುದ್ಧ ಧರ್ಮಯುದ್ಧವನ್ನೆ ನಡೆಸಿತು. ಇದು ಅಂತರ್ಜಾತಿ ವಿವಾಹಗಳು, ವಿಧವಾ ಮರುವಿವಾಹ ಮತ್ತು ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿತು.

ಬ್ರಹ್ಮ–ಸಮಾಜ ಅನೇಕ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿತು. ಸುದ್ಧಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಪ್ರಕಾಶಿಸಿತು ಹಾಗೂ ತನ್ನ ಸದಸ್ಯರು ಜನರ ನೇರ ಸಂಪರ್ಕಕ್ಕೆ ಬರಬೇಕೆಂದು ಉಪನ್ಯಾಸಗಳನ್ನು ಮತ್ತು ಪ್ರವಾಸಗಳನ್ನು ಏರ್ಪಡಿಸಿತು.

ಮೋಹನ್ ರಾಯರು ಆಧುನಿಕ ಶಿಕ್ಷಣವನ್ನು ಪ್ರಚುರಪಡಿಸಿದವರಲ್ಲಿ ಮೊದಲಿಗರು. ತನ್ನ ಸ್ವಂತ ಖರ್ಚಿನಲ್ಲಿ ಕಲ್ಕತ್ತಾದಲ್ಲಿ ಆಂಗ್ಲ ಮಾಧ್ಯಮ ಶಾಲೆಯೊಂದನ್ನು ನಡೆಸುತ್ತಿದ್ದರು. ಇವರು ಭಾರತೀಯ ಜ್ಞಾನ ಮತ್ತು ಪಾಶ್ಚಾತ್ಯ ವಿಜ್ಞಾನಗಳನ್ನು ಬೋಧಿಸುವ ವೇದಾಂತ ಕಾಲೇಜೊಂದನ್ನು ಸ್ಥಾಪಿಸಿದರು. ಇವರು ಲಾರ್ಡ್ ವಿಲಿಯಂ ಬೆಂಟಿಂಕನನ್ನು ಬೆಂಬಲಿಸಿ 1829ರಲ್ಲಿ ಸತಿ ನಿಷೇಧ ಶಾಸನವನ್ನು ಜಾರಿಗೊಳಿಸುವಂತೆ ಮಾಡಿದರು. ಇವರು ಸಂವಾದ್ ಕೌಮುದಿ ಎಂಬ ಬಂಗಾಳಿ ಪತ್ರಿಕೆಯನ್ನು ಪ್ರಕಟಪಡಿಸಿದರು.

ಸ್ವಾಮಿ ದಯಾನಂದ ಸರಸ್ವತಿ:


ಸ್ವಾಮಿ ದಯಾನಂದ ಸರಸ್ವತಿ

1875 ರಲ್ಲಿ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು ಬಾಂಬೆಯಲ್ಲಿ ಸ್ಥಾಪಿಸಿದರು. ಇವರು ಗುಜರಾತಿನ ತಂಕರಾ ಎಂಬಲ್ಲಿ 1824 ರಲ್ಲಿ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ಕೃಷ್ಣಾಜಿ ತಿವಾರಿ ಮತ್ತು ಯಶೋಧಬಾಯಿ ಇವರ ತಂದೆ ತಾಯಿಗಳು. ಇವರ ಮೊದಲ ಹೆಸರು ಮೂಲಾಶಂಕರ. 21ನೆಯ ವಯಸ್ಸಿಗೆ ಇವರ ಮದುವೆ ನಿಶ್ಚಯವಾಗಿತ್ತು. ಇದನ್ನು ವಿರೋಧಿಸಿದ ಈತ ಮನೆಯನ್ನು ತೊರೆದು ಸನ್ಯಾಸಿಯಾದ. ವೇದಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದು ವೈದಿಕ ಹಿಂದೂ ಧರ್ಮದ ಪ್ರಚಾರವನ್ನು ಕೈಗೆತ್ತಿಕೊಂಡರು. ಹಿಂದೂ ಧರ್ಮದ ಆಚರಣೆಗಳಾದ, ಮೂರ್ತಿ ಪೂಜೆ, ತೀರ್ಥಯಾತ್ರೆಗಳು, ಜಾತಿ ಪದ್ಧತಿ, ಸತಿ ಪದ್ಧತಿ, ಬಾಲ್ಯವಿವಾಹ ಮತ್ತು ಬಹುಪತ್ನಿತ್ವಗಳನ್ನು ಟೀಕಿಸಿದರು. ಇವರು ಸ್ತ್ರೀ ಶಿಕ್ಷಣ, ವಿಧವಾ ಮರುವಿವಾಹ ಹಾಗೂ ಹಿಂದಿ ಮತ್ತು ಸಂಸ್ಕೃತ ಭಾಷೆಗಳನ್ನು ಪ್ರಚಾರ ಮಾಡುವುದರ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅವರು ಜಾತಿ ಪದ್ಧತಿಯ ನಿರ್ಮೂಲನೆಗೆ ಪ್ರಯತ್ನಿಸಿದರು. ಅಂತರ್‌ಜಾತಿ ವಿವಾಹಗಳನ್ನು ಮತ್ತು ಸಹಭೋಜನಗಳನ್ನು ಪ್ರೋತ್ಸಾಹಿಸಿದರು.

ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದವರನ್ನು ಹಿಂದು ಧರ್ಮದ ತೆಕ್ಕೆಗೆ ಹಿಂದಕ್ಕೆ ಕರೆಸಿಕೊಳ್ಳಲು ಇವರು 'ಶುದ್ಧಿ ಚಳುವಳಿ' ಯನ್ನು ಆರಂಭಿಸಿದರು. ಇಂತಹ ಜನರನ್ನು ಹಿಂದೂ ಧರ್ಮಕ್ಕೆ ಮರಳಿ ಸೇರಿಸಿಕೊಳ್ಳಲಾಯಿತು. ದಯಾನಂದ ಸರಸ್ವತಿಯವರು ಬಾಲಕರು ಮತ್ತು ಬಾಲಕಿಯರಿಗಾಗಿ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಿದರು. ಆರ್ಯ ಸಮಾಜದ ತತ್ವಗಳು ಲಾಲಾ ಲಜಪತರಾಯ್, ಮಹಾತ್ಮ ಹಂಸರಾಜ್, ಗುರುದತ್ ವಿದ್ಯಾರ್ಥಿ ಮತ್ತು ಸ್ವಾಮಿ ಶ್ರದ್ಧಾನಂದರಂತಹ ಮಹಾನ್ ನಾಯಕರನ್ನು ಆಕರ್ಷಿಸಿದವು. ದಯಾನಂದ ಸರಸ್ವತಿ 'ಸತ್ಯಾರ್ಥ ಪ್ರಕಾಶ' ಎಂಬ ಕೃತಿಯನ್ನು ಬರೆದರು, **"ವೇದಗಳಿಗೆ ಹಿಂತಿರುಗಿ"** ಎಂಬುದು ಇವರು ಜನರಿಗೆ ಕೊಟ್ಟ ಪ್ರಸಿದ್ಧ ಕರೆಯಾಗಿತ್ತು.

ಸ್ವಾಮಿ ವಿವೇಕಾನಂದ:

ಸ್ವಾಮಿ ವಿವೇಕಾನಂದರು 1863 ರ ಜನವರಿ 12, ರಂದು ಕಲ್ಕತ್ತಾದಲ್ಲಿ ಜನಿಸಿದರು. ವಿಶ್ವನಾಥದತ್ತ ಮತ್ತು ಭುವನೇಶ್ವರಿದೇವಿ ಇವರ ತಂದೆ – ತಾಯಿಗಳಾಗಿದ್ದರು. ಇವರ ಮೂಲ ಹೆಸರು ನರೇಂದ್ರನಾಥದತ್ತ. ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಇವರು ಪದವಿ ಪಡೆದರು. ರಾಮಕೃಷ್ಣ ಪರಮಹಂಸರ ಶಿಷ್ಯರಾದರು. ತಮ್ಮ

ಗುರುಗಳ ನಿಧನಾನಂತರ ಅವರ ಸಂದೇಶಗಳನ್ನು ಪ್ರಚಾರ ಮಾಡುವ ಕಾರ್ಯವನ್ನು ಕೈಗೆತ್ತಿಕೊಂಡರು.


ಸ್ವಾಮಿ ವಿವೇಕಾನಂದ:

1893 ರಲ್ಲಿ ಅಮೆರಿಕಾದ ಚಿಕಾಗೋದಲ್ಲಿ ಜರುಗಿದ ವಿಶ್ವಧರ್ಮಗಳ ಸಮ್ಮೇಳನದಲ್ಲಿ ಹಿಂದೂ ಧರ್ಮದ ಪ್ರತಿನಿಧಿಯಾಗಿ ಇವರು ಪಾಲ್ಗೊಂಡಿದ್ದರು. ಅವರ ಚಿಕಾಗೋ ಭಾಷಣವು "ಸಹೋದರ–ಸಹೋದರಿಯರೇ....." ಎಂದು ಆರಂಭವಾಯಿತು. ಇದು ಸಭಿಕರ ಮನಸೂರೆಗೊಂಡಿತು. ಇವರು ತಮ್ಮ ಭಾಷಣಗಳು ಮತ್ತು ವಿಚಾರಗಳಿಂದ ಅಮೇರಿಕನ್ನರನ್ನು ಪ್ರಭಾವಗೊಳಿಸಿದರು. ಅವರು ಯೂರೋಪ್ ಖಂಡದ ಪ್ರಮುಖ ದೇಶಗಳ ಪ್ರವಾಸ ಕೈಗೊಂಡರು ಮತ್ತು ಹಿಂದೂ ಧರ್ಮದ ಸಂದೇಶಗಳನ್ನು ಪ್ರಚುರಪಡಿಸಿದರು. ಈ ಉದ್ದೇಶಕ್ಕಾಗಿ ವಿವೇಕಾನಂದರು ಅಮೇರಿಕಾ ಹಾಗೂ ಯೂರೋಪ್ ದೇಶಗಳಲ್ಲಿ 'ವೇದಾಂತ ಸಮಾಜವನ್ನು' ಸ್ಥಾಪಿಸಿದರು.

ಸ್ವಾಮಿ ವಿವೇಕಾನಂದರು 1897 ರಲ್ಲಿ ಬಂಗಾಳದ ಬೇಲೂರುಮಠ ಎಂಬಲ್ಲಿ ರಾಮಕೃಷ್ಣ ಮಿಷನ್‌ನ್ನು ಸ್ಥಾಪಿಸಿದರು. ರಾಮಕೃಷ್ಣ ಮಿಷನ್ ಜನರ ಸಾಮಾಜಿಕ ಮತ್ತು ಧಾರ್ಮಿಕ ಉನ್ನತಿಗಾಗಿ ಕೆಲಸ ಮಾಡುತ್ತಿದೆ. ಇದು ಶೈಕ್ಷಣಿಕ ಸಂಸ್ಥೆಗಳನ್ನು, ಆಸ್ಪತ್ರೆಗಳನ್ನು, ಅನಾಥಾಲಯಗಳನ್ನು ಮತ್ತು ವೃದ್ಧಾಶ್ರಮಗಳನ್ನು ನಡೆಸುತ್ತದೆ. ನೈಸರ್ಗಿಕ ವಿಕೋಪಗಳಾದ ಪ್ರವಾಹಗಳು, ಬರಗಾಲಗಳು, ಸಾಂಕ್ರಾಮಿಕ ರೋಗಗಳು, ಭೂಕಂಪ ಮುಂತಾದವುಗಳ ಸಂದರ್ಭದಲ್ಲಿಯೂ ಸಹ ಇದು ಜನರ ಸೇವೆ ಮಾಡುತ್ತದೆ. ಇದರ ಶಾಖೆಗಳು ಪ್ರಪಂಚದಾದ್ಯಂತ ಸ್ಥಾಪಿಸಲ್ಪಟ್ಟಿವೆ. ಅವು ಹಿಂದೂ ಧರ್ಮದ ಬಗ್ಗೆ ಆಧ್ಯಾತ್ಮಿಕ ತರಬೇತಿ ಮತ್ತು ಜಾಗೃತಿಯನ್ನು ಮೂಡಿಸುತ್ತವೆ.

ವಿವೇಕಾನಂದರು ಎಲ್ಲ ಧರ್ಮಗಳ ಏಕತೆಯಲ್ಲಿ ನಂಬಿಕೆ ಇಟ್ಟಿದ್ದರು. ಇವರು ಎಲ್ಲ ಪಂಥಗಳ ಜನರಿಗೆ ಸಹಿಷ್ಣುತೆ, ಸಮಾನತೆ ಮತ್ತು ಸಹಕಾರದ ಕುರಿತು ಬೋಧಿಸಿದರು. ಇವರು ಶಿಕ್ಷಣ, ಮಹಿಳೆಯರ ವಿಮೋಚನೆ ಮತ್ತು ಬಡತನದ ನಿರ್ಮೂಲನೆಗೆ ಮಹತ್ವ ಕೊಟ್ಟಿದ್ದರು. "ಏಳಿ! ಎದ್ದೇಳಿ! ಗುರಿ ತಲುಪುವವರೆಗೆ ನಿಲ್ಲದಿರಿ" ಎಂಬುದು ದೇಶದ ಯುವಕರಿಗೆ ಇವರ ಸಂದೇಶವಾಗಿತ್ತು. ಇವರ ಭಾಷಣ ಮತ್ತು ಬರವಣಿಗೆಗಳು ಸ್ವಾಭಿಮಾನ ಮತ್ತು ರಾಷ್ಟ್ರಾಭಿಮಾನದಿಂದ ತುಂಬಿವೆ. ಅವರು ರಾಷ್ಟ್ರೀಯತೆಯ ಬೆಳವಣಿಗೆಯ ಮೇಲೆ ಪ್ರಭಾವ ಬೀರಿದ್ದರಿಂದ, ವಿವೇಕಾನಂದರನ್ನು 'ಭಾರತದ ರಾಷ್ಟ್ರಪ್ರೇಮಿ ಸಂತ' ಎಂದು ಕರೆಯಲಾಗಿದೆ. ಇವರು 'ಪ್ರಬುದ್ಧ ಭಾರತ' ಎಂಬ ಆಂಗ್ಲ ಪತ್ರಿಕೆ ಮತ್ತು 'ಉದ್ಬೋದನಾ'ಎಂಬ ಬಂಗಾಳಿ ಸುದ್ದಿ ಪತ್ರಿಕೆಗಳನ್ನು ಪ್ರಕಟಿಸಿದರು.

ಥಿಯೋಸೊಫಿಕಲ್ ಸೊಸೈಟಿ

ಥಿಯೋಸೊಫಿಕಲ್ ಸೊಸೈಟಿಯನ್ನು ಮೆಡಮ್ ಬ್ಲಾವತ್‌ಸ್ಕಿ ಮತ್ತು ಕರ್ನಲ್ ಆಲ್ಕಾಟ್‌ರು ನ್ಯೂಯಾರ್ಕ್‌ನಲ್ಲಿ 1875 ರಲ್ಲಿ ಸ್ಥಾಪಿಸಿದರು. ಭಾರತೀಯ ಸಂಸ್ಕೃತಿಯಿಂದ ಹೆಚ್ಚು ಪ್ರಭಾವಿತಳಾದ ಐರಿಶ್ ದೇಶದ ಮಹಿಳೆ ಆ್ಯನಿ ಬೆಸೆಂಟ್ ಭಾರತಕ್ಕೆ ಬಂದು ಇಲ್ಲಿಯೇ ನೆಲೆಸಿದರು. ಹಿಂದೂ ಸಮಾಜದ ಪುನರುಜ್ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದರು. ಅವರು ಹಿಂದೂ ಸಂಸ್ಕೃತಿಯನ್ನು ಅನುಸರಿಸಿದರು. ಮದ್ರಾಸ್ ಸಮೀಪದ ಅಡ್ಯಾರ್‌ನಲ್ಲಿ 1882 ರಲ್ಲಿ ಥಿಯೋಸೊಫಿಕಲ್ ಸೊಸೈಟಿಯ ಶಾಖೆಯೊಂದನ್ನು ಸ್ಥಾಪಿಸಿದರು.

ಇವರು ಬನಾರಸದಲ್ಲಿ ಸೆಂಟ್ರಲ್ ಹಿಂದೂ ಶಾಲೆಯನ್ನು ಸ್ಥಾಪಿಸಿದರು ನಂತರ ಅದು ಬನಾರಸ್ ಹಿಂದೂ ವಿಶ್ವವಿದ್ಯಾಲಯವಾಗಿ ಅಭಿವೃದ್ಧಿಗೊಂಡಿತು. ಅಡ್ಯಾರನಲ್ಲಿ ರಾಷ್ಟ್ರೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು.

ಆ್ಯನಿಬೆಸೆಂಟ್‌ರ ನಾಯಕತ್ವದಲ್ಲಿ ಥಿಯೋಸೊಫಿಕಲ್ ಸೊಸೈಟಿಯ ಚಳುವಳಿಯು ಹಿಂದೂ ಧರ್ಮದ ಪುನರುಜ್ಜೀವನಕ್ಕೆ ಸಾಧನವಾಯಿತು. ಇವರು ಸ್ವಾತಂತ್ರ ಚಳುವಳಿಯಲ್ಲಿ ಪಾಲ್ಗೊಂಡರು ಮತ್ತು ಹೋಂ ರೂಲ್ ಚಳುವಳಿಯನ್ನು ಆರಂಭಿಸಿದರು.

ಅಲಿಘರ್ ಚಳುವಳಿ:

ಸರ್ ಸಯ್ಯದ್ ಅಹಮ್ಮದ ಖಾನರು ಅಲಿಘರ್ ಚಳುವಳಿಯನ್ನು ಪ್ರಾರಂಭಿಸಿದರು. ಇವರು 1817 ರಲ್ಲಿ ದೆಹಲಿಯಲ್ಲಿ ಜನಿಸಿದರು. ಪ್ರಜ್ಞಾವಂತ ಮುಸ್ಲಿಂರಾಗಿದ್ದ ಇವರು ಮುಸ್ಲಿಂರನ್ನು ಆಧುನೀಕರಿಸಲು ಪ್ರಯತ್ನಿಸಿದರು ಮತ್ತು ಇಂಗ್ಲೀಷ್ ಶಿಕ್ಷಣ ಪಡೆಯಲು ಪ್ರೋತ್ಸಾಹಿಸಿದರು. ಮುಸ್ಲಿಂರ ಸಮಾಜದಲ್ಲಿದ್ದ ಪರ್ದಾ ಪದ್ಧತಿ, ಬಹುಪತ್ನಿತ್ವ ಮತ್ತು ಸರಳ ವಿಚ್ಛೇದನದಂತಹ ದೋಷಗಳನ್ನು ವಿರೋಧಿಸಿದರು. ಇವರು ಕುರಾನ್‌ನ ತತ್ವಗಳಿಗೆ ಹೊಸ ಅರ್ಥವಿವರಣೆ ನೀಡಿದರು. ಇವರು ಅಲಿಘರದಲ್ಲಿ ಮೊಹಮ್ಮಡನ್ ಆಂಗ್ಲೋ – ಓರಿಯಂಟಲ್ ಶಾಲೆಯನ್ನು ಆರಂಭಿಸಿದರು. ಇದು ನಂತರದಲ್ಲಿ ಅಲಿಘರ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಬೆಳೆಯಿತು. ಇವರು ಇಂಗ್ಲಿಷ್ ಶಿಕ್ಷಣದ ಪ್ರಸಾರ ಮಾಡಲು ಮೊಹಮ್ಮಡನ್ ಶೈಕ್ಷಣಿಕ ಸಮ್ಮೇಳನವನ್ನು ಕೂಡ ಸಂಘಟಿಸಿದರು. ಅಲಿಘರ ಚಳುವಳಿಯು ಮುಸ್ಲಿಂರಲ್ಲಿ ಇಂಗ್ಲೀಷ್ ಶಿಕ್ಷಣದ ಪ್ರಸಾರವನ್ನು ಮತ್ತು ಪ್ರಗತಿಪರ ಸಾಮಾಜಿಕ–ಧಾರ್ಮಿಕ ದೃಷ್ಟಿಕೋನವನ್ನು ತರುವ ಉದ್ದೇಶಹೊಂದಿತ್ತು. ಇದು ಮುಸ್ಲಿಂರಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಪ್ರಜ್ಞೆಯನ್ನು ಮೂಡಿಸುವ ಗುರಿಯನ್ನು ಹೊಂದಿತ್ತು.

ಸುಧಾರಕರಾಗಿ ತಮ್ಮ ಜೀವನದ ಆರಂಭದಲ್ಲಿ ಖಾನರು ಧಾರ್ಮಿಕ ಸಹಿಷ್ಣುತೆಯಲ್ಲಿ ನಂಬುಗೆ ಹೊಂದಿದ್ದರು. "ಈಗ ನಾವಿಬ್ಬರೂ (ಹಿಂದೂ–ಮುಸ್ಲೀಮರು) ಭಾರತದ ಗಾಳಿಯನ್ನು ಸೇವಿಸುತ್ತಿದ್ದು, ಗಂಗಾ–ಯಮುನಾ ನದಿಗಳ ನೀರನ್ನು ಕುಡಿದು, ನಾವೀರ್ವರೂ ಭಾರತದ ಮಣ್ಣಿನಲ್ಲಿ ಬೆಳೆದ ಆಹಾರದಿಂದ ಪೋಷಿಸಲ್ಪಟ್ಟಿದ್ದೇವೆ. ಬದುಕು ಮತ್ತು ಸಾವಿನಲ್ಲಿ ನಾವು ಜೊತೆಯಾಗಿದ್ದೇವೆ". ಎಂದು 1883 ರಲ್ಲಿ ಹೇಳಿದರು. 1888 ರ ಹೊತ್ತಿಗೆ ತಮ್ಮ ಅಭಿಪ್ರಾಯಗಳನ್ನು ಬದಲಿಸಿದರು. ಇವರು ಮುಸ್ಲಿಮರ ಧ್ಯೇಯೋದ್ದೇಶಗಳ ರೂವಾರಿಯಾಗಿದ್ದರು ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ವಿಚಾರಗಳನ್ನು ತಿರಸ್ಕರಿಸಿದರು. ಕ್ರಮೇಣ ಇವರು ಮೂಲಭೂತವಾದವನ್ನು ಪ್ರತಿಪಾದಿಸಲಾರಂಭಿಸಿದರು ಮತ್ತು ಪ್ರಜಾಪ್ರಭುತ್ವವು ಮುಸ್ಲಿಮರಿಗೆ ಬಾಧಕ ವಾದುದೆಂದು ಸಹ ಪ್ರತಿಪಾದಿಸಿದರು.

ಚಟುವಟಿಕೆ

ಸಮಾಜೋ–ಧಾರ್ಮಿಕ ಸುಧಾರಕರ ಜೀವನ ಚಿತ್ರಣಗಳನ್ನು ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ

1. ಬ್ರಹ್ಮಸಮಾಜದ ಸ್ಥಾಪಕರು ಯಾರು?
2. ರಾಜಾ ರಾಮಮೋಹನ್‌ರಾಯರು ಎಲ್ಲಿ ಜನಿಸಿದರು?
3. 'ಭಾರತೀಯ ಪುನರುಜ್ಜೀವನ ಪಿತಾಮಹ' ಎಂದು ಯಾರನ್ನು ಕರೆಯಲಾಗಿದೆ.?
4. ಆರ್ಯಸಮಾಜದ ಸ್ಥಾಪಕರು ಯಾರು?
5. ಆರ್ಯಸಮಾಜ ಸ್ಥಾಪನೆಯಾದದ್ದು ಯಾವಾಗ?

6. 'ಶುದ್ಧಿಚಳುವಳಿ' ಎಂದರೇನು?
7. 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಿದವರು ಯಾರು?
8. ದಯಾನಂದ ಸರಸ್ವತಿಯವರು ರಚಿಸಿದ ಕೃತಿಯನ್ನು ಹೆಸರಿಸಿ.
9. ರಾಮಕೃಷ್ಣ ಮಿಷನ್ ಸ್ಥಾಪನೆ ಮಾಡಿದ್ದು ಯಾರು?
10. ವಿವೇಕಾನಂದರ ಮೂಲ ಹೆಸರೇನಾಗಿತ್ತು?
11. ಚಿಕಾಗೋ ವಿಶ್ವ ಧರ್ಮ ಸಮ್ಮೇಳನ ಜರುಗಿದ್ದು ಯಾವಾಗ?
12. ವೇದಾಂತ ಸಮಾಜವನ್ನು ಸ್ಥಾಪಿಸಿದವರು ಯಾರು?
13. ಭಾರತದಲ್ಲಿ ಥಿಯೋಸೋಫಿಕಲ್ ಸೊಸೈಟಿಯನ್ನು ಸ್ಥಾಪಿಸಿದವರು ಯಾರು?
14. ಅಲಿಘರ್ ಚಳುವಳಿಯನ್ನು ಪ್ರಾರಂಭಿಸಿದವರು ಯಾರು?

II. ಈ ಕೆಳಗಿನವುಗಳಿಗೆ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ

1. ರಾಜಾ ರಾಮಮೋಹನ್‌ರಾಯರ ತಂದೆ–ತಾಯಿಗಳನ್ನು ಹೆಸರಿಸಿ.
2. ಬ್ರಹ್ಮಸಮಾಜ ಸ್ಥಾಪನೆಗೊಂಡಿದ್ದು ಎಲ್ಲಿ ಮತ್ತು ಯಾವಾಗ?
3. ದಯಾನಂದ ಸರಸ್ವತಿ ಹುಟ್ಟಿದ್ದು ಎಲ್ಲಿ ಮತ್ತು ಯಾವ ವರ್ಷದಲ್ಲಿ?
4. ದಯಾನಂದ ಸರಸ್ವತಿಯವರ ತಂದೆ–ತಾಯಿಗಳನ್ನು ಹೆಸರಿಸಿ.
5. ಆರ್ಯ ಸಮಾಜವು ಸ್ಥಾಪನೆಯಾದದ್ದು ಎಲ್ಲಿ ಮತ್ತು ಯಾವಾಗ?
6. ಸ್ವಾಮಿ ವಿವೇಕಾನಂದರು ಯಾವಾಗ ಮತ್ತು ಎಲ್ಲಿ ಜನಿಸಿದರು?
7. ರಾಮಕೃಷ್ಣಮಿಷನ್ ಸ್ಥಾಪನೆಗೊಂಡ ವರ್ಷ ಯಾವುದು ಮತ್ತು ಎಲ್ಲಿ?
8. ಸ್ವಾಮಿ ವಿವೇಕಾನಂದರು ಪ್ರಕಟಿಸುತ್ತಿದ್ದ ಪತ್ರಿಕೆಗಳನ್ನು ಹೆಸರಿಸಿ.
9. ಥಿಯೋಸೋಫಿಕಲ್ ಸೊಸೈಟಿಯನ್ನು ಸ್ಥಾಪಿಸಿದವರು ಯಾರು?

III. ಈ ಕೆಳಗಿನವುಗಳಿಗೆ 15ರಿಂದ 20 ಸಾಲುಗಳಲ್ಲಿ ಉತ್ತರಿಸಿ

1. ಸಾಮಾಜಿಕ–ಧಾರ್ಮಿಕ ಸುಧಾರಣಾ ಚಳುವಳಿಯಲ್ಲಿ ರಾಜಾ ರಾಮಮೋಹನ್‌ರಾಯರು ವಹಿಸಿದ ಪಾತ್ರವನ್ನು ವಿವರಿಸಿ.
2. ಸಾಮಾಜಿಕ–ಧಾರ್ಮಿಕ ಚಳುವಳಿಯಲ್ಲಿ ದಯಾನಂದ ಸರಸ್ವತಿಯವರ ಪಾತ್ರವನ್ನು ಕುರಿತು ಬರೆಯಿರಿ.
3. ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವನ್ನು ಚರ್ಚಿಸಿ.

❋ ❋ ❋ ❋

ಅಧ್ಯಾಯ – 7.5

ಮೈಸೂರು– ಒಂದು ಮಾದರಿ ರಾಜ್ಯ

1799 ರಲ್ಲಿ ಒಡೆಯರಿಗೆ ಹಿಂತಿರುಗಿಸಿದ್ದ ಮೈಸೂರಿನ ಆಳ್ವಿಕೆಯನ್ನು 1831ರ ನಗರ ದಂಗೆಯ ನಂತರ ಬ್ರಿಟಿಷರು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿದರು. ಇದನ್ನೊಂದು ಸ್ವತಂತ್ರ ಆಡಳಿತಾತ್ಮಕ ಘಟಕವಾಗಿ ಇರಿಸಿ, ಆಡಳಿತವನ್ನು ನೋಡಿಕೊಳ್ಳಲು ಕಮಿಷನರುಗಳನ್ನು ನೇಮಿಸಲಾಗಿತ್ತು. 1831 ರಿಂದ 1881 ರ ವರೆಗಿನ ಕಮಿಷನರರ ನೇರ ಆಳ್ವಿಕೆಯು ಮೈಸೂರು ಒಂದು ಮಾದರಿ ರಾಜ್ಯವಾಗಲು ಅಡಿಪಾಯವನ್ನು ಹಾಕಿತು. ಈ ಅವಧಿಯಲ್ಲಿ ಏಳು ಜನ ಕಮಿಷನರುಗಳು ಆಳಿದರು. ಅವರಲ್ಲಿ ಪ್ರಮುಖರಾದವರೆಂದರೆ ಮಾರ್ಕ್ ಕಬ್ಬನ್ ಮತ್ತು ಲೆವಿಸ್ ಬೆಂಥಾಮ್ ಬೌರಿಂಗ್.

ಮಾರ್ಕ್ ಕಬ್ಬನ್ – 1834–1861:

ಮಾರ್ಕ್ ಕಬ್ಬನ್‌ನು ರಾಜ್ಯದಲ್ಲಿ ಅನೇಕ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದನು. ಇವನು ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದನು. ಮೈಸೂರನ್ನು ಅನೇಕ ಆಡಳಿತ ಘಟಕಗಳಾಗಿ ವಿಭಾಗಿಸಿ, ಅವುಗಳನ್ನು ಸೂಪರಿಂಟೆಂಡೆಂಟ್‌ರ ಮೇಲ್ವಿಚಾರಣೆಯಲ್ಲಿಸರಲಾಯಿತು. ಆಡಳಿತ ಘಟಕಗಳನ್ನು ಜಿಲ್ಲೆಗಳು ಮತ್ತು ತಾಲೂಕಗಳಾನ್ನಾಗಿ ವಿಭಜಿಸಲಾಗಿತ್ತು. ನ್ಯಾಯಾಂಗ ಮತ್ತು ಆರಕ್ಷಕ (ಪೋಲಿಸ್) ಇಲಾಖೆಗಳನ್ನು ಉತ್ತಮವಾಗಿ ಸಂಘಟಿಸಲಾಯಿತು. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೊಳಿಸಲಾಯಿತು.

ಹೊಸ ರಸ್ತೆಗಳು ನಿರ್ಮಾಣಗೊಂಡವು. ಅದರ ಪರಿಣಾಮದಿಂದ ರಾಜ್ಯದ ಎಲ್ಲಾ ಪ್ರಮುಖ ಪಟ್ಟಣಗಳು ಬೆಂಗಳೂರಿನೊಂದಿಗೆ ನೇರ ಸಂಪರ್ಕಹೊಂದಿದವು. ಸೇತುವೆಗಳು ನಿರ್ಮಾಣವಾದವು ಮತ್ತು ಟೆಲಿಗ್ರಾಫ್ ತಂತಿಗಳನ್ನೂ ಹಾಕಲಾಯಿತು, 1859ರಲ್ಲಿ ಬೆಂಗಳೂರು ಹಾಗೂ ಜೋಲಾರಪೇಟ್ ಮಧ್ಯೆ ರೈಲು ಮಾರ್ಗವನ್ನು ಹಾಕಲಾಯಿತು. ಇದು ಮೈಸೂರು ರಾಜ್ಯದ ಪ್ರಥಮ ರೈಲು ಮಾರ್ಗವಾಗಿತ್ತು. ತೆರಿಗೆ ಸಂಗ್ರಹವನ್ನು ಶಿಸ್ತುಬದ್ಧಗೊಳಿಸಿದ್ದರಿಂದ ರಾಜ್ಯದ ಆದಾಯದ ಹೆಚ್ಚಳಕ್ಕೆ ಸಹಾಯವಾಯಿತು. ಕಾಫಿ ತೋಟಗಳನ್ನೂ ಅಭಿವೃದ್ಧಿ ಪಡಿಸಲಾಯಿತು. ಇವನು 1861 ರಲ್ಲಿ ಕಮಿಷನರ್ ಹುದ್ದೆಗೆ ರಾಜೀನಾಮೆ ನೀಡಿದನು.

ಲೆವಿಸ್ ಬೆಂಥಾಮ್ ಬೌರಿಂಗ್ –1862–1870:

ಲೆವಿಸ್ ಬೆಂಥಾಮ್ ಬೌರಿಂಗ್ 1862 ರಲ್ಲಿ ಮುಖ್ಯ ಕಮಿಷನರ್‌ನಾಗಿ ಅಧಿಕಾರ ಸ್ವೀಕರಿಸಿದನು. ಇವನು ಮೈಸೂರು ರಾಜ್ಯದ ಸಮಗ್ರ ಆಡಳಿತವನ್ನು ಪುನರ್‌ಸಂಘಟಿಸಿದನು. ನಂದಿದುರ್ಗ, ನಗರ ಮತ್ತು ಅಷ್ಟಗ್ರಾಮಗಳು ಆಡಳಿತದ ಘಟಕಗಳಾಗಿದ್ದವು. ಈ ಘಟಕಗಳ ಮೇಲ್ವಿಚಾರಣೆಯನ್ನು ಕಮಿಷನರರು ನೋಡಿಕೊಳ್ಳುತ್ತಿದ್ದರು. ಭೂ–ಕಂದಾಯವನ್ನು ಸುಧಾರಿಸಲಾಯಿತು. ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗಳನ್ನು ವ್ಯವಸ್ಥಿತವಾಗಿ ಸಂಘಟಿಸಲಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ಶಿಕ್ಷಣದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ನಿರ್ದೇಶಕರು ಇದರ ಮುಖ್ಯಸ್ಥರಾಗಿದ್ದರು. 1870 ರಲ್ಲಿ ಬೌರಿಂಗನು ರಾಜೀನಾಮೆ ನೀಡಿದನು.

ಕಮಿಷನರ್‌ಗಳು ಮೈಸೂರು ರಾಜ್ಯದ ಅಭಿವೃದ್ಧಿಗೆ ಬುನಾದಿಯನ್ನು ಹಾಕಿದರು. 1881 ರಲ್ಲಿ ರಾಜ್ಯವನ್ನು ಹತ್ತನೆಯ ಚಾಮರಾಜ ಒಡೆಯರಿಗೆ ಪುನಃ ವಹಿಸಿಕೊಡಲಾಯಿತು (ಪುನರ್‌ದಾನ). ಅವರು 1894 ರ

ವರೆಗೆ ಆಳ್ವಿಕೆ ಮಾಡಿದರು. ನಾಲ್ವಡಿ ಕೃಷ್ಣರಾಜ್ ಒಡೆಯರು ಇವರ ಉತ್ತರಾಧಿಕಾರಿಯಾದರು. ಈ ಇಬ್ಬರು ಅರಸರ ಆಳ್ವಿಕೆಯಲ್ಲಿ ಮೈಸೂರು ಮಹಾನ್ ದಿವಾನರ ಸೇವೆಯನ್ನು ಪಡೆದುಕೊಂಡಿತು. ಅವರಲ್ಲಿ ಪ್ರಮುಖರೆಂದರೆ ಸರ್. ಎಂ.ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾಇಸ್ಮಾಯಿಲ್. ಮೈಸೂರು 'ಮಾದರಿ ರಾಜ್ಯ'ವೆಂಬ ಬಿರುದು ಗಳಿಸಲು ಇವರು ಕಾರಣೀಭೂತರಾದರು.

ಕಮಿಷನರರು

ಕರ್ನಲ್ ಜೇ. ಬ್ರಿಗ್ಸ್	–	1831–33
ಕರ್ನಲ್ ಡಬ್ಲ್ಯೂ.ಮ್ಯಾರಿಸನ್	–	1833–34
ಮಾರ್ಕ್ ಕಬ್ಬನ್	–	1834–61
ಲೂಯಿ ಬೆಂಥಾಮ್ ಬೌರಿಂಗ್	–	1862–70
ಸರ್ ರಿಚರ್ಡ್ ಮೀಡ್	–	1870–75
ಸಿ.ಬಿ. ಸಾಂಡರ್ಸ್	–	1875–78
ಜೇಮ್ಸ್ ಗೋರ್ಡನ್	–	1878–81

ದಿವಾನರು

ಸಿ.ರಂಗಾಚಾರ್ಲು	–	1881–1883
ಕೆ.ಶೇಷಾದ್ರಿ ಐಯ್ಯರ್	–	1883–1901
ಪಿ.ಎನ್.ಕೃಷ್ಣಮೂರ್ತಿ	–	1901–1906
ವಿ.ಪಿ.ಮಾಧವರಾವ್	–	1906–1909
ಟಿ.ಆನಂದರಾವ್	–	1909–1912
ಸರ್.ಎಂ.ವಿಶ್ವೇಶ್ವರಯ್ಯ	–	1912–1918
ಕಾಂತರಾಜೇ ಅರಸ್	–	1918–1922
ಆಲ್ಬಿಯನ್ ಬ್ಯಾನರ್ಜಿ	–	1922–1926
ಸರ್.ಮಿರ್ಜಾ ಇಸ್ಮಾಯಿಲ್	–	1926–1941
ಎನ್.ಮಾಧವರಾವ್	–	1941–1946
ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್	–	1946–1949

ಸರ್. ಎಂ. ವಿಶ್ವೇಶ್ವರಯ್ಯ :

'ಆಧುನಿಕ ಮೈಸೂರಿನ ಶಿಲ್ಪಿ ಮತ್ತು ನಿರ್ಮಾತೃ' ಎಂದು ಪರಿಗಣಿಸಲ್ಪಟ್ಟ ಸರ್. ಎಂ.ವಿಶ್ವೇಶ್ವರಯ್ಯನವರು 1861 ರ ಸೆಪ್ಟಂಬರ್ 15 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನಿಸಿದರು. ಅವರ ತಂದೆ ತಾಯಿಗಳು ಶ್ರೀನಿವಾಸ ಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ. ಚಿಕ್ಕಬಳ್ಳಾಪುರದಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಮುಂದಿನ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಹೋದರು. ನಂತರ ಅವರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪಡೆದು, ಇಂಜನಿಯರಿಂಗ್ ಅಧ್ಯಯನಕ್ಕಾಗಿ ಪುಣೆಗೆ ತೆರಳಿದರು. 1884 ರಿಂದ 1909ರ ವರೆಗೆ ಬಾಂಬೇ ಸರ್ಕಾರದಲ್ಲಿ ಸೇವೆ ಸಲ್ಲಿಸಿದರು. 1909 ರಲ್ಲಿ ಮೈಸೂರಿನ ಮುಖ್ಯ ಇಂಜಿನೀಯರ್ ಆಗಿ ನೇಮಕಗೊಂಡರು. 1912 ರಲ್ಲಿ ನಾಲ್ವಡಿ ಕೃಷ್ಣರಾಜ್ ಒಡೆಯರು ಇವರನ್ನು ಮೈಸೂರಿನ ದಿವಾನರನ್ನಾಗಿ ನೇಮಿಸಿಕೊಂಡರು. ಇವರ ದಿವಾನಗಿರಿಯಲ್ಲಿ ಮೈಸೂರು ಸರ್ವತೋಮುಖ ಅಭಿವೃದ್ಧಿಯನ್ನು ಕಂಡಿತು.



ನಾಲ್ವಡಿ ಕೃಷ್ಣರಾಜ ಒಡೆಯರ್ ಸರ್. ಎಂ. ವಿಶ್ವೇಶ್ವರಯ್ಯ

ಆಡಳಿತಾತ್ಮಕ ಸುಧಾರಣೆಗಳು

ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 18 ರಿಂದ 24 ಕ್ಕೆ ಹೆಚ್ಚಿಸಲಾಯಿತು. ಸ್ಥಳೀಯ ಸಂಸ್ಥೆಗಳ ಮತ್ತು ಗ್ರಾಮ ಪಂಚಾಯಿತಿ ಕಾಯ್ದೆಯು ಜಿಲ್ಲೆ ಮತ್ತು ತಾಲೂಕು ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿತು. ಹಳ್ಳಿಗಳ ಪ್ರಗತಿಗಾಗಿ ಗ್ರಾಮ ಸುಧಾರಣಾ ಸಮಿತಿಗಳನ್ನು ಸ್ಥಾಪಿಸಲಾಯಿತು. ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿಯೇ ಒಂದು ಪ್ರತ್ಯೇಕ ಯೋಜನೆಯನ್ನು ರಚಿಸಲಾಯಿತು.

ಕೈಗಾರಿಕಾ ಅಭಿವೃದ್ಧಿ

"ಕೈಗಾರಿಕೀಕರಣ ಇಲ್ಲವೆ ವಿನಾಶ" ಎಂಬುದು ಸರ್.ಎಂ.ವಿಶ್ವೇಶ್ವರಯ್ಯನವರ ಪ್ರಸಿದ್ಧ ಘೋಷಣೆಯಾಗಿತ್ತು. ಇವರ ಅವಧಿಯಲ್ಲಿ ಅನೇಕ ಕೈಗಾರಿಕೆಗಳನ್ನು ಆರಂಭಿಸಲಾಯಿತು ಅವುಗಳಲ್ಲಿ ಕೆಲವು ಇಂತಿವೆ, ಭದ್ರಾವತಿಯಲ್ಲಿನ ಕಬ್ಬಿಣದ ಕಾರ್ಖಾನೆ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ, ಕೇಂದ್ರ ಕೈಗಾರಿಕಾ ಕಾರ್ಯಾಗಾರ, ಚರ್ಮ ಹದ ಮಾಡುವ ಕಾರ್ಖಾನೆ ಹಾಗೂ ಲೋಹದ ಕಾರ್ಖಾನೆಗಳು. ವ್ಯಾಪಾರ ಹಾಗೂ ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಲು ಬೆಂಗಳೂರಿನಲ್ಲಿ ಮೈಸೂರು ಛೇಂಬರ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರಿಯನ್ನು ಸ್ಥಾಪಿಸಲಾಯಿತು. ಇವರ ಅವಧಿಯಲ್ಲಿ ಸಣ್ಣ ಕೈಗಾರಿಕೆಗಳು ಅಭಿವೃದ್ಧಿಗೊಂಡವು. ಗುಡಿ ಕೈಗಾರಿಕೆಗಳಾದ, ನೇಕಾರಿಕೆ, ಕುಂಬಾರಿಕೆ, ಹೆಂಚು, ಮರಗೆಲಸ, ಚಾಪೆ, ಚರ್ಮದ ವಸ್ತುಗಳು, ಬೀಡಿ ಮತ್ತು ಅಗರಬತ್ತಿ ಕೈಗಾರಿಕೆಗಳು ಪ್ರವರ್ಧಮಾನಕ್ಕೆ ಬಂದವು. ವ್ಯಾಪಾರ ಮತ್ತು ವಾಣಿಜ್ಯಗಳನ್ನು ಬೆಳೆಸುವುದಕ್ಕಾಗಿ 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಲಾಯಿತು.

ಶೈಕ್ಷಣಿಕ ಸುಧಾರಣೆಗಳು

ಪ್ರತಿಯೊಂದು ದೇಶದ ಪ್ರಗತಿಯು ಮುಖ್ಯವಾಗಿ ಜನರ ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ ಎಂದು ಸರ್.ಎಂ.ವಿಶ್ವೇಶ್ವರಯ್ಯನವರು ನಂಬಿದ್ದರು. ಇವರು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿದರು. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸಲು ವಿದ್ಯಾರ್ಥಿ ವೇತನಗಳನ್ನು ನೀಡಲಾರಂಭಿಸಿದರು. ಸ್ತ್ರೀಯರ ಶಿಕ್ಷಣವನ್ನೂ ಪ್ರೋತ್ಸಾಹಿಸಲಾಯಿತು. ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ನೀಡಲಾಯಿತು. ಬೆಂಗಳೂರಿನಲ್ಲಿ ಇಂಜನಿಯರಿಂಗ್ ಕಾಲೇಜು ಮತ್ತು ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಆರಂಭಿಸಿದರು. ಬೆಂಗಳೂರಿನ ಹೆಬ್ಬಾಳದಲ್ಲಿ ಕೃಷಿ ಶಾಲೆಯೊಂದನ್ನು ಸ್ಥಾಪಿಸಿದರು. 1916 ರಲ್ಲಿ ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾಲಯ ಈ ಕ್ಷೇತ್ರದಲ್ಲಿ ಇವರ ಅತ್ಯಂತ ಮಹತ್ತರ ಸಾಧನೆಯಾಗಿದೆ. 1915 ರಲ್ಲಿ ಕನ್ನಡ ಸಾಹಿತ್ಯಪರಿಷತ್ತನ್ನು ಸ್ಥಾಪಿಸಲಾಯಿತು.

ಅವರ ಇನ್ನಿತರ ಸಾಧನೆಗಳು.

ಕೃಷ್ಣರಾಜ ಸಾಗರ ಆಣೆಕಟ್ಟೆಯ ನಿರ್ಮಾಣ ವಿಶ್ವೇಶ್ವರಯ್ಯನವರ ಮಹಾನ್ ಸಾಧನೆಯಾಗಿದೆ. ಮಂಡ್ಯ ಜಿಲ್ಲೆ ತನ್ನ ಕೃಷಿ ಸಮೃದ್ಧಿಗೆ ಅವರಿಗೆ ಋಣಿಯಾಗಿದೆ. 1913ರಲ್ಲಿ ಮೈಸೂರು ಅರಸಿಕೆರೆ ಮತ್ತು ಬೌರಿಂಗ್‌ಪೇಟೆ–ಕೋಲಾರ ರೈಲ್ವೆ ಮಾರ್ಗಗಳನ್ನು ಹಾಕಲಾಯಿತು.

ಪರಿಹಾರ ಕಾರ್ಯಗಳು

ಸರ್.ಎಂ.ವಿಶ್ವೇಶ್ವರಯ್ಯನವರ ದಿವಾನಗಿರಿ ಅವಧಿಯಲ್ಲಿ ಪ್ರಥಮ ಜಾಗತಿಕ ಯುದ್ಧ (1914–18) ವು ಆರಂಭವಾಯಿತು. ಇದು ಆಹಾರ ವಸ್ತುಗಳ ತೀವ್ರ ಕೊರತೆಗೆ ಕಾರಣವಾಯಿತು. ಸರ್.ಎಂ.ವಿಶ್ವೇಶ್ವರಯ್ಯನವರು ನ್ಯಾಯಬೆಲೆ ಅಂಗಡಿಗಳನ್ನು ತೆರೆದು, ಆಹಾರ ಧಾನ್ಯಗಳ ರಫ್ತನ್ನು ನಿಲ್ಲಿಸಿ ಮತ್ತು ಮಾರಾಟದ ದರಗಳನ್ನು ನಿಗದಿ ಪಡಿಸುವಂತಹ ಪರಿಹಾರ ಕ್ರಮಗಳನ್ನು ಕೈಗೊಂಡರು.

ಸರ್. ಎಂ.ವಿಶ್ವೇಶ್ವರಯ್ಯನವರು 1918 ರಲ್ಲಿ ರಾಜಿನಾಮೆ ನೀಡಿದರು. ಬ್ರಿಟಿಷ್ ಸರಕಾರವು ಇವರ ದಕ್ಷತೆ ಮತ್ತು ಸಮರ್ಪಣಾ ಸೇವೆಗಾಗಿ 'ಸರ್' ಎಂಬ ಬಿರುದನ್ನು ನೀಡಿತು. ತಮ್ಮ ರಾಜೀನಾಮೆ ನಂತರವೂ ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸಿದರು. 1955 ರಲ್ಲಿ ಭಾರತ ಸರ್ಕಾರವು

ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಇವರು ಈ ಪ್ರಶಸ್ತಿಯನ್ನು ಪಡೆದ ಮೊದಲ ಕನ್ನಡಿಗರು. 101 ವರ್ಷಗಳು ಬದುಕಿದ ಇವರು 1962 ರಲ್ಲಿ ನಿಧನ ಹೊಂದಿದರು. ಇವರು ಹಲವು ಪುಸ್ತಕಗಳನ್ನು ರಚಿಸಿದರು, ಅವುಗಳೆಂದರೆ 'ಎ ವ್ಹಿಜನ್ ಆಫ್ ಪ್ರಾಸ್ಪರಸ್ ಮೈಸೂರ್' 'ರೀಕನ್‌ಸ್ಟ್ರಕ್ಟಿಂಗ್ ಇಂಡಿಯಾ', 'ರ್ಯಾಪಿಡ್ ಡೆವೆಲಪ್‌ಮೆಂಟ್ ಆಫ್ ಇಂಡಸ್ಟ್ರೀಸ್', 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ', 'ಮೆಮೊಯರ್ಸ್ ಆಫ್ ಮೈ ವರ್ಕಿಂಗ್ ಲೈಫ್' (ಆತ್ಮ ಚರಿತ್ರೆ) ಇತ್ಯಾದಿ.

ಸರ್.ಮಿರ್ಜಾ ಇಸ್ಮಾಯಿಲ್

1926 ರಿಂದ 1941 ರವರೆಗೆ ದಿವಾನರಾಗಿ ಸೇವೆಗೈದ ಸರ್.ಮಿರ್ಜಾ ಇಸ್ಮಾಯಿಲ್‌ರನ್ನು ಸಹ ಆಧುನಿಕ ಮೈಸೂರಿನ ನಿರ್ಮಾಪಕರಲ್ಲೊಬ್ಬರೆಂದು ಪರಿಗಣಿಸಲಾಗಿದೆ. ಇವರು ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹಿಸಿ ಹಲವಾರು ಕೈಗಾರಿಕೆಗಳನ್ನು ಆರಂಭಿಸಿದರು. ಬೆಂಗಳೂರನಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(ಹೆಚ್‌ಎಎಲ್), ಗಾಜಿನ ಕಾರ್ಖಾನೆ, ಪಿಂಗಾಣಿ ಪಾತ್ರೆ ಕಾರ್ಖಾನೆ, ಬೆಳಗೊಳದಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆ, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಶಿವಮೊಗ್ಗಾದಲ್ಲಿ ಬೆಂಕಿಕಡ್ಡಿ ಕಾರ್ಖಾನೆ ಮತ್ತು ಭದ್ರಾವತಿಯಲ್ಲಿನ ಉಕ್ಕು ಹಾಗೂ ಕಾಗದ ಕಾರ್ಖಾನೆಗಳನ್ನು ಇವರು ಸ್ಥಾಪಿಸಿದರು. ಜಕ್ಕೂರಿನಲ್ಲಿ ವಿಮಾನ ನಿಲ್ದಾಣವನ್ನು ನಿರ್ಮಿಸಿದರು. ರೇಡಿಯೋ ಕೇಂದ್ರಗಳನ್ನು ಬೆಂಗಳೂರು ಮತ್ತು ಮೈಸೂರುಗಳಲ್ಲಿ ಆರಂಭಿಸಲಾಯಿತು..


ಸರ್.ಮಿರ್ಜಾ ಇಸ್ಮಾಯಿಲ್

ಇವರು ಗ್ರಾಮೀಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿದರು. ಬದನವಾಳದಲ್ಲಿ ಖಾದಿ ಉತ್ಪಾದನೆಯ ಕೇಂದ್ರವನ್ನು ಸ್ಥಾಪಿಸಿದರು. ಇರ್ವಿನ್ ಕಾಲುವೆ ನಿರ್ಮಿಸಿ ಮಂಡ್ಯ ಜಿಲ್ಲೆಯ 1,20,000 ಎಕರೆ ಭೂಮಿಗೆ ನೀರನ್ನು ಒದಗಿಸಲಾಯಿತು. ಇವರಲ್ಲಿ ಸೌಂದರ್ಯ ಪ್ರಜ್ಞೆ ಇದ್ದು, ಮೈಸೂರನ್ನು ಹೂ ತೋಟಗಳು ಮತ್ತು ಉದ್ಯಾನವನಗಳ ನಗರವನ್ನಾಗಿಸಿದರು. ಬೆಂಗಳೂರು ಮತ್ತು ಇತರ ನಗರಗಳಲ್ಲಿಯೂ ಉದ್ಯಾನ ಮತ್ತು ಹೂತೋಟಗಳನ್ನು ನಿರ್ಮಿಸಿದರು. ಕೆ.ಆರ್.ಎಸ್.ನಲ್ಲಿ ಬೃಂದಾವನ ಉದ್ಯಾನವನವನ್ನು ನಿರ್ಮಿಸಿದರು

ಇವರ ಅವಧಿಯಲ್ಲಿಯೇ ಮೈಸೂರು ಮಹಾರಾಜರ ಆಡಳಿತದ ರಜತ ಮಹೋತ್ಸವವನ್ನು ಆಚರಿಸಲಾಯಿತು. ಇದರ ಸ್ಮರಣೆಗಾಗಿ ಆಸ್ಪತ್ರೆಗಳು, ದೇವಾಲಯಗಳು ಮತ್ತು ಗ್ರಂಥಾಲಯಗಳನ್ನು ನಿರ್ಮಿಸಲಾಯಿತು. ಬೆಂಗಳೂರಿನಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರರೋಗ ಶಸ್ತ್ರಚಿಕಿತ್ಸೆ ಸಂಸ್ಥೆ (NIMHANS- National Institute of Mental Health and Neuro Surgery) ಕೋಲಾರದಲ್ಲಿ ನರಸಿಂಹರಾಜ ಆಸ್ಪತ್ರೆ, ಶಿವಮೊಗ್ಗದಲ್ಲಿ ಮೆಗ್ಗಾನ್ ಆಸ್ಪತ್ರೆ ಮತ್ತು ಮೈಸೂರಿನಲ್ಲಿ ವಾಣಿವಿಲಾಸ ಆಸ್ಪತ್ರೆಗಳನ್ನು ಸ್ಥಾಪಿಸಲಾಯಿತು.

ಶಿಕ್ಷಣದ ಪ್ರೋತ್ಸಾಹಕ್ಕಾಗಿ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ಜಾರಿಗೊಳಿಸಿ, ಖಾಸಗಿ ಶಾಲೆಗಳಿಗೆ ಅನುದಾನವನ್ನು ನೀಡಲಾಯಿತು. ಪ್ರೌಢಶಾಲೆಗಳಲ್ಲಿ ಕನ್ನಡ ಮಾಧ್ಯಮದ ಶಿಕ್ಷಣವನ್ನು ಆರಂಭಿಸಲಾಯಿತು. ಹೀಗೆ ಮೈಸೂರನ್ನು ಅಭಿವೃದ್ಧಿಪಡಿಸುವಲ್ಲಿ ಮಿರ್ಜಾ ಇಸ್ಮಾಯಿಲ್‌ರು ಮಹತ್ವದ ಪಾತ್ರ ವಹಿಸಿದ್ದಾರೆ.

ಚಟುವಟಿಕೆ

ಮೈಸೂರಿನ ದಿವಾನರು ಸ್ಥಾಪಿಸಿದ ಕೈಗಾರಿಕೆಗಳ ಒಂದು ಪಟ್ಟಿ ಮಾಡಿ

ಪ್ರಶ್ನೆಗಳು

I. ಈ ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ

1. ಮೈಸೂರಿನಿಂದ ಬೆಂಗಳೂರಿಗೆ ರಾಜಧಾನಿಯನ್ನು ವರ್ಗಾಯಿಸಿದವರು ಯಾರು?
2. ಮೈಸೂರು ರಾಜ್ಯದಲ್ಲಿ ಹಾಕಲಾದ ಪ್ರಥಮ ರೈಲು ಮಾರ್ಗವನ್ನು ಹೆಸರಿಸಿ.
3. ವಿಶ್ವೇಶ್ವರಯ್ಯನವರ ಜನ್ಮಸ್ಥಳ ಯಾವುದು?
4. ಮೈಸೂರಿನ ವಿಶ್ವವಿದ್ಯಾಲಯ ಸ್ಥಾಪನೆಯಾದದ್ದು ಯಾವಾಗ?
5. ಕನ್ನಡ ಸಾಹಿತ್ಯ ಪರಿಷತ್‌ನ್ನು ಸ್ಥಾಪಿಸಿದವರು ಯಾರು?
6. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಬ್ಯಾಂಕ್‌ಅನ್ನು ಹೆಸರಿಸಿ.
7. ವಿಶ್ವೇಶ್ವರಯ್ಯನವರು ಕೈಗಾರಿಕಾಭಿವೃದ್ಧಿ ಕುರಿತು ನೀಡಿದ ಜನಪ್ರಿಯ ಘೋಷಣೆ ಏನು?
8. ಭಾರತರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ ಯಾರು?
9. ಕೃಷ್ಣರಾಜಸಾಗರ ಆಣೆಕಟ್ಟೆಯನ್ನು ನಿರ್ಮಿಸಿದವರು ಯಾರು?
10. ಬೆಂಗಳೂರಿನಲ್ಲಿ ನಿಮ್ಹಾನ್ಸ್ ಸ್ಥಾಪಕರನ್ನು ಹೆಸರಿಸಿ.
11. ಬೃಂದಾವನ ಉದ್ಯಾನವನವನ್ನು ನಿರ್ಮಿಸಿದವರು ಯಾರು?.

II. ಈ ಕೆಳಗಿನವುಗಳಿಗೆ ಎರಡು ಪದ ಇಲ್ಲವೇ ಎರಡು ವಾಕ್ಯಗಳಲ್ಲಿ ಉತ್ತರಿಸಿ

1. ಮೈಸೂರಿನ ಇಬ್ಬರು ಪ್ರಮುಖ ಕಮಿಷನರ್‌ಗಳನ್ನು ಹೆಸರಿಸಿ.
2. ಮಾರ್ಕ್ ಕಬ್ಬನ್‌ರ ಯಾವುದಾದರೂ ಎರಡು ಆಡಳಿತ ಸುಧಾರಣೆಗಳನ್ನು ಬರೆಯಿರಿ.
3. ಬೌರಿಂಗನ ಯಾವುದಾದರೂ ಎರಡು ಆಡಳಿತ ಸುಧಾರಣೆಗಳನ್ನು ಬರೆಯಿರಿ.
4. ಮೈಸೂರಿನ ಯಾರಾದರೂ ಇಬ್ಬರು ಮುಖ್ಯ ದಿವಾನರುಗಳನ್ನು ಹೆಸರಿಸಿ.
5. ವಿಶ್ವೇಶ್ವರಯ್ಯನವರ ತಂದೆ–ತಾಯಿಗಳನ್ನು ಹೆಸರಿಸಿ.
6. ವಿಶ್ವೇಶ್ವರಯ್ಯನವರು ರಚಿಸಿದ ಯಾವುದಾದರು ಎರಡು ಕೃತಿಗಳನ್ನು ತಿಳಿಸಿ.
7. ಮಿರ್ಜಾ ಇಸ್ಮಾಯಿಲ್‌ರು ಸ್ಥಾಪಿಸಿದ ಯಾವುದಾದರೂ ಎರಡು ಕೈಗಾರಿಕೆಗಳನ್ನು ಹೆಸರಿಸಿ.

III. ಈ ಕೆಳಗಿನದನ್ನು 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ

1. ಮೈಸೂರನ್ನು ಮಾದರಿ ರಾಜ್ಯವನ್ನಾಗಿ ಮಾಡುವಲ್ಲಿ ಮಿರ್ಜಾಇಸ್ಮಾಯಿಲ್‌ರ ಪಾತ್ರವನ್ನು ಚಿತ್ರಿಸಿ.

IV.ಈ ಕೆಳಗಿನದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ

1. ಸರ್.ಎಂ.ವಿಶ್ವೇಶ್ವರಯ್ಯನವರನ್ನು 'ಆಧುನಿಕ ಮೈಸೂರಿನ ನಿರ್ಮಾತೃ' ಎಂದು ಕರೆಯಲಾಗಿದೆ. ವಿವರಿಸಿ.

❋ ❋ ❋ ❋

ಅಧ್ಯಾಯ 7.6

ಭಾರತದ ರಾಷ್ಟ್ರೀಯ ಚಳುವಳಿ

ಹಿನ್ನಲೆ: ಭಾರತವು ಗ್ರೀಕರು, ಶಕರು, ಕುಶಾನರು, ತುರ್ಕರು, ಆಫ್‌ಘಾನರು ಮುಂತಾದ ಅನೇಕ ವಿದೇಶೀಯರ ದಾಳಿಗೆ ಒಳಪಟ್ಟಿತ್ತು, ಅಂತಹ ಎಲ್ಲಾ ದಾಳಿಕೋರರು ಭಾರತದಲ್ಲಿ ನೆಲೆಸಿ ಕ್ರಮೇಣ ಭಾರತೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡರು ಹಾಗೂ ಭಾರತದ ಸಂಸ್ಕೃತಿಗೆ ಕೊಡುಗೆಗಳನ್ನಿತ್ತರು. ಇದಕ್ಕೆ ಪ್ರತಿಯಾಗಿ, ಬ್ರಿಟಿಷರು ಎಂದೂ ಭಾರತದಲ್ಲಿ ನೆಲೆಸಿ ಭಾರತವನ್ನು ತಮ್ಮ ತಾಯ್ನಾಡನ್ನಾಗಿ ಮಾಡಿಕೊಳ್ಳಲು ಬಯಸಲಿಲ್ಲ. ಅವರು ವಿವಿಧ ನೀತಿಗಳು ಹಾಗೂ ಸೈನಿಕ ಯೋಜನೆಗಳಿಂದ ಭಾರತವನ್ನು ಕ್ರಮೇಣವಾಗಿ ಆಕ್ರಮಿಸಿ, ರಾಜಕೀಯ ಸಾರ್ವಭೌಮತ್ವವನ್ನು ಸ್ಥಾಪಿಸಿದರು. ನಿದ್ರಿಸುತ್ತಿದ್ದ ಭಾರತೀಯರು ಎಚ್ಚೆತ್ತು ಬ್ರಿಟಿಷರ ಆಕ್ರಮಣಕ್ಕೆ ಪ್ರತಿಕ್ರಿಯಿಸಿದರು. ಇದನ್ನು ಭಾರತದ ರಾಷ್ಟ್ರೀಯ ಚಳುವಳಿ ಎಂದು ಕರೆಯಲಾಗಿದೆ. ಭಾರತದ ರಾಷ್ಟ್ರೀಯ ಚಳುವಳಿಯು ವಿಸ್ತೃತವಾದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿಗಳನ್ನು ಒಳಗೊಂಡಿದೆ. ಭಾರತದ ರಾಷ್ಟ್ರೀಯ ಚಳುವಳಿಯು ನಿಖರವಾಗಿ ಯಾವಾಗ ಆರಂಭವಾಯಿತು ಎಂಬ ಪ್ರಶ್ನೆಗೆ ಉತ್ತರ ಚರ್ಚಾಸ್ಪದವಾಗಿದೆ. ಅದು ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪನೆ ಮಾಡಲಾರಂಭಿಸಿದಾಗಲೇ ಆರಂಭವಾಯಿತೆಂದು ಹೇಳಬಹುದಾದರೂ ಖಚಿತವಾಗಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯೊಂದಿಗೆ ಆರಂಭವಾಯಿತೆಂದು ಹೇಳಬಹುದು.

ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಪ್ರಮುಖ ಅಂಶಗಳು:

1. ಭಾರತವು ಕಚ್ಚಾ ವಸ್ತುಗಳನ್ನು ಅಗ್ಗವಾಗಿ ಒದಗಿಸುವ ಹಾಗೂ ತಮ್ಮ ಸಿದ್ಧ ವಸ್ತುಗಳಿಗೆ ಮಾರುಕಟ್ಟೆ ಮಾತ್ರವೆಂದು ಬ್ರಿಟಿಷರು ಭಾವಿಸಿದ್ದರು. ಅವರ ಆರ್ಥಿಕ ನೀತಿಯು, ಅಸ್ತಿತ್ವದಲ್ಲಿದ್ದ ಆರ್ಥಿಕ ವ್ಯವಸ್ಥೆಯನ್ನು ನಾಶ ಮಾಡಿತು ಮತ್ತು ದೇಶವು ಬಡವಾಯಿತು. ಭಾರತದ ಗ್ರಾಮೀಣ ಕೈಗಾರಿಕೆಗಳು, ವ್ಯಾಪಾರ ಮತ್ತು ಒಕ್ಕಲುತನ ತೀವ್ರ ನಷ್ಟ ಅನುಭವಿಸಿದವು. ನಿರುದ್ಯೋಗ ಹೆಚ್ಚಾಗಲಾರಂಭಿಸಿತು. ಭಾರತದ ಆರ್ಥಿಕ ಹಿನ್ನಡೆಗೆ ಬ್ರಿಟಿಷ್ ಆಳ್ವಿಕೆಯೇ ಕಾರಣವೆಂದು ಪರಿಗಣಿಸಲಾಯಿತು.
2. ಬ್ರಿಟಿಷರು ಭಾರತದಲ್ಲಿ ರಾಜಕೀಯ ಐಕ್ಯತೆಯನ್ನು ಸ್ಥಾಪಿಸಿ ಸಾಕಷ್ಟು ವರ್ಷಗಳ ಕಾಲ ಏಕರೂಪ ಆಡಳಿತ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ನೀಡಿದರು.
3. ಭಾರತದಲ್ಲಿ ಹಿಂದುಗಳು ಹಾಗೂ ಮುಸ್ಲಿಂರು ಸಂಸ್ಕೃತ, ಪರ್ಷಿಯನ್ ಮತ್ತು ಅರೇಬಿಕ್‌ನಲ್ಲಿ ಅಭ್ಯಸಿಸುತ್ತಿದ್ದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯ ಏಕಸ್ವಾಮ್ಯತೆಯನ್ನು ಬ್ರಿಟಿಷರು ಆರಂಭಿಸಿದ ಇಂಗ್ಲೀಷ್ ಪಾಶ್ಚಿಮಾತ್ಯ ಶಿಕ್ಷಣ ಮುರಿಯಿತು. ತಿಳುವಳಿಕೆ ಪಡೆದ ಭಾರತೀಯರು ಯುರೋಪಿಯನ್ನರೊಂದಿಗೆ ತಮ್ಮ ಪರಿಸ್ಥಿತಿಯನ್ನು ಹೋಲಿಸಲಾರಂಭಿಸಿದರು. ಉದಾ: ಭಾರತದ ಅನೈಕ್ಯ ರಾಜಕೀಯ ಪರಸ್ಥಿತಿಯು ಏಕೀಕರಣಕ್ಕೆ ಪೂರ್ವದ ಜರ್ಮನಿ ಹಾಗೂ ಇಟಲಿಯಲ್ಲಿದ್ದ ಪರಸ್ಥಿತಿಯಂತಿತ್ತು. ಪರಕೀಯ ಆಡಳಿತದ ವಿರುದ್ಧ ಅವರ ಸಫಲತೆ ಮತ್ತು ಏಕೀಕೃತ ಹಾಗು ಸ್ವತಂತ್ರ ರಾಷ್ಟ್ರದ ಸ್ಥಾಪನೆ ರಾಷ್ಟ್ರೀಯವಾದಿಗಳಿಗೆ ಪ್ರೇರಣೆಯನ್ನು ನೀಡಿತು.

4. ಬ್ರಿಟಿಷರು ತಮ್ಮನ್ನು ಭಾರತೀಯರಿಗಿಂತ ಶ್ರೇಷ್ಠ ಜನಾಂಗದವರೆಂದು ಭಾವಿಸಿದ್ದರು. ಅವರು ಭಾರತೀಯರನ್ನು ಬೇಧಭಾವದಿಂದ ನೋಡುತ್ತಿದ್ದರಲ್ಲದೆ ಕೀಳಾಗಿ ಕಾಣುತ್ತಿದ್ದರು. ಬ್ರಿಟಿಷರು ಯಾವಾಗಲೂ ಭಾರತೀಯರನ್ನು 'ನಾಯಿ', 'ಹಂದಿ', ಮುಂತಾಗಿ ಬೈಯುತ್ತಿದ್ದರು. ಆಡಳಿತ, ನ್ಯಾಯಾಂಗ ಮತ್ತು ಶಾಸಕಾಂಗದ ಎಲ್ಲಾ ಉನ್ನತ ಹುದ್ದೆಗಳು ಬ್ರಿಟಿಷರಿಗೆ ಮೀಸಲಾಗಿದ್ದವು. 1858ರ ರಾಣಿಯ ಘೋಷಣೆಯಲ್ಲಿ ಭಾರತೀಯರನ್ನು ಸೈನ್ಯ ಹಾಗೂ ಆಡಳಿತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಳ್ಳುವುದಾಗಿ ಆಶ್ವಾಸನೆ ನೀಡಲಾಗಿತ್ತಾದರೂ, ಪ್ರಮುಖ ಹುದ್ದೆಗಳಿಗೆ ಭಾರತೀಯರ ಸೇರ್ಪಡೆ ಕಷ್ಟಕರವಾಗುವಂತೆ ಮಾಡಲಾಗಿತ್ತು. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತೀಯರ ಬಗ್ಗೆ ಮತ್ತಷ್ಟು ಸಂಶಯಭರಿತರಾದರು. ಭಾರತೀಯ ಸಂಸ್ಕೃತಿಯನ್ನು ಬ್ರಿಟಿಷರು ನಿಕೃಷ್ಟವಾಗಿ ಕಂಡರು ಮತ್ತು ತಾವು ಅನಾಗರಿಕ ಭಾರತೀಯರಿಗೆ ಶಿಕ್ಷಣ ನೀಡುವ ಮತ್ತು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹಿಂದುಳಿದ ಭಾರತೀಯರ ಸುಧಾರಕರೆಂದು ತಿಳಿದರು.

5. ಭಾರತದ ಮೇಲೆ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಲು ಬ್ರಿಟಿಷರು ಸರಣಿ ಯುದ್ಧಗಳನ್ನು ಮಾಡಿದರು ಮತ್ತು ಸಹಾಯಕ ಸೈನ್ಯ ಪದ್ಧತಿ ಹಾಗೂ ದತ್ತು ಮಕ್ಕಳಿಗೆ ಹಕ್ಕಿಲ್ಲಗಳಂತಹ ಪ್ರತಿಗಾಮಿ ನೀತಿಗಳನ್ನು ಅನುಸರಿಸಿದರು. ಅಧಿಕಾರ ಮತ್ತು ಪ್ರತಿಷ್ಠೆಯನ್ನು ಕಳೆದುಕೊಂಡ ರಾಜರು ಹಾಗೂ ಅಧಿಕಾರಿಗಳು ಮತ್ತು ಅಂತಹ ಆಡಳಿತಗಾರರ ಬೆಂಬಲಿಗರು ಬ್ರಿಟಿಷರ ವಿರುದ್ಧ ತಿರುಗಿಬಿದ್ದರು. ಮಿತ್ರನಾಗಿದ್ದರೂ ಔದ್‌ನ ಅರಸನನ್ನು ಬ್ರಿಟಿಷರು ಅವಮಾನಕರವಾಗಿ ನಡೆಸಿಕೊಂಡ ರೀತಿ ಭಾರತೀಯರನ್ನು ಇನ್ನಷ್ಟು ಕೆರಳಿಸಿತು.

6. ಭಾರತದ ಪತ್ರಿಕೋದ್ಯಮ ಮತ್ತು 19ನೇ ಹಾಗೂ 20ನೇ ಶತಮಾನದ ಆರಂಭದ ಸಾಹಿತ್ಯ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಪ್ರಚೋದಿಸಿತು. ಬ್ರಿಟಿಷ್ ಸರ್ಕಾರದ ಆಡಳಿತಾತ್ಮಕ ನೀತಿಗಳು ಮತ್ತು ನ್ಯೂನ್ಯತೆಗಳ ಪ್ರಭಾವದಿಂದ ಜನರ ಅವಸ್ಥೆಯನ್ನು ಪ್ರಕಟಿಸಲಾಯಿತು. ರಾಷ್ಟ್ರೀಯತೆಯನ್ನು ಪ್ರಚೋದಿಸುವ ಅನೇಕ ಲೇಖನಗಳು ಮತ್ತು ಕವಿತೆಗಳನ್ನು ಇಂಗ್ಲೀಷ್ ಹಾಗೂ ದೇಶೀಯ ಭಾಷೆಗಳೆರಡರಲ್ಲೂ ಪ್ರಕಟಿಸಲಾಯಿತು. ಆರ್.ಜಿ. ಭಂಡಾರ್ಕರ್, ಆರ್.ಎಲ್. ಮಿತ್ರ, ಬಾಲ ಗಂಗಾಧರ ತಿಲಕ್, ಸ್ವಾಮಿ ವಿವೇಕಾನಂದ, ಮ್ಯಾಕ್ಸ್‌ಮುಲ್ಲರ್, ಮೋನಿಯರ್ ವಿಲಿಯಮ್ಸ್, ಮುಂತಾದ ವಿದ್ವಾಂಸರು ಸಂಶೋಧನೆಗಳನ್ನು ನಡೆಸಿ ಭಾರತದ ಭವ್ಯ ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲಿದರು. ಭಾರತದ ಸಾಂಸ್ಕೃತಿಕ ಪರಂಪರೆ ರಾಷ್ಟ್ರೀಯವಾದಿಗಳಲ್ಲಿ ಹೆಮ್ಮೆ ಹಾಗೂ ಆತ್ಮವಿಶ್ವಾಸವನ್ನು ತುಂಬಿತು. ಈ ಕಾಲದಲ್ಲಿ ಬ್ರಿಟಿಷರೂ ಸೇರಿದಂತೆ ಯುರೋಪಿಯನ್ನರು ತಾವು ಆರ್ಯ ಜನಾಂಗಕ್ಕೆ ಸೇರಿದವರೆಂದೂ ಮತ್ತು ಆರ್ಯರು ಪ್ರಾಚೀನ ಪ್ರಪಂಚದ ಅತ್ಯಂತ ಹೆಚ್ಚು ನಾಗರಿಕ ಜನಾಂಗವೆಂದು ಹೇಳಿಕೊಳ್ಳಲಾರಂಭಿಸಿದರು. ಭಾರತೀಯ ಸಂಸ್ಕೃತಿಯನ್ನು ಆರಂಭಿಸಿದವರು ಆರ್ಯರು ಎಂಬ ವಿಷಯವು ರಾಷ್ಟ್ರೀಯವಾದಿಗಳ ಹೆಮ್ಮೆಯನ್ನು ಇನ್ನಷ್ಟು ಹೆಚ್ಚಿಸಿತು.

1885ಕ್ಕೆ ಮೊದಲು ಸ್ಥಾಪಿಸಲ್ಪಟ್ಟ ಕೆಲವು ಪ್ರಮುಖ ರಾಜಕೀಯ ಸಂಘ ಸಂಸ್ಥೆಗಳು

1. ಬಂಗ ಭಾಷಾ ಪ್ರಾಕ್ಷಿಕ ಸಭಾ–1836
2. ದ್ವಾರಕಾನಾಥ ಟಾಗೋರರ ಜಮೀನ್ದಾರಿ ಅಸೋಸಿಯೇಷನ್ (ಭೂ ಹಿಡುವಳಿದಾರರ ಸಮಿತಿ)–1838
3. ಬಂಗಾಲ್ ಬ್ರಿಟಿಷ್ ಇಂಡಿಯಾ ಸೊಸೈಟಿ–1843
4. ಜಮೀನ್ದಾರಿ ಅಸೋಸಿಯೇಷನ್ ಹಾಗೂ ಬಂಗಾಲ್ ಬ್ರಿಟಿಷ್ ಇಂಡಿಯಾ ಸೊಸೈಟಿಯ ಲೀನದಿಂದ ಸ್ಥಾಪನೆಯಾದ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್–1851

5. 1866ರಲ್ಲಿ ದಾದಾಬಾಯಿ ನವರೋಜಿ ಅವರಿಂದ ಸ್ಥಾಪಿಸಲ್ಪಟ್ಟ ಈಸ್ಟ್ ಇಂಡಿಯಾ ಅಸೋಸಿಯೇಷನ್
6. 1875ರಲ್ಲಿ ಶಿಶಿರ್‌ಕುಮಾರ್ ಘೋಷ್ ಅವರು ಇಂಡಿಯನ್ ಲೀಗ್ ಸ್ಥಾಪಿಸಿದರು
7. 1876ರಲ್ಲಿ ಎಸ್.ಎನ್. ಬ್ಯಾನರ್ಜಿ ಮತ್ತು ಆನಂದ್‌ಮೋಹನ್ ಬೋಸ್ ಅವರಿಂದ ಸ್ಥಾಪಿಸಲ್ಪಟ್ಟ ಇಂಡಿಯನ್ ಅಸೋಸಿಯೇಷನ್ ಆಫ್ ಕಲ್ಕತ್ತಾ
8. ಎಂ.ಜಿ. ರಾನಡೆ ಮತ್ತಿತರರಿಂದ 1870ರ ದಶಕದಲ್ಲಿ ಸ್ಥಾಪಿಸಲ್ಪಟ್ಟ ಪೂನಾ ಸಾರ್ವಜನಿಕ ಸಭಾ
9. ವೀರ ರಾಘವಾಚಾರಿ, ಸುಬ್ರಹ್ಮಣ್ಯ ಅಯ್ಯರ್ ಮತ್ತು ಆನಂದಾಚಾರ್ಲು ಅವರು 1884ರಲ್ಲಿ ಸ್ಥಾಪಿಸಿದ ಮದ್ರಾಸ್ ಮಹಾಜನ್ ಸಭಾ
10. 1885ರಲ್ಲಿ ಬದ್ರುದ್ದೀನ್ ತ್ಯಾಬ್ಜಿ, ಫಿರೋಜ್ ಷಾ ಮೆಹತಾ ಮತ್ತು ಕೆ.ಟಿ. ತೆಲಾಂಗ್ ಅವರು ಸ್ಥಾಪಿಸಿದ ಬಾಂಬೆ ಪ್ರೆಸಿಡೆನ್ಸಿ ಅಸೋಸಿಯೇಷನ್.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆ 1885:

ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯ ಪೂರ್ವದಲ್ಲಿದ್ದ ರಾಜಕೀಯ ಸಂಘಟನೆಗಳು ವಿವಿಧ ಪ್ರಾಂತ್ಯಗಳಲ್ಲಿ ಕೆಲಸ ಮಾಡುತ್ತಿದ್ದು ಹೆಚ್ಚು ಪ್ರಭಾವಶಾಲಿಯಾಗಿರಲಿಲ್ಲ. ಆಲನ್ ಆಕ್ಟೇವಿಯನ್ ಹ್ಯೂಮ್ ಎಂಬ ಒಬ್ಬ ಬ್ರಿಟಿಷ್ ನಾಗರಿಕ ಸೇವಾಧಿಕಾರಿ ಎಲ್ಲ ರಾಜಕೀಯ ನಾಯಕರ ರಾಷ್ಟ್ರೀಯ ಒಕ್ಕೂಟದ ಕಲ್ಪನೆಯನ್ನು ಹೊಂದಿದ್ದನು. ಅವನು 1884ರಲ್ಲಿ ಭಾರತೀಯ ರಾಷ್ಟ್ರೀಯ ಒಕ್ಕೂಟವನ್ನು ಆನಂತರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸ್ಥಾಪಿಸಲು ನಾಯಕರನ್ನು ಪ್ರೇರೇಪಿಸಿದನು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನ 27–12–1885ರಂದು ಬೊಂಬಾಯಿಯಲ್ಲಿ ನಡೆಯಿತು. ಕಲ್ಕತ್ತಾದ ಪ್ರಸಿದ್ಧ ಬ್ಯಾರಿಸ್ಟರ್ ಉಮೇಶ್‌ಚಂದ್ರ ಬ್ಯಾನರ್ಜಿಯವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಭಾರತದ ವಿವಿಧ ಭಾಗಗಳಿಂದ 72 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು ಮತ್ತು ಅವರಲ್ಲಿ ಕರ್ನಾಟಕದ ನಾಲ್ಕು ಜನರಿದ್ದರು.

ಸುರಕ್ಷಾ ಕವಾಟ ಸಿದ್ಧಾಂತ:

ಭಾರತದಲ್ಲಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಡಫ್‌ರಿನ್ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಒಳಸಂಚು ಹೂಡಿದನೆಂದು ಕೆಲವು ಇತಿಹಾಸಕಾರರು ಹೇಳುತ್ತಾರೆ. ಈ ಸಿದ್ಧಾಂತವು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಭಾರತೀಯರಲ್ಲಿ ಬೆಳೆಯುತ್ತಿದ್ದ ಕೋಪ ಹಾಗೂ ಉದ್ವೇಗಗಳಿಗೆ ಒಂದು ರಾಜಕೀಯ ವೇದಿಕೆಯನ್ನು ನೀಡುವುದರ ಮೂಲಕ ಕಡಿಮೆ ಮಾಡಲು ಉದ್ದೇಶಿಸಿದ್ದೆಂದು ಹೇಳುತ್ತದೆ. ಈ ಸಿದ್ಧಾಂತವನ್ನು ಬಹುತೇಕ ಆಧುನಿಕ ಇತಿಹಾಸಕಾರರು ತಿರಸ್ಕರಿಸಿದ್ದಾರೆ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಉದ್ದೇಶಗಳೆಂದರೆ:

1. ರಾಷ್ಟ್ರೀಯ ಏಕತೆಯನ್ನು ಪ್ರೋತ್ಸಾಹಿಸುವುದು ಮತ್ತು ಬಲಪಡಿಸುವುದು
2. ಧರ್ಮ, ಜಾತಿ, ಪ್ರಾಂತ್ಯ ಮತ್ತಿತರ ಪೂರ್ವಾಗ್ರಹಗಳನ್ನು ಹೋಗಲಾಡಿಸುವುದು.
3. ಭಾರತೀಯರಲ್ಲಿ ಆತ್ಮೀಯತೆ ಮತ್ತು ಸ್ನೇಹವನ್ನು ಬೆಳೆಸುವುದು.

4. ಭಾರತೀಯ ಜನಸಮೂಹಕ್ಕೆ ರಾಜಕೀಯ ಶಿಕ್ಷಣವನ್ನು ನೀಡುವುದು ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವುದು.
5. ಸಾರ್ವಜನಿಕ ಅಭಿಪ್ರಾಯಕ್ಕೆ ಸ್ಪಂದಿಸುವಂತೆ ಬ್ರಿಟಿಷರನ್ನು ಒತ್ತಾಯಿಸುವುದು.
6. ಶಾಸನ ಸಭೆಗಳು ಹಾಗೂ ನಾಗರಿಕ ಸೇವೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರನ್ನು ಸೇರಿಸುವುದು.

ಭಾರತದ ರಾಷ್ಟ್ರೀಯ ಚಳುವಳಿಯ ವಿವಿಧ ಹಂತಗಳು:

ಪ್ರಥಮ ಹಂತ (ಮಂದಗಾಮಿಗಳ ಯುಗ–1885–1905)

1885ರಿಂದ 1905ರವರಗೆ ದಾದಾಬಾಯಿ ನವರೋಜಿ, ಫಿರೋಜ್ ಷಾ ಮೆಹತಾ, ಬದ್ರುದ್ದೀನ್ ತ್ಯಾಬ್ಜಿ ಆನಂದಾಚಾರ್ಲು, ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ, ಮುಂತಾದವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕರಾಗಿದ್ದರು. ಅವರು ಬ್ರಿಟಿಷರಿಗೆ ನಿಷ್ಠೆಯನ್ನು ವ್ಯಕ್ತಪಡಿಸಿದರು ಮತ್ತು ಬ್ರಿಟಿಷರ ಔದಾರ್ಯತೆಯಲ್ಲಿ ನಂಬಿಕೆ ಹೊಂದಿದ್ದರು. ಅವರು ಪ್ರಾರ್ಥನೆಗಳು, ಬಿನ್ನಹಗಳು ಮತ್ತು ಪ್ರತಿಭಟನೆಗಳ ಮೂಲಕ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡವನ್ನು ತರುವ ಉದ್ದೇಶ ಹೊಂದಿದ್ದರು. ಅವರು ಸಾರ್ವಜನಿಕ ಸಭೆಗಳನ್ನು ಆಯೋಜಿಸಿದರು, ಬ್ರಿಟಿಷ್ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು ಮತ್ತು ಲಂಡನ್‌ಗೆ ಪ್ರತಿನಿಧಿಗಳನ್ನು ಕಳುಹಿಸಿದರು. ದಾದಾಬಾಯಿ ನವರೋಜಿ (ಭಾರತದ ವೃದ್ಧಪಿತಾಮಹ) 1866ರಲ್ಲಿ ಈಸ್ಟ್ ಇಂಡಿಯಾ ಅಸೋಸಿಯೇಷನ್ ಸ್ಥಾಪಿಸಿದರು. ಈ ಸಂಸ್ಥೆಯು ಭಾರತೀಯರ ಬೇಡಿಕೆಗಳನ್ನು ಲಂಡನ್‌ಗೆ ಕೊಂಡೊಯ್ದು ಬ್ರಿಟಿಷ್ ಪ್ರಜೆಗಳು ಹಾಗೂ ಶಾಸಕರ ಮೇಲೆ ಪ್ರಭಾವ ಬೀರುವುದರ ಮೂಲಕ ಭಾರತೀಯರಿಗೆ ಅನುಕೂಲವಾಗುವಂತಹ ನೀತಿಗಳು ಹಾಗೂ ಕಾನೂನುಗಳನ್ನು ಜಾರಿಗೆ ತರುವಂತೆ ಪ್ರಯತ್ನಿಸಿತು. ನಾಯಕರ ಈ ಎಲ್ಲಾ ಚಟುವಟಿಕೆಗಳು ಮಂದ ರೀತಿಯದ್ದಾಗಿತ್ತು. ಹಾಗಾಗಿ ಅವರನ್ನು 'ಮಂದಗಾಮಿ'ಗಳೆಂದು ಅವರ ಕಾಲವನ್ನು 'ಮಂದಗಾಮಿ ಯುಗ'ವೆಂದು ಕರೆಯಲಾಗಿದೆ. ಕಾಂಗ್ರೆಸ್‌ನ ಸ್ಥಾಪನೆಯಾದಾಗಿನಿಂದಲೂ ಬ್ರಿಟಿಷರು ಅದರ ವಿರೋಧಿಗಳಾಗಿದ್ದರು ಹಾಗೂ ಮಂದಗಾಮಿಗಳ ಬಗ್ಗೆ ಕಠಿಣ ನಿಲುವನ್ನು ಬೆಳೆಸಿಕೊಂಡರು. ಅವರು ಕಾಂಗ್ರೆಸ್‌ನ್ನು 'ರಾಜದ್ರೋಹದ ಕಾರ್ಖಾನೆ' ಎಂತಲೂ, ನಾಯಕರನ್ನು 'ವಿದ್ರೋಹಿ ಬ್ರಾಹ್ಮಣರು' ಮತ್ತು 'ನಿಷ್ಠೆ ಇಲ್ಲದ ಬಾಬು'ಗಳೆಂದು ಕರೆದರು.

ಪ್ರಥಮ ಹಂತವು ರಾಜಕೀಯ ರಂಗದಲ್ಲಿ ಯಾವುದೇ ತೀವ್ರತರ ಬದಲಾವಣೆಗಳನ್ನು ತರಲಿಲ್ಲವಾದರೂ, ಅದು ಆ ಕಾಲದ ಪ್ರಗತಿಶೀಲ ಶಕ್ತಿಗಳ ಒಗ್ಗೂಡುವಿಕೆಯನ್ನು ಪ್ರತಿನಿಧಿಸಿತು. ಇದು ಸಮಾನ ಉದ್ದೇಶಕ್ಕಾಗಿ ರಾಷ್ಟ್ರೀಯ ಜಾಗೃತಿಯ ಸಮಯವಾಗಿತ್ತು. ಬ್ರಿಟಿಷರ ಶೋಷಣಾತ್ಮಕ ವಸಾಹತುಶಾಹಿ ಆಡಳಿತ ಮತ್ತು ನೀತಿಗಳನ್ನು ಮಂದಗಾಮಿಗಳು ಬಯಲಿಗೆಳೆದರು. ಭಾರತೀಯರ ಆಸಕ್ತಿಗಳನ್ನು ಪರಿಗಣಿಸುವುದು ಸರಕಾರದ ಕರ್ತವ್ಯವೆಂಬುದನ್ನು ತೋರಿಸಿಕೊಡುವುದರಲ್ಲಿ ಅವರು ಸಫಲರಾದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆ ಮತ್ತು ಮಂದಗಾಮಿ ನಾಯಕತ್ವದ ಏಳಿಗೆ ಬ್ರಿಟಿಷ್ ವಸಾಹತುಶಾಹಿ ಆಡಳಿತದ ವಿರುದ್ಧ ಭಾರತದ ಉದಯಕ್ಕೆ ಅಡಿಪಾಯವನ್ನು ಹಾಕಿತು.

ದ್ವಿತೀಯ ಹಂತ (ತೀವ್ರಗಾಮಿಗಳ ಯುಗ– 1905–1920):

1905–1920ರ ಅವಧಿಯನ್ನು ತೀವ್ರಗಾಮಿಗಳ ಯುಗ ಎಂದು ಕರೆಯಲಾಗಿದೆ. ಮಂದಗಾಮಿಗಳಿಗೆ ಹೋಲಿಸಿದರೆ ತೀವ್ರಗಾಮಿಗಳು ಕ್ರಾಂತಿಕಾರಿಗಳು ಹಾಗೂ ಹೋರಾಟದ ಪ್ರವೃತ್ತಿವುಳ್ಳವರಾಗಿದ್ದರು ಆದ್ದರಿಂದ ಅವರನ್ನು 'ತೀವ್ರಗಾಮಿಗಳು' ಅಥವಾ 'ಕ್ರಾಂತಿಕಾರಿ ರಾಷ್ಟ್ರೀಯವಾದಿ'ಗಳೆಂದು ಕರೆಯಲಾಗಿದೆ. ಅವರು ಬ್ರಿಟಿಷರನ್ನು ವಿದೇಶಿ ಆಕ್ರಮಣಕಾರರೆಂದು ಅವರನ್ನು ಯಾವುದೇ ಮಾರ್ಗದಿಂದಲಾದರೂ ಹೊರಗಟ್ಟಬೇಕೆಂದು ಪರಿಗಣಿಸಿದ್ದರು.

ಲಾಲಾ ಲಜಪತ್‌ರಾಯ್, ಬಾಲಗಂಗಾಧರ ತಿಲಕ್ ಮತ್ತು ಬಿಪಿನ್‌ಚಂದ್ರ ಪಾಲ್ ತೀವ್ರಗಾಮಿಗಳ ಪ್ರಮುಖ ನಾಯಕರಾಗಿದ್ದರು. ಈ ಮೂವರೂ ಲಾಲ್–ಬಾಲ್–ಪಾಲ್ ಎಂದು ಜನಪ್ರಿಯರಾಗಿದ್ದರು.



ಲಾಲಾ ಲಜಪತ್ ರಾಯ್



ಬಾಲಗಂಗಾಧರ ತಿಲಕ್



ಬಿಪಿನ್ ಚಂದ್ರಪಾಲ್

ತೀವ್ರಗಾಮಿಗಳ ಉದಯಕ್ಕೆ ಪ್ರಮುಖ ಕಾರಣಗಳು:

1. ಮಂದಗಾಮಿಗಳು ತಮ್ಮ ಸಂವಿಧಾನಾತ್ಮಕ ಕ್ರಮಗಳಾದ ಪ್ರಾರ್ಥನೆ, ಬಿನ್ನಹ ಮತ್ತು ಪ್ರತಿಭಟನೆಗಳಿಂದ ಯಾವುದೇ ಫಲಿತಾಂಶವನ್ನು ಸಾಧಿಸುವಲ್ಲಿ ವಿಫಲರಾದರು. ಇದು ತೀವ್ರಗಾಮಿಗಳನ್ನು ಸಿಟ್ಟಿಗೆಬ್ಬಿಸಿತು ಮತ್ತು ಮಂದಗಾಮಿಗಳೇ ಬ್ರಿಟಿಷರ ವರ್ತನೆಯಿಂದ ಭ್ರಮನಿರಸನಗೊಂಡಿದ್ದರು. ಒಬ್ಬ ವಿದೇಶೀ ದಾಳಿಕೋರರೊಂದಿಗಿನ ಮಂದಗಾಮಿಗಳ ನಡೆಯನ್ನು ತೀವ್ರಗಾಮಿಗಳು 'ರಾಜಕೀಯ ಭಿಕ್ಷಾಟನೆ' ಎಂದು ಕರೆದರು.

2. 1896–98 ಮತ್ತು 1899–1901ರ ಕ್ಷಾಮದ ನಿರ್ವಹಣೆಯಲ್ಲಿ ಬ್ರಿಟಿಷರ ಉದಾಸೀನತೆಯಿಂದ ಸಾವಿರಾರು ಭಾರತೀಯರ ಮರಣವಾಯಿತು. ಬ್ರಿಟಿಷರು ಭಾರತವನ್ನು ಆರ್ಥಿಕವಾಗಿ ಶೋಷಿಸುವುದರಲ್ಲಿ ಮಾತ್ರ ಆಸಕ್ತರಾಗಿದ್ದು ಜನರ ಯೋಗಕ್ಷೇಮದಲ್ಲಲ್ಲ ಎಂಬುದನ್ನು ಇದು ತೋರಿಸಿತು. ಪ್ಲೇಗ್ ಕಮಿಷನರ್ ರ್ಯಾಂಡ್‌ನ ಕೊಲೆ ಭಾರತೀಯರ ಈ ಆಕ್ರೋಶಕ್ಕೆ ಸಾಕ್ಷಿಯಾಯಿತು. ರ್ಯಾಂಡ್‌ನ ಸಾವಿಗೆ ಕಾರಣರೆಂದು ತಿಲಕರನ್ನು ಬಂಧಿಸಲಾಯಿತು. ಇದು ಕ್ರಾಂತಿಕಾರಿ ರಾಷ್ಟ್ರೀಯತೆಯನ್ನು ಮತ್ತಷ್ಟು ಹೆಚ್ಚಿಸಿತು.

3. ಕಲ್ಕತ್ತಾ ಕಾರ್ಪೋರೇಷನ್ ಆಕ್ಟ್ (1899), ಅಫಿಷಿಯಲ್ ಸೀಕ್ರೆಟ್ಸ್ ಆಕ್ಟ್ (1904) ಮತ್ತು ಇಂಡಿಯನ್ ಯೂನಿವರ್ಸಿಟೀಸ್ ಆಕ್ಟ್ (1904) ಗಳಂತಹ ಪ್ರತಿಗಾಮಿ ಕ್ರಮಗಳನ್ನು ವೈಸರಾಯ್ ಲಾರ್ಡ್ ಕರ್ಜನ್ ಜಾರಿಗೊಳಿಸಿದನು. ಅವನ ಕಾರ್ಯಗಳು ಭಾರತೀಯರನ್ನು ಹತ್ತಿಕ್ಕಿ ಬ್ರಿಟಿಷರ ಪ್ರಭುತ್ವವನ್ನು ಹೆಚ್ಚಿಸಿತು. ಕರ್ಜನ್ 1905ರ ಅಕ್ಟೋಬರ್ 16 ರಂದು ಬಂಗಾಳವನ್ನು ಪೂರ್ವ ಬಂಗಾಳ (ಈಗಿನ ಬಾಂಗ್ಲಾದೇಶ) ಮತ್ತು ಪಶ್ಚಿಮ ಬಂಗಾಳ ಎಂದು ವಿಭಜಿಸಿದನು. ಪೂರ್ವ ಬಂಗಾಳದಲ್ಲಿ ಮುಸ್ಲಿಮರ ಜನಸಂಖ್ಯೆ ಹೆಚ್ಚಿದ್ದರೆ ಪಶ್ಚಿಮ ಬಂಗಾಳದಲ್ಲಿ ಹಿಂದುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬ್ರಿಟಷರು ಉತ್ತಮ ಆಡಳಿತವನ್ನು ನೀಡುವ ನೆಪವೊಡ್ಡಿ ವಿಭಜನೆ ಮಾಡಿದ್ದು ಹಿಂದೂ–ಮುಸ್ಲಿಂ ಐಕ್ಯತೆಯನ್ನು ಒಡೆಯುವ ಉದ್ದೇಶದಿಂದಾಗಿತ್ತು. ಭಾರತೀಯ ಜನಸಮೂಹದ ಕೋಪೋದ್ರಿಕ್ತ ಪ್ರತಿಕ್ರಿಯೆ ತೀವ್ರಗಾಮಿಗಳನ್ನು ಪ್ರೋತ್ಸಾಹಿಸಿತು.

4. ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿ, ಅರಬಿಂದೋ ಘೋಷ್, ಬಾಲಗಂಗಾಧರ ತಿಲಕ್, ಬಂಕಿಮ್ ಚಂದ್ರ ಚಟರ್ಜಿ ಮತ್ತಿತರ ನಾಯಕರ ಪ್ರಯತ್ನಗಳು ಭಾರತೀಯರಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಾಭಿಮಾನವನ್ನು ಮೂಡಿಸಿದವು. ಬಾಲಗಂಗಾಧರ ತಿಲಕರು ಸಾರ್ವಜನಿಕ ಗಣೇಶೋತ್ಸವ ಹಾಗೂ

ಶಿವಾಜಿ ಜಯಂತಿಗಳನ್ನು ಆರಂಭಿಸಿದ್ದು ರಾಷ್ಟ್ರೀಯ ಭಾವನೆಗಳನ್ನು ಪ್ರೋತ್ಸಾಹಿಸಿತು.

5. ಅಂತರಾಷ್ಟ್ರೀಯ ಪ್ರಭಾವ: ಇಟಲಿ ಮತ್ತು ಜರ್ಮನಿಯ ಸಫಲ ಸ್ವಾತಂತ್ರ್ಯ ಹಾಗೂ ಏಕೀಕರಣ ಚಳುವಳಿಗಳು, 1905 ರಲ್ಲಿ ಸಣ್ಣ ದೇಶ ಜಪಾನ್‌ನಿಂದ ಬೃಹತ್ ರಷ್ಯಾದ ಸೋಲು, ಈಜಿಪ್ಟ್, ಟರ್ಕಿ, ಪರ್ಷಿಯಾ ಮತ್ತು ಚೀನಾದ ರಾಷ್ಟ್ರೀಯ ಚಳುವಳಿಗಳಂತಹ ಜಾಗತಿಕ ಘಟನೆಗಳು ಭಾರತೀಯರ ಆಲೋಚನೆಯ ಮೇಲೆ ಪ್ರಭಾವ ಬೀರಿದವು. ತಾವೂ ಕೂಡ ಒಗ್ಗಟ್ಟಾಗಿ ಬ್ರಿಟಿಷರನ್ನು ಓಡಿಸಬಹುದೆಂದು ರಾಷ್ಟ್ರೀಯವಾದಿಗಳು ಯೋಚಿಸಲಾರಂಭಿಸಿದರು.

ಕೆಲವು ಪ್ರಮುಖ ಘಟನೆಗಳು:

1. ಬಂಗಾಳದ ವಿಭಜನೆ (1905): ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸಿ 1905 ರಲ್ಲಿ ಬಂಗಾಳವನ್ನು ವಿಭಜಿಸಿದರು. ಅವರು ಹಿಂದೂ ಮತ್ತು ಮುಸ್ಲಿಂರ ನಡುವೆ ಒಡಕನ್ನು ಉಂಟುಮಾಡುವ ಉದ್ದೇಶವನ್ನು ಹೊಂದಿದ್ದರು. ಇದನ್ನು ತೀವ್ರವಾಗಿ ವಿರೋಧಿಸಿದ ಜನರು ವಿಭಜನಾ ವಿರೋಧಿ ಚಳುವಳಿಗಳಲ್ಲಿ ಭಾಗಿಗಳಾದರು. ವಿದೇಶೀ ವಸ್ತುಗಳ ಬಹಿಷ್ಕಾರ ಮತ್ತು 'ಸ್ವದೇಶಿ' (ಭಾರತೀಯ ವಸ್ತುಗಳನ್ನು ಮಾತ್ರ ಉಪಯೋಗಿಸುವುದು) ಪ್ರತಿಭಟನಾ ಚಳುವಳಿಗಳು ಆರಂಭವಾದವು. ಕೊನೆಗೆ ಬ್ರಿಟಿಷರು 1911 ರಲ್ಲಿ ಬಂಗಾಳದ ವಿಭಜನೆಯನ್ನು ರದ್ದುಗೊಳಿಸಬೇಕಾಯಿತು.

ಬಂಗಾಳದ ವಿಭಜನೆಯನ್ನು 1903ರ ಡಿಸೆಂಬರ್ ಹೊತ್ತಿಗೇ ಘೋಷಿಸಲಾಯಿತಾದರೂ, ಅದು 1905ರ ಅಕ್ಟೋಬರ್ 16 ರಂದು ಸಾರ್ವಜನಿಕ ಪ್ರತಿಕ್ರಿಯೆಗೆ ವಿರುದ್ಧವಾಗಿ ರಾಜ ಘೋಷಣೆಯೊಂದಿಗೆ ಜಾರಿಗೆ ಬಂದಿತು. ಧರ್ಮದ ಆಧಾರದ ಮೇಲೆ ಬಂಗಾಳದ ವಿಭಜನೆಯ ವಿರುದ್ಧದ ಆಕ್ರೋಶ ಬೃಹತ್ ರೀತಿಯಲ್ಲಿ ವಿಭಜನಾ ವಿರೋಧಿ ಚಳುವಳಿಯಾಗಿ ಪರಿವರ್ತನೆಯಾಯಿತು. ಚಳುವಳಿ ಹಿಂಸಾತ್ಮಕ ಪ್ರತಿಭಟನೆಗಳು, ಸ್ವದೇಶಿ ಮತ್ತು ಬಹಿಷ್ಕಾರ ಚಳುವಳಿಗಳು, ಶಾಲೆಗಳು, ಕಾಲೇಜುಗಳು, ನ್ಯಾಯಾಲಯಗಳು, ಸರ್ಕಾರಿ ಕಛೇರಿಗಳು, ನಗರಸಭೆಗಳ ಬಹಿಷ್ಕಾರ ಹಾಗೂ ರಾಖಿ ಕಟ್ಟುವುದರ ಮೂಲಕ ಒಗ್ಗಟ್ಟು ತೋರಿಸುವುದರಲ್ಲಿ ವ್ಯಕ್ತವಾಯಿತು. ಬಂಕಿಂಚಂದ್ರ ಚಟರ್ಜಿಯವರು ರಚಿಸಿದ 'ವಂದೇ ಮಾತರಂ' ಹಾಡುವುದು ಸಾಮಾನ್ಯವಾಯಿತು. ಸ್ವದೇಶಿ ಮತ್ತು ಬಹಿಷ್ಕಾರ ಚಳುವಳಿಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳ ಮೇಲೆ ವಿದ್ಯಾರ್ಥಿ ವೇತನಗಳನ್ನು ಹಿಂತೆಗೆದುಕೊಳ್ಳುವುದು, ದಂಡ ವಿಧಿಸುವುದು, ದಸ್ತಗಿರಿ, ಹೊಡೆತ ಮುಂತಾದ ಕಠಿಣ ಶಿಸ್ತು ಕ್ರಮಗಳನ್ನು ಬ್ರಿಟಿಷರು ಕೈಗೊಂಡರು. ಪ್ರತಿಭಟನೆಗಳು ಶೀಘ್ರವೇ ದೇಶದ ಇತರ ಭಾಗಗಳಾದ ದೆಹಲಿ, ಬೊಂಬಾಯಿ ಮತ್ತು ಮದ್ರಾಸ್‌ಗಳಿಗೂ ಹಬ್ಬಿತು. ಸರ್ಕಾರವು 'ವಂದೇ ಮಾತರಂ' ಹಾಡುವುದನ್ನು ನಿಷೇಧಿಸಿತಾದರೂ ಅದನ್ನು ತಡೆಯಲಾಗಲಿಲ್ಲ. ಕೊನೆಗೆ 1911ರ ಡಿಸೆಂಬರ್ 12ರ ದೆಹಲಿ ದರ್ಬಾರಿನಲ್ಲಿ (ದೊರೆ 5ನೆ ಜಾರ್ಜ್ ಸಿಂಹಾಸನಕ್ಕೇರಿದ್ದರ ಸಲುವಾಗಿ ನಡೆದದ್ದು) ಬಂಗಾಳದ ವಿಭಜನೆಯನ್ನು ರದ್ದುಗೊಳಿಸುವ ಮತ್ತು ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವ ವಿಷಯವನ್ನು ಪ್ರಕಟಿಸಲಾಯಿತು. ಜನರ ಕ್ರಾಂತಿಕಾರಿ ಪ್ರತಿಕ್ರಿಯೆಯಿಂದ ಬ್ರಿಟಿಷರು ಎಷ್ಟು ಗಲಿಬಿಲಿಗೊಂಡರೆಂದರೆ ದೆಹಲಿ ದರ್ಬಾರಿನಲ್ಲಿಯೆ ಕಲ್ಕತ್ತಾದಿಂದ ದೆಹಲಿಗೆ ರಾಜಧಾನಿಯನ್ನು ವರ್ಗಾಯಿಸಿದ್ದನ್ನು ಘೋಷಿಸಲಾಯಿತು.

2. ಸೂರತ್ ಒಡಕು (1907): ತೀವ್ರಗಾಮಿಗಳು ಮತ್ತು ಮಂದಗಾಮಿಗಳಲ್ಲಿ ಅಧ್ಯಕ್ಷರ ಚುನಾವಣೆ, ಉದ್ದೇಶಗಳ ನಿಶ್ಚಯ ಮತ್ತು ಕಾಂಗ್ರೆಸ್‌ನ ನಿರ್ಣಯಗಳನ್ನು ಜಾರಿಗೆ ತರುವ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು.

1906ರ ಕಾಂಗ್ರೆಸ್ ಅಧಿವೇಶನಕ್ಕೆ ತೀವ್ರಗಾಮಿ ನಾಯಕನನ್ನು ಅಧ್ಯಕ್ಷನಾಗಿ ಮಾಡಲು ಬೇಡಿಕೆ ಇತ್ತು. ಕೊನೆಗೆ ಎರಡೂ ಗುಂಪುಗಳು ದಾದಾಬಾಯಿ ನವರೋಜಿಯವರ ಅಧ್ಯಕ್ಷತೆಗೆ ಒಪ್ಪಿದವು. 'ಸ್ವರಾಜ್' (ಸ್ವಯಮಾಡಳಿತ) ಕಾಂಗ್ರೆಸ್‌ನ ಗುರಿ ಎಂದು ಘೋಷಿಸುವಂತೆ ಮಾಡುವಲ್ಲಿ ತೀವ್ರಗಾಮಿಗಳು ಸಫಲರಾದರು. 1907ರ ಸೂರತ್ ಅಧಿವೇಶನದಲ್ಲಿ ಮತ್ತೆ ಭಿನ್ನಾಭಿಪ್ರಾಯಗಳು ಮೂಡಿದವು. ಮಂದಗಾಮಿಗಳು ರಾಸ್ ಬಿಹಾರಿ ಘೋಷ್‌ರವರು ಅಧ್ಯಕ್ಷರಾಗಬೇಕೆಂಬುದು ಬಯಸಿದರೆ, ತೀವಗ್ರಾಮಿಗಳು ಲಾಲಾಲಜಪತ್ ರಾಯ್ ಅವರನ್ನು ಅಧ್ಯಕ್ಷರನ್ನಾಗಿಸಲು ಬಯಸಿದರು. ಎರಡೂ ಗುಂಪುಗಳೂ ಹೊಂದಾಣಿಕೆಯಾಗಲು ನಿರಾಕರಿಸಿದ್ದರಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಒಡಕುಂಟಾಯಿತು. ಇದು 'ಸೂರತ್ ಒಡಕು' ಎಂದು ಜನಪ್ರಿಯವಾಗಿದೆ. ತೀವ್ರಗಾಮಿಗಳನ್ನು ಸದೆ ಬಡಿಯಲು ಬ್ರಿಟಿಷರು ಅನೇಕ ಕ್ರಮಗಳನ್ನು ಕೈಗೊಂಡರು ಹಾಗು ಸೆಡಿಷಿಯಸ್ ಮೀಟಿಂಗ್ಸ ಆಕ್ಟ್ (1907), ಇಂಡಿಯನ್ ನ್ಯೂಸ್ ಪೇಪರ್ (ಇನ್ಸೈಟ್‌ಮೆಂಟ್ ಟು ಅಫೆನ್ಸಸ್ ಆಕ್ಟ್ (1908), ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟ್ (1908), ಇಂಡಿಯನ್ ಪ್ರೆಸ್ ಆಕ್ಟ್ (1910) ಮತ್ತಿತರ ಕಾಯಿದೆಗಳನ್ನು ಜಾರಿಗೆ ತಂದರು. ಎ.ಸಿ.ಮಜುಂದಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ತೀವ್ರಗಾಮಿಗಳು ಮಂದಗಾಮಿಗಳು ಮತ್ತೆ ಒಂದಾದರು.


3. ಕ್ರಾಂತಿಕಾರಿ ಚಟುವಟಿಕೆಗಳು: ಬ್ರಿಟಿಷರ ದಮನಕಾರಿ ನೀತಿಗಳು ಕ್ರಾಂತಿಕಾರಿ ಚಟುವಟಿಕೆಗಳನ್ನು ಉತ್ತೇಜಿಸಿತು. ಕ್ರಾಂತಿಕಾರಿಗಳು ತೀವ್ರ ರಾಷ್ಟ್ರೀಯವಾದಿಗಳಾಗಿದ್ದು ಜಡ ಪ್ರತಿರೋಧಗಳಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಬ್ರಿಟಿಷರನ್ನು ಭಾರತದಿಂದ ಓಡಿಸಲು ಅವರು ಹಿಂಸಾತ್ಮಕ ಚಟುವಟಿಕೆಗಳಿಗೂ ಸಿದ್ಧರಿದ್ದರು. ಅನೇಕ ಗುಪ್ತ ಸಂಘಗಳು ತಲೆಯೆತ್ತಿದವು ಮತ್ತು ಕೊಲೆಗಳು, ಬಾಂಬ್ ದಾಳಿಗಳು, ಶಸ್ತ್ರಾಸ್ತ್ರಗಳ ಮತ್ತು ಖಜಾನೆಯ ಲೂಟಿ, ಮುಂತಾದವುಗಳನ್ನು ಮಾಡಲಾರಂಭಿಸಿದರು. ಕ್ರಾಂತಿಕಾರಿಗಳು ಕೋಲಾಹಲವನ್ನುಂಟು ಮಾಡುವಲ್ಲಿ ಸಫಲರಾದರು, ಆದರೆ ಅವರಲ್ಲಿ ಬಹುತೇಕರನ್ನು ದಸ್ತಗಿರಿ ಮಾಡಲಾಯಿತು, ಗಡಿಪಾರು ಮಾಡಲಾಯಿತು, ಕೊಲ್ಲಲಾಯಿತು ಇಲ್ಲವೇ ನೇಣು ಹಾಕಲಾಯಿತು.


ಕೆಲವು ಕ್ರಾಂತಿಕಾರಿ ಚಟುವಟಿಕೆಗಳು:

1. ಇಬ್ಬರು ಅಪ್ರಿಯ ಬ್ರಿಟಿಷ್ ಅಧಿಕಾರಿಗಳಾದ ಪ್ಲೇಗ್ ಕಮಿಷನರ್ ರ್ಯಾಂಡ್ ಮತ್ತು ಲೆಫ್ಟಿನೆಂಟ್ ಐರೆಸ್ಟ್‌ರನ್ನು 1897ರಲ್ಲಿ ಚಾಪೇಕರ್ ಸಹೋದರರು ಕೊಲೆಗೈದರು.
2. 1908ರಲ್ಲಿ ಕುದಿರಾಮ್ ಭೋಸ್ ಹಾಗು ಪ್ರಫುಲ್ಲ ಚಾಕಿ ಮುಜಫರ್‌ಪುರದ ನ್ಯಾಯಾಧೀಶ ಕಿಂಗ್ಸ್‌ಫೋರ್ಡ್‌ನು ಸಾರೋಟಿನಲ್ಲಿರುವನೆಂಬ ತಪ್ಪು ತಿಳಿವಳಿಕೆಯಿಂದ ಎಸೆದ ಬಾಂಬಿನಿಂದ ಕೆಲ ಬ್ರಿಟಿಷರು ಮರಣ ಹೊಂದಿದರು
3. ಪುಲಿನ್ ದಾಸ್ 1908ರಲ್ಲಿ ಭಾರಾಹ್ ಡಕಾಯತಿಗೆ ಕಾರಣರಾದರು.
4. 1912ರಲ್ಲಿ ದೆಹಲಿಯಲ್ಲಿ ರಾಷ್‌ಬಿಹಾರಿ ಬೋಸ್ ಹಾಗು ಸಚಿನ್ ಸಾನ್ಯಾಲ್‌ರು ಬಾಂಬ್ ದಾಳಿಯಿಂದ ವೈಸರಾಯ್ ಹಾರ್ಡಿಂಜ್‌ನನ್ನು ಗಾಯಗೊಳಿಸಿದರು.
5. ಮದನ್‌ಲಾಲ್ ಡಿಂಗ್ರಾ 1909ರಲ್ಲಿ ಕರ್ಜನ್ ವೈಲಿನನ್ನು ಲಂಡನ್‌ನಲ್ಲಿ ಕೊಲೆ ಮಾಡಿದರು.

ಕೆಲವು ರಹಸ್ಯ ಸಂಘಗಳು–ಎ) ಅನುಶೀಲನ್ ಸಮಿತಿ – ಪ್ರೋಮಿತ ಮಿತ್ತರ್ – ಕಲ್ಕತ್ತ ಬಿ) ಯುಗಾಂತರ್ ಸಿ) ಅಭಿನವ್ ಭಾರತ–ವಿ.ಡಿ. ಸಾವರ್ಕರ್ ಡಿ) ಮಿತ್ರ ಮೇಳ – ವಿ.ಡಿ. ಸಾವರ್ಕರ್

1920ರ ನಂತರವೂ ಕ್ರಾಂತಿಕಾರಿ ಚಟುವಟಿಕೆಗಳು ಮುಂದುವರೆದವು. ಭಗತ್ ಸಿಂಗ್, ರಾಜಗುರು, ಸುಖದೇವ್, ಭಾಗಜತಿನಿ, ಚಂದ್ರಶೇಖರ ಆಜಾದ್ ಮುಂತಾದವರು ಪ್ರಮುಖರು.


ವಿ.ಡಿ. ಸಾವರ್ಕರ್


ಚಂದ್ರಶೇಖರ ಆಜಾದ್


ಭಗತ್‌ಸಿಂಗ್

4. ಕೋಮುವಾದದ ಬೆಳವಣಿಗೆ – ನವಾಬ ಆಗಾಖಾನ್, ನವಾಬ್ ಮೋಹ್ಸಿನ್ ಉಲ್ ಮುಲ್ಕ್ ಮತ್ತಿತರರು 1906ರಲ್ಲಿ ಅಖಿಲ ಭಾರತ ಮುಸ್ಲಿಂ ಲೀಫ್ (All India Muslim League-AIML) ಸ್ಥಾಪಿಸಿದರು. ಇದು ಶ್ರೀಮಂತ ನವಾಬರು, ಭೂಮಾಲೀಕರು ಮತ್ತು ಸುಶಿಕ್ಷಿತ ಮುಸ್ಲಿಂರ ಒಂದು ಭಾಗವನ್ನು ಪ್ರತಿನಿಧಿಸಿತ್ತು. ಲೀಗ್ ಬ್ರಿಟಿಷರಿಗೆ ನಿಷ್ಠೆ ವ್ಯಕ್ತಪಡಿಸಿತಲ್ಲದೇ, ಬಂಗಾಳದ ವಿಭಜನೆಯನ್ನು ಒಪ್ಪಿಕೊಂಡಿತು ಹಾಗು ಮುಸ್ಲಿಂರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಕೋರಿತು. ಪಂಜಾಬ್ ಹಿಂದೂ ಸಭಾ 1909ರಲ್ಲಿ ಸ್ಥಾಪಿತವಾಯಿತು. ಅಖಿಲ ಭಾರತ ಹಿಂದೂ ಮಹಾಸಭಾದ ಪ್ರಥಮ ಅಧಿವೇಶನ 1909ರಲ್ಲಿ ಖಾಸಿಂಬಜಾರದ ಮಹಾರಾಜರ ನೇತೃತ್ವದಲ್ಲಿ ನಡೆಯಿತು. ಮುಸ್ಲಿಂ ಲೀಗ್‌ನಂತೆಯೇ ಹಿಂದೂ ಮಹಾ ಸಭಾ ಸಹ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ವಿರೋಧಿಯಾಗಿತ್ತು.


5. ಮಾರ್ಲೆ–ಮಿಂಟೊ ಸುಧಾರಣೆಗಳು–1909: ಅಂದು ಸೆಕ್ರೆಟರಿ ಆಫ್ ಸ್ಟೇಟ್ ಜಾನ್ ಮಾರ್ಲೆ ಮತ್ತು ವೈಸರಾಯ್ ಮಿಂಟೊ ಅವರಾಗಿದ್ದರಿಂದ ಇದನ್ನು ಅವರ ಹೆಸರಿನಲ್ಲಿ ಕರೆಯಲಾಗಿದೆ. ಈ ಕಾಯ್ದೆಯು ಕೇಂದ್ರೀಯ ಹಾಗು ಪ್ರಾಂತೀಯ ಸಭೆಗಳಿಗೆ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿತು. ಆದರೆ ಸಭೆಗಳಲ್ಲಿನ ಚುನಾವಣೆ ರಹಿತ ಸದಸ್ಯರು ಹಾಗು ಅಧಿಕಾರಿಗಳ ಸಂಖ್ಯೆಗಿಂತ ಚುನಾಯಿತ ಸದಸ್ಯರ ಸಂಖ್ಯೆ ಕಡಿಮೆಯಾಗಿಯೇ ಉಳಿಯಿತು. ಇದು ಮುಸ್ಲಿಂರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ನೀಡಿತು. ಹೀಗೆ ಮುಸ್ಲಿಂರಿಗೆ ಕಾಯ್ದಿಟ್ಟ ಸ್ಥಾನಗಳು ಅವರ ಜನಸಂಖ್ಯೆಗಿಂತ ಹೆಚ್ಚಾಗಿತ್ತು. ಮುಸ್ಲಿಂರಿಗೆ ಕಾಯ್ದಿರಿಸಿದ ಸ್ಥಾನಗಳಿಗೆ ಮತ ಚಲಾಯಿಸುವ ಹಕ್ಕನ್ನು ಮುಸ್ಲಿಂರಿಗೆ ಮಾತ್ರ ನೀಡಲಾಯಿತು.

6. ಹೋಂ ರೂಲ್ ಲೀಗ್– ಶ್ರೀಮತಿ ಆನಿ ಬೆಸೆಂಟ್ ಮತ್ತು ಬಾಲ ಗಂಗಾಧರ ತಿಲಕರು ಹೋಂ ರೂಲ್ ಲೀಗ್ ಚಳುವಳಿಯನ್ನು 1916 ರಲ್ಲಿ ಆರಂಭಿಸಿದರು. ಸಾರ್ವಜನಿಕ ಸಭೆಗಳು, ಚರ್ಚೆಗಳು, ಭಾಷಣಗಳು, ಕರಪತ್ರಗಳು, ವೃತ್ತಪತ್ರಿಕೆಗಳು, ನಾಟಕಗಳು, ಧಾರ್ಮಿಕ ಸಮಾರಂಭಗಳು, ಮುಂತಾದವುಗಳ ಮೂಲಕ ಹೋಂ ರೂಲ್‌ನ ಸಂದೇಶವನ್ನು ಲೀಗ್ ಹರಡಿತು. ಈ ಚಳುವಳಿಯ ಸಂದರ್ಭದಲ್ಲಿಯೇ ತಿಲಕರು ಜನಪ್ರಿಯ ಘೋಷಣೆ "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ನಾನು ಅದನ್ನು ಪಡೆದೇ ತೀರುತ್ತೇನೆ"ಯನ್ನು ನೀಡಿದರು. ಈ ಚಳುವಳಿಯು ಬಹಳ ಜನಪ್ರಿಯವಾಯಿತು. ಆದ್ದರಿಂದ ಬ್ರಿಟಿಷರು ಆನಿ ಬೆಸೆಂಟ್‌ರನ್ನು ದಸ್ತಗಿರಿ ಮಾಡಿದರು ಆದರೆ ಜನಾಂದೋಲನದ ಒತ್ತಡದಿಂದಾಗಿ ಬಿಡುಗಡೆ ಮಾಡಬೇಕಾಯಿತು.

7. ಮಾಂಟೇಗೊ–ಚೆಮ್ಸ್‌ಫೋರ್ಡ್ ಸುಧಾರಣೆಗಳು–1919: 1919ರ ಈ ಸುಧಾರಣೆಗಳು ದ್ವಿಸದನ (ಎರಡು ಮನೆಗಳ) ಶಾಸನ ಸಭೆಗಳನ್ನು ಜಾರಿಗೊಳಿಸಿತು. 144 ಸದಸ್ಯರ ಕೇಂದ್ರ ಸಭೆ (ಕೆಳ ಮನೆ) ಈಗ 104 ಚುನಾಯಿತ ಮತ್ತು 40 ನೇಮಿತ ಸದಸ್ಯರನ್ನೊಳಗೊಂಡಿತು. ಅಂತೆಯೇ ರಾಜ್ಯ ಸಭೆ (ಮೇಲ್ಮನೆ) 34 ಚುನಾಯಿತ ಹಾಗು 26 ನೇಮಿತ ಸದಸ್ಯರನ್ನೊಳಗೊಂಡಿತ್ತು.

ತೃತೀಯ ಹಂತ (ಗಾಂಧಿ ಯುಗ 1920–1947):

ತೃತೀಯ ಹಂತದ ರಾಷ್ಟ್ರೀಯ ಚಳುವಳಿಯಲ್ಲಿ ಮಹಾತ್ಮ ಗಾಂಧಿ ಮಹತ್ತರ ಪಾತ್ರವಹಿಸಿದರು. ರೈತರು, ಕಾರ್ಮಿಕರು ಹಾಗು ಇತರೆ ಜನಸಾಮಾನ್ಯರನ್ನು ಜೊತೆಗೂಡಿಸಿಕೊಂಡು ವಿಶಾಲ ಬುನಾದಿಯನ್ನೊದಗಿಸಿದರು. ಅವರು ಭಾರತದ ಜನತೆಗೆ ರಾಜಕೀಯ ಶಿಕ್ಷಣ ನೀಡಿದರಲ್ಲದೆ ಪ್ರಬಲ ಬ್ರಿಟಿಷ್ ಸಾಮ್ರಾಜ್ಯದೊಡನೆ ಹೋರಾಡಲು 'ಸತ್ಯಾಗ್ರಹ'ವೆಂಬ ಅಸ್ತ್ರವೊಂದನ್ನು ನೀಡಿದರು. ಅವರು ಚಳುವಳಿಯನ್ನು ಯಶಸ್ವಿಯಾಗಿ ಮುನ್ನಡೆಸಿದರು ಹಾಗು ಮುಖಂಡರಲ್ಲಿ ಪ್ರಮುಖರಾಗಿದ್ದರಾದ್ದರಿಂದ ಈ ಹಂತದ ರಾಷ್ಟ್ರೀಯ ಚಳುವಳಿಯು 'ಗಾಂಧಿ ಯುಗ' ಎಂದು ಜನಪ್ರಿಯವಾಗಿದೆ.



ಮಹಾತ್ಮಾ ಗಾಂಧಿ

ಸತ್ಯಾಗ್ರಹ: ಅಲ್ಪಸಂಖ್ಯಕ 'ಬಿಳಿಯ'ರನ್ನೊಳಗೊಂಡ ದಕ್ಷಿಣ ಆಫ್ರಿಕಾ ಸರ್ಕಾರವು 'ವರ್ಣಬೇಧ' ನೀತಿಯನ್ನು ಅನುಸರಿಸುತ್ತಿತ್ತು. ದಮನಕಾರಿ ಕ್ರಮಗಳನ್ನು ಅನುಸರಿಸಿ ಬಹುಸಂಖ್ಯಕ 'ಕರಿಯ'ರನ್ನು ನಿಗ್ರಹಿಸಲಾಗುತ್ತಿತ್ತು. ಸಣ್ಣ ವ್ಯಾಪಾರಿಗಳು ಹಾಗು ಕಾರ್ಮಿಕರಾಗಿ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದ ಭಾರತೀಯರನ್ನು ಅಪಮಾನಗೊಳಿಸಲಾಗುತ್ತಿತ್ತು. ಸತ್ಯಾಗ್ರಹ ಅಥವಾ ಜಡ ಪ್ರತಿರೋಧದ ತಂತ್ರವನ್ನು ಮಹಾತ್ಮ ಗಾಂಧಿ ತಾವು ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದಾಗ ವಿಕಸಿಸಿದರು. ಗಾಂಧೀಜಿಯ ಪ್ರಕಾರ ಯಾವೊಬ್ಬ ವ್ಯಕ್ತಿಯೂ 'ಕೆಡಕು' ಅಥವಾ 'ತಪ್ಪಿಗೆ' ಎಂದೂ ತಲೆಬಾಗಬಾರದು ಮತ್ತು ಸತ್ಯ ಹಾಗು ಅಹಿಂಸೆಯ ಮೂಲಕ ಅದನ್ನು ಎದುರಿಸಬೇಕಲ್ಲದೇ, ಯಾವುದೇ ಪರಿಣಾಮಗಳನ್ನು ಎದುರಿಸಲೂ ಸಿದ್ಧರಿರಬೇಕು. ಇದು ಅಂತಿಮವಾಗಿ ಕೆಡಕು ಅಥವಾ ತಪ್ಪು ಮಾಡುವವನಲ್ಲಿ ಬದಲಾವಣೆಯನ್ನು ತರುತ್ತದೆ. ಸತ್ಯಾಗ್ರಹವನ್ನು ಕೇವಲ ಧೈರ್ಯಶಾಲಿಗಳು ಮಾತ್ರ ಅನುಸರಿಸಬಲ್ಲರೇ ಹೊರತು ದುರ್ಬಲರು ಅಥವಾ ಹೇಡಿಗಳಲ್ಲ ಎಂದು ಗಾಂಧೀಜಿ ನಂಬಿದ್ದರು.

ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ 1893 ರಿಂದ 1914 ರ ವರೆಗೆ ದಕ್ಷಿಣ ಆಫ್ರಿಕಾದಲ್ಲಿ ವಕೀಲಿಕೆಯನ್ನು ನಡೆಸಿದರು. ದಮನಕಾರಿ ದಕ್ಷಿಣ ಆಫ್ರಿಕಾ ಸರ್ಕಾರದ ವಿರುದ್ಧ ಹೋರಾಡಲು ಅವರು ಸತ್ಯಾಗ್ರಹ ತಂತ್ರವನ್ನು ವಿಕಸಿಸಿದರು. 1915ರಲ್ಲಿ ಭಾರತಕ್ಕೆ ಹಿಂದಿರುಗಿದ ಅವರು ಭಾರತಾದ್ಯಂತ ಪ್ರವಾಸ ಮಾಡಿ ಜನರ ಜೀವನ ಸ್ಥಿತಿಗತಿಗಳನ್ನು ತಿಳಿದುಕೊಂಡರು. ನಂತರ 1916ರಲ್ಲಿ ಅವರು ಅಹಮದಾಬಾದ್‌ನಲ್ಲಿ ಸಾಬರ್‌ಮತಿ ಆಶ್ರಮವನ್ನು ಸ್ಥಾಪಿಸಿದರು. ಇಲ್ಲಿ ಅವರು ಹಾಗು ಅವರ ಅನುಯಾಯಿಗಳು ಸತ್ಯ ಮತ್ತು ಅಹಿಂಸೆಯ ಆದರ್ಶಗಳನ್ನು ಅನುಸರಿಸಲಾರಂಭಿಸಿದರು. ಬಹುಬೇಗ ಅವರು ಮೂರು ಹೋರಾಟಗಳಲ್ಲಿ ಭಾಗವಹಿಸಿದರು.

1. **ಚಂಪಾರನ್ ಸತ್ಯಾಗ್ರಹ (1917):** ತಮ್ಮ ಒಟ್ಟು ಭೂಮಿಯ 3/20 ಭಾಗದಲ್ಲಿ (ತೀನ್‌ಕಾತಿಯ) ನೀಲಿಯನ್ನು ಬೆಳೆಯಲೇಬೇಕೆಂಬ ಒತ್ತಡದಲ್ಲಿದ್ದ ಚಂಪಾರನ್‌ದ ರೈತರ ಪರವಾಗಿ ಅವರು ಹೋರಾಡಿದರು. ರೈತರ

ಮೇಲೆ ಹೆಚ್ಚಿನ ಗೇಣಿ, ಅಕ್ರಮ ತೆರಿಗೆ ಬಾಕಿ ಸ್ಥಿರ ಬೆಲೆಗಳನ್ನು ತೋಟದ ಮಾಲೀಕರಾದ ಯುರೋಪಿಯನ್ನರು ಹೇರುತ್ತಿದ್ದರು. ಚಂಪಾರನ್‌ದಲ್ಲಿ ರೈತ ಚಳುವಳಿಯನ್ನು ಗಾಂಧೀಜಿ ಸಂಘಟಿಸಿದರು (ಮೊದಲ ಕಾಯ್ದೆ ಭಂಗ ಚಳುವಳಿ) ಹಾಗು ಬ್ರಿಟಿಷ್ ಸರ್ಕಾರವು ತೀನ್‌ಕಾತಿಯ ಪದ್ಧತಿಯನ್ನು ರದ್ದುಗೊಳಿಸಿ ಭಾರತೀಯ ರೈತರಿಗೆ ಪರಿಹಾರ ನೀಡುವಂತೆ ಮಾಡುವುದರಲ್ಲಿ ಯಶಸ್ವಿಯಾದರು.

2. **ಅಹಮದಾಬಾದ್ ಗಿರಣಿ ಮುಷ್ಕರ (1918):** ಸಂಬಳ ಹಾಗು ಬೋನಸ್ ಕುರಿತಾಗಿ ಅಹಮದಾಬಾದದ ಗಿರಣಿ ಮಾಲೀಕರು ಹಾಗು ಕಾರ್ಮಿಕರ ನಡುವೆ ವ್ಯಾಜ್ಯ ತಲೆದೋರಿತು. ಗಾಂಧೀಜಿ ಅಮರಣಾಂತ ಉಪವಾಸ ಕೈಗೊಂಡರು (ಮೊದಲನೆಯ ಉಪವಾಸ ಸತ್ಯಾಗ್ರಹ) ಮತ್ತು ಕಾರ್ಮಿಕರಿಗೆ ಪ್ರತಿಶತ 35ರಷ್ಟು ಸಂಬಳವನ್ನು ಹೆಚ್ಚಿಸಲು ಗಿರಣಿ ಮಾಲೀಕರನ್ನು ಒಪ್ಪಿಸಿದರು. ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡರು.

3. **ಖೇಡಾ ಸತ್ಯಾಗ್ರಹ (1918):** ಗುಜರಾತಿನ ರೈತರು 1918ರಲ್ಲಿ ತೀವ್ರ ಕ್ಷಾಮವನ್ನು ಎದುರಿಸಬೇಕಾಯಿತು. ಸಾಮಾನ್ಯ ಇಳುವರಿಗಿಂತ 1/4 ಭಾಗದಷ್ಟು ಕಡಿಮೆ ಬೆಳೆಯ ಇಳುವರಿ ಬಂದಾಗ ಕಂದಾಯ ಕಾನೂನುಗಳನ್ವಯ ರೈತರು ಕಂದಾಯ ತೆರಿಗೆಯ ಕಡಿತ ಇಲ್ಲವೇ ವಿನಾಯತಿಗೆ ಅರ್ಹರಾಗಿದ್ದರು. ಆದರೆ ಬ್ರಿಟಿಷ್ ಅಧಿಕಾರಿಗಳು ತೆರಿಗೆ ವಿನಾಯತಿ ಇಲ್ಲವೇ ಕಡಿತವಾಗಲಿ ನೀಡಲು ನಿರಾಕರಿಸಿದರು. ಗಾಂಧೀಜಿ ರೈತರ ನಾಯಕತ್ವವಹಿಸಿ ಕಂದಾಯ ಪಾವತಿಸದಿರುವಂತೆ (ಮೊದಲನೆಯ ಅಸಹಕಾರ ಚಳುವಳಿ) ಹಾಗು ಪರಿಣಾಮಗಳನ್ನು ಎದುರಿಸುವಂತೆ ತಿಳಿಸಿದರು. ಅಧಿಕಾರಿಗಳು ಅನಿವಾರ್ಯವಾಗಿ ಉದಾರರಾಗಬೇಕಾಯಿತು ಮತ್ತು ಪಾವತಿಸಲು ಶಕ್ಯರಿರುವವರಿಂದ ಮಾತ್ರ ಕಂದಾಯ ಸಂಗ್ರಹಿಸಬೇಕಾಯಿತು.

ಈ ಮೇಲಿನ ಚಳುವಳಿಗಳಿಂದ ಗಾಂಧೀಜಿ ಜನಸಮೂಹದೊಂದಿಗೆ ನಿಕಟ ಸಂಪರ್ಕ ಗಳಿಸಿದರು ಮತ್ತು ರೈತರು ಹಾಗು ಕಾರ್ಮಿಕರು ಇವರ ನಾಯಕತ್ವವನ್ನು ಒಪ್ಪಲಾರಂಭಿಸಿದರು.

ಜಲಿಯನ್‌ವಾಲಬಾಗ್ ಹತ್ಯಾಕಾಂಡ (1919): ಬ್ರಿಟಿಷ್ ಸರ್ಕಾರವು 1919ರಲ್ಲಿ ರೌಲೆಟ್ ಕಾಯ್ದೆಯನ್ನು ಜಾರಿಗೊಳಿಸಿತು. ಆಜ್ಞಾಪತ್ರವಿಲ್ಲದೇ ಯಾವುದೇ ವ್ಯಕ್ತಿಯನ್ನು ಬಂಧಿಸುವ ಹಾಗು ವಿಚಾರಣೆಯಿಲ್ಲದೇ ಅನಿರ್ದಿಷ್ಟಾವಧಿಯರೆಗೆ ಸೆರೆಮನೆಯಲ್ಲಿರಿಸುವ ಅಧಿಕಾರವನ್ನು ಇದು ಪೊಲೀಸರಿಗೆ ನೀಡಿತು. ಭಾರತೀಯರು ಇದನ್ನು ಪ್ರತಿಭಟನೆಗಳ ಮೂಲಕ ತೀವ್ರವಾಗಿ ವಿರೋಧಿಸಿದರು. 6 ಏಪ್ರಿಲ್ 1919ರಂದು ಬೃಹತ್ ಪ್ರತಿಭಟನೆಗೆ ಗಾಂಧೀಜಿ ಕರೆ ನೀಡಿದರು. ಮೆರವಣಿಗೆಗಳು, ಮುಷ್ಕರ, ಪ್ರತಿಭಟನೆ ಹಾಗು ರ್ಯಾಲಿಗಳ ರೂಪದಲ್ಲಿ ಭಾರತದ ಹಲವಾರು ಭಾಗಗಳಿಂದ ಉತ್ಸಾಹಭರಿತ ಪ್ರತಿಕ್ರಿಯೆ ವ್ಯಕ್ತವಾಯಿತು. ಬ್ರಿಟಿಷರು ಲಾಠಿ ಏಟು ಮತ್ತು ದಸ್ತಗಿರಿಗಳ ಮೂಲಕ ಪ್ರತಿಕ್ರಿಯಿಸಿದರು. ರೌಲತ್ ಕಾಯ್ದೆ ಮತ್ತು ನಾಯಕರಾದ ಸೈಫುದ್ದಿನ್ ಖಿಚ್ಲು ಮತ್ತು ಸತ್ಯಪಾಲರ ಬಂಧನದ ವಿರುದ್ಧ 13 ಏಪ್ರಿಲ್ 1919ರಂದು ಅಮೃತ್‌ಸರದ ಜಾಲಿಯನ್‌ವಾಲಾಬಾಗ್‌ನಲ್ಲಿ ಪ್ರತಿಭಟನಾ ಸಭೆಯನ್ನು ನಡೆಸಲಾಗಿತ್ತು. ಮಹಿಳೆಯರು, ಮಕ್ಕಳು ಮತ್ತು ವೃದ್ಧರನ್ನೊಳಗೊಂಡಿದ್ದ ನಿಶಸ್ತ್ರ ಪ್ರತಿಭಟನಾಕಾರರನ್ನು ಜನರಲ್ ಡಯರ್ ತನ್ನ ತುಕಡಿಯೊಂದಿಗೆ ಸುತ್ತುವರೆದು ಗುಂಡು ಹಾರಿಸಲು ಆದೇಶಿಸಿದನು. ಸೈನಿಕರು ತಮ್ಮಲ್ಲಿದ್ದ ಗುಂಡುಗಳು ಖಾಲಿಯಾಗುವವರೆಗೆ ಗುಂಡು ಹಾರಿಸಿದರು. ಸಾವಿರಾರು ಜನ ಮರಣ ಹೊಂದಿದರು ಹಾಗು ಸಾವಿರಾರು ಜನ ಗಾಯಗೊಂಡರು. ಬ್ರಿಟಿಷರ ಪಾಶವಿಕೃತ್ಯಕ್ಕೆ ಜಗತ್ತು ಅಘಾತಗೊಂಡಿತು. ಆದರೆ ಜನರಲ್ ಡಯರ್‌ನನ್ನು ಕೇವಲ ಭಾರತದಿಂದ ಹಿಂದಕ್ಕೆ ಕರೆಸಿಕೊಳ್ಳಲಾಯಿತು ಮತ್ತು ಅವನಿಗೆ ಯಾವುದೇ ಶಿಕ್ಷೆ ವಿಧಿಸಲಿಲ್ಲ. ಪ್ರಸಿದ್ಧ ಕವಿ ರವೀಂದ್ರನಾಥ ಟಾಗೋರರು ನೈಟ್ (Knighthood) ಪದವಿಯನ್ನು ತ್ಯಜಿಸಿ ಪ್ರತಿಭಟಿಸಿದರು.

ಖಿಲಾಫತ್ ಚಳುವಳಿ: ಖಲೀಫನಿಗಾದ ಅಪಮಾನದಿಂದ ಬ್ರಿಟಿಷರ ವಿರುದ್ಧ ಜಗತ್ತಿನಾದ್ಯಂತ ಮುಸ್ಲಿಂರು ಕೋಪಗೊಂಡಿದ್ದರು. ಅಲಿ ಸಹೋದರರು, ಮೌಲಾನ ಆಜಾದ್, ಹಕೀಂ ಅಜ್ಮಲ್ ಖಾನ್ ಮತ್ತು ಇತರರು

ಅಖಿಲ ಭಾರತ ಖಿಲಾಫತ್ ಸಮಿತಿಯನ್ನು ರಚಿಸಿದರು ಮತ್ತು ದೇಶಾದ್ಯಂತ ಚಳುವಳಿಗೆ ಕರೆ ನೀಡಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಖಿಲಾಫತ್ ಚಳುವಳಿಗೆ ತನ್ನ ಸಂಪೂರ್ಣ ಬೆಂಬಲವನ್ನು ನೀಡಿತು. ಬಾಲ ಗಂಗಾಧರ್ ತಿಲಕ್ ಹಾಗು ಮಹಾತ್ಮ ಗಾಂಧಿಯು ಹಿಂದು–ಮುಸ್ಲಿಂ ಸ್ನೇಹವನ್ನು ಗಾಢಗೊಳಿಸಲು ಇದೊಂದು ಸುವರ್ಣಾವಕಾಶವೆಂದು ಬಗೆದರು.

ಅಸಹಕಾರ ಚಳುವಳಿ (1920–1922): 1920ರಲ್ಲಿ ಕಾಂಗ್ರೆಸ್‌ನ ಒಂದು ವಿಶೇಷ ಅಧಿವೇಶನವನ್ನು ಕಲ್ಕತ್ತಾದಲ್ಲಿ ನಡೆಸಲಾಯಿತು. ಬಾಲ ಗಂಗಾಧರ ತಿಲಕರು 1 ಆಗಸ್ಟ್ 1919ರಂದು ತೀರಿಕೊಂಡಿದ್ದರಿಂದ ಕಾಂಗ್ರೆಸ್ಸನ್ನು ಮುನ್ನಡೆಸುವ ಜವಾಬ್ದಾರಿಯು ಗಾಂಧೀಜಿ, ಸಿ.ಆರ್. ದಾಸ್ ಮತ್ತು ಮೋತಿಲಾಲ್ ನೆಹರುರಂತಹವರ ಮೇಲೆ ಬಿದ್ದಿತು. ರಾಷ್ಟ್ರವ್ಯಾಪಿ ಅಸಹಕಾರ ಚಳುವಳಿಯನ್ನು ಆರಂಭಿಸುವ ಗಾಂಧೀಜಿಯವರ ಯೋಜನೆಯನ್ನು ಅಧಿವೇಶನವು ಒಪ್ಪಿತು. ಈ ಕರೆಗೆ ಜನರ ಪ್ರತಿಕ್ರಿಯೆಯು ಅಭೂತಪೂರ್ವವಾಗಿತ್ತು. ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಶಾಲಾಕಾಲೇಜುಗಳನ್ನು ಬಹಿಷ್ಕರಿಸಿ ರಾಷ್ಟ್ರೀಯ ಸಂಸ್ಥೆಗಳಾದ ಕಾಶಿ ವಿದ್ಯಾಪೀಠ, ಜಾಮಿಯಾ ಮಿಲಿಯಾ ಇಸ್ಲಾಮಿಯಾ, ಗುಜರಾತ್ ವಿದ್ಯಾಪೀಠ ಮುಂತಾದವುಗಳನ್ನು ಸೇರಿದರು. ಅದೇ ರೀತಿಯಾಗಿ ನ್ಯಾಯಾಲಯಗಳು, ಕಛೇರಿಗಳು ಮತ್ತು ಶಾಸಕಾಂಗಗಳನ್ನು ಬಹಿಷ್ಕರಿಸಲಾಯಿತು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲಾಯಿತು. ಇದು ತುಂಬಾ ಜನಪ್ರಿಯವಾಗಿ ವಿದೇಶಿ ವಸ್ತುಗಳನ್ನು ಸಂಗ್ರಹಿಸಿ ಸಾರ್ವಜನಿಕ ಸ್ಥಳಗಳಲ್ಲಿ ಸುಡಲಾಯಿತು. ಇದು ಜನರಲ್ಲಿ ಜಾಗೃತಿಯನ್ನುಂಟು ಮಾಡಿದ್ದರಿಂದ ಸ್ವದೇಶಿ ವಸ್ತುಗಳ ಬಳಕೆ ಆರಂಭವಾಯಿತು. ಖಾದಿ ವಸ್ತ್ರಧಾರಣೆ ರಾಷ್ಟ್ರೀಯ ಹೆಮ್ಮೆಯ ವಿಷಯವಾಯಿತು. ಬ್ರಿಟಿಷರು ನೀಡಿದ್ದ ಬಿರುದು ಬಾವಲಿಗಳನ್ನು ಹಿಂದಿರುಗಿಸಲಾಯಿತು. ಈ ಚಳುವಳಿಯು ಭಾರತದಲ್ಲಿನ ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯವನ್ನು ಅಲುಗಾಡಿಸಿತು. ಅಹಿಂಸೆಗೆ ತೀವ್ರ ಒತ್ತು ನೀಡಿದ್ದ ಗಾಂಧೀಜಿ 5 ಫೆಬ್ರವರಿ 1922ರ ಚೌರಿಚೌರ ಘಟನೆಯಿಂದಾಗಿ ಅಸಹಕಾರ ಚಳುವಳಿಯನ್ನು ಹಿಂಪಡೆದರು. ಚೌರಿಚೌರದಲ್ಲಿ (ಉ.ಪ್ರ.) ಮೆರವಣಿಗೆಯಲ್ಲಿದ್ದ ಗುಂಪನ್ನು ಪ್ರಚೋದಿಸಿದ್ದರಿಂದ 22 ಪೊಲೀಸರೊಂದಿಗೆ ಠಾಣೆಯನ್ನು ಸುಡಲಾಯಿತು. ಚಳುವಳಿಯನ್ನು ಹಿಂಪಡೆದಿದ್ದರಿಂದ ಸಿ.ಆರ್. ದಾಸ್ ಹಾಗು ಮೋತಿಲಾಲ್ ನೆಹರುರಂತಹ ನಾಯಕರು ಅಸಂತುಷ್ಟಗೊಂಡರು ಮತ್ತು ಶಾಸಕಾಂಗ ನಿಷೇಧವನ್ನು ಕೊನೆಗೊಳಿಸಿ ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಅಪೇಕ್ಷಿಸಿದರು. ಆದರೆ ಕಾಂಗ್ರೆಸ್ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದ್ದರಿಂದ ಸಿ.ಆರ್. ದಾಸ್ ಹಾಗು ಮೋತಿಲಾಲ್ ನೆಹರು 'ಸ್ವರಾಜ್ ಪಕ್ಷ' ಸ್ಥಾಪಿಸಿ ಚುನಾವಣೆಗೆ ಸ್ಪರ್ಧಿಸಿದರು. ಶಾಸಕಾಂಗದೊಳಗಿನಿಂದ ಸರ್ಕಾರವನ್ನು ವಿರೋಧಿಸಿದರು.

ಸೈಮನ್ ಆಯೋಗ (1927): ಚಳುವಳಿನಿರತ ಭಾರತೀಯರನ್ನು ಸಂತೈಸಲು ಬ್ರಿಟಿಷರು ಸೈಮನ್ ಆಯೋಗವನ್ನು ನೇಮಿಸಿ ಸಾಂವಿಧಾನಿಕ ಸುಧಾರಣೆಗಳ ಪ್ರಸ್ತಾಪವನ್ನಿಟ್ಟರು. ಆಯೋಗದಲ್ಲಿ ಯಾವುದೇ ಭಾರತೀಯ ಸದಸ್ಯರಿಲ್ಲದ್ದರಿಂದ ಆಯೋಗವನ್ನು ಬಹಿಷ್ಕರಿಸುವಂತೆ ಕಾಂಗ್ರೆಸ್ ಕರೆ ನೀಡಿತು. ಭಾರತದಲ್ಲಿ ಸೈಮನ್ ಆಯೋಗವು ಸಂಪೂರ್ಣ ಬಹಿಷ್ಕಾರವನ್ನು ಎದುರಿಸಿತು. 'ಸೈಮನ್ ಹಿಂದಿರುಗು' (Simon Go Back) ಒಂದು ಜನಪ್ರಿಯ ಘೋಷಣೆಯಾಯಿತು. ಆಯೋಗದ ವಿರುದ್ಧ ಪ್ರತಿಭಟಿಸುತ್ತಿದ್ದ ಸಂದರ್ಭದಲ್ಲಿ ಪೊಲೀಸರ ಲಾಠಿ ಏಟಿನಿಂದ ತೀವ್ರ ಗಾಯಗೊಂಡ ಲಾಲಲಜ್‌ಪತ್‌ರಾಯ್ ಮರಣಹೊಂದಿದರು.

ಎಲ್ಲಾ ರಾಜಕೀಯ ಪಕ್ಷಗಳಿಗೆ ಒಪ್ಪಿಗೆಯಾಗುವಂತಹ ಪರ್ಯಾಯ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಭಾರತೀಯರಿಗೆ ಬ್ರಿಟಿಷರು ಸವಾಲು ಹಾಕಿದರು. ಈ ಸವಾಲನ್ನು ಸ್ವೀಕರಿಸಿದ ಭಾರತೀಯರು ಸರ್ವ ಪಕ್ಷಗಳ ಸಭೆ ನಡೆಸಿ ಮೋತಿಲಾಲ್ ನೆಹರುರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದರು. 1928ರಲ್ಲಿ ಈ ಸಮಿತಿಯು ಸಲ್ಲಿಸಿದ ಕರಡು 'ನೆಹರು ವರದಿ' ಎಂದು ಪ್ರಸಿದ್ಧವಾಗಿದೆ. ಮುಸ್ಲಿಂ ಲೀಗ್, ಹಿಂದೂ ಮಹಾ ಸಭಾ, ಸಿಖ್ಖರು ಮುಂತಾದ ಪಕ್ಷಗಳಲ್ಲಿ ಕೋಮು ಪ್ರಾತಿನಿಧ್ಯದ ಕುರಿತು ಭಿನ್ನಾಭಿಪ್ರಾಯಗಳು ತಲೆದೋರಿ ನೆಹರು

ವರದಿಯ ಬಗ್ಗೆ ಕೋಮುವಾದಿಗಳು ಅಸಂತುಷ್ಟರಾದರು. ನೆಹರು ವರದಿಗೆ ಮೊಹಮದ್‌ಅಲಿ ಜಿನ್ನಾ ತಿದ್ದುಪಡಿಗಳನ್ನು ಸೂಚಿಸಿದರು, ಇದು 'ಹದಿನಾಲ್ಕು ಬೇಡಿಕೆಗಳು' ಎಂದು ಪ್ರಖ್ಯಾತವಾಗಿದೆ. ಬ್ರಿಟಿಷರು ನೆಹರು ವರದಿಯನ್ನು ನಿರ್ಲಕ್ಷಿಸಿದರು. ಜವಾಹರ್‌ಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ 1929ರಲ್ಲಿ ಲಾಹೋರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ಪೂರ್ಣ ಸ್ವರಾಜ್ಯ' ಕಾಂಗ್ರೆಸ್ಸಿನ ಗುರಿಯೆಂದು ನೆಹರು ಘೋಷಿಸಿದರು. ಇದು 26 ಜನವರಿ 1930ರಂದು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸುವ ಘೋಷಣೆಯನ್ನು ಮಾಡಿತು ಹಾಗೂ ಕಾಯ್ದೆ ಭಂಗ ಚಳುವಳಿಯನ್ನು ಆರಂಭಿಸಲು ಗಾಂಧೀಜಿಗೆ ಅಧಿಕಾರ ನೀಡಿತು.

ಕಾಯ್ದೆ ಭಂಗ ಚಳುವಳಿ (1930–31): ಗಾಂಧಿಜಿಯವರು ಬ್ರಿಟಿಷರ ಮುಂದೆ ಹನ್ನೊಂದು ಬೇಡಿಕೆಗಳನ್ನಿಟ್ಟು, ಅವುಗಳನ್ನು ಒಪ್ಪಲು ಇಲ್ಲವೇ ತಿರಸ್ಕರಿಸಲು 31 ಜನವರಿ 1930ರ ಗಡುವು ನೀಡಿದರು. ಬ್ರಿಟಿಷರು ಸಕಾರಾತ್ಮಕ ಪ್ರತಿಕ್ರಿಯೆ ತೋರದಿದ್ದರಿಂದ ಅವರು ಕಾಯ್ದೆ ಭಂಗ ಚಳುವಳಿಯನ್ನು ಆರಂಭಿಸಿದರು. ಗಾಂಧೀಜಿಯ ಪ್ರಸಿದ್ಧ 'ಉಪ್ಪಿನ ಸತ್ಯಾಗ್ರಹ' ಅಥವಾ 'ದಂಡಿ ಸತ್ಯಾಗ್ರಹ' 12 ಮಾರ್ಚ್ 1930ರಂದು 78 ಜನರೊಂದಿಗೆ ಸಾಬರ್‌ಮತಿ ಆಶ್ರಮದಿಂದ ಆರಂಭಗೊಂಡು 6 ಏಪ್ರಿಲ್ ಹೊತ್ತಿಗೆ 240 ಮೈಲು ಕ್ರಮಿಸಿ ದಂಡಿಯನ್ನು ತಲುಪುವ ವೇಳೆಗಾಗಲೆ ಸತ್ಯಾಗ್ರಹಿಗಳ ಸಂಖ್ಯೆ ಸಾವಿರ ಪಟ್ಟು ಹೆಚ್ಚಿತ್ತು. ಒಂದು ಹಿಡಿ ಉಪ್ಪನ್ನು ಕೈಗೆತ್ತಿಕೊಳ್ಳುವದರೊಂದಿಗೆ ಗಾಂಧೀಜಿ ಉಪ್ಪಿನ ಕಾನೂನನ್ನು ಮುರಿದರು. ಇದು ಜನರನ್ನು ಉತ್ತೇಜಿಸಿದ್ದರಿಂದ ಭಾರತದ ಅನೇಕ ಸ್ಥಳಗಳಲ್ಲಿ ಉಪ್ಪಿನ ಸತ್ಯಾಗ್ರಹಗಳು ನಡೆದವು. ಮದ್ಯ ಮತ್ತು ವಿದೇಶಿ ಬಟ್ಟೆ ಮಾರಾಟ ಮಳಿಗೆಗಳೆದುರು ಧರಣಿ ಹಾಗು ಶಾಲೆಗಳು, ಕಾಲೇಜುಗಳು, ನ್ಯಾಯಾಲಯಗಳು ಮತ್ತು ಸರ್ಕಾರಿ ಕಛೇರಿಗಳಿಗೆ ಬಹಿಷ್ಕಾರ, ಮುಂತಾದವು ಈ ಚಳುವಳಿಯ ಇತರೆ ಚಟುವಟಿಕೆಗಳಾಗಿದ್ದವು. ಬೃಹತ್ ಪ್ರಮಾಣದಲ್ಲಿ ಜನರು ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಚಳುವಳಿಯನ್ನು ಹತ್ತಿಕ್ಕಲು ಬ್ರಿಟಿಷರು ಬಹು ಸಂಖ್ಯೆಯಲ್ಲಿ ಬಂಧನ ಮತ್ತು ದಮನಕಾರಿ ಕ್ರಮಗಳನ್ನು ಅನುಸರಿಸಿದರು.


ದಂಡಿ ಸತ್ಯಾಗ್ರಹ

ಪ್ರಥಮ ದುಂಡು ಮೇಜಿನ ಸಮ್ಮೇಳನ (1930–31): ಮುಸ್ಲಿಂ ಲೀಗ್, ಹಿಂದೂ ಮಹಾ ಸಭಾ, ಉದಾರವಾದಿಗಳು (Liberals) ಹಾಗು ವಿವಿಧ ಪ್ರಾಂತ್ಯಗಳ ಅರಸರು ಇದರಲ್ಲಿ ಭಾಗವಹಿಸಿದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾಗವಹಿಸಲಿಲ್ಲವಾದ್ದರಿಂದ ಈ ಸಮ್ಮೇಳನವು ಹೆಚ್ಚಿನದೇನನ್ನೂ ಸಾಧಿಸಲಿಲ್ಲ. ಗಾಂಧೀಜಿ ಹಾಗು ಇತರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಬ್ರಿಟಿಷರು ಬೇಷರತ್ತಾಗಿ ಜೈಲಿನಿಂದ ಬಿಡುಗಡೆಗೊಳಿಸಿದ್ದರಿಂದ 14 ಫೆಬ್ರವರಿ 1931ರಂದು 'ಗಾಂಧಿ–ಇರ್ವಿನ್ ಒಪ್ಪಂದ' ಏರ್ಪಟ್ಟಿತು. ಇದು 'ದೆಹಲಿ ಒಪ್ಪಂದ'ವೆಂದೂ ಪ್ರಸಿದ್ಧವಾಗಿದೆ. ಈ ಒಪ್ಪಂದವು ರಾಜಕೀಯ ಬಂಧಿಗಳ ಬಿಡುಗಡೆ, ಕಾಯ್ದೆ ಭಂಗ ಚಳುವಳಿಯ ವೇಳೆ ರಾಜೀನಾಮೆ ನೀಡಿದ್ದ ಸರ್ಕಾರಿ ಅಧಿಕಾರಿಗಳನ್ನು ಸಹಾನುಭೂತಿಯಿಂದ ನಡೆಸಿಕೊಳ್ಳುವುದು, ತುರ್ತು ಪರಿಸ್ಥಿತಿಯ ಸುಗ್ರೀವಾಜ್ಞೆಗಳ ವಾಪಸಾತಿ, ಶಾಂತಿಯುತ ಪ್ರತಿಭಟನೆಗಳಿಗೆ ಅವಕಾಶ, ಇತ್ಯಾದಿಗಳ ಭರವಸೆ ನೀಡಿತು. ಕಾಂಗ್ರೆಸ್ಸಿನ ಪರವಾಗಿ ಗಾಂಧೀಜಿ ಕಾಯ್ದೆ ಭಂಗ ಚಳುವಳಿಯನ್ನು ಹಿಂಪಡೆದರು.

ದ್ವಿತೀಯ ದುಂಡು ಮೇಜಿನ ಸಮ್ಮೇಳನ (1931): ಲಂಡನ್ನಿನಲ್ಲಿ ನಡೆದ ಎರಡನೆಯ ದುಂಡು ಮೇಜಿನ ಸಮ್ಮೇಳನದಲ್ಲಿ ಗಾಂಧೀಜಿ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ ಭಾಗವಹಿಸಿದರು. ಕಾಂಗ್ರೆಸ್ ಮಾತ್ರವೇ ಭಾರತವನ್ನು ರಾಜಕೀಯವಾಗಿ ಪ್ರತಿನಿಧಿಸುತ್ತದೆ ಹಾಗು ಯಾವುದೇ ಪ್ರತ್ಯೇಕ ಮತದಾನ ಅಥವಾ ವಿಶೇಷ ಭದ್ರತೆಯನ್ನು ಮುಸ್ಲಿಂರಿಗೆ ಒದಗಿಸಬಾರದೆಂದು ಗಾಂಧೀಜಿ ಪ್ರತಿಪಾದಿಸಿದರು. ಅಂತೆಯೇ ಅಸ್ಪೃಶ್ಯರೂ ಹಿಂದುಗಳಾಗಿರುವುದರಿಂದ ಅವರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಯಾವುದೇ ವಿಶೇಷ ಮತದಾನದ ಹಕ್ಕನ್ನು ಒದಗಿಸಬಾರದೆಂದೂ ಪ್ರತಿಪಾದಿಸಿದರು. ಆದರೆ ಇಂಗ್ಲೆಂಡಿನ ಪ್ರಧಾನ ಮಂತ್ರಿ ರಾಮ್ಸೆ ಮೆಕ್‌ಡೊನಾಲ್ಡ್ ಮುಸ್ಲಿಂರಿಗೆ ಹಾಗು ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನದ ವ್ಯವಸ್ಥೆಯನ್ನು ಘೋಷಿಸಿದನು. ಇದು 'ಮತೀಯ ತೀರ್ಪು' ಎಂದೇ ಪ್ರಸಿದ್ಧವಾಗಿದೆ. ಅಸ್ಪೃಶ್ಯರನ್ನು ಹಿಂದುಗಳಿಂದ ಪ್ರತ್ಯೇಕವರ್ಗವೆಂದು ಪರಿಗಣಿಸಿ ಪ್ರತ್ಯೇಕ ಮತದಾನ ವ್ಯವಸ್ಥೆ ಕಲ್ಪಿಸಿದ್ದನ್ನು ಗಾಂಧೀಜಿ ತೀವ್ರವಾಗಿ ವಿರೋಧಿಸಿದರು. ಇದರಿಂದಾಗಿ ಗಾಂಧೀಜಿ ಹಾಗು ಡಾ. ಅಂಬೇಡ್ಕರರ ನಡುವೆ ತೀವ್ರಭಿನ್ನಾಭಿಪ್ರಾಯ ತಲೆದೋರಿದವು. ಅಂತಿಮವಾಗಿ 1932ರಲ್ಲಿ ಇಬ್ಬರೂ ಮಹಾನ್ ನಾಯಕರು 'ಪೂನಾ ಒಪ್ಪಂದ'ಕ್ಕೆ ಸಹಿ ಹಾಕುವುದರೊಂದಿಗೆ ವೈಮನಸ್ಯ ಕೊನೆಗೊಂಡಿತು.

ತೃತೀಯ ದುಂಡು ಮೇಜಿನ ಸಮ್ಮೇಳನ (1932): ಮೂರನೆಯ ಹಾಗು ಅಂತಿಮ ದುಂಡು ಮೇಜಿನ ಸಮ್ಮೇಳನ ಲಂಡನ್ನಿನಲ್ಲಿ 1932ರಲ್ಲಿ ನಡೆಯಿತು. ಕಾಂಗ್ರೆಸ್ ಹಾಗು ಇಂಗ್ಲೆಂಡಿನ ಲೇಬರ್ ಪಕ್ಷವು ಇದರಲ್ಲಿ ಭಾಗವಹಿಸಲು ನಿರಾಕರಿಸಿದವು. ಆದ್ದರಿಂದ ಈ ಸಮ್ಮೇಳನವು ವಿಫಲವಾಯಿತು. ಈ ಸಮ್ಮೇಳನದ ಚರ್ಚೆಗಳ ಒಂದೇ ಮುಖ್ಯ ಪರಿಣಾಮವೆಂದರೆ 1935ರ ಭಾರತ ಸರ್ಕಾರದ ಕಾಯ್ದೆಯ ಜಾರಿ. ಈ ಕಾಯ್ದೆಯು ಒಂದು ಅಖಿಲ ಭಾರತ ಒಕ್ಕೂಟ ಹಾಗು ಪ್ರಾಂತೀಯ ಸರ್ಕಾರಗಳ ಸ್ಥಾಪನೆಗೆ ಅವಕಾಶ ಕಲ್ಪಿಸಿತಲ್ಲದೆ ಪ್ರಾಂತ್ಯಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡಿತು. ಗಾಂಧೀಜಿ ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ಡಾ. ಬಿ.ಆರ್. ಅಂಬೇಡ್ಕರರೊಡನೆ ಸೇರಿ ಚಳುವಳಿಯೊಂದನ್ನು ಆರಂಭಿಸಿದರು. 1934ರಲ್ಲಿ ಅವರು ಕರ್ನಾಟಕವನ್ನೊಳಗೊಂಡಂತೆ ಭಾರತಾದ್ಯಂತ ಪ್ರವಾಸ ಕೈಗೊಂಡು ಈ ಕೆಟ್ಟ ಆಚರಣೆಯ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸಿದರು. ಹರಿಜನರಿಗೆ (ಅಸ್ಪೃಶ್ಯರನ್ನು ಗಾಂಧೀಜಿ ಹರಿಜನರೆನ್ನುತ್ತಿದ್ದರು) ದೇವಾಲಯಗಳು ಮತ್ತು ಸಾರ್ವಜನಿಕ ಕೆರೆ–ಬಾವಿಗಳನ್ನು ಮುಕ್ತಗೊಳಿಸುವಂತೆ ಜನರನ್ನು ಒತ್ತಾಯಿಸಿದರು.

1937ರ ಚುನಾವಣೆಗಳು: 1935ರ ಕಾಯ್ದೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿರುವುದರ ಅಭಿವ್ಯಕ್ತಿಗಾಗಿ ಕಾಂಗ್ರೆಸ್ 1937ರ ಚುನಾವಣೆಯಲ್ಲಿ ಭಾಗವಹಿಸಿತು. ಚುನಾವಣೆಯಲ್ಲಿ ಕಾಂಗ್ರೆಸ್ ಬಹುತೇಕ ಸ್ಥಾನಗಳಲ್ಲಿ ಜಯಿಸಿ, 11ರ ಪೈಕಿ 7 ಪ್ರಾಂತ್ಯಗಳಲ್ಲಿ ಅಧಿಕಾರಕ್ಕೆ ಬಂದಿತು ಮತ್ತು ಇನ್ನೂ 2 ಪ್ರಾಂತ್ಯಗಳಲ್ಲಿ ಸಮ್ಮಿಶ್ರ ಸರ್ಕಾರ ರಚಿಸಿತು. ತನ್ನೆಲ್ಲಾ ಮಿತಿಗಳೊಂದಿಗೆ ಕಾಂಗ್ರೆಸ್ ತುರ್ತು ಅಧಿಕಾರ ನೀಡುವ ಕಾನೂನುಗಳ ವಾಪಸಾತಿ, ವಿವಿಧ ಸಂಘಟನೆಗಳಿಗೆ ವಿಧಿಸಿದ್ದ ನಿಷೇಧ ಹಿಂಪಡೆಯುವಿಕೆ, ಗುಪ್ತ ದಳ (CID)ದಿಂದ ರಾಜಕಾರಣಿಗಳ ನಿಗಾವಹಿಸುವಿಕೆಗೆ ತಡೆ, ಕಾಯ್ದೆ ಭಂಗ ಚಳುವಳಿಯ ವೇಳೆ ವಶಪಡಿಸಿಕೊಂಡಿದ್ದ ಭೂಮಿಯ ಹಿಂದಿರುಗಿಸುವಿಕೆ, ಪತ್ರಿಕೆಗಳ ಮೇಲಿನ ನಿರ್ಬಂಧಗಳ ರದ್ದತಿ, ಮುಂತಾದ ಸುಧಾರಣೆಗಳನ್ನು ತರುವಲ್ಲಿ ಯಶಸ್ವಿಯಾಯಿತು.

ದ್ವಿತೀಯ ಜಾಗತಿಕ ಯುದ್ಧವು 1939ರಲ್ಲಿ ಆರಂಭವಾಯಿತು ಮತ್ತು ಬ್ರಿಟಿಷರು ಭಾರತೀಯರ ಒಪ್ಪಿಗೆಯಿಲ್ಲದೆ ಭಾರತವು ಮಿತ್ರ ರಾಷ್ಟ್ರಗಳ ಪರವಾಗಿ ಯುದ್ಧದಲ್ಲಿ ಭಾಗವಹಿಸುವುದೆಂದು ಘೋಷಿಸಿದರು. ಇದನ್ನು ವಿರೋಧಿಸಿ ಕಾಂಗ್ರೆಸ್ 1939ರಲ್ಲಿ ಎಲ್ಲಾ ಮಂತ್ರಿ ಮಂಡಳಗಳಿಗೆ ರಾಜೀನಾಮೆ ನೀಡಿತು. ಗಾಂಧೀಜಿ ಬ್ರಿಟಿಷರ ವಿರುದ್ಧ 'ವೈಯಕ್ತಿಕ ಸತ್ಯಾಗ್ರಹ'ವನ್ನು ಆರಂಭಿಸಿದರು. ಮುಸ್ಲಿಂ ಲೀಗ್, ದೇಶೀಯ ರಾಜ್ಯಗಳು ಹಾಗು ಕಾಂಗ್ರೆಸ್ ನಡುವೆ ಭಿನ್ನಾಭಿಪ್ರಾಯಗಳನ್ನುಂಟು ಮಾಡಿ ಭಾರತೀಯರ ಬೆಂಬಲವನ್ನು ಪಡೆಯಲು ಬ್ರಿಟಿಷರು ಪ್ರಯತ್ನಿಸಿದರು. 23 ಮಾರ್ಚ್ 1940ರಂದು ಲಾಹೋರದಲ್ಲಿ ಅಧಿವೇಶನ ನಡೆಸಿದ ಮುಸ್ಲಿಂ ಲೀಗ್ 'ಪಾಕಿಸ್ತಾನ ಠರಾವು'

(P–ಪಂಜಾಬ, A– ಅಫ್‌ಘಾನಿಸ್ಥಾನ, K– ಕಾಶ್ಮೀರ, S– ಸಿಂಧ್ & TAN – ಬಲೂಚಿಸ್ಥಾನ) ಸ್ವೀಕರಿಸಿತು. ಯುದ್ಧದ ನಂತರ ಅಧೀನ ರಾಷ್ಟ್ರದ ಸ್ಥಾನ, ಕಾರ್ಯಕಾರಿ ಸಮಿತಿಯ ವಿಸ್ತರಣೆ ಮತ್ತು ಸಂವಿಧಾನ ರಚನಾ ಸಮಿತಿಯ ಸ್ಥಾಪನೆಯನ್ನು ಭಾರತಕ್ಕೆ ಒದಗಿಸಲಾಗುವುದೆಂದು 1940ರ ಆಗಸ್ಟ್‌ನಲ್ಲಿ ವೈಸ್‌ರಾಯ್ ಲಿನ್‌ಲಿತ್‌ಗೋ ಘೋಷಿಸಿದನು ಹಾಗು ಇದಕ್ಕೆ ಪ್ರತಿಯಾಗಿ ಭಾರತೀಯರು ಯುದ್ಧದಲ್ಲಿ ಬ್ರಿಟಿಷರಿಗೆ ಬೆಂಬಲಿಸುವಂತೆ ವಿನಂತಿಸಿದನು. ಇದು 'ಆಗಸ್ಟ್ ಪ್ರಸ್ತಾವನೆ' ಎಂದು ಪ್ರಸಿದ್ಧವಾಗಿದೆ.

ಭಾರತ ಬಿಟ್ಟು ತೊಲಗಿ ಚಳುವಳಿ–1942: ಜಾಗತಿಕ ಯುದ್ಧದಲ್ಲಿ ಜರ್ಮನಿ ಹಾಗು ಜಪಾನಿನ ಮುನ್ನಡೆಯಿಂದಾಗಿ ಬ್ರಿಟಿಷರು ಸ್ಟಾಫರ್ಡ್ ಕ್ರಿಪ್ಸ್‌ನನ್ನು (ಕ್ರಿಪ್ಸ್ ಆಯೋಗವೆಂದೇ ಪ್ರಸಿದ್ಧ) ಬ್ರಿಟಿಷರ ಯುದ್ಧ ಪ್ರಯತ್ನಗಳನ್ನು ಬೆಂಬಲಿಸುವಂತೆ ಭಾರತೀಯರ ಮನವೊಲಿಸಲು ಕಳುಹಿಸಿದರು. ಭಾರತಕ್ಕೆ ಅಧೀನ ರಾಷ್ಟ್ರದ ಸ್ಥಾನ ಮತ್ತು ರಕ್ಷಣಾ ವ್ಯವಸ್ಥೆ (Defence) ಹೊರತು ಪಡಿಸಿ ಮಿಕ್ಕ ಆಡಳಿತವನ್ನು ನೋಡಿಕೊಳ್ಳಲು ತಾತ್ಕಾಲಿಕ ಆಡಳಿತ ಸರ್ಕಾರವನ್ನು ನೀಡುವುದಾಗಿ ಪ್ರಸ್ತಾಪಿಸಲಾಯಿತು. ಈ ಪ್ರಸ್ತಾವನೆ ಯುದ್ಧದ ನಂತರ ಜಾರಿಗೆ ಬರುವುದಿತ್ತು. ಅದರೆ ಭಾರತೀಯರು ತಕ್ಷಣದಿಂದ ಬೆಂಬಲವನ್ನು ನೀಡಬೇಕಿತ್ತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಕ್ರಿಪ್ಸ್ ಪ್ರಸ್ತಾವನೆಯನ್ನು ತಿರಸ್ಕರಿಸಿದವು. ಗಾಂಧೀಜಿ ಇದನ್ನು 'ಮುಳುಗುತ್ತಿರುವ ಬ್ಯಾಂಕೊಂದರ ಭವಿಷ್ಯತ್ತಿನ ದಿನಾಂಕದ ಚೆಕ್' ಎಂದು ಕರೆದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿ (AICC-All India Congress Committee) 8 ಆಗಸ್ಟ್ 1942ರಂದು ಬಾಂಬೆಯಲ್ಲಿ ಸಭೆ ಸೇರಿ 'ಭಾರತ ಬಿಟ್ಟು ತೊಲಗಿ' ನಿರ್ಣಯ ಠರಾವನ್ನು ಸ್ವೀಕರಿಸಿ ಗಾಂಧೀಜಿಯವರು ನೇತೃತ್ವವನ್ನು ವಹಿಸಲು ಕೋರಿತು. ಗಾಂಧೀಜಿ 'ಮಾಡು ಇಲ್ಲವೇ ಮಡಿ' (Do or Die) ಎಂಬ ಪ್ರಸಿದ್ಧ ಘೋಷಣೆ ನೀಡಿದರು. ಆದರೆ ಮುಸ್ಲಿಂ ಲೀಗಿನ ನಾಯಕ ಜಿನ್ನಾ ಈ ಚಳುವಳಿಯಲ್ಲಿ ಭಾಗವಹಿಸದಂತೆ ಮುಸ್ಲಿಂರಿಗೆ ಕರೆ ನೀಡಿದನು. ತಕ್ಷಣವೇ (ಆಗಸ್ಟ್ 9) ಕಾರ್ಯನಿರತವಾದ ಸರ್ಕಾರ ಗಾಂಧೀಜಿಯವರನ್ನೂ ಸೇರಿದಂತೆ ಎಲ್ಲಾ ಕಾಂಗ್ರೆಸ್ ನಾಯಕರನ್ನು ದಸ್ತಗಿರಿ ಮಾಡಿತು ಮತ್ತು ಕಾಂಗ್ರೆಸ್ ಪಕ್ಷವನ್ನು ನಿಷೇಧಿಸಿತು. ಮಾರ್ಗದರ್ಶನ ನೀಡುವ ನಾಯಕರಿಲ್ಲದೆ ಜನತೆ ತಮಗಿಷ್ಟ ಬಂದಂತೆ ವರ್ತಿಸಿದರು. ಮುಷ್ಕರಗಳು, ಮೆರವಣಿಗೆಗಳು, ಸಾರ್ವಜನಿಕ ಸ್ಥಳಗಳು ಮತ್ತು ಕಟ್ಟಡಗಳ ಮೇಲೆ ತ್ರಿವರ್ಣ ಧ್ವಜ ಹಾರಿಸುವುದು, ಧರಣಿಗಳು, ತಂತಿ ಮತ್ತು ದೂರವಾಣಿ ಸಂಪರ್ಕ ಕತ್ತರಿಸುವುದು, ಕಂದಾಯ ದಾಖಲೆಗಳನ್ನು ಸುಡುವುದು, ರೈಲ್ವೆ ಹಳಿಗಳನ್ನು ಮತ್ತು ಸೇತುವೆಗಳನ್ನು ಧ್ವಂಸಗೊಳಿಸುವುದು, ರೈಲ್ವೆ ನಿಲ್ದಾಣ, ಅಂಚೆ ಕಛೇರಿ ಹಾಗು ಪೊಲೀಸ್ ಠಾಣೆಗಳ ಮೇಲೆ ದಾಳಿ, ಮುಂತಾದವು ನಡೆದವು. ಅನೇಕ ಕಡೆಗಳಲ್ಲಿ ಚಳುವಳಿ ಹಿಂಸಾತ್ಮಕವಾಯಿತು. ಲಾಠಿ ಏಟು, ಅಶ್ರುವಾಯು, ಸಾಮೂಹಿಕ ಛಡಿ ಏಟು, ಅತಿಯಾದ ದಂಡ ವಿಧಿಸುವಿಕೆ, ಮುಂತಾದ ಯಾವುದಕ್ಕೂ ಹೆದರದೆ ಜನತೆಯು ಚಳುವಳಿಯಲ್ಲಿ ಪಾಲ್ಗೊಂಡಿದ್ದರಿಂದ ಶೀಘ್ರವೇ ಸೆರೆಮನೆಗಳು ರಾಜಕೀಯ ಖೈದಿಗಳಿಂದ ತುಂಬಿದ್ದವು. 10,000 ಕ್ಕಿಂತಲೂ ಹೆಚ್ಚು ಜನರು ಪೊಲೀಸ್ ಹಾಗು ಸೈನಿಕರ ಗುಂಡಿಗೆ ಆಹುತಿಯಾದರು. ಕೊನೆಗೂ ಬ್ರಿಟಿಷರು ಚಳುವಳಿಯನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾದರು.


'ನೇತಾಜಿ' ಎಂದೇ ಪ್ರಖ್ಯಾತರಾದ ಸುಭಾಷ್‌ಚಂದ್ರ ಬೋಸ್ ರಾಷ್ಟ್ರೀಯ ಚಳುವಳಿಯನ್ನು ತಮ್ಮದೇ ವಿಭಿನ್ನ ರೀತಿಯಲ್ಲಿ ಮುಂದುವರೆಸಿದರು. ಕೇವಲ ಪ್ರತಿಭಟನೆಗಳು ಹಾಗು ಮುಷ್ಕರಗಳು ಸ್ವಾತಂತ್ರ್ಯವನ್ನು ತಂದುಕೊಡುವುದಿಲ್ಲ ಎಂದು ಅವರು ನಂಬಿದ್ದರು. ಚಳುವಳಿಯ ಸಮಯದಲ್ಲಿ ಅವರನ್ನು ಗೃಹ ಬಂಧನದಲ್ಲಿರಿಸಲಾಗಿತ್ತು. ಕಲ್ಕತ್ತಾದಿಂದ ತಪ್ಪಿಸಿಕೊಂಡ ಅವರು ಮುಸ್ಸೊಲಿನಿ ಹಾಗು ಹಿಟ್ಲರ್‌ನ ಸಹಾಯ ಪಡೆಯಲು ಪ್ರಯತ್ನಿಸಿದರು. ಜರ್ಮನಿಯ ಜಲಾಂತರ್ಗಾಮಿಯೊಂದರಲ್ಲಿ ಜಪಾನಿಗೆ ತೆರಳಿ ರಾಷ್‌ಬಿಹಾರಿ ಬೋಸ್‌ರ ನೆರವಿನೊಂದಿಗೆ ಆಗ್ನೇಯ ಏಷ್ಯದಲ್ಲಿ ನೆಲೆಸಿದ್ದ ಭಾರತೀಯರನ್ನು ಭರ್ತಿಮಾಡಿಕೊಂಡು ಭಾರತೀಯ



ನೇತಾಜಿ ಸುಭಾಷ್‌ಚಂದ್ರಬೋಸ್

ರಾಷ್ಟ್ರೀಯ ಸೇನೆಯನ್ನು (Indian National Army-INA) ಕಟ್ಟಿದರು. ಜಪಾನಿಗೆ ಶರಣಾಗತರಾಗಿದ್ದ ಬ್ರಿಟಿಷ್ ಸೇನೆಯ ಭಾರತೀಯರು ಐ.ಎನ್.ಎ. ಸೇರಿದರು. ಐ.ಎನ್.ಎ ದಲ್ಲಿ ಒಂದು ಮಹಿಳಾ ವಿಭಾಗವಿದ್ದು ಕ್ಯಾಪ್ಟನ್ ಲಕ್ಷ್ಮಿ ಅದರ ನಾಯಕಿಯಾಗಿದ್ದರು. ಜಪಾನಿನ ಸಹಾಯದೊಂದಿಗೆ ಭಾರತೀಯ ರಾಷ್ಟ್ರೀಯ ಸೇನೆಯು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ವಶಪಡಿಸಿಕೊಂಡು 1943ರಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿತು. ಅವರು ಭಾರತದ ಉಪಖಂಡವನ್ನು ಪ್ರವೇಶಿಸಿ 1944ರಲ್ಲಿ ಭಾರತದ ಈಶಾನ್ಯ ದಿಕ್ಕಿನಲ್ಲಿ ಕೋಹಿಮಾ ಹಾಗು ಇಂಫಾಲ್‌ಗಳನ್ನೊಳಗೊಂಡಂತೆ 10,000 ಚದರ ಮೈಲುಗಳಷ್ಟು ಪ್ರದೇಶವನ್ನು ಆಕ್ರಮಿಸಿದರು. ಆದರೆ 1945ರಲ್ಲಿ ಜಪಾನ್ ಯುದ್ಧದಲ್ಲಿ ಸೋತು ಬರ್ಮಾದಿಂದ ಹಿಂದಕ್ಕೆ ಸರಿದಿದ್ದರಿಂದ ಭಾರತೀಯ ರಾಷ್ಟ್ರೀಯ ಸೇನೆ ಹಿನ್ನಡೆಯನ್ನು ಅನುಭವಿಸಿತು. ಈ ಸಮಯದಲ್ಲಿ ಸುಭಾಷ್‌ಚಂದ್ರ ಬೋಸ್ ವಿಮಾನ ಅಪಘಾತವೊಂದರಲ್ಲಿ ನಿಧನರಾದರು. ಬ್ರಿಟಿಷರು ರಾಷ್ಟ್ರೀಯ ಸೇನೆಯ ಸೈನಿಕರನ್ನು ಸೆರೆ ಹಿಡಿದು ದೇಶದ್ರೋಹದ ಆರೋಪ ಹೊರಿಸಿ ವಿಚಾರಣೆಗೊಳಪಡಿಸಿದರು. ಇದು 'ಐಎನ್‌ಎ ಟ್ರಯಲ್ಸ್' ಎಂದು ಪ್ರಸಿದ್ಧವಾಗಿದೆ. ಪ್ರಥಮ ವಿಚಾರಣೆಯು ದೆಹಲಿಯ ಕೆಂಪುಕೋಟೆಯಲ್ಲಿ ನಡೆಯಿತು.

ಸ್ವಾತಂತ್ರ್ಯ ಮತ್ತು ವಿಭಜನೆ: ದ್ವಿತೀಯ ಜಾಗತಿಕ ಯುದ್ಧದ ನಂತರ ಇಂಗ್ಲೆಂಡ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು ಮತ್ತು ಕ್ಲೆಮೆಂಟ್ ಅಟ್ಲಿ ಪ್ರಧಾನಿಯಾದನು. 1946ರಲ್ಲಿ ಅಟ್ಲಿ ಭಾರತಕ್ಕೆ ಆಯೋಗವೊಂದನ್ನು ನಿಯೋಜಿಸಿದನು. ಅದು 'ಕ್ಯಾಬಿನೆಟ್ ಮಿಷನ್' ಎಂದು ಪ್ರಸಿದ್ಧವಾಗಿದೆ. ಈ ಆಯೋಗವು ಚರ್ಚೆ ನಡೆಸಿ ಪಾಕಿಸ್ತಾನದ ರಚನೆಯನ್ನು ತಿರಸ್ಕರಿಸಿತು. ಸಂಪೂರ್ಣ ಭಾರತಕ್ಕೆ ಒಂದು ಒಕ್ಕೂಟ ಸರ್ಕಾರವನ್ನು ಹಾಗೂ ಸಂವಿಧಾನ ಹಾಗು ತಾತ್ಕಾಲಿಕ ಸರ್ಕಾರವನ್ನು ರಚಿಸಲು ಸ್ಥಾಪಿಸುವ ಪ್ರತಿನಿಧಿ ಸಭೆಯ ಪ್ರಸ್ತಾವನೆಯನ್ನು ಸಲ್ಲಿಸಿತು. ಮುಸ್ಲಿಂ ಲೀಗ್ ಇದನ್ನು ತಿರಸ್ಕರಿಸಿತು ಹಾಗು ಜಿನ್ನಾ 'ನೇರ ಕಾರ್ಯಾಚರಣೆ ದಿನ' (Direct Action Day) ಆಚರಿಸಲು ಕರೆ ನೀಡಿದರು. 'ಲೇಕರ್ ರಹೇಂಗೆ ಪಾಕಿಸ್ತಾನ್' ಲೀಗಿನ ಘೋಷಣೆಯಾಯಿತು. ಇದರ ಪರಿಣಾಮವಾಗಿ ಅನೇಕ ಕಡೆಗಳಲ್ಲಿ ಕೋಮು ಗಲಭೆ, ರಕ್ತಪಾತ, ಕೊಲೆ ಮತ್ತು ಸುಲಿಗೆಗಳಾದವು. 9 ಡಿಸೆಂಬರ್ 1946ರಂದು ಬಾಬು ರಾಜೇಂದ್ರ ಪ್ರಸಾದ್‌ರ ಅಧ್ಯಕ್ಷತೆಯಲ್ಲಿ ಪ್ರತಿನಿಧಿ ಸಭೆ ರಚಿಸಲಾಯಿತು. ಲಾರ್ಡ್ ಮೌಂಟ್ ಬ್ಯಾಟನ್ ಭಾರತದ ವೈಸ್‌ರಾಯ್ ಆದರು ಹಾಗು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳೊಂದಿಗೆ ಮಾತುಕತೆ ನಡೆಸಿದರು. ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಧಾನಿ ಆಟ್ಲಿಯಿಂದ 'ಮೌಂಟ್ ಬ್ಯಾಟನ್ ಪ್ಲಾನ್' 2 ಜೂನ್ 1947ರಂದು ಘೋಷಿತವಾಯಿತು. ಇದನ್ನು 'ಜೂನ್ ಪ್ಲಾನ್' ಎಂದೂ ಕರೆಯಲಾಗಿದೆ. ಇದನ್ನು ಬ್ರಿಟನ್ನಿನ ಸಂಸತ್ತಿನಲ್ಲಿ 5 ಜುಲೈ 1947ರಂದು ಮಂಡಿಸಲಾಯಿತು ಹಾಗು ಜುಲೈ 18ರಂದು ಅದು 'ಭಾರತದ ಸ್ವಾತಂತ್ರ್ಯದ ಕಾಯ್ದೆ 1947' (Independence to India Act 1947) ಎಂದು ಊರ್ಜಿತವಾಯಿತು. ಭಾರತದಲ್ಲಿನ ಬ್ರಿಟಿಷ್ ಒಡೆತನವನ್ನು ಭಾರತ ಮತ್ತು ಪಾಕಿಸ್ತಾನಗಳಾಗಿ ವಿಭಜಿತವಾಯಿತು. ರೆಡ್‌ಕ್ಲಿಫ್ ರೇಖೆಯು


ವಿಭಜನೆ ನಂತರದ ಭಾರತ
ಇಸ್ಲಾಮಾಬಾದ್
2
ದೆಹಲಿ
1
3
ಢಾಕ
ಅರಬ್ಬಿ ಸಮುದ್ರ
ಬಂಗಾಳ ಕೊಲ್ಲಿ
ಹಿಂದೂ ಮಹಾಸಾಗರ
ಉ
ಪ
ಪೂ
ದ
1. ದೆಹಲಿ ರಾಜಧಾನಿಯೊಂದಿಗೆ ಸ್ವಾತಂತ್ರ್ಯ ಭಾರತದ ಪ್ರದೇಶ
2. ಇಸ್ಲಾಮಾಬಾದ್ ರಾಜಧಾನಿಯೊಂದಿಗೆ ಪಶ್ಚಿಮ ಪಾಕಿಸ್ತಾನ
3. ಢಾಕ ರಾಜಧಾನಿಯೊಂದಿಗೆ ಪೂರ್ವ ಪಾಕಿಸ್ತಾನ – ಇಂದಿನ ಬಾಂಗ್ಲಾದೇಶ್

ಇವೆರಡರ ನಡುವೆ ಗಡಿಯನ್ನು ಗುರುತಿಸಿತು. 14 ಆಗಸ್ಟ್ 1947ರಂದು ಪಾಕಿಸ್ತಾನ ಹಾಗು 15ರಂದು ಭಾರತ ಸ್ವತಂತ್ರವಾದವು. ಜವಹರ್‌ಲಾಲ್ ನೆಹರು ಪ್ರಥಮ ಪಧಾನಮಂತ್ರಿ ಮತ್ತು ಮೌಂಟ್ ಬ್ಯಾಟನ್ ಗವರ್ನರ್ ಜನರಲ್ ಆದರು, ಹೀಗಾಗಿ ಮೌಂಟ್ ಬ್ಯಾಟನ್ ಬ್ರಿಟಿಷ್ ಭಾರತದ ಕೊನೆಯ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಹಾಗು ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಆದನು. ವಲ್ಲಬಭಾಯ್ ಪಟೇಲ್ ಉಪ ಪ್ರಧಾನಿಯಾದರು. ದೇಶೀಯ ರಾಜ್ಯಗಳನ್ನು ಒಗ್ಗೂಡಿಸಿ ಭಾರತದ ಒಕ್ಕೂಟ ರಚನೆಯಲ್ಲಿ ಅವರು ಮಹತ್ತರವಾದ ಪಾತ್ರವಹಿಸಿದರು. ಅವರನ್ನು 'ಸರ್ದಾರ್' ಹಾಗು 'ಭಾರತದ ಉಕ್ಕಿನ ಮನುಷ್ಯ' ಎಂದು ಕರೆಯಲಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಭಾರತದ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಂವಿಧಾನವನ್ನು 26 ಜನವರಿ 1950ರಂದು ಜಾರಿಗೊಳಿಸಲಾಯಿತು ಮತ್ತು ಭಾರತ ಒಂದು ಗಣರಾಜ್ಯವಾಯಿತು.

ಕರ್ನಾಟಕದ ಪಾತ್ರ:

ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಕರ್ನಾಟಕವು ಮಹತ್ವಪೂರ್ಣ ಪಾತ್ರವನ್ನು ವಹಿಸಿತು. ಬ್ರಿಟಿಷರಿಗೆ ಕನಾರ್ಟಕದಲ್ಲಿ ವಿರೋಧವು ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಮೂಲಕ 18ನೆಯ ಶತಮಾನದಲ್ಲಿಯೇ ಆರಂಭವಾಯಿತು. ಇದು ಇಂತಹ ಇನ್ನಷ್ಟು ಘಟನೆಗಳಿಗೆ ಕಾರಣವಾಯಿತು. ಧೋಂಡಿಯ ವಾಘನ ದಂಗೆ (1800), ಕಿತ್ತೂರು ರಾಣಿ ಚೆನ್ನಮ್ಮಳ ದಂಗೆ (1824), ಸಂಗೊಳ್ಳಿ ರಾಯಣ್ಣನ ದಂಗೆ (1830), ಹಲಗಲಿ ಬೇಡರ ದಂಗೆ (1857) ಮುಂತಾದವು ಅವುಗಳಲ್ಲಿ ಪ್ರಮುಖವಾದವು.

ಆದರೆ ಗಂಭೀರ ಹೋರಾಟವು ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪನೆಯೊಂದಿಗೆ ಆರಂಭವಾಯಿತು. ಕರ್ನಾಟಕ ಪ್ರದೇಶದ ನಾಲ್ವರು ಪ್ರತಿನಿಧಿಗಳು ಬಾಂಬೆಯಲ್ಲಿ ನಡೆದ ಪ್ರಥಮ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. ಬಾಂಬೆ ಪ್ರದೇಶ ಕಾಂಗ್ರೆಸ್ ಎರಡು ಅಧಿವೇಶನಗಳನ್ನು ಕರ್ನಾಟಕದಲ್ಲಿ ನಡೆಸಿತು. 1) ದಿನ್‌ಷಾ ವಾಚರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ 2) ಫಿರೋಜ್ ಷಾ ಮೆಹತರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ. ತಿಲಕರ ವೃತ್ತ ಪತ್ರಿಕೆಗಳಾದ 'ಮರಾಠ' ಹಾಗು 'ಕೇಸರಿ' ರಾಷ್ಟ್ರೀಯ ಭಾವನೆಗಳನ್ನು ಉದ್ದೀಪನಗೊಳಿಸಿದವು. ಬಾಲ ಗಂಗಾಧರ ತಿಲಕರು ಸಂಕೇಶ್ವರ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಸಿರಸಿ, ಸಿದ್ದಾಪುರ, ಮಂಗಳೂರು, ಬಳ್ಳಾರಿ ಮುಂತಾದ ಸ್ಥಳಗಳನ್ನು ಸಂದರ್ಶಿಸಿ ಹೋಂ ರೂಲ್ ಲೀಗ್ ಚಳುವಳಿಗೆ ಬೆಂಬಲ ಕ್ರೋಢೀಕರಿಸಿದರು. ಆಲೂರು ವೆಂಕಟರಾವ್, ಅಣ್ಣಾಚಾರ್ಯ, ಹೊಸಕೇರಿ, ಶ್ರೀನಿವಾಸ ಕೌಜಲಗಿ, ಗೋವಿಂದರಾವ್ ಯಾಳಗಿ ಮುಂತಾದವರು ರಾಷ್ಟ್ರೀಯ ಚಟುವಟಿಕೆಗಳ ನೇತೃತ್ವವಹಿಸಿದರು. 1916ರಲ್ಲಿ ಹೋಂ ರೂಲ್ ಲೀಗ್‌ನ ಶಾಖೆ ಧಾರವಾಡದಲ್ಲಿ ಸ್ಥಾಪನೆಯಾಯಿತು. ತಿಲಕರು ಆರಂಭಿಸಿದ 'ಗಣೇಶೋತ್ಸವ' ಹಾಗು 'ಶಿವಾಜಿ ಜಯಂತಿ' ಆಚರಣೆಗಳು ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾದವು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (Karnataka Pradesha Congress Committee-KPCC) ಪ್ರಥಮ ಅಧಿವೇಶನ 1920ರಲ್ಲಿ ಧಾರವಾಡದಲ್ಲಿ ನಡೆಯಿತು. ಗಂಗಾಧರರಾವ್ ದೇಶಪಾಂಡೆ ಈ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಅವರು 'ಕರ್ನಾಟಕದ ಕೇಸರಿ' ಎಂದು ಪ್ರಸಿದ್ಧರಾಗಿದ್ದಾರೆ. ಬಹು ಬೇಗನೆ ಪ್ರದೇಶ ಕಾಂಗ್ರೆಸ್ ಸಮಿತಿಗಳು ಬೆಂಗಳೂರು, ಮೈಸೂರು, ತುಮಕೂರು, ಮತ್ತು ಕಡೂರುಗಳಲ್ಲಿ ಸ್ಥಾಪನೆಯಾದವು. 1922ರಲ್ಲಿ ಮಂಗಳೂರಿನಲ್ಲಿ ನಡೆದ ಪ್ರದೇಶ ಕಾಂಗ್ರೆಸ್ ಅಧಿವೇಶನಕ್ಕೆ ಸರೋಜಿನಿ ನಾಯ್ಡು ಅಧ್ಯಕ್ಷರಾಗಿದ್ದರು, 1923ರ ಬಿಜಾಪುರ ಅಧಿವೇಶನಕ್ಕೆ ಸಿ. ರಾಜಗೋಪಾಲಾಚಾರಿ ಅಧ್ಯಕ್ಷರಾಗಿದ್ದರು ಹಾಗು 1926ರ ಬಳ್ಳಾರಿ ಅಧಿವೇಶನಕ್ಕೆ ಶ್ರೀನಿವಾಸ ಅಯ್ಯಂಗಾರರು ಅಧ್ಯಕ್ಷರಾಗಿದ್ದರು.

ಕರ್ನಾಟಕ ಗಾಂಧೀಜಿಯವರಿಂದ ತೀವ್ರವಾಗಿ ಪ್ರಭಾವಗೊಂಡಿತು. ಶೌಕತ್ ಅಲಿ ಮತ್ತು ಮೊಹಮದ್ದರ ಜೊತೆಗೆ ಬೆಂಗಳೂರಿಗೆ ಅವರಿತ್ತ ಭೇಟಿಯು ಕರ್ನಾಟಕದಲ್ಲಿ ರಾಷ್ಟ್ರೀಯ ಚಳುವಳಿಯನ್ನು ತೀವ್ರವಾಗಿ ಪ್ರಭಾವಿಸಿತು.

ದತ್ತೋಪಂತ ಮಾಜಾಳಿ, ಕೃಷ್ಣರಾವ್, ಹನುಮಂತರಾವ್ ಕೌಜಲಗಿ, ಕಾರ್ನಾಡ್ ಸದಾಶಿವರಾವ್, ಕಾಕಾ ಕಾಲೇಕರ್, ಎನ್. ಎಸ್. ಹರ್ಡಿಕರ್, ಆರ್.ಆರ್. ದಿವಾಕರ್ ಮುಂತಾದವರು ಕರ್ನಾಟಕದಲ್ಲಿ ಅಸಹಕಾರ ಚಳುವಳಿಯ ನಾಯಕತ್ವವಹಿಸಿದರು. ಶಾಲಾ–ಕಾಲೇಜುಗಳು ಹಾಗು ನ್ಯಾಯಾಲಯಗಳಿಗೆ ಬಹಿಷ್ಕಾರ, ಧರಣಿ, ಮುಷ್ಕರ, ಪ್ರತಿಭಟನೆ, ವಿದೇಶಿ ವಸ್ತುಗಳ ದಹನ ಮುಂತಾದವು ಕರ್ನಾಟಕದ ಅನೇಕ ಕಡೆಗಳಲ್ಲಿ ನಡೆದವು. ತ್ರಿವರ್ಣ ಧ್ವಜವನ್ನು ಹಾರಿಸುವುದು ದೇಶದ್ರೋಹದ ಕಾರ್ಯ ಎಂದು ಸರ್ಕಾರದ ಆಜ್ಞೆ ಇದ್ದರೂ ಅದನ್ನು ಉಲ್ಲಂಘಿಸಿ ಜನರು 'ಧ್ವಜ ಸತ್ಯಾಗ್ರಹ' ದಲ್ಲಿ ಪಾಲ್ಗೊಂಡರು. ಕರ್ನಾಟಕದಲ್ಲಿ ಹೋರಾಟವನ್ನು ತೀವ್ರಗೊಳಿಸಲು ಎನ್.ಎಸ್. ಹರ್ಡಿಕರ್ 1924ರಲ್ಲಿ 'ಹಿಂದೂಸ್ಥಾನ ಸೇವಾ ದಳ'ವನ್ನು ಸ್ಥಾಪಿಸಿದರು. 1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಗಾಂಧೀಜಿ ವಹಿಸಿದ್ದರು. ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಗಾಂಧೀಜಿ ಅಧ್ಯಕ್ಷತೆ ವಹಿಸಿದ ಒಂದೇ ಅಧಿವೇಶನ ಇದಾಗಿದೆ. 'ಕರ್ನಾಟಕದ ಗಾಂಧಿ' ಎಂದು ಪ್ರಸಿದ್ಧರಾದ ಹರ್ಡಿಕರ್ ಮಂಜಪ್ಪ, ವಲ್ಲಬಭಾಯಿ ಪಟೇಲ್, ರಾಜಗೋಪಾಲಾಚಾರಿ, ಜವಾಹರ್‌ಲಾಲ್ ನೆಹರು, ಮುಂತಾದವರು ಇದರಲ್ಲಿ ಭಾಗವಹಿಸಿದ್ದರು. ಗಾಂಧೀಜಿ ಮದ್ಯಪಾನ ನಿಷೇಧ ಹಾಗು ಅಸ್ಪೃಶ್ಯತೆ ನಿವಾರಣೆಗೆ ಕರೆಯಿತ್ತರು. ಈ ಅಧಿವೇಶನದಲ್ಲಿ ಗಂಗೂಬಾಯಿ ಹಾನಗಲ್‌ರು 'ವಂದೇ ಮಾತರಂ' ಹಾಡಿದರು. ಬೆಳಗಾವಿಯ ಅಧಿವೇಶನದ ನಂತರ ಗಾಂಧೀಜಿ ಬೆಂಗಳೂರು, ಮಂಡ್ಯ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಮುಂತಾದ ಸ್ಥಳಗಳಿಗೆ ಪ್ರಯಾಣಿಸಿ ರಾಷ್ಟ್ರೀಯ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದರು. ಕರ್ನಾಟಕವು ಕಾಯ್ದೆ ಭಂಗ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿತು. ಕರ್ನಾಟಕದ ಮೈಲಾರ ಮಹದೇವಪ್ಪ ಗಾಂಧೀಜಿಯೊಂದಿಗೆ ಸಾಬರ್‌ಮತಿ ಆಶ್ರಮದಿಂದ ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿದ 78 ಸದಸ್ಯರಲ್ಲಿ ಒಬ್ಬರಾಗಿದ್ದರು. ಕರ್ನಾಟಕದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಅಂಬ್ಲಿ, ದಿವಾಕರ್, ಸದಾಶಿವರಾವ್, ಹನುಮಂತರಾವ್, ಗಂಗಾಧರ್‌ರಾವ್ ದೇಶಪಾಂಡೆ ಮುಂತಾದವರು ಆಯೋಜಿಸಿದರು. ಗಾಂಧೀಜಿ ದಂಡಿಯಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಿದ ದಿನವೇ ಈ ಸಂಘಟನೆಯು ಅಂಕೋಲಾದಲ್ಲಿ ಉಪ್ಪನ್ನು ತಯಾರಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಯಿತು. ಬ್ರಿಟಿಷರ ನಿರ್ಬಂಧವನ್ನು ಉಲ್ಲಂಘಿಗಿಸಿ ಸುಮಾರು 40,000 ಜನರು ಸತತವಾಗಿ 45 ದಿನಗಳ ಕಾಲ ಉಪ್ಪನ್ನು ತಯಾರಿಸಿದರು. ಅಂಕೋಲ ಉಪ್ಪಿನ ಸತ್ಯಾಗ್ರಹವು ಮಂಗಳೂರು, ಕಾಪು, ಉಡುಪಿ, ಕುಂದಾಪುರ, ಮೂಡುಬಿದರೆ, ಮಲ್ಪೆ, ಪುತ್ತೂರು, ಮುಂತಾದ ಕಡೆ ಪುನರಾವರ್ತಿತವಾಯಿತು.

1938ರಲ್ಲಿ ಶಿವಪುರದಲ್ಲಿ (ಮಂಡ್ಯ ಜಿಲ್ಲೆ) ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ಅಧಿವೇಶನವೊಂದನ್ನು ಆಯೋಜಿಸಿತ್ತು. ಸಮಿತಿಯು ಧ್ವಜ ಸತ್ಯಾಗ್ರಹವನ್ನು ಕೈಗೊಳ್ಳಲು ತೀರ್ಮಾನಿಸಿತು ಹಾಗು ಟಿ. ಸಿದ್ಧಲಿಂಗಯ್ಯನವರನ್ನು ಈ ಅಧಿವೇಶನದ ಅಧ್ಯಕ್ಷರನ್ನಾಗಿ ನೇಮಿಸಿತು. ಬ್ರಿಟಿಷರು ಅನೇಕ ನಾಯಕರನ್ನು ದಸ್ತಗಿರಿ ಮಾಡಿ ಹಾಗು ಅಧಿವೇಶನದಲ್ಲಿ ಜನತೆ ಭಾಗವಹಿಸದಂತೆ ನಿಷೇಧ ವಿಧಿಸಿದರು. ಆದರೆ ನಿಷೇಧವನ್ನು ಧಿಕ್ಕರಿಸಿ 25,000ಕ್ಕೂ ಹೆಚ್ಚು ಜನ ಭಾಗವಹಿಸಿ ತ್ರಿವರ್ಣ ಧ್ವಜವನ್ನು ಹಾರಿಸಿದರು. ಅದೇ ವರ್ಷದಲ್ಲಿ ವಿದುರಾಶ್ವತ್ಥದಲ್ಲಿ (ಚಿಕ್ಕಬಳ್ಳಾಪುರ ಜಿಲ್ಲೆ) ಮೆರವಣಿಗೆಯೊಂದನ್ನು ಆಯೋಜಿಸಲಾಯಿತು ಹಾಗು ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ಪೊಲೀಸರು ಗುಂಪಿನ ಮೇಲೆ ಲಾಠಿ ಪ್ರಹಾರ ಹಾಗು ಗುಂಡು ಹಾರಿಸಿದರು, ಇದರಲ್ಲಿ 32 ಜನ ಅಸುನೀಗಿದರು. ಈ ಘಟನೆಯು 'ಕರ್ನಾಟಕದ ಜಾಲಿಯನ್‌ವಾಲಾಬಾಗ್' ಎಂದು ಪ್ರಸಿದ್ಧವಾಗಿದೆ.

ಭಾರತದ ಇತರ ಕಡೆಗಳಲ್ಲಿ ನಡೆದಂತೆ ಕರ್ನಾಟಕದಾದ್ಯಂತ ಭಾರತ ಬಿಟ್ಟು ತೊಲಗಿ ಚಳುವಳಿಯ ಪರಿಣಾಮವಾಗಿ ಬ್ರಿಟಿಷರ ವಿರುದ್ಧ ಚಟುವಟಿಕೆಗಳು ಜರುಗಿದವು. ಅವುಗಳಲ್ಲಿ ಗಮನಾರ್ಹವಾದುದೆಂದರೆ ಈಸೂರು ದುರಂತ. ಶಿವಮೊಗ್ಗ ಜಿಲ್ಲೆಯ ಚಿಕ್ಕದೊಂದು ಹಳ್ಳಿಯಾದ ಈಸೂರು ಬ್ರಿಟಿಷ್ ಆಳ್ವಿಕೆಯಿಂದ ಸ್ವತಂತ್ರ್ಯ ಘೋಷಿಸಿಕೊಂಡಿತು. "ಏಸೂರು ಕೊಟ್ಟರೂ ಈಸೂರು ಕೊಡೆವು" ಎಂಬುದು ಗ್ರಾಮಸ್ಥರ ಪ್ರಸಿದ್ಧ

ಘೋಷಣೆಯಾಗಿತ್ತು. ಆ ಹಳ್ಳಿಯ ಜನ ಪಟೇಲ ಹಾಗು ಶಾನುಭೋಗರಿಂದ ಕಂದಾಯ ದಾಖಲೆಗಳನ್ನು ವಶಪಡಿಸಿಕೊಂಡು ಅವರಿಬ್ಬರನ್ನು ಹಳ್ಳಿಯಲ್ಲೆಲ್ಲಾ ಮೆರವಣಿಗೆ ಮಾಡಿದರು. ನಂತರ ತ್ರಿವರ್ಣ ಧ್ವಜವನ್ನು ವೀರಭದ್ರೇಶ್ವರ ದೇವಸ್ಥಾನದ ಮೇಲೆ ಹಾರಿಸಿದರು. ಪೊಲೀಸರು ಭಾರಿ ಲಾಠಿ ಪ್ರಹಾರ ಹಾಗು ಗುಂಡಿನ ದಾಳಿಯೊಂದಿಗೆ ಪ್ರತಿಕ್ರಿಯಿಸಿದರು. ಗ್ರಾಮದ ಜನರು, ತಹಶೀಲ್ದಾರ್ ಮತ್ತು ಪೊಲೀಸ್ ಅಧಿಕಾರಿಯನ್ನು ಕೊಲೆಮಾಡಿದರು. ಅನೇಕರನ್ನು ಬಂಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿರಿಸಿದರು. ಅವರಲ್ಲಿ ಗುರಪ್ಪ, ಮಲ್ಲಪ್ಪ, ಹಾಲಪ್ಪ, ಶಂಕರಪ್ಪ ಹಾಗು ಸೂರ್ಯನಾರಾಯಣಾಚಾರಿ ಎಂಬ ಐವರಿಗೆ ಗಲ್ಲು ಶಿಕ್ಷೆ ವಿಧಿಸಲಾಯಿತು. ಭಾರತದ ರಾಷ್ಟ್ರೀಯ ಚಳುವಳಿಯು ಭಾರತದ ಸ್ವಾತಂತ್ರ್ಯದೊಂದಿಗೆ 1947ರಲ್ಲಿ ಕೊನೆಗೊಂಡಿತು ಮತ್ತು ಮೈಸೂರು ಭಾರತ ಒಕ್ಕೂಟವನ್ನು ಸೇರಿತು.

ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಚುನಾಯಿತ ಪ್ರತಿನಿಧಿಗಳ 'ಜವಾಬ್ದಾರಿ ಸರ್ಕಾರ'ದ ರಚನೆಗಾಗಿ ಮಹಾರಾಜರನ್ನು ಒತ್ತಾಯಿಸಲು 'ಮೈಸೂರು ಚಲೋ' ಆಂದೋಲನವನ್ನು ಮೈಸೂರು ಕಾಂಗ್ರೆಸ್ ಹಮ್ಮಿಕೊಂಡಿತು. ಅನೇಕ ನಾಯಕರನ್ನು ಬಂಧಿಸಿ ಮೈಸೂರಿನಲ್ಲಿ ಕರ್ಫ್ಯೂ ವಿಧಿಸಲಾಯಿತು. ಜನರು ನಿಷೇಧವನ್ನು ಉಲ್ಲಂಘಿಸಿ ಮೈಸೂರು ಅರಮನೆಯ ಮುಂದೆ ಜಮಾವಣೆಗೊಂಡು 42 ದಿನಗಳ ಕಾಲ ಆಂದೋಲನ ನಡೆಸಿದರು. ಕೊನೆಗೆ ಮಹಾರಾಜರು ಜವಾಬ್ದಾರಿ ಸರ್ಕಾರದ ರಚನೆಯ ಬೇಡಿಕೆಯನ್ನು ಒಪ್ಪಿಕೊಂಡರು. ಇದು 'ಅರಮನೆ ಸತ್ಯಾಗ್ರಹ'ವೆಂದು ಜನಪ್ರಿಯವಾಗಿದೆ. ಕೆ.ಸಿ. ರೆಡ್ಡಿ ಮೈಸೂರು ರಾಜ್ಯದ (ಹಳೆಯ) ಪ್ರಥಮ ಮುಖ್ಯ ಮಂತ್ರಿಯಾದರು ಹಾಗು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಪ್ರಥಮ ರಾಜ ಪ್ರಮುಖರಾದರು.

ಚಟುವಟಿಕೆಗಳು

(1) ಮಹಾತ್ಮ ಗಾಂಧಿಯವರು ಆರಂಭಿಸಿದ ಚಳುವಳಿಗಳ ಒಂದು ಪಟ್ಟಿ ತಯಾರಿಸಿ.
(2) ರಾಷ್ಟ್ರೀಯ ಹೋರಾಟ ಕಾಲದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ರಮಾನಂದತೀರ್ಥರ ಪಾತ್ರದ ಬಗ್ಗೆ ಮಾಹಿತಿ ಸಂಗ್ರಹಿಸಿ.

ಪ್ರಶ್ನೆಗಳು

I. ಈ ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಅಧಿವೇಶನದ ಅಧ್ಯಕ್ಷತೆಯನ್ನು ಯಾರು ವಹಿಸಿದ್ದರು?
2. 1905 ರಲ್ಲಿ ಬಂಗಾಳವನ್ನು ಏಕೆ ವಿಭಜಿಸಲಾಯಿತು?
3. ಗಾಂಧೀಜಿಯ ಯಾವ ಸತ್ಯಾಗ್ರಹವು ಬ್ರಿಟಿಷರನ್ನು 'ತೀನ್ ಕಾಠಿಯ' ಪದ್ಧತಿಯನ್ನು ರದ್ದುಗೊಳಿಸುವಂತೆ ಮಾಡಿತು?
4. ಯಾವ ಘಟನೆಯು ಗಾಂಧೀಜಿ ಅಸಹಕಾರ ಚಳುವಳಿಯನ್ನು ಹಿಂಪಡೆಯುವಂತೆ ಮಾಡಿತು?
5. ಭಾರತಕ್ಕೆ ಸೈಮನ್ ಕಮಿಷನ್ ಭೇಟಿ ಕೊಟ್ಟಾಗ ಜನಪ್ರಿಯ ಘೋಷಣೆ ಯಾವುದಾಗಿತ್ತು.?
6. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಯಾವ ವರ್ಷ 'ಪೂರ್ಣ ಸ್ವರಾಜ್ಯ' ಘೋಷಿಸಿತು?
7. ಯಾವ ದುಂಡು ಮೇಜಿನ ಸಮ್ಮೇಳನದಲ್ಲಿ ಗಾಂಧೀಜಿ ಭಾಗವಹಿಸಿದ್ದರು?
8. 'ಪೂನಾ ಒಪ್ಪಂದ' ಯಾವ ವರ್ಷ ಸಹಿ ಹಾಕಲ್ಪಟ್ಟಿತು?
9. ನೇತಾಜಿ ಎಂದು ಪ್ರಸಿದ್ಧರಾಗಿದ್ದವರು ಯಾರು?

10. INA–ವಿಸ್ತರಿಸಿ ಬರೆಯಿರಿ.
11. ಐ.ಎನ್.ಎ. ವಿಚಾರಣೆಗಳು ಎಲ್ಲಿ ನಡೆಯಿತು?
12. 'ನೇರ ಕಾರ್ಯಾಚರಣೆ ದಿನ'ದ ಕರೆ ನೀಡಿದವರು ಯಾರು?
13. 'ಭಾರತದ ಉಕ್ಕಿನ ಮನುಷ್ಯ' ಎಂದು ಪ್ರಸಿದ್ಧರಾದವರು ಯಾರು?
14. ಕರ್ನಾಟಕದಲ್ಲಿ ಹೋಂ ರೂಲ್ ಲೀಗಿನ ಶಾಖೆ ಸ್ಥಾಪನೆಯಾಗಿದ್ದು ಎಲ್ಲಿ?
15. KPCC ವಿಸ್ತರಿಸಿ.
16. 'ಕರ್ನಾಟಕ ಕೇಸರಿ' ಎಂದು ಪ್ರಸಿದ್ಧರಾದವರು ಯಾರು?
17. ಈಸೂರಿನ ಜನಪ್ರಿಯ ಘೋಷಣೆ ಏನಾಗಿತ್ತು?

II. ಈ ಕೆಳಗಿನವುಗಳಿಗೆ ಎರಡು ಪದ ಇಲ್ಲವೇ ಎರಡು ವಾಕ್ಯಗಳಲ್ಲಿ ಉತ್ತರಿಸಿ

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಥಮ ಸಭೆ ಯಾವಾಗ ಮತ್ತು ಎಲ್ಲಿ ನಡೆಯಿತು?
2. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಯಾವುದಾದರೂ ಎರಡು ಉದ್ದೇಶಗಳನ್ನು ತಿಳಿಸಿರಿ.
3. ಯಾರಾದರೂ ಇಬ್ಬರು ಮಂದಗಾಮಿ ನಾಯಕರನ್ನು ಹೆಸರಿಸಿ.
4. ಯಾರಾದರೂ ಇಬ್ಬರು ತೀವ್ರಗಾಮಿ ನಾಯಕರನ್ನು ಹೆಸರಿಸಿ.
5. ಬಂಗಾಳವನ್ನು ಯಾರು ಮತ್ತು ಯಾವಾಗ ವಿಭಜಿಸಿದರು?
6. ಹೋಂ ರೂಲ್ ಲೀಗ್ ಚಳುವಳಿಯನ್ನು ಯಾರು ಆರಂಭಿಸಿದರು?
7. ಜಲಿಯನ್‌ವಾಲಾಬಾಗ್ ಕಗ್ಗೊಲೆಗೆ ಕಾರಣರು ಯಾರು ? ಅದು ಯಾವಾಗ ಜರುಗಿತು?
8. ಖಿಲಾಫತ್ ಚಳುವಳಿಯ ಯಾರಾದರೂ ಇಬ್ಬರು ನಾಯಕರನ್ನು ಹೆಸರಿಸಿರಿ
9. ಸ್ವರಾಜ್ ಪಕ್ಷವನ್ನು ಯಾರು ಸ್ಥಾಪಿಸಿದರು?
10. ಯಾವ ಕಾಂಗ್ರೆಸ್ ಅಧಿವೇಶನವು ಪೂರ್ಣ ಸ್ವರಾಜ್ಯವೇ ತನ್ನ ಗುರಿ ಎಂದು ಘೋಷಿಸಿತು? ಅದು ಯಾವ ವರ್ಷ ನಡೆಯಿತು?
11. ಗಾಂಧೀಜಿ ಉಪ್ಪಿನ ಸತ್ಯಾಗ್ರಹವನ್ನು ಎಲ್ಲಿಂದ ಆರಂಭಿಸಿದರು ಮತ್ತು ಅದು ಎಲ್ಲಿ ಕೊನೆಗೊಂಡಿತು?
12. ಪೂನಾ ಒಪ್ಪಂದಕ್ಕೆ ಸಹಿ ಹಾಕಿದವರು ಯಾರು?
13. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಥಮ ಅಧಿವೇಶನ ಎಲ್ಲಿ ಮತ್ತು ಯಾವಾಗ ನಡೆಯಿತು?
14. ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನ ಎಲ್ಲಿ ಜರುಗಿತು ಮತ್ತು ಯಾವಾಗ?

III. ಈ ಕೆಳಗಿನವುಗಳಿಗೆ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ

1. ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಪ್ರಮುಖ ಅಂಶಗಳು ಯಾವವು?
2. ತೀವ್ರಗಾಮಿಗಳ ಏಳಿಗೆಗೆ ಕಾರಣಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.
3. ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಕರ್ನಾಟಕದ ಪಾತ್ರವನ್ನು ವಿವರಿಸಿರಿ.

IV. ಈ ಕೆಳಗಿನವುಗಳಿಗೆ 30ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ

1. 1885 ರಿಂದ 1920ರವರೆಗಿನ ಭಾರತದ ರಾಷ್ಟ್ರೀಯ ಚಳುವಳಿಯನ್ನು ವಿಶದಪಡಿಸಿರಿ.
2. ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಗಾಂಧೀಜಿಯ ಪಾತ್ರವನ್ನು ಚರ್ಚಿಸಿರಿ.

❋ ❋ ❋ ❋

ಅಧ್ಯಾಯ–7.7

ಕರ್ನಾಟಕದ ಏಕೀಕರಣ

ಭಾರತದ ಸ್ವಾತಂತ್ರ್ಯ ಕಾಯ್ದೆ 1947 (Indian Independence Act 1947) ಭಾರತ ಮತ್ತು ಪಾಕಿಸ್ತಾನದ ರಚನೆಯನ್ನು ಮಾಡಿತು. 562 ದೇಶೀಯ ರಾಜ್ಯಗಳಿಗೆ ಭಾರತ ಅಥವಾ ಪಾಕಿಸ್ತಾನವನ್ನು ಸೇರುವ ಇಲ್ಲವೇ ಸ್ವತಂತ್ರ್ಯವಾಗಿರುವ ಆಯ್ಕೆ ನೀಡಿತು. ಅಂದಿನ ಗೃಹಮಂತ್ರಿ ಸರ್ದಾರ್ ವಲ್ಲಬಭಾಯಿ ಪಟೇಲ್ ಸ್ವತಂತ್ರವಾಗಿರಬಯಸಿದ್ದ ದೇಶೀಯ ರಾಜ್ಯಗಳನ್ನು ಭಾರತದ ಒಕ್ಕೂಟವನ್ನು ಸೇರುವಂತೆ ಮನವೊಲಿಸಿದರು. ವಿಲೀನ ಒಪ್ಪಂದಕ್ಕೆ (Instrument of Accesion) ಸಹಿ ಹಾಕಿದ ರಾಜರಿಗೆ ಸರ್ಕಾರವು ನಿಗದಿತ ಮೊತ್ತದ 'ರಾಜಧನವನ್ನು' ನೀಡಿತು ಹಾಗು ಕೆಲವು ಸವಲತ್ತುಗಳನ್ನು ಮತ್ತು ಬಿರುದುಗಳನ್ನು ಹೊಂದಿರಲು ಅನುಮತಿಸಿತು. ಹೈದರಾಬಾದ್, ಕಾಶ್ಮೀರ ಹಾಗು ಜೂನಾಗಡದ ರಾಜರು ಭಾರತದ ಒಕ್ಕೂಟವನ್ನು ಸೇರಲು ನಿರಾಕರಿಸಿದರು. ಜೂನಾಗಡದ ನವಾಬ ಪಾಕಿಸ್ತಾನಕ್ಕೆ ಸೇರಲು ಪ್ರಯತ್ನಗಳನ್ನು ನಡೆಸಿದ್ದ ಹಾಗು ಜನರು ಅವನ ವಿರುದ್ಧ ದಂಗೆಯೆದ್ದದ್ದರಿಂದ ನವಾಬ ಪಾಕಿಸ್ತಾನಕ್ಕೆ ಪಲಾಯನ ಮಾಡಿದನು. ಸರ್ದಾರ್ ಪಟೇಲರು ಜೂನಾಗಡವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದರು. ಕಾಶ್ಮೀರದ ರಾಜ ಹರಿಸಿಂಗ್ ಭಾರತದ ಒಕ್ಕೂಟವನ್ನು ಸೇರುವ ನಿರ್ಧಾರವನ್ನು ನಿಧಾನ ಮಾಡುತ್ತಿದ್ದುದರಿಂದ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ದಾಳಿ ಕೋರರನ್ನು ಕಳುಹಿಸುವ ಅವಕಾಶ ಪಾಕಿಸ್ತಾನಕ್ಕೆ ದೊರೆಯಿತು. ಭಾರತದ ಸೇನೆಯು ಈ ದಾಳಿಕೋರರನ್ನು ಹಿಮ್ಮೆಟ್ಟಿಸಿತು. ಜಮ್ಮು ಮತ್ತು ಕಾಶ್ಮೀರದ ನ್ಯಾಶನಲ್ ಕಾನ್‌ಫರೆನ್ಸ್‌ನ ನಾಯಕರಾದ ಷೇಕ್ ಅಬ್ದುಲ್ಲಾ ಭಾರತದ ಒಕ್ಕೂಟವನ್ನು ಸೇರಲು ಒಪ್ಪಿದರು. ಆಗಿನಿಂದಲೂ ಪಾಕಿಸ್ತಾನ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಅನೇಕ ಸಲ ಪ್ರಯತ್ನಿಸಿದೆ ಹಾಗು ಕಾಶ್ಮೀರದ ಹಲವು ಭಾಗಗಳನ್ನು ವಶಪಡಿಸಿಕೊಂಡಿದೆ. ಭಾರತದಿಂದ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಅದು ಈಗ ಭಯೋತ್ಪಾದಕರನ್ನು ಕಳುಹಿಸುತ್ತಿದೆ. ಪೊಲೀಸ್ ಕಾರ್ಯಾಚರಣೆಯ ನಂತರ ಹೈದರಾಬಾದನ್ನು ಭಾರತದೊಂದಿಗೆ ವಿಲೀನಗೊಳಿಸಲಾಯಿತು. ಹೈದರಾಬಾದಿನ ಜನರ ಮೇಲೆ ನಿಜಾಮನ ದಬ್ಬಾಳಿಕೆಯಿಂದಾಗಿ ಈ ಕ್ರಮ ಅನಿವಾರ್ಯವಾಯಿತು.

ರಾಜ್ಯಗಳ ಪುನರ್ ಸಂಘಟನೆ:

ಹೈದರಾಬಾದಿನ ವಿಲೀನದ ನಂತರ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ತೆಲುಗು ಭಾಷೆಯನ್ನು ಮಾತನಾಡುವ ಜನರನ್ನೆಲ್ಲಾ ಒಗ್ಗೂಡಿಸಿ ಆಂಧ್ರಪ್ರದೇಶವನ್ನು ಸೃಷ್ಟಿಸಲು ಒಪ್ಪಿತು. ಪೊಟ್ಟಿ ಶ್ರೀರಾಮುಲು ಆಂಧ್ರಪ್ರದೇಶದ ರಚನೆಯನ್ನು ಒತ್ತಾಯಿಸಿ ಆಮರಣಾಂತ ಉಪವಾಸವನ್ನು ಆರಂಭಿಸಿ 58ನೇ ದಿನದಂದು 1952ರಲ್ಲಿ ಸಾವನ್ನಪ್ಪಿದರು. ಇದು ಪ್ರಕ್ಷುಬ್ದ ಪರಿಸ್ಥಿತಿಯನ್ನು ನಿರ್ಮಿಸಿತು. ಈ ಪ್ರಕ್ಷುಬ್ದತೆಯು ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ಏಕೀಕರಣವನ್ನು ಬಯಸುತ್ತಿದ್ದ ಇತರೆ ಪ್ರಾಂತ್ಯಗಳಿಗೂ ಹರಡಿತು.


ಕನ್ನಡ ಮಾತನಾಡುತ್ತಿದ್ದ ಪ್ರದೇಶಗಳೂ ಏಕೀಕರಣ ಬಯಸುತ್ತಿದ್ದವು. ಆದರೆ ಆ ಪ್ರದೇಶಗಳು ಮದ್ರಾಸ್ ಮತ್ತು ಬಾಂಬೆ ಪ್ರಾಂತ್ಯಾಡಳಿತ ಹಾಗು ಉಳಿದ ಭಾಗಗಳು ಮೈಸೂರು ರಾಜ್ಯ, ಹೈದರಾಬಾದ್, ಸಾಂಗ್ಲಿ, ಮೀರಜ್, ಜಮಖಂಡಿ, ಸಂಡೂರು, ಸವಣೂರು, ಮುಧೋಳ, ಅಕ್ಕಲ್‌ಕೋಟೆ, ಜತ್ತ, ರಾಮದುರ್ಗ, ಮುಂತಾದ ದೇಶೀಯ ಆಡಳಿತಗಳಲ್ಲಿದ್ದವು.

ಐಕ್ಯತೆಗೆ ಕಾರಣವಾದ ಪ್ರಮುಖ ಅಂಶಗಳು:

1. ಸಂಯುಕ್ತ ಕರ್ನಾಟಕ, ವಿಶಾಲ ಕರ್ನಾಟಕ, ಕರ್ನಾಟಕ ವೃತ್ತ, ಮುಂತಾದ ವೃತ್ತ ಪತ್ರಿಕೆಗಳು.
2. ಆಲೂರು ವೆಂಕಟರಾಯರ ಪ್ರಸಿದ್ಧ ಕೃತಿ 'ಕರ್ನಾಟಕ ಗತ ವೈಭವ' ಮತ್ತು ಅಂತಹ ಇತರ ಕೃತಿಗಳು.
3. ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್, ಮುಂತಾದ ಸಂಘ–ಸಂಸ್ಥೆಗಳು.
4. ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು', ಶಾಂತ ಕವಿಯ 'ರಕ್ಷಿಸು ಕರ್ನಾಟಕ ದೇವಿ', ಕುವೆಂಪುರವರ 'ಜಯ ಭಾರತ ಜನನಿಯ ತನುಜಾತೆ' ಬಿ.ಎಂ.ಶ್ರೀಯವರ 'ಏರಿಸು ಹಾರಿಸು ಕನ್ನಡದ ಬಾವುಟ', ಮಂಗೇಶ ಪೈಯವರ 'ತಾಯೆ ಬಾರೆ ಮೊಗವ ತೋರೆ ಕನ್ನಡಿಗರ ಮಾತೆಯೆ' ಮುಂತಾದ ಕವನಗಳು
5. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಕರ್ನಾಟಕ ಸಭಾ, ಮುಂತಾದವು ಏಕೀಕರಣದ ಕಾರ್ಯವನ್ನು ಕೈಗೆತ್ತಿಕೊಂಡವು. ಕರ್ನಾಟಕ ಸಭಾ ಮುಂದೆ ಕರ್ನಾಟಕ ಏಕೀಕರಣ ಸಮಿತಿಯಾಯಿತು. ಸಿದ್ದಪ್ಪ ಕಂಬ್ಳಿ ಇದರ ಪ್ರಥಮ ಅಧ್ಯಕ್ಷರಾಗಿದ್ದರು.
6. ಭಾಷಾಧಾರಿತ ರಾಜ್ಯಗಳ ರಚನೆಯನ್ನು ಗಾಂಧೀಜಿ ಸಹ 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಒಪ್ಪಿಕೊಂಡರು.
7. 1928ರ ನೆಹರೂ ಸಮಿತಿ ಕರ್ನಾಟಕದ ಏಕೀಕರಣಕ್ಕೆ ಶಿಫಾರಸ್ಸು ಮಾಡಿತ್ತು.
8. ಆಲೂರು ವೆಂಕಟರಾಯರು, ಸಿದ್ದಪ್ಪ ಕಂಬ್ಲಿ, ಗುದ್ಲೆಪ್ಪ ಹಳ್ಳಿಕೇರಿ, ಆರ್.ಎಚ್. ದೇಶಪಾಂಡೆ, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀನಿವಾಸರಾವ್ ಮಂಗಳವೇಡೆ, ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ, ಅಂದಾನಪ್ಪ ದೊಡ್ಡಮೇಟಿ ಮುಂತಾದ ನಾಯಕರ ಪ್ರಯತ್ನಗಳು.


ಆಲೂರು ವೆಂಕಟರಾಯರು

ರಾಜ್ಯಗಳ ಪುನರ್‌ರಚನೆಯ ಪ್ರಶ್ನೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು 'ಧಾರ್ ಸಮಿತಿ'ಯನ್ನು ನೇಮಿಸಿತು. ಈ ಸಮಿತಿಯು ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ತಿರಸ್ಕರಿಸಿತು ಹಾಗು ಇದು ರಾಷ್ಟ್ರೀಯ ಐಕ್ಯತೆಗೆ ಧಕ್ಕೆಯುಂಟು ಮಾಡುತ್ತದೆ ಎಂದು ಅಭಿಪ್ರಾಯಪಟ್ಟಿತು. ಇದರಿಂದ ಜನರು ಅತೃಪ್ತಗೊಂಡರು ಮತ್ತು ಹೋರಾಟಗಳು ಮುಂದುವರೆದವು. 1949ರಲ್ಲಿ 'ಜೆ.ವಿ.ಪಿ ಸಮಿತಿ'ಯನ್ನು (ಜವಹಾರ್‌ಲಾಲ್ ನೆಹರು, ವಲ್ಲಬಭಾಯಿ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯ) ರಚಿಸಲಾಯಿತು. ಈ ಸಮಿತಿಯು ಆಂಧ್ರಪ್ರದೇಶದ ರಚನೆಗೆ ಒಪ್ಪಿಗೆ ಸೂಚಿಸಿತಾದರೂ ಕರ್ನಾಟಕದ ರಚನೆಯನ್ನು ತಿರಸ್ಕರಿಸಿತು. ಆಗ ಹಿರಿಯ ಕಾಂಗ್ರೆಸ್ ನಾಯಕರಾಗಿದ್ದ ಅಂದಾನಪ್ಪ ದೊಡ್ಡಮೇಟಿ ಬಾಂಬೆ ಶಾಸನ ಸಭೆಗೆ ರಾಜೀನಾಮೆ ನೀಡಿ ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣವನ್ನು ಒತ್ತಾಯಿಸಿ ಉಪವಾಸವನ್ನು ಆರಂಭಿಸಿದರು. ಅಂತಿಮವಾಗಿ ರಾಜ್ಯಗಳ ಪುನರ್ವಿಂಗಡನಾ ಸಮಿತಿಯನ್ನು 1953ರಲ್ಲಿ ರಚಿಸಲಾಯಿತು. ಈ ಸಮಿತಿಯಲ್ಲಿ ಫಜಲ್ ಅಲಿ ಚೇರಮನ್ನರಾಗಿದ್ದರು ಮತ್ತು ಎಚ್.ಎನ್. ಖುಂಜ್ರು ಹಾಗು ಕೆ.ಎಂ. ಪಣಿಕ್ಕರ್ ಸದಸ್ಯರಾಗಿದ್ದರು. ಆದ್ದರಿಂದ ಇದನ್ನು 'ಫಜಲ್ ಅಲಿ ಸಮಿತಿ' ಎಂದೂ ಕರೆಯಲಾಗಿದೆ. 1955ರಲ್ಲಿ


1956ರಲ್ಲಿದ್ದಂತೆ ಏಕೀಕೃತ ಕರ್ನಾಟಕ ರಾಜ್ಯ
ಹಳೇ ಮೈಸೂರು ರಾಜ್ಯದ 9 ಜಿಲ್ಲೆಗಳು
ಸ್ವತಂತ್ರ ಕೊಡಗು ರಾಜ್ಯ
ಮದ್ರಾಸ್ ಪ್ರಾಂತ್ಯದ ಎರಡು ಜಿಲ್ಲೆಗಳು ಮತ್ತು ಕೊಳ್ಳೇಗಾಲ ತಾಲ್ಲೂಕು
ಬಾಂಬೆ ಪ್ರಾಂತ್ಯದಿಂದ 4 ಜಿಲ್ಲೆಗಳು
ಹೈದರಾಬಾದ್ ಪ್ರಾಂತ್ಯದಿಂದ 3 ಜಿಲ್ಲೆಗಳು
ಮಹಾರಾಷ್ಟ್ರ
ಗೋವಾ
ಆಂಧ್ರಪ್ರದೇಶ
ಅರಬ್ಬಿ ಸಮುದ್ರ
ಕೊಳ್ಳೇಗಾಲ
ತಮಿಳುನಾಡು
ಕೇರಳ
ಹಿಂದೂ ಮಹಾಸಾಗರ
ಉ
ಪ
ಪೂ
ದ
1) ಬೆಂಗಳೂರು
2) ಕೋಲಾರ
3) ತುಮಕೂರು
4) ಚಿತ್ರದುರ್ಗ
5) ಶಿವಮೊಗ್ಗ
6) ಚಿಕ್ಕಮಗಳೂರು
7) ಹಾಸನ
8) ಮಂಡ್ಯ
9) ಮೈಸೂರು
10) ಕೊಡಗು
11) ದಕ್ಷಿಣ ಕನ್ನಡ
12) ಬಳ್ಳಾರಿ
13) ಉತ್ತರ ಕನ್ನಡ
14) ಧಾರವಾಡ
15) ಬೆಳಗಾವಿ
16) ಬಿಜಾಪುರ
17) ರಾಯಚೂರು
18) ಕಲಬುರಗಿ
19) ಬೀದರ್

ಅದು ವರದಿ ಸಲ್ಲಿಸಿತು. ಈ ಸಮಿತಿಯ ಶಿಫಾರಸ್ಸುಗಳು 1 ನವೆಂಬರ್ 1956ರಂದು ಅನುಷ್ಠಾನಗೊಂಡು ಪುನರ್‌ಸಂಘಟಿತ ಮೈಸೂರು ರಾಜ್ಯ ಅಸ್ಥಿತ್ವಕ್ಕೆ ಬಂದಿತು. ಇದನ್ನು ಹೊಸ ಮೈಸೂರು ರಾಜ್ಯ ಎಂದು ಕರೆಯಲಾಯಿತು.

ಹಳೆಯ ಮೈಸೂರು ರಾಜ್ಯ, ಹೈದರಾಬಾದ್ ಪ್ರಾಂತ್ಯದಿಂದ ರಾಯಚೂರು, ಬೀದರ್ ಮತ್ತು ಗುಲ್‌ಬರ್ಗಾ ಜಿಲ್ಲೆಗಳು, ಬಾಂಬೆ ಪ್ರಾಂತ್ಯದಿಂದ ಬೆಳಗಾವಿ, ಧಾರವಾಡ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಹಾಗು ಮದ್ರಾಸ್ ಪ್ರಾಂತ್ಯದಿಂದ ಬಳ್ಳಾರಿ, ದಕ್ಷಿಣ ಕನ್ನಡ ಮತ್ತು ಕೊಳ್ಳೇಗಾಲ ಹಾಗು ಕೊಡಗುಗಳನ್ನು ಒಗ್ಗೂಡಿಸಿ 1 ನವೆಂಬರ್ 1956ರಂದು ಏಕೀಕೃತ ನವ ಮೈಸೂರು ರಾಜ್ಯ ರಚಿಸಲ್ಪಟ್ಟಿತು. ಇದರಲ್ಲಿ 19 ಜಿಲ್ಲೆಗಳಿದ್ದವು. ಎಸ್. ನಿಜಲಿಂಗಪ್ಪನವರು ಏಕೀಕೃತ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾದರು. 1 ನವೆಂಬರ್ 1973ರಂದು ಇದು ಕರ್ನಾಟಕ ಎಂದು ಮರು ನಾಮಕರಣಗೊಂಡಿತು. ಆಗ ದೇವರಾಜ ಅರಸ್ ಮುಖ್ಯಮಂತ್ರಿಯಾಗಿದ್ದರು.



ಎಸ್. ನಿಜಲಿಂಗಪ್ಪ



ಡಿ. ದೇವರಾಜ ಅರಸ್

ಚಟುವಟಿಕೆಗಳು

(1) ಹಳೆ ಮೈಸೂರು ರಾಜ್ಯವನ್ನು ಹೊರತು ಪಡಿಸಿ ವಿವಿಧ ಆಡಳಿತಕ್ಕೊಳಪಟ್ಟ ಕನ್ನಡದ ವಿಭಿನ್ನ ಸ್ಥಳಗಳ ಒಂದು ಪಟ್ಟಿ ತಯಾರಿಸಿ

(2) ಕರ್ನಾಟಕದ ಭೂಪಟದಲ್ಲಿ ಇಂದಿನ ಕರ್ನಾಟಕದ ಜಿಲ್ಲೆಗಳನ್ನು ಗುರುತಿಸಿ.

ಪ್ರಶ್ನೆಗಳು

I. ಈ ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ

1. ದೇಶೀಯ ರಾಜ್ಯಗಳನ್ನು ಭಾರತದ ಒಕ್ಕೂಟವನ್ನು ಸೇರುವಂತೆ ಮನ ಒಲಿಸಿದವರು ಯಾರು?
2. ಆಲೂರು ವೆಂಕಟರಾಯರ ಪ್ರಸಿದ್ಧ ಕೃತಿ ಯಾವುದು?
3. ರಾಜ್ಯಪುನರ್ ವಿಂಗಡಣಾ ಸಮಿತಿಯ ಛೇರ್‌ಮನ್ನರು ಯಾರಾಗಿದ್ದರು?
4. ಏಕೀಕರಣದನಂತರದ ಮೈಸೂರಿನ ಪ್ರಥಮ ಮುಖ್ಯ ಮಂತ್ರಿಯನ್ನು ಹೆಸರಿಸಿ.

II. ಈ ಕೆಳಗಿನವುಗಳಿಗೆ ಎರಡು ಪದ ಇಲ್ಲವೇ ಎರಡು ವಾಕ್ಯಗಳಲ್ಲಿ ಉತ್ತರಿಸಿ

1. ಕರ್ನಾಟಕದ ಏಕೀಕರಣ ಚಳುವಳಿಯ ಯಾರಾದರು ಇಬ್ಬರು ನಾಯಕರನ್ನು ಹೆಸರಿಸಿ.
2. ರಾಜ್ಯಗಳ ಪುನರ್ ರಚನೆಗಾಗಿ ರಚಿಸಲಾದ ಯಾವುದಾದರೂ ಎರಡು ಸಮಿತಿಗಳನ್ನು ತಿಳಿಸಿ.
3. ಜೆ.ವಿ.ಪಿ. ಸಮಿತಿಯ ಯಾರಾದರೂ ಇಬ್ಬರು ಸದಸ್ಯರನ್ನು ಹೆಸರಿಸಿ.

III. ಈ ಕೆಳಗಿನವುಗಳಿಗೆ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ

1. ಕರ್ನಾಟಕದ ಏಕೀಕರಣದ ಸಮಯದಲ್ಲಿ ಕನ್ನಡಿಗರಲ್ಲಿ ಐಕ್ಯತೆಯನ್ನು ಮೂಡಿಸಲು ಕಾರಣವಾದ ಅಂಶಗಳನ್ನು ಗುರುತಿಸಿ.
2. ಕರ್ನಾಟಕದ ಏಕೀಕರಣ ಚಳುವಳಿಯನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

❋ ❋ ❋ ❋

ಅಧ್ಯಾಯ–8

ಭೂಪಟ ಅಧ್ಯಯನ


ಮಹತ್ವದ ಐತಿಹಾಸಿಕ ಸ್ಥಳಗಳು:

(1)	ಹರಪ್ಪ	(11)	ಹಂಪಿ
(2)	ತಕ್ಷಶಿಲಾ	(12)	ಬೀದರ್
(3)	ಪಾಟಲಿಪುತ್ರ	(13)	ಬಿಜಾಪುರ
(4)	ಬಾದಾಮಿ	(14)	ಕಲ್ಕತ್ತ
(5)	ಕಂಚಿ	(15)	ಬಾಂಬೆ
(6)	ಹಳೇಬೀಡು	(16)	ಪಾಂಡಿಚೆರಿ
(7)	ದೆಹಲಿ	(17)	ಶ್ರೀರಂಗಪಟ್ಟಣ
(8)	ದೇವಗಿರಿ	(18)	ಮೀರತ್
(9)	ಪಾಣಿಪತ್	(19)	ಜಲಿಯನ್ ವಾಲಬಾಗ್
(10)	ಆಗ್ರಾ	(20)	ದಂಡಿ

ಸೂಚನೆ:

1. ಕೊಟ್ಟಿರುವ 20 ಸ್ಥಳಗಳಲ್ಲಿ ಯಾವುದಾದರೂ 8 ಸ್ಥಳಗಳನ್ನು ಭಾರತದ ಭೂಪಟದಲ್ಲಿ ಗುರುತಿಸಲು ಕೇಳಲಾಗುವುದು. ವಿದ್ಯಾರ್ಥಿಗಳು ಅವುಗಳಲ್ಲಿ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ, ಗುರುತಿಸಲಾದ ಪ್ರತಿಯೊಂದು ಸ್ಥಳದ ಬಗ್ಗೆಯೂ ಎರಡು ವಾಕ್ಯಗಳಲ್ಲಿ ವಿವರಣೆ ನೀಡುವುದು ಈ ಭೂಪಟದ ಪ್ರಶ್ನೆಗೆ ಒಟ್ಟು ಹತ್ತು ಅಂಕಗಳು ನಿಗದಿಯಾಗಿದ್ದು, 5 ಅಂಕಗಳನ್ನು ಸ್ಥಳಗಳನ್ನು ಗುರುತಿಸಿದ್ದಕ್ಕೆ ಮತ್ತು 5 ಅಂಕಗಳನ್ನು ವಿವರಣೆ ಬರೆದುದಕ್ಕು ನೀಡಲಾಗುವುದು.
2. ವಿದ್ಯಾರ್ಥಿಯು ಸ್ಥಳಗಳ ಐತಿಹಾಸಿಕ ಪ್ರಾಮುಖ್ಯತೆಯ ಬಗ್ಗೆ ಈ ಪುಸ್ತಕದಲ್ಲಿ ವಿವರಿಸಿರುವಂತೆ ಬರೆಯುವುದು.
3. ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಭೂಪಟಕ್ಕೆ ಬದಲಾಗಿ 10 ಅಂಕಗಳ ಪ್ರಬಂಧ ರೀತಿಯ ಪರ್ಯಾಯ ಪ್ರಶ್ನೆಯನ್ನು ಕೇಳಲಾಗುವುದು.

(1) **ಹರಪ್ಪ:** ಇದು ಸಿಂಧೂ ನಾಗರಿಕತೆಯ ಪ್ರಮುಖ ನಿವೇಶನಗಳಲ್ಲಿ ಒಂದಾಗಿದೆ. ಇದು ರಾವಿ ನದಿಯ ದಡದಲ್ಲಿದೆ. ಇದು ಇಂದು ಪಾಕಿಸ್ತಾನದ ಪಶ್ಚಿಮ ಪಂಜಾಬ್‌ನ ಮೊಂಟೆಗೊಮರಿ ಜಿಲ್ಲೆಯಲ್ಲಿದೆ. 1921ರಲ್ಲಿ ದಯರಾಂ ಸಹಾನಿಯವರು ಈ ನಿವೇಶನವನ್ನು ಉತ್ಖನನ ಮಾಡಿದರು. ಮಹಾ ಉಗ್ರಾಣ ಇಲ್ಲಿ ಕಂಡುಬರುವ ಪ್ರಮುಖ ಕಟ್ಟಡವಾಗಿದೆ.


ಐತಿಹಾಸಿಕ ಪ್ರಮುಖ ಸ್ಥಳಗಳು
ತಕ್ಷಶಿಲ
ಹರಪ್ಪ
ಜಲಿಯನ್‌ವಾಲಬಾಗ್
ಪಾಕಿಸ್ತಾನ
ಪಾಣಿಪತ್
ಮೀರತ್
ದೆಹಲಿ
ನೇಪಾಳ
ಆಗ್ರಾ
ಪಾಟಲಿಪುತ್ರ
ಬಾಂಗ್ಲಾದೇಶ್
ಕಲ್ಕತ್ತೆ
ಮಾಯನ್ಮಾರ್
ದಂಡಿ
ದೇವಗಿರಿ
ಬಾಂಬೆ
ಬೀದರ್
ಬಿಜಾಪುರ
ಬಾದಾಮಿ
ಹಂಪಿ
ಅರಬ್ಬಿ ಸಮುದ್ರ
ಬಂಗಾಳ ಕೊಲ್ಲಿ
ಹಳೇಬೀಡು
ಕಂಚಿ
ಶ್ರೀರಂಗಪಟ್ಟಣ
ಪಾಂಡಿಚೆರಿ
ಶ್ರೀಲಂಕಾ
ಉ
ಪ
ಪೂ
ದ
ಹಿಂದೂ ಮಹಾಸಾಗರ

2015-16

(2) **ತಕ್ಷಶಿಲಾ:**ಇದು ಪಾಕಿಸ್ತಾನದಲ್ಲಿದೆ. ಇದು ಗಾಂಧಾರ ಪ್ರಾಂತ್ಯದ ರಾಜಧಾನಿಯಾಗಿತ್ತು. ತಕ್ಷಶಿಲಾ ವಿಶ್ವವಿದ್ಯಾಲಯವು ಪ್ರಾಚೀನ ಭಾರತದಲ್ಲಿ ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಕೌಟಿಲ್ಯನು ಈ ವಿಶ್ವವಿದ್ಯಾಲಯದಲ್ಲಿ ಆಚಾರ್ಯನಾಗಿದ್ದನು.

(3) **ಪಾಟಲಿಪುತ್ರ:** ಗಂಗಾನದಿಯ ದಂಡೆಯ ಮೇಲಿರುವ ಇದು ಪ್ರಸ್ತುತ ಪಾಟ್ನ ಎಂದು ಕರೆಯಲ್ಪಡುತ್ತಿರುವ ಬಿಹಾರ ರಾಜ್ಯದ ರಾಜಧಾನಿಯಾಗಿದೆ. ಇದು ಮಗಧ ಸಾಮ್ರಜ್ಯ, ಮೌರ್ಯರು ಮತ್ತು ಗುಪ್ತರ ರಾಜಧಾನಿಯಾಗಿತ್ತು.

(4) **ಬಾದಾಮಿ:** ಇದು ಬಾಗಲಕೋಟೆ ಜಿಲ್ಲೆಯಲ್ಲಿದೆ. ಬಾದಾಮಿಯ ಆರಂಭಿಕ ಹೆಸರು ವಾತಾಪಿಯಾಗಿದ್ದು, ಇದು ಚಾಲುಕ್ಯರ ರಾಜಧಾನಿಯಾಗಿತ್ತು, ಇದು ಗುಹಾಂತರ ದೇವಾಲಯಗಳಿಗೆ ಪ್ರಸಿದ್ಧಿಯಾಗಿದೆ.

(5) **ಕಂಚಿ:** (ಕಾಂಚಿಪುರಂ) ಇದು ತಮಿಳುನಾಡಿನ ಮದ್ರಾಸ್ ಸಮೀಪದಲ್ಲಿದೆ. ಇದು ಪಲ್ಲವರ ರಾಜಧಾನಿಯಾಗಿತ್ತು. ಈ ನಗರವು ಹಲವಾರು ಶೈವ ಮತ್ತು ವೈಷ್ಣವ ದೇವಾಲಯಗಳಿಗೆ ಪ್ರಸಿದ್ಧಿಯಾಗಿದೆ. ವಿಶ್ವ ಪ್ರಸಿದ್ಧ ಕಾಮಾಕ್ಷಿ ದೇವಾಲಯ ಇಲ್ಲಿದೆ.

(6) **ಹಳೇಬೀಡು:** ಇದು ಹಾಸನ ಜಿಲ್ಲೆಯಲ್ಲಿದೆ. ಇದರ ಮೊದಲ ಹೆಸರು ದೋರ ಸಮುದ್ರ ಮತ್ತು ಇದು ಹೊಯ್ಸಳರ ರಾಜಧಾನಿಯಾಗಿತ್ತು. ಹೊಯ್ಸಳೇಶ್ವರ ಮತ್ತು ಶಾಂತಳೇಶ್ವರ ದೇವಾಲಯಗಳು ಇಲ್ಲಿವೆ.

(7) **ದೆಹಲಿ:** ಇದು ಯಮುನಾ ನದಿಯ ದಡದಲ್ಲಿದೆ. ಇದು ದೆಹಲಿ ಸುಲ್ತಾನರ ರಾಜಧಾನಿಯಾಗಿದ್ದಿತ್ತಲ್ಲದೆ ಕೆಲಕಾಲ ಮೊಘಲರ ರಾಜಧಾನಿಯೂ ಆಗಿತ್ತು. ಕುತುಬ್ ಮಿನಾರ್, ಕೆಂಪುಕೋಟೆ, ಜಾಮಿ ಮಸೀದಿ ಮುಂತಾದ ಸ್ಮಾರಕಗಳು ಇಲ್ಲಿವೆ.

(8) **ದೇವಗಿರಿ:** ಇದು ಮಹಾರಾಷ್ಟ್ರದಲ್ಲಿದೆ. ಅಲ್ಲಾವುದ್ದೀನ್ ಖಿಲ್ಜಿಯು ಈ ನಗರದ ಮೇಲೆ ದಂಡಯಾತ್ರೆಗಳನ್ನು ಕೈಗೊಂಡನು. ಮಹಮದ್ ಬಿನ್ ತೊಘಲಕನು ದೇವಗಿರಿಯ ಸಮೀಪ ದೌಲತಾಬಾದ್ ಎಂಬ ಹೊಸನಗರವನ್ನು ನಿರ್ಮಿಸಿದನು ಹಾಗು ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಅಲ್ಪಕಾಲ ಸ್ಥಳಾಂತರಿಸಿದ್ದನು.

(9) **ಪಾಣಿಪತ್:** ಇದು ಹರಿಯಾಣ ರಾಜ್ಯದಲ್ಲಿದೆ. ಭಾರತದ ಇತಿಹಾಸದಲ್ಲಿ ಇದೊಂದು ಪ್ರಸಿದ್ಧ ಕದನ ಭೂಮಿಯಾಗಿದ್ದು, ಇಲ್ಲಿ ಮೂರು ಪ್ರಮುಖ ಕದನಗಳು ಜರುಗಿದವು.

(10) **ಆಗ್ರಾ:** ಇದು ಉತ್ತರ ಪ್ರದೇಶದಲ್ಲಿ ಯಮುನಾ ನದಿಯ ದಡದ ಮೇಲಿದೆ. ಇದನ್ನು ಸಿಕಂದರ್ ಲೋಧಿಯು ನಿರ್ಮಿಸಿದನು. ಇದು ಮೊಘಲರ ರಾಜಧಾನಿಯಾಯಿತು. ತಾಜಮಹಲ್ ಆಗ್ರಾದಲ್ಲಿನ ಅತ್ಯಂತ ಪ್ರಮುಖ ಸ್ಮಾರಕವಾಗಿದೆ.

(11) **ಹಂಪಿ:** ತುಂಗಭದ್ರಾ ನದಿಯ ದಡದ ಮೇಲಿರುವ ಇದು ಬಳ್ಳಾರಿ ಜಿಲ್ಲೆಯಲ್ಲಿದೆ. ಇದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ವಿರೂಪಾಕ್ಷ ದೇವಾಲಯ, ವಿಜಯ ವಿಠ್ಠಲ ದೇವಾಲಯ, ಕಲ್ಲಿನ ರಥ ಮುಂತಾದವು ಹಂಪಿಯ ಭವ್ಯವಾದ ಸ್ಮಾರಕಗಳಾಗಿವೆ.

(12) **ಬೀದರ್:** ಇದು ಕರ್ನಾಟಕದ ಉತ್ತರ ಭಾಗದಲ್ಲಿದೆ. ಇದು ಬಹಮನಿ ರಾಜ್ಯದ ರಾಜಧಾನಿಯಾಗಿತ್ತು. ಇಲ್ಲಿ ಮಹಮದ್ ಗವಾನನು ಮದರಸಾವೊಂದನ್ನು ನಿರ್ಮಿಸಿದನು.

(13) **ಬಿಜಾಪುರ:(ಪ್ರಸ್ತುತ ವಿಜಯಪುರ)** ಕರ್ನಾಟಕದ ಉತ್ತರ ಭಾಗದಲ್ಲಿರುವ ಇದು ಆದಿಲ್ ಷಾಹಿಗಳ ರಾಜಧಾನಿಯಾಗಿತ್ತು. ಗೋಳಗುಮ್ಮಟ, ಇಬ್ರಾಹಿಂ ರೋಜಾ, ಅಸಾರ ಮಹಲ್, ಬಾರಾಕಮಾನ್ ಮುಂತಾದವು ಇಲ್ಲಿವೆ.

(14) **ಕಲ್ಕತ್ತ:** ಹೂಗ್ಲಿ ನದಿಯ ದಡದಲ್ಲಿರುವ ಇದು ಪಶ್ಚಿಮ ಬಂಗಾಳದ ರಾಜಧಾನಿಯಾಗಿದೆ. ಭಾರತದಲ್ಲಿ ಇದು ಬ್ರಿಟಿಷರ ಪ್ರಥಮ ರಾಜಧಾನಿಯಾಗಿತ್ತು. ಕಲ್ಕತ್ತದ ಸಮೀಪ ಬೇಲೂರು ಎಂಬಲ್ಲಿ ಸ್ವಾಮಿ ವಿವೇಕಾನಂದರು ರಾಮಕೃಷ್ಣಮಠವನ್ನು ಸ್ಥಾಪಿಸಿದರು.

(15) **ಬಾಂಬೆ:** ಮಹಾರಾಷ್ಟ್ರದ ರಾಜಧಾನಿಯಾಗಿದೆ. ಇದು ಭಾರತದ ಪಶ್ಚಿಮ ತೀರದಲ್ಲಿ ಬ್ರಿಟೀಷರು ಪ್ರಮುಖ ನೆಲೆಯಾಗಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನ ಇಲ್ಲಿ ಜರುಗಿತು.

(16) **ಪಾಂಡಿಚೆರಿ:** ಇದು ಮದ್ರಾಸ್‌ನ ದಕ್ಷಿಣಕ್ಕೆ ಕೋರಮಂಡಲ ತೀರ ಪ್ರದೇಶದಲ್ಲಿದೆ. ಇದು ಭಾರತದಲ್ಲಿ ಫ್ರೆಂಚರ ರಾಜಧಾನಿಯಾಗಿತ್ತು.

(17) **ಶ್ರೀರಂಗಪಟ್ಟಣ:** ಇದು ಮಂಡ್ಯ ಜಿಲ್ಲೆಯಲ್ಲಿದೆ. ಇದು ಆರಂಭಿಕ ಮೈಸೂರು ಒಡೆಯರು, ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ರಾಜಧಾನಿಯಾಗಿತ್ತು. ದರಿಯಾ ದೌಲತ್ ಅರಮನೆ ಮತ್ತು ಶ್ರೀ ರಂಗನಾಥ ದೇವಾಲಯ ಇಲ್ಲಿ ಕಂಡುಬರುವ ಪ್ರಮುಖ ಸ್ಮಾರಕಗಳು.

(18) **ಮೀರತ್:** ಉತ್ತರ ಪ್ರದೇಶ ರಾಜ್ಯದಲ್ಲಿದ್ದು, ದೆಹಲಿಯ ಸಮೀಪವಿದೆ. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಕೇಂದ್ರವಾಗಿತ್ತು.

(19) **ಜಲಿಯನ್ ವಾಲಾಬಾಗ್:** ಇದು ಪಂಜಾಬಿನ ಅಮೃತಸರದಲ್ಲಿದೆ. ರೌಲತ್ ಕಾಯ್ದೆಯ ವಿರುದ್ಧ ಪ್ರತಿಭಟಿಸುತ್ತಿದ್ದ ನಿರಾಯುಧ ಜನರನ್ನು ಜನರಲ್ ಡಯರ್ ಎಂಬುವನು 1919ರಲ್ಲಿ ಕಗ್ಗೊಲೆಗೈದನು.

(20) **ದಂಡಿ:** ಇದು ಗುಜರಾತಿನ ಪಶ್ಚಿಮ ತೀರದಲ್ಲಿದೆ. ಮಹಾತ್ಮ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಚಳುವಳಿಯನ್ನು ಇಲ್ಲಿಂದ ಆರಂಭಿಸಿದರು.

ಚಟುವಟಿಕೆ

ಪಠ್ಯ ಪುಸ್ತಕದಲ್ಲಿ ನಿಗದಿಗೊಳಿಸದಿರುವ ಇತರ ಯಾವುದಾದರು 20 ಐತಿಹಾಸಿಕ ಪ್ರಮುಖ ಸ್ಥಳಗಳನ್ನು ಭಾರತದ ಭೂಪಟದಲ್ಲಿ ಗುರುತಿಸಿ. ಅವುಗಳ ಐತಿಹಾಸಿಕ ಪ್ರಾಮುಖ್ಯತೆಯ ಬಗ್ಗೆ ಮಾಹಿತಿ ಸಂಗ್ರಹಿಸಿ.

ಪ್ರಶ್ನೆಗಳು:

(1) ನಿಮಗೆ ಕೊಟ್ಟಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರು ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. **5+5=10**

ಎ) ಹರಪ್ಪ ಬಿ) ಪಾಟಲಿಪುತ್ರ ಸಿ) ಪಾಣಿಪತ್ ಡಿ) ಕಲ್ಕತ್ತ ಇ) ಬಾದಾಮಿ
ಎಫ್) ಹಂಪಿ ಜಿ) ಪಾಂಡಿಚೆರಿ (ಹೆಚ್) ಕಂಚಿ.

(2) ನಿಮಗೆ ಕೊಟ್ಟಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗಉರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. **5+5=10**

ಎ) ತಕ್ಷಶಿಲ ಬಿ) ದೆಹಲಿ ಸಿ) ದೇವಗಿರಿ ಡಿ) ಜಲಿಯನ್ ವಾಲಾಬಾಗ್
ಇ) ದಂಡಿ ಎಫ್) ಬೀದರ್ ಜಿ)ಶ್ರೀರಂಗಪಟ್ಟಣ ಹೆಚ್) ಬಾಂಬೆ.

(3) ನಿಮಗೆ ಕೊಟ್ಟಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ, ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. 5+5=10

(ಅ) ಆಗ್ರಾ (ಬಿ) ಪಾಟಲಿಪುತ್ರ (ಸಿ) ಮೀರತ್ (ಡಿ)ಬಿಜಾಪುರ (ಇ) ಹಳೇಬೀಡು
(ಎಫ್) ಹರಪ್ಪ (ಜಿ) ಜಲಿಯನ್ ವಾಲಾಬಾಗ್ (ಹೆಚ್) ಕಲ್ಕತ್ತ.

❊ ❊ ❊ ❊

ನೀಲ ನಕ್ಷೆ ಮತ್ತು ಮಾದರಿ ಪ್ರಶ್ನೆಪತ್ರಿಕೆಗಳು

ಸೂಚನೆ:

1. ಪಠ್ಯ ಪುಸ್ತಕದಲ್ಲಿ ಒದಗಿಸಿರುವ ನೀಲ ನಕ್ಷೆಗಳು ಮಾದರಿ ಮಾತ್ರವಾಗಿದ್ದು, ಪ್ರಶ್ನೆಪತ್ರಿಕೆ ತಯಾರಿಸುವವರು ಪ್ರತೀಬಾರಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಾಗಲೂ ತಮ್ಮದೇ ಆದ ನೀಲ ನಕ್ಷೆಯನ್ನು ಸಿದ್ಧಪಡಿಸಿಕೊಳ್ಳತಕ್ಕದ್ದು.

2. ಬಾಕ್ಸ್‌ನಲ್ಲಿ ನೀಡಿರುವ ಮಾಹಿತಿಯ ಮೇಲೆ ಯಾವುದೇ ಪ್ರಶ್ನೆಯನ್ನು ಕೇಳತಕ್ಕದ್ದಲ್ಲ. ಪ್ರಶ್ನೆಗಳು ಪಠ್ಯಪುಸ್ತಕದಲ್ಲಿರುವ ವಿಷಯವನ್ನು ಹೊರತು ಪಡಿಸಿರಬಾರದು.

3. ಹೊಂದಿಸಿ ಬರೆಯಿರಿ ಪ್ರಶ್ನೆಗಳಲ್ಲಿ ದಿನಾಂಕ ಮತ್ತು ವರ್ಷಾಧಾರಿತ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ.

4. ಕಾಲಾನು ಕ್ರಮದ ಪ್ರಶ್ನೆಯು ಪ್ರಮುಖ ಘಟನೆಗಳನ್ನಾಧರಿಸಿರಬೇಕು.

BLUE PRINT -1

II PUC MODEL QUESTION PARER-1

Total Teaching hours: 120

TOTAL No. OF QUESTIONS: 37

SUBJECT CODE: 21 **Q.P.TOTAL MARKS: 160**

TIME: 3-15 HOURS **MAX.MARKS: 100**

INDIAN HISTORY

[With Special Reference to Karnataka]

Chapters	Knowledge		Understanding		Application		Skill		Total Marks					
	VSA/ SA	BDA	VSA/SA	BDA/ ET	BDA	ETA	SA/BDA	ETA	1M	2M	5M	Map	10M	Total
	1/2	5	1/2	5/10	5	10	2/5	10						
1	1 2				5				1	2	5			08
2	1 2								1	2				03
3				5*							5			05/00
4	1 1 1 1 1 1 1 2 2 2*2 2			5 5 10*		10*			6	10	10		20	47/25
5	1 1 1 2			10*	5	10			3	2	5		20	30/20
6	1 1 2			5					2	2	5			09
7	1 1 1 1 1 1 1 2 2 2*			5 5* 10		10*			7	6	10		20	42/25
8							16					16		16/10
Q.P. Total	**44**		**60**		**40**		**16**		**20**	**24**	**40**	**16**	**60**	**160**
Max.Marks	**40**		**30**		**20**		**10**		**20**	**20**	**30**	**10**	**20**	**100**

1	EASY	40%	KNOWLEDGE BASED	40%	VERY SHORT ANSWER	1 Marks
2	AVERAGE	40%	UNDERSTANDING BASED	30%	SHORT ANSWER	2 Marks
					BRIEF DISCRIPTIVE ANSWER	5 Marks
3	DIFFICULT	20%	APPLICATION BASED	20%	ESSAY TYPE	10 Marks
			SKILL BASED	10%	MAP	10 Marks

ಶೇಷ ಪ್ರಶ್ನೆ ಪತ್ರಿಕೆ ಪ್ರಥಮ ಪಿಯುಸಿ

ದ್ವಿತೀಯ ಪಿ.ಯು.ಸಿ. ಮಾದರಿ ಪ್ರಶ್ನೆ ಪತ್ರಿಕೆ – 1

ಭಾರತದ ಇತಿಹಾಸ

[ಕರ್ನಾಟಕದ ವಿಶೇಷ ಉಲ್ಲೇಖದೊಂದಿಗೆ]

ವಿಷಯ ಸಂಕೇತ: 21 **ಒಟ್ಟು ಪ್ರಶ್ನೆಗಳು: 37**

ಸಮಯ: 3–15 ಗಂಟೆಗಳು ಗರಿಷ್ಠ ಅಂಕಗಳು: 100

ಸೂಚನೆ: (1) ಪ್ರಶ್ನೆಗಳ ಕ್ರಮ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

(2) ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳು ಭಾಗ–ಡಿ ಯಲ್ಲಿ ಭೂಪಟದ ಪ್ರಶ್ನೆ ಸಂಖ್ಯೆ 31 'ಎ' ಬದಲಿಗೆ ಪ್ರಶ್ನೆ ಸಂಖ್ಯೆ 31 'ಬಿ' ಯನ್ನು ಉತ್ತರಿಸುವುದು.

(3) ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸುವುದು.

ಭಾಗ – ಎ

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ: **10 X 1 = 10**

1) ಇಂಡಿಯಾ' ಎಂಬ ಪದವು ಯಾವ ಭಾಷೆಯಿಂದ ಬಂದಿದೆ?
2) ಹಳೆಯ ಶಿಲಾಯುಗದ ಮಾನವ ಬಳಸಿದ ಕಲ್ಲಿನ ಪ್ರಕಾರವನ್ನು ಹೆಸರಿಸಿ.
3) ವೇದ' ಎಂದರೇನು?
4) ಕುಶಾನರ ಮೂಲ ಸ್ಥಳ ಯಾವುದು?
5) ಚೋಳರ ಗ್ರಾಮಾಡಳಿತವನ್ನು ತಿಳಿಸುವ ಶಿಲಾಶಾಸನ ಯಾವುದು?
6) ಶಿವಾಜಿಯ ಬಿರುದು ಯಾವುದು?
7) ಮಧ್ವಾಚಾರ್ಯರ ಸಿದ್ಧಾಂತವನ್ನು ಹೆಸರಿಸಿ.
8) ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ'ಯನ್ನು ಯಾವಾಗ ಸ್ಥಾಪಿಸಲಾಯಿತು?
9) INA: ವಿಸ್ತರಿಸಿ
10) ಆಲೂರು ವೆಂಕಟರಾಯರ ಪ್ರಸಿದ್ಧ ಕೃತಿ ಯಾವುದು?

ಭಾಗ – ಬಿ

II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ: **10 X 2=20**

11) ಪ್ರಾಚೀನ ಭಾರತದ ಯಾವುದಾದರೂ ಎರಡು ವಿಶ್ವವಿದ್ಯಾಲಯಗಳನ್ನು ಹೆಸರಿಸಿ.
12) ನಿಯೋಲಿಥಿಕ್' ಪದದ ಅರ್ಥವೇನು?
13) ವೈದಿಕ ಕಾಲದಲ್ಲಿ ರಾಜನಿಗೆ ಯಾವ ಎರಡು ರಾಜಕೀಯ ಸಂಸ್ಥೆಗಳು ಸಹಾಯ ಮಾಡುತ್ತಿದ್ದವು?
14) ಶಾತವಾಹನರ ಯಾವುದಾದರು ಎರಡು ವಾಸ್ತುಶಿಲ್ಪದ ಕೇಂದ್ರಗಳನ್ನು ಹೆಸರಿಸಿ.

15) ಒಂದನೇ ರಾಜೇಂದ್ರ ಚೋಳನ ಯಾವುದಾದರು ಎರಡು ಬಿರುದುಗಳನ್ನು ತಿಳಿಸಿ.
16) ಪಂಪನ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ.
17) 6ನೇ ವಿಕ್ರಮಾದಿತ್ಯನಿಗಿದ್ದ ಯಾವುದಾದರು ಎರಡು ಬಿರುದುಗಳನ್ನು ಹೆಸರಿಸಿ.
18) ಮಹಮದ್ ಗವಾನ್ ಯಾರು ಹಾಗೂ ಅವನು ಮದರಸಾವನ್ನು ಎಲ್ಲಿ ನಿರ್ಮಿಸಿದನು?
19) ಅನುಭವ ಮಂಟಪವನ್ನು ಸ್ಥಾಪಿಸಿದವರು ಯಾರು ಮತ್ತು ಎಲ್ಲಿ?
20) ಶ್ರೀರಂಗಪಟ್ಟಣ ಒಪ್ಪಂದದ ಯಾವುದಾದರೂ ಎರಡು ಕರಾರುಗಳನ್ನು ತಿಳಿಸಿ.
21) ಪೌರಾತ್ಯ ಸಾಹಿತ್ಯದ ಬಗ್ಗೆ ಮೆಕಾಲೆಯ ಅಭಿಪ್ರಾಯವೇನಾಗಿತ್ತು?
22) ಸ್ವಾಮಿ ವಿವೇಕಾನಂದರು ಯಾವಾಗ ಮತ್ತು ಎಲ್ಲಿ ಜನಿಸಿದರು?

ಭಾಗ – ಸಿ

III. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ: **6 X 5 = 30**

23) 'ವೈವಿಧ್ಯತೆಯಲ್ಲಿ ಏಕತೆ'– ಭಾರತದ ಪ್ರಮುಖ ಲಕ್ಷಣ. ವಿವರಿಸಿ.
24) ಸಿಂಧೂ ನಾಗರಿಕತೆಯ ನಗರ ಯೋಜನೆಯನ್ನು ವಿವರಿಸಿ.
25) ಚಂದ್ರಗುಪ್ತ ಮೌರ್ಯನ ಸಾಧನೆಗಳ ಬಗ್ಗೆ ಬರೆಯಿರಿ.
26) ಹರ್ಷವರ್ಧನನ ಸಾಧನೆಗಳನ್ನು ವಿವರಿಸಿ.
27) ಮಹಮದ್ ಬಿನ್ ತೊಘಲಕನನ್ನು 'ವೈರುಧ್ಯಗಳ ಮಿಶ್ರಣ' ಎಂದು ಏಕೆ ಕರೆಯಲಾಗಿದೆ?
28) ಶಂಕರಾಚಾರ್ಯರ ಜೀವನ ಮತ್ತು ಬೋಧನೆಗಳನ್ನು ವಿವರಿಸಿ.
29) ಪ್ಲಾಸಿ ಕದನದ ಕಾರಣಗಳು ಮತ್ತು ಪರಿಣಾಮಗಳು ಯಾವುವು?
30) ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಗತಿಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

ಭಾಗ – ಡಿ

IV. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ:

31ಎ) ನಿಮಗೆ ಒದಗಿಸಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. 5+5=10

ಎ) ತಕ್ಷಶಿಲ ಬಿ) ಪಾಟಲಿಪುತ್ರ ಸಿ) ಹಳೇಬೀಡು
ಡಿ) ದೇವಗಿರಿ ಇ) ಬಿಜಾಪುರ ಎಫ್) ಪಾಂಡಿಚೆರಿ
ಜಿ) ಮೀರತ್ ಹೆಚ್) ದಂಡಿ

ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

31) ಬಿ) ಕೆಳಗಿನ ಪ್ರಶ್ನೆಯನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **1 X 10 = 10**

ವಿಜಯನಗರ ಕಾಲದ ಧರ್ಮ, ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.

ಅಥವಾ

1885 ರಿಂದ 1920ರ ವರೆಗಿನ ಭಾರತದ ರಾಷ್ಟ್ರೀಯ ಚಳುವಳಿಯನ್ನು ವಿಶದಪಡಿಸಿರಿ.

ಭಾಗ – ಇ

V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **2 X 10 = 20**

32) ಬುದ್ಧನ ಜೀವನ ಮತ್ತು ಬೋಧನೆಗಳನ್ನು ಚಿತ್ರಿಸಿ.

33) ಗುಪ್ತರ ಕಾಲವನ್ನು ಭಾರತದ ಇತಿಹಾಸದಲ್ಲಿ "ಸುವರ್ಣಯುಗ"ವೆಂದು ಏಕೆ ಕರೆಯುತ್ತಾರೆ?

34) ಅಕ್ಬರನ ಸಾಧನೆಗಳನ್ನು ವಿವರಿಸಿ.

35) ಸರ್ ಎಂ. ವಿಶ್ವೇಶ್ವರಯ್ಯನವರನ್ನು 'ಆಧುನಿಕ ಮೈಸೂರಿನ ನಿರ್ಮಾತೃ' ಎಂದು ಕರೆಯಲಾಗಿದೆ. ವಿವರಿಸಿ.

ಭಾಗ – ಎಫ್

VI. 36. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ **5 X 1 = 5**

1.	ಕುಜಲಾ ಕಾಡ್ ಫೈಸಿಸ್	– ಕೈಲಾಸನಾಥ ದೇವಾಲಯ
2.	ಒಂದನೇ ಕೃಷ್ಣ	– ನವಕೋಟಿ ನಾರಾಯಣ
3.	ಚಿಕ್ಕದೇವರಾಜ ಒಡೆಯರ್	– ಕುಶಾನರ ದೊರೆ
4.	ರಾಮಾನುಜಾಚಾರ್ಯ	– ಅಲಿಘರ್ ಚಳುವಳಿ
5.	ಸರ್ ಸಯ್ಯದ್ ಅಹಮ್ಮದ್ ಖಾನ್	– ಶ್ರೀರಂಗಂ ಮಠದ ಮುಖ್ಯಸ್ಥರು

37) ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. **5 X 1 = 5**

ಎ) ಸಹಾಯಕ ಸೈನ್ಯ ಪದ್ಧತಿಯ ಜಾರಿ.

ಬಿ) ಭಾರತಕ್ಕೆ ಆರ್ಯನ್ನರ ಆಗಮನ.

ಸಿ) ಕರ್ನಾಟಕ ಏಕೀಕರಣ

ಡಿ) ಶಿವಾಜಿಯ ಕಿರೀಟಧಾರಣೆ

ಇ) ವುಡ್ಡನ ವರದಿ

❋ ❋ ❋ ❋

BLUE PRINT-2

II PUC MODEL QUESTION PARER-2

Total Teaching hours: 120

TOTAL No. OF QUESTIONS: 37

SUBJECT CODE: 21 **Q.P.TOTAL MARKS: 160**

TIME: 3-15 HOURS **MAX.MARKS: 100**

INDIAN HISTORY

[With Special Reference to Karnataka]

Chapters	Knowledge		Understanding		Application		Skill		Total Marks					
	VSA/ SA	BDA	VSA/SA	BDA/ ET	BDA	ETA	SA/BDA	ETA	1M	2M	5M	Map	10M	Total
	1/2	5	1/2	5/10	5	10	2/5	10						
1	2*	5								2	5			07/05
2	2									2				02
3			1	5					1		5			6
4	1 1 1 1 1 1 1 2 2 2		2	5* 5* 10* 10					7	8	10		20	45/25
5	1 1 1 1 2 2*			5	5	10*			4	4	10		10	28/16
6	1 1		2		5				2	2	5			09
7	1 1 1 1 1 1 2 2 2			5 10*		10* 10			6	6	5		30	47/27
8							16					**16**		16/10
Q.P. Total	**44**		**60**		**40**		**16**		**20**	**24**	**40**	**16**	**60**	**160**
Max.Marks	**40**		**30**		**20**		**10**		**20**	**20**	**30**	**10**	**20**	**100**

1	EASY	40%	KNOWLEDGE BASED	40%	VERY SHORT ANSWER	1 Marks
2	AVERAGE	40%	UNDERSTANDING BASED	30%	SHORT ANSWER	2 Marks
					BRIEF DISCRIPTIVE ANSWER	5 Marks
3	DIFFICULT	20%	APPLICATION BASED	20%	ESSAY TYPE	10 Marks
			SKILL BASED	10%	MAP	10 Marks

2015-16

ಶಾಲಾ ಪತ್ರಿಕೆ ಮಾದರಿ ಪ್ರಶ್ನೆ ಪತ್ರಿಕೆಗಳು

ದ್ವಿತೀಯ ಪಿ.ಯು.ಸಿ. ಮಾದರಿ ಪ್ರಶ್ನೆ ಪತ್ರಿಕೆ – 2

ಭಾರತದ ಇತಿಹಾಸ

[ಕರ್ನಾಟಕದ ವಿಶೇಷ ಉಲ್ಲೇಖದೊಂದಿಗೆ]

ವಿಷಯ ಸಂಕೇತ: 21 **ಒಟ್ಟು ಪ್ರಶ್ನೆಗಳು: 37**

ಸಮಯ: 3–15 ಗಂಟೆಗಳು ಗರಿಷ್ಠ ಅಂಕಗಳು: 100

ಸೂಚನೆ: (1) ಪ್ರಶ್ನೆಗಳ ಕ್ರಮ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

(2) ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳು ಭಾಗ–ಡಿ ಯಲ್ಲಿ ಭೂಪಟದ ಪ್ರಶ್ನೆ ಸಂಖ್ಯೆ 31 'ಎ' ಬದಲಿಗೆ ಪ್ರಶ್ನೆ ಸಂಖ್ಯೆ 31 'ಬಿ' ಯನ್ನು ಉತ್ತರಿಸುವುದು.

(3) ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸುವುದು.

ಭಾಗ – ಎ

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ: 10X1=10

1) ಮೊಹೆಂಜೊದಾರೋ' ಪದದ ಅರ್ಥವೇನು?
2) 23ನೇ ತೀರ್ಥಂಕರ ಯಾರಾಗಿದ್ದರು?
3) ತಂಜಾವೂರಿನ ರಾಜರಾಜೇಶ್ವರ ದೇವಾಲಯವನ್ನು ಕಟ್ಟಿಸಿದವರು ಯಾರು?
4) ಕನ್ನಡದ ಮೊದಲ ಶಾಸನ ಯಾವುದು?
5) ಮೊದಲ ಪಾಣಿಪತ್ ಕದನ ಯಾವಾಗ ನಡೆಯಿತು?
6) ಬಹಮನಿ ಮನೆತನದ ಸ್ಥಾಪಕನನ್ನು ಹೆಸರಿಸಿ.
7) ಸಿಖ್ಖರ ಪವಿತ್ರ ಗ್ರಂಥ ಯಾವುದು?
8) ಭಾರತದಲ್ಲಿ ಬ್ರಿಟಿಷರ ಮೊದಲ ರಾಜಧಾನಿ ಯಾವುದು?
9) ಅಲಿಘರ್ ಚಳುವಳಿಯನ್ನು ಪ್ರಾರಂಭಿಸಿದವರು ಯಾರು?
10) ಮೈಸೂರು ರಾಜ್ಯದಲ್ಲಿ ಹಾಕಲಾದ ಪ್ರಥಮ ರೈಲು ಮಾರ್ಗವನ್ನು ಹೆಸರಿಸಿ.

ಭಾಗ – ಬಿ

II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ: 10 X 2 = 20

11) ಭಾರತವನ್ನು ಪಶ್ಚಿಮದೊಂದಿಗೆ ಸಂಪರ್ಕಿಸುವ ಎರಡು ಕಣಿವೆಗಳನ್ನು ಹೆಸರಿಸಿ.
12) 'ಪ್ಯಾಲಿಯೋಲಿಥಿಕ್' ಪದದ ಅರ್ಥವೇನು?
13) ವೈದಿಕ ಕಾಲದ ಯಾರಾದರೂ ಇಬ್ಬರು ಮಹಿಳಾ ವಿದ್ವಾಂಸರನ್ನು ಹೆಸರಿಸಿ.
14) ತ್ರಿಪಿಟಕಗಳಲ್ಲಿ ಯಾವುದಾದರು ಎರಡನ್ನು ತಿಳಿಸಿ.
15) ಬೌದ್ಧ ಧರ್ಮದ ಪ್ರಸಾರಕ್ಕಾಗಿ ಕಾನಿಷ್ಕನ ಯಾವುದಾದರು ಎರಡು ಕ್ರಮಗಳನ್ನು ಬರೆಯಿರಿ.
16) ಕೈಲಾಸನಾಥ ದೇವಾಲಯವನ್ನು ನಿರ್ಮಿಸಿದವರು ಯಾರು? ಎಲ್ಲಿ ನಿರ್ಮಿಸಿದರು?

17) ಶಿವಾಜಿಯ ಮೇಲೆ ಪ್ರಭಾವ ಬೀರಿದ ಯಾರಾದರೂ ಇಬ್ಬರು ವ್ಯಕ್ತಿಗಳನ್ನು ತಿಳಿಸಿ.
18) ಗೋಳಗುಮ್ಮಟ ಎಲ್ಲಿದೆ ಹಾಗೂ ಅದನ್ನು ನಿರ್ಮಿಸಿದವರು ಯಾರು?
19) ಶಂಕರಾಚಾರ್ಯರನ್ನು 'ಷಣ್ಮತ ಸ್ಥಾಪನಾಚಾರ್ಯ' ಎಂದು ಕರೆಯಲು ಕಾರಣವೇನು?
20) ಪ್ಲಾಸಿ ಕದನವು ಯಾರ ನಡುವೆ ನಡೆಯಿತು?
21) ಮಿರ್ಜಾ ಇಸ್ಮಾಯಿಲರು ಸ್ಥಾಪಿಸಿದ ಯಾವುದಾದರೂ ಎರಡು ಕೈಗಾರಿಕೆಗಳನ್ನು ಹೆಸರಿಸಿ.
22) ರಾಜ್ಯಗಳ ಪುನರ್ ರಚನೆಗೆ ಸ್ಥಾಪಿಸಲಾದ ಯಾವುದಾದರೂ ಎರಡು ಸಮಿತಿಗಳನ್ನು ಹೆಸರಿಸಿ.

ಭಾಗ – ಸಿ

III.. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ: **6 X 5 = 30**

23) ಭಾರತ ಇತಿಹಾಸ ರಚನೆಗೆ ವಿದೇಶಿ ಬರಹಗಾರರ ಕೊಡುಗೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
24) ಸಿಂಧೂ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ತಿಳಿಸಿರಿ.
25) ಸಮುದ್ರಗುಪ್ತನ ದಿಗ್ವಿಜಯಗಳನ್ನು ವಿವರಿಸಿ.
26) ಧರ್ಮ ಮತ್ತು ಸಾಹಿತ್ಯಕ್ಕೆ ಹೊಯ್ಸಳರ ಕೊಡುಗೆಗಳನ್ನು ನಿರೂಪಿಸಿ.
27) ಅಕ್ಬರನ ಆಡಳಿತವನ್ನು ಸಂಕ್ಷಿಪ್ತವಾಗಿ ಬರೆಯಿರಿ.
28) ತಾಳಿಕೋಟೆ ಕದನದ ಕಾರಣಗಳು ಮತ್ತು ಪರಿಣಾಮಗಳು ಯಾವುವು?
29) ಬಸವೇಶ್ವರರ ಸಾಮಾಜಿಕ–ಧಾರ್ಮಿಕ ಸುಧಾರಣೆಗಳನ್ನು ಚರ್ಚಿಸಿ.
30) ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವನ್ನು ವಿವರಿಸಿ.

ಭಾಗ – ಡಿ

IV. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ:

31) ಎ) ನಿಮಗೆ ಒದಗಿಸಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. 5+5=10

ಎ) ಹರಪ್ಪ ಬಿ) ಪಾಟಲಿಪುತ್ರ ಸಿ) ಬಾದಾಮಿ
ಡಿ) ದೆಹಲಿ ಇ) ಆಗ್ರಾ ಎಫ್) ಹಂಪಿ
ಜಿ) ಶ್ರೀರಂಗಪಟ್ಟಣ ಹೆಚ್) ಜಲಿಯನ್‌ವಾಲಾ ಬಾಗ್

ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

31) ಬಿ). ಕೆಳಗಿನ ಪ್ರಶ್ನೆಯನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **1 X 10 = 10**

ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ವಿವರಿಸಿ.

ಅಥವಾ

ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ವಿವರಿಸಿ.

ಭಾಗ – ಇ

V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **2 X 10 = 20**

32) ಅಶೋಕನ ಜೀವನ ಹಾಗೂ ಸಾಧನೆಗಳನ್ನು ವಿವರಿಸಿ.

33) ದೆಹಲಿ ಸುಲ್ತಾನರ ಕೊಡುಗೆಗಳ ಬಗ್ಗೆ ಒಂದು ವಿವರಣೆ ನೀಡಿ.

34) ಭಾರತದ ಆರ್ಥಿಕತೆಯ ಮೇಲೆ ಬ್ರಿಟಿಷ್ ಆಳ್ವಿಕೆಯ ಪ್ರಭಾವದ ಕುರಿತು ವಿವರಣೆ ನೀಡಿ.

35) ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಗಾಂಧೀಜಿಯ ಪಾತ್ರವನ್ನು ಚರ್ಚಿಸಿರಿ.

ಭಾಗ – ಎಫ್

VI. 36) ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ: **5 X 1 = 5**

1.	ಒಂದನೇ ರಾಜರಾಜೇಂದ್ರ ಚೋಳ	–	ಕರ್ನಾಟಕ ಗತವೈಭವ
2.	ಪಂಪ	–	ಗಂಗೈಕೊಂಡ ಚೋಳ
3.	ಕಾನ್ಸ್ಟೋಜಿ ಆಂಗ್ರೇ	–	ಆದಿಕವಿ
4.	ಲಾರ್ಡ್ ಡಾಲ್ ಹೌಸಿ	–	ಮರಾಠರ ನೌಕಾದಳಪತಿ
5.	ಆಲೂರು ವೆಂಕಟರಾವ್	–	ದತ್ತು ಪುತ್ರರಿಗೆ ಹಕ್ಕಿಲ್ಲ

37) ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. **5 X 1 = 5**

ಎ) ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ.

ಬಿ) ರಮಾನಂದರ ಮರಣ.

ಸಿ) ಮಹಾವೀರನ ಜನನ.

ಡಿ) ಗುಪ್ತ ಶಕೆ ಆರಂಭ.

ಎಫ್) ಬೆಂಗಳೂರಿನ ನಿರ್ಮಾಣ.

❊ ❊ ❊ ❊

BLUE PRINT-3

II PUC MODEL QUESTION PARER-3

Total Teaching hours: 120

TOTAL No. OF QUEST 37

SUBJECT CODE: 21 **Q.P.TOTAL MA 160**

TIME: 3-15 HOURS **MAX.MA 100**

INDIAN HISTORY

[With Special Reference to Karnataka]

Chapters	Knowledge		Understanding		Application		Skill		Total					
	VSA/ SA	BDA	VSA/SA	BDA/ ET	BDA	ETA	SA/BDA	ETA	1M	2M	5M	Map	10M	Total
	1/2	5	1/2	5/10	5	10	2/5	10						
1	1 2*			5					1	2	5			08/06
2	1								1					01
3	1 2			5*					1	2	5			08/03
4	1 1 1 1 1 2 2 2 2			5 10*	5	10*			5	8	10		20	43/23
5	1 1 1 1 2			5 10 10*					4	2	5		20	31/21
6	1 1 1 2*			5					3	2	5			10/8
7	1 1 1 1 1 2 2 2 2			5*	5	10* 10			5	8	10		20	43/28
8							16							16/10
Q.P. Total	**44**		**60**		**40**		**16**		**20**	**24**	**40**	**16**	**60**	**160**
Max.Marks	**40**		**30**		**20**		**10**		**20**	**20**	**30**	**10**	**20**	**100**

1	EASY	40%	KNOWLEDGE BASED	40%	VERY SHORT ANSWER	1 Marks
2	AVERAGE	40%	UNDERSTANDING BASED	30%	SHORT ANSWER	2 Marks
					BRIEF DISCRIPTIVE ANSWER	5 Marks
3	DIFFICULT	20%	APPLICATION BASED	20%	ESSAY TYPE	10 Marks
			SKILL BASED	10%	MAP	10 Marks

2015-16

ಶಿಕ್ಷಣ ಕ್ಷೇತ್ರದ ಪ್ರಥಮ ಕನ್ನಡ ಪೋರ್ಟಲ್
ಕಲಿಕಾ

ದ್ವಿತೀಯ ಪಿ.ಯು.ಸಿ. ಮಾದರಿ ಪ್ರಶ್ನೆ ಪತ್ರಿಕೆ – 3

ಭಾರತದ ಇತಿಹಾಸ

[ಕರ್ನಾಟಕದ ವಿಶೇಷ ಉಲ್ಲೇಖದೊಂದಿಗೆ]

ವಿಷಯ ಸಂಕೇತ: 21 **ಒಟ್ಟು ಪ್ರಶ್ನೆಗಳು: 37**

ಸಮಯ: 3–15 ಗಂಟೆಗಳು ಗರಿಷ್ಠ ಅಂಕಗಳು: 100

ಸೂಚನೆ: (1) ಪ್ರಶ್ನೆಗಳ ಕ್ರಮ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

(2) ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳು ಭಾಗ–ಡಿ ಯಲ್ಲಿ ಭೂಪಟದ ಪ್ರಶ್ನೆ ಸಂಖ್ಯೆ 31 'ಎ' ಬದಲಿಗೆ ಪ್ರಶ್ನೆ ಸಂಖ್ಯೆ 31 'ಬಿ' ಯನ್ನು ಉತ್ತರಿಸುವುದು.

(3) ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸುವುದು.

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ: **10 X 1 = 10**

1) ನಾಣ್ಯಶಾಸ್ತ್ರ ಎಂದರೇನು?
2) ಉತ್ತರ ಭಾರತದಲ್ಲಿ ಮಾನವನು ಉಪಯೋಗಿಸಿದ ಮೊದಲ ಲೋಹ ಯಾವುದು?
3) ಶಾತವಾಹನರ ರಾಜಧಾನಿ ಯಾವುದು?
4) ಅಲಹಾಬಾದ್ ಸ್ತಂಭ ಶಾಸನವನ್ನು ರಚಿಸಿದವರು ಯಾರು?
5) 'ಚೌತ್' ಎಂದರೇನು?
6) ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿದ ಮಹಿಳೆಯನ್ನು ಹೆಸರಿಸಿ.
7) ಅನುಭವ ಮಂಟಪದಲ್ಲಿ ನಡೆದ ಧರ್ಮ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದವರು ಯಾರು?
8) ರಾಜಾಸ್ಥಾನದಲ್ಲಿ ತನ್ನ ಸಿದ್ಧಾಂತವನ್ನು ಜನಪ್ರಿಯಗೊಳಿಸಿದ ಕೃಷ್ಣನ ಭಕ್ತೆ ಯಾರು?
9) ಬಕ್ಸಾರ್ ಕದನ ನಡೆದ ವರ್ಷ ಯಾವುದು?
10) ದಾದಾಬಾಯಿ ನವರೋಜಿಯವರು ಬರೆದ ಕೃತಿ ಯಾವುದು?

ಭಾಗ – ಬಿ

II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ: **10 X 2 = 20**

11) ಆಧಾರವಿಲ್ಲದೆ ಇತಿಹಾಸವಿಲ್ಲ. ಏಕೆ?
12) ಸಿಂಧೂ ನಾಗರಿಕತೆಯ ಅಂತ್ಯಕ್ಕೆ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
13) ಬೌದ್ಧ ಧರ್ಮದ ಪಂಥಗಳನ್ನು ಹೆಸರಿಸಿ.
14) ಕಾಳಿದಾಸನ ಯಾವುದಾದರೂ ಎರಡು ಕೃತಿಗಳನ್ನು ತಿಳಿಸಿ.
15) ತಕ್ಕೋಳಂ ಕದನವು ಯಾವಾಗ ಮತ್ತು ಯಾರ ನಡುವೆ ನಡೆಯಿತು?
16) ಹೊಯ್ಸಳರ ಯಾವುದಾದರೂ ಎರಡು ಪ್ರಸಿದ್ಧ ದೇವಾಲಯಗಳನ್ನು ಹೆಸರಿಸಿ.

17) ಶಿವಪ್ಪನಾಯಕನು ಯಾರು ಹಾಗೂ ಅವನು ಏಕೆ ಪ್ರಸಿದ್ಧನಾಗಿದ್ದಾನೆ?
18) ಯಾವುದಾದರೂ ಎರಡು ಪ್ರಮುಖ ಸೂಫಿ ಪಂಥಗಳನ್ನು ಹೆಸರಿಸಿ.
19) ಭಾರತದಲ್ಲಿ ಫ್ರೆಂಚರ ಯಾವುದಾದರೂ ಎರಡು ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.
20) ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ ಯಾವುದಾದರೂ ಎರಡು ಭಾರತೀಯ ರಾಜ್ಯಗಳನ್ನು ತಿಳಿಸಿ.
21) ರೈತವಾರಿ ಪದ್ಧತಿ ಎಂದರೇನು?
22) ಎಲ್ಲಿ ಮತ್ತು ಯಾವ ವರ್ಷದಲ್ಲಿ ರಾಮಕೃಷ್ಣ ಮಿಷನ್ ಸ್ಥಾಪನೆಗೊಂಡಿತು?

ಭಾಗ – ಸಿ

III. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ: **6 x 5 = 30**

23) ಭಾರತದ ಇತಿಹಾಸದ ಮೇಲೆ ಭೂಗೋಳದ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಿ.
24) ಸಿಂಧೂ ನಾಗರಿಕತೆಯ ನಗರ ಯೋಜನೆಯನ್ನು ವಿವರಿಸಿ.
25) ಆರ್ಯರ ರಾಜಕೀಯ ಸ್ಥಿತಿಯ ಬಗ್ಗೆ ವಿವರಣೆ ನೀಡಿ.
26) ಚೋಳರ ಗ್ರಾಮಾಡಳಿತವನ್ನು ವಿವರಿಸಿ.
27) ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಮೊಘಲರ ಕೊಡುಗೆಗಳನ್ನು ವಿವರಿಸಿ.
28) ಕಬೀರ್ ಮತ್ತು ಗುರುನಾನಕರ ಕುರಿತು ಒಂದು ವಿವರಣೆ ನೀಡಿ.
29) ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಗತಿಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
30) ಕರ್ನಾಟಕದ ಏಕೀಕರಣ ಚಳುವಳಿಯನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

ಭಾಗ – ಡಿ

IV. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ:

31) ಎ) ನಿಮಗೆ ಒದಗಿಸಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. 5+5=10

ಎ) ಪಾಟಲಿಪುತ್ರ ಬಿ) ಕಾಂಚಿ ಸಿ) ಹಳೇಬೀಡು
ಡಿ) ಪಾಣಿಪತ್ ಇ) ಬೀದರ್ ಎಫ್) ಕಲ್ಕತ್ತ
ಜಿ) ಬಾಂಬೆ ಹೆಚ್) ಜಲಿಯನ್‌ವಾಲಾ ಬಾಗ್

ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

31) ಬಿ)ಕೆಳಗಿನ ಪ್ರಶ್ನೆಯನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **1 x 10 = 10**

ರಾಷ್ಟ್ರಕೂಟರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿ.

ಅಥವಾ

ಸರ್ ಎಂ. ವಿಶ್ವೇಶ್ವರಯ್ಯನವರನ್ನು 'ಆಧುನಿಕ ಮೈಸೂರಿನ ನಿರ್ಮಾತೃ' ಎಂದು ಕರೆಯಲಾಗಿದೆ. ವಿವರಿಸಿ.

ಭಾಗ – ಇ

V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **2 x 10 = 20**

32) ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ವಿವರಿಸಿ.

33) ಮಹಮದ್ ಬಿನ್ ತೊಘಲಕ್‌ನ ಆಡಳಿತ ಪ್ರಯೋಗಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

34) ಕೃಷ್ಣದೇವರಾಯನ ಸಾಧನೆಗಳನ್ನು ಕುರಿತು ಒಂದು ವಿವರಣೆ ಬರೆಯಿರಿ.

35) ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಗಾಂಧೀಜಿಯ ಪಾತ್ರವನ್ನು ಚರ್ಚಿಸಿರಿ.

ಭಾಗ – ಎಫ್

VI. 36) ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. **5 x 1 = 5**

1. ಆರ್.ಡಿ. ಬ್ಯಾನರ್ಜಿ	–	ಜಗದ್ಗುರು–ಬಾದ್‌ಷಾ
2. 3ನೇ ಸೋಮೇಶ್ವರ	–	ಭಾರತದಲ್ಲಿ ಇಂಗ್ಲೀಷ್ ಶಿಕ್ಷಣದ ರೂವಾರಿ
3. 2ನೇ ಇಬ್ರಾಹಿಂ ಆದಿಲ್ ಷಾ	–	ಮಹೆಂಜೊದಾರೋವಿನ ಸಂಶೋಧನೆ
4. ಮೆಕಾಲೆ	–	ಅಸ್ಪೃಶ್ಯತೆಯ ನಿವಾರಣೆ
5. ಡಾ॥ ಬಿ.ಆರ್. ಅಂಬೇಡ್ಕರ್	–	ಅಭಿಲಾಷಿತಾರ್ಥ ಚಿಂತಾಮಣಿ

37) ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. **5 x 1 = 5**

ಎ) ಆರ್ಯ ಸಮಾಜದ ಸ್ಥಾಪನೆ.

ಬಿ) ರಾಜಾ ತೋದರಮಲ್ಲನ ಕಂದಾಯ ಪದ್ಧತಿ.

ಸಿ) ಬಸವೇಶ್ವರರ ಜನನ.

ಡಿ) ಕಾನಿಷ್ಕನ ಸಿಂಹಾಸನಾರೋಹಣ.

ಇ) ಕನ್ನೇಗಾಲ ಕದನ.

*****